"ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪ"

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಶಬೀನಾ

ಮಾನ್ಯತಾ ಸಂಸ್ಥೆ : ಕನ್ನಡ ಸಾಹಿತ್ಯ ಪರಿಷತ್ತು
ನೋಂದಣಿ ಸಂಖ್ಯೆ-೧೬೨೦೦೧೦೨೦೦೭೦

ಮಾರ್ಗದರ್ಶಕರು

ಡಾ. ಜಿ. ರವಿ

ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕೆ. ಆರ್. ಪುರಂ, ಬೆಂಗಳೂರು

ಭಾಷಾ ನಿಕಾಯ
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ - ೫೮೩ ೨೭೬

೨೦೨೦

“ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪ”

ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಎಚ್.ಡಿ ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ

ಸಂಶೋಧಕರು

ಶಬೀನಾ

ಮಾನ್ಯತಾ ಸಂಸ್ಥೆ : ಕನ್ನಡ ಸಾಹಿತ್ಯ ಪರಿಷತ್ತು

ನೋ.ಸಂ–೧೬೨೦೦೧೦೨೦೦೭೦

ಮಾರ್ಗದರ್ಶಕರು

ಡಾ. ಜಿ ರವಿ

ಕನ್ನಡ ಸಹ ಪ್ರಾಧ್ಯಾಪಕರು

ಸರ್ಕಾರಿ ಪ್ರಥಮ ದರ್ಜೆ ಕಾಲೇಜು,

ಕೆ.ಆರ್ ಪುರಂ, ಬೆಂಗಳೂರು.

ಭಾಷಾ ನಿಕಾಯ

ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩೨೭೬

೨೦೨೦

ಮಾರ್ಗದರ್ಶಕರ ದೃಢೀಕರಣ ಪತ್ರ

ಈ ಮೂಲಕ ದೃಢೀಕರಿಸುವುದೇನೆಂದರೆ ಕನ್ನಡ ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ವಿಭಾಗದಲ್ಲಿ ಪಿಎಚ್.ಡಿ ಅಧ್ಯಯನಕ್ಕಾಗಿ ಆಯ್ಕೆಯಾಗಿರುವ ಕನ್ನಡ ಸಾಹಿತ್ಯ ಪರಿಷತ್ತು ಮಾನ್ಯತಾ ಸಂಸ್ಥೆಯ ಸಂಶೋಧನಾರ್ಥಿಯಾದ ಶಬೀನಾರವರು ಪಿಎಚ್.ಡಿ ವಿಷಯವಾದ **"ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪ"** ಎಂಬ ಶೀರ್ಷಿಕೆಯ ಈ ಮಹಾಪ್ರಬಂಧವನ್ನು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ.

ಪಿಹೆಚ್.ಡಿ ಪದವಿಗಾಗಿ ಸಲ್ಲಿಸುತ್ತಿರುವ ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ. ಜಿ ರವಿ)
ಕನ್ನಡ ಸಹ ಪ್ರಾಧ್ಯಾಪಕರು
ಸರ್ಕಾರಿ ಪ್ರಥಮ ದರ್ಜೆ ಕಾಲೇಜು,
ಕೆ.ಆರ್ ಪುರಂ, ಬೆಂಗಳೂರು.

ದಿನಾಂಕ :

ಸ್ಥಳ :

Dr. G. RAVI
Associate Professor in Kannada
Govt. First Grade College
K.R. Puram, Bangalore-560 036.

ಸಂಶೋಧಕರ ಪ್ರಮಾಣ ಪತ್ರ

"ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪ" ಎಂಬ ಶೀರ್ಷಿಕೆಯ ಮಹಾಪ್ರಬಂಧವನ್ನು ಡಾ. ಜಿ. ರವಿಯವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದ್ದು, ಕನ್ನಡ ವಿಶ್ವವಿದ್ಯಾಲಯದ ಪಿಎಚ್.ಡಿ ಪದವಿಗಾಗಿ ಸಲ್ಲಿಸುತ್ತಿದ್ದೇನೆ.

ಈ ಮಹಾಪ್ರಬಂಧವನ್ನು ಈ ಮೊದಲು ಯಾವುದೇ ಉದ್ದೇಶ ಅಥವಾ ಪದವಿಗಾಗಿ ಸಲ್ಲಿಸಿರುವುದಿಲ್ಲ. ಇದರ ಯಾವುದೇ ಭಾಗವನ್ನು ಎಲ್ಲಿಯೂ ಪ್ರಕಟಿಸಿಲ್ಲ. ಇದು ನನ್ನ ಸ್ವತಂತ್ರವಾದ ಸಂಶೋಧನ ಅಧ್ಯಯನವಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

(ಶಬೀನಾ)
ಸಂಶೋಧಕರು
ಕನ್ನಡ ಸಾಹಿತ್ಯ ಅಧ್ಯಯನ ವಿಭಾಗ,
ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದಿನಾಂಕ :

ಸ್ಥಳ :

ಪರಿವಿಡಿ

* * * * *

ಅಧ್ಯಾಯ-ಒಂದು

ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ, ಸ್ವರೂಪ ಮತ್ತು ಮಹತ್ವ

೧.೧. ಅಧ್ಯಯನದ ಉದ್ದೇಶ

೧.೨. ಅಧ್ಯಯನದ ವ್ಯಾಪ್ತಿ

೧.೩. ಅಧ್ಯಯನದ ವೈಧಾನಿಕತೆ

೧.೪. ಅಧ್ಯಯನದ ಸ್ವರೂಪ

೧.೫. ಅಧ್ಯಯನದ ಮಹತ್ವ

ಅಧ್ಯಾಯ – ಒಂದು

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪ

ಪ್ರಸ್ತಾವನೆ

ಆಧುನಿಕ ಕನ್ನಡ ಸಾಹಿತ್ಯದಲ್ಲಿ ವಿಜ್ಞಾನ ಸಾಹಿತ್ಯಕ್ಕೆ ತನ್ನದೇ ಆದ ಮಹತ್ವದ ಸ್ಥಾನವಿದೆ. ಸೃಜನಶೀಲವೂ, ಸೃಜನೇತರವೂ ಆದ ಎರಡೂ ನೆಲೆಗಳಲ್ಲಿ ವಿಜ್ಞಾನ ಬರಹಗಳು ರಚಿತವಾಗಿದ್ದು, ಸಮಾಜದ ಪ್ರಜ್ಞಾವಿವೇಕವನ್ನು ವಿಸ್ತರಿಸುವ ಕೆಲಸವನ್ನು ಮಾಡುತ್ತಿವೆ. ಮೊದಲಿಗೆ ಯೂರೋಪಿಯನ್ ಮತ್ತು ಇಂಗ್ಲೀಷ್ ಭಾಷೆಗಳಲ್ಲಿ ದೊಡ್ಡ ಪ್ರಮಾಣದಲ್ಲಿ ಪ್ರಕಟವಾದ ವಿಜ್ಞಾನ ಸಾಹಿತ್ಯವು ನಂತರ ಜಗತ್ತಿನ ಬಹುತೇಕ ಎಲ್ಲ ಪ್ರಮುಖ ಭಾಷೆಗಳಲ್ಲಿಯೂ ಜನಪ್ರಿಯತೆಯನ್ನು ಪಡೆಯಿತು. ಇಪ್ಪತ್ತೊಂದನೇ ಶತಮಾನದ ಆಧುನಿಕ ಮತ್ತು ವೈಚಾರಿಕ ಮನೋಧರ್ಮಕ್ಕೆ ತಕ್ಕಂತೆ ಇಂದು ವಿಜ್ಞಾನ ಸಾಹಿತ್ಯದ ಬೆಳವಣಿಗೆಯು ಅಗಾಧವಾಗಿದೆ. ಅಲ್ಲದೆ ವಿಜ್ಞಾನ ಸಾಹಿತ್ಯದಲ್ಲಿನ ವಸ್ತು ವೈವಿಧ್ಯತೆಯು ದೊಡ್ಡ ಪ್ರಮಾಣದಲ್ಲಿದೆ. ವಿಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಸಿದ್ಧಾಂತಗಳು ತಾತ್ವಿಕತೆಗಳು ಉಗಮವಾಗುತ್ತಿದ್ದಂತೆ, ಅವುಗಳನ್ನು ಜನತೆಗೆ ಮುಟ್ಟಿಸುವ ಕಾರ್ಯವು ವಿಜ್ಞಾನ ಬರಹಗಳ ಮುಖಾಂತರ ನಡೆಯುತ್ತಿದೆ. ವಿಜ್ಞಾನ ಸಾಹಿತ್ಯದ ರಚನಾ ಶೈಲಿ ಹಾಗೂ ಅಭಿವ್ಯಕ್ತಿ ಸ್ವರೂಪದಿಂದಾಗಿ ಅದನ್ನು ಸೃಜನೇತರ ಸಾಹಿತ್ಯ ಪ್ರಕಾರವೆಂದು ಗುರುತಿಸಲಾಗಿದ್ದರೂ, ಇದರ ಸೃಜನಶೀಲ ಗುಣದಿಂದಾಗಿ ವಿಜ್ಞಾನ ಸಾಹಿತ್ಯವು ಒಂದು ಸೃಜನಶೀಲ ಸಾಹಿತ್ಯ ಪ್ರಕಾರವೆಂದು ಗುರುತಿಸಿಕೊಂಡಿದೆ. ಇದಕ್ಕೆ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯವು ಸು ೭೦–೮೦ ವರ್ಷಗಳಿಂದ ರಚನೆಯಾಗುತ್ತಿರುವುದನ್ನು ಗಮನಿಸಬಹುದು.

ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳು ಪಾಶ್ಚಾತ್ಯ ನಾಗರೀಕತೆಯ ಕೊಡುಗೆ ಎಂಬುದರಲ್ಲಿ ಎರಡು ಮಾತಿಲ್ಲ. ವಿಶ್ವದ ಎರಡನೆ ಮಹಾಯುದ್ಧದ ನಂತರ ಸಂಭವಿಸಿದ ವೈಜ್ಞಾನಿಕ ಸಂಶೋಧನೆ ಮತ್ತು ಅಧ್ಯಯನಗಳು ಜಗತ್ತಿನಲ್ಲಿ ದೊಡ್ಡ ಕ್ರಾಂತಿಯನ್ನೇ ಉಂಟು ಮಾಡಿದವು. ಸಾವಿರಾರು ವರ್ಷಗಳ ಪ್ರಾಚೀನ ಜೀವನಕ್ರಮವು ಹಂತಹಂತವಾಗಿ

ಬದಲಾಗಿ ನಾಗರೀಕ ಮತ್ತು ಅತ್ಯಾಧುನಿಕ ಜೀವನಶೈಲಿಗೆ ಬದಲಾವಣೆಗೊಂಡಿತು. ಹೊಸ ಭೂಖಂಡಗಳ ಶೋಧನೆ, ಬಹುಬಗೆಯ ಯಂತ್ರಗಳ ಆವಿಷ್ಕಾರ, ಕೃಷಿ, ನೀರಾವರಿ, ಸಾಗರ ಮತ್ತು ಅನ್ಯಗ್ರಹಗಳ ಶೋಧ, ಸಂಪರ್ಕ ಕ್ರಾಂತಿ ಮೊದಲಾದ ವೈಜ್ಞಾನಿಕ ಸಂಶೋಧನೆಗಳು ಮನುಷ್ಯನ ಬದುಕನ್ನು ಹಗುರಗೊಳಿಸಿದ್ದಲ್ಲದೆ, ಅವನ ಅಪರಿಮಿತ ವೈಚಾರಿಕ ಕುತೂಹಲವನ್ನು ತಣಿಸಲು ಸಾಧ್ಯವಾಯಿತು. ಇಂದೂ ಸಹ ವಿಜ್ಞಾನ ಮತ್ತು ತಂತ್ರಜ್ಞಾನದ ಅನ್ವೇಷಣೆಗಳು ಎಲ್ಲ ದೇಶಗಳ ಮೊದಲ ಆದ್ಯತೆಯಾಗಿ ಪರಿಗಣಿತವಾಗಿವೆ.

ವಿಜ್ಞಾನದ ಆವಿಷ್ಕಾರ ಮತ್ತು ಸಂಶೋಧನೆಗಳಿಗೆ ಪಾಶ್ಚಾತ್ಯ ನಾಗರಿಕತೆಗಳಲ್ಲಿ ವಿಶೇಷ ಗಮನ, ಅನುದಾನ ಮತ್ತು ಪ್ರೋತ್ಸಾಹಗಳನ್ನು ನೀಡಿದ್ದರಿಂದ ಆ ಕ್ಷೇತ್ರವು ವಿಫುಲವಾಗಿ ಬೆಳೆಯಲು ಸಾಧ್ಯವಾಯಿತು. ಈ ಸಂಶೋಧನೆಗಳ ಫಲಿತಗಳು ಇಡೀ ಜಗತ್ತಿನಾದ್ಯಂತ ಸಮಾಜಗಳಿಗೆ ದೊರೆತು, ವಸ್ತುಲೋಕ ಮತ್ತು ಚಿಂತನೆಗಳ ರೂಪಗಳಲ್ಲಿ ಹರಡಿಕೊಂಡು ಇಡೀ ವಿಶ್ವದ ಚಲನಶೀಲ ಅಭಿವೃದ್ಧಿ ಮತ್ತು ಜಾಗೃತಿಗಳಿಗೆ ಕಾರಣವಾಯಿತು.

ವಿಜ್ಞಾನವೆಂದರೆ ಏನು? ಅದರ ಉದ್ದೇಶ ಮತ್ತು ಸ್ವರೂಪ ಯಾವ ಬಗೆಯದು? ಯಾವ ಲಕ್ಷಣಗಳನ್ನು ವಿಜ್ಞಾನವು ಒಳಗೊಂಡಿರುತ್ತದೆ? ಅದರ ಜವಾಬ್ದಾರಿಗಳೇನು? ಸಮಾಜದ ಬೆಳವಣಿಗೆಯಲ್ಲಿ ವಿಜ್ಞಾನದ ಪಾತ್ರವೇನು? ಇಂತಹ ಹತ್ತು ಹಲವಾರು ಪ್ರಶ್ನೆ ಮತ್ತು ವಿಚಾರಗಳಿಗೆ ವಿಜ್ಞಾನಿಗಳು ಮತ್ತು ವಿದ್ವಾಂಸರು ಸೂಕ್ತ ವಿವರಣೆಗಳನ್ನು ನೀಡಿದ್ದಾರೆ. ಸ್ಥೂಲವಾಗಿ ಹೇಳುವುದಾದರೆ, ಯಾವುದೇ ವಸ್ತು, ಜೀವಿ, ವಿಚಾರ ಅಥವಾ ಘಟನೆ/ಸಂದರ್ಭಗಳ ಬಗೆಗೆ ವಸ್ತುನಿಷ್ಠವಾಗಿ ಮತ್ತು ಪ್ರಾಯೋಗಿಕವಾಗಿ ಅಧ್ಯಯನ ಮಾಡುವುದೇ ವಿಜ್ಞಾನವೆನಿಸಿಕೊಳ್ಳುತ್ತದೆ. ಅಂದರೆ ಮೇಲಿನ ಯಾವುದೇ ವಿಷಯದ ಬಗೆಗೆ ನಾವು ಪಡೆದುಕೊಳ್ಳುವ ವಿ–ಶೇಷವಾದ ಜ್ಞಾನವೇ 'ವಿಜ್ಞಾನ' ಎಂದಾಗುತ್ತದೆ. ವಿಜ್ಞಾನದಲ್ಲಿ ಸ್ಪಷ್ಟತೆ, ಖಚಿತತೆ, ವಿಶ್ವಾಸಾರ್ಹತೆ, ಪ್ರಾಯೋಗಿಕತೆ ಮತ್ತು ಆನ್ವಯಿಕತೆಗಳು ಮುಖ್ಯ ಪ್ರಮಾಣ ಗಳಾಗಿರುತ್ತವೆ.

ವಿಜ್ಞಾನಲೋಕದ ಹಲವಾರು ವಿಸ್ಮಯಗಳ ಬಗೆಗೆ, ಕೌತುಕಗಳ ಬಗೆಗೆ ಅರಿವು ಮೂಡಿಸಲು ಪ್ರಯತ್ನಿಸುವ ಮತ್ತು ಕುತೂಹಲವನ್ನು ತಣಿಸಬಹುದಾದ ಘಟನೆಗಳ ಬಗೆಗೆ ರಚಿಸಿರುವ ಬರಹಗಳನ್ನು 'ವಿಜ್ಞಾನ ಸಾಹಿತ್ಯ' ಎಂದು ಸ್ಥೂಲವಾಗಿ ಗುರುತಿಸಬಹುದು. ಇಂತಹ ಬರಹಗಳು ಕೇವಲ ಬರಹಗಳೇ? ಅಥವಾ ಇದು ಇನ್ನೊಂದು ಸೃಜನಶೀಲ ಸಾಹಿತ್ಯ ಪ್ರಕಾರವೇ? ಎನ್ನುವುದು ಇನ್ನೊಂದು ಪ್ರಶ್ನೆ. ಏನೇ ಆದರೂ ವಿಜ್ಞಾನ ಬರಹಗಳಲ್ಲಿ ಈ ಎರಡೂ ಮಾದರಿಯ ರಚನೆಗಳಿರುವುದನ್ನು ಗುರುತಿಸಲಾಗಿದೆ. ಸಮಾಜದ ಜನರಲ್ಲಿ

ಹೊಸದಾದ ಅರಿವನ್ನು, ಎಚ್ಚರವನ್ನು ಉಂಟುಮಾಡುವುದು ಹಾಗೂ ಅವರನ್ನು ವೈಚಾರಿಕವಾಗಿ ಮುನ್ನಡೆಸುವುದು ವಿಜ್ಞಾನ ಸಾಹಿತ್ಯದ ಉದ್ದೇಶವಾಗಿದೆ. ನಿತ್ಯ ಜೀವನದಲ್ಲಿ ಇಂದು ವಿಜ್ಞಾನ ತಂತ್ರಜ್ಞಾನದ ಬಳಕೆಯು ವ್ಯಾಪಕವಾಗಿದ್ದು, ಇವುಗಳ ಅರಿವು ಜನಸಮುದಾಯಕ್ಕೆ ಅತ್ಯಗತ್ಯವಾಗಿದೆ. ಒಟ್ಟಾರೆಯಾಗಿ ಹೇಳುವುದಾದರೆ ಜನಸಾಮಾನ್ಯರ ಜೀವನ ಮತ್ತು ತಿಳುವಳಿಕೆಯ ಗುಣಮಟ್ಟವನ್ನು ವರ್ಧಿಸುವಲ್ಲಿ ವಿಜ್ಞಾನ ಸಾಹಿತ್ಯದ ಪಾತ್ರವು ಪ್ರಮುಖವಾಗಿದೆ. ವಿಜ್ಞಾನವು ಮುಖ್ಯವಾಗಿ ಪ್ರಕೃತಿಯಲ್ಲಿನ ನಿಗೂಢಗಳನ್ನು ಶೋಧಿಸುವುದರಿಂದ ಹಿಡಿದು, ನಿಸರ್ಗದಲ್ಲಿರುವ ಪ್ರತಿಯೊಂದು ವಸ್ತು, ಕ್ರಿಯೆ ಮತ್ತು ರಚನೆಗಳನ್ನು ಪರೀಕ್ಷೆಗೊಳಪಡಿಸಿ, ಕೆಲವು ಸಿದ್ಧಾಂತಗಳನ್ನು ರೂಪಿಸಿ, ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತದೆ. ಆದ್ದರಿಂದಲೇ ಎಲ್ಲ ದೇಶ ಭಾಷೆಗಳಲ್ಲಿಯೂ ವಿಜ್ಞಾನ ಸಾಹಿತ್ಯಕ್ಕೆ ವಿಶೇಷವಾದ ಮಹತ್ವವಿದೆ.

ವಿಜ್ಞಾನ ಬರಹಗಳನ್ನೆಲ್ಲ ಓದಿ ಅರ್ಥೈಸಿಕೊಂಡು ಅರಗಿಸಿಕೊಳ್ಳುವ ಶಕ್ತಿ ಎಲ್ಲರಲ್ಲಿಯೂ ಇರುವುದಿಲ್ಲ. ವಿಜ್ಞಾನ ಬರಹಗಾರ ತನ್ನ ವಿಷಯವ್ಯಾಪ್ತಿಗೆ ಸಂಬಂಧಿಸಿದ ಪರಿಚಿತವಾದ ಜನಸಾಮಾನ್ಯರಿಗೆ ಜಟಿಲವೂ, ಅಪರಿಚಿತವೂ ಆದ ವಿಜ್ಞಾನ ವಿಷಯ ವಿಚಾರಗಳನ್ನು ಬಹಳಷ್ಟು ತಿಳಿಗೊಳಿಸಿ ಸರಳ ಹಾಗೂ ಆಕರ್ಷಕ ನಿರೂಪಣಾ ಶೈಲಿಯ ಮೂಲಕ ಸಹೃದಯರಿಗೆ ತಲುಪಿಸಬೇಕಾಗುತ್ತದೆ. "ವಿಜ್ಞಾನದ ಇಂಗ್ಲೀಷ್ ಪದಕ್ಕೆ ಸೂಕ್ತ ಪರಿಭಾಷೆಯ ಮೂಲಕವೇ ಕನ್ನಡದಲ್ಲಿ ವಿವರಿಸಬೇಕು ಎನ್ನುವ ಹಠವನ್ನು ಬಿಡಬೇಕು. ವಾಕ್ಯದಲ್ಲಿ ಹೇಗೆ ಸರಳವಾಗಿ ವಿವರಿಸಬಹುದು ಎನ್ನುವುದರತ್ತ ನಮ್ಮ ಗಮನ ಕೇಂದ್ರೀಕರಿಸಬೇಕು"[1] ಎಂದು ವಿಜ್ಞಾನ ಲೇಖಕರಾದ ಕೊಳ್ಳೆಗಾಲ ಶರ್ಮರವರು ಹೇಳಿರುವುದು ಹಾಗೂ "ಮಕ್ಕಳಿಗೆ ಶುಷ್ಕ ವೈಜ್ಞಾನಿಕ ವಿಚಾರಗಳನ್ನು ಪಾಠ ಹೇಳಿದಂತೆ ವಿವರಿಸಿದರೆ ಅವರ ಮನಸ್ಸು ತಿರಸ್ಕರಿಸುತ್ತದೆ. ಸ್ವಾನುಭವಗಳೊಂದಿಗೆ ಸಂಯೋಜನೆಗೊಂಡು ಜೀವನ ಸಂದರ್ಭಗಳಲ್ಲಿ ಹೇಳಿದಾಗ ಮಾತ್ರ ಎಂಥ ಕ್ಲಿಷ್ಟ ವಿಚಾರವಾದರೂ ಸುಲಭವಾಗಿ ಹೃದ್ಗತವಾಗುತ್ತದೆ"[2] ಎಂದು ಪೂರ್ಣಚಂದ್ರ ತೇಜಸ್ವಿಯವರು ಹೇಳಿರುವುದು ವಿಜ್ಞಾನ ಸಾಹಿತ್ಯದ ನಿರೂಪಣೆ ಹಾಗೂ ಅಭಿವ್ಯಕ್ತಿಯ ಸ್ವರೂಪವನ್ನು ಸೂಚಿಸುತ್ತದೆ.

ಮಕ್ಕಳಿಂದ ಹಿಡಿದು ಹಿರಿಯರವರೆಗೆ ವಿಜ್ಞಾನ ವಿಚಾರವನ್ನು ಹೃದ್ಗತವಾಗುವಂತೆ ಬರೆಯುವ ಯಶಸ್ವಿ ಪ್ರಯತ್ನವನ್ನು ಕನ್ನಡದ ಬಹಳಷ್ಟು ಸಾಹಿತಿಗಳು ಮಾಡಿದ್ದು, ಅವರಲ್ಲಿ ಶಿವರಾಮ ಕಾರಂತ, ಬಿ.ಜಿ.ಎಲ್.ಸ್ವಾಮಿ, ಜಿ.ಟಿ.ನಾರಾಯಣರಾವ್, ಸಿ.ಆರ್.ಚಂದ್ರಶೇಖರ್, ಪೂರ್ಣಚಂದ್ರ ತೇಜಸ್ವಿ, ನೇಮಿಚಂದ್ರ, ರಾಜಶೇಖರ ಭೂಸನೂರಮಠ, ಡಿ.ಎಸ್ ಶಂಕರ್, ನಾಗೇಶ ಹೆಗಡೆಯವರು ಹಾಗೂ ವಿಜ್ಞಾನ

ಲೋಕದಲ್ಲಿ ವಿಷಯು ಜ್ಞಾನಿಗಳಾದ ಯು.ಬಿ.ಪವನಜ, ಬಿ.ಎಸ್.ಶೈಲಜಾ, ಟಿ. ಆರ್. ಅನಂತರಾಮು, ಮೊದಲಾದವರು ವಿಜ್ಞಾನವನ್ನು ಜನರಿಗೆ ತಲುಪಿಸುವ ಕೆಲಸವನ್ನು ಮಾಡಿದ್ದಾರೆ. ಇವರಲ್ಲಿ ಕೆಲವರು ಇನ್ನೂ ಮಾಡುತ್ತಿದ್ದಾರೆ. ಇದರಿಂದ ವಿಜ್ಞಾನಕ್ಕೆ ಸಂಬಂದಿಸಿದ ಕೆಲವು ವಿಷಯಗಳಲ್ಲದೆ, ಜೀವನದ ಪ್ರತಿಯೊಂದು ಅಂಶಕ್ಕೆ ಸಂಬಂಧಿಸಿದ ವೈಜ್ಞಾನಿಕ ಮಾಹಿತಿಯು ಸಾಮಾನ್ಯನಿಂದ ಹಿಡಿದು ಎಲ್ಲರಿಗೂ ತಿಳಿಯುವಂತಾಗಿದೆ.

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಸ್ವರೂಪ ಮತ್ತು ಅದರ ಸಾಮಾಜಿಕ ಪರಿಣಾಮಗಳು ಹಾಗೂ ವಿಜ್ಞಾನ ಮಾಹಿತಿಯ ಸಂವಹನದ ಬಗೆಗೆ ಅಧ್ಯಯನ ಮಾಡುವ ಉದ್ದೇಶವನ್ನು ಈ ಸಂಶೋಧನೆಯು ಒಳಗೊಂಡಿದೆ. ಅಲ್ಲದೆ ವಿಜ್ಞಾನ ಬರಹದ ವಸ್ತುವಿನ ವಿವಿಧ ನೆಲೆಗಳು, ಆಶಯಗಳು, ವೈಜ್ಞಾನಿಕ ವಿಚಾರಗಳನ್ನು ಅಭಿವ್ಯಕ್ತಿಸುವಲ್ಲಿರುವ ಭಾಷಿಕ ಸಮಸ್ಯೆಗಳನ್ನು ಕುರಿತು ಈ ಅಧ್ಯಯನವು ಗಮನ ಹರಿಸುತ್ತದೆ. ವಿಜ್ಞಾನ ಬರಹಗಳನ್ನು ರಚಿಸಿರುವ ಕನ್ನಡದ ಆಯ್ದ ಲೇಖಕರ ಬರಹಗಳನ್ನು ಈ ಸಂಶೋಧನೆಗೆ ಮೂಲ ಸಾಮಗ್ರಿಗಳನ್ನಾಗಿ ಬಳಸಿಕೊಳ್ಳಲಾಗಿದೆ.

ಜಗತ್ತು, ಪರಿಸರ ಹಾಗೂ ನಮ್ಮ ಸುತ್ತ ಮುತ್ತಲಿನ ಪ್ರತಿಯೊಂದರ ಬಗೆಗಿನ ತಿಳುವಳಿಕೆ ಜಾಗೃತಿಯು ಇಂದಿನ ಪೀಳಿಗೆಗೆ ಬಹು ಅಗತ್ಯ ಎಂಬುದರ ಹಿನ್ನೆಲೆಯಲ್ಲಿ ಪ್ರಬಂಧದ ಶೀರ್ಷಿಕೆ "ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪ" ಎಂಬುದನ್ನು ಆಯ್ದ ಲೇಖಕರಿಂದ ರಚಿತ ಕೃತಿಗಳು ಮತ್ತು ಲೇಖನಗಳ ಸಹಾಯದೊಂದಿಗೆ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪದ ಅಧ್ಯಯನ ಮಾಡಲಾಗಿದೆ.

೧.೧. ಅಧ್ಯಯನದ ಉದ್ದೇಶಗಳು

ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪದ ಅವಲೋಕನ ಕುರಿತಂತೆ ಅಲ್ಲಲ್ಲಿ ಆಂಶಿಕ ವಾದ ವಿವಾದ ಚರ್ಚೆಗಳು ಮಾತ್ರ ನಡೆದಿರುವುದನ್ನು ಕಾಣಬಹುದು. ಕೆಲವು ಸಣ್ಣ ಪುಟ್ಟ ಲೇಖನಗಳಲ್ಲಿ ಇದರ ಚರ್ಚೆ ವಿವರಣೆಯನ್ನು ಕಾಣಬಹುದೇ ಹೊರತು, ಸಂಶೋಧನಾತ್ಮಕ ಅಧ್ಯಯನಗಳು ನಡೆದಿರುವುದು ಬಹಳ ಕಡಿಮೆ. ಹೀಗಾಗಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪದ ಅವಲೋಕನ ಕುರಿತಂತೆ ತಾತ್ವಿಕವಾಗಿ, ವಿಶ್ಲೇಷಣಾತ್ಮಕವಾಗಿ ಹಾಗೂ ವಿವರಣಾತ್ಮಕವಾಗಿ ಅಧ್ಯಯನ ಮಾಡುವ ಮಹತ್ವದ ಉದ್ದೇಶವನ್ನು ಈ ಸಂಶೋಧನಾತ್ಮಕ ಅಧ್ಯಯನವು ಹೊಂದಿದ್ದು, ಇತರ

ಉದ್ದೇಶಗಳು ಈ ಕೆಳಗಿನಂತೆ ಪ್ರಸ್ತುತಪಡಿಸಲಾಗಿದೆ.

- ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಸ್ಥಾನ, ಮೌಲ್ಯ ಹಾಗೂ ಮಹತ್ವಗಳನ್ನು ಕುರಿತು ಅಧ್ಯಯನ ಮಾಡುವುದು.
- ವಿಜ್ಞಾನ ಸಾಹಿತ್ಯವು ಚಾರಿತ್ರಿಕವಾಗಿ ಬೆಳೆದುಬಂದ ಬಗೆ (ಸ್ವಾತಂತ್ರ್ಯ ಪೂರ್ವದಲ್ಲಿ ಹಾಗೂ ಸ್ವಾತಂತ್ರ್ಯಾ ನಂತರದಲ್ಲಿ)ಯನ್ನು ಅವಲೋಕಿಸುವುದು.
- ಸೃಜನಶೀಲ ಹಾಗೂ ಸೃಜನೇತರ ವಿಜ್ಞಾನ ಬರಹಗಳ ಸ್ವರೂಪ, ಕಾರ್ಯ ಹಾಗೂ ಲೇಖಕರ ಚಿಂತನ ವಿಧಾನವನ್ನು ಅರಿಯುವುದು.
- ವಿಜ್ಞಾನ ಲೇಖನಗಳ ಉದ್ದೇಶ, ಗುರಿಗಳು ಹಾಗೂ ಪರಿಣಾಮಶೀಲತೆಯನ್ನು ಗಮನಿಸುವುದು.
- ಸೃಜನಶೀಲ ಹಾಗೂ ಸೃಜನೇತರ – ಎರಡೂ ರೀತಿಯ ವಿಜ್ಞಾನ ಬರಹಗಳಲ್ಲಿನ ಭಾಷೆ ಮತ್ತು ನಿರೂಪಣೆಯ ವಿಧಾನಗಳನ್ನು ತಿಳಿಯುವುದು.
- ಸ್ವತಂತ್ರ ರಚನೆ, ಭಾಷಾಂತರ, ರೂಪಾಂತರ ಮತ್ತು ಅನುವಾದದ ಸಂದರ್ಭದ ಸಮಸ್ಯೆಗಳು ಮತ್ತು ಸಾಧ್ಯತೆಗಳನ್ನು ಚರ್ಚಿಸುವುದು.
- ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆ ಮತ್ತು ವಿಭಿನ್ನ ಬಗೆಯ ರಚನಾ ಕ್ರಮಗಳನ್ನು ಅಧ್ಯಯನ ಮಾಡುವುದು.
- ವಿಜ್ಞಾನ ಸಾಹಿತ್ಯದ ಅರ್ಥವಂತಿಕೆ, ಸಾಮಾಜಿಕ ಪ್ರಸ್ತುತತೆ ಮತ್ತು ಅದರ ಸಾಮಾಜಿಕ ಜವಾಬ್ದಾರಿಗಳನ್ನು ಕುರಿತು ವಿವರಿಸುವುದು.
- ವೈಜ್ಞಾನಿಕ ದೃಷ್ಟಿ ಮತ್ತು ವೈಜ್ಞಾನಿಕ ವಿಚಾರ ವಿವೇಚನೆಯು ವಿಜ್ಞಾನದಿಂದಲೇ ಸಾಧ್ಯ ಎಂಬುದನ್ನು ತಿಳಿಯುವುದು.
- ವಿಜ್ಞಾನ ಸಾಹಿತ್ಯದ ಇಂದಿನ ಸ್ಥಿತಿಗತಿ ಮತ್ತು ಮುಂದಿನ ಬೆಳವಣಿಗೆಗಳನ್ನು ಕುರಿತು ಆಲೋಚಿಸುವುದು.

೧.೨. ಅಧ್ಯಯನದ ವ್ಯಾಪ್ತಿ

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಹಲವು ನೆಲೆಗಳ ಅಧ್ಯಯನವನ್ನು ಕುರಿತಾದ ಈ ಸಂಶೋಧನೆಯು ಸೃಜನಾತ್ಮಕ ಕೃತಿಗಳು ಮತ್ತು ಸೃಜನೇತರ ಕೃತಿಗಳು ಎಂಬ ಎರಡು ನೆಲೆಗಳಿಂದ ಕೂಡಿದೆ. ಸ್ವಾತಂತ್ರ್ಯಪೂರ್ವ ಕೃತಿಗಳಿಂದ ಆರಂಭಿಸಿ ಪ್ರಮುಖ ಲೇಖಕರ ಕೃತಿ ಬರಹಗಳನ್ನು ಗಮನಿಸುತ್ತಾ, ಸ್ವಾತಂತ್ರ್ಯಾನಂತರದ ಕನ್ನಡ ವಿಜ್ಞಾನ ಲೇಖಕರ

ಸಾಹಿತ್ಯದವರೆಗೆ ವಿವರವಾಗಿ ಅಧ್ಯಯನ ಮಾಡುವ ಗುರಿಯನ್ನು ಈ ಮಹಾಪ್ರಬಂಧವು ಹೊಂದಿದೆ. ಜೊತೆಗೆ ಕೆಲವು ಆಯ್ದ ವಿಜ್ಞಾನ ಲೇಖಕರ ಮತ್ತು ಸಾಹಿತಿಗಳ ಪ್ರಕಟಿತ ಕೃತಿ ಹಾಗೂ ಲೇಖನಗಳ ಕಡೆಗೆ ವಿಶೇಷ ಗಮನವನ್ನು ಹರಿಸಲಾಗಿದೆ.

ವಿಜ್ಞಾನ ಸಾಹಿತ್ಯದ ವಿವಿಧ ವಿಷಯಗಳ ಕಲಿಕೆ, ಪ್ರತಿಪಾದನೆ, ವಿಷಯ ವಿನಿಮಯಕ್ಕಾಗಿ ಸಿದ್ಧಪಡಿಸಿದ ಮುದ್ರಿತ ಪ್ರಕಟಿತ ಕೃತಿಗಳ ಲೇಖಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಿ, ಅವುಗಳ ಸಹಾಯದೊಂದಿಗೆ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಇದರೊಂದಿಗೆ ಸಂಗ್ರಹಿತ ಆಕರ ಸಾಮಗ್ರಿಗಳ ಸುದೀರ್ಘ ಅಧ್ಯಯನವನ್ನು ಕೈಗೊಳ್ಳುವ ಮೂಲಕ ವಿಷಯದ ಬಗ್ಗೆ ಪರಿಪೂರ್ಣ ಮಾಹಿತಿಯನ್ನು ತಿಳಿಯುವ ಉದ್ದೇಶದಿಂದ ವಿಜ್ಞಾನ ವಿದ್ವಾಂಸ ಸಾಹಿತಿಗಳಾದ ಬಿ.ಜಿ.ಎಲ್ ಸ್ವಾಮಿ, ಜಿ. ಟಿ. ನಾರಾಯಣರಾವ್, ಕೆ.ಪಿ ಪೂರ್ಣಚಂದ್ರ ತೇಜಸ್ವಿ, ಸಿ. ಆರ್. ಚಂದ್ರಶೇಖರ್, ನಾಗೇಶ್ ಹೆಗಡೆ, ಟಿ. ಆರ್ ಅನಂತರಾಮು, ಟಿ. ಜಿ. ಶ್ರೀನಿಧಿ, ಅನುಪಮ ನಿರಂಜನ, ಕೊಳ್ಳೆಗಾಲ ಶರ್ಮ, ಎ.ಓ.ಆವಲಮೂರ್ತಿ ಮೊದಲಾದ ಲೇಖಕರ ಕೃತಿಗಳನ್ನು ಅಧ್ಯಯನದ ವ್ಯಾಪ್ತಿಗೆ ಒಳಪಡಿಸಲಾಗಿದೆ.

೧.೩. ಅಧ್ಯಯನದ ವೈಧಾನಿಕತೆ

ಜ್ಞಾನದ ಸಲುವಾಗಿ ನಡೆಯುವ ಹುಡುಕಾಟವಾದ ಸಂಶೋಧನೆಯಿಂದ ಹೊಸ ಸಂಗತಿಗಳನ್ನು ಹುಟ್ಟು ಹಾಕಲಾಗುವುದಲ್ಲದೆ, ಅಸ್ತಿತ್ವದಲ್ಲಿರುವ ಸಮಸ್ಯೆಯನ್ನು ಕಂಡುಕೊಂಡು ಪರಿಹಾರವನ್ನು ಸೂಚಿಸಲಾಗುವುದು. ಸಾಮಾನ್ಯವಾಗಿ ಸಂಶೋಧನೆಯು ಹಲವಾರು ಅಧ್ಯಯನ ವಿಧಾನದಿಂದ ಕೂಡಿದೆ. ಸಾಮಗ್ರಿಗಳನ್ನು ಅರ್ಥೈಸುವ ಉದ್ದೇಶದಿಂದಾಗಿ ಸಾಮಗ್ರಿಮುಖಿ, ವಿವರಣಮುಖಿ, ವಿಶ್ಲೇಷಣಾ ಮುಖಿ ಅಥವಾ ವ್ಯಾಖ್ಯಾನಮುಖಿ ಸಂಶೋಧನೆಗಳೆಂದೂ ಹಾಗೂ ಸಾಮಗ್ರಿಗಳು ಹೊರಸೂಸುವ ಅರ್ಥದ ದೃಷ್ಟಿಯಿಂದ ಐತಿಹಾಸಿಕ, ಸಾಮಾಜಿಕ, ತುಲನಾತ್ಮಕ, ಮನೋವೈಜ್ಞಾನಿಕ ಸಂಶೋಧನೆ ಎಂದು ಗುರುತಿಸಲಾಗಿದೆ.

ಸಂಗ್ರಹಿಸಿದ ಅಂಕಿ ಅಂಶಗಳು, ಸಾಮಗ್ರಿಗಳು ಕ್ರಮಬದ್ಧವಾದ ವಿಶ್ಲೇಷಣೆಯಿಲ್ಲದೆ ಏನನ್ನೂ ಸೂಚಿಸಲಾರವು. ಹೀಗಾಗಿ ಸಂಗ್ರಹಿಸಿದ ಸಾಮಗ್ರಿಯನ್ನು ಅರ್ಥೈಸುವ ದೃಷ್ಟಿಯಿಂದ ಸಂಶೋಧನಾ ಅಧ್ಯಯನದಲ್ಲಿ ವಿಶ್ಲೇಷಣಾಮುಖಿ ಶೋಧನೆಗೆ ಅದ್ಯತೆ ನೀಡಿರುತ್ತೇನೆ. ವಿಶ್ಲೇಷಣಾ ವಿಧಾನವನ್ನು ವಿಶ್ಲೇಷಣಾಮುಖಿ ಅಥವಾ ವ್ಯಾಖ್ಯಾನಮುಖಿ ಅಧ್ಯಯನ ಎಂದೂ ಸಹ ಕರೆಯಲಾಗುವುದು. ವಿಶ್ಲೇಷಣೆ ಇಲ್ಲದೆ ವ್ಯಾಖ್ಯಾನ ಪರಿಪೂರ್ಣವಾಗಲಾರದು. ವ್ಯಾಖ್ಯಾನವಿಲ್ಲದೆ ವಿಶ್ಲೇಷಣೆ ಸಮಗ್ರವಾಗಲಾರದು. ಇವೆರಡರ ಪರಸ್ಪರ ಸಂಬಂಧದಿಂದ

ಸಂಗ್ರಹಿಸಿದ ಸಾಮಗ್ರಿಗಳನ್ನು ವಿಂಗಡಿಸಿಕೊಂಡು ಸತ್ಯ ಶೋಧನೆಯನ್ನು ಕೈಗೊಳ್ಳುವುದೇ ವಿಶ್ಲೇಷಣಾಮುಖಿ ಅಥವಾ ವಿಶ್ಲೇಷಣಾ ವಿಧಾನವಾಗಿದೆ. ಈ ವಿಧಾನದೊಂದಿಗೆ ಅಧ್ಯಯನಕ್ಕಾಗಿ ಸಂಗ್ರಹಿಸಿದ ಎಲ್ಲಾ ಆಕರ ಸಾಮಗ್ರಿಗಳನ್ನು ವಿಮರ್ಶಾತ್ಮಕವಾಗಿ ಪರೀಕ್ಷಿಸುವ ಮೂಲಕ ಅಗತ್ಯ ಮಾಹಿತಿಯನ್ನು ಸಂಗ್ರಹಿಸಿ "ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪ" ಎಂಬುದನ್ನು ವಿಶ್ಲೇಷಣಾ ವಿಧಾನದ ಮೂಲಕ ಅಧ್ಯಯನ ಮಾಡಲಾಗಿದೆ.

೧.೪. ಅಧ್ಯಯನದ ಸ್ವರೂಪ:

ಸಾಮಾನ್ಯವಾಗಿ ಇತರ ಸಾಹಿತ್ಯ ಪ್ರಕಾರದಂತೆ ವಿಜ್ಞಾನ ಸಾಹಿತ್ಯವು ಸ್ವರೂಪ, ರಚನೆ ಹಾಗೂ ಅಭಿವ್ಯಕ್ತಿಯಲ್ಲಿ ವ್ಯತ್ಯಾಸದಿಂದ ಕೂಡಿದೆ. ಇತರ ಸಾಹಿತ್ಯದಂತೆ ವಿಜ್ಞಾನ ಸಾಹಿತ್ಯಕ್ಕೆ ತನ್ನದೇ ಆದ ಭಾಷೆ, ನಿರೂಪಣ ಲಕ್ಷಣಗಳಿದ್ದು, ಓದಿ ಅರ್ಥೈಸಿಕೊಳ್ಳುವಲ್ಲಿಯೂ ವ್ಯತ್ಯಾಸವಿದೆ. ಹೀಗಾಗಿ ವಿಜ್ಞಾನ ಸಾಹಿತ್ಯ ಕೃತಿ ಅಥವಾ ಬರಹಗಳನ್ನು ಅರ್ಥೈಸಿಕೊಂಡು ವಿಷಯದ ಬಗ್ಗೆ ಅರಿವು ಪಡೆಯುವ ಸಾಮರ್ಥ್ಯವು ಎಲ್ಲರಿಗೂ ಇರುವುದಿಲ್ಲ. ವಿಷಯ ಜ್ಞಾನಿ ಇಲ್ಲವೆ ವಿಜ್ಞಾನ ಸಾಹಿತಿಯು ತನ್ನ ಬರಹದ ವಿಷಯವ್ಯಾಪ್ತಿಗೆ ಸಂಬಂಧಿಸಿದ ಪರಿಚಿತವಾದ ಸಮಾಜಕ್ಕೆ ಅಗತ್ಯವಾದ ಇಲ್ಲವೇ ಜನರಿಗೆ ಪರಿಚಿತವಲ್ಲದ ಹಾಗೂ ಜಟಿಲವಾದ ವಿಜ್ಞಾನ ವಿಷಯಗಳನ್ನು ಸರಳ ಸುಲಭ ಅತ್ಯಾಕರ್ಷಕ ನಿರೂಪಣಾ ಶೈಲಿಯಲ್ಲಿ ಓದುಗರಿಗೆ ತಿಳಿಯುವಂತೆ ಬರೆಯಬೇಕು. ಇಂತಹ ಯಶಸ್ವಿ ಕಾರ್ಯವನ್ನು ಕನ್ನಡದ ಬಹಳಷ್ಟು ವಿಜ್ಞಾನ ಸಾಹಿತಿಗಳು ಮಾಡಿದ್ದು, ಅವರಲ್ಲಿ ಪ್ರಮುಖವಾಗಿ ಶಿವರಾಮ ಕಾರಂತರು, ಬಿ.ಜಿ.ಎಲ್.ಸ್ವಾಮಿ, ಆಡ್ಯನಡ್ಕ ಕೃಷ್ಣಭಟ್ಟರು, ಕೆ.ಪಿ. ಪೂರ್ಣ ಚಂದ್ರ ತೇಜಸ್ವಿ, ನೇಮಿಚಂದ್ರ, ನಾಗೇಶ್ ಹೆಗಡೆ, ಬಿ.ಎಸ್.ಶೈಲಜ, ಪವನಜ ಮೊದಲಾದವರು ವಿಜ್ಞಾನ ವಿಷಯವನ್ನು ಜನರಿಗೆ ತಲುಪಿಸುವ ಕಾರ್ಯ ಮಾಡಿದ್ದಾರೆ.

ಮಾನವನು ವಾಸಿಸುವ ಪರಿಸರ, ಜೀವ-ಜಗತ್ತಿನ ಬಗ್ಗೆ ಅಂಧಶ್ರದ್ಧೆಯನ್ನು ಬಿಟ್ಟು ವೈಜ್ಞಾನಿಕವಾಗಿ ತಿಳಿಯುವುದು, ಇಂದು ಅನಿವಾರ್ಯ ಹಾಗೂ ಬಹು ಆವಶ್ಯಕವಾಗಿದೆ. ಈ ಹಿನ್ನೆಲೆಯಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆ, ಅಭಿವ್ಯಕ್ತಿಸುವಲ್ಲಿನ ಭಾಷಿಕ ಮತ್ತಿತರ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡುವ ಉದ್ದೇಶವನ್ನು ಈ ಮಹಾಪ್ರಬಂಧವು ಹೊಂದಿದ್ದು, ಕನ್ನಡದ ಆಯ್ದ ಲೇಖಕರ ಮೂಲ ಹಾಗೂ ಸಂಪಾದಿತ ಕೃತಿಗಳನ್ನು ಸಂಶೋಧನೆಗೆ ಮೂಲ ಸಾಮಗ್ರಿಯನ್ನಾಗಿ ಬಳಸಿಕೊಳ್ಳುವುದರೊಂದಿಗೆ, ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಸ್ವರೂಪ ಮತ್ತು ಅದರ ಸಾಮಾಜಿಕ ಹೊಣೆಗಾರಿಕೆಯನ್ನು ತಿಳಿಯುವ ಆಶಯ ಹೊಂದಲಾಗಿದೆ.

ಅಧ್ಯಾಯ – ಒಂದು : ಅಧ್ಯಯನದ ಉದ್ದೇಶ, ವ್ಯಾಪ್ತಿ, ವೈಧಾನಿಕತೆ, ಸ್ವರೂಪ ಮತ್ತು ಮಹತ್ವ

ಭಾಷಾಸಂವರ್ಧನೆಗೆ ಅಸ್ತಿಯಿಲ್ಲದ ಹಾಗೂ ಸತ್ಯಾಂಶದಿಂದ ಕೂಡಿದ ವಿಜ್ಞಾನ ಸಾಹಿತ್ಯದ ಮೂಲ ಆಶಯವೇ, ನಮ್ಮ ಸುತ್ತ ಮುತ್ತಲಿನ ಸಂಕೀರ್ಣವಾದ ವಿದ್ಯಮಾನಗಳನ್ನು ಅನಾವರಣಗೊಳಿಸುವುದಾಗಿದೆ. ಅಂತಹ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪದ ಅಧ್ಯಯನಕ್ಕೆ ಸಹಕಾರಿಯಾದಂತೆ ಅಧ್ಯಾಯಗಳನ್ನು ವಿಂಗಡಿಸಿಕೊಳ್ಳಲಾಗಿದ್ದು, ಪ್ರತಿಯೊಂದು ಅಧ್ಯಾಯವು ವಿಷಯದ ಆಳ ಅರಿವಿನ ಆಧಾರಿತವಾಗಿದೆ. ಅದರಂತೆ ಸಂಶೋಧನಾ ಮಹಾಪ್ರಬಂಧದ ಮೊದಲ ಅಧ್ಯಾಯವು ಪ್ರಾಸ್ತಾವಿಕವಾಗಿದ್ದು, ಅಧ್ಯಯನದ ಮೂಲ ಉದ್ದೇಶಗಳು ಮತ್ತು ವ್ಯಾಪ್ತಿಯನ್ನು ಕುರಿತು ಚರ್ಚಿಸಲಾಗಿದೆ. ಜೊತೆಗೆ ಅಧ್ಯಯನದ ವೈಧಾನಿಕತೆ, ಸ್ವರೂಪ ಹಾಗೂ ಮಹತ್ವದ ವಿವರಣೆಯನ್ನು ನೀಡಲಾಗಿದೆ.

ಅಧ್ಯಾಯ –ಎರಡು : ಇದುವರೆಗಿನ ಅಧ್ಯಯನಗಳ ಸಮೀಕ್ಷೆ.

ಈ ಅಧ್ಯಾಯದಲ್ಲಿ ವಿಜ್ಞಾನ ಸಾಹಿತ್ಯದ ಬಗೆಗೆ ಕನ್ನಡದಲ್ಲಿ ಇದುವರೆಗೆ ನಡೆದಿರುವ ಅಧ್ಯಯನಗಳು, ಪ್ರಕಟಿತ ಕೃತಿಗಳು, ಬರಹಗಳು ಇವುಗಳನ್ನು ಕುರಿತು ವಿವರಿಸಲಾಗುವುದು. ಪತ್ರಿಕಾ ಬರಹಗಳು ಹಾಗೂ ಅಂತರ್ಜಾಲದ ಮಾಹಿತಿಯನ್ನು ಪೂರಕ ಸಾಮಗ್ರಿಯಾಗಿ ಪರಿಗಣಿಸಿ, ಚರ್ಚಿಸಲಾಗುವುದು.

ವಿಜ್ಞಾನದ ವಿವಿಧ ಕ್ಷೇತ್ರಗಳಿಗೆ ಸಂಬಂಧಿಸಿದ ವಿಷಯಗಳಿಗೆ ವಿಜ್ಞಾನ ವಿಷಯ ಪಂಡಿತರು ಹಾಗೂ ಆಸಕ್ತ ಹವ್ಯಾಸಿ ಸಾಹಿತಿಗಳು ಬಹಳಷ್ಟು ಕೃತಿಗಳನ್ನು ಲೇಖನಗಳನ್ನು ರಚಿಸಿ ಪ್ರಕಟಿಸಿದ್ದಾರೆ. ರಚಿತ ಎಲ್ಲಾ ಲೇಖನಗಳಲ್ಲಿ ವಿಷಯ ವಸ್ತು ಹಾಗೂ ಅಭಿವ್ಯಕ್ತಿ ಸ್ವರೂಪದಲ್ಲಿ ವೈವಿಧ್ಯತೆಯನ್ನು ಕಾಣಬಹುದು. ಅಲ್ಲದೇ ಭಾಷಾ ನಿರೂಪಣೆಯಲ್ಲೂ ವೈವಿಧ್ಯತೆಯಿದೆ. ಹೀಗಾಗಿ ಪ್ರಮುಖ ಲೇಖಕರಿಂದ ರಚಿತ ಕೃತಿಗಳನ್ನೂ, ಲೇಖನಗಳನ್ನೂ, ಸಂಪಾದಿತ ಕೃತಿಗಳಲ್ಲಿನ ಲೇಖನಗಳನ್ನೂ ಹಾಗೂ ದಿನಪತ್ರಿಕೆ ಮತ್ತು ಅಂತರ್ಜಾಲದಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಪ್ರಕಟಿತ ಮಾಹಿತಿಯನ್ನು ಸಂಗ್ರಹಿಸಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪದ ಅವಲೋಕನಕ್ಕೆ ಸಂಬಂಧಿಸಿದಂತೆ ಸಮೀಕ್ಷೆ ಮಾಡಲಾಗಿದೆ.

ಅಧ್ಯಾಯ – ಮೂರು : ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ.

ಮೂರನೇ ಅಧ್ಯಾಯವು ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆಯನ್ನು ಕುರಿತದ್ದಾಗಿದೆ. ಇದರಲ್ಲಿ ವಿಜ್ಞಾನ ಸಾಹಿತ್ಯದ ಕಾಲಾನುಕ್ರಮ ಬೆಳವಣಿಗೆಯನ್ನು ಸ್ವಾತಂತ್ರ್ಯ

ಪೂರ್ವ ಅಂದರೆ ೧೯೦೦ ರಿಂದ ೧೯೪೭ ಹಾಗೂ ಸ್ವಾತಂತ್ರ್ಯ ನಂತರ ಅಂದರೆ ೧೯೪೭ ರಿಂದ ಪ್ರಸ್ತುತದವರೆಗೆ ಎಂದು ಎರಡು ಉಪ ಅಧ್ಯಾಯಗಳಾಗಿ ವಿಂಗಡಿಸಿಕೊಂಡು, ಆಯಾ ಕಾಲಘಟ್ಟದಲ್ಲಿ ರಚಿತ ಪ್ರಮುಖ ವಿಜ್ಞಾನ ಕ್ಷೇತ್ರದ ವಿಜ್ಞಾನ ಕೃತಿಗಳ ಬಗೆಗೆ ತಿಳಿಸಲಾಗುವುದು.

ಅಧ್ಯಾಯ – ನಾಲ್ಕು: ವಿಜ್ಞಾನ ಸಾಹಿತ್ಯದ ಅಧ್ಯಯನದ ನೆಲೆಗಳು

೪.೧. ಸೃಜನಶೀಲ ವಿಜ್ಞಾನ ಬರಹಗಳು

೪.೨. ಸೃಜನೇತರ ವಿಜ್ಞಾನ ಬರಹಗಳು

ಸತ್ಯ ಶೋಧನೆಯ ಪರಮಗುರಿಯನ್ನು ಹೊಂದಿರುವ ವಿಜ್ಞಾನವು ಪ್ರಕೃತಿಯಲ್ಲಿನ ಚರಾಚರಗಳನ್ನು, ಆಗು ಹೋಗುಗಳನ್ನು, ನಿಸರ್ಗದ ನಿಯಮಗಳನ್ನು ಕಂಡುಕೊಳ್ಳುವ ಮೂಲಕ ನೈಜತೆಯ ದರ್ಶನವನ್ನು ಮಾಡಿಸುವ ಮಹತ್ವದ ಅಂಶದಿಂದ ಕೂಡಿದೆ. ಇಂತಹ ವಿಜ್ಞಾನದೊಳಗಿನ ಅಗತ್ಯಾಂಶಗಳನ್ನು ಗುರ್ತಿಸಿ, ಸಮಾಜ ಹಾಗೂ ಧರ್ಮದ ಪ್ರಬಲ ವಿರೋದದ ನಡುವೆಯೂ, ವೈಜ್ಞಾನಿಕ ಜ್ಞಾನವನ್ನು ವ್ಯವಸ್ಥಿತವಾಗಿ ತಾರ್ಕಿಕವಾಗಿ ತಿಳಿಯುವಂತೆ ಮಾಡುವುದೇ ವಿಜ್ಞಾನ ಸಾಹಿತ್ಯದ ಮೂಲ ಧ್ಯೇಯವಾಗಿದೆ.

ಸರಳ ಸುಲಭವಾಗಿ, ಚುಟುಕಾದ ಶಬ್ದಗಳ ಮೂಲಕ, ಅರ್ಥವತ್ತಾಗಿ, ಕೂಡಲೇ ಎಲ್ಲರಿಗೂ ತಿಳಿಯುವಂತೆ ವಿಜ್ಞಾನ ಮಾಹಿತಿಯನ್ನು ಕಥಾನಕವಾಗಿ, ವಿವರಣಾತ್ಮಕವಾಗಿ, ವಿಶ್ಲೇಷಣಾತ್ಮಕವಾಗಿ, ವೈಜ್ಞಾನಿಕವಾಗಿ ಪ್ರಸ್ತುತ ಪಡಿಸುವ ಹಾಗೂ ನಿರೂಪಿಸುವ ಕಾರ್ಯದಲ್ಲಿ ವಿಜ್ಞಾನ ಸಾಹಿತಿಗಳ ಪಾತ್ರವು ಮಹತ್ತರವಾದುದು. ಅದರಂತೆ ಸೃಜನಾತ್ಮಕ ವಿಜ್ಞಾನ ಬರಹಗಳು ಮತ್ತು ಸೃಜನೇತರ ವಿಜ್ಞಾನ ಬರಹಗಳು ಎಂಬ ಅಧ್ಯಯನದ ನೆಲೆಗಳ ಮೂಲಕ ಸಂಶೋಧನಾತ್ಮಕ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ವಿಜ್ಞಾನದ ವಸ್ತು ವೈವಿದ್ಯತೆಯನ್ನು ಜನಪ್ರಿಯ ಭಾಷೆಯಲ್ಲಿ ಕಥಾನಕವಾಗಿ, ವರ್ಣನಾತ್ಮಕವಾಗಿ, ಅಲಂಕಾರಿಕವಾಗಿ ಆಕರ್ಷಕ ವಿಶ್ಲೇಷಣೆಯ ಮೂಲಕ ತಿಳಿಯ ಪಡಿಸುವುದು ಸೃಜನಶೀಲ ವಿಜ್ಞಾನ ಬರಹಗಳ ಅಧ್ಯಯನದ ನೆಲೆಯಾದರೆ, ನೇರ ದಿಟ್ಟವಾಗಿ, ವೈಜ್ಞಾನಿಕವಾಗಿ, ವಿಶ್ಲೇಷಣೆಯೊಂದಿಗೆ ಮೂಡಿಬಂದ ವಿಜ್ಞಾನ ಬರಹಗಳ ಅಧ್ಯಯನವೇ ಸೃಜನೇತರ ವಿಜ್ಞಾನ ಬರಹಗಳ ಅಧ್ಯಯನದ ನೆಲೆಯಾಗಿದೆ. ಈ ಹಿನ್ನೆಲೆಯಲ್ಲಿ ಸೃಜನಶೀಲ ಲೇಖಕರಾದ ಶಿವರಾಮ ಕಾರಂತ, ಬಿ.ಜಿ.ಎಲ್ ಸ್ವಾಮಿ, ರಾಜಶೇಖರ ಭೂಸನೂರಮಠ, ಪೂರ್ಣಚಂದ್ರ ತೇಜಸ್ವಿ, ಜಿ.ಟಿ.ನಾರಾಯಣರಾವ್ ಮೊದಲಾದವರು ಮತ್ತು ವಿಜ್ಞಾನ ಲೇಖಕರಾದ ಸಿ.ಆರ್.ಚಂದ್ರಶೇಖರ್, ನಾಗೇಶ್ ಹೆಗಡೆ,

ಟಿ.ಆರ್ ಅನಂತರಾಮು, ಟಿ.ಜಿ ಶ್ರೀನಿಧಿ, ಆದ್ಯನಡ್ಕ ಕೃಷ್ಣಭಟ್ಟ, ಸುಧೀಂದ್ರ ಹಾಲ್ದೊಡ್ಡೇರಿ, ಪವನಜ, ವೈದೇಹಿ, ಅನುಪಮ ನಿರಂಜನ, ಕೊಳ್ಳೇಗಾಲ ಶರ್ಮ ಮತ್ತಿತರರ ಕೃತಿಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನದಲ್ಲಿ ತೊಡಗಿಸುವ ಮೂಲಕ ಸೃಜನಾತ್ಮಕ ಹಾಗೂ ಸೃಜನೇತರ ಅಧ್ಯಯನದ ನೆಲೆಯನ್ನು ಕಂಡುಕೊಳ್ಳಲಾಯಿತು.

ಅಧ್ಯಾಯ – ಐದು: ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆಯ ಅವಲೋಕನ.

ಸಂಶೋಧನಾ ಮಹಾಪ್ರಬಂಧದ ಐದನೇ ಅಧ್ಯಾಯವು ಮುಖ್ಯ ಹಾಗೂ ಸಂಶೋಧನೆಯ ಕೇಂದ್ರ ಬಿಂದುವಾಗಿದೆ. ಈ ಅಧ್ಯಾಯದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆಯಲ್ಲಿನ ವಿವಿಧತೆಯನ್ನು ಆಯಾ ವಸ್ತು ವಿಷಯಕ್ಕೆ ಸಂಬಂಧಿಸಿದಂತೆ ವಿಭಾಗಿಸಿಕೊಂಡು ಅಧ್ಯಯನದಲ್ಲಿ ತೊಡಗಲಾಗಿದೆ. ಅದರಂತೆ ಪ್ರಮುಖವಾಗಿ ಪರಿಸರ, ಕೃಷಿ, ಆರೋಗ್ಯ, ಭೌತ–ಖಭೌತ, ಮಾಹಿತಿ–ತಂತ್ರಜ್ಞಾನವೆಂದು ಒಟ್ಟು ಐದು ಉಪ ಅಧ್ಯಾಯಗಳನ್ನು ಮಾಡಿಕೊಂಡು, ವಿವಿಧ ಲೇಖಕರ ಲೇಖನಗಳ ಹಿನ್ನೆಲೆಯಲ್ಲಿ ವಸ್ತು ವೈವಿಧ್ಯತೆಯ ಅವಲೋಕನವನ್ನು ಮಾಡಲಾಗಿದೆ.

ಎಂ.ಕೆ ರಾಮಸ್ವಾಮಿ, ಆದ್ಯನಡ್ಕ ಕೃಷ್ಣಭಟ್, ನಾಗೇಶ್ ಹೆಗಡೆ, ಕೊಳ್ಳೇಗಾಲ ಶರ್ಮ, ಸುಮಂಗಲಾ ಎಸ್ ಮುಮ್ಮಿಗಟ್ಟಿ, ಡಾ.ಸೋಮಶೇಖರ್, ಬಿ.ಎಸ್ ಶೈಲಜಾ, ಟಿ.ಆರ್.ಅನಂತರಾಮು, ಟಿ.ಜಿ ಶ್ರೀನಿಧಿ, ನೇಮಿಚಂದ್ರ, ಅಖಿಲೇಶ್ ಚಿಪ್ಪಳಿ, ಕಮಲಾ.ವೈ.ಸಿ, ಲೀಲಾ.ಎಂ.ಎಸ್ ಮೊದಲಾದ ವಿಜ್ಞಾನ ಲೇಖಕರ ಲೇಖನಗಳನ್ನೊಳಗೊಂಡ ಪ್ರಕಟಿತ ಕೃತಿಗಳಾದ; ಡಾ. ವಸುಂಧರಾ ಭೂಪತಿಯವರ ಸಂಪಾದಕತ್ವದ 'ವಿಜ್ಞಾನ ಸಾಹಿತ್ಯ ೧೯೯೭, ಮತ್ತು ೨೦೧೦', ಅಖೀಲೇಶ್ ಚಿಪ್ಪಳಿರವರ ಸಂಪಾದಕತ್ವದ 'ವಿಜ್ಞಾನ ಸಾಹಿತ್ಯ ೨೦೧೨– ೨೦೧೩', ಎಂ.ಕೆ ರಾಮಸ್ವಾಮಿರವರ ವಿಜ್ಞಾನ ಲೇಖನಗಳಿಂದ ಕೂಡಿದ ಸಮಗ್ರ ಬರಹಗಳ ಕೃತಿಯಾದ 'ಜ್ಞಾನ ವಿಜ್ಞಾನ', ನಾಗೇಶ್ ಹೆಗಡೆಯವರ ಸಂಪಾದಕತ್ವದ 'ವಿಜ್ಞಾನ ಗಂಗೆಯ ಬಿಂದುಸಾರ' ಮತ್ತು 'ಇರುವುದೊಂದೇ ಭೂಮಿ', ಡಾ.ಜಿ.ಕೆ.ವೀರೇಶ್, ಅಡ್ಡೂರು ಕೃಷ್ಣರಾವ್‌ರವರ 'ಕೃಷಿ ವಿಜ್ಞಾನ', ಟಿ.ಆರ್.ಅನಂತರಾಮುರವರ ಸಂಪಾದಕತ್ವದ 'ವಿಜ್ಞಾನ ಮತ್ತು ತಂತ್ರಜ್ಞಾನ' ಎಂಬ ಕೃತಿ ಸೇರಿದಂತೆ, ಪರಿಸರ ವಿಜ್ಞಾನದಲ್ಲಿ ಸು ೫೫ ಲೇಖನಗಳು, ಕೃಷಿ ವಿಜ್ಞಾನದಲ್ಲಿ ಸು ೩೦, ಆರೋಗ್ಯ ವಿಜ್ಞಾನದಲ್ಲಿ ಸು ೬೫, ಭೌತ ವಿಜ್ಞಾನದಲ್ಲಿ ಸು ೩೦, ಖಭೌತದಲ್ಲಿ ಸು ೨೦ ಹಾಗೂ ಮಾಹಿತಿ ತಂತ್ರಜ್ಞಾನ ವಿಜ್ಞಾನದಲ್ಲಿ ಸು ೫೦ ಲೇಖನಗಳೂ ಸೇರಿದಂತೆ ಸು ೨೦೦ರಕ್ಕೂ ಅಧಿಕ ಲೇಖನಗಳನ್ನು ವಿವಿಧ ಲೇಖಕರ ಸಂಗ್ರಹಿತ ಮತ್ತು ಸ್ವರಚಿತ ಕೃತಿಗಳ ಸಹಾಯದೊಂದಿಗೆ ಅಭ್ಯಸಿಸಿ ವಿಜ್ಞಾನ

ಸಾಹಿತ್ಯದ ವಸ್ತು ವೈವಿಧ್ಯತೆಗಳನ್ನು ಚರ್ಚಿಸಲಾಯಿತು. ಪ್ರತಿಯೊಂದು ವಿಭಾಗದಲ್ಲಿ ವಿಷಯಕ್ಕೆ ಸಂಬಂಧಿಸಿದಂತೆ ಸಮಾಜಕ್ಕೆ ಅಗತ್ಯ ಅವಶ್ಯಕ ಮಾಹಿತಿಯು ಇರುವುದನ್ನು ಗುರುತಿಸಲಾಯಿತು.

ವಸ್ತು ವೈವಿಧ್ಯತೆಯ ಅಧಾರದ ಮೇಲೆ ಪರಿಸರ ವಿಜ್ಞಾನದಲ್ಲಿ ಪ್ರಕೃತಿ, ಭೂಮಿ, ಗಾಳಿ, ನೀರು, ಕಾಡು, ಮಿಂಚು-ಗುಡುಗು, ಪ್ರಾಣಿ-ಪಕ್ಷಿ, ಸಸ್ಯ ಜಗತ್ತು, ಬೆಳಕು, ಭೂಕಂಪಗಳು, ಹಸಿರು ಇಂಧನ, ಬೆಟ್ಟ-ಗುಡ್ಡ ಮೊದಲಾದ ವಸ್ತು ವೈವಿಧ್ಯತೆಯನ್ನು; ಕೃಷಿ ವಿಜ್ಞಾನದಲ್ಲಿ ಕುಲಾಂತರಿ ತರಕಾರಿ, ಭತ್ತದ ತಳಿ, ಕಾಡು ಕೃಷಿ, ಸಾವಯವ ಕೃಷಿ, ಬೆಳೆಗಳ ಉಳಿವಿಗೆ ಹಕ್ಕಿಗಳ ಸೇವೆ, ಬರಚಿತ್ರಕ, ಬೀಜಾಂತಕ' ತಂತಜ್ಞಾನ: ಭಾರತಕ್ಕೆ ಶಾಪವೇ? ವರವೇ?, ಅಧಿಕ ಇಳುವರಿಗೆ ಸೂಕ್ಷ್ಮಾಣುಜೀವಿಗಳ ಬಳಕೆ, ಕಾಂಪೋಸ್ಟ್ ಗೊಬ್ಬರದ ತಯಾರಿ ಮತ್ತು ಬಳಕೆ, ಒಣ ಬೇಸಾಯ ರೈತರಿಗೊಂದು ವರದಾನ ಮೊದಲಾದ ವೈವಿಧ್ಯತೆಯನ್ನು; ಆರೋಗ್ಯ ವಿಜ್ಞಾನದಲ್ಲಿ ದೃಗ್ ತಂತುಗಳು, ವಿದ್ಯುತ್ ಕಾಂತೀಯ ವಿಕಿರಣಗಳ ಪಾತ್ರ, ಆರೋಗ್ಯ ರಕ್ಷಣೆಯಲ್ಲಿ ಸೋಯಾ ಬೀಜದ ಪಾತ್ರ, ಆರೋಗ್ಯದ ಮೇಲೆ ಖಾದ್ಯ ತೈಲಗಳು ಮತ್ತು ಕೊಬ್ಬುಗಳ ಪಾತ್ರ, ಹೃದಯಾಘಾತ, ಅನುವಂಶೀಯತೆ, ಕ್ಯಾನ್ಸರ್ ರೋಗದ ಬಗ್ಗೆ ಮೊದಲಾದ ವಸ್ತು ವೈವಿಧ್ಯತೆಯನ್ನು; ಭೌತ ವಿಜ್ಞಾನದಲ್ಲಿ ವಜ್ರದ ಸ್ವರೂಪ, ಧ್ವನಿ ವಿಜ್ಞಾನ, ಗುರುತ್ವಾಕರ್ಷಣೆ, ಅತೀವಾಹಕಗಳು, ತರಂಗಗಳು, ವೇಗವರ್ಧಕ, ಗಾಜು, ಬೆಳಕಿನ ವಕ್ರೀಭವನ ಮೊದಲಾದ ವಸ್ತು ವೈವಿಧ್ಯತೆಯನ್ನು; ಖಭೌತ ವಿಜ್ಞಾನದಲ್ಲಿ ಸೂರ್ಯ, ಕೃತಕ ಉಪಗ್ರಹಗಳು, ಚಂದ್ರಯಾನ, ಆಕಾಶ ಮೊದಲಾದ ವಸ್ತು ವೈವಿಧ್ಯತೆಯನ್ನೂ ಹಾಗೂ ಮಾಹಿತಿ ತಂತ್ರಜ್ಞಾನ ವಿಜ್ಞಾನದಲ್ಲಿ ಲೇಜರ್ ಬಳಕೆ, ವಿದ್ಯುಚ್ಛಕ್ತಿಯ ವಿವಿಧ ಮೂಲಗಳು, ಜೈವಿಕ ಬ್ಯಾಟರಿ, ನವೀನ ವಿಜ್ಞಾನ, ಮೊಬೈಲ್ ಬಳಕೆ ದುರುಪಯೋಗ ಮೊದಲಾದ ವಸ್ತು ವೈವಿಧ್ಯತೆಯನ್ನು ಈ ಅಧ್ಯಾಯದಲ್ಲಿ ವಿವರಿಸಲಾಗುವುದು.

ಅಧ್ಯಾಯ – ಆರು : ವಿಜ್ಞಾನ ಸಾಹಿತ್ಯದ ಅಭಿವ್ಯಕ್ತಿಯ ಸವಾಲುಗಳು

೬.೧. ಭಾಷೆ ಮತ್ತು ನಿರೂಪಣೆಯ ಸವಾಲುಗಳು ಮತ್ತು ಸಾಧ್ಯತೆಗಳು

೬.೨. ಭಾಷಾಂತರ/ಅನುವಾದದ ಸಮಸ್ಯೆಗಳು

ಹೊಸದಾದ್ದನ್ನು ಹಾಗೂ ಅಪೂರ್ವವಾದುದನ್ನು ಸೃಷ್ಟಿಸುವ ಸೃಜನಾತ್ಮಕ ಸಾಮರ್ಥ್ಯವೇ ಭಾಷೆಯಾಗಿದ್ದು, ಅಪೂರ್ವವಾಗಿ, ಹೊಸತಾಗಿ, ನಾವಿನ್ಯವಾಗಿ, ಸಾಮಾನ್ಯಕ್ಕಿಂತ ಮೇಲ್ಮಟ್ಟದಲ್ಲಿ

ಬರಹದ ಮೂಲಕ ಅಭಿವ್ಯಕ್ತಿಸುವುದೇ ನಿರೂಪಣಾ ವಿಧಾನವಾಗಿದೆ. ಇದೊಂದು ವ್ಯಕ್ತಿಯಲ್ಲಿ ಅಂತರ್ಗತಗೊಂಡ ಮಾನಸಿಕ ಕ್ರಿಯೆ ಹಾಗೂ ಸಾಮರ್ಥ್ಯವಾಗಿದ್ದು, ಸ್ವಂತಿಕೆ ಹಾಗೂ ವಿಮರ್ಶಾ ಆಲೋಚನೆಯಿಂದ ಮೂಡಿಬರುವ ವಿಶೇಷ ಕ್ರಿಯೆಯಾಗಿದೆ. ಕಲ್ಪನೆ, ಸ್ವಂತಿಗೆ ವಿಶಿಷ್ಟತೆ, ಉನ್ನತ ಆಲೋಚನೆ, ಹೊಸತನವು ಸೃಜನಶೀಲ ಭಾಷಾ ನಿರೂಪಣೆಯಲ್ಲಿ ಕಂಡುಬರುತ್ತದೆ. ಅದರಂತೆ ಬಿ.ಜಿ.ಎಲ್.ಸ್ವಾಮಿ, ಜಿ.ಟಿ..ನಾರಾಯಣರಾಯರು, ಸಿ.ಆರ್ ಚಂದ್ರಶೇಖರ್, ಕೆ.ಪಿ ಪೂರ್ಣಚಂದ್ರ ತೇಜಸ್ವಿ, ನಾಗೇಶ್ ಹೆಗಡೆ, ಎಂ.ಕೆ ರಾಮಸ್ವಾಮಿ, ಟಿ.ಆರ್ ಅನಂತರಾಮು ಮೊದಲಾದವರ ಕೃತಿಗಳಲ್ಲಿ ಭಾಷಾ ನಿರೂಪಣ ವಿಧಾನವನ್ನು ಕಂಡುಕೊಳ್ಳಲಾಯಿತು.

ಸಾಮಾಜಿಕ, ರಾಜಕೀಯ, ಸಾಹಿತಿಕ, ಸಾಂಸ್ಕೃತಿಕ, ವೈಜ್ಞಾನಿಕ ಯಾವುದೇ ಕ್ಷೇತ್ರದಲ್ಲಿ ಆಗುವ ಪರಿವರ್ತನೆಯು ಯಾಂತ್ರಿಕವಾಗಿ ಆಗದೆ, ಜನರ ತಿಳುವಳಿಕೆ ಅನುಭವ ಯೋಚನೆಗಳೊಂದಿಗೆ ಪರಿವರ್ತಿತಗೊಳ್ಳುವಲ್ಲಿ ಸಾಹಿತ್ಯ ಹಾಗೂ ಅದನ್ನು ನಿರೂಪಿಸುವ ಭಾಷೆಯು ಪ್ರಮುಖವಾಗಿದೆ. ವಿಷಯ ವಿಚಾರ ಮಾಹಿತಿಯು ವಿನಿಮಯ ಆಗಬೇಕಾಗಿರುವುದು ಇಂದಿನ ಜಾಗತಿಕ ಅವಶ್ಯಕತೆಯಾಗಿರುವುದರಿಂದ ಭಾಷಾಂತರ/ ಅನುವಾದವು ಪ್ರಮುಖ್ಯತೆಯನ್ನು ಹೊಂದಿದೆ. ಜಾಗತಿಕ ಮಾಹಿತಿಯನ್ನೊಳಗೊಂಡ ವಿವಿಧ ಭಾಷೆಗಳ ಉಪಯುಕ್ತ ಮಾಹಿತಿಯನ್ನು ತಮ್ಮ ಪ್ರಾದೇಶಿಕ ಭಾಷೆಗೆ ಭಾಷಾಂತರಿಸುವುದರಿಂದ ಜ್ಞಾನ ವಿಕಾಸಕ್ಕೆ, ಜ್ಞಾನಾರ್ಜನೆಗೆ, ವಿಷಯ ಸಂಗ್ರಹಣೆಗೆ ಹಾಗೂ ಬಳಕೆಗೆ ಸಹಕಾರಿಯಾಗಿದೆ ಎಂಬುದನ್ನು ಅಧ್ಯಯನದಲ್ಲಿ ಗುರುತಿಸಲಾಯಿತು.

ವಿಜ್ಞಾನ ಸಾಹಿತ್ಯದ ವಿಷಯವು ನೇರ ದಿಟ್ಟವಾದ ಪ್ರಾಯೋಗಿಕ ಅಂಶಗಳಿಂದ ಕೂಡಿರುವುದರಿಂದ ಅದರ ಭಾಷೆಯು ಇತರ ನಿರೂಪಣಾ ವಿಧಾನಗಳಿಗಿಂತ ಭಿನ್ನವಾಗಿರಬೇಕಾದದ್ದು ಅನಿವಾರ್ಯವಾಗಿದೆ. ಏಕೆಂದರೆ ಜನಸಾಮಾನ್ಯರು ಗ್ರಹಿಸಲು ಸುಲಭಸಾಧ್ಯವಾಗದ ಎಷ್ಟೋ ವಿಷಯ ವಿಚಾರಗಳು ವಿಜ್ಞಾನ ತಂತ್ರಜ್ಞಾನದ ವಲಯದಲ್ಲಿ ಪ್ರತಿಕ್ಷಣವೂ ನಡೆಯುತ್ತಿರುತ್ತದೆ. ಅವುಗಳನ್ನು ಸರಳವಾಗಿಯೂ ಆಕರ್ಷಕವಾಗಿಯೂ ಅವರಿಗೆ ತಲುಪಿಸುವ ಹೊಣೆಗಾರಿಕೆಯು ವಿಜ್ಞಾನ ಲೇಖಕರ ಮೇಲಿರುತ್ತದೆ. ವೈಜ್ಞಾನಿಕ ತತ್ವಗಳು, ನಿಯಮಗಳು, ಊಹನಾ ಸಿದ್ಧಾಂತಗಳು, ವಾದ–ವಿವಾದಗಳು, ಪ್ರಾಯೋಗಿಕ ಅಂಶಗಳು, ಚರ್ಚೆಗಳು ಮತ್ತು ಸಮರ್ಥನೆಗಳು ಮೊದಲಾದ ಎಲ್ಲವನ್ನೂ ವಿಜ್ಞಾನ ಲೇಖಕರು ಜನಸಮುದಾಯಕ್ಕೆ ತಲುಪಿಸಬೇಕಾಗುತ್ತದೆ. ಜಾಗತಿಕವಾಗಿ ನಡೆಯುವ ವಿಜ್ಞಾನದ ಎಲ್ಲಾ ವಿದ್ಯಮಾನಗಳನ್ನು ಬೇರೆ ಬೇರೆ ಭಾಷೆಗಳಿಂದ ಕನ್ನಡಕ್ಕೆ ತರುವುದು ಸುಲಭದ ಕೆಲಸವಲ್ಲ. ಇಂತಹ ಸಂದರ್ಭದಲ್ಲಿ ಭಾಷಾಂತರ ಹಾಗೂ ಅನುವಾದದ ಪ್ರಕ್ರಿಯೆಗಳು

ಮುಖ್ಯ ಪಾತ್ರವನ್ನು ವಹಿಸುತ್ತವೆ. ಪ್ರಸ್ತುತ ವಿಜ್ಞಾನ ಸಾಹಿತ್ಯದ ಪ್ರಸಾರದಲ್ಲಿ ಬಳಕೆಯಾಗಿರುವ ಕನ್ನಡದ ಸ್ವರೂಪ ಹಾಗೂ ಇತರ ಭಾಷೆಗಳ ನಡುವಿನ ಅನುವಾದದ ಸಮಸ್ಯೆ ಹಾಗೂ ಸವಾಲುಗಳನ್ನು ಕುರಿತಂತೆ ಈ ಅಧ್ಯಾಯದಲ್ಲಿ ಉದಾಹರಣೆಗಳೊಂದಿಗೆ ವಿವರಿಸಲಾಗಿದೆ.

ಅಧ್ಯಾಯ- ಏಳು : ವಿಜ್ಞಾನ ಸಾಹಿತ್ಯ ಮತ್ತು ಸಾಮಾಜಿಕ ಜವಾಬ್ದಾರಿ.

ವಿಜ್ಞಾನ ಎಂಬುದೊಂದು ಪ್ರದಾನ ನಿರ್ಣಾಯಕ ಶಕ್ತಿಯ ಮೂಲ ಎಂಬ ಮಾಹಿತಿಯನ್ನೊಳಗೊಂಡಂತೆ ವಿಜ್ಞಾನ ಸಾಹಿತಿಗಳು ಸಾಮಾಜಿಕ ಅಗತ್ಯತೆಗೆ ಅನುಗುಣವಾಗಿ ವಿಜ್ಞಾನ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಸುವ ಉದ್ದೇಶದಿಂದ ತಮ್ಮ ಲೇಖನಗಳಲ್ಲಿ ವಿಜ್ಞಾನದ ವಿಷಯ ವಸ್ತುಗಳನ್ನು ಆಯ್ಕೆ ಮಾಡಿಕೊಂಡಿದ್ದಾರೆ. ಅದರಂತೆ ಜನಸಾಮಾನ್ಯರಿಗೆ ತಿಳಿದಂತೆ ಹಾಗೂ ಗ್ರಹಿಕೆಗೆ ಸಹಕಾರಿಯಾದಂತೆ ಭಾಷಾ ನಿರೂಪಣೆಯಲ್ಲಿ ವಿಷಯವನ್ನು ತಿಳಿಸಿದ್ದಾರೆ.

ಕೈಗಾರಿಕೆ, ಕೃಷಿ, ವೈದ್ಯಕೀಯ ಮತ್ತಿತರ ಕ್ಷೇತ್ರದ ಸಮಸ್ಯೆಗಳನ್ನು ವೈಜ್ಞಾನಿಕ ಸಂಶೋಧನೆ ಮತ್ತು ವೈಜ್ಞಾನಿಕ ವಿಧಾನದಿಂದ ಹೇಗೆ ಪರಿಹರಿಸಿಕೊಂಡು ನಿಭಾಯಿಸಲಾಗುತ್ತಿದೆ ಎಂಬುದರ ಮಾಹಿತಿಯ ಆಗರವೇ ವಿಜ್ಞಾನ ಸಾಹಿತ್ಯವಾಗಿದ್ದು, ಬಹು ವೇಗದಿಂದ ಜನಸಾಮಾನ್ಯರ ಬದುಕಿನ ಎಲ್ಲಾ ದಿಕ್ಕುಗಳನ್ನು ವ್ಯಾಪಿಸುತ್ತಿರುವ ಅತ್ಯಗತ್ಯ ವಿಜ್ಞಾನದ ಮಾಹಿತಿಯನ್ನು ಜನತೆಗೆ ತಲುಪಿಸುವ ಆಶಯ ಉದ್ದೇಶದಿಂದ ಕೂಡಿದೆ ಎಂಬುದರ ಅವಲೋಕನವನ್ನು ಈ ಅಧ್ಯಾಯದಲ್ಲಿ ಮಾಡಲಾಗಿದೆ.

ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೃತಕ ಪ್ರಕೃತಿ ಸೃಷ್ಟಿಸುವ ಮೂಲಕ ವಿಜ್ಞಾನವನ್ನು ಬಳಸಿಕೊಂಡರೆ, ಸಮುದ್ರ ತೀರ ರಾಷ್ಟ್ರ/ರಾಜ್ಯಗಳು ಸ್ವಾಭಾವಿಕ ವಿಜ್ಞಾನವನ್ನು ಬಳಸಿಕೊಳ್ಳುತ್ತಿರುವುದನ್ನು ಕಾಣಬಹುದು. ಸಾಂಕ್ರಾಮಿಕ ರೋಗಗಳು, ಪ್ರಕೃತಿ ವಿಕೋಪಗಳಾದ ಬರಗಾಲ, ಪ್ರವಾಹ, ಕ್ಷಾಮ ಮತ್ತಿತರ ಸಮಸ್ಯೆಗಳ ವಿರುದ್ಧ ಹಿಂದಿನ ಮಾನವನು ಸೆಣಸಾಡಿರುವುದರ ಐತಿಹ್ಯದ ಮೇಲೆ ಇಂದಿನ ವಿಜ್ಞಾನ ಯುಗದಲ್ಲಿ ಅಂತಹ ಮಾರಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರೊಂದಿಗೆ ಇತರ ಎಲ್ಲಾ ವಿಭಾಗಗಳಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ನೈತಿಕ ಮೊದಲಾದವುಗಳಲ್ಲಿ ವೈಜ್ಞಾನಿಕ ಜ್ಞಾನ ವೃದ್ಧಿಯಾಗಿ ಮುಂದಿನ ಭವಿಷ್ಯವನ್ನು ಸ್ವಾವಲಂಬಿಗಳಾಗಿ ನಿರ್ವಹಿಸುವ ಎದೆಗಾರಿಕೆಯನ್ನು ರೂಪಿಸುವಲ್ಲಿ ವಿಜ್ಞಾನ ಲೇಖನಗಳು ಸಾಮಾಜಿಕ ಹೊಣೆಗಾರಿಕೆಯನ್ನು ಪ್ರತಿನಿಧಿಸುತ್ತವೆ ಜೊತೆಗೆ ಸಾಮಾಜಿಕ ಜವಾಬ್ದಾರಿಯನ್ನು ನಿಭಾಯಿಸುವಂತಹ ಚೈತನ್ಯದಾಯಕ ಜ್ಞಾನವನ್ನು ವಿಜ್ಞಾನ ಸಾಹಿತ್ಯವು ನೀಡುವುದನ್ನು ಈ ಅಧ್ಯಾಯದಲ್ಲಿ ಗುರುತಿಸಲಾಗುವುದು.

ಸಮಾರೋಪ, ಫಲಿತಗಳು, ಅನುಬಂಧ ಮತ್ತು ಗ್ರಂಥ ಋಣ.

ಪ್ರಸ್ತುತ ಸಂಶೋಧನೆಯ ಎಲ್ಲಾ ಅಧ್ಯಾಯಗಳ ಮುಖಾಂತರ ಕಂಡುಕೊಂಡದ್ದನ್ನು ಈ ಅಧ್ಯಾಯದಲ್ಲಿ ಸಮಾರೋಪವಾಗಿ ಮಂಡಿಸಲಾಗುವುದು. ವಿಷಯದ ಮಂಡಣೆಯನ್ನು ಅನೇಕ ಆಯಾಮಗಳಿಂದ ಪರಿಶೀಲಿಸಿ ವಿಶ್ಲೇಷಿಸಲಾಗುವುದು. ಅಧ್ಯಯನದ ಸಂದರ್ಭದಲ್ಲಿ ಕಂಡುಬಂದ ಪ್ರಶ್ನೆಗಳನ್ನು ಹಾಗೂ ಸಂದೇಹಗಳನ್ನು ಇಲ್ಲಿ ಸಂಗ್ರಹಿಸಿ ಹೇಳಲಾಗುವುದು. ಮುಂದಿನ ಸಂಶೋಧಕರು ಇದೇ ವಿಷಯದ ಇನ್ನಷ್ಟು ಆಯಾಮಗಳನ್ನು ಪರಿಶೀಲಿಸಲು ಬೇಕಾದ ಅಗತ್ಯ ಮಾಹಿತಿಗಳನ್ನು ಈ ಭಾಗದಲ್ಲಿ ನೀಡಲಾಗುವುದು. ಅಧ್ಯಯನದ ಕೊನೆಯ ಭಾಗದಲ್ಲಿ ಅಧ್ಯಯನಕ್ಕಾಗಿ ಬಳಸಿಕೊಂಡ ಪುಸ್ತಕಗಳು, ಪರಾಮರ್ಶನ ಗ್ರಂಥಗಳು, ಅಂತರ್ಜಾಲ ಮಾಹಿತಿ ಮತ್ತು ದಿನಪತ್ರಿಕೆಗಳ ಮಾಹಿತಿಗಳನ್ನು ನೀಡಲಾಗಿದೆ.

೧.೫. ಅಧ್ಯಯನದ ಮಹತ್ವ

ಪ್ರಸ್ತುತ ಸಂಶೋಧನೆಗೆ ಆರಿಸಿಕೊಂಡಿರುವ ವಿಷಯವು ತನ್ನದೇ ಆದ ಮಹತ್ವವನ್ನು, ಉಪಯುಕ್ತತೆಯನ್ನೂ ಹೊಂದಿದೆ. ಈಚೆಗೆ ವಿಜ್ಞಾನ ಸಾಹಿತ್ಯವು ವಿಫುಲವಾಗಿ ಸೃಷ್ಠಿಯಾಗುತ್ತಿರುವುದರಿಂದ ಮತ್ತು ಮೌಲಿಕವಾದ ಕೃತಿಗಳು ಪ್ರಕಟವಾಗುತ್ತಿರುವುದರಿಂದ ಸಾಮಾಜಿಕ ಜಾಗೃತಿಗೆ ಕಾರಣವಾಗಿದೆ. ಸಮಾಜದಲ್ಲಿನ ಮೂಢನಂಬಿಕೆಗಳು, ಅಜ್ಞಾನ, ಪೂರ್ವಗ್ರಹಗಳು ಮರೆಯಾಗಿ, ಆಧುನಿಕ ಸಮಾಜವೊಂದು ನಿರ್ಮಾಣವಾಗುವ ಸಂದರ್ಭವೂ ಇಂದು ಕಾಣುತ್ತಿದೆ. ನಾಗರೀಕತೆಗಳ ಬೆಳವಣಿಗೆ ಮತ್ತು ವಿಜ್ಞಾನದ ಪ್ರಗತಿ ಇವೆರಡೂ ಸಮಾನ ವೇಗದಲ್ಲಿ ಸಾಗುತ್ತಿದೆ ಎನ್ನಬಹುದು.

ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ನೆಲೆಗಳನ್ನು ಕುರಿತ ಈ ಸಂಶೋಧನೆಯು ಸಮಕಾಲೀನವಾದ ಹಲವು ಆಯಾಮಗಳ ಚರ್ಚೆಗಳನ್ನು ಗಮನಿಸುವುದರಿಂದ, ಒಂದು ವಿಶಿಷ್ಟ ಬಗೆಯ ಅಧ್ಯಯನವಾಗಿ ಮುಖ್ಯವಾಗುವುದು. ಇಲ್ಲಿಯವರೆಗೆ ಕನ್ನಡದ ವಿಜ್ಞಾನ ಸಾಹಿತ್ಯವನ್ನು ಕುರಿತಂತೆ ನಡೆದಿರುವ ಸಂಶೋಧನೆಗಳು ಬೆರಳೆಣಿಕೆಯಷ್ಟು ಮಾತ್ರ. ಅಲ್ಲೊಂದು ಇಲ್ಲೊಂದು ಲೇಖನಗಳು ಹಾಗೂ ಕೆಲವು ಪುಸ್ತಕಗಳು ಪ್ರಕಟವಾಗಿರಬಹುದು. ಸಾಹಿತ್ಯ ಕ್ಷೇತ್ರದ ಇತ್ತೀಚಿನ ಪ್ರಕಾರ ಹಾಗೂ ರೂಪವಾದ ವಿಜ್ಞಾನ ಸಾಹಿತ್ಯವು ಒಂದು ರೀತಿಯಲ್ಲಿ ನಿರ್ಲಕ್ಷಕ್ಕೀಡಾಗಿದೆ ಎನ್ನಬಹುದು.

ಸಾಹಿತ್ಯ–ಸಮಾಜ–ಧರ್ಮ–ವಿಜ್ಞಾನ ಇವುಗಳು ಒಂದಕ್ಕೊಂದು ಸಂಬಂಧ ಹೊಂದಿದ್ದು ಸಾಹಿತಿಯ ವಸ್ತು ವಿಷಯಗಳು ಈ ಎಲ್ಲಾ ಕ್ಷೇತ್ರಗಳನ್ನು ಒಳಗೊಂಡಿರುವುದನ್ನು ಕಾಣಬಹುದು. ಕಲ್ಪನೆ ಮತ್ತು ಪ್ರಯೋಗಾತ್ಮಕತೆ ಎಂಬ ಪರಸ್ಪರ ವಿರುದ್ಧ ನೆಲೆಗಳಿಂದ

ಸಾಹಿತ್ಯ ಮತ್ತು ವಿಜ್ಞಾನವು ಮೇಲು ನೋಟಕ್ಕೆ ಪರಸ್ಪರ ಭಿನ್ನಭಿನ್ನವಾಗಿ ಕಂಡು ಬಂದರೂ, ಸೂಕ್ಷ್ಮಾವಲೋಕನದಿಂದ ಮಾತ್ರ ಅವುಗಳ ಸಂಬಂಧದ ನೆಲೆಯನ್ನು ಕಾಣಬಹುದು. "ಜಗತ್ತಿನಲ್ಲಿ ಅಡಗಿರುವ ರಹಸ್ಯವನ್ನು ಬೇಧಿಸಲು ಹೊರಟಿರುವ ವಿಜ್ಞಾನವು ಯಾವುದೋ ಒಂದು ನೆಲೆಯಲ್ಲಿ ನಿಂತು ಬಿಡುತ್ತದೆ. ಆಗ ಅಲ್ಲಿಂದ ಮುಂದೆ ಗ್ರಹಿಸುವುದಕ್ಕೆ ನೆರವು ನೀಡುವುದು ಸಾಹಿತ್ಯ. ವಿಜ್ಞಾನದ ಆವಿಷ್ಕಾರದಿಂದ ಇಂದು ಬದುಕು ಬಹುವೇಗವಾಗಿ ಬದಲಾಗುತ್ತಿದೆ"[೩] ಎಂದು ಹೇಳಿರುವುದು ಸಾಹಿತ್ಯ ಮತ್ತು ವಿಜ್ಞಾನ ಜೀವನದ ಎರಡು ಕಣ್ಣುಗಳಂತೆ ಒಂದಕ್ಕೊಂದು ಸಂಬಂಧಿತವಾದುದು ಎಂಬುದನ್ನು ತಿಳಿಸುತ್ತದೆ.

ಅರ್ಪಣಾ ಮನೋಭಾವ ಮತ್ತು ಆಳವಾದ ಆಲೋಚನಾ ಲಹರಿಗಳಿಂದ ಸಮಾಜದಲ್ಲಿ ಆರೋಗ್ಯಕರ ವಾತಾವರಣ ಬೆಳವಣಿಗೆಗೆ ವಿಶೇಷ ಕೊಡುಗೆಯನ್ನು ನೀಡುವುದರೊಂದಿಗೆ, ಸಾಮಾಜಿಕ ಹೊಣೆಗಾರಿಕೆಯನ್ನು ಹೊಂದುವ ಆಧ್ಯ ಕರ್ತವ್ಯದ ಬಗ್ಗೆ ಪ್ರತಿಯೊಬ್ಬ ನಾಗರೀಕನಿಗೆ ತಿಳಿಸುವ ಮಹತ್ವವನ್ನು ವಿಜ್ಞಾನ ಸಾಹಿತ್ಯವು ಹೊಂದಿದೆ. ಹೀಗಾಗಿ ವಿವಿಧ ಭಾಷೆಗಳಲ್ಲಿ ಪ್ರಕಟವಾಗುತ್ತಿರುವ ವಿಜ್ಞಾನ ಬರಹಗಳ ಬಗೆಗೆ ವಿದ್ವಾಂಸರು, ಅಧ್ಯಯನಕಾರರು ಆಸಕ್ತಿಯನ್ನು ತೋರಿಸಿ ಅವುಗಳ ನೆಲೆ ಬೆಲೆಗಳನ್ನು ತಿಳಿಯಪಡಿಸಿದಾಗ ಮಾತ್ರ, ವಿಜ್ಞಾನ ಸಾಹಿತ್ಯವು ತನ್ನ ಪ್ರಾಮುಖ್ಯತೆಯನ್ನು ಹೆಚ್ಚಿಸಿಕೊಳ್ಳಲು ಸಾಧ್ಯ. ವಸ್ತುವೈವಿಧ್ಯತೆ, ವಿಷಯ ಸಾಮಗ್ರಿ, ಭಾಷೆ, ನಿರೂಪಣೆ ಮತ್ತು ಸಾಮಾಜಿಕ ಪರಿಣಾಮ ಮೊದಲಾದ ನೆಲೆಗಳನ್ನು ಕುರಿತಂತೆ ವಿಫುಲ ಮಾಹಿತಿಗಳನ್ನು ವಿಜ್ಞಾನ ಸಾಹಿತ್ಯವು ಒಳಗೊಂಡಿದೆ. ಅದರಂತೆ ಸ್ವಾತಂತ್ರ್ಯಪೂರ್ವದ ಮತ್ತು ಆನಂತರದ ಕಾಲಘಟ್ಟದಲ್ಲಿ ಕನ್ನಡದಲ್ಲಿ ರಚಿತವಾಗಿರುವ ವಿಜ್ಞಾನ ಸಾಹಿತ್ಯದ ಬಗೆಗೆ ಇನ್ನೂ ಹೆಚ್ಚಿನ ಸಂಶೋಧನೆಗಳು ನಡೆಯಬೇಕಾಗಿವೆ. ಸಾಂಸ್ಥಿಕವಾಗಿ, ದೊಡ್ಡ ಪ್ರಮಾಣದಲ್ಲಿ ಈ ಕಾರ್ಯವು ಜರೂರಾಗಿ ಆಗಬೇಕಾಗಿದೆ.

ಇಂದಿನ ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಜೀವನದ ಪ್ರತಿಯೊಂದು ಹಂತದಲ್ಲೂ ವೈಜ್ಞಾನಿಕ ಮನೋಭಾವದ ಅಳವಡಿಕೆಯನ್ನು ಕಾಣಬಹುದು. ಹೀಗಾಗಿ ವಿಜ್ಞಾನ ಕ್ಷೇತ್ರದಲ್ಲಿನ ಪ್ರತಿಯೊಂದು ಆವಿಷ್ಕಾರ ಅನ್ವೇಷಣೆಗಳನ್ನು ಜನತೆಯಲ್ಲಿಗೆ ತಲುಪಿಸುವ ಅಗತ್ಯವನ್ನರಿತ ಬಹಳಷ್ಟು ಲೇಖಕರು ಸಾಹಿತ್ಯವನ್ನು ವಿಜ್ಞಾನದಲ್ಲಿ ಸಮ್ಮಿಳಿಸಿ, ವಿಜ್ಞಾನವನ್ನು ವಿಜ್ಞಾನ ಸಾಹಿತ್ಯವನ್ನಾಗಿಸಿದರು. ಸಾಹಿತ್ಯಕ್ಕೆ ವಿಜ್ಞಾನವು ವಸ್ತುವನ್ನು ಹಾಗೂ ವಿಜ್ಞಾನಕ್ಕೆ ಸಾಹಿತ್ಯವು ಸಂವಹನ ಸೌಂದರ್ಯವನ್ನು ಒದಗಿಸುವಲ್ಲಿ ವಿಜ್ಞಾನ ಸಾಹಿತಿಗಳ ಕಾರ್ಯವು ಮಹತ್ವದಾದುದು. "ವೈಜ್ಞಾನಿಕ ವಿಚಾರ ಮಾತ್ರವಲ್ಲದೆ ಇಂದು ಸಾಹಿತ್ಯಕ್ಕೆ ವಿಜ್ಞಾನವೂ

ವಸ್ತುವನ್ನೊದಗಿಸಿ ಅದರ ಶ್ರೀಮಂತಿಕೆಯನ್ನು ಹೆಚ್ಚಿಸಿದೆ. ಸಾಹಿತ್ಯಕ್ಕೆ ವಸ್ತುವಾಗದ ವಿಷಯ ಈ ಜಗತ್ತಿನಲ್ಲಿ ಇಲ್ಲ ಎಂದು ಹಿಂದೆಯೇ ಕಂಡಿದ್ದೇವೆ. ವಿಜ್ಞಾನವು ಸಾಹಿತ್ಯಕ್ಕೆ ವಸ್ತುವನ್ನೊದಗಿಸಿದೆ” ಎಂದು ತಿಳಿಸುವುದರೊಂದಿಗೆ ವಿಜ್ಞಾನವು ಸಾಹಿತ್ಯದೊಂದಿಗೆ ಬೆರೆತು ವೈಜ್ಞಾನಿಕ ಮಾಹಿತಿಯು ಸಾಹಿತೀಕರಣಗೊಂಡು ಜನತೆಗೆ ತಲುಪುವಂತಾಗಿದೆ. ಹೀಗಾಗಿ ವಿಜ್ಞಾನ ಸಾಹಿತ್ಯವು ಮಹತ್ವ ಪಡೆದಿರುವುದನ್ನು ಕಾಣಬಹುದು.

ಕೊನೆ ಟಿಪ್ಪಣಿಗಳು

೧. ಕೊಳ್ಳೇಗಾಲ ಶರ್ಮ., ವಿಜಯ ಕರ್ನಾಟಕ ದಿನಪತ್ರಿಕೆ – ಬಿಡಿ ಪರಿಭಾಷೆ, ಸರಳವಿರಲಿ ಭಾಷೆ ಲೇಖನ. ೧೮.೧೧.೨೦೨೦.

೨. ಪೂರ್ಣ ಚಂದ್ರ ತೇಜಸ್ವಿ, ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು., ಪುಟ ಸಂಖ್ಯೆ : ಲೇಖಕರ ಮಾತು.

೩. ನಿಂಗಣ್ಣ ಚಿ(ಸಂಪಾದಕರು)., ಕನ್ನಡ ಸಾಹಿತ್ಯ ಸಂಸ್ಕೃತಿಕೋಶ. ಪುಟ ಸಂಖ್ಯೆ : ೩೬೭.

೪. ಅದೇ ಪುಟ ಸಂಖ್ಯೆ : ೩೬೮.

ಅಧ್ಯಾಯ–ಎರಡು

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

೨.೧. ಪಿಹೆಚ್.ಡಿ ಪ್ರಬಂಧ

೨.೨. ಕೃತಿಗಳು

೨.೩. ಪತ್ರಿಕಾ ಪ್ರಕಟಣೆಗಳು

೨.೪. ಅಂತರ್ಜಾಲ ಮಾಹಿತಿ

ಅಧ್ಯಾಯ – ಎರಡು

ಇದುವರೆಗಿನ ಅಧ್ಯಯನಗಳ ಸಮೀಕ್ಷೆ

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಬರವಣಿಗೆಯು ಕಳೆದ ಕೆಲವು ದಶಕಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನಡೆಯುತ್ತಿದೆ. ವಿಜ್ಞಾನ ಸಾಹಿತ್ಯದ ಬೆಳವಣಿಗೆಯ ಹಾದಿಯಲ್ಲಿ ವಿಜ್ಞಾನ ಕ್ಷೇತ್ರದ ವಿವಿಧ ವಿಷಯಗಳಿಗೆ ಸಂಬಂಧಿಸಿದಂತೆ ವಿಜ್ಞಾನದ ಪರಿಣಿತರು ಮತ್ತು ಆಸಕ್ತ ಲೇಖಕರು ಹಲವಾರು ಪುಸ್ತಕಗಳು ಹಾಗೂ ಲೇಖನಗಳನ್ನು ಪ್ರಕಟಿಸಿದ್ದಾರೆ. ಇವುಗಳಲ್ಲಿ ವಸ್ತು ವೈವಿದ್ಯತೆ ಮತ್ತು ನಿರೂಪಣಾ ವೈವಿಧ್ಯತೆಗಳು ಇರುವುದನ್ನು ಕಾಣಬಹುದು. ಅಲ್ಲದೆ ವಿಜ್ಞಾನದ ಬರಹಗಳಲ್ಲಿ ಸಂಶೋಧನಾತ್ಮಕ ಬರಹಗಳು ಮತ್ತು ಜನಪ್ರಿಯ ಬರಹಗಳು ಎಂಬ ಎರಡು ಪ್ರಕಾರಗಳೂ ಇರುವುದು ಕಂಡು ಬಂದಿದ್ದು, ಇವುಗಳಲ್ಲಿನ ಭಾಷಾ ಬಳಕೆಯೂ ವೈವಿಧ್ಯತೆಯಿಂದ ಕೂಡಿವುದನ್ನು ಗಮನಿಸಲಾಯಿತು.

ಅಂತರಿಕ್ಷ ವಿಜ್ಞಾನದಿಂದ ಹಿಡಿದು ನ್ಯಾನೋ ತಂತ್ರಜ್ಞಾನದವರೆಗೆ, ಜೀವಕಣದ ಅನ್ವೇಷಣೆಯಿಂದ ಹಿಡಿದು ಅನ್ಯಗ್ರಹಜೀವಿಗಳ ಇರುವಿಕೆಯ ಸಾಧ್ಯತೆಯವರೆಗೆ, ರೋಬೋಟಿಕ್ಸ್, ಕೃತಕ ಬುದ್ಧಿಮತ್ತೆಯಿಂದ ಹಿಡಿದು ತದ್ರೂಪಿಗಳ ಸೃಷ್ಟಿಯವರೆಗೆ ಹತ್ತು ಹಲವಾರು ವಿಜ್ಞಾನ ವಿಷಯಗಳು ಕನ್ನಡ ವಿಜ್ಞಾನ ಲೇಖಕರ ಬರಹಗಳಲ್ಲಿ ಸ್ಥಾನ ಪಡೆದುಕೊಂಡಿವೆ. ನಮ್ಮದೇ ನುಡಿಯಲ್ಲಿ ಜಾಗತಿಕ ವೈಜ್ಞಾನಿಕ ತಿಳುವಳಿಕೆಯನ್ನು ಪಡೆದುಕೊಳ್ಳುವ ಹೊಸ ಸಾಧ್ಯತೆಯೊಂದು ಈಗ ನಮ್ಮ ಮುಂದಿದೆ. ಇಂದಿನ ಯುವತಲೆಮಾರಿನ ಜನರು ಈ ಅವಕಾಶವನ್ನು ಬಳಸಿಕೊಂಡು ಇನ್ನಷ್ಟು ಎತ್ತರಕ್ಕೆ ಬೆಳೆಯುವ ಎಲ್ಲಾ ಸಂದರ್ಭಗಳೂ ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯಿಂದ ಸೃಷ್ಟಿಯಾಗಿವೆ. ಇದರಿಂದ ಅವೈಜ್ಞಾನಿಕ ಅಂಧಾಚರಣೆ ಮೂಡನಂಬಿಕೆಗಳು ದೂರ ಸರಿದು, ವೈಜ್ಞಾನಿಕ ಆಲೋಚನೆ ಆಚರಣೆಗಳು ನಂಬಿಕೆಗಳು ಸಮಾಜದಲ್ಲಿ ನೆಲೆಯೂರುವಂತಾಗಲು ವಿಜ್ಞಾನ ಸಾಹಿತಿಗಳ ಕಾರ್ಯವು ಮಹತ್ವದ್ದು.

ಜಾಗತಿಕವಾಗಿ ನಡೆಯುವ ಎಲ್ಲಾ ಸಂಗತಿಗಳನ್ನು ಅಂದರೆ ನೈಸರ್ಗಿಕ, ಕೃಷಿ, ವೈದ್ಯಕೀಯ, ಭೌತ-ಖಭೌತ ಮೊದಲಾದವನ್ನು ವೈಜ್ಞಾನಿಕ ಹಿನ್ನೆಲೆಯಿಂದ ತಿಳಿಯುವಲ್ಲಿ

ವಿಜ್ಞಾನ ಸಾಹಿತ್ಯದ ಪಾತ್ರವು ಪ್ರಮುಖವಾದುದು. ಹೀಗಾಗಿ ವಿಜ್ಞಾನ ಸಾಹಿತ್ಯದ ವಿಷಯವು ವಸ್ತು ವೈವಿಧ್ಯತೆಯಿಂದ ಹಾಗೂ ವಿಭಿನ್ನ ಅಭಿವ್ಯಕ್ತಿ ಸ್ವರೂಪದಿಂದ ಕೂಡಿರುವುದು. ಇದಕ್ಕೆ ಸಂಬಂಧಿಸಿದಂತೆ ಇದುವರೆಗೆ ನಡೆದಿರುವ ಅಧ್ಯಯನಗಳ ಸಮೀಕ್ಷೆಯನ್ನು ಮಾಡಲಾಗಿದೆ. ಇದರಲ್ಲಿ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಿಸಿದ ಒಂದು ಪಿ.ಹೆಚ್.ಡಿ ಪ್ರಬಂಧವನ್ನು, ಹಲವಾರು ಪುಸ್ತಕ ಕೃತಿಗಳನ್ನು, ಪತ್ರಿಕಾ ಪ್ರಕಟಣೆಗಳನ್ನು ಹಾಗೂ ಅಂತರ್ಜಾಲದಲ್ಲಿ ಪ್ರಕಟಿತ ಲೇಖನಗಳನ್ನು ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಿತ ಲೇಖನಗಳನ್ನು ಅಭ್ಯಸಿಸಿ, ಇದುವರೆಗೆ ಈ ಕ್ಷೇತ್ರದಲ್ಲಿ ನಡೆದಿರುವ ಅಧ್ಯಯನಗಳನ್ನು ಸಮೀಕ್ಷಿಸಿ ದಾಖಲಿಸಲಾಗಿದೆ.

೨.೧. ಪಿ.ಹೆಚ್.ಡಿ ಪ್ರಬಂಧ

ಎ.ಓ.ಆವಲಮೂರ್ತಿರವರು, ೨೦೦೦ರಲ್ಲಿ ಪಿ.ವಿ.ನಾರಾಯಣ ಅವರ ಮಾರ್ಗದರ್ಶನದಲ್ಲಿ 'ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯ' ಎನ್ನುವ ಮಹಾಪ್ರಬಂಧವನ್ನು ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಿದ್ದಾರೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಸಾಹಿತ್ಯಕ್ಕೆ ಮೀಮಾಂಸೆಯಿರುವಂತೆ, ವಿಜ್ಞಾನ ಸಾಹಿತ್ಯಕ್ಕೂ ಅಂದರೆ ಜನಪ್ರಿಯ ವಿಜ್ಞಾನ ಸಾಹಿತ್ಯಕ್ಕೂ ಒಂದು ಮೀಮಾಂಸೆಯಿದೆ ಎಂದು ತಿಳಿಸಿದ್ದಾರೆ. ಜೊತೆಗೆ ವಿಜ್ಞಾನ ಸಾಹಿತ್ಯದ ರಚನಾ ಸ್ವರೂಪದ ಬಗ್ಗೆಯೂ ಚರ್ಚಿಸಿದ್ದಾರೆ.

ಇಂದಿನ ೨೧ನೇ ಶತಮಾನದ ವಿಭಿನ್ನ ಮನೋಧರ್ಮಕ್ಕೆ ಅನುಗುಣವಾಗಿ ವಿಜ್ಞಾನ ತಂತ್ರಜ್ಞಾನಗಳು ಬೆಳೆವಣಿಗೆಯಾಗುತ್ತಿದ್ದು, ವಿಜ್ಞಾನ ಸಾಹಿತ್ಯದಲ್ಲಿ ಹೊಸ ಹೊಸ ಸಿದ್ಧಾಂತಗಳು ತಾತ್ವಿಕತೆಗಳೂ ಮೂಡಿಬರುತ್ತಿವೆ. ಇವುಗಳ ಅಗತ್ಯತೆ ಅನಿವಾರ್ಯತೆಯು ಸಮಾಜದ ಜನತೆಗೆ ಇರುವುದರಿಂದ, ಜನತೆಗೆ ಅದರ ಬಗ್ಗೆ ತಿಳುವಳಿಗೆ ನೀಡುವುದು ಬಹು ಆವಶ್ಯಕ. ಹೀಗಾಗಿ ವೈಜ್ಞಾನಿಕ ಮಾಹಿತಿಯನ್ನು ಜನತೆಯಲ್ಲಿ ತಲುಪಿಸುವ ಕಾರ್ಯ ವಿಜ್ಞಾನ ಬರಹಗಳ ಮುಖಾಂತರ ನಡೆಯುತ್ತಿರುವುದರ ಬಗ್ಗೆ ಲೇಖಕರು ತಿಳಿಸಿದ್ದಾರೆ. ಬಹಳಷ್ಟು ಜನರು ತಿಳಿದುಕೊಂಡಂತೆ ವಿಜ್ಞಾನವೆಂದರೆ ಕೇವಲ ಪ್ರಯೋಗಾಲಯದಲ್ಲಿ ನಡೆಯುವ ಕ್ರಿಯೆ. ಪ್ರಯೋಗವೇ ಅದರ ಮೂಲ. ಆದರೆ ವಿಜ್ಞಾನ ಎಂಬುದು ಸರ್ವವನ್ನು ಒಳಗೊಂಡಿರುವಂತಹದ್ದು. ವಿಜ್ಞಾನ ಸಾಹಿತ್ಯದ ಮಹತ್ವವನ್ನು ಕುರಿತಂತೆ ಎ.ಓ ಆವಲಮೂರ್ತಿರವರು ತಮ್ಮ ಪಿ.ಹೆಚ್.ಡಿ ಮಹಾಪ್ರಬಂಧದಲ್ಲಿ ಹೀಗೆ ಹೇಳಿದ್ದಾರೆ "ವಿಜ್ಞಾನವೆಂದರೆ ಕೇವಲ ಪ್ರಯೋಗಾಲಯದಲ್ಲಿ ನಡೆಸುವ ಪ್ರಯೋಗಗಳನ್ನು ಕುರಿತದ್ದು ಎಂಬ ಭಾವನೆ ಅನೇಕರಲ್ಲಿದೆ. ಆದರೆ ವಿಜ್ಞಾನ ಅದನ್ನು ಒಳಗೊಂಡು ಅದನ್ನು

ಜನಪ್ರಿಯ ವಿಜ್ಞಾನ ಸಾಹಿತ್ಯ, ಸಾಹಿತ್ಯಾಂಶ ಹಾಗೂ ಸಾಹಿತ್ಯದ ವಿಶೇಷಾಂಶಗಳನ್ನು ಒಳಗೊಂಡು ತನ್ನ ಒಟ್ಟು ಸ್ವರೂಪದಲ್ಲಿ ಮೂಡಿಬರಲು ಅಗತ್ಯ ಸಂದರ್ಭ ಸೃಷ್ಟಿಯು ಅಗತ್ಯವೆಂಬುದನ್ನು ತಮ್ಮ ಪಿ.ಹೆಚ್.ಡಿ ಮಹಾಪ್ರಬಂಧ 'ಜನಪ್ರಿಯ ವಿಜ್ಞಾನ ಸಾಹಿತ್ಯ' ಎಂಬುದಲ್ಲಿ ಎ.ಓ ಆವಲಮೂರ್ತಿರವರು ಹೇಳಿದ್ದಾರೆ. ಆದರೆ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಯ ಬಗ್ಗೆ ಗಮನ ಹರಿಸದಿರುವುದನ್ನು ಗಮನಿಸಲಾಯಿತು. ಒಟ್ಟಾರೆಯಾಗಿ ಲೇಖಕರು ವಿಜ್ಞಾನ ಸೂರ್ಯವೆಂದು ತಮ್ಮ ಮಹಾಪ್ರಬಂಧವನ್ನು ಪ್ರಕಟಿಸಿ, ವಿಜ್ಞಾನ ಸಾಹಿತ್ಯವನ್ನು ಜನಪ್ರಿಯ ವಿಜ್ಞಾನ ಸಾಹಿತ್ಯವೆಂದು ಪ್ರತ್ಯೇಕಿಸಿ ಆಳ ಸುದೀರ್ಘ ಅಧ್ಯಯನ ವನ್ನು ಮಾಡಿದ್ದು, ಅವರ ಸಂಶೋಧನಾ ಪ್ರಬಂಧವು ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡಿದೆ.

೨.೨. ಕೃತಿಗಳು

ವಿಜ್ಞಾನ – ತಂತ್ರಜ್ಞಾನ., ಸಂಪಾದಕರು ಟಿ.ಆರ್ ಅನಂತರಾಮುರವರ ಕೃತಿಯು ಮೂರು ವಿಭಾಗಗಳಿಂದ ಕೂಡಿದ್ದು, ಪರಿಸರ, ಕೃಷಿ, ಸೇರಿದಂತೆ ವಿದ್ಯುನ್ಮಾನ ಮಾಧ್ಯಮಗಳಲ್ಲಿ ವಿಜ್ಞಾನ, ವಿಜ್ಞಾನ ಅಂಕಣಗಳ ವೈವಿದ್ಯ ವೈಶಿಷ್ಟ ಹಾಗೂ ವಿಜ್ಞಾನ ಸಾಹಿತ್ಯ ಬೆಳೆದು ಬಂದ ಅಂಶಗಳನ್ನೊಳಗೊಂಡಿದೆ. ವಿಜ್ಞಾನ ಸಾಹಿತ್ಯವೆಂಬ ಭಾಗದಲ್ಲಿ ಒಟ್ಟು ೧೮ ಅಧ್ಯಾಯಗಳಿವೆ. ೨ ಮತ್ತು ೩ನೇ ಭಾಗವು ತಾಂತ್ರಿಕ ಸಾಹಿತ್ಯ ಮತ್ತು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದುದಾಗಿದೆ. ಈ ೩ ವಿಭಾಗಗಳಲ್ಲಿ ಮೊದಲನೇ ಭಾಗವು ನನ್ನ ಸಂಶೋಧನೆಗೆ ಪೂರಕವಾ ಹಲವು ವಿಚಾರಗಳನ್ನು ಹೊಂದಿದೆ.

ವಿಜ್ಞಾನ ಸಾಹಿತ್ಯದ ಅಧ್ಯಯನದಲ್ಲಿ ತೊಡಗಿರುವ ಸಂಶೋಧಕರಿಗೆ ಈ ಕೃತಿಯು ಒಂದು ಅತ್ಯುತ್ತಮ ವೈಜ್ಞಾನಿಕ ವಿಷಯದ ಆಕರವಾಗಿರುವಲ್ಲಿ ಸಂಶಯವಿಲ್ಲ. ವಿಜ್ಞಾನ ಸಾಹಿತ್ಯದ ಮಹತ್ವ, ಅಗತ್ಯತೆ, ಸ್ವರೂಪ, ಲಕ್ಷಣಗಳ ಬಗ್ಗೆ ಹಲವಾರು ಲೇಖಕರಿಂದ ರಚಿತವಾಗಿರುವ ಕೃತಿಗಳನ್ನು ಪರಿಚಯಿಸುವ ಮೂಲಕ ಒಂದು ಸುಸಂಬದ್ಧ ಚೌಕಟ್ಟನ್ನು ಕಲ್ಪಿಸುವ ಪ್ರಯತ್ನವನ್ನು ಸಂಪಾದಕರು ಮಾಡಿರುವುದನ್ನು ಗಮನಿಸಬಹುದು. ಈ ಕೃತಿಯಲ್ಲಿ ಹೇಳಿರುವಂತೆ "ಕನ್ನಡ ಸಾಹಿತ್ಯ ಚರಿತ್ರೆಯನ್ನು ಬರೆದಂತೆ ವಿಜ್ಞಾನ ಸಾಹಿತ್ಯ ಚರಿತ್ರೆ ರಚನೆ ನಮ್ಮಲ್ಲಿ ಆಗಲಿಲ್ಲ. ಏನಿದ್ದರೂ ಬಿಡಿ ಬಿಡಿ ಪ್ರಸಂಗಗಳು ದಾಖಲಾಗಿವೆ. ಹಾಗೆಂದು ವಿಜ್ಞಾನ ಸಾಹಿತ್ಯ ಬೆಳೆಯಲಿಲ್ಲವೇ? ಇಲ್ಲವೆಂದರೆ ಅದೂ ಕೂಡ ಅಸತ್ಯದ ಮಾತಾದೀತು. ಹಳೆಗನ್ನಡ ಸಾಹಿತ್ಯ ಕೃತಿಗಳಲ್ಲೂ ವೈಜ್ಞಾನಿಕ ಅಂಶಗಳಿರುವುದೂ ನಿಜ. ಚಾವುಂಡರಾಯನ ಲೋಕೋಪಕಾರದಂತೆ"[೨] ಎಂದು ಹೇಳಿರುವಲ್ಲಿ ವಿಜ್ಞಾನ ಸಾಹಿತ್ಯಕ್ಕೆ ಐತಿಹಾಸಿಕ ದಾಖಲಿತ ಆಧಾರವಿದೆ ಎಂದು ತಿಳಿಸಿ, ವಿಜ್ಞಾನ ಸಾಹಿತ್ಯದ ಪ್ರಾಚೀನತೆಯತ್ತ

ಕಣ್ಣು ಹಾಯಿಸುವಂತೆ ಮಾಡಲಾಗಿದ್ದು, ವಿಜ್ಞಾನ ಸಾಹಿತ್ಯದ ರಚನೆಯ ಬಗ್ಗೆ ಗಮನ ಸೆಳೆಯುತ್ತದೆ..

'ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಆರಂಭದ ಹೆಜ್ಜೆಗಳು'[೩] ಲೇಖನದಲ್ಲಿ ವಿಜ್ಞಾನ ಸಾಹಿತ್ಯವು ಕೃಷಿ, ಆರೋಗ್ಯ ಸಸ್ಯ, ಪ್ರಾಣಿ, ಭೂಮಿ, ಜೀವ, ಪರಿಸರ, ಖಗೋಳ, ಯುದ್ಧ ಮೊದಲಾದ ವಿಷಯ ವಸ್ತುವನ್ನು ಒಳಗೊಂಡಿರುವ ಬೃಹತ್ ಕ್ಷೇತ್ರವೆಂಬುದನ್ನು ತಿಳಿಸಿದ್ದಾರೆ. ಅಲ್ಲದೇ ೯ನೇ ಶತಮಾನದಲ್ಲಿ ಮಹಾವೀರಾಚಾರ್ಯರಿಂದ ರಚಿತ 'ಗಣಿತ ಸಾರ ಸಂಗ್ರಹ' ಕೃತಿಯಿಂದ ಹಿಡಿದು ಇಂದಿನ ಅನುಪಮ ನಿರಂಜನರ 'ತಾಯಿ ಮಗು', ಜೆ.ಆರ್ ಲಕ್ಷ್ಮಣರಾವ್‌ರವರ 'ಪರಮಾಣು ಚರಿತ್ರೆ'ಯಂತಹ ಕೃತಿಗಳ ಪರಿಚಯದೊಂದಿಗೆ ವಿಜ್ಞಾನ ಸಾಹಿತ್ಯದ ಒಡಲು ಜ್ಞಾನ ಪಸರಿಸುವ ಕೃತಿಗಳಿಂದ ಭರಿತವಾಗಿದ್ದು, ಜ್ಞಾನ ಭಂಡಾರ ವಾಗಿರುವುದನ್ನು ತಿಳಿಸಿದ್ದಾರೆ. ವಿಜ್ಞಾನ ಸಾಹಿತಿಗಳಾದ ಬೆಳ್ಳಾವೆ ವೆಂಕಟನಾರಣಪ್ಪ, ಶಿವರಾಮ ಕಾರಂತ, ಆರ್.ಎಲ್.ನರಸಿಂಹಯ್ಯ, ಬಿ.ಜಿ.ಎಲ್.ಸ್ವಾಮಿ, ಜಿ.ಟಿ.ನಾರಾಯಣರಾಯರು, ಜೆ.ಆರ್.ಲಕ್ಷ್ಮಣರಾವ್, ಆಡ್ಯನಡ್ಕ ಕೃಷ್ಣಭಟ್ ಮೊದಲಾದವರನ್ನು ಈ ಕಾಲಘಟ್ಟದ ದಾರಿ ದೀಪಕರೆಂದು ಸಂಭೋದಿಸಿ ಅವರುಗಳ ಸಾಧನೆಗಳ ಪರಿಚಯ ಮಾಡಿಕೊಟ್ಟಿರುವುದನ್ನು ಕಾಣಬಹುದು.

೧೯೬೯-೭೦ ರಿಂದ ಪ್ರಾರಂಭಗೊಂಡು ೧೯೭೪ರವರೆಗೆ ಆರು ವರ್ಷಗಳ ಯೋಜನೆಯಲ್ಲಿ ಹೊರಬಂದ ಏಳು ಸಂಪುಟಗಳ 'ಜ್ಞಾನ ಗಂಗೋತ್ರಿ' ಕೃತಿಯಲ್ಲಿ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳಿವೆ. ಕೃತಿಯಲ್ಲಿ ತಿಳಿಸಿರುವಂತೆ "ಜಗತ್ತಿನ ಜ್ಞಾನ ನಿಧಿಯೇ ಇವುಗಳಲ್ಲಿ ಅಡಕವಾಗಿದೆ. ಆ ಪ್ರಶ್ನೆ ಈ ಪ್ರಶ್ನೆ ಕೇಳಿ, ತಕ್ಷಣ ಉತ್ತರ ಬಯಸಿ, ಹೆತ್ತವರನ್ನು ಕಾಡುವ ಕಿರಿಯರಿದ್ದರೆ, ಯಾವುದೋ ಒಂದು ವಿಷಯದ ಪರಿಜ್ಞಾನವಿಲ್ಲದೆ ತೊಳಲಾಡುವ ಹಿರಿಯರಿದ್ದಾರೆ. ತಮ್ಮ ಜ್ಞಾನತೃಷೆಯನ್ನು ತಣಿಸುವ ಸಾಹಿತ್ಯಕ್ಕಾಗಿ ಹಾತೊರೆಯುವ ಅಧ್ಯಾಪಕರಿದ್ದಾರೆ ಇವರೆಲ್ಲರಿಗೆ ಸಮಾಧಾನ ನೀಡುವ ವಿಶ್ವಕೋಶ – ಜ್ಞಾನ ಗಂಗೋತ್ರಿ, ಸರಳ ಕನ್ನಡದಲ್ಲಿ ಚುರುಕುಶೈಲಿಯ ಬರವಣಿಗೆ, ಆಕರ್ಷಕ ಅಂಶದೊಡನೆ ಲೇಖನಗಳ ಆರಂಭ, ಪುಟಪುಟಕ್ಕೂ ಚಿತ್ರಗಳು, ಇವು ಜ್ಞಾನ ಗಂಗೋತ್ರಿಯ ವೈಶಿಷ್ಟಗಳು..."[೪] ಎಂದು ಹೇಳಿರುವುದು ಕೃತಿಯ ಕಿರುಪರಿಚಯವನ್ನು ಮಾಡಿಕೊಟ್ಟಂತಿದೆ. ಈ ಕೃತಿಯಲ್ಲಿ ಬಹಳಷ್ಟು ಚಾರಿತ್ರಿಕ ಮಾಹಿತಿಯು ಅಧ್ಯಯನಕ್ಕೆ ಸಂಬಂಧಿಸಿದಂತೆ ಕಂಡುಕೊಳ್ಳಲಾಯಿತು. ಆದರೆ ಮೂಲ ಉದ್ದೇಶವಾದ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಗೆ ಸಂಬಂಧಿಸಿದಂತೆ ಮಾಹಿತಿಯು ಅಂಶಿಕವಾಗಿರು ವುದನ್ನು ಕಾಣಲಾಯಿತು.

ಕನ್ನಡದಲ್ಲಿ ವಿಜ್ಞಾನ ಸಂವಹನೆ – ಸಂಪಾದಕರು ಎಚ್.ಆರ್ ರಾಮಕೃಷ್ಣರಾವ್ ಮತ್ತು ಟಿ.ಆರ್ ಅನಂತರಾಮುರವರ ಕೃತಿಯಲ್ಲಿ ಸುದೀರ್ಘ ಇತಿಹಾಸವಿರುವ ಕನ್ನಡ ಸಾಹಿತ್ಯದಲ್ಲಿ ಇತರ ಶಾಸ್ತ್ರ ವಿಚಾರಗಳು ಸೇರಿದಂತೆ ದೇಸಿ ವೈಜ್ಞಾನಿಕ ಚಿಂತನೆಯ ಬಗ್ಗೆಯೂ ಮಾಹಿತಿ ಇದೆ. ಪಾಶ್ಚಾತ್ಯ ವಿಜ್ಞಾನದ ಪ್ರಭಾವಕ್ಕೆ ಮೊದಲೇ ಕನ್ನಡ ಸಂಸ್ಕೃತಿಯಲ್ಲಿ ನಿಸರ್ಗದೊಡನೆ ಹಿತಮಿತ ಸಾಮರಸ್ಯ ಹೊಂದಿದ್ದ ಜನರು ತಮ್ಮ ದಿನನಿತ್ಯದ ಕಾರ್ಯದಲ್ಲಿ ವಿಜ್ಞಾನದ ಬಳಕೆಯನ್ನು ಮಾಡುತ್ತಿದ್ದರು. ಉದಾಹರಣೆಗೆ ನೋಡುವುದಾದರೆ, ಸಣ್ಣಪುಟ್ಟ ರೋಗಗಳಿಂದ ಆರೋಗ್ಯ ರಕ್ಷಣೆಗೆ ಅಗತ್ಯವಾದ ಚಿಕಿತ್ಸೆ, ಮದ್ದು, ನೈರ್ಮಲ್ಯ, ಆಹಾರ ರಕ್ಷಣೆ ಮತ್ತು ಸೇವನೆ ಮೊದಲಾದವನ್ನು ರೂಪಿಸಿಕೊಂಡಿದ್ದಲ್ಲದೆ, ಇವುಗಳ ವಿವರಗಳನ್ನು ದಾಖಲಿಸಿಡುತ್ತಿದ್ದರು ಎಂಬುದಕ್ಕೆ ಇತಿಹಾಸದ ಪುಟಗಳಲ್ಲಿ ಆಧಾರಗಳಿವೆ.

ತಮ್ಮ ಸುತ್ತಣ ಸೃಷ್ಟಿಯೊಂದಿಗಿನ ಮಧುರ ಸಂಬಂಧವನ್ನು, ತಮ್ಮ ಬದುಕಿನೊಂದಿಗೆ ಹೋಲಿಸಿ ಕಲ್ಪಿಸಿಕೊಂಡಿದುದರ ಫಲವಾಗಿ ಪರಿಸರದೊಂದಿಗೆ ಆತ್ಮೀಯ ಸಂಬಂಧವನ್ನು ಹೊಂದುವುದರೊಂದಿಗೆ ಒಂದು ಬಗೆಯ ನಿಸರ್ಗ ವಿವೇಕವನ್ನು ಗಳಿಸಿಕೊಂಡಿದ್ದರು. ವಿಜ್ಞಾನಕ್ಕೆ ಸಂಬಂಧಿಸಿದ ಅಗತ್ಯ ಮಾಹಿತಿಗಳನ್ನೊಳಗೊಂಡ 'ಕನ್ನಡದಲ್ಲಿ ವಿಜ್ಞಾನದ ಸಂವಹನೆ' ಎಂಬ ಲೇಖನಗಳ ಸಂಗ್ರಹವು ೨೦೧೧ರಲ್ಲಿ ಹೆಚ್ ಆರ್ ರಾಮಕೃಷ್ಣರಾವ್ ಮತ್ತು ಟಿ.ಆರ್.ಅನಂತರಾಮುರವರ ಸಂಪಾದಕತ್ವದಲ್ಲಿ ಪ್ರಕಟವಾಗಿದ್ದು, ವಿಜ್ಞಾನ ಸಾಹಿತ್ಯಾಸಕ್ತರಿಗೆ, ಸಂವಹನಕಾರರಿಗೆ, ಸಂಶೋಧಕರಿಗೆ ತಮ್ಮ ಜ್ಞಾನ ಶಾಖೆಯನ್ನು ವಿಸ್ತರಿಸಿಕೊಳ್ಳಲು ಸಹಕರಿಸುವಂತಿದೆ. ಈ ಕೃತಿಯು ೧೫ ವಿಜ್ಞಾನ ಲೇಖಕರ ೧೫ ವಿಜ್ಞಾನ ಲೇಖನಗಳನ್ನು ಒಳಗೊಂಡಿದ್ದು, ವಿಜ್ಞಾನ ಸಾಹಿತ್ಯದ ಬೆಳವಣಿಗೆಯ ಬಗ್ಗೆ, ನಡೆದು ಬಂದ ಹಾದಿಯ ಬಗ್ಗೆ ಅಧ್ಯಯನ ಮಾಡುವವರಿಗೆ ಒಂದು ಪ್ರಮುಖ ಆಕರ ಗ್ರಂಥವಾಗಿದೆ.

ಈ ಕೃತಿಯಲ್ಲಿನ ಮೊದಲ ಲೇಖನ ಎಚ್.ಆರ್ ರಾಮಕೃಷ್ಣ ರಾವ್‌ರವರ 'ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಡೆದು ಬಂದ ದಾರಿ', ಎರಡನೆಯ ಲೇಖನ ಬಿ.ಎಸ್ ಸೋಮಶೇಖರ್ ರವರ 'ಆರಂಭದ ವಿಜ್ಞಾನ ಕೃತಿಗಳ – ಭಾಷೆ, ಸ್ವರೂಪ' ಹಾಗೂ ಐದನೇಯ ಲೇಖನ ಡಾ.ಎಚ್.ಎಸ್ ನಿರಂಜನ ಆರಾಧ್ಯರವರ 'ಕನ್ನಡ ವಿಜ್ಞಾನ ಸಾಹಿತ್ಯ–ವಸ್ತು ವೈವಿದ್ಯ ಕೃತಿಗಳು' ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನೊಳಗೊಂಡಿರುವುದನ್ನು ಸಮೀಕ್ಷೆಯಲ್ಲಿ ಗಮನಿಸಲಾಯಿತು.

ಎಚ್.ಆರ್ ರಾಮಕೃಷ್ಣ ರಾವ್ ರವರ 'ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಡೆದು ಬಂದ ದಾರಿ'ಯಲ್ಲಿನ ವಿಜ್ಞಾನ ಸಾಹಿತ್ಯದ ಪ್ರಾಚೀನತೆಯಲ್ಲಿ "ಲೌಕಿಕ ಬದುಕಿಗೆ

ನಿಸರ್ಗದೊಡನೆ ಹೊಂದಾಣಿಕೆ ಮಾಡಿಕೊಂಡು, ಅದರಲ್ಲಿ ಆವರ್ತನೀಯವಾಗಿ ಘಟಿಸುವ ವಿಧ್ಯಮಾನಗಳನ್ನು ಬೆರಗುಗೊಂಡು ವೀಕ್ಷಿಸಿ, ಸಮಕಾಲೀನರೊಡನೆ ಚರ್ಚಿಸಿ, ತಮ್ಮ ನಿತ್ಯ ಪುರುಷಾರ್ಥಗಳಿಗೆ ಸಮನ್ವಯಗೊಳಿಸಿಕೊಳ್ಳುವ ಪ್ರಕ್ರಿಯೆಯೇ ವಿಜ್ಞಾನ ಮತ್ತು ಅದನ್ನು ದಾಖಲಿಸಿದಾಗ ರೂಪುಗೊಂಡದ್ದೇ ವಿಜ್ಞಾನ ಸಾಹಿತ್ಯ"[೫] ಎಂದು ವಿಜ್ಞಾನ ಮತ್ತು ವಿಜ್ಞಾನ ಸಾಹಿತ್ಯವನ್ನು ಶಿಷ್ಟರೂಪದಲ್ಲಿ ಅರ್ಥೈಸಿರುವುದನ್ನು ಕಾಣಬಹುದು.

ವೈದ್ಯ ವಿಜ್ಞಾನ, ಪಶುವೈದ್ಯ ವಿಜ್ಞಾನ, ಗಣಿತ ಮತ್ತು ಖಗೋಳ ವಿಜ್ಞಾನಗಳ ವಿಚಾರವನ್ನು ಆಯಾ ಕ್ಷೇತ್ರದಲ್ಲಿ ರಚಿತ ಕೃತಿಗಳ ಅಧಾರದಲ್ಲಿ ತಿಳಿಸಲಾಗಿದೆ. ಅದೇ ಲೇಖನದಲ್ಲಿನ ಉಪಶೀರ್ಷಿಕೆ 'ಕನ್ನಡದಲ್ಲಿ ಆಧುನಿಕ ವಿಜ್ಞಾನ ಸಾಹಿತ್ಯ'[೬] ಎಂಬಲ್ಲಿ ಶುದ್ಧ ಸಾಹಿತಿಗಳ ಆಲೋಚನೆಯು ವೈಚಾರಿಕತೆಯಿಂದ ಕೂಡಿದ ವೈಜ್ಞಾನಿಕ ಅಂಶಗಳತ್ತ ಹೊರಟಿದ್ದನ್ನು ತಿಳಿಸಲಾಗಿದೆ. ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಭೌತ ವಿಜ್ಞಾನ ಬೋಧಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪನವರು ಮತ್ತು ಮೈಸೂರಿನ ಪವನ ವಿಜ್ಞಾನ ಇಲಾಖೆಯಲ್ಲಿದ್ದ ನಂಗಪುರಂ ಜಿ ವೆಂಕಟೇಶ ಅಯ್ಯಂಗಾರ್ ರವರು ಸೇರಿ ಸ್ಥಾಪಿಸಿದ 'ಕರ್ನಾಟಕ ವಿಜ್ಞಾನ ಪ್ರಚಾರಿಣೀ ಸಮಿತಿಯಲ್ಲಿ' ವಿಜ್ಞಾನ ಪತ್ರಿಕೆಯನ್ನು ಪ್ರಕಟಿಸಿದುದು ವಿಜ್ಞಾನ ಸಾಹಿತ್ಯಕ್ಕೆ ಮೈಲಿಗಲ್ಲಾಗಿರುವುದನ್ನು ಕಾಣಬಹುದು ಎಂದು ವಿವರಿಸಲಾಗಿದ್ದು, ಸೂಕ್ತ ಪಾರಿಭಾಷಿಕ ಪದಗಳ ಕೊರತೆಯಿಂದಾಗಿ ೬೦ ಲೇಖನಗಳನ್ನು ಪ್ರಕಟಿಸಿದ್ದ, ವಿಜ್ಞಾನ ಪತ್ರಿಕೆ ಕೇವಲ ೨ ವರ್ಷ ಮಾತ್ರ ಬದುಕಿ ಉಳಿದುದರ ಬಗ್ಗೆ ವಿಶಾದದಿಂದ ತಿಳಿಸಿದ್ದಾರೆ.

ಬೆಳ್ಳಾವೆ ವೆಂಕಟನಾರಣಪ್ಪನವರು ಮೈಸೂರು ವಿಶ್ವವಿದ್ಯಾನಿಲಯ ಇಂಗ್ಲೀಷ್–ಕನ್ನಡ ನಿಘಂಟು ರಚಿಸುವಂತೆ ಸಲಹೆ ನೀಡಿ, ಸರ್ಕಾರದಿಂದ ನೆರವು ದೊರಕಿಸಿಕೊಟ್ಟದ್ದು ವಿಜ್ಞಾನ ಸಾಹಿತ್ಯದ ಬೆಳವಣಿಗೆಗೆ ಪುಷ್ಟಿ ನೀಡಿತು ಎಂದು ತಿಳಿಸಿದ್ದಾರೆ. ಭಾಷಿಕ ಪದಗಳನ್ನು ಟಂಕಿಸುವುದು ಹೇಗೆ ಎಂಬುದಕ್ಕೆ ಮಾದರಿಯಂತಿದೆ; ಪ್ರೊ.ಆರ್.ಎಲ್ ನರಸಿಂಹಯ್ಯನವರು ೧೯೫೧ರಲ್ಲಿ ಬರೆದ 'ನಕ್ಷತ್ರ ದರ್ಶನ' ಕೃತಿ. ಅಲ್ಲದೆ, ೧೯೩೬ರಲ್ಲಿ ೩ ಸಂಪುಟಗಳಲ್ಲಿ ರಚನೆಗೊಂಡ 'ಬಾಲ ಪ್ರಪಂಚದಲ್ಲಿನ ಲೇಖನಗಳು ಬುದ್ಧಿ, ಭಾವ, ಸಾಹಿತ್ಯಗಮ್ಯವಾಗಿದ್ದು; ಭೌತ, ಯಂತ್ರ, ಪ್ರಕೃತಿ ವಿಜ್ಞಾನ ವಿಷಯಗಳ ಬಗ್ಗೆ ವೈಜ್ಞಾನಿಕ ವಿವರಗಳನ್ನು ತಿಳಿಸುವಂತಿದೆ ಎಂದು ತಿಳಿಸುತ್ತಾ, ಅದನ್ನು ಓದಿದ ಮಕ್ಕಳಲ್ಲಿ ಕೆಲವರಿಗಾದರೂ ತಾವೂ ಒಬ್ಬ ವಿಜ್ಞಾನಿಯಾಗಬೇಕೆಂಬ ಆಸೆ ಮೂಡುತ್ತದೆ ಎಂದು ಲೇಖನದಲ್ಲಿ ಹೇಳಿರುವುದು ಅದರ ಸ್ವರೂಪವನ್ನು ತಿಳಿಸುವುದು.

"ಜಿ.ಟಿ.ಎನ್ ಬಳಸುತ್ತಿದ್ದ ಭಾಷೆ ಕಬ್ಬಿಣದ ಕಡಲೆ ಎನ್ನಿಸಿದ್ದೂ ಉಂಟು. ಅವರ ಬರವಣಿಗೆಗೆ ಅವರದ್ದೇ ಶೈಲಿ. ಮತ್ತೊಬ್ಬರ ಅನುಕರಣೆಯೂ ಅಲ್ಲ ಯಾರೊಬ್ಬರೂ ಅನುಕರಣೆ ಮಾಡಲೂ ಸಾಧ್ಯವಿಲ್ಲ"[೭] ಎಂದು ಹೇಳಿರುವಲ್ಲಿ ಜಿ.ಟಿ.ಎನ್‌ರವರ ಭಾಷೆಯು ನಿಖರತೆ ಹಾಗೂ ಗಂಭೀರವಾಗಿರುವುದು ಇದರಿಂದ ತಿಳಿದು ಬರುತ್ತದೆ. ಗಣಿತ ಅಧ್ಯಾಪಕರೂ ಹಾಗೂ ಎನ್.ಸಿ.ಸಿ ಅಧಿಕಾರಿಯೂ ಆಗಿದ್ದ ಜಿ.ಟಿ.ಎನ್ ಎಂದೇ ಖ್ಯಾತರಾಗಿದ್ದ ಜಿ.ಟಿ. ನಾರಾಯಣರಾಯರು ವಿಜ್ಞಾನ ಸಂವಹನೆಗೆ ತಮ್ಮದೇ ಆದ ಭಾಷೆ ಮತ್ತು ಶೈಲಿಯಲ್ಲಿ ಲೇಖನಗಳನ್ನು ರಚಿಸಿರುವುದು ಅವರ ಪ್ರಾಮಾಣಿಕ ಬರವಣಿಗೆಗೆ ಸಾಕ್ಷಿಯಾಗಿದ್ದು, ವಿಜ್ಞಾನ ಸಾಹಿತ್ಯಕ್ಕೆ ಅತ್ಯುತ್ತಮ ಕೊಡುಗೆಯಾಗಿರುವುದನ್ನು ಗಮನಿಸಬಹುದು. ಈ ರೀತಿ ಉತ್ತಮವಾದ ವಿಷಯಗಳ ಜೊತೆಗೆ ೧೯೮೦ರಲ್ಲಿ ಜನ್ಮ ಪಡೆದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು, ಭಾರತ ಜ್ಞಾನ ವಿಜ್ಞಾನ ಸಮಿತಿ (೧೯೭೦), ವಿಜ್ಞಾನ ಪತ್ರಿಕೆಗಳು, ವಿಜ್ಞಾನ ಸಾಹಿತಿಗಳಾಗಿ ವಿಜೃಂಬಿಸಿದ ಮಹಾಚೇತನಗಳಾದ ಬಿ.ಜಿ.ಎಲ್ ಸ್ವಾಮಿ, ಕೃಷ್ಣಾನಂದ ಕಾಮತರು, ಬಿ.ಆರ್. ಗುರುಪ್ರಸಾದ್, ಟಿ.ಆರ್ ಅನಂತರಾಮು ಹಾಗೂ ಬಿ.ಪಿ.ರಾಧಾಕೃಷ್ಣ ಮೊದಲಾದವರು ವಿಜ್ಞಾನ ಸಾಹಿತ್ಯಕ್ಕೆ ನೀಡಿದ ಕೊಡುಗೆಯ ಬಗ್ಗೆ ತಿಳಿಸಿರುವುದನ್ನು ಕಾಣಲಾಯಿತು.

ಬಿ.ಎಸ್ ಸೋಮಶೇಖರ್ ರವರ 'ಆರಂಭದ ವಿಜ್ಞಾನ ಕೃತಿಗಳ – ಭಾಷೆ, ಸ್ವರೂಪ'[೮] ಲೇಖನದಲ್ಲಿ ೧೯೫೦ ಮತ್ತು ೬೦ರ ದಶಕದವರೆಗಿನ ಕಾಲದಲ್ಲಿ ರಚನೆಗೊಂಡ ವಿಜ್ಞಾನ ಕೃತಿಗಳನ್ನು ಆರಂಭದ ಕೃತಿಗಳೆಂದು ಪರಿಗಣಿಸಲಾಗಿದೆ. ಲೇಖನದ ಮೊದಲಿಗೆ ವಿಜ್ಞಾನ ಸಾಹಿತ್ಯದ ಪ್ರಾಮುಖ್ಯತೆಯನ್ನು ತಿಳಿಸುವ ಮೂಲಕ ವೈಜ್ಞಾನಿಕ ಕೃತಿಗಳ ಒಟ್ಟು ಪ್ರಮಾಣದ ಮೇಲೆ ಗಮನ ಹರಿಸಿ, ದೊರಕಿದ ಆಕರಗಳ ಮಾಹಿತಿಯನ್ನಾದರಿಸಿ ೧೪ ವಿವಿಧ ವಿಜ್ಞಾನ ಶಾಖೆಗಳಲ್ಲಿ ವಿಜ್ಞಾನ ಕೃತಿಗಳು ವ್ಯಾಪಿಸಿರುವುದನ್ನು ಗುರುತಿಸಿ ತಿಳಿಸಿರುವುದು ನನ್ನ ಸಂಶೋಧನಾ ಕಾರ್ಯಕ್ಕೆ ಸಹಕಾರಿಯಾಗಿದೆ. ಪ್ರಥಮ ಕೃತಿಗಳು, ಪರಿಸರ ವಿಜ್ಞಾನದ ಉಗಮ, ವಿಜ್ಞಾನ ಸಾಹಿತ್ಯ ರಚನೆಯ ಆಧ್ಯ ಪ್ರವರ್ತಕರು, ಮುಖ್ಯವಾಹಿನಿಯ ಸಾಹಿತಿ ವಿದ್ವಾಂಸರು, ವಿಜ್ಞಾನ ಲೇಖಕರಾಗಿ ಬದಲಾದದ್ದು, ಆಡಳಿತ ಮುತ್ಸದ್ಧಿಗಳು ವಿಜ್ಞಾನ ಲೇಖಕರಾಗಿ ರೂಪುಗೊಂಡಿದ್ದು ಮೊದಲಾದ ಉಪ ಶೀರ್ಷಿಕೆಯ ಮೂಲಕ ವಿಚಾರಗಳನ್ನು ತಿಳಿಸಿರುವುದು ಗಮನಾರ್ಹವಾಗಿದೆ.

ವಿಜ್ಞಾನದ ವಿಷಯ ವಿಚಾರಗಳ ಪ್ರಸಾರದಲ್ಲಿ ವಿಶ್ವವಿದ್ಯಾಲಯಗಳ ಪುಟ್ಟ ಪ್ರಸಾರಾಂಗಗಳು, ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿ ಮೈಸೂರು, ಕರ್ನಾಟಕ ವಿಜ್ಞಾನ ಪ್ರಚಾರಿಣಿ ಸಮಿತಿ ಬೆಂಗಳೂರು, ಗ್ರಾಜುಯೇಟ್ಸ್ ಟ್ರೇಡಿಂಗ್ ಅಸೋಸಿಯೇಷನ್(ಜಿ.ಟಿ.ಎ)

ಮೈಸೂರು, ಕ್ರಿಶ್ಚಿಯನ್ ಲಿಟರೇಚರ್ ಸೊಸೈಟಿ, ವಿಜ್ಞಾನ ಪತ್ರಿಕೆಗಳು, ಜಯ ಕರ್ನಾಟಕ ಪತ್ರಿಕೆ, ಪ್ರಬುದ್ಧ ಕರ್ನಾಟಕ(ತ್ರೈಮಾಸಿಕ), ಕನ್ನಡ ಸಾಹಿತ್ಯ ಪರಿಷತ್ತು ಪತ್ರಿಕೆ, ವಿಜ್ಞಾನ(ಮಾಸ ಪತ್ರಿಕೆ) ಮೊದಲಾದ ವೈಜ್ಞಾನಿಕ ವಿಚಾರಗಳನ್ನು ಸಹೃದಯ ಓದುಗರಿಗೆ ಪರಿಚಯಿಸಿರುವುದು ವಿಜ್ಞಾನ ಸಾಹಿತ್ಯದ ಬೆಳವಣಿಗೆಯನ್ನು ಸೂಚಿಸುವಂತಿದೆ. ಅಲ್ಲದೇ ವಿಜ್ಞಾನ ವಿಚಾರಗಳನ್ನು ಸಾಮಾನ್ಯ ಜನರಿಗೆ ತಲುಪಿಸಲು ಶ್ರಮಿಸಿದ ಲೇಖಕರ, ಸಂಘ ಸಂಸ್ಥೆ ಸಮಿತಿಗಳ ಕಾರ್ಯ ಅನನ್ಯವಾದುದಾಗಿದ್ದು, ಲೇಖಕರು ತಮ್ಮ ಲೇಖನದ ತುಂಬ ಅಗತ್ಯ ವೈಜ್ಞಾನಿಕ ವಿಷಯದ ಬಗೆಗಿನ ಹತ್ತು ಹಲವಾರು ಮಾಹಿತಿಗಳನ್ನು ನೀಡಿದ್ದಾರೆ. ಆದರೆ ಈ ಲೇಖನವು ಆರಂಭದ ಕೃತಿಗಳೆಂದು ಪರಿಗಣಿಸಿದ ೧೯೫೦-೬೦ರ ಕೃತಿಗಳ ಪರಿಚಯ ದೊಂದಿಗೆ ಸಂಕ್ಷಿಪ್ತವಾಗಿ ಅವುಗಳ ಭಾಷೆ ಮತ್ತು ಸ್ವರೂಪದ ಬಗ್ಗೆ ಹೇಳಲಾಗಿದೆಯೇ ಹೊರತು, ವಿವರಣಾತ್ಮಕ ಚಿಂತನೆಗಳು ನಡೆದಿರುವುದನ್ನು ತಿಳಿಸುವಲ್ಲಿ ಎಡವಿರುವುದನ್ನು ಗಮನಿಸಲಾಯಿತು.

ಎಚ್.ಎಸ್ ನಿರಂಜನ ಆರಾಧ್ಯರವರ 'ಕನ್ನಡ ವಿಜ್ಞಾನ ಸಾಹಿತ್ಯ-ವಸ್ತು ವೈವಿದ್ಯ'[೯]. ಈ ಲೇಖನದಲ್ಲಿ ಕನ್ನಡ ಸಾಹಿತ್ಯದಲ್ಲಿ ವಸ್ತು ವೈವಿದ್ಯತೆಯಿರುವಂತೆ ವಿಜ್ಞಾನ ಸಾಹಿತ್ಯದಲ್ಲಿಯೂ ಸೃಜನಾತ್ಮಕತೆಯಿಂದ ಕೂಡಿದ, ವಸ್ತು ಹಾಗೂ ವಿಧಾನಗಳ ವೈವಿದ್ಯತೆಯಿರುವುದನ್ನು ಹಲವು ಲೇಖಕರ ಲೇಖನಗಳ ಉದಾಹರಣೆಯೊಂದಿಗೆ ತಿಳಿಸಿರುವುದನ್ನು ಕಾಣಬಹುದು. 'ಕನ್ನಡದಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯ' ಎಂಬ ಪಿ.ಹೆಚ್.ಡಿ ಮಹಾಪ್ರಬಂಧ ಬರೆದು, ಅದನ್ನೇ 'ವಿಜ್ಞಾನ ಸೂರ್ಯ'[೧೦] ಎಂಬ ಹೆಸರಿನಲ್ಲಿ ೨೦೦೭ರಲ್ಲಿ ಪ್ರಕಟಿಸಿದ ಲೇಖಕರಾದ ಎ.ಓ.ಆವಲಮೂರ್ತಿರವರು ವಿಜ್ಞಾನ ಸಾಹಿತ್ಯವೂ ಒಂದು ಸೃಜನಾತ್ಮಕ ಸಾಹಿತ್ಯವೆಂದು ಹೇಳಿರುವುದನ್ನು ಕಾಣಬಹುದು. ಅಲ್ಲದೆ ವೈದ್ಯ ಸಾಹಿತ್ಯದ ಬಗ್ಗೆ ತಿಳಿಸುವಾಗ ಶಿವಪ್ಪ, ಅನುಪಮ ನಿರಂಜನರ ಕೊಡುಗೆಯನ್ನು ಪ್ರಸ್ತಾಪಿಸಿದ್ದಾರೆ. ಜೊತೆಗೆ ಜಿ.ಟಿ.ಎನ್, ಬಿ.ಎಸ್ ಶೈಲಜ, ಟಿ.ಆರ್. ಅನಂತರಾಮು, ಜೆ.ಆರ್.ಲಕ್ಷ್ಮಣರಾವ್, ಹೆಚ್ ನರಸಿಂಹಯ್ಯ, ಕೃಷ್ಣಾನಂದ ಕಾಮತ್, ಬಿ.ಜಿ.ಎಲ್ ಸ್ವಾಮಿ, ವಿಜ್ಞಾನ ಅಂಕಣಗಾರರಾದ ನಾಗೇಶ್ ಹೆಗಡೆ, ಕೊಳ್ಳೆಗಾಲ ಶರ್ಮ, ಪವನಜ, ಶ್ರೀನಿಧಿ ಮತ್ತು ಸುಧೀಂದ್ರ ಹಾಲ್ದೊಡ್ಡೇರಿ ಮೊದಲಾದವರು ವಿಜ್ಞಾನ ಸಾಹಿತ್ಯ ಕ್ಷೇತ್ರಕ್ಕೆ ನೀಡಿದ ಕೊಡುಗೆಗಳ ಬಗ್ಗೆ ತಿಳಿಸಲಾಗಿದೆ. ಇದು ಸಂಶೋಧನಾತ್ಮಕ ಅಧ್ಯಯನಕ್ಕೆ ಪೂರಕ ಮಾಹಿತಿ ನೀಡಿದ್ದು, ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆಯನ್ನು ತಿಳಿದುಕೊಳ್ಳಲು ಸಹಕಾರಿಯಾಗಿದೆ.

ಎಂ. ಚಿದಾನಂದ ಮೂರ್ತಿ ಸಾಹಿತ್ಯ ಸಾಧನೆ., ಎಸ್.ಎಸ್ ಅಂಗಡಿರವರು ಕನ್ನಡ ಭಾಷೆಯ ಮಹತ್ವ ಮತ್ತು ವಿಜ್ಞಾನ ಸಾಹಿತ್ಯಕ್ಕೆ ಬಳಸುವ ಭಾಷೆ ಮೊದಲಾದ ವಿಷಯಗಳ ಬಗ್ಗೆ ಎಂ.ಚಿದಾನಂದ ಮೂರ್ತಿರವರು ನೀಡಿರುವ ಉತ್ತರವು ಸಾಹಿತ್ಯವನ್ನು ಅಭಿವ್ಯಕ್ತಿಸುವಲ್ಲಿ ಭಾಷೆಯು ಎಷ್ಟು ಮುಖ್ಯವಾದುದು ಎಂಬುದನ್ನು ತಿಳಿಸುತ್ತದೆ. ಲೇಖಕರ ಸಂದರ್ಶನದಲ್ಲಿನ ಒಂದು ಪ್ರಶ್ನೆ "ಕನ್ನಡ ಸಾಹಿತ್ಯದ ಅಭಿವೃದ್ಧಿ ಎಂದರೆ ಕನ್ನಡ ಭಾಷೆಯ ಅಭಿವೃದ್ಧಿಯೇ?" ಎಂಬುದಕ್ಕೆ ಸಾಹಿತಿಗಳಾದ ಚಿದಾನಂದ ಮೂರ್ತಿರವರ ಉತ್ತರವು ಹೀಗಿದೆ, "ಕನ್ನಡ ಭಾಷೆ ಎಂದರೆ ಕನ್ನಡ ಸಾಹಿತ್ಯ ಎಂದು ನಮಗೆ ನಾವೇ ಮೋಸ ಮಾಡಿಕೊಂಡಿದ್ದೇವೆ. ಕನ್ನಡ ಭಾಷೆ ಮತ್ತು ಕನ್ನಡ ಸಾಹಿತ್ಯ ಎರಡೂ ಸಮಾನಾರ್ಥಕ ಪದಗಳಲ್ಲ. ಭಾಷೆ ಎನ್ನೋದು ಜನಗಳ ದಿನನಿತ್ಯದಲ್ಲಿ ಬಳಕೆಯಾಗುವಂಥಾದ್ದು. ಕನ್ನಡ ಭಾಷೆ ಬೆಳೆಯೋದು ಅಂದರೆ ಬರೀ ಕನ್ನಡ ಸಾಹಿತ್ಯದ ಬೆಳವಣಿಗೆ ಅಲ್ಲ. ಅದು ವಿಜ್ಞಾನ – ತಂತ್ರಜ್ಞಾನದ ಭಾಷೆಯಾಗಬೇಕು. ನಮ್ಮ ವಿಜ್ಞಾನ ಲೇಖಕರು ಕರ್ನಾಟಕದ ಮಟ್ಟಿಗಾದರೂ ಒಂದು ಸಮಾನವಾದ ಪರಿಭಾಷೆ ಇಟ್ಟುಕೊಳ್ಳಬೇಕಾದ ಅಗತ್ಯವಿದೆ. ಸಾಹಿತ್ಯದ ವಿದ್ಯಾರ್ಥಿಯಾಗಿಯೂ ನನಗೆ; ಸಾಹಿತ್ಯ ಬೆಳೆಯುತ್ತಿದೆ ನಿಜ. ಆದರೆ ವಿಜ್ಞಾನ, ಮನೋವಿಜ್ಞಾನ, ಸಮಾಜಶಾಸ್ತ್ರ, ರಾಜ್ಯಶಾಸ್ತ್ರ, ಅರ್ಥಶಾಸ್ತ್ರ, ಮ್ಯಾನೇಜ್ ಮೆಂಟ್ ಇತ್ಯಾದಿ ಕ್ಷೇತ್ರಗಳಲ್ಲಿ ನಮ್ಮ ಭಾಷೆಯ ಬೆಳವಣಿಗೆಯ ಬಗ್ಗೆ ತೀವ್ರ ಅತೃಪ್ತಿ ಇದೆ"[೧೧] ಎಂದು ಹೇಳುವಲ್ಲಿ ಕನ್ನಡ ಸಾಹಿತ್ಯದಲ್ಲಿ ಬಳಸುವ ಭಾಷೆಯು ವಿಜ್ಞಾನ ತಂತ್ರಜ್ಞಾನದ ಭಾಷೆಯಂತಿರಬೇಕು ಎಂದು ಹೇಳುವುದರೊಂದಿಗೆ ವಿಜ್ಞಾನ ಕ್ಷೇತ್ರದಲ್ಲಿ ಬಳಕೆಯಾಗುತ್ತಿರುವ ಭಾಷೆಯ ಹಾಗೂ ಪಾರಿಭಾಷಿಕ ಪದಗಳ ಬಳಕೆಯ ಬಗೆಗಿನ ಅತೃಪ್ತಿಯನ್ನು ಸಮೀಕ್ಷೆಯಲ್ಲಿ ಕಂಡು ಕೊಳ್ಳಲಾಯಿತು.

ವಿಜ್ಞಾನ ಸಾಹಿತ್ಯ ನಿರ್ಮಾಣ – ಪ್ರಧಾನ ಸಂಪಾದಕರು ಹಾ.ಮಾ. ನಾಯಕರ ಈ ಕೃತಿಯು ವಿಜ್ಞಾನ ಪಠ್ಯಪುಸ್ತಕ ಬರಹಗಾರರ ಶಿಬಿರದ ಕಾರ್ಯಕಲಾಪಗಳ ಮಾಹಿತಿಯನ್ನೊಳಗೊಂಡಿದ್ದು, ಆಹ್ವಾನಿತರ ಭಾಷಣಗಳನ್ನೇ ಅಧ್ಯಾಯಗಳಾಗಿ ರಚಿಸಿ ಪ್ರಸ್ತುತಪಡಿಸುವುದರೊಂದಿಗೆ, ವಿಷಯಕ್ಕೆ ಸಮಬಂಧಿಸಿದಂತೆ ಅಗತ್ಯ ವಿಷಯಗಳ ವಿವರಣೆಯಿಂದ ಕೂಡಿದ ಮಾದರಿ ಅಧ್ಯಾಯಗಳಾಗಿವೆ. ಆಹ್ವಾನಿತರಲ್ಲಿ ವಿಜ್ಞಾನ ವಿಷಯ ಜ್ಞಾನಿಗಳು ಹಾಗೂ ವಿದ್ವಾಂಸರಾದ ಜೆ.ಆರ್. ಲಕ್ಷ್ಮಣರಾವ್‌ರವರ 'ವಿಜ್ಞಾನ ಪಠ್ಯಪುಸ್ತಕಗಳು', ಸಿ.ಎನ್.ಶ್ರೀನಿವಾಸ್ಯೆಯಂಗಾರ್‌ರವರ 'ಪಾರಿಭಾಷಿಕ ಶಬ್ದಗಳ ಸಮಸ್ಯೆ', ಕೆ.ಶ್ರೀನಿವಾಸನ್‌ರವರ 'ವಿಜ್ಞಾನ ಮಾಧ್ಯಮ ಸಮಸ್ಯೆ', ಎಸ್.ವರದರಾಜನ್‌ರವರ 'ವಿಜ್ಞಾನ ಸಾಹಿತ್ಯದ ಸಮಸ್ಯೆಗಳು', ಜಿ.ಟಿ.ನಾರಾಯಣರಾವ್‌ರವರ 'ವಿಜ್ಞಾನದ ಭಾಷೆ' ಮೊದಲಾದ ವಿಚಾರಗಳು ವಿಜ್ಞಾನ

ಸಾಹಿತ್ಯಕ್ಕೆ ಸಂಬಂಧಿಸಿದುದಾಗಿದ್ದು, ಸಂಶೋಧನೆಗೆ ಅಗತ್ಯ ಪೂರಕವಾದ ಮಾಹಿತಿಯನ್ನು ನೀಡಿವೆ.

'ವಿಜ್ಞಾನ ಪಠ್ಯಪುಸ್ತಕಗಳು' ಎಂಬ ಲೇಖನದಲ್ಲಿ ಜೆ.ಆರ್ ಲಕ್ಷ್ಮಣರಾವ್‌ರವರು ಕನ್ನಡ ಭಾಷೆಯಲ್ಲಿ ಪಠ್ಯಪುಸ್ತಕಗಳ ರಚನೆಯು ಕಡಿಮೆಯಿರುವುದರಿಂದಾಗಿ ಮಾಹಿತಿ ಸಂಗ್ರಹ, ವಿಚಾರ ವಿನಿಮಯಕ್ಕಾಗಿ ಅನ್ಯಭಾಷೆಯ, ಅಂದರೆ ವಿಪುಲವಾಗಿ ವಿಜ್ಞಾನ ಸಾಹಿತ್ಯವನ್ನು ಹೊಂದಿರುವ ಇಂಗ್ಲೀಷ್ ಪಠ್ಯಪುಸ್ತಕಗಳ ಮೊರೆ ಹೋಗುವುದರ ಬಗ್ಗೆ ಬೇಸರ ವ್ಯಕ್ತಪಡಿಸಿದ್ದಾರೆ. ವಿದ್ಯಾರ್ಥಿಗಳಿಗೆ, ಸಂಶೋಧಕರಿಗೆ, ಅಧ್ಯಾಪಕರಿಗೆ, ವಿಜ್ಞಾನಿಗಳಿಗೆ ಬೇಕಾಗುವ ಸಂಶೋಧನ ಪ್ರಬಂಧಗಳು, ವರದಿಗಳು, ಶಬ್ದಕೋಶಗಳು, ವಿಶ್ವಕೋಶಗಳು, ಪ್ರಕರಣಗ್ರಂಥ, ಏಕಪ್ರಬಂಧ ಮೊದಲಾದವುಗಳ ಅಧ್ಯಯನವು ಎದುರಿಸುತ್ತಿರುವ ಪಾರಿಭಾಷಿಕ ಶಬ್ದಗಳ ಸಮಸ್ಯೆಯನ್ನು ಪಠ್ಯಪುಸ್ತಕಗಳ ಮತ್ತು ಅನುವಾದಿತ ಪಠ್ಯಪುಸ್ತಕಗಳ ಅಧ್ಯಯನದಲ್ಲಿ ತೊಡಗಿರುವವರು ಸಹ ಎದುರಿಸುತ್ತಿದ್ದಾರೆ ಎಂದು ಹೇಳಲಾಗಿದೆ. ಅಲ್ಲದೆ ಲೇಖನದ ಕೊನೆಯಲ್ಲಿ "ಕನ್ನಡ ಭಾಷೆ ಬಳಸುವವರೆಲ್ಲರೂ ಒಂದೇ ಪಾರಿಭಾಷೆ ಉಪಯೋಗಿಸುವುದು ಅಗತ್ಯ ಎಂದು ಇದಕ್ಕೆ ಕನ್ನಡ ನಾಡಿನ ಬೇರೆ ಬೇರೆ ಪ್ರದೇಶದವರು, ಬೇರೆ ಬೇರೆ ವಿಶ್ವವಿದ್ಯಾನಿಲಯಗಳವರು, ಶಿಕ್ಷಣ ಇಲಾಖೆಯವರು ಎಲ್ಲರೂ ಮನ್ನಣೆ ನೀಡಬೇಕು"[೧೨] ಎಂದು ಹೇಳುವುದರ ಮೂಲಕ ಪರಿಹಾರವನ್ನು ಸೂಚಿಸಿರುವುದು, ವಿಜ್ಞಾನ ಸಾಹಿತ್ಯದ ಅಭಿವ್ಯಕ್ತಿಯಲ್ಲಿನ ಸಮಸ್ಯೆ ಸವಾಲುಗಳ ಬಗ್ಗೆ ಮಾಹಿತಿ ನೀಡಿದ್ದು, ಅಧ್ಯಯನಕ್ಕೆ ಸಹಕಾರಿಯಾಗಿದೆ.

ಕನ್ನಡ ಮಾಧ್ಯಮದಲ್ಲಿ ವಿಜ್ಞಾನವನ್ನು ಬೋಧಿಸುವಾಗ ಎದುರಾಗುವ ಸಮಸ್ಯೆಗಳನ್ನು ಕೆ.ಶ್ರೀನಿವಾಸನ್ ರವರು ಚರ್ಚಿಸುತ್ತಾ ಪಾರಿಭಾಷಿಕ ಪದಗಳ ಕೊರತೆ ಹಾಗೂ ಕನ್ನಡ ವಿಜ್ಞಾನ ಸಾಹಿತ್ಯ ನಿರ್ಮಾಣಕ್ಕೆ ಅಗತ್ಯವಾದ ಭಾಷಾ ಸಾಮಗ್ರಿ ಸಾಧನಗಳ ಕೊರತೆಯನ್ನು ತಿಳಿಸಿದ್ದಾರೆ. ಪಾರಿಭಾಷಿಕ ಪದಗಳ ಕೊರತೆಯಿಂದಾಗಿ ವಿಜ್ಞಾನ ಸಾಹಿತ್ಯಕ್ಕೆ ತಕ್ಕಂತೆ ಕನ್ನಡ ಭಾಷೆ ಇನ್ನೂ ಸಿದ್ದಿಸಿಲ್ಲ. ವಿಜ್ಞಾನ ಸಾಹಿತ್ಯದ ವಿವಿಧ ವಿಭಾಗಗಳಿಗೆ ಸಂಬಂಧಿಸಿದ ಸಾಹಿತ್ಯ ಬೆಳೆದು, ಅವುಗಳಿಗೆ ಸರಿಹೊಂದುವ ಭಾಷೆ ರೂಪಿಸುವ ಕಾರ್ಯ ತ್ವರಿತವಾಗಿ ಸಾಗಬೇಕು ಎಂದು ತಿಳಿಸಿರುವುದನ್ನು ಗಮನಿಸಬಹುದು. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ನಿರ್ಮಾಣವು ಕ್ರಮ (metter) ಹಾಗೂ ವಿಷಯ (matter)ಕ್ಕೆ ಸಂಬಂಧಿಸಿದಂತೆ ಸಮಸ್ಯೆಯಿಂದ ಕೂಡಿದೆ ಎಂಬುದನ್ನು ಸೋದಾಹರಣೆಯ ಮೂಲಕ ತಿಳಿಸಿರುವುದು ವಿಜ್ಞಾನ ಸಾಹಿತ್ಯ ನಿರ್ಮಾಣಕಾರರಿಗೆ ಕೈದೀವಿಗೆಯಂತಿದೆ.

ಅನುಭವವನ್ನು ಭಾವನೆಯ ಮೂಲಕ ವ್ಯಕ್ತ ಪಡಿಸುವ ಮಾಧ್ಯಮವಾದ ಭಾಷೆಯು ವಿಜ್ಞಾನ ಸಾಹಿತ್ಯದ ಒಂದು ತೊಡಕಾಗಿರುವುದನ್ನು ಜಿ.ಟಿ ನಾರಾಯಣರಾಯರು ಹಲವಾರು ಅಂಶಗಳ ಮೂಲಕ ತಿಳಿಸಿರುವುದು ಮುಖ್ಯವಾಗಿದ್ದು, ಅಧ್ಯಯನಕ್ಕೆ ಪೂರಕ ಮಾಹಿತಿಯನ್ನು ಒದಗಿಸುತ್ತಿದೆ. ವಿಜ್ಞಾನ ಭಾಷೆಯ ಲಕ್ಷಣಗಳು, ಪಾರಿಭಾಷಿಕ ಶಬ್ದಗಳ ಆಯ್ಕೆಯಲ್ಲಿ ಗಮನಿಸುವ ಅಂಶಗಳು, ವಿಜ್ಞಾನ ಸಂಕೇತಗಳ ಬಳಕೆ, ಸ್ವಯಂವೇದ್ಯ ಸಂಗತಿಗಳು ಮತ್ತು ಆಧಾರ ಭಾವನೆಗಳು ಮೊದಲಾದವುಗಳನ್ನು ಚರ್ಚಿಸುವ ಮೂಲಕ ಪಾರಿಭಾಷಿಕ ಶಬ್ದಗಳೆಂಬ ಅಧಾರದಿಂದ ಸ್ವತಃಸ್ಸಿದ್ದಗಳ ತಳಹದಿಯೊಂದಿಗೆ ತಾರ್ಕಿಕವಾಗಿ ಸಮಂಜಸವಾಗಿ, ಸಾಹಿತ್ಯ ಸೌಂದರ್ಯದಿಂದ ಕೂಡಿದ ಒಂದು ಭಾಷೆ ವಿಜ್ಞಾನಕ್ಕಿದೆ ಎಂದು ಹೇಳಿರುವುದು ಅಧ್ಯಯನಕ್ಕೆ ಪೂರಕವಾದ ಮಾಹಿತಿಯನ್ನು ನೀಡುವುದರೊಂದಿಗೆ, ವಿಜ್ಞಾನ ಸಾಹಿತ್ಯದ ರಚನೆಗೂ ಇತರ ಸಾಹಿತ್ಯದಂತೆ ಒಂದು ಪ್ರತ್ಯೇಕ ಭಾಷೆಯಿದೆ ಎಂಬುದು ಗಮನ ಸೆಳೆಯುತ್ತದೆ.

೨.೩. ಪತ್ರಿಕಾ ಪ್ರಕಟಣೆಗಳು:

೨.೩.೧. ಪ್ರಜಾವಾಣಿ.

೨.೩.೨ ವಿಜಯ ಕರ್ನಾಟಕ.

ಅಧ್ಯಯನದ ಸಮೀಕ್ಷೆಗೆ ಸಂಬಂಧಿಸಿದಂತೆ ದಿನಪತ್ರಿಕೆಗಳಲ್ಲಿ ಪ್ರಕಟಗೊಂಡ ಮಾಹಿತಿಗಳು.

೨.೩.೧. ಪ್ರಜಾವಾಣಿ

ವಿಜ್ಞಾನ, ಬರಹ ಸಾಹಿತ್ಯವಲ್ಲವೇ? ಬಿಂಡಿಗನವಿಲೆ ಭಗವಾನ್ ೨೦ Mar, ೨೦೧೫ [೧೩]

ವಿಜ್ಞಾನ, ತಂತ್ರಜ್ಞಾನಗಳ ಬೆಳವಣಿಗೆಗಳನ್ನು ಆಗಿಂದಾಗ್ಗೆ ಕನ್ನಡಕ್ಕೆ ತರಬಹುದು. ಕನ್ನಡ ಅಷ್ಟು ಸಶಕ್ತವಾಗಿದೆ. ವಿಜ್ಞಾನ, ಸಾಹಿತ್ಯ ಮತ್ತು ಅದನ್ನು ರಚಿಸುವ ಸಾಹಿತಿಗಳ ಬಗ್ಗೆ ಮಲತಾಯಿ ಧೋರಣೆ ಮುಂದುವರಿದಿದೆ. ಇತರ ಸಾಹಿತ್ಯದಂತೆ ವಿಜ್ಞಾನ ಸಾಹಿತ್ಯಕ್ಕೆ ಮತ್ತು ವಿಜ್ಞಾನ ಸಾಹಿತಿಗಳಿಗೆ ದೊರೆಯುತ್ತಿರುವ ಮಾನ್ಯತೆಯು ಬಹಳ ಕಡಿಮೆ ಎಂದು ಹೇಳಿರುವುದನ್ನು ಗಮನಿಸಬಹುದು.

ಮುಂದುವರಿದು ಇತರ ದೇಶದವರೊಂದಿಗೆ ಹೋಲಿಕೆ ಮಾಡುವ ಮೂಲಕ ವಿಜ್ಞಾನ ಸಾಹಿತ್ಯಕ್ಕೆ ನಮ್ಮಲ್ಲಿ ಮಾನ್ಯತೆಯು ಕಡಿಮೆ ಎಂಬುದನ್ನು ತಿಳಿಸಿದ್ದಾರೆ. ಅಂದರೆ ರಷ್ಯ, ಅಮೆರಿಕದ ವಿಜ್ಞಾನ ಸಾಹಿತಿ ಐಸಾಕ್ ಅಸಿಮೊವ್ (೧೯೨೦–೧೯೯೨) ಅವರಿಗೆ

ದೊರೆತ ಮಾನ್ಯತೆ ಅನನ್ಯ. ಮಾತೃಭಾಷೆ ರಷ್ಯನ್‌ನಲ್ಲಿ ಯೋಚಿಸಿ ಬರೆದಿದ್ದೇ ಅವರ ಅಪಾರ ಯಶಸ್ಸಿನ ಗುಟ್ಟು. ಫ್ರಾನ್ಸ್ ದೇಶಕ್ಕೆ ಒಲಿದಂತಹ ಗಣಿತ ಜ್ಞಾನ ಅದ್ಭುತ. ಅಲ್ಲಿನ ಗಣಿತಮತಿಗಳು ಕೇವಲ ಇನ್ನೂರು ಮೈಲಿಗಳ ದೂರದಲ್ಲಿರುವ ಇಂಗ್ಲೆಂಡಿನ ಇಂಗ್ಲಿಷಿಗೆ ಜೋತುಬೀಳದೆ ತಮ್ಮ ಭಾಷೆ ಫ್ರೆಂಚ್‌ನಲ್ಲೇ ಆಲೋಚಿಸಿದರು. ಅಂತೆಯೇ ತಮ್ಮ ಮಾತೃಭಾಷೆಯಲ್ಲಿ ಅಂದರೆ ಕನ್ನಡದಲ್ಲೇ ಯೋಚಿಸಿ ಕನ್ನಡದಲ್ಲಿ ವಿಜ್ಞಾನ ಬರೆದಾಗ ಸಾಹಿತ್ಯ ಸಂವಹನಶೀಲವಾಗುತ್ತದೆ ಎಂದು ಹೇಳುವುದರೊಂದಿಗೆ ವಿಮರ್ಶಾ ವಲಯ ಕಡೆಗಣಿಸಿದೆ ಎಂದು ಹೇಳಿದ್ದಾರೆ.

ಹಿರಿಯ ವಿಜ್ಞಾನ ಲೇಖಕ, ಜೆ.ಆರ್.ಲಕ್ಷ್ಮಣರಾವ್ ತಮ್ಮ ಇಳಿವಯಸ್ಸಿನಲ್ಲೂ ವಿಜ್ಞಾನ ಬರವಣಿಗೆ ಮುಂದುವರಿಸಿದ್ದಾರೆ ಎಂದು ಹೇಳುತ್ತಾ ಜೊತೆಗೆ ಯುವ ಲೇಖಕರನ್ನು ವಿಜ್ಞಾನ ಲೇಖನ ಸಾಹಿತ್ಯದತ್ತ ಹೊರಳುವಂತೆ ಉತ್ತೇಜಿಸುತ್ತಿರುವುದನ್ನು ತಿಳಿಸಲಾಗಿದೆ. ಅವರು ಪೋಷಿಸಿದ ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್, ಜನಸಾಮಾನ್ಯರಿಗೆ ವಿಜ್ಞಾನವನ್ನು ತಲುಪಿಸುವ ಕೈಂಕರ್ಯದಲ್ಲಿ ಬಹುಮುಖದ ಸೇವೆ ಸಲ್ಲಿಸುತ್ತಿದೆ. ವಿಜ್ಞಾನವನ್ನು ಹೇಗೆ ಕನ್ನಡಕ್ಕೆ ತರಬೇಕೆಂಬ ನಿಟ್ಟಿನಲ್ಲಿ ಬಹು ಉಪಯುಕ್ತವಾದ ಒಂದು ನಿಘಂಟನ್ನು 'ಕರ್ನಾಟಕ ವಿಜ್ಞಾನ ಪರಿಷತ್ತು' ಹೊರತಂದಿದ್ದಲ್ಲದೆ 'ಬಾಲ ವಿಜ್ಞಾನ' ಎಂಬ ಮಾಸಿಕದಲ್ಲಿ ಯುವ ವಿಜ್ಞಾನಿ ಸಾಹಿತಿಗಳ ಬರಹಗಳನ್ನು ಪ್ರಕಟಿಸುವುದರೊಂದಿಗೆ ವಿಜ್ಞಾನ ಸಾಹಿತ್ಯದ ಬೆಳವಣಿಗೆಗೆ ತಮ್ಮದೇ ಆದ ಕೊಡುಗೆಯನ್ನು ನೀಡುತ್ತಿದೆ. ನವ ಕರ್ನಾಟಕ ಪ್ರಕಾಶನ ಒಂದು ದಿಟ್ಟ ಹೆಜ್ಜೆಯಿರಿಸಿ 'ವಿಜ್ಞಾನ-ತಂತ್ರಜ್ಞಾನ ಪದಸಂಪದ' ಹೊರತಂದಿರುವ ಬಗ್ಗೆ ತಿಳಿಸಲಾಗಿದೆ.

"ಗ್ರಹಣ ಮುಂತಾದ ಕೌತುಕ ವಿದ್ಯಮಾನಗಳನ್ನು ಆಸ್ವಾದಿಸದೆ ಮೂಢನಂಬಿಕೆಗಳಿಗೆ ಕಟ್ಟುಬಿದ್ದರೆ ನಾವು ಆದಿಮಾನವರಿಗಿಂತ ಹೇಗೆ ಭಿನ್ನ?" ಎಂದು ಎಚ್. ನರಸಿಂಹಯ್ಯ ಅವರು ಹೇಳುವಲ್ಲಿ ವೈಜ್ಞಾನಿಕ ಚಿಂತನೆ ಮತ್ತು ನಂಬಿಕೆಯ ಪ್ರಭಾವವು ಅರಿವಿಗೆ ಬರುತ್ತದೆ. ಅಲ್ಲದೆ, ಔಪಚಾರಿಕ ಶಿಕ್ಷಣದಿಂದಷ್ಟೇ ವಿಜ್ಞಾನದ ಅರಿವು ಮೂಡದು. ಏಕೆಂದರೆ ವಿದ್ಯಾರ್ಥಿ ದಿಸೆಯಲ್ಲಿ ಪರೀಕ್ಷೆ ಎದುರಿಸಲು ಬಹುತೇಕರದು ಉರು ಹೊಡೆಯುವಿಕೆ ಇಲ್ಲವೇ ನೆನಪಿನ ಶಕ್ತಿಯ ಮೇಲಿನ ಅವಲಂಬನೆ! ವಿಶೇಷವಾಗಿ ವಿಜ್ಞಾನ ಕಲಿಕೆಗೆ ಗಿಳಿಪಾಠ ಮಾರಕ. ಬದಲಿಗೆ ಪರಿಕಲ್ಪನೆಗಳನ್ನು ತಲಸ್ಪರ್ಶಿಯಾಗಿ ಗ್ರಹಿಸುವುದು ಮುಖ್ಯವಾಗುತ್ತದೆ ಎಂದು ಹೇಳಿದ್ದಾರೆ.

ಕನ್ನಡ ಪುಸ್ತಕ ಪಾಧಿಕಾರಕ್ಕೆ, ಕನ್ನಡ ಅಭಿವೃದ್ಧಿ ಪ್ರಾಧಿಕಾರಕ್ಕೆ ನುರಿತ ವಿಜ್ಞಾನ ಲೇಖಕರು ಸಾರಥಿಗಳಾಗಬಹುದಲ್ಲ ಎನ್ನುವ ಆಲೋಚನೆ ಈವರೆಗೆ ಬಂದಿಲ್ಲ. 'ಕುವೆಂಪು ಭಾಷಾ ಭಾರತಿ'ಯನ್ನು ವಿಜ್ಞಾನ ಸಾಹಿತ್ಯ ರಚನಾಕಾರರು ಸಮರ್ಥವಾಗಿಯೇ

ಮುನ್ನಡೆಸಿಯಾರು. "ವಿಜ್ಞಾನ ಪರಿಣತರೆಲ್ಲ ಬರೆಯುವವರಲ್ಲ. ಅವರಲ್ಲಿ ಕೆಲವರಷ್ಟೇ ತಮಗೆ ತಿಳಿದಿರುವುದು ಎಲ್ಲರಿಗೂ ತಿಳಿಯಲಿ ಎಂಬ ಕಾಳಜಿ ಹೊಂದಿರುತ್ತಾರೆ". ಎಂದು ಲೇಖಕರು ಹೇಳುವಲ್ಲಿ ವಿಜ್ಞಾನ ಸಾಹಿತ್ಯದ ಮಹತ್ವವೂ ಎದ್ದು ಕಾಣುವುದು. ಜೊತೆಗೆ ಕನ್ನಡಲದಲಿ ಸುಲಲಿತವಾಗಿ ಬರೆಯುವ ವೈದ್ಯ ವಿಜ್ಞಾನ ಲೇಖಕರಿಂದ ಕೂಡಿದ ಸಾಹಿತ್ಯವು ಇದೆ ಎಂದು ಹೇಳಿರುವುದನ್ನು ಗಮನಿಸಲಾಯಿತು.

ಗಾಯನದ ಜ್ಞಾನ ವಿಜ್ಞಾನ – ಪ್ರಜಾವಾಣಿ – ಮೆಟ್ರೊ– ಬೆಂಗಳೂರಿನ ಬಣ್ಣಗಳು – ೨೫.೧.೨೦೧೮[೧೪] ಎಂಬಲ್ಲಿ "ಗಾಯನದ ಜ್ಞಾನ, ಅದರ ಹಿಂದಿನ ವಿಜ್ಞಾನ, ಸಂಗೀತಶಾಸ್ತ್ರದ ಪರಿಚಯ ಮಾಡಿಕೊಡುತ್ತವೆ" ಎಂದು ತಮ್ಮ ಅಭಿವ್ಯಕ್ತಿಯನ್ನು ವ್ಯಕ್ತ ಪಡಿಸಿದ ಶ್ರೀ.ಪ್ರೊ.ಸುಚೇತನ ರಂಗಸ್ವಾಮಿರವರು ಸಂಗೀತ ಮತ್ತು ವಿಜ್ಞಾನ ಒಂದಕ್ಕೊಂದು ಸಂಬಂಧಿಸಿದುದಾಗಿದ್ದು, ವಿಜ್ಞಾನದ ಜ್ಞಾನದೊಂದಿಗೆ ಸಂಗೀತಜ್ಞಾನ ಸೇರಿದಾಗ ಗಾಯನ ಸುಗಮವಾಗಿ ನಡೆಯುತ್ತದೆ ಎಂಬುದು ಅರ್ಥಗರ್ಭಿತವಾಗಿದೆ. ಅಂದರೆ ಸಂಗೀತಜ್ಞಾನ ಮತ್ತು ವಿಜ್ಞಾನ ಎರಡರ ಸಾಮರಸ್ಯವನ್ನು ಸಂಗೀತಶಾಸ್ತ್ರವು ಒಳಗೊಂಡಿರುತ್ತದೆ ಎಂದು ಹೇಳಿರುವಲ್ಲಿ ವಿಜ್ಞಾನವು ಸಂಗೀತದಲ್ಲೂ ತನ್ನ ವ್ಯಾಪ್ತಿಯನ್ನು ಹೊಂದಿದೆ ಎಂಬುದರ ಸೂಚಕವಾಗಿದೆ. ಇದರಿಂದ ವಿಜ್ಞಾನವು ವ್ಯಾಪಿಸದ ಕ್ಷೇತ್ರವಿಲ್ಲ ಎಂಬುದು ನಮ್ಮ ಅರಿವಿಗೆ ಬರುತ್ತದೆ.

೨.೩.೨ ವಿಜಯ ಕರ್ನಾಟಕ

ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ಸಮಾಗಮ[೧೫] ದೊಡ್ಡಬಳ್ಳಾಪುರದ ನಳಂದ ಪ್ರೌಢಶಾಲೆಯಲ್ಲಿ ಕನ್ನಡ ಜಾಗೃತ ಪರಿಷತ್ ವತಿಯಿಂದ ೬೦ನೇ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ನಡೆದ ಸಾಹಿತ್ಯ–ಸಂಸ್ಕೃತಿ–ವಿಜ್ಞಾನ ಸಮಾಗಮ ೨೦೧೫ರ ಉದ್ಘಾಟನಾ ಕಾರ್ಯಕ್ರಮದಲ್ಲಿ ಮಾತನಾಡಿದ ವಿಜ್ಞಾನಿ ಬರಹಗಾರ ಡಾ.ಎ.ಓ ಆವಲಮೂರ್ತಿರವರು "ವಿಜ್ಞಾನ ಎನ್ನುವುದು ಪುಸ್ತಕದಲ್ಲಿರುವ ಹತ್ತು ಪ್ರಶ್ನೆಗಳಿಗೆ ಉತ್ತರ ಕಂಡುಕೊಂಡು ಬರೆಯುವುದಲ್ಲ, ಸಮಸ್ಯೆಗೆ ಪರಿಹಾರ ಕಂಡು ಕೊಳ್ಳುವ ಸಾಮರ್ಥ್ಯ ಬೆಳೆಸಿಕೊಳ್ಳುವುದು ಬಹಳ ಮುಖ್ಯ" ಎಂದು ಹೇಳುವ ಮೂಲಕ ವಿಜ್ಞಾನ ಎಂದರೇನು ಹಾಗೂ ವಿಜ್ಞಾನ ಬರಹದ ಮೂಲ ಉದ್ದೇಶ ಏನು ಅದನ್ನು ಹೇಗೆ ಅರ್ಥೈಸಿಕೊಳ್ಳಬೇಕು ಎಂದು ಹೇಳಿರುವುದನ್ನು ಗಮನಿಸಬಹುದು.

ಜನಪದ ವೈದ್ಯ ಪದ್ಧತಿ ವಿಜ್ಞಾನವೆಂದು ಪರಿಗಣಿಸಿ[೧೬] ಉಡುಪಿಯ ಕುತ್ವಾಡಿಯ ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಆಯುರ್ವೇದ ಕಾಲೇಜಿನಲ್ಲಿ ೫ನೇ ರಾಷ್ಟ್ರೀಯ ಆಯುರ್ವೇದ ದಿನಾಚರಣೆ ಕಾರ್ಯಕ್ರಮದಲ್ಲಿ ಜನಪದ ವೈದ್ಯ ಸಿರಿ–೨೦೨೦ ಪ್ರಶಸ್ತಿ ಸ್ವೀಕರಿಸಿದ ಉತ್ತರ ಕನ್ನಡ ಜಿಲ್ಲೆಯ ಗೋಕರ್ಣ ಅಶೋಕವನದ ವೈದ್ಯ ವೇದಾಶ್ರಮ

ಶರ್ಮಾರವರು, ಶಿಕ್ಷಣ ಹಾಗೂ ಪಥ್ಯದ ಅಭಾವದಿಂದಾಗಿ ಜನಪದ ವೈದ್ಯ ಪದ್ಧತಿ ಜನರಿಂದ ದೂರವಾಗುತ್ತಿದೆ. ಹೀಗಾಗಿ ಜನಪದ ವೈದ್ಯ ಪದ್ಧತಿಯನ್ನು ವಿಜ್ಞಾನವೆಂದು ಪರಿಗಣಿಸುವಂತಾದರೆ ಅದಕ್ಕೆ ಜನರಿಂದ ಮನ್ನಣೆ ಸಿಗುತ್ತದೆ ಹಾಗೂ ಅದರ ಅಭಿವೃದ್ಧಿಯು ಸಾಧ್ಯ ಎಂದು ಹೇಳಿದ್ದಾರೆ. ಈ ಮಾಹಿತಿಯು ವಿಜ್ಞಾನ ಸಾಹಿತ್ಯ ಅಭಿವ್ಯಕ್ತಿಯನ್ನು ಸೂಚಿಸುವಂತಿರುವುದು ಒಳ್ಳೆಯ ಮಾತಾಗಿದ್ದು ಅಧ್ಯಯನಕ್ಕೆ ಪೂರಕವಾಗಿರುವುದನ್ನು ಕಂಡುಕೊಳ್ಳಲಾಯಿತು.

ಬಿಡಿ ಪರಿಭಾಷೆ, ಸರಳವಿರಲಿ ಭಾಷೆ [೧೭]. ವಿಜಯ ಕರ್ನಾಟಕ ಪತ್ರಿಕೆಯ 'ಭವಿಷ್ಯಕ್ಕಾಗಿ ಕನ್ನಡ ಕಹಳೆ' ಎಂಬ ಅಭಿಯಾನದಲ್ಲಿ ಜನಪ್ರಿಯ ವಿಜ್ಞಾನ ಲೇಖಕರಾದ ಕೊಳ್ಳೇಗಾಲ ಶರ್ಮರವರು ಲೇಖನವನ್ನು ಬರೆದು ಅದರಲ್ಲಿ 'ವಿಜ್ಞಾನ ಸಾಹಿತ್ಯದ ಭಾಷೆಯು ಸರಳವಿದ್ದು, ಬಿಡಿ ಪರಿಭಾಷಿಕ ಶಬ್ದಗಳಿಂದ ಮುಕ್ತವಾಗಿರಬೇಕೆಂದು' ಹೇಳಿದರು. ವಿಜ್ಞಾನ ತಂತ್ರಜ್ಞಾನದಲ್ಲಿನ ಮಾಹಿತಿಯು ಎಲ್ಲರಿಗೂ ಸಿಗುವಂತಾಗುವಲ್ಲಿ ವಿಚಾರಗಳು ಅನುಭವಕ್ಕೆ ಬರುವಂತಿರಬೇಕು. ಅಲ್ಲದೇ ಪರಿಭಾಷೆಯನ್ನು ಕಟ್ಟುವ ಕೆಲಸವು ವ್ಯವಸ್ಥಿತವಾಗಿ ಅನುವಾದವು ಹೆಚ್ಚಾಗಬೇಕು. ವಿಜ್ಞಾನ ವಿಷಯವು ವಾಕ್ಯದಲ್ಲಿ ಸರಳವಾಗಿ ವಿವರಿಸುವುದರತ್ತ ಗಮನ ಹರಿಸಿದಾಗ ಮಾಹಿತಿಯು ಜನಸಾಮಾನ್ಯರಿಗೂ ಸಿಗುತ್ತದೆ ಎಂದು ಹೇಳಿರುವುದು ವಿಜ್ಞಾನ ಸಾಹಿತ್ಯದ ಅಭಿವ್ಯಕ್ತಿಯನ್ನು ತಿಳಿಸುತ್ತದೆ.

೨.೪. ಅಂತರ್ಜಾಲ ಮಾಹಿತಿ

ಅಧ್ಯಯನದ ಸಮೀಕ್ಷೆಗೆ ಸಂಬಂಧಿಸಿದಂತೆ ಅಂತರ್ ಜಾಲ ಮಾಹಿತಿ

೨.೪.೧ ಕನ್ನಡದಲ್ಲಿನ ವಿಜ್ಞಾನ ಬರಹ: ಹಳಿತಪ್ಪಿದ ರೈಲು![೧೮] ಕನ್ನಡದಲ್ಲಿ ವಿಜ್ಞಾನ ಬರಹದ ಮೂರು ಪುಸ್ತಕಗಳನ್ನು ಬಿಡುಗಡೆ ಮಾಡಿದ ಸಂದರ್ಭದಲ್ಲಿ ಟಿ.ಆರ್ ಅನಂತರಾಮುರವರು ಕನ್ನಡದಲ್ಲಿ ವಿಜ್ಞಾನದ ಬರಹಗಳ ಕೊರತೆಗೆ ಕಾರಣಗಳನ್ನು ಹತಾಶೆಯ ಮಾತುಗಳೊಂದಿಗೆ ಹೇಳಿದರು. ಕನ್ನಡದಲ್ಲಿನ ವಿಜ್ಞಾನ ಬರಹಗಳು ಕನ್ನಡದಲ್ಲಿ ಹೆಚ್ಚು ಹೆಚ್ಚು ತಲುಪಬೇಕಾದರೆ, "ಕನ್ನಡದಲ್ಲಿ ಬರೆಯಬೇಕೆ ವಿನಃ ಸಂಸ್ಕೃತದಲ್ಲಿ ಬರೆಯಬಾರದು. ಬರಹಗಳು ಕನ್ನಡಿಗರನ್ನು ಮುಟ್ಟುತ್ತಿಲ್ಲ ಎಂದು ಕೊರಗಿದರೆ ಆಗದು. ನಾವಿಂದು ವಿಫಲವಾಗಲು ಇರುವ ನಿಜವಾದ ಕಾರಣಗಳನ್ನು ಗುರುತಿಸಿ ಸರಿಯಾದ ದಾರಿಗೆ ಇನ್ನಾದರು ಮರಳಬೇಕಿದೆ ಎಂದು ಹೇಳಲಾಗಿದೆ. ಲೇಖಕರು ವಿಜ್ಞಾನ ಸಾಹಿತ್ಯದ ಜನಪ್ರಿಯತೆಗೆ ಭಾಷೆ ಹಾಗೂ ಜನರಿಗೆ ವಿಜ್ಞಾನ ವಿಷಯ ವಿಚಾರವು ತಲುಪದಿಲು ಕಾರಣ ಅತಿ ಹೆಚ್ಚು ಸಂಸ್ಕೃತ ಪದಗಳಿಂದ ಕೂಡಿದ ಅಭಿವ್ಯಕ್ತಿಯ ಬಗ್ಗೆ ತಿಳಿಸಿರುವುದು ಮುಖ್ಯವಾಗಿರುವುದನ್ನು ಗಮನಿಸಲಾಯಿತು.

೨.೪.೨ ರಸಮಯ ವಿಜ್ಞಾನ ಬರಹಗಳು: ಎಸ್.ವಿ ಶ್ರೀನಾಥ್ [೧೯] ಬದುಕಿನ ಅವಿಭಾಜ್ಯ ಅಂಗವಾದ ವಿಜ್ಞಾನದಲ್ಲಿ ಬಹಳಷ್ಟು ಆವಿಷ್ಕಾರಗಳು ನಡೆದಿದ್ದು, ನಮ್ಮ ಬದುಕಿಗೆ ಹೊಸ ದಿಕ್ಕನ್ನು ನೀಡುತ್ತಿದೆ. ಇದಕ್ಕೆ ವಿಜ್ಞಾನ ಸಾಹಿತ್ಯದ ಕೊಡುಗೆಯು ಅಪಾರವಾದುದು. ಆದರೆ ಇಂಗ್ಲೀಷ್ ನಲ್ಲಿರುವಷ್ಟು ವಿಜ್ಞಾನ ಪುಸ್ತಕಗಳು ಕನ್ನಡದಲ್ಲಿ ಇದ್ದರೂ ಜನಸಾಮಾನ್ಯರಿಗೆ ತಲುಪದಿರಲು ಕಠಿಣವಾದ ಕಾರಣ ಅದರ ಭಾಷೆ. ಜನಸಾಮಾನ್ಯರಿಗೆ ಅರ್ಥವಾಗುವಂತೆ ಬರೆಯುವತ್ತ ಗಮನ ಹರಿಸದಿರುವುದು. ಹೀಗಾಗಿ ಕನ್ನಡದಲ್ಲಿ ವಿಜ್ಞಾನದ ಕುರಿತು ಬರುತ್ತಿರುವ ಪುಸ್ತಕಗಳು, ಪತ್ರಿಕೆಗಳು ಪ್ರಕಟವಾಗುತ್ತಿರುವ ಲೇಖನಗಳು, ಅಂಕಣಗಳು ಬೆರಳೆಣಿಕೆಯಷ್ಟು ಮಂದಿಯನ್ನು ಮಾತ್ರ ತಲುಪುತ್ತಿವೆ ಎಂದು ಧಾರಾಳವಾಗಿ ಹೇಳಬಹುದು" ಎಂದು ಅಂಕಣಗಾರರು ಹೇಳಿರುವುದು ವಿಜ್ಞಾನ ಸಾಹಿತ್ಯದ ಅಭಿವ್ಯಕ್ತಿಯ ಸ್ವರೂಪವನ್ನು ತಿಳಿಸುತ್ತದೆ. ಶುಷ್ಕವಾದ ವೈಜ್ಞಾನಿಕ ಮಾಹಿತಿಯನ್ನು ಜನಸಾಮಾನ್ಯರಿಗೆ ಅರ್ಥವಾಗುವಂತೆ ಸರಳವಾದ ಭಾಷೆಯ ಮೂಲಕ ಸುಲಭಗ್ರಾಹ್ಯವಾಗುವಂತೆ ಬರೆದಾಗ ಮಾತ್ರ ಹೆಚ್ಚು ಜನರಿಗೆ ಮಾಹಿತಿಯು ತಲುಪುತ್ತದೆ. ಎಂದು ಹೇಳಿರುವಲ್ಲಿ ನಿರೂಪಣಾ ಭಾಷೆಯ ಪ್ರಾಮುಖ್ಯತೆಯು ಗೋಚರಿಸುವುದು.

೨.೪.೩ ವರದಿ: ಕನ್ನಡದಲ್ಲಿ ತಂತ್ರಜ್ಞಾನ, ವಿಜ್ಞಾನ, ಕೃಷಿ ಬರವಣಿಗೆ ಚರ್ಚೆ– ಓಂ ಪ್ರಕಾಶ್[೨೦]: ವಿಜ್ಞಾನ ಮತ್ತು ತಂತ್ರಜ್ಞಾನದ ಬಗೆಗಿನ ಹೊಸ ವಿಷಯಗಳನ್ನು ಜನರಿಗೆ ತಲುಪಿಸುವಲ್ಲಿ ಅನೇಕ ಮಂದಿ ಪ್ರಯತ್ನಿಸುತ್ತಿದ್ದು, ಬರೆದ ವಿಷಯಗಳನ್ನು ಸುಲಭಗೊಳಿಸುವ ವಿಚಾರ ಹಾಗೂ ವೈಜ್ಞಾನಿಕ ಬರವಣಿಗೆಯಿಂದ ದೂರ ಉಳಿದಿರೋ ವಿಚಾರವನ್ನು ಓಂ ಪ್ರಕಾಶ್ ರವರು ತಿಳಿಸುವುದರ ಜೊತೆಗೆ ಸಂಪದವು ಸೆಂಟರ್ ಫಾರ್ ಇಂಟರ್ನೆಟ್ ಮತ್ತು ಸೊಸೈಟಿ ಜೊತೆಗೂಡಿ ಆಯೋಜಿಸಿದ್ದ "ಕನ್ನಡದಲ್ಲಿ ತಂತ್ರಜ್ಞಾನ, ವಿಜ್ಞಾನ, ಕೃಷಿ ಬರವಣಿಗೆ" ಕುರಿತ ಚರ್ಚಾವೇದಿಕೆಯಲ್ಲಿ ವಿಚಾರ ವಿನಿಮಯ ಮಾಡಿಕೊಂಡುದರ ಬಗ್ಗೆ ತಿಳಿಸಿದ್ದಾರೆ.

೨.೪.೪ ಕನ್ನಡದಲ್ಲಿ ವೈಜ್ಞಾನಿಕ ಬರಹಗಳು ಕಡಿಮೆ[೨೧] ವಿಕಿ ಪಿಡಿಯಾಲ್ಲಿ ಡಾ.ಸಿ.ಪಿ. ರವಿಕುಮಾರ್‌ರವರ ಬದುಕು ಸಾಧನೆಯ ಬಗ್ಗೆ ವಿವರಿಸಿರುವಲ್ಲಿ ವಿಜ್ಞಾನ ಬರಹಗಳ ರಚನಾ ಕಾರ್ಯದ ಬಗ್ಗೆ ವಿಶಾದನೀಯ ವಿವರಣೆಯನ್ನು ನೀಡಿರುವುದನ್ನು ಗುರುತಿಸಲಾಯಿತು. ಅದರಲ್ಲಿ ಹೇಳಿರುವಂತೆ "ಕೇವಲ ಜನಪ್ರಿಯ ವಿಜ್ಞಾನದ ಸ್ತರದಲ್ಲಿ ಕೆಲಸ ಸಾಗುತ್ತಿದೆ. ಇಂಜಿನಿಯರಿಂಗ್, ಮೆಡಿಕಲ್ ಕಾಲೇಜುಗಳಲ್ಲಿ ಕನ್ನಡ ಬಳಸುವಂತೆ ಆಗಬೇಕು" ಎಂದಿರುವುದಲ್ಲಿ ಪ್ರಾದೇಶಿಕ ಭಾಷೆಯಾದ ಕನ್ನಡದಲ್ಲಿ ವೈಜ್ಞಾನಿಕ ವಿಚಾರವನ್ನೊಳಗೊಂಡ ಮಾಹಿತಿಯನ್ನು ಆರಂಭಿಸಬೇಕಾಗಿರುವುದನ್ನು ಗುರುತಿಸಲಾಯಿತು.

೨.೪.೫ ಇವತ್ತು ವಿಜ್ಞಾನವನ್ನ ಕನ್ನಡಕ್ಕೆ ತರದಿದ್ದರೆ ನಾವು ಬಿಟ್ಟುಹೋಗೋದು ಬರೀ ಸೊನ್ನೆ![೨೨] : ಕನ್ನಡ ನಾಡಿನ ಜನತೆಯ ನಿಜವಾದ ಏಳಿಗೆಯು ಕತೆ, ಕಾದಂಬರಿ ನಾಟಕ ಕವಿತೆಗಳ ಜ್ಞಾನದ ಜೊತೆಗೆ ವಿಜ್ಞಾನ ತಂತ್ರಜ್ಞಾನದ ಜ್ಞಾನವು ಬಹು ಅತ್ಯಗತ್ಯವಾಗಿದ್ದು, ಕನ್ನಡದಲ್ಲಿ ವಿಜ್ಞಾನ ತಂತ್ರಜ್ಞಾನದ ಮಾಹಿತಿಯು ಎಲ್ಲರಿಗೂ ದೊರೆಯುವಂತಾಗಬೇಕು ಎಂದು ಹೇಳುತ್ತಾ ವಿಜ್ಞಾನ ತಂತ್ರಜ್ಞಾನ ಅಂದರೆ ಇಂಗ್ಲೀಷ ಭಾಷೆಗೆ ಮಾತ್ರ ಸೀಮಿತ ಎಂಬ ತಪ್ಪು ತಿಳುವಳಿಕೆಯನ್ನು ಬಿಡಬೇಕು. ವಿಜ್ಞಾನ ತಂತ್ರಜ್ಞಾನದ ಹೊಸ ಹೊಸ ಸಂಶೋಧನೆ ಆವಿಷ್ಕಾರಗಳ ಮಾಹಿತಿಯು ಕನ್ನಡದಲ್ಲಿ ಬರಬೇಕು.

ನಮ್ಮ ಪೂರ್ವಜರ ವಿಜ್ಞಾನ ತಂತ್ರಜ್ಞಾನದ ಜ್ಞಾನದಿಂದಾಗಿಯೇ ಇಂದು ಹಳೆಬೀಡು ಬೇಲೂರು, ಹಂಪೆ ಮೊದಲಾದ ಸ್ಥಳಗಳಲ್ಲಿನ ವಾಸ್ತುಶಿಲ್ಪಗಳು ಹಾಗೂ ಸ್ಥಳಗಳು ವಿಶ್ವವಿಖ್ಯಾತಿಯ ಮನ್ನಣೆ ಗಳಿಸಿದೆ ಎಂದು ಅಂಕಣಕಾರರು ಹೇಳುತ್ತಾ "ನಿಜಕ್ಕೂ ಒಂದು ದೊಡ್ಡ ಸೊನ್ನೆಯೇ ನಮ್ಮ ಹಿಂದಿನವರು ನಮಗೆ ಬಿಟ್ಟು ಹೋಗುತ್ತಿದ್ದರು. ಇನ್ನು ಮುಂದೆಯೂ ನಾವೇನಾದರೂ ಕನ್ನಡದಲ್ಲಿ ವಿಜ್ಞಾನ-ತಂತಜ್ಞಾನಗಳನ್ನ ಕನ್ನಡದಲ್ಲಿ ತರದೇ ಹೋದರೆ, ಕರ್ನಾಟಕದ ಮೂಲೆಮೂಲೆಗಳಲ್ಲಿನ ಪ್ರತಿಭೆಯನ್ನು ಇಂಗ್ಲೀಷೆಂಬ ಕತ್ತಿಯಿಂದ ಮೊಗ್ಗಾಗಿರುವಾಗಲೇ ಕೊಲ್ಲುವುದನ್ನು ನಿಲ್ಲಿಸದೇ ಹೋದರೆ ಇವತ್ತಿಂದ ೩೦೦-೪೦೦ ವರ್ಷ ಆದಮೇಲೆ ನಾವು ಯಾವ ಅದ್ಭುತ ಸಾಧನೆಗಳನ್ನ ಕನ್ನಡ ವಂಶದಲ್ಲಿ ಹುಟ್ಟಿದೋರಿಗೆ ಬಿಟ್ಟು ಹೋಗ್ತೀವಿ ಗೊತ್ತಾ? ಬರೀ ಒಂದು ದೊಡ್ಡ ಸೊನ್ನೆ!" ಎಂದು ಹೇಳಿರುವಲ್ಲಿ ವಿಜ್ಞಾನ ಸಾಹಿತ್ಯದ ಮಹತ್ವವು ಎದ್ದು ಕಾಣುತ್ತದೆ.

೨.೪.೬ ಕನ್ನಡದಲ್ಲಿ ವಿಜ್ಞಾನ ಬರವಣಿಗೆಯ ಶೈಲಿ - ಟಿ ಎಸ್ ಗೋಪಾಲ್[೨೩]

ಎಲ್ಲರಿಗೂ ತಿಳಿದಂತೆ ವಿಜ್ಞಾನಲೋಕ ಎಂಬುದು ಅತಿ ವಿಶಾಲತೆಯಿಂದ ಕೂಡಿದುದು. ಇದರ ಸಕಲ ವಿಷಯಗಳ ವಿಚಾರಗಳ ಆಳವಿಸ್ತಾರಗಳನ್ನೂ ಸರಳ ಶೈಲಿಯಲ್ಲೇ ನಮಗೆ ತಲುಪಿಸುವುದು ಕಷ್ಟಸಾಧ್ಯ. ಇತರ ಸಾಹಿತ್ಯ ಪ್ರಕಾರಗಳಂತೆ ವಿಜ್ಞಾನದ ಪ್ರಕಾರಗಳಾದ ಜೀವಶಾಸ್ತ್ರ, ಮನಃಶಾಸ್ತ್ರ, ಪರಿಸರ ಮೊದಲಾದವುಗಳಿಗೆ ಸಂಬಂಧಿಸಿದ ಗ್ರಂಥಗಳೂ ಲೇಖನಗಳೂ ಓದುಗನನ್ನು ಆಕರ್ಷಿಸುವಷ್ಟು ಸುಲಭವಾಗಿ ಇಂಜಿನಿಯರಿಂಗ್ ಮತ್ತಿತರ ತಾಂತ್ರಿಕ ವಿಷಯದ ಬರಹ ತಲುಪಲಾರದು. ಇದಕ್ಕೆ ಕಾರಣ ಅವುಗಳ ಬರವಣಿಗೆಯ ಶೈಲಿ. ಎಂದು ಟಿ.ಎಸ್ ಗೋಪಾಲ್ ರವರು ಹೇಳುತ್ತಾ, ವಿಜ್ಞಾನ ಸಾಹಿತ್ಯವು ತನ್ನದೇ ಆದ ವಿಶೇಷ ಮಹತ್ವವನ್ನು ಹೊಂದಿದೆ ಎಂದು ಹೇಳಿದ್ದಾರೆ.

ಜಟಿಲವೂ, ಅಪರಿಚಿತವೂ, ಗಂಭೀರವೂ ಆದ ವಿಜ್ಞಾನ ವಿಷಯವನ್ನು ಆದಷ್ಟೂ ಸರಳ ಆಕರ್ಷಕ ಶೈಲಿಯ ನಿರೂಪಣೆಯ ಮೂಲಕ ಜನಸಾಮಾನ್ಯರಿಗೆ ತಲುಪಿಸಬೇಕಾಗುತ್ತದೆ

ಎಂದು ಹೇಳುತ್ತಾ ಬಿ.ಜಿ ಎಲ್ ಸ್ವಾಮಿರವರ ನಿರೂಪಣಾ ಶೈಲಿ, ಹೆಚ್.ಆರ್. ಕೃಷ್ಣಮೂರ್ತಿರವರ ಬರವಣಿಗೆಯಲ್ಲಿನ ಖಚಿತತೆಯ ಜೊತೆಯಲ್ಲಿನ ನೇರ ಸರಳ ಶೈಲಿಮೊದಲಾದವರ ಅಭಿವ್ಯಕ್ತಿಯ ಸ್ವರೂಪವನ್ನು ತಿಳಿಸಿದ್ದಾರೆ. ಇದರೊಂದಿಗೆ ಓದುಗನಿಗೆ ತಿಳಿದಿರುವ ಕೆಲಸಂಗತಿಗಳನ್ನು ನೆನಪಿಸುತ್ತ ಲೇಖಕರು ನಿರೂಪಿಸಹೊರಟ ವೈಜ್ಞಾನಿಕ ಮಹತ್ವದ ಸಂಗತಿಯೆಡೆಗೆ ಆತನ ಗಮನಸೆಳೆಯುವ ತಂತ್ರವೂ ಬರಹಗಳಲ್ಲಿ ಎದ್ದುಕಾಣಬೇಕು ಎಂದು ಲೇಖಕರು ಹೇಳಿರುವುದು ವಿಜ್ಞಾನ ಸಾಹಿತ್ಯ ಹೇಗಿರಬೇಕೆಂಬುದನ್ನು ತಿಳಿಸುವಂತೆ ಮೂಡಿಬಂದಿರುವುದನ್ನು ಕಾಣಬಹುದು.

ಪತ್ರಿಕಾ ಕಾಲಮ್ಮಿನ ಅಳತೆ, ಪದಸಂಖ್ಯೆಗಳ ಮಿತಿಯಲ್ಲಿ ಓದುಗನ ಗಮನಸೆಳೆವ ಮೋಹಕ ಶೈಲಿಯನ್ನು ರೂಢಿಸಿಕೊಳ್ಳಲೇಬೇಕಾದ ಅನಿವಾರ್ಯತೆ ಇರುವುದರಿಂದ ಈ ಕಾಲಮ್ಮುಗಳು ವಿಜ್ಞಾನ ಬರಹದ ಶೈಲಿ, ಭಾಷೆಗಳನ್ನು ಆಕರ್ಷಕಗೊಳಿಸಿವೆ. ವಿಜ್ಞಾನವನ್ನು ನಮ್ಮ ಬದುಕಿಗೆ ಇನ್ನಷ್ಟು ಹತ್ತಿರವಾಗಿಸಿವೆ. ಬೆಳ್ಳಾವೆ ವೆಂಕಟನಾರಣಪ್ಪನವರಿಂದ ಮೊದಲುಗೊಂಡು ಜೆಆರ್ ಲಕ್ಷ್ಮಣರಾವ್, ಜಿಟಿ ನಾರಾಯಣರಾಯರಂತ ಪ್ರಯತ್ನಶೀಲರಿಂದ ಬೆಳೆದ ವಿಜ್ಞಾನಸಾಹಿತ್ಯ ಹೊಸರೂಪದಲ್ಲಿ ಸಮೃದ್ಧವಾಗಲು ಅವಕಾಶಗಳು ವಿಪುಲವಾಗಿವೆ. ಸಹೃದಯ ಓದುಗವೃಂದವೂ ಇದಕ್ಕೆ ತಕ್ಕಂತೆ ಪ್ರತಿಸ್ಪಂದಿಸುವರೆಂದು ಆಶಿಸೋಣ ಎಂದು ಬಯಸುವ ಆಶಾಭಾವನೆಯನ್ನು ವ್ಯಕ್ತಪಡಿಸಿದ್ದಾರೆ.

೨.೫ ಮೈಸೂರು ವಿಶ್ವವಿದ್ಯಾನಿಲಯ ವಿಶ್ವಕೋಶ/ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ[೨೪] :

೨೦ ನೇ ಶತಮಾನದ ಆದಿಯಲ್ಲಿ ವಿಜ್ಞಾನ ತಂತ್ರಜ್ಞಾನದ ಮಾಹಿತಿಯನ್ನು ಸಮಾಜಕ್ಕೆ ಹಾಗೂ ಸಾಮನ್ಯ ಜನತೆಗೆ ವೈಜ್ಞಾನಿಕ ಮಾಹಿತಿಯನ್ನು ತಲುಪಿಸುವುದು ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ರಚಿಸುವವರ ಮುಖ್ಯ ಉದ್ದೇಶವಾಗಿದ್ದು, ಈ ಶತಮಾನದಲ್ಲಿ ಪ್ರೌಢಶಾಲಾ ಹಾಗೂ ಕಾಲೇಜು ಶಿಕ್ಷಣ ಮಾಧ್ಯಮವಾಗಿ ಕನ್ನಡ ಬರತೊಡಗಿದ ಕಾರಣ ಕನ್ನಡದಲ್ಲಿ ವಿಜ್ಞಾನ ಪ್ರೌಢ ಕೃತಿಗಳು, ವಿಜ್ಞಾನ ಪಠ್ಯಗಳು, ಜನಪ್ರಿಯ ಕೃತಿಗಳು ಕನ್ನಡದಲ್ಲಿ ಪ್ರಕಟಣೆಯ ಪ್ರವೃತ್ತಿ ಬೆಳೆಯಿತು. ಇದರಿಂದಾಗಿ ವಿಜ್ಞಾನ ಪತ್ತಿಕೆ, ಪುಸ್ತಕಗಳು ಕೈಪಿಡಿ, ವಿಶ್ವಕೋಶ, ನಿಘಂಟುಗಳು ಪ್ರಕಟಗೊಳ್ಳತೊಡಗಿದವು. ರಾಜ್ಯ ವಿಜ್ಞಾನ ಪರಿಷತ್ತು, ಕನ್ನಡ ಸಾಹಿತ್ಯ ಪರಿಷತ್ತು ಹಾಗೂ ಬಹಳಷ್ಟು ವಿಶ್ವವಿದ್ಯಾಲಯಗಳು ಆಸಕ್ತ ಬರಹಗಾರರು ಮತ್ತು ಖಾಸಗಿ ಪ್ರಕಾಶಕರು ಅಂದರೆ ನವಕರ್ನಾಟಕ ಮೊದಲಾದ ಪ್ರಕಾಶನ ಸಂಸ್ಥೆಗಳು ವಿಜ್ಞಾನ ಕೃತಿಗಳ ಪ್ರಕಟಣೆಯಲ್ಲಿ ಪಾತ್ರ ವಹಿಸಿದವು ಎಂಬುದನ್ನು 'ಮೈಸೂರು ವಿಶ್ವವಿದ್ಯಾನಿಲಯದಿಂದ ಪ್ರಕಟಗೊಂಡ ದೃಕ್ ಶ್ರವಣ ಮುದ್ರಿಕೆಯಾದ ವಿಶ್ವಕೋಶದ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ (c.d ೨೦೦೬)' ಎಂಬಲ್ಲಿ ತಿಳಿಸಿರುವುದನ್ನು ಗಮನಿಸಲಾಗಿದೆ.

ಕೊನೆ ಟಿಪ್ಪಣಿಗಳು

೧ ಆವಲಮೂರ್ತಿ ಎ.ಓ., ವಿಜ್ಞಾನ ಸೂರ್ಯ., ಪುಟ ಸಂಖ್ಯೆ : ೧೦.

೨. ಅನಂತರಾಮ ಟಿ.ಆರ್(ಸಂಪಾದಕರು)., ವಿಜ್ಞಾನ –ತಂತ್ರಜ್ಞಾನ., ಪುಟ ಸಂಖ್ಯೆ : xii

೩. ಅದೇ ಪುಟ ಸಂಖ್ಯೆ : ೩

೪. ಅದೇ ಪುಟ ಸಂಖ್ಯೆ : ೩೦

೫. ರಾಮಕೃಷ್ಣರಾವ್ ಮತ್ತು ಟಿ.ಆರ್ ಅನಂತರಾಮು (ಸಂಪಾದಕರು)., ಕನ್ನಡದಲ್ಲಿ ವಿಜ್ಞಾನ ಸಂವಹನೆ., ಪುಟ ಸಂಖ್ಯೆ : ೧

೬. ಅದೇ ಪುಟ ಸಂಖ್ಯೆ : ೪

೭. ಅದೇ ಪುಟ ಸಂಖ್ಯೆ : ೮

೮. ಅದೇ ಪುಟ ಸಂಖ್ಯೆ : ೨೦

೯. ಅದೇ ಪುಟ ಸಂಖ್ಯೆ : ೮೩–೮೯

೧೦. ಅದೇ ಪುಟ ಸಂಖ್ಯೆ : ೮೩

೧೧. ಅಂಗಡಿ. ಎಸ್.ಎಸ್., ಎಂ. ಚಿದಾನಂದ ಮೂರ್ತಿ ಸಾಹಿತ್ಯ ಸಾಧನೆ (ಅಧ್ಯಾಯ ೧೮ ಎಂ ಚಿದಾನಂದ ಮೂರ್ತಿ ಅವರೊಡನೆ ಸಂದರ್ಶನ ೧೭೮)., ಪುಟ ಸಂಖ್ಯೆ – ೯೦

೧೨. ನಾಯಕ ಹಾ.ಮಾ (ಪ್ರಧಾನ ಸಂಪಾದಕರು)., ವಿಜ್ಞಾನ ಸಾಹಿತ್ಯ ನಿರ್ಮಾಣ, ಪುಟ ಸಂಖ್ಯೆ : ೪೩

ದಿನಪತ್ರಿಕೆಗಳು :

೧೩. ಪ್ರಜಾವಾಣಿ. ೨೦.೦೩.೨೦೧೫.

೧೪. ಪ್ರಜಾವಾಣಿ. ಪ್ರಜಾವಾಣಿ – ಮೆಟ್ರೊ– ಬೆಂಗಳೂರಿನ ಬಣ್ಣಗಳು. ೨೫.೦೧.೨೦೧೮.

೧೫. ವಿಜಯ ಕರ್ನಾಟಕ. ೨೩.೧೧.೨೦೧೫.

೧೬. ವಿಜಯ ಕರ್ನಾಟಕ. ೧೪.೧೧.೨೦೨೦

೧೭. ವಿಜಯ ಕರ್ನಾಟಕ. ೧೮.೧೧.೨೦೨೦

ಅಂತರ್ಜಾಲ:

೧೮. https://kannadadimdima.wordpress.com. 15.08.2017

೧೯. vijayakarnataka.indiatimes.com>weekly magazine. 24.1. 2018

೨೦. https://www.sampada.net>article. 30.03.2018

೨೧. ವಿಕಿ ಪಿಡಿಯಾ ೮.೮.೨೦೧೮

೨೨. enguru.blogspot.com/2007/10/blog-post_16.html.

(ಆಕಾಶವಾಣಿ ಮಡಿಕೇರಿ ಕೇಂದ್ರದಲ್ಲಿ ಮಾಡಿದ ಭಾಷಣ, ೨೦೦೮) ೨೦.೦೯.೨೦೧೮

೨೩. kannada.oneindia.com › ... › ಲೇಖನ–ಸಂದರ್ಶನ . ೨೦.೦೯.೨೦೧೮

ಅಡಕು ಮುದ್ರಿಕೆ

೨೪. ಮೈಸೂರು ವಿಶ್ವವಿದ್ಯಾನಿಲಯದ ವಿಶ್ವಕೋಶ (ವಿಜ್ಞಾನ ಸಾಹಿತ್ಯ ಭಾಗ) c.d ೨೦೦೬.

ಅಧ್ಯಾಯ–ಮೂರು

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ

೩.೧. ಸ್ವಾತಂತ್ರ್ಯ ಪೂರ್ವ(೧೯೦೦ ರಿಂದ ೧೯೪೭) ದಲ್ಲಿ ವಿಜ್ಞಾನ ಸಾಹಿತ್ಯ.

೩.೨. ಸ್ವಾತಂತ್ರ್ಯ ನಂತರ (೧೯೪೭ರ ನಂತರ) ದಲ್ಲಿ ವಿಜ್ಞಾನ ಸಾಹಿತ್ಯ.

ಅಧ್ಯಾಯ –ಮೂರು

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ

ಸೃಜನಶೀಲ ಸಾಹಿತ್ಯ ಪ್ರಕಾರಗಳೆಂದು ಪರಿಗಣಿಸುವ ಕಥೆ, ಕವನ, ಕಾದಂಬರಿ ಮೊದಲಾದವುಗಳಲ್ಲಿ ವಿಜ್ಞಾನ ಸಾಹಿತ್ಯವು ಒಂದು. ವಿಜ್ಞಾನ ಸಾಹಿತ್ಯದ ಅಭಿವ್ಯಕ್ತಿ ಸಂವಹನೆಯ ಪ್ರಶ್ನೆ ಬಂದಾಗ, ಅದರಲ್ಲಿನ ಕಠಿಣತೆ, ಸಂಕೀರ್ಣತೆಯ ಸ್ವರೂಪದಿಂದಾಗಿ ಸೃಜನಶೀಲ ಪ್ರಕಾರದಿಂದ ಹೊರಗುಳಿದಿದೆ. ಇತರ ಸಾಹಿತ್ಯ ಪ್ರಕಾರವು ಜನಜೀವನ ಬದುಕಿಗೆ ಸಂಬಂಧಿಸಿದ್ದು, ಅದರಿಂದ ರೂಪಿತವಾದುದು. ಹೀಗಾಗಿ ಈ ಸಾಹಿತ್ಯ ಪ್ರಕಾರಗಳು ಕಾಲ ಸ್ಥಳಕ್ಕೆ ಅನುಗುಣವಾಗಿ ಹೊಸ ಪದಗಳನ್ನು ಸೃಷ್ಟಿಸುತ್ತ, ತಲೆತಲಾಂತರದಿಂದ ಎಲ್ಲರ ನಾಲಿಗೆಯ ಮೇಲೆ ರಾರಾಜಿಸುತ್ತಾ, ಸಮಾಜವನ್ನು ಹಾಗೂ ತನ್ನನ್ನು ಜೀವಂತವಾಗಿರಿಸಿಕೊಂಡಿದೆ. ಆದರೆ ವಿಜ್ಞಾನ ಸಾಹಿತ್ಯವು ಭಾವದಿಂದ ದೂರವಾಗಿ ಬುದ್ಧಿಗೆ ಸಂಬಂಧಿಸಿದ್ದು ಅಂದರೆ ಬುದ್ಧಿಗಮ್ಯವಾದುದು. ಪ್ರಯೋಗವೇ ಇದರ ಅಸ್ತ್ರ. ಸಿದ್ಧಾಂತ ತತ್ವವೇ ಇದರ ಅಭಿವ್ಯಕ್ತಿಯ ಸ್ವರೂಪ. ಹೀಗಾಗಿ ಅದರ ಭಾಷೆ, ಸ್ವರೂಪ, ನಿರೂಪಣೆಯು ಒಂದೇ ರೀತಿಯಲ್ಲಿರುವುದು.

ಟಿ.ಆರ್.ಅನಂತರಾಮುರವರು ವಿಜ್ಞಾನ ಸಾಹಿತ್ಯದ ಸ್ವರೂಪವನ್ನು ಹೀಗೆ ವಿವರಿಸಿದ್ದಾರೆ, "೧೮೯೯ರಲ್ಲಿ ಬರೆದ ಇಂದಿರಾಬಾಯಿ ಎಂಬುದರಲ್ಲಿ ಸೀಮೆ ಎಣ್ಣೆ ಬಳಕೆ ಕುರಿತು ಈ ಎಣ್ಣೆಯನ್ನು ದೇವಸ್ಥಾನಗಳಲ್ಲಾಗಲಿ ಮನೆಯಲ್ಲಿ ದೇವರ ಕೋಣೆಯಲ್ಲಾಗಲಿ ದೀಪಗಳಿಗೆ ಉರಿಸಿದೊಡನೆ ದೇವರ ಸಾನ್ನಿಧ್ಯವೆಲ್ಲ ನಿಂತೇಹೋಗುತ್ತೆ ಎಂಬ ಮಾತಿದೆ. ಇದರರ್ಥ ವಿಜ್ಞಾನವು ಸಮಾಜದಲ್ಲಿ ಸುಲಭ ಪ್ರವೇಶ ಪಡೆಯಲಿಲ್ಲ. ಹೆಚ್ಚು ಕಡಿಮೆ ಇದೇ ಅವಧಿಯ ವಿಜ್ಞಾನದ ಬರವಣಿಗೆಗಳನ್ನು ಪರಿಶೀಲಿಸಿದರೂ ಆಗ ರೂಢಿಯಲ್ಲಿದ್ದ ಭಾಷೆ, ನಿರೂಪಣಾ ವಿಧಾನ ಒಂದೇ ತೆರನಾಗಿರುವುದು ಥಟ್ಟನೆ ಗಮನಕ್ಕೆ ಬರುತ್ತದೆ"[೧]. ಎಂದು ಲೇಖಕರು ಹೇಳಿರುವಲ್ಲಿ ಸಂಸ್ಕೃತ ಪದದ ಪ್ರಭಾವ, ವಿಜ್ಞಾನ ಸಾಹಿತ್ಯದ ಸ್ಥಾನಮಾನ ಹಾಗೂ ಸ್ವರೂಪವು ತಿಳಿಯುವುದು.

ವಿಜ್ಞಾನ ಸಾಹಿತ್ಯ ರಚನೆಯಲ್ಲಿ ಸಮಾನಾರ್ಥಕ ಇಲ್ಲವೇ ಪರ್ಯಾಯ ಪದಗಳಾಗಲಿ, ಸರಳ ಸುಲಭ ಪ್ರತಿಪದಗಳಾಗಲಿ ದೊರೆಯುವುದು ಬಹಳ ಕಷ್ಟ. ಜೊತೆಗೆ ವಿಜ್ಞಾನ

ಸಾಹಿತ್ಯ ರಚನೆಯಲ್ಲಿ ಸಂವೇಧನೆಗಿಂತ ಅರ್ಥ ಸ್ವಷ್ಟತೆ ಹಾಗೂ ಸ್ವಷ್ಟ ಗ್ರಹಿಕೆಗೆ ಹೆಚ್ಚು ಆಧ್ಯತೆ. ವಿಜ್ಞಾನ ಸಾಹಿತ್ಯದಲ್ಲಿ ಯಾವುದೇ ರೀತಿಯ ಭಾವನೆ ಸಂವೇಧನೆಗೆ ಆಸ್ಪದವೇ ಇಲ್ಲ. ಆದರೂ ಆಗಿನ ಕಾಲ ಸನ್ನಿವೇಶ ಸ್ಥಿತಿಗತಿ ಹಾಗೂ ಅಗತ್ಯತೆಗೆ ಅನುಗುಣವಾಗಿ ಬಹಳಷ್ಟು ಸಾಹಿತಿಗಳು ವೈಜ್ಞಾನಿಕ ವಿಷಯ ವಿಚಾರವನ್ನು ಜನತೆಗೆ ತಲುಪಿಸುವ ಕಾರ್ಯ ಮಾಡಿರುವುದನ್ನು ಕಾಣಬಹುದು. ಹೀಗಾಗಿ ವಿಜ್ಞಾನ ಸಾಹಿತ್ಯದ ಚಾರಿತ್ರಿಕ ಮಾಹಿತಿಯನ್ನು ತಿಳಿಯುವುದು ಬಹು ಅಗತ್ಯ. ಅದುದರಿಂದ ಸಂಶೋಧನಾ ಅಧ್ಯಯನಕ್ಕೆ ಸಂಬಂಧಿಸಿದಂತೆ ವಿಜ್ಞಾನ ಸಾಹಿತ್ಯವನ್ನು ಚಾರಿತ್ರಿಕವಾಗಿ ತಿಳಿಯುವ ಆಶಯ ಉದ್ದೇಶದಿಂದ ಈ ಅಧ್ಯಾಯದಲ್ಲಿ ಸ್ವಾತಂತ್ರ್ಯ ಪೂರ್ವ(೧೯೦೦-೧೯೪೭)ದಲ್ಲಿ ವಿಜ್ಞಾನ ಸಾಹಿತ್ಯ ಹಾಗೂ ಸ್ವಾತಂತ್ರ್ಯಾನಂತರ (೧೯೪೭ರ ನಂತರ)ದಲ್ಲಿ ವಿಜ್ಞಾನ ಸಾಹಿತ್ಯ ಎಂದು ಎರಡು ಉಪ ಅಧ್ಯಾಯಗಳನ್ನು ಮಾಡಿಕೊಂಡು ಅದರ ಮೂಲಕ ವಿಜ್ಞಾನ ಸಾಹಿತ್ಯದ ರಚನೆಯನ್ನು ತಿಳಿಯಲಾಯಿತು.

೩.೧ ಸ್ವಾತಂತ್ರ್ಯ ಪೂರ್ವ(೧೯೦೦-೧೯೪೭) ದಲ್ಲಿ ವಿಜ್ಞಾನ ಸಾಹಿತ್ಯ

ನಮ್ಮ ಸೃಷ್ಟಿಯೂ ಜೀವಿ ನಿರ್ಜೀವಿಗಳನ್ನೊಳಗೊಂಡ ವಿಸ್ಮಯ ವಿಶಾಲ ಜಗತ್ತಾಗಿದ್ದು, ಇಲ್ಲಿನ ಪ್ರತಿಯೊಂದು ಘಟನೆಯು ವಿಸ್ಮಯ ಹಾಗೂ ಕುತೂಹಲದಿಂದ ಕೂಡಿದೆ. ಇದನ್ನು ಸ್ವಾತಂತ್ರ್ಯ ಪೂರ್ವದ ಜನರು ಜ್ಞಾನದ ಅಭಾವದಿಂದಾಗಿ ಹಾಗೂ ಅಂಧಾನುಕರಣೆಯಿಂದಾಗಿ ಧಾರ್ಮಿಕ ಆಚರಣೆಯ ಲೇಪನದೊಂದಿಗೆ ಪ್ರಕೃತಿಯಲ್ಲಿನ ಪ್ರತಿಯೊಂದು ಘಟನೆಗಳನ್ನು ನಂಬಿ ಅನುಸರಿಸತೊಡಗಿದ್ದರು. ಹೀಗಾಗಿ ಜಗತ್ತಿನ ಜೀವ ಹಾಗೂ ನಿರ್ಜೀವ ಜಗತ್ತಿನ ಬಗ್ಗೆ ತಿಳಿಯುವ ಹಾಗೂ ಅನುಕರಣಿಸುವ ಬಗೆಗೆ ವೈಜ್ಞಾನಿಕವಾಗಿ ಜ್ಞಾನ ಮೂಡಿಸುವುದು ಬಹು ಮುಖ್ಯ. ಅಲ್ಲದೆ ಜನಸಾಮಾನ್ಯರಿಗೆ ವಿಜ್ಞಾನದ ಬಗ್ಗೆ ಆಸಕ್ತಿ ಮೂಡಿಸುವುದು, ಎಲ್ಲವನ್ನೂ ವೈಜ್ಞಾನಿಕ ದೃಷ್ಟಿಯಿಂದ ನೋಡುವ ಪ್ರವೃತ್ತಿ ಬೆಳೆಸುವುದು ಹಾಗೂ ವೈಜ್ಞಾನಿಕ ವಿಚಾರ ವಿನಿಮಯಕ್ಕೆ ತಕ್ಕ ವಾತಾವರಣವನ್ನು ಬೆಳೆಸುವುದು ಅನಿವಾರ್ಯವಾದುದನ್ನು ಅರಿತ ತಜ್ಞ ವಿಜ್ಞಾನ ಸಾಹಿತಿಗಳು ವಿಜ್ಞಾನ ಸಾಹಿತ್ಯದ ಬೆಳವಣಿಗೆಯತ್ತಾ ಗಮನ ಹರಿಸಲಾರಂಭಿಸಿದರು.

ಸ್ವಾತಂತ್ರ್ಯ ಪೂರ್ವದಲ್ಲಿ ಸಮಾಜ ಹಾಗೂ ಜನತೆಗೆ ವೈಜ್ಞಾನಿಕ ಜ್ಞಾನದ ಅಗತ್ಯತೆಯ ಫಲ ಸ್ವರೂಪದಂತೆ ವೈಜ್ಞಾನಿಕ ಕತೆಗಳು, ಪ್ರಬಂಧಗಳು, ಲೇಖನಗಳು, ಕೃತಿಗಳು ಮೊದಲಾದಂತೆ ವಿಜ್ಞಾನ ಸಾಹಿತ್ಯದ ಕೃಷಿಯು ನಡೆಯಿತು. ಜನಸಾಮಾನ್ಯರ ಭಾಷೆಯಲ್ಲಿ ಅಂದರೆ ಕನ್ನಡದಲ್ಲಿ ಬರೆಯುವುದರಿಂದ ಅವರಿಗೆ ಮಾಹಿತಿಯು ತಲುಪುವುದೆಂದು, ವೈಜ್ಞಾನಿಕ ಮಾಹಿತಿಯ ಬಗ್ಗೆ ಸಾಹಿತ್ಯ ರಚನೆಯ ಕಾರ್ಯ ಮಾಡತೊಡಗಿದರು. ಹೀಗಾಗಿ ಸ್ವಾತಂತ್ರ್ಯ ಪೂರ್ವದಲ್ಲಿ ವೈಜ್ಞಾನಿಕ ನಂಬಿಕೆಯನ್ನು ಹೆಚ್ಚಿಸಲು ವಿಜ್ಞಾನ ಸಾಹಿತ್ಯದ ಬೆಳವಣಿಗೆಯು ಅತಿ ಹೆಚ್ಚಾಗಿ ಅಧಿಕ ಕೃತಿಗಳು ರಚನೆಯಾದವು.

ಸ್ವಾತಂತ್ರ್ಯಪೂರ್ವದಲ್ಲಿನ ವಿಜ್ಞಾನ ಲೇಖಕರು ವೈಜ್ಞಾನಿಕ ಲೇಖನಗಳ ರಚನೆಯಲ್ಲಿ ಬಳಸುತ್ತಿದ್ದ ಪದಗಳಲ್ಲಿ ಯಾವುದೇ ರೀತಿಯ ಮಡಿವಂತಿಕೆಯನ್ನು ಹೊಂದದೆ, ಅಂದಿನ ಸ್ಥಿತಿಗತಿಗೆ ತಕ್ಕಂತೆ ಕೇವಲ ಮೂಲದ ಉಚ್ಚಾರದಲ್ಲಿ ಬದಲಾವಣೆಗೊಂಡು, ಅರ್ಧಾಕ್ಷರ ಒತ್ತಕ್ಷರಗಳನ್ನು ಕಡಿಮೆ ಮಾಡಿಕೊಂಡು, ಸಹಜ ಲಕ್ಷಣಗಳೊಂದಿಗೆ ಕನ್ನಡವೇ ಎನ್ನುವಷ್ಟು ನೈಜತೆಯೊಂದಿಗೆ ಮುಕ್ತವಾಗಿ ಬಳಸಿಕೊಂಡಿರುವುದನ್ನು ಗಮನಿಸಬಹುದು. ಸ್ವಾತಂತ್ರ್ಯ ಪೂರ್ವದಲ್ಲಿ ಸಾಮಾನ್ಯವಾಗಿ ಎಲ್ಲಾ ಬರವಣಿಗೆಗಳು ಅನ್ಯ ಭಾಷೆಯ ಹಾಗೂ ಸಂಸ್ಕೃತದ ಪ್ರಭಾವಕ್ಕೆ ಹೆಚ್ಚು ಒಳಗಾಗಿದ್ದು, ವಿಜ್ಞಾನ ಸಾಹಿತ್ಯವು ಅದರಿಂದ ಹೊರತಾಗಿರಲಿಲ್ಲ. ಇಂತಹ ಕಾಲದಲ್ಲಿ ಬಹಳಷ್ಟು ವಿಜ್ಞಾನ ಸಾಹಿತಿಗಳು ಸಂಸ್ಕೃತವನ್ನು ಅರಿತವರು ಹಾಗೂ ಅರಿಯದವರು ಇಬ್ಬರೂ ವೈಜ್ಞಾನಿಕ ವಿಷಯ ವಿಚಾರವನ್ನು ಜನಸಾಮಾನ್ಯರಲ್ಲಿಗೆ ಕೊಂಡೊಯ್ಯುವ ಯಶಸ್ವಿ ಪ್ರಯತ್ನವನ್ನು ಮಾಡಿರುವುದನ್ನು ಗಮನಿಸಬಹುದು.

ಜನಸಾಮಾನ್ಯರ ತಿಳುವಳಿಕೆಗೆ ನಿಲುಕುವಂತೆ ಅವರಿಗೆ ಸಹಕಾರಿಯಾಗುವಂತಹ ವೈಜ್ಞಾನಿಕ ವಿಚಾರಗಳನ್ನು ಆದಷ್ಟು ಸರಳೀಕರಿಸಿ ತಿಳಿ ಭಾಷೆಯೊಂದಿಗೆ ಸುಲಭಗ್ರಾಹ್ಯ ವಾಗುವಂತೆ ರಚಿಸಿದ್ದಾರೆ. ಅಂತಹ ಬರವಣಿಗೆಗಳಲ್ಲಿ ಬಹಳಷ್ಟು ಸ್ವಂತ ಮೂಲ ಲೇಖನ, ಬರಹ, ಕೃತಿಗಳಾಗಿದ್ದರೆ, ಮತ್ತೇ ಕೆಲವು ಇಂಗ್ಲೀಷ್ ಸೇರಿದಂತೆ ಅನ್ಯ ಭಾಷೆಯಿಂದ ಕನ್ನಡಕ್ಕೆ ರೂಪಾಂತರ ಭಾಷಾಂತರಗೊಂಡು ಅನುವಾದಗೊಂಡವುಗಳಾಗಿದ್ದವು. ಈ ರೀತಿಯಾಗಿ ವಿಜ್ಞಾನ ಸಾಹಿತ್ಯದ ರಚನೆಯ ಕಾರ್ಯವನ್ನು ಮಾಡಿದ ಸಾಹಿತಿಗಳೆಂದರೇ, ಬೆಳ್ಳಾವೆ ವೆಂಕಟನಾರಣಪ್ಪ, ನಂಗಪುರಂ ವೆಂಕಟೇಶ್, ಎಸ್.ಎನ್.ನರಹರಯ್ಯ, ವೆಂಕಟೇಷ್ ಅಯ್ಯಂಗಾರ್ಯ, ಶಿವರಾಮ ಕಾರಂತರ, ಪಂ.ವೆಂಕಟೇಶ ಧೋಂಡೋ, ಮಂಗೇಶರಾವ್.ಟಿ, ಉಳ್ಳಾಲ ಮಂಗೇಶರಾಯ, ಪಾಟೀಲ ತಿರುಮಲರಾವ್, ಎಂ.ಆರ್.ಶ್ರೀನಿವಾಸಮೂರ್ತಿ, ಜಂಬೂನಾಥನ್.ಎಂ.ವಿ ಮೊದಲಾದವರು ಪ್ರಮುಖರಾಗಿದ್ದಾರೆ. ಕೆಲವು ಸಂಘ ಸಂಸ್ಥೆಗಳೂ ಹಾಗೂ ಪತ್ರಿಕೆಗಳು ಸಹ ವಿಜ್ಞಾನ ವಿಷಯ ವಿಚಾರವನ್ನು ಜನಸಾಮಾನ್ಯರಲ್ಲಿಗೆ ತಲುಪಿಸುವ ಕಾರ್ಯ ಮಾಡಿದ್ದಾರೆ.

ವಿಜ್ಞಾನವು ನಮ್ಮೊಂದಿಗೆ ನಮ್ಮ ಹತ್ತಿರ, ನಮ್ಮ ಬದುಕಿನಲ್ಲಿ ನಮ್ಮಲ್ಲಿದೆ ಎಂಬ ಭಾವಕ್ಕೆ ಸಚಿತ್ರ ನಿರೂಪಣಾ ಸಾಮರ್ಥ್ಯವನ್ನು ಕಾಣಬಹುದಾದ ರೆ.ಐ ಫ್ಲೈದರ್‌ರವರ ಇಂಗ್ಲೀಷಿನ ಕೃತಿಯ ಕನ್ನಡಾನುವಾದ ‘ಹಿಂದೂ ದೇಶದ ಸಸ್ಯಶಾಸ್ತ್ರವು’[೨] ಉತ್ತಮ ಕೃತಿಯಾಯಿತು. ಈ ಕೃತಿಯು ಸಸ್ಯಶಾಸ್ತ್ರ ವಿಷಯವನ್ನು ತಿಳಿದು ಕೊಳ್ಳಲು ಇಚ್ಚಿಸುವವರಿಗೆ ಉತ್ತಮ ಕೃತಿಯಾಗಿದ್ದು, ಇದರಲ್ಲಿ ನಿಘಂಟಿನ ಅವಲಂಬನೆಯನ್ನು ಕಡಿಮೆಗೊಳಿಸಲು ಸಂಸ್ಕೃತ ಪದಗಳನ್ನು ಕಡಿಮೆ ಮಾಡಿ, ಏಕಾರ್ಥದ ಇಂಗ್ಲೀಷ್ ಪದಗಳನ್ನು ಪುಸ್ತಕದ ಕೊನೆಗೆ ಶಬ್ದಕೋಶದಲ್ಲಿ ಕೊಟ್ಟರು. ಅಲ್ಲದೇ ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದ ವಿಚಾರಗಳೊಂದಿಗೆ

ಸಸ್ಯಾಧ್ಯಯನದ ಒಂದು ಭಾಗವಾದ ಸಸ್ಯ ವೈಜ್ಞಾನಿಕ ಸಂಚರಣ(ಬೊಟಾನಿಕಲ್ ಟೂರ್) ಎಂಬುದನ್ನೂ ಸೇರಿಸಿ ಕ್ಷೇತ್ರ ಚಟುವಟಿಕೆಯಂತಹ ಕಾರ್ಯವನ್ನು ಸೇರಿಸಿರುವುದು ಕೃತಿಯು ಬಗ್ಗೆ ಆಸಕ್ತಿ ಹೊಂದಲು ಸಾಧ್ಯವಾಯಿತು. ಇದರೊಂದಿಗೆ ಬೆಳ್ಳಾವೆ ವೆಂಕಟನಾರಣಪ್ಪನವರ ನಿರ್ವಹಣೆಯಲ್ಲಿ 'ವಿಜ್ಞಾನ ಪ್ರಚಾರಿಣೀ ಸಮಿತಿಯು' ೧೯೧೭ರಲ್ಲಿ ಆರಂಭವಾಗಿ ವಿಜ್ಞಾನಕ್ಕೆ ಸಂಬಂಧಿಸಿದ ಉಪನ್ಯಾಸಗಳನ್ನು ನಡೆಸಿ, ಜನರಿಗೆ ಅಗತ್ಯವಾದ ವೈಜ್ಞಾನಿಕ ವಿಷಯದ ಬಗೆಗೆ ಅರಿವು ಮೂಡಿಸುವ ಪ್ರಯತ್ನವನ್ನು ಮಾಡಿತು. ಈ ಸಮೀತಿಯ ನಡೆಸಿ ಉಪನ್ಯಾಸಗಳನ್ನು 'ವೈಜ್ಞಾನಿಕ ಗ್ರಂಥಮಾಲೆ'ಯಲ್ಲಿ ಕ್ರೂಢೀಕರಿಸಿ ಕಿರುಪುಸ್ತಕಗಳಾಗಿ ಪ್ರಕಟಗೊಳಿಸಲಾಯಿತು.

ವಿಜ್ಞಾನಕ್ಕೆಂದೇ ಮೀಸಲಾದ ಕನ್ನಡದ ಮೊದಲ ವಿಜ್ಞಾನ ಮಾಸಿಕವಾದ 'ವಿಜ್ಞಾನ' ಎಂಬುದನ್ನು ಬೆಳ್ಳಾವೆ ವೆಂಕಟನಾರಣಪ್ಪ ಮತ್ತು ನಂಗಪುರಂ ವೆಂಕಟೇಶ್‌ರವರ ಸಂಪಾದಕತ್ವದಲ್ಲಿ (೧೯೧೮-೧೯೧೯) ವಿಜ್ಞಾನ ಪ್ರಚಾರಿಣೀ ಸಮಿತಿಯು ಪ್ರಾರಂಭಿಸಿತು. ಇದರಲ್ಲಿ ವಿಜ್ಞಾನಕ್ಕೆ ಸಂಬಂಧಿಸಿದ ಕುತೂಹಲ ಆಸಕ್ತಿಯನ್ನು ಕೆರಳಿಸುವ ವಿಜ್ಞಾನಿಗಳ ಬದುಕು ಮತ್ತು ಸಾಧನೆ; ಗ್ರಹಣಗಳು, ಜ್ವಾಲಾಮುಖಿ ವಿವರಣೆ; ವಿವಿಧ ಸಸ್ಯ ಪ್ರಾಣಿಗಳು, ವಿದೇಶದ ಅಂದರೆ ಅಮೇರಿಕದ ಸೈಂಟಿಫಿಕ್ ಅಮೇರಿಕನ್ ಮತ್ತು ಪಾಪ್ಯುಲರ್ ಸೈನ್ಸ್‌ನಂತಹ ಪತ್ರಿಕೆಗಳಿಂದ ಆರಿಸಿದ ವಿಷಯಗಳು ಸೇರಿದ್ದವು.

ಸಾಹಿತಿ ಎಸ್.ಎನ್.ನರಹರಯ್ಯನವರ ೧೯೨೪ರಲ್ಲಿ ರಚಿತ 'ಖಗೋಳಶಾಸ್ತ್ರ' ಕೃತಿಯು ಸ್ವತಂತ್ರ್ಯಪೂರ್ವ ವಿಜ್ಞಾನ ಕೃತಿಗಳಲ್ಲಿ ಮತ್ತೊಂದು ಪ್ರಮುಖ ಕೃತಿಯಾಗಿರುವುದನ್ನು ಕಾಣಲಾಯಿತು. ಇದರಲ್ಲಿ ಲೇಖಕರು ವಿಷಯದ ಬಗ್ಗೆ ವಿವರಿಸುವಲ್ಲಿ ಪ್ರಚಲಿತವಿರುವ ಗ್ರಂಥಗಳಿಂದ ಆರಿಸಿದ ಪಾರಿಭಾಷಿಕ ಪದಗಳ ಜೊತೆಯಲ್ಲಿ ಹೊಸ ಪದಗಳನ್ನೂ ಬಳಸಿರುವುದನ್ನು ಗಮನಿಸಬಹುದು. ಇದರಂತೆ ಕ್ಲೆಮಿಲ್ಲೆ ಫ್ಲಮೇರಿಯನ್‌ರವರ 'ಆಸ್ಟ್ರಾನೆಮಿ ಫಾರ್ ವಿಮೆನ್'ನ ಅನುವಾದ, ವೆಂಕಟೇಷ್ ಅಯ್ಯಂಗಾರ್ಯರವರ 'ಜ್ಯೋತಿರ್ವಿನೋದಿನಿ'ಯು ಸೂರ್ಯ, ಗ್ರಹಗಳು, ನಕ್ಷತ್ರಗಳು ಮೊದಲಾದ ಖಗೋಳದ ವಿಷಯಗಳ ವಿವರಣೆಯನ್ನು ಕನ್ನಡ ಭಾಷೆಯ ಸೊಬಗು ಅಚ್ಚಳಿಯದಂತೆ ತಿಳಿಸಿದ್ದಾರೆ. ಇದರೊಂದಿಗೆ ಮೈಸೂರು ವಿಶ್ವವಿದ್ಯಾಲಯದ ಪ್ರಚಾರೋಪನ್ಯಾಸ ಮಾಲೆ ಹಾಗೂ ಕನ್ನಡ ವಿಜ್ಞಾನ ಸಾಹಿತ್ಯದ ಹೆಗ್ಗುರುತಾದ 'ನಾಲ್ಕಾಣೆ ಪುಸ್ತಕ'ವು ರಾಜ್ಯದ ವಿಭಿನ್ನ ಸ್ಥಳಗಳಿಂದ ವಿಷಯ ಪರಿಣಿತರು ಜನಸಾಮಾನ್ಯರನ್ನು ಉದ್ದೇಶಿಸಿ ವೈಜ್ಞಾನಿಕ ಜ್ಞಾನ ಪ್ರಸಾರಕ್ಕಾಗಿ ಮಾಡಿದ ಉಪನ್ಯಾಸಗಳ ಸಂಗ್ರಹಿತ ರೂಪ. ಈ ಪುಸ್ತಕದ ಪ್ರಕಟಣೆಯ ಮೂಲ ಆಶಯವೇ ವಿಜ್ಞಾನ ವಿಷಯವನ್ನು ಜನಸಾಮಾನ್ಯರಿಗೆ ಸುಲಭವಾಗಿ ತಿಳಿಯುವ ಹಾಗೆ ಮಾತೃಭಾಷೆಯಲ್ಲಿ ತಿಳಿಸುವುದಾಗಿತ್ತು.

ಕನ್ನಡ ಸಾಹಿತ್ಯದ ಮಹಾನ್ ಸಾಹಿತಿ ಶಿವರಾಮ ಕಾರಂತರ ಸಾಹಿತ್ಯ, ವಿಜ್ಞಾನ, ಕಲೆ, ಕ್ರೀಡೆ, ಇತಿಹಾಸವನ್ನೊಳಗೊಂಡ ೧೯೩೦ರಲ್ಲಿ ರಚಿತ 'ಬಾಲಪ್ರಪಂಚದ ಮೂರು ಸಂಪುಟಗಳು' ಕೃತಿಯು ಜ್ಞಾನ ವಿಶ್ವಕೋಶದಂತಿದೆ. ಇದರಲ್ಲಿ ಬುದ್ಧಿ ಹಾಗೂ ಭಾವ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳ ಜೊತೆಗೆ ಪ್ರಕೃತಿ ವಿಜ್ಞಾನ, ಯಂತ್ರ ವಿಜ್ಞಾನ ಮತ್ತು ಭೌತ ವಿಜ್ಞಾನಕ್ಕೆ ಸಂಬಂಧಿಸಿದ ವೈಜ್ಞಾನಿಕ ವಿಷಯಗಳ ಬಗ್ಗೆ ಸ್ವಾರಸ್ಯಕರ ಲೇಖನಗಳಿವೆ. ವಿಷಯ ಸಂವಹನೆಯಲ್ಲಿ ರೂಪಕಗಳ ಬಳಕೆಯಿಂದ ಓದುಗರ ಮನಸ್ಸನ್ನು ಸೆಳೆಯುವ ಪ್ರಯತ್ನವನ್ನು ಇದರಲ್ಲಿ ಕಾಣಬಹುದು. ಕನ್ನಡದ ಬಳಕೆಯನ್ನು ಹೆಚ್ಚಿಸಿ, ಭಾಷೆಯನ್ನು ಆದಷ್ಟು ಸುಲಭಗೊಳಿಸಿ, ಪಾರಿಭಾಷಿಕ ಪದಗಳನ್ನು ತಿಳಿಯಾಗಿಸಿ ಮೂಲದಂತೆ ಬಳಸಿ ವಿಷಯವನ್ನು ಪ್ರಸ್ತುತ ಪಡಿಸಿರುವುದರಿಂದ ಸೃಜನಶೀಲ ಕೃತಿಗೂ ಮೀರಿಸುವಂತೆ ಮೂಡಿಬಂದಿರುವುದು ಗೋಚರಿಸಿದೆ. ಜೊತೆಗೆ ಈ ಕೃತಿಯು ವಿಜ್ಞಾನ ಸಾಹಿತ್ಯದ ಭಾಷೆ ಪ್ರಭುದ್ಧವಾಗಿ ಬೆಳೆದಿರುವ ದೃಷ್ಟಾಂತಗಳನ್ನೂ ಒಳಗೊಂಡಿದ್ದು, ಓದುಗರನ್ನು ಆಕರ್ಷಿಸುವಂತೆ ಮೂಡಿಬಂದಿದೆ.

ಮೇಲೆ ವಿವರಣೆಗೊಳಪಟ್ಟ ಸ್ವತಂತ್ರ ಪೂರ್ವ ರಚಿತ ಕೃತಿಗಳೊಂದಿಗೆ ಇತರ ವೈಜ್ಞಾನಿಕ ಕೃತಿಗಳೆಂದರೆ; ಧಾರವಾಡ ಅಗ್ರಿಕಲ್ಚರಲ್ ಅಸೋಸಿಯೇಷನ್‌ರವರ 'ಒಕ್ಕಲಿಗರೂ ಒಕ್ಕಲುತನವೂ(೧೯೧೦)' ಎಂಬ ಕೃಷಿ ಸಂಬಂಧಿತ ಮಾಹಿತಿಯ ಕನ್ನಡ ಬರಹಗಳೂ, ಪಂ.ವೆಂಕಟೇಶ ಧೋಂಡೋರವರ 'ಪ್ರಬುದ್ಧ ವೈದ್ಯಬೋಧಿನಿ(೧೯೨೭), ಮಂಗೇಶರಾವ್.ಟಿ ರವರ 'ಪದಾರ್ಥ ವಿಜ್ಞಾನಶಾಸ್ತ್ರ(೧೯೨೯)', ಉಳ್ಳಾಲ ಮಂಗೇಶರಾಯರ 'ಖಗೋಳ ವೈಚಿತ್ರ್ಯ(೧೯೩೦), ೧೯೩೧ರಲ್ಲಿನ ಪಾಟೀಲ ತಿರುಮಲರಾವ್‌ರವರ 'ಆಕಾಶದೊಳಗಿನ ಅಧ್ಬುತ ಚಮತ್ಕಾರಗಳು/ಜ್ಯೋತಿಶ್ಯಾಸ್ತ್ರ', ಎಂ.ಆರ್ ಶ್ರೀನಿವಾಸಮೂರ್ತಿರವರ 'ಆಯಸ್ಕಾಂತತೆ ಮತ್ತು ವಿದ್ಯುಚ್ಛಕ್ತಿ(೧೯೩೩)', ಫ.ಗು ಹಳಕಟ್ಟಿರವರ 'ಕೃಷಿಜ್ಞಾನ ಪ್ರದೀಪಿಕೆ(೧೯೩೬)', ಜಂಬೂನಾಥನ್.ಎಂ.ವಿ ರವರ 'ಬಾಲ ತ್ರಿಕೋನಮಿತಿ(೧೯೩೭)', ರಾಘವೇಂದ್ರ ಆಚಾರ್ಯರ 'ಎಕ್ಸ್ ರೇ(೧೯೪೦), ಸಾಲಿ ರಾಮಚಂದ್ರರಾಯರ ಅನುವಾದಿತ 'ಆರೋಗ್ಯದೀಪ(೧೯೪೦), ಬೆಳ್ಳಾವೆ ವೆಂಕಟನಾರಣಪ್ಪನವರ 'ಜೀವವಿಜ್ಞಾನ'[೩] ಮೊದಲಾದ ಕೃತಿಗಳು ಪ್ರಕಟಗೊಂಡವು. ಇದರೊಂದಿಗೆ ಇಂಗ್ಲೀಷಿನ ಪ್ರಭಾವದಿಂದ ಮುಕ್ತವಾಗಿ ವಿಜ್ಞಾನ ಸಾಹಿತ್ಯವು ಕನ್ನಡದಲ್ಲಿ ಪ್ರಚಾರಗೊಂಡಿತು.

ಸ್ವಾತಂತ್ರ್ಯ ಪೂರ್ವ ರಚಿತ ವಿಜ್ಞಾನ ಸಾಹಿತ್ಯ ಕೃತಿಗಳಿಂದ ವೈಚಾರಿಕ ಪ್ರಜ್ಞೆಯು ಉದ್ದಿಷ್ಟಗೊಂಡು, ವೈಜ್ಞಾನಿಕ ಚಿಂತನೆಗೆ ಅನುವು ಮಾಡಿಕೊಟ್ಟಿತು. ಸಮಾಜದಲ್ಲಿನ ಅಂಧಾನುಕರಣೆ ಮೂಡನಂಬಿಕೆಗಳನ್ನೆಲ್ಲ ಪ್ರಶ್ನಾತ್ಮಕ ದೃಷ್ಟಿಯಿಂದ, ಸಂದೇಹಿಸುವ ಮುಕ್ತ ಚಿಂತನೆಗೆ ಒತ್ತು ದೊರೆತಂತಾಯಿತು. ವೈಜ್ಞಾನಿಕ ಮನೋಭಾವಕ್ಕೆ ಪ್ರಬಲ ಸಹಕಾರವು

ಈ ಎಲ್ಲಾ ಲೇಖಕರಿಂದ ದೊರೆತು ಸಮಾಜದಲ್ಲಿ ಎಲ್ಲವನ್ನು ಕೌತುಕದಿಂದ ತಿಳಿಯುವ ಮನೋಭಾವದ ಬೆಳವಣಿಗೆಯೊಂದಿಗೆ ಅಂಧನಂಬಿಕೆ, ಅಂಧಾನುಕರಣೆ, ಮೂಡನಂಬಿಕೆಗಳನ್ನು ಬದಿಗೊತ್ತಿ ವೈಜ್ಞಾನಿಕ ಮನೋಭಾವವನ್ನು ರೂಢಿಸಿಕೊಳ್ಳುವಲ್ಲಿ ಸ್ವಾತಂತ್ರ ಪೂರ್ವದ ವೈಜ್ಞಾನಿಕ ಕೃತಿಗಳು ಸಹಕಾರಿಯಾದವು.

ನಮ್ಮ ಸುತ್ತಮುತ್ತಲಿನ ಪ್ರಕೃತಿಯಲ್ಲಿ ಘಟಿಸುವ ಎಷ್ಟೋ ವಿಚಾರಗಳು ದೈನಂದಿನ ಜನ ಜೀವನಕ್ಕೆ ಅನಿವಾರ್ಯ ಅಗತ್ಯವಾದುದನ್ನು ಹಾಗೂ ಅನವಶ್ಯಕ ಅವೈಜ್ಞಾನಿಕ ನಂಬಿಕೆಗೆ ಒಳಗಾಗಿ ಎಷ್ಟೋ ಪ್ರಾಣಿ ಪಕ್ಷಿಯ ಪ್ರಾಣಹಾನಿಯನ್ನು ಗಮನಿಸಿದ ವೈಜ್ಞಾನಿಕ ಚಿಂತಕರು ಲೇಖಕರು ಸಮಾಜದ ಒಳಿತು ಹಾಗೂ ಬೆಳವಣಿಗೆಗಾಗಿ ವೈಜ್ಞಾನಿಕ ಕೃತಿಗಳ ಲೇಖನಗಳ ರಚನೆಯಲ್ಲಿ ತೊಡಗಿದರು ಎಂಬುದನ್ನು ಅಧ್ಯಯನದಲ್ಲಿ ತಿಳಿಯಲಾಯಿತು. ಅದರಂತೆ ಬಹಳಷ್ಟು ಸ್ವಾತಂತ್ರಪೂರ್ವದಲ್ಲಿ ರಚನೆಯಾದ ವೈಜ್ಞಾನಿಕ ಕೃತಿಗಳ ಬಗ್ಗೆ ಮಾಹಿತಿಯನ್ನು ಪಡೆಯುವುದರೊಂದಿಗೆ ಕೃತಿಗಳ ಪರಿಚಯವನ್ನು ಮಾಡಿಕೊಳ್ಳಲಾಯಿತು.

೩.೨ ಸ್ವಾತಂತ್ರ್ಯಾನಂತರದಲ್ಲಿ ವಿಜ್ಞಾನ ಸಾಹಿತ್ಯ

ಸ್ವಾತಂತ್ರ ಭಾರತದ ಮೊದಲ ಪ್ರಧಾನಿಯಾಗಿದ್ದ ಪಂಡಿತ ಜವಾಹರಲಾಲ್ ನೆಹರೂರವರು ಆಗಿನ "ನಮ್ಮ ದೇಶದಲ್ಲಿದ್ದ ಹಸಿವು, ಬಡತನ, ಅನಕ್ಷರತೆ, ಅನಾರೋಗ್ಯ, ಜಡಗಟ್ಟಿದ್ದ ಆಚರಣೆ, ಮೂಡನಂಬಿಕೆ ಮೊದಲಾದ ಸಮಸ್ಯೆಗಳಿಗೆ ವಿಜ್ಞಾನವೊಂದರಿಂದಲೇ ಪರಿಹಾರ ಸಾಧ್ಯ" ಎಂಬ ಅಭಿಪ್ರಾಯವು[೪], ಜನಸಾಮಾನ್ಯರಲ್ಲಿಗೆ ವಿಜ್ಞಾನ ವಿಚಾರ ಪರಿಕಲ್ಪನೆಗಳು ತಲುಪಬೇಕೆಂಬ ಆಶಯಕ್ಕೆ ಪ್ರೇರಣೆ ನೀಡಿತು. ಸ್ವಾತಂತ್ರ್ಯ ನಂತರದಲ್ಲಿ ಜ್ಞಾನದ ಪ್ರಭಾವವು ಹೆಚ್ಚಾಗಿ ಇಂಗ್ಲೀಷ್ ಹಾಗೂ ಮತ್ತಿತರ ಪಾಶ್ಚಾತ್ಯ ಭಾಷೆಯ ಪ್ರಭಾವದಿಂದ ಸಮಾಜ ಹಾಗೂ ಜನರು ಮುಕ್ತವಾಗ ತೊಡಗಿದರು. ವಿಜ್ಞಾನ ತಂತ್ರಜ್ಞಾನದ ಅಗತ್ಯ ಅನಿವಾರ್ಯತೆಯು ಅವೈಜ್ಞಾನಿಕ ತಿಳುವಳಿಕೆಯಿಂದ ಕೂಡಿದ ಅಂದಿನ ಸಮಾಜ ಹಾಗೂ ಜನತೆಗಿತ್ತು. ಇದನ್ನರಿತ ಬಹಳಷ್ಟು ಸಾಹಿತಿಗಳು ವೈಜ್ಞಾನಿಕ ವಿಚಾರಗಳಿಂದ ಕೂಡಿದ ಸಾಹಿತ್ಯ ರಚನೆಯತ್ತಾ ಮನಸ್ಸು ಮಾಡುವಂತಾಯಿತು. ಹೀಗಾಗಿ ವಿಜ್ಞಾನ ಸಾಹಿತಿಗಳು ವೈಜ್ಞಾನಿಕ ವಿಷಯಗಳನ್ನು ತಮ್ಮ ಸ್ವಂತ ರಚನೆಯ ಮೂಲಕ ಹಾಗೂ ಇತರ ಭಾಷೆಯ ವಿಷಯಗಳನ್ನು ಅಗತ್ಯಕ್ಕೆ ತಕ್ಕ ಪಾರಿಭಾಷಿಕ ಪದಗಳನ್ನು ಬಳಸುವ ಮೂಲಕ ರಚನೆಯನ್ನು ಮಾಡಲು ಮುಂದಾದರು. ಇದರ ಫಲಸ್ವರೂಪದಂತೆ ಅತ್ಯಧಿಕ ವಿಜ್ಞಾನ ಪುಸ್ತಕಗಳು ಅದರಲ್ಲೂ ಜನಪ್ರಿಯ ವಿಜ್ಞಾನ ಕೃತಿಗಳು ರಚನೆ ಹಾಗೂ ಅನುವಾದಗೊಂಡು ಪ್ರಕಟಗೊಂಡವ. ಅವುಗಳಲ್ಲಿ ಪ್ರಮುಖ ಕೃತಿಕಾರರ ಹಾಗೂ ಕೃತಿಗಳ ಪರಿಚಯವು ಈ ಮುಂದಿನಂತಿದೆ.

ಶಿವರಾಮ ಕಾರಂತರು 'ಈ ಜಗತ್ತು(೧೯೫೫), ಜೀವ ಜೀವನ(೧೯೬೦), ವಸ್ತು ಚೈತನ್ಯ (೧೯೬೧), ವಿಜ್ಞಾನ ಸಾಧನೆ(೧೯೬೪) ಮೊದಲಾದವುಗಳನ್ನೊಳಗೊಂಡ ವಿಶ್ವಕೋಶ ಸ್ವರೂಪದ ನಾಲ್ಕು ಸಂಪುಟಗಳನ್ನು ೧೯೫೫ ರಿಂದ ೧೯೬೪ರವರೆಗೆ ರಚಿಸಿದ 'ವಿಜ್ಞಾನ ಪ್ರಪಂಚ' ಎಂಬುದನ್ನು ವಿಜ್ಞಾನ ಸಾಹಿತ್ಯ ಕ್ಷೇತ್ರಕ್ಕೆ ವಿಶೇಷ ಕೊಡುಗೆಯಾಗಿ ನೀಡಿದರು. ಈ ಕೃತಿ ಸಂಪುಟದಲ್ಲಿ ವಿಷಯ ವಿವರಣೆಗೆ ಬಳಸಿದ ಭಾಷಾ ವಿನ್ಯಾಸವು ಅನುಭವ ಹಾಗೂ ಸೃಜನಶೀಲತೆಯಿಂದ ಕೂಡಿದ್ದು, ಶಿಷ್ಟ ಪಾರಿಭಾಷಿಕ ಪದಗಳಿಂದ ಮುಕ್ತವಾಗಿ ಸರಳ ಸುಲಭ ಪದಗಳಿಂದ ಕೂಡಿದ್ದು, ಸ್ವಾತಂತ್ರ್ಯಾ ನಂತರದಲ್ಲಿ ರಚಿತ ವಿಜ್ಞಾನ ಕೃತಿಗಳಲ್ಲೇ ಜನಜನಿತ ಹಾಗೂ ಪ್ರಮುಖ ಕೃತಿಯಾಗಿದೆ.

ಸ್ವಾತಂತ್ರ್ಯಾ ನಂತರದಲ್ಲಿ ರಚನೆಗೊಂಡ ಕೃತಿಗಳಲ್ಲಿ ಅತ್ಯಂತ ಪ್ರಭಾವಿತ ಹಾಗೂ ಜನಪ್ರಿಯ ಮತ್ತೊಂದು ಕೃತಿಯೆಂದರೆ, ಬಿ.ಜಿ.ಎಲ್‌ಸ್ವಾಮಿರವರ 'ಹಸಿರು ಹೊನ್ನು'. ದಿನನಿತ್ಯದ ಬದುಕಲ್ಲಿ ನೋಡುವ ಗಿಡ ಮರಗಳ ಬಗ್ಗೆ ಪರಿಚಯವಾಗಲೀ, ಜ್ಞಾನವಾಗಲೀ, ತಿಳುವಳಿಕೆಯಾಗಲೀ ಇಲ್ಲದವರಿಗೆ ಈ ಕೃತಿಯು ಉತ್ತಮ ಮಾಹಿತಿಯ ಆಕರವಾಗಿದೆ. ಇದರಲ್ಲಿ ಸಸ್ಯಾಭ್ಯಾಸಕ್ಕಾಗಿ ಹೊರಾಂಗಣ ಪ್ರವಾಸ ಮಾಡಿದಾಗ ಸಿಗುವ ಗಿಡ ಮರಗಳು, ಒಂದನೇ ಶತಮಾನದಿಂದ ಈಚೆಗೆ ಕಡಲಾಚೆಯಿಂದ ನಮ್ಮ ದೇಶಕ್ಕೆ ಕಾಲಿಟ್ಟ ಸಸ್ಯಗಳು, ಸುಖ ನೆಮ್ಮದಿಗಳನ್ನು ನೀಡುವ ದ್ರವ್ಯಗಳಿಗೆ ಮೂಲವಾದ ಗಿಡಗಳು ಹೀಗೆ ತಮಗೆ ಅನುಕೂಲವಾದ ಸಾಮಗ್ರಿಗಳನ್ನು ನೂರಾರು ಆಕರಗಳಿಂದ ಸಂಪಾದಿಸಿ, ವಿಜ್ಞಾನೇತರ ಅಂದರೆ ಸಾಮಾನ್ಯ ವರ್ಗದವರಿಗೂ ಅನುಕೂಲವಾಗುವಂತೆ ರಚಿಸಿದರು. ನವಿರುಹಾಸ್ಯ ಹಾಗೂ ವಿವರಣಾತ್ಮಕ ವಿಶ್ಲೇಷಣೆಯಿಂದ ಕಥೆ, ಘಟನೆ, ಚಿಂತನೆಗಳು ಒಟ್ಟೊಟ್ಟಾಗಿ ಬಂದಿರುವುದನ್ನು ಗುರ್ತಿಸಬಹುದು.

ಇದೇ ಕಾಲದಲ್ಲಿ ರಚಿತ ಮತ್ತೊಂದು ಕೃತಿ 'ಪರಮಾಣು ಚರಿತ್ರೆ'. ಸಮಾಜದ ಸಮಸ್ಯೆಗಳ ಪರಿಶೀಲನೆಗೆ ಸಹಕಾರಿಯಾದಂತೆ ವಿಜ್ಞಾನದಲ್ಲಿ ಸತ್ಯಾನ್ವೇಷಣೆಗೆ ಅನುಸರಿಸುವ ವಿಧಾನವನ್ನು ಉಪಯೋಗಿಸುವ ಸಲುವಾಗಿ ರಚಿತ ಜೆ.ಆರ್ ಲಕ್ಷ್ಮಣ್‌ರಾವ್‌ರವರ 'ಪರಮಾಣು ಚರಿತ್ರೆ' ಒಂದು ಮಹತ್ವದ ಕೃತಿಯಾಗಿದೆ. ಈ ಕೃತಿಯಲ್ಲಿ ಲೇಖಕರು ಅಗತ್ಯಕ್ಕೆ ತಕ್ಕಂತೆ ಇಂಗ್ಲೀಷ್ ಪಾರಿಭಾಷಿಕ ಪದಗಳ ಬಳಕೆ ಹಾಗೂ ಇಂಗ್ಲೀಷ್ ಪಾರಿಭಾಷಿಕ ಪದದ ಬಳಕೆಯಲ್ಲಿ ಅತೃಪ್ತಿಯಿದ್ದಾಗ ಅದಕ್ಕೆ ಸರಿಹೊಂದುವ ಕನ್ನಡ ಪಾರಿಭಾಷೆಯ ಬಳಕೆಯೊಂದಿಗೆ ಪರಮಾಣುವಿನ ಬಗ್ಗೆ ವೈಜ್ಞಾನಿಕ ಮನೋವೃತ್ತಿಯನ್ನು ಬೆಳೆಸಲು ಅಗತ್ಯಕ್ಕೆ ತಕ್ಕ ಉದಾಹರಣೆಗಳೊಂದಿಗೆ ವಿಷಯವನ್ನು ಮಂಡಿಸಿರುವುದನ್ನು ಕಾಣಬಹುದು.

ಸ್ವಾತಂತ್ರ್ಯಾ ನಂತರದ ವಿಜ್ಞಾನ ಕೃತಿಗಳಲ್ಲಿ ಅದರಲ್ಲೂ ವೈದ್ಯ ವಿಜ್ಞಾನ ಕೃತಿಗಳಲ್ಲಿ ಹಲವಾರು ಬಾರಿ ಮರುಮುದ್ರಣಗೊಂಡು ಜನಪ್ರಿಯತೆಗೊಂಡ ಕೃತಿಯೆಂದರೆ ಅನುಪಮ

ನಿರಂಜನರ 'ತಾಯಿ ಮಗು' ಕೃತಿ. ಈ ಕೃತಿಯು ಜನಪ್ರಿಯ ವೈದ್ಯವಿಜ್ಞಾನ ಕೃತಿಯಾಗಿದ್ದು, ಸಾಹಿತಿಗಳ ಸ್ವಂತ ಅನುಭವ ಹಾಗೂ ಓದಿನಿಂದ ಪಡೆದ ಜ್ಞಾನದಿಂದ ಕೂಡಿದುದಾಗಿದೆ. ಇದರಲ್ಲಿ ತಾಯಿ ಮತ್ತು ಮಗುವಿನ ಆರೈಕೆ, ಆರೋಗ್ಯದ ಬಗ್ಗೆ ಅಗತ್ಯ ಮಾಹಿತಿಯು ಸರಳ ಸುಲಭ ಸಂವಹನ ಭಾಷೆಯೊಂದಿಗೆ ಮೂಡಿಬಂದಿದೆ.

ಆಕಾಶ ನಕ್ಷತ್ರಗಳ ಹಾಗೂ ನಕ್ಷತ್ರ ಪುಂಜಗಳ ಪರಿಚಯವನ್ನು ಕಥೆಗಳೊಂದಿಗೆ ಪ್ರಸ್ತುತ ಪಡಿಸಿದ ಜಿ.ಟಿ ನಾರಾಯಣರಾಯರ ಕೃತಿ 'ನಕ್ಷತ್ರ ಲೋಕ'. ಇದೊಂದು ದೂರದ ನಕ್ಷತ್ರಲೋಕದ ಬಗ್ಗೆ ಮನೋಜ್ಞವಾಗಿ ಸರಳ ಆಕರ್ಷಿತ ಅಭಿವ್ಯಕ್ತಿಯಲ್ಲಿ ಮೂಡಿಬಂದ ಕೃತಿಯಾಗಿದ್ದು, ಕಥನಾತ್ಮಕ ಶೈಲಿಯಿಂದ ಕೂಡಿರುವುದರಿಂದ ಹೆಚ್ಚು ಜನಪ್ರಿಯತೆ ಪಡೆದ ಕೃತಿಯಾಗಿದೆ. ಇದರಂತೆ ವೈಜ್ಞಾನಿಕ ಅಂಶದಿಂದ ಕೂಡಿದ, ವಿಜ್ಞಾನ ರೂಪದ ವಿಜ್ಞಾನಾಂಶಗನ್ನೊಳಗೊಂಡ ರಚನೆಯು ಹೆಚ್ಚು ಒದುಗರನ್ನು ತಲುಪುವುದಿಲ್ಲ ಎಂದು ನಂಬಿದ್ದ, ವೈಜ್ಞಾನಿಕ ಕಥೆಗಾರರಲ್ಲೇ ಅಗ್ರಗಣ್ಯರಾದ ರಾಜಶೇಖರ ಭೂಸನೂರಮಠರ ಕೃತಿಗಳು 'ಅಪರೇಷನ್ ಯು.ಎಫ್.ಓ', 'ಮಾಯಾ ಮಂಗಳ', 'ಮನ್ವಂತರ' ಹಾಗೂ 'ರಾಕ್ಷಸದ್ವೀಪ' ಕೃತಿಗಳು ಪ್ರಮುಖವಾದವುಗಳಾಗಿವೆ. ಇವುಗಳಲ್ಲಿ ಆಪರೇಷನ್ ಯು.ಎಫ್.ಓ ಕೃತಿಯು ಆಧುನಿಕ ವೈಜ್ಞಾನಿಕ ಕಾದಂಬರಿಯಲ್ಲಿಯೇ ಮೊದಲನೆಯದಾಗಿದ್ದು, ಸುಧಾ ವಾರಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟಗೊಂಡು ಹೆಚ್ಚು ಜನಪ್ರಿಯತೆಯನ್ನು ಪಡೆಯಿತು. ಈ ಕೃತಿಯಲ್ಲಿ ಪ್ರಕಟವಾದ ಅಂತರಿಕ್ಷದ ಸಾಹಸದ ಹೊಸ ಪ್ರಯೋಗವು ಓದುಗರಲ್ಲಿ ಹೆಚ್ಚು ರೋಮಾಂಚನವನ್ನುಂಟು ಮಾಡಿತು. ಸಹಜವಾಗಿ ಆಶ್ಚರ್ಯ ಕುತೂಹಲದಿಂದ ಕೂಡಿರುವ ಅಂತರಿಕ್ಷದ ಬಗ್ಗೆ ತಿಳಿಯುವಲ್ಲಿ ಎಲ್ಲರಿಗು ಆಸಕ್ತಿಯು ಅಧಿಕವಾದುದನ್ನು ಗಮನದಲ್ಲಿಟ್ಟುಕೊಂಡು ಅವರೆಲ್ಲರಿಗೂ ಅರ್ಥವಾಗುವಂತೆ ರಚಿಸಿದ ಹಾಗೂ ಹೆಚ್ಚು ಜನಪ್ರಿಯತೆಯನ್ನು ಗಳಿಸಿದ ಕೃತಿಯಾಗಿರುವುದು.

ಜ್ಞಾನ ಸಾಹಿತ್ಯಕೋಶ ಎಂದು ಜನಪ್ರಿಯತೆಯನ್ನೂ ಹಾಗೂ ಪ್ರಖ್ಯಾತಿಯನ್ನು ಪಡೆದ ವಿಷಯ ವಿಜ್ಞಾನ ಕೋಶವಾದ 'ಜ್ಞಾನ ಗಂಗೋತ್ರಿ' (೧೯೬೯-೧೯೭೪)ಯು ವಿಜ್ಞಾನ ವಿಷಯ ಸಂಗತಿಗಳ ಸಮೃದ್ಧವಾದ ಕೋಶವಾಗಿದೆ. ಇದು ಮನುಕುಲದ ಕಥೆ, ಭೌತಜಗತ್ತು, ಜೀವಜಗತ್ತು, ಯಂತ್ರಜಗತ್ತು, ಕಲೆ ಸಾಹಿತ್ಯ, ಕ್ರೀಡೆ ಮನೋಲ್ಲಾಸ ಮತ್ತು ಭಾರತದ ಕಥೆ ಎಂದು ಒಟ್ಟು ಏಳು ಸಂಪುಟಗಳಿಂದ ಕೂಡಿದ್ದು, ಕಿರಿಯ ಓದುಗರ ತಿಳುವಳಿಕೆಯುನ್ನು ಹೆಚ್ಚಿಸಲು ಬೇಕಾದ ವಿಜ್ಞಾನದ ಹಲವಾರು ಆಧ್ಯತೆಯ ವಿಷಯಗಳನ್ನೊಳಗೊಂಡಿದೆ. ಅಲ್ಲದೇ ಇದರಲ್ಲಿ ಬಹಳಷ್ಟು ವಿಷಯಗಳು ಎಲ್ಲರಿಗೂ ಹೊಸತಾಗಿದ್ದುದರಿಂದ, ಪ್ರಥಮವಾಗಿ ಅದರ ಪರಿಚಯವು ಆಯಿತು. ಇದರಲ್ಲಿನ ಬರವಣಿಗೆ

ಶೈಲಿಯು ಸರಳ ಹಾಗೂ ಚುಟುಕಾಗಿದ್ದು, ಆಕರ್ಷಕ ಅಂಶಗಳೊಂದಿಗೆ ಚಿತ್ರಗಳಿಂದ ಕೂಡಿದ್ದುದು ವಿಶೇಷವಾಗಿತ್ತು. ದಿನೇ ದಿನೇ ಬಿಗಡಾಯಿಸುತ್ತಿರುವ ಭೂ ಮಂಡಲದ ಸ್ಥಿತಿಗತಿಯ ಬಗ್ಗೆ ಹಾಗೂ ಅದನ್ನು ರಕ್ಷಿಸಲು ರಕ್ಷಣೆಯ ಜವಾಬ್ದಾರಿಯನ್ನು ತೊಡುವ ಮನವರಿಕೆ ಬಗ್ಗೆ ಜ್ಞಾನ ನೀಡುವ ಕೃತಿ ನಾಗೇಶ್ ಹೆಗಡೆರವರ 'ಇರುವುದೊಂದೇ ಭೂಮಿ(೨೦೧೦)', ಇದರಲ್ಲಿನ ಪ್ರತಿಯೊಂದು ಲೇಖನವು ವೈಜ್ಞಾನಿಕ ಅಂಶದಿಂದ ಕೂಡಿದ್ದು, ಸರಳ ಸುಲಭ ಅಭಿವ್ಯಕ್ತಿಯೊಂದಿಗೆ ಮೂಡಿಬಂದಿದೆ. ಸಂಪಾದಕರು ಪ್ರೊ.ಎಚ್.ಆರ್ ರಾಮಕೃಷ್ಣರಾವ್ ಮತ್ತು ಟಿ.ಆರ್ ಅನಂತರಾಮುರವರ 'ಕನ್ನಡದಲ್ಲಿ ವಿಜ್ಞಾನ ಸಂವಹನೆ (೨೦೧೧)' ಕೃತಿಯು ಸ್ವಾತಂತ್ರ್ಯಾ ನಂತರದಲ್ಲಿ ರಚಿತ ಕೃತಿಗಳಲ್ಲಿ ಮಹತ್ವದ್ದಾಗಿದ್ದು, ವಿವಿಧ ವಿಜ್ಞಾನಶಾಖೆಗಳಲ್ಲಿ ಇದುವರೆಗೆ ನಡೆದ ಚಿಂತನೆ ಹಾಗೂ ವೈಜ್ಞಾನಿಕ ವಿಷಯದ ಬಗ್ಗೆ ಪ್ರಾಯೋಗಿಕವಾಗಿ ನಡೆದ ಕಾರ್ಯಗಳ ಬಗ್ಗೆ ತಿಳಿಸುವ ಕೃತಿಯಾಗಿದೆ. ಇದರಂತೆ ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ಬೆಳವಣಿಗೆಯ ಬಗ್ಗೆ ತಿಳಿಸುವ ಕೃತಿ ಟಿ.ಆರ್ ಅನಂತರಾಮುರವರ ಸಂಪಾದಕತ್ವದ 'ವಿಜ್ಞಾನ ತಂತ್ರಜ್ಞಾನ'. ಇದೊಂದು ವಿಜ್ಞಾನ ತಂತ್ರಜ್ಞಾನಕ್ಕೆ ಸಂಬಂಧಿಸಿ ಚಾರಿತ್ರಿಕ ಮಾಹಿತಿಯನ್ನೊಳಗೊಂಡ ಕೃತಿಯಾಗಿದೆ.

ಮೇಲೆ ತಿಳಿಸಿದ ಕೃತಿಗಳ ಜೊತೆಗೆ ಸ್ವಾತಂತ್ರ್ಯಾ ನಂತರದಲ್ಲಿ ಪ್ರಕಟಗೊಂಡ ಇತರ ಕೃತಿಗಳೆಂದರೆ; ಸುಬ್ಬಣ್ಣ.ಕೆ.ವಿಯವರ 'ನಾವು ತಿನ್ನುವ ಅಡಕೆ(೧೯೫೩)', ಬಿ.ವಿ ಸುಬ್ಬರಾಯಪ್ಪ 'ಭೂಮಿ ಮತ್ತು ಇತರ ಗ್ರಹಗಳ ಗುಟ್ಟು(೧೯೫೭)', ನೀಲತ್ತಹಳ್ಳಿ ಕಸ್ತೂರಿರವರ 'ನಮ್ಮ ಕತೆ(೧೯೬೦)', ದೇವರಾಜ ಸರ್ಕಾರ್ 'ಅನುವಂಶೀಯತೆ(೧೯೬೩)', ಪರಮೇಶ್ವರ ಭಟ್ಟ ಎಸ್.ವಿ ರವರ ಅನುವಾದಿತ 'ಭೂಮಿ ಮತ್ತು ಧೂಮಕೇತು(೧೯೬೪)', ಭಾರತೀಸುತರವರ 'ಸೊಳ್ಳೆ ಹರಡುವ ರೋಗಗಳು(೧೯೬೫)', ಜಿ.ವಿ.ಬಿ ನಾಯ್ಡುರವರ 'ಬತ್ತ(೧೯೬೭)', ಎ.ಓ ಆವಲಮೂರ್ತಿರವರ 'ವಿಜ್ಞಾನ ಸೂರ್ಯ(೨೦೦೭), ನಾಗೇಶ್ ಹೆಗಡೆಯವರ ಸಂಪಾದಕತ್ವದ 'ವಿಜ್ಞಾನ ಗಂಗೆಯ ಬಿಂದುಸಾರ', ಎಂ.ಕೆ ರಾಮಸ್ವಾಮಿರವರ 'ಜ್ಞಾನ ವಿಜ್ಞಾನ', ಸ.ರಮೇಶ್‌ರವರ 'ಕೃಷಿ ಪಾರಂಪರಿಕ ಜ್ಞಾನ(೨೦೧೧)', ಡಾ.ಜಿ.ಕೆ ವೀರೇಶ್ ಮತ್ತು ಅಡ್ಡೂರು ಕೃಷ್ಣರಾವ್‌ರವರ 'ಕೃಷಿ ವಿಜ್ಞಾನ ಒಂದು ಒಳ್ಳೆಯ ಪ್ರಯೋಗವಾಗಿದೆ' ಮೊದಲಾದವು.

ವಿಜ್ಞಾನ ಪತ್ರಿಕೆಗಳು[೫]

ವಿಜ್ಞಾನ ವಿಷಯ ವಿಚಾರವನ್ನು ಜನತೆಯಲ್ಲಿ ಕೊಂಡೊಯ್ಯುವಲ್ಲಿ ಪತ್ರಿಕೆಗಳ ಪಾತ್ರವು ಮಹತ್ವದಾದುದು. ಕಾಲ ಕಾಲಕ್ಕೆ ಪ್ರಯೋಗಕ್ಕೆ ಒಳಗಾಗುವ ಹಾಗೂ ಆವಿಷ್ಕಾರ

ಅನ್ವೇಷಣೆಗಳಿಂದ ಪ್ರಚಾರಕ್ಕೆ ಬರುವ ವೈಜ್ಞಾನಿಕ ಮಾಹಿತಿಯನ್ನು ಮುದ್ರಣದ ಮೂಲಕ ಬರಹಗಳಾಗಿ ತಿಳಿವನ್ನು ನೀಡುವುದರೊಂದಿಗೆ ದಿನನಿತ್ಯದ ಬದುಕಿಗೆ ಅಗತ್ಯವಾದ ವೈಜ್ಞಾನಿಕ ಮಾಹಿತಿ ನೀಡುವುದು ವಿಜ್ಞಾನ ಪತ್ರಿಕೆಗಳು. ಆಕರ್ಷಕ ದೃಷ್ಟಾಂತಗಳ ಚಿತ್ರಗಳ ಮೂಲಕ ಅಗತ್ಯ ಮಾಹಿತಿಯನ್ನು ಕಿರು ಪರಿಚಯದೊಂದಿಗೆ ಪತ್ರಿಕೆಯಲ್ಲಿ ನೀಡಿರುವುದರಿಂದ ವಿಜ್ಞಾನ ವಿಚಾರವು ಜನತೆಗೆ ತಲುಪುವಂತಾಗುತ್ತಿದೆ. ಹೀಗಾಗಿ ಬಹಳಷ್ಟು ವಿಜ್ಞಾನ ಸಾಹಿತಿಗಳು, ಸಂಘ ಸಂಸ್ಥೆಗಳು ವಿಜ್ಞಾನ ಪತ್ರಿಕೆಗಳನ್ನು ಪ್ರಾರಂಭಿಸಿದರು. ಪ್ರಮುಖ ವಿಜ್ಞಾನ ಪತ್ರಿಕೆಗಳೆಂದರೆ; ಕೃಷಿಗೆ ಸಂಬಂಧಿಸಿದ 'ಮೈಸೂರು ವ್ಯವಸಾಯ ಸಂಘದ ಪತ್ರಿಕೆ(೧೯೧೭-೪೭)', ಬೆಳ್ಳಾವೆ ವೆಂಕಟನಾರಣಪ್ಪರವರು ಕರ್ನಾಟಕ ವಿಜ್ಞಾನ ಪ್ರಚಾರಿಣೀ ಸಮಿತಿಯ ವತಿಯಿಂದ ಪ್ರಾರಂಭಿಸಿದ 'ವಿಜ್ಞಾನ(೧೯೧೭-೧೯)' ಪತ್ರಿಕೆ ಮೊದಲಾದವು. ಈ ಎಲ್ಲಾ ಪತ್ರಿಕೆಗಳು ವಿಜ್ಞಾನದ ವಿವಿಧ ಶಾಖೆಗಳಲ್ಲಿನ ವಿಷಯಕ್ಕೆ ಸಂಬಂಧಿಸಿದ ಬರಹಗಳನ್ನು ಒಗ್ಗೂಡಿಸಿ ವಿಜ್ಞಾನ ವಿಷಯಗಳನ್ನು ಜನತೆಗೆ ತಲುಪಿಸುತ್ತಿದ್ದವು.

ಮೇಲೆ ತಿಳಿಸಿದ ಪತ್ರಿಕೆಗಳ ಜೊತೆಯಲ್ಲಿಯೇ, 'ವಿಜ್ಞಾನ ಲೋಕ(೧೯೬೬)' ಪತ್ರಿಕೆ, ಮೈಸೂರು ವಿಶ್ವವಿದ್ಯಾಲಯದ ಪ್ರಸಾರಾಂಗದ ಪ್ರಕಟಣೆಯಾದ 'ವಿಜ್ಞಾನ ಕರ್ನಾಟಕ', ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡದ ಷಣ್ಮಾಸಿಕ ಪತ್ರಿಕೆ 'ವಿಜ್ಞಾನ ಭಾರತಿ(೧೯೭೨)', ಬೆಂಗಳೂರು ವಿಶ್ವವಿದ್ಯಾಲಯದ 'ಜನಪ್ರಿಯ ವಿಜ್ಞಾನ(೧೯೭೨)' ಪತ್ರಿಕೆ, ಕನ್ನಡ ವಿಶ್ವವಿದ್ಯಾಲಯ ಹಂಪಿಯ 'ವಿಜ್ಞಾನ ಸಂಗಾತಿ(೧೯೯೩)', ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 'ಬಾಲ ವಿಜ್ಞಾನ(೧೯೯೭)', ದಿಕ್ಸೂಚಿ ಸಂಸ್ಥೆಯ 'ಜೀವನಾಡಿ(೧೯೯೮)', ಆರೋಗ್ಯಕ್ಕೆ ಸಂಬಂಧಿಸಿ 'ಆರೋಗ್ಯವಾಣಿ(೧೯೮೩)', ವಿಜ್ಞಾನಕ್ಕೆ ಮೀಸಲಾದ 'ಸಂಶೋಧಕ(೧೯೮೭)' ಮಾಸಪತ್ರಿಕೆ, ಕಾರ್ಮಿಕರ ವಲಯದಲ್ಲಿ ವಿಜ್ಞಾನದ ಅರಿವು ಉಂಟುಮಾಡಲು ಬಿ.ಇ.ಎಲ್ ಉದ್ಯೋಗಿಗಳ ವಿಜ್ಞಾನ ವೇದಿಕೆಯ 'ವಿಜ್ಞಾನ ಮಿತ್ರ(೨೦೦೯)' ಎಂಬ ತ್ರೈಮಾಸಿಕಪತ್ರಿಕೆ, ಗ್ರಾಮಾಭಿವೃದ್ಧಿ ಮತ್ತು ಕೃಷಿ ವಿಜ್ಞಾನಗಳಿಗೆ ಮೀಸಲಾದ ತ್ರೈಮಾಸಿಕ 'ಮೇಟಿವಿದ್ಯೆ(೧೯೯೫)' ಮತ್ತು 'ಸುಜಾತ' ಪತ್ರಿಕೆ, ಎ.ಓ ಆವಲಮೂರ್ತಿರವರ ಸಂಪಾದಕತ್ವದ 'ವಿಜ್ಞಾನ ಮಾಹಿತಿ(೧೯೮೮)', ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತಿನ 'ವಿಜ್ಞಾನ ದೀಪ(೧೯೮೫)' ಪತ್ರಿಕೆ ವಿಜ್ಞಾನ ವಿಷಯ ವಿಚಾರ ಪ್ರಕಟಣೆಯಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ಗಮನಿಸಲಾಯಿತು.

ಹೀಗೆ ಸ್ವಾತಂತ್ರ್ಯ ಪೂರ್ವ ಹಾಗೂ ಸ್ವಾತಂತ್ರ್ಯಾ ನಂತರದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆಗೆ ಸಂಬಂಧಿಸಿದಂತೆ ಅನೇಕ ವಿಜ್ಞಾನ ಕೃತಿಗಳು, ಲೇಖನಗಳು ವಿಜ್ಞಾನ ಕ್ಷೇತ್ರದಲ್ಲಿ ವಿಷಯ ಪ್ರಾವಿಣ್ಯತೆಯನ್ನು ಹೊಂದಿದ ಲೇಖಕರಿಂದ ಹಾಗೂ ವಿಭಿನ್ನ ವೃತ್ತಿ

ಮತ್ತು ಶೈಕ್ಷಣಿಕ ಹಿನ್ನೆಲೆಯೊಂದಿಗೆ ಅನುಭವವಿರುವ ಸಾಹಿತಿಗಳಿಂದ ರಚನೆಗೊಂಡವಗಳಾಗಿವೆ. ವಿಜ್ಞಾನ ಕೃತಿಗಳಲ್ಲಿ ವಸ್ತು–ವಿಷಯ ವೈವಿಧ್ಯತೆಯ ಕೃತಿಗಳು, ವಿಶ್ವಕೋಶದಂತಿರುವ ಆಕರ ಗ್ರಂಥಗಳು, ವಿಜ್ಞಾನಕ್ಕೆಂದೇ ಮೀಸಲಾದ ಪತ್ರಿಕೆಗಳು, ಪ್ರಕಟಣೆಗಳು, ತಾಂತ್ರಿಕ ಪದಕೋಶಗಳು ಮೊದಲಾದವುಗಳು ಅಧಿಕವಾಗಿ ಕಂಡುಬಂದವು. ಜನಜೀವನಕ್ಕೆ ಅಗತ್ಯ ಹಾಗೂ ಅನುಕೂಲವಾಗುವ ವಿಷಯಗಳಿಗೆ ಸಂಬಂಧಿಸಿದಂತೆ ಆಕರ್ಷಕ ಶೀರ್ಷಿಕೆಯೊಂದಿಗೆ ವಿಷಯದ ಆಳ ವಿಸ್ತಾರ ನಿರೂಪಣಾ ಶೈಲಿಯಿಂದ ಕೂಡಿದ ವಿಜ್ಞಾನ ಸಾಹಿತ್ಯದ ರಚನೆಯಿಂದಾಗಿ ವಿಜ್ಞಾನ ವಿಷಯ ವಿಚಾರಗಳು ಜನಸಾಮಾನ್ಯನೆಡೆಗೆ ತಲುಪುವಂತಾಯಿತು.

ಕೊನೆ ಟಿಪ್ಪಣಿಗಳು

೧. ಅನಂತರಾಮು ಟಿ.ಆರ್(ಸಂಪಾದಕರು)., ವಿಜ್ಞಾನ ತಂತ್ರಜ್ಞಾನ., ಪುಟ ಸಂಖ್ಯೆ : xi

೨. ಅದೇ ಪುಟ ಸಂಖ್ಯೆ : ೧೦–೧೩

೩. ರಾಮಕೃಷ್ಣರಾವ್ ಎಚ್.ಆರ್ ಮತ್ತು ಅನಂತರಾಮು ಟಿ.ಆರ್ (ಸಂಪಾದಕರು)., ಕನ್ನಡದಲ್ಲಿ ವಿಜ್ಞಾನ ಸಂವಹನೆ., ಪುಟ ಸಂಖ್ಯೆ : ೩೪–೩೮

೪. ಅದೇ ಪುಟ ಸಂಖ್ಯೆ : ೪

೫. ಅನಂತರಾಮು ಟಿ.ಆರ್(ಸಂಪಾದಕರು)., ವಿಜ್ಞಾನ ತಂತ್ರಜ್ಞಾನ., ಪುಟ ಸಂಖ್ಯೆ : ೮೧–೧೦೨

ಅಧ್ಯಾಯ–ನಾಲ್ಕು

ವಿಜ್ಞಾನ ಸಾಹಿತ್ಯದ ಅಧ್ಯಯನದ ನೆಲೆಗಳು

೪.೧. ಸೃಜನಶೀಲ ವಿಜ್ಞಾನ ಬರಹಗಳು

೪.೨. ಸೃಜನೇತರ ವಿಜ್ಞಾನ ಬರಹಗಳು

ಅಧ್ಯಾಯ - ನಾಲ್ಕು

ವಿಜ್ಞಾನ ಸಾಹಿತ್ಯದ ಅಧ್ಯಯನದ ನೆಲೆಗಳು

ಪ್ರಕೃತಿಯ ನಿಯಮದೊಳಗಿನ ಸತ್ಯದ ಶೋಧನೆಯೇ ವಿಜ್ಞಾನವಾಗಿದ್ದು, ನಿಸರ್ಗದ ಆಗು-ಹೋಗುಗಳನ್ನು ಸಮಸ್ಥಿತಿಯಲ್ಲಿ ಕಂಡುಕೊಳ್ಳುವ ಹಾಗೂ ಪ್ರಕೃತಿಯಲ್ಲಿನ ನೈಜತೆಯನ್ನು ತಿಳಿಸುವ ಪರಮ ಗುರಿಯನ್ನು ವಿಜ್ಞಾನ ಹೊಂದಿದೆ. ಪುರಾತನ ಇತಿಹಾಸ ಹೊಂದಿರುವ ವಿಜ್ಞಾನವು ಸಂಪ್ರದಾಯ ಸಮಾಜ ಹಾಗೂ ಧರ್ಮದಿಂದ ಪ್ರಬಲ ವಿರೋಧಕ್ಕೆ ಒಳಗಾಗಿದ್ದರು ಖಡಾಖಂಡಿತವಾಗಿ ಅವೈಜ್ಞಾನಿಕ ಸಂಪ್ರದಾಯ, ಮೌಢ್ಯಗಳನ್ನು ವಿರೋಧಿಸಿ ಪ್ರತಿಕ್ಷಣದ ಬದಲಾವಣೆಯನ್ನು ಸ್ವೀಕರಿಸುತ್ತಾ ಪ್ರಗತಿಯೆಡೆಗೆ ಸಾಗುತ್ತಿದೆ. ವಿಜ್ಞಾನದ ಹಾಗೂ ಅದರ ಆವಿಷ್ಕಾರಗಳ ಪ್ರಭಾವವು ಸಮಾಜ ಹಾಗೂ ಜನತೆಯ ಮೇಲೆ ಎಷ್ಟಿದೆ ಎಂದರೆ ವಿಜ್ಞಾನ ಮತ್ತು ಅದರ ವಸ್ತು ವಿಷಯವನ್ನು ಬಿಟ್ಟು ಬದುಕುವುದನ್ನು ಜೀವನ ನಡೆಸುವುದನ್ನು ಊಹಿಸಿಕೊಳ್ಳಲೂ ಅಸಾಧ್ಯವಾಗಿದೆ. ಹೀಗಾಗಿಯೇ ವಿಜ್ಞಾನ ಎಂಬುದು ನಿಸರ್ಗದೊಡನೆ ಲೌಕಿಕ ಬದುಕನ್ನು ಹೊಂದಿಸಿಕೊಂಡು, ಅದರಲ್ಲಿ ಘಟಿಸುವ ವಿದ್ಯಮಾನಗಳನ್ನು ಸಮಕಾಲೀನತೆಗಳೊಂದಿಗೆ ಹೋಲಿಸಿ, ಅವಲೋಕಿಸಿ ಜೀವನವನ್ನು ಸಮನ್ವಯಗೊಳಿಸುವಂತೆ ಮಾಡುವುದಾಗಿದೆ. ಅದರಂತೆ ವಿಜ್ಞಾನದ ಎಲ್ಲಾ ವಿಚಾರಗಳನ್ನು ಅಂದರೆ ವಿಜ್ಞಾನದ ಮಾಹಿತಿ, ವಿಷಯ, ಸಾಧನೆಗಳನ್ನು ತಿಳಿಸುವ ದಾಖಲಿತ ರೂಪವೇ ವಿಜ್ಞಾನ ಸಾಹಿತ್ಯ.

"ಸಾಹಿತ್ಯ, ಕಲೆ ಮತ್ತು ವಿಜ್ಞಾನ ಇವೆಲ್ಲವೂ ಸೃಜನಶೀಲ ಪ್ರಕಾರಗಳೇ. ಆದರೆ ವಿಜ್ಞಾನದ ಸಂವಹನೆಯ ಪ್ರಶ್ನೆ ಬಂದಾಗ ಎದುರಾಗುವ ಸಮಸ್ಯೆಯೇ ಬೇರೆ. ಇದರ ಮೂಲಬೇರಿರುವುದು ವಿಜ್ಞಾನದ ಸಂಕೀರ್ಣತೆಯಲ್ಲಿ ಮತ್ತು ಸ್ವರೂಪದಲ್ಲಿ"[1] ಎಂದು ಟಿ.ಆರ್‌ಅನಂತರಾಮುರವರು ತಿಳಿಸುವಲ್ಲಿ ವಿಜ್ಞಾನ ಸಾಹಿತ್ಯದ ಅಭಿವ್ಯಕ್ತಿ ಸ್ವರೂಪದ ಲಕ್ಷಣವು ಗೋಚರಿಸುವುದು. ಇಂತಹದ್ದರಲ್ಲಿ ವಿಜ್ಞಾನದೊಳಗಿನ ಆವಶ್ಯಕಾಂಶಗಳನ್ನು ಗುರುತಿಸಿ, ಅವುಗಳನ್ನು ಸಹಜ ಸೌಂದರ್ಯದೊಡನೆ ಆಕರ್ಷಕ ಸರಳ ಸುಲಭ ಶೈಲಿಯಲ್ಲಿ ಸಾಹಿತಿಗಳು ಜನರಿಗೆ ದೊರೆಯುವಂತೆ ಮಾಡುತ್ತಿರುವುದನ್ನು ಗಮನಿಸಬಹುದು.


ವಿಜ್ಞಾನ ಮತ್ತು ಸಾಹಿತ್ಯ ಒಂದಕ್ಕೊಂದು ನಿಕಟ ಸಂಬಂಧವನ್ನು ಹೊಂದಿದ್ದು, ಅವುಗಳ ಸ್ವರೂಪದ ಅವಲೋಕನದಲ್ಲಿ ಗಮನಿಸಿದಂತೆ ಸಾಹಿತ್ಯವೆಂಬುದನ್ನು 'ಮನಸ್ಸು' ಎಂದು ಹಾಗೂ ವಿಜ್ಞಾನವನ್ನು 'ಬುದ್ಧಿ' ಎಂದು ಸ್ಪಷ್ಟಪಡಿಸಬಹುದು. ಮನಸ್ಸು (ಸಾಹಿತ್ಯ)

+ಬುದ್ಧಿ (ವಿಜ್ಞಾನ) = ವಿಜ್ಞಾನಸಾಹಿತ್ಯ. ಬದುಕಿನಲ್ಲಿ ಯಾವುದೇ ಕಾರ್ಯದ ಯಶಸ್ಸು ಮನಸ್ಸು ಮತ್ತು ಬುದ್ಧಿಯಿಂದ ಸಾಧ್ಯ. ಅಂದರೆ ಸಾಹಿತ್ಯವೆಂಬ ಮನಸ್ಸು, ವಿಜ್ಞಾನವೆಂಬ ಬುದ್ಧಿಯೊಂದಿಗೆ ಕೂಡಿದಾಗ ಮಾತ್ರ ವಿಷಯದ ಪೂರ್ಣಮಾಹಿತಿಯು ದೊರೆಯುವುದು. ಹೀಗಾಗಿ ರಚನೆಯ ಆಧ್ಯತೆಯ ವಿಷಯಗಳು, ವಿಷಯದ ಬಗೆಗಿನ ಆಳ ಹಾಗೂ ವಿಸ್ತಾರ ಜ್ಞಾನ, ಓದುಗನ ಅಗತ್ಯತೆಯನ್ನು ಪೂರೈಸುವ ವಿಷಯ, ವಿಷಯದ ನಿರೂಪಣೆ, ಆಕರ್ಷಕ ಶೀರ್ಷಿಕೆ ಮೊದಲಾದ ಅಂಶಗಳನ್ನು ಗಮನಿಸಿ ವಿಜ್ಞಾನ ಸಾಹಿತ್ಯದ ರಚನಾ ಕಾರ್ಯವನ್ನು ಮಾಡಲಾಗುತ್ತಿದೆ.

ವಿಜ್ಞಾನ ಸಾಹಿತ್ಯದಲ್ಲಿ ಸಾಹಿತ್ಯ ಮತ್ತು ವಿಜ್ಞಾನದ ಬೆಳವಣಿಗೆಯ ಮಾಹಿತಿಯು ಕ್ರಿಯಾ–ಪ್ರಕ್ರಿಯಾತ್ಮಕವಾಗಿ ನಡೆಯುತ್ತಿರುತ್ತದೆ. ಅಂದರೆ ಮಾನವನ ಅಭಿವೃದ್ಧಿಯ ಕ್ರಿಯೆಯಂತೆ ಹಿಂದಿನ ಕಾಲದಲ್ಲಿ ಕಂಡು ಹಿಡಿದ ಬೆಂಕಿಯ ಆವಿಷ್ಕಾರವು ದಾಖಲಿತ ಮಾಹಿತಿಯಾಗಿದ್ದು(ಸಾಹಿತ್ಯ), ವೈಜ್ಞಾನಿಕ ಪ್ರಗತಿಯಾದಂತೆ ಅದೇ ಬೆಂಕಿಯು ವಿಜ್ಞಾನ ಪ್ರಕ್ರಿಯೆಯ ಸೂಚಕವಾಗಿದೆ. ಹೀಗೆ ವಿಜ್ಞಾನದಲ್ಲಿನ ಇಂದಿನ ಆವಿಷ್ಕಾರಗಳು ಕಾಲ ಬದಲಾದಂತೆ ಭಿನ್ನತೆಯಿಂದ ಕೂಡಿರುವುದಕ್ಕೆ ಕಾರಣ ಸಾಹಿತ್ಯವಾಗಿದೆ. ಅಂದರೆ ವಿಜ್ಞಾನದಲ್ಲಿನ ಪ್ರತಿಯೊಂದು ಆಗು ಹೋಗುಗಳ ಬಗ್ಗೆ ಅಭಿವ್ಯಕ್ತಿಸುತ್ತ, ವಿಷಯ ಸಂಗ್ರಹಣೆ, ಪ್ರತಿಪಾದನೆ, ಸತ್ಯಶೋಧನೆ ಮತ್ತು ಅವಲೋಕನಗಳು ವಿಜ್ಞಾನ ಕ್ಷೇತ್ರದಲ್ಲಿ ನಡೆಯುವಂತಾಗಲು ಮೂಲವೇ ವಿಜ್ಞಾನ ಸಾಹಿತ್ಯ. ವಿಜ್ಞಾನ ಸಾಹಿತ್ಯವೂ ವೈಜ್ಞಾನಿಕ ಚಿಂತನೆ ಹಾಗೂ ತತ್ವ ಚಿಂತನೆಗಳಿಂದ ಕೂಡಿದ್ದು, ಸತ್ಯದ ಮೇಲೆ ತನ್ನ ಅಸ್ತಿತ್ವವನ್ನು ಹೊಂದಿ, ಸಮಾಜದಲ್ಲಿನ ಇತರ ಎಲ್ಲಾ ಕ್ಷೇತ್ರಗಳಂತೆ ವೈಜ್ಞಾನಿಕ ಚಿಂತನೆ ಮತ್ತು ತಾತ್ವಿಕತೆಯ ಪ್ರಭಾವದಿಂದ ಕೂಡಿರುತ್ತದೆ.

ವಿಜ್ಞಾನ ಸಾಹಿತ್ಯವು ಎರಡು ನೆಲೆಗಳಲ್ಲಿ ರಚನೆಯಾಗಿರುವಂತೆ ಕಂಡುಬರುತ್ತದೆ. ವಿಜ್ಞಾನ ಸಾಹಿತಿಯು ಭಾವನಾತ್ಮಕವಾಗಿ, ಕಲ್ಪನೆಯೊಂದಿಗೆ ಅಭಿವ್ಯಕ್ತಿಸಿದ ಸಂದರ್ಭದಲ್ಲಿ ಸೃಜನಶೀಲವಾಗಿಯೂ, ಭೌದ್ಧಿಕವಾಗಿ ಮತ್ತು ವಿಚಾರಾತ್ಮಕವಾಗಿ ಗ್ರಹಿಸಿದಾಗ ಸೃಜನೇತರ ವಿಜ್ಞಾನ ಸಾಹಿತ್ಯವಾಗಿಯೂ ರಚನೆಯಾಗಿದೆ. ಇವೆರಡೂ ನೆಲೆಗಳು ವಿಜ್ಞಾನದ ವಸ್ತುವಿಷಯಗಳನ್ನು ಜನಸಮುದಾಯಕ್ಕೆ ತಲುಪಿಸಬಹುದಾದ ಎರಡು ದಾರಿಗಳಷ್ಟೆ. ಯಾವುದು ಮೇಲೂ ಅಲ್ಲ, ಯಾವುದು ಕೀಳು ಅಲ್ಲ. ಈ ಎರಡರ ಮುಖ್ಯ ಆಶಯವೇ ವೈಜ್ಞಾನಿಕ ವಿಚಾರಗಳನ್ನು ಜನಸಮುದಾಯಕ್ಕೆ ನೀಡುವುದಾಗಿದೆ. ಸೃಜನಶೀಲ ಬರಹಗಳಲ್ಲಿ ಮನಸ್ಸನ್ನು ಕುತೂಹಲಭರಿತವಾಗಿಸುವ ರೋಮಾಂಚನಗೊಳಿಸುವ, ಆಹ್ಲಾದಕಾರಿಯಾಗಿಸುವ ಅಂಶಗಳಿದ್ದರೆ, ಸೃಜನೇತರ ಬರಹಗಳು ಬುದ್ದಿಗೆ ಮತ್ತು ವಿಚಾರಶಕ್ತಿಗೆ ಪುಷ್ಟಿನೀಡಿ ಪ್ರಯೋಗ ಮತ್ತು ಸೂತ್ರರೂಪದ ಅಂಶಗಳಿಂದ ಕೂಡಿದ್ದು ಆಲೋಚಿಸುವಂತೆ ಮಾಡುತ್ತದೆ.

ಅಂದರೆ ಸೃಜನಶೀಲ ವಿಜ್ಞಾನ ಸಾಹಿತ್ಯವನ್ನು ಭಾವಪ್ರಧಾನವೆಂದೂ, ಸೃಜನೇತರ ಬರಹಗಳನ್ನು ಬುದ್ಧಿಪ್ರಧಾನ ಅಥವಾ ವಿಚಾರಪ್ರಧಾನ ಬರಹಗಳೆಂದೂ ಕರೆಯಬಹುದು. ಹೀಗೆ ಕನ್ನಡದ ವಿಜ್ಞಾನದ ಸಾಹಿತ್ಯದ ಅಧ್ಯಯನದ ನೆಲೆಗಳನ್ನು ಎರಡು ರೀತಿಯಲ್ಲಿ ವಿಭಾಗಿಸುವುದಾದರೆ, ಅವು ಹೀಗಿರುತ್ತವೆ.



ವಿಜ್ಞಾನ ಸಾಹಿತ್ಯದಲ್ಲಿ ರಚನೆ ಹಾಗೂ ಅಭಿವ್ಯಕ್ತಿಯ ಸ್ವರೂಪಕ್ಕೆ ತಕ್ಕಂತೆ ಕೆಲವು ಸಾಹಿತ್ಯಿಕ ಅಂಶದೊಂದಿಗೆ ಆಕರ್ಷಕವಾಗಿ ವರ್ಣನಾತ್ಮಕ ವಿವರಣೆಯಿಂದ ಕೂಡಿದ್ದು, ಕನ್ನಡ ಸಾಹಿತಿಗಳು ಬರೆದ ಕೃತಿಗಳು 'ಸೃಜನಶೀಲ ಕೃತಿಗಳಾದರೆ', ಮತ್ತೆ ಕೆಲವು ನೇರ ದಿಟ್ಟ ವಿಷಯ ನಿರೂಪಣೆಯೊಂದಿಗೆ ವೈಜ್ಞಾನಿಕ ಹಾಗೂ ವಿಮರ್ಶಾತ್ಮಕ ಮಾಹಿತಿಯಿಂದ ಕೂಡಿದ್ದು, ವಿಜ್ಞಾನ ಕ್ಷೇತ್ರದ ಲೇಖಕರು ಬರೆದ ಕೃತಿಗಳು 'ಸೃಜನೇತರ ಕೃತಿಗಳಾಗಿವೆ'. ಅದರಂತೆ ಶಿವರಾಮ ಕಾರಂತರು, ಬಿ.ಜಿ.ಎಲ್.ಸ್ವಾಮಿ, ಜಿ.ಟಿ.ನಾರಾಯಣರಾಯರು, ರಾಜಶೇಖರ ಭೂಸನೂರಮಠ, ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಮೊದಲಾದ ಸೃಜನಶೀಲ ವಿಜ್ಞಾನ ಸಾಹಿತಿಗಳ ಹಾಗೂ ಸಿ.ಆರ್.ಚಂದ್ರಶೇಖರ್, ಪಾ.ವೆಂ.ಆಚಾರ್ಯ, ನಾಗೇಶ್ ಹೆಗಡೆ, ಟಿ.ಆರ್.ಅನಂತರಾಮು, ಟಿ.ಜಿ.ಶ್ರೀನಿಧಿ, ಅನುಪಮ ನಿರಂಜನ, ಕೊಳ್ಳೆಗಾಲ ಶರ್ಮ ಮೊದಲಾದವರನ್ನು ಸೃಜನೇತರ ವಿಜ್ಞಾನ ಸಾಹಿತಿಗಳಾಗಿ ವಿಭಾಗಿಸಿಕೊಂಡು ಅಭ್ಯಸಿಸಲಾಗಿದೆ. ಸೃಜನಶೀಲ ವಿಜ್ಞಾನ ಬರಹಗಳನ್ನು ಕಥನಾತ್ಮಕ ಮತ್ತು ರೂಪಕಾತ್ಮಕ ಮಾದರಿಯ ಮೂಲಕ ಹಾಗೂ ಸೃಜನೇತರ ವಿಜ್ಞಾನ ಬರಹಗಳನ್ನು ನೇರ ಮತ್ತು ವಿವರಣಾತ್ಮಕ ಮಾದರಿಯ ಮೂಲಕ ಅಭ್ಯಸಿಸಲಾಗಿದ್ದು, ಕೆಲವು ಲೇಖಕರ ವಿಜ್ಞಾನ ಕೃತಿಗಳನ್ನು ಹಾಗೂ ಲೇಖನಗಳನ್ನು ಪ್ರಸ್ತುತ ಅಧ್ಯಯನದಲ್ಲಿ ವಿವರವಾಗಿ ಚರ್ಚೆಗೆ ಒಳಪಡಿಸಲಾಗಿದೆ.

೪.೧. ಸೃಜನಶೀಲ ವಿಜ್ಞಾನ ಬರಹಗಳು : ಕಥನಾತ್ಮಕ ಮತ್ತು ರೂಪಕಾತ್ಮಕ ಮಾದರಿ.

ಶಬ್ದಾರ್ಥಸಹಿತವಾಗಿ ಭಾಷಿಕವಾಗಿ ಮೂಡುವ ಕಲಾಭಿವ್ಯಕ್ತಿಯೇ ಸಾಹಿತ್ಯ. ಅಂದರೆ ಭಾವದ ವಸ್ತುವನ್ನು ಭಾಷೆಯಲ್ಲಿ ಅಭಿವ್ಯಕ್ತಿಸಿ, ಮಾನಸಿಕ ವಸ್ತುವನ್ನು ಹೊರಗಿನದನ್ನಾಗಿಸುವುದೇ ಸಾಹಿತ್ಯ. ಡಿ.ವಿ.ಜಿರವರ ಮಾತಿನಲ್ಲಿ ಹೇಳುವುದಾದರೇ "ಸಾಹಿತ್ಯವೆಂದರೆ ಕೇವಲ ಶಬ್ದಾರ್ಥಗಳ ಸಾಹಿತ್ಯ ಮಾತ್ರವಲ್ಲ. ಎಲ್ಲಾ ಕಲೆ ಶಾಸ್ತ್ರಗಳನ್ನು ಒಳಗೊಂಡದ್ದು"[೨]. ಹಾಗೆಯೇ ವಿಜ್ಞಾನವೆಂದರೆ ತರ್ಕನಿಷ್ಟವಾದ ಹಾಗೂ ಪ್ರಯೋಗಕ್ಕೆ ಒಳಪಟ್ಟು ನೈಜತೆಯ ಜಾಡನ್ನು ಹುಡುಕುವ ವಿಶೇಷವಾದ ಜ್ಞಾನವಾಗಿದ್ದು, ಸ್ಪಷ್ಟ ರಚನೆ ಹಾಗೂ ನಿರ್ದಿಷ್ಟ ವೈಧಾನಿಕತೆಯಿಂದ ಕೂಡಿರುತ್ತದೆ. ಹೀಗೆ ಭಾವಪ್ರಧಾನವಾದ ವಸ್ತುವನ್ನು ಪ್ರಯೋಗಕ್ಕೆ ಒಳಪಡಿಸಿ ತರ್ಕನಿಷ್ಟವಾಗಿ ವಿವರಿಸುವುದೇ ವಿಜ್ಞಾನ ಸಾಹಿತ್ಯ. ಅಂದರೆ ಭಾವಪ್ರಧಾನತೆಯೊಂದಿಗೆ ಊಹಾತ್ಮಕವಾಗಿ ಪ್ರಾರಂಭಗೊಂಡು ಸಿದ್ದಾಂತದಲ್ಲಿ ನೆಲೆನಿಂತು ಪ್ರಾಯೋಗಿಕವಾಗಿ ಸತ್ಯದರ್ಶನದೊಂದಿಗೆ ಸ್ಪಷ್ಟತೆ ಪಡೆಯುವುದೇ ವಿಜ್ಞಾನದ ಸಾಹಿತ್ಯದ ಮೂಲ. ಹೀಗೆ ವಿಜ್ಞಾನ ಮತ್ತು ಸಾಹಿತ್ಯಕ್ಕೆ ಶಬ್ದಾರ್ಥ, ಮೂಲಾರ್ಥ ಹಾಗೂ ಸ್ವರೂಪಾರ್ಥದಲ್ಲಿ ವ್ಯತ್ಯಾಸವಿದ್ದು, ವಿಜ್ಞಾನ ಸಾಹಿತ್ಯದಲ್ಲಿ ಸಾಹಿತ್ಯ ಮತ್ತು ವಿಜ್ಞಾನ ಎರಡನ್ನು ಸಮ್ಮಿಳಿಸಿ ಕಥನಾತ್ಮಕ ಮತ್ತು ರೂಪಕಾತ್ಮಕ ಮಾದರಿಯೊಂದಿಗೆ ಅಭ್ಯಸಿಸುವುದೇ 'ಸೃಜನಶೀಲ ವಿಜ್ಞಾನ ಬರಹಗಳ' ಅಧ್ಯಯನದ ಮುಖ್ಯ ನೆಲೆಯಾಗಿರುವುದನ್ನು ಕಂಡುಕೊಳ್ಳಲಾಗಿದೆ.

ವಿಜ್ಞಾನ ಸಾಹಿತ್ಯಕ್ಕೆ ಬಹಳಷ್ಟು ಲೇಖಕರು ಸಾಹಿತಿಕ ಕೊಡುಗೆಯನ್ನು ನೀಡಲಾಗಿದ್ದು, ಇದೂ ಸಹ ಇತರ ಸಾಹಿತ್ಯದಂತೆ ಸೃಜನಾತ್ಮಕ ಸಾಹಿತ್ಯ ಪ್ರಕಾರವಾಗಿದೆ ಎಂಬುದನ್ನು ತಿಳಿಯಪಡಿಸಿದ್ದಾರೆ. ಭೌತ ವಿಜ್ಞಾನಿ ಹಾಗೂ ಸಾಹಿತಿಯಾದ ಎ.ಓ ಆವಲಮೂರ್ತಿಯವರು "ಮಾನವ ನಿರ್ಮಿತವಾದುದೆಲ್ಲ ಒಂದು ರೀತಿಯಲ್ಲಿ ವಿಜ್ಞಾನ ನಿರ್ಮಿತವೇ. ವಿಜ್ಞಾನದ ಅರಿವಿಲ್ಲದೆ ಮನುಷ್ಯ ಯಾವೊಂದನ್ನು ಸೃಷ್ಟಿಸಲಾರ. ಆ ಒಂದು ದೃಷ್ಟಿಗೆ ಎಲ್ಲವೂ ಸುಂದರ ಎನ್ನುವಾಗ ಅದು ವಿಜ್ಞಾನದ ವಸ್ತು ವಿಷಯಗಳನ್ನು ಒಳಗೊಳ್ಳುತ್ತದೆ. ಬೇರೆ ವಸ್ತುಗಳಂತೆ ವಿಜ್ಞಾನ ವಸ್ತುವೊಂದು ಜನಪ್ರಿಯ ವಿಜ್ಞಾನ ಸಾಹಿತ್ಯದ ವಸ್ತುವಾದಾಗ ಅದು ಲೋಕವ್ಯವಹಾರವನ್ನು ಮೀರಿದ ಅನುಭವವನ್ನು ನೀಡುವ ಸಾಮರ್ಥ್ಯವನ್ನು ಪಡೆದುಕೊಳ್ಳುತ್ತದೆ"[೩] ಎಂದು ವಿಜ್ಞಾನ ಮತು ಜಗತ್ತಿನ ಬಗೆಗಿನ ಸಂಬಂಧವನ್ನು ತಿಳಿಸುತ್ತಾ, ವೈಜ್ಞಾನಿಕ ವಿಷಯ ಜ್ಞಾನದ ಅಗತ್ಯತೆಯನ್ನು ತಿಳಿಸುವುದರೊಂದಿಗೆ ವಿಜ್ಞಾನ ಸಾಹಿತ್ಯವು ಒಂದು ಸೃಜನಶೀಲ ವಿಜ್ಞಾನ ಬರಹ ಎಂಬುದನ್ನು ತಿಳಿಸಿದ್ದಾರೆ. ಲೇಖಕರು ಜನಪ್ರಿಯ ವಿಜ್ಞಾನ ಸಾಹಿತ್ಯದ ಬಗ್ಗೆ ಸುದೀರ್ಘ ಅಧ್ಯಯನವನ್ನು ನಡೆಸಿ, ವಿಜ್ಞಾನ ಸಾಹಿತ್ಯವು ಒಂದು ಮೀಮಾಂಸೆಯಿಂದ ಕೂಡಿದ್ದು, ಅದಕ್ಕೂ ಇತರ ಸಾಹಿತ್ಯದಂತೆ ಚಾರಿತ್ರಿಕ

ಹಿನ್ನೆಲೆ ಜನಪ್ರಿಯತೆ ಇದೆ ಎಂದು ತಿಳಿಸುತ್ತಾ, ವಿಜ್ಞಾನ ಸಾಹಿತ್ಯವು ಒಂದು ಸೃಜನಾತ್ಮಕ ಸಾಹಿತ್ಯ ಎಂಬುದನ್ನು ತಿಳಿಸಿದ್ದಾರೆ.

ತತ್ವವಾಗಿ ಪ್ರಾರಂಭವಾಗುವ ಪ್ರತಿಯೊಂದು ವಿಜ್ಞಾನದ ಚಿಂತನೆ, ವಿಷಯವು ಕಲೆಯ ರೂಪವನ್ನು ಪಡೆದು ಅಂತ್ಯವಾಗುವುದೇ ವಿಜ್ಞಾನ ಸಾಹಿತ್ಯದಿಂದ. ವಿಜ್ಞಾನ ಸಾಹಿತ್ಯವು ತತ್ವ, ವೈಜ್ಞಾನಿಕ ಚಿಂತನೆಗಳ ಲಕ್ಷಣಗಳಿಂದ ಕೂಡಿದ್ದು, ಸತ್ಯದ ಮೇಲೆ ತನ್ನ ಅಸ್ಥಿತ್ವವನ್ನು ಕಾಪಾಡಿಕೊಂಡಿರುತ್ತದೆ. ಅಲ್ಲದೆ ಸಮಾಜದ ಇತರ ಎಲ್ಲಾ ಕ್ಷೇತ್ರಗಳಂತೆ ವಿಜ್ಞಾನ ಮತ್ತು ತಾತ್ವಿಕತೆಯು ವಿಜ್ಞಾನ ಸಾಹಿತ್ಯದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದೆ. ಅಂದರೆ ಬಹಳಷ್ಟು ಸಾಹಿತಿಗಳು ಸಾಹಿತ್ಯದೊಂದಿಗೆ ವೈಜ್ಞಾನಿಕ ವಿಷಯ ವಿಚಾರಗಳನ್ನು ಪ್ರಸ್ತುತಪಡಿಸಿರುವುದನ್ನು ಕಾಣಬಹುದು. ಬಿ.ಜಿ.ಎಲ್ ಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಜಿ.ಟಿ ನಾರಾಯಣರಾಯರು ಮೊದಲಾದ ಸಾಹಿತಿಗಳು ವಿಜ್ಞಾನದ ವಿಷಯ ವಿಚಾರಗಳನ್ನು ಸೃಜನಾತ್ಮಕವಾಗಿ ಸಾಹಿತ್ಯದೊಂದಿಗೆ ಪ್ರಸ್ತುತ ಪಡಿಸಿರುವುದನ್ನು ಗುರುತಿಸಬಹುದು. ಹೀಗಾಗಿಯೇ ಎ.ಓ.ಆವಲಮೂರ್ತಿರವರು ತಮ್ಮ ವಿಜ್ಞಾನ ಸೂರ್ಯ ಎಂಬ ಲೇಖನದಲ್ಲಿ ಜಿ.ಟಿ.ನಾ, ಬಿ.ಜಿ.ಎಲ್ ಸ್ವಾಮಿ, ಪೂರ್ಣಚಂದ್ರ ತೇಜಸ್ವಿ ಮೊದಲಾದವರನ್ನು ಜನಪ್ರಿಯ ವಿಜ್ಞಾನ ಸಾಹಿತ್ಯದ ಜನಪ್ರಿಯ ಲೇಖಕರೆಂದು ಉಲ್ಲೇಖಿಸಿದ್ದಾರೆ.

ವಿಜ್ಞಾನ ಸಾಹಿತ್ಯವೆಂದರೆ ನಿಸ್ಸಾರ, ಕಾಠಿಣ್ಯ ಹಾಗೂ ಶುಷ್ಕತೆಯಿಂದ ಕೂಡಿರುತ್ತದೆ ಎಂಬುದೇ ಎಲ್ಲರ ನಂಬಿಕೆ. ಆದರೆ ಮೇಲುನೋಟಕ್ಕೆ ಹಾಗೆಯೇ ಕಾಣುವ ವಿಜ್ಞಾನ ಸಾಹಿತ್ಯ ಕೇವಲ ಶುಷ್ಕತೆ ಹಾಗೂ ಕಾಠಿಣ್ಯತೆಯಿಂದ ಕೂಡಿರುವುದರ ಹಿಂದೆ ಸತ್ಯದಿಂದ ಕೂಡಿರುವ ರಸಸೌಂದರ್ಯ ಹಾಗೂ ಅದ್ಭುತಗಳ ಮಾಧುರ್ಯವಿದೆ ಎಂಬುದನ್ನು ವಿಜ್ಞಾನ ಸಾಹಿತ್ಯದಲ್ಲಿನ ಸೃಜನಾತ್ಮಕ ಅಭಿವ್ಯಕ್ತಿಯ ಅಧ್ಯಯನದ ನೆಲೆಯು ತಿಳಿಸುವುದು. ಅದರಂತೆ ಬಹಳಷ್ಟು ಸೃಜನಾತ್ಮಕ ಸಾಹಿತಿಗಳು ವಿಜ್ಞಾನ ವಿಷಯದ ಗಹನತೆಗೆ ಸಂಬಂದಿಸಿಂತೆ ಬಳಸಿರುವ ಭಾಷೆ ಹಾಗೂ ಸಾಹಿತಿಕ ಅಂಶಗಳು ಅಂದರೆ ಉಪಮೆ, ರೂಪಕ, ರಸ ಮೊದಲಾದ ಸಾಹಿತಿಕ ಸೌಂದರ್ಯಗಳಿಂದಾಗಿ, ವಿಜ್ಞಾನ ವಿಷಯ ವಿಚಾರಗಳು ಮಧುರವಾಗಿ ಎಲ್ಲರಿಗೂ ರುಚಿಸುವಂತಾಗಿರುವುದು ವಿಜ್ಞಾನ ಸಾಹಿತ್ಯದಲ್ಲಿನ ಸೃಜನಾತ್ಮಕ ನೆಲೆಯ ಧ್ಯೋತಕವಾಗಿರುವುದನ್ನು ಕಾಣಬಹುದು.

ವಿಜ್ಞಾನ ಮತ್ತು ಸಾಹಿತ್ಯವು ಒಂದಕ್ಕೊಂದು ಪೂರಕ ಮತ್ತು ಪ್ರೇರಕ ಸಂಬಂಧವನ್ನು ಹೊಂದಿದ್ದು, ಪ್ರಕೃತಿಯುಲ್ಲಿನ ಚರಾಚರ ವಸ್ತುವಿನಲ್ಲಿ ಪ್ರಾಕೃತಿಕ ಹಾಗೂ ವೈಜ್ಞಾನಿಕ(ರಾಸಾಯನಿಕ, ಜೈವಿಕ, ಭೌತಿಕ) ಅಂಶಗಳನ್ನು ಪರಿಗಣಿಸುವುದೇ ವಿಜ್ಞಾನವಾದರೆ, ಸಾಹಿತ್ಯವು ಅದೇ ವಸ್ತುವನ್ನು ಕಾಲ್ಪನಿಕ, ಮನೋರಂಜನಾತ್ಮಕ ಹಾಗೂ ಆಸ್ವಾದನೆಯ ನೆಲೆಯಲ್ಲಿ ಪರಿಗಣಿಸುತ್ತದೆ. ವಿಜ್ಞಾನ ಹಾಗೂ ಸಾಹಿತ್ಯ ಜೊತೆಗೂಡಿ ಸೃಜನಾತ್ಮಕ ವಿಜ್ಞಾನ

ಸಾಹಿತ್ಯವಾಗಬೇಕಾದರೆ; ಸಾಹಿತಿಗಳಿಗೆ ವೈಜ್ಞಾನಿಕ ಪ್ರಜ್ಞೆಯು ಹಾಗೂ ವಿಜ್ಞಾನಿಗಳಿಗೆ ಸಾಹಿತಿಯ ದೃಷ್ಟಿಕೋನವು ಅತ್ಯಗತ್ಯ ಎಂಬುದನ್ನು ಸೃಜನಾತ್ಮಕ ವಿಜ್ಞಾನ ಬರಹಗಳು ತಿಳಿಸುತ್ತವೆ. ಇದರಿಂದ ಸಮಾಜ ಹಾಗೂ ಜನತೆಗೆ ಅತಿ ಹೆಚ್ಚಿನ ಪ್ರಯೋಜನವಾಗುವುದು. ಜನಸಮುದಾಯಕ್ಕೆ ಹತ್ತಿರವಾದ ಭಾಷೆಯಲ್ಲಿ ಸೃಜನಾತ್ಮಕವಾಗಿ ವಿಜ್ಞಾನ ಸಾಹಿತ್ಯ ರಚನೆಯಿಂದ ಅಗತ್ಯವಾದ ವೈಜ್ಞಾನಿಕ ವಿಷಯಗಳ ವಿನಿಮಯವು ಸಾಧ್ಯ ಎಂದು ಕುವೆಂಪು, ಶಿವರಾಮ ಕಾರಂತ ಮೊದಲಾದ ಮಹಾನ್ ಸಾಹಿತಿಗಳು ಹೇಳಿದ್ದಾರೆ. ಈ ದೃಷ್ಟಿಯಿಂದಲೇ ಶಿವರಾಮ ಕಾರಂತರು, ಬಿ.ಜಿ.ಎಲ್ ಸ್ವಾಮಿ, ಪೂರ್ಣಚಂದ್ರ ತೇಜಸ್ವಿ, ಜಿ.ಟಿ.ನಾರಾಯಣರಾಯರು, ಸಿ.ಆರ್ ಚಂದ್ರಶೇಖರ್, ರಾಜಶೇಖರ ಭೂಸನೂರಮಠ, ಅನುಪಮ ನಿರಂಜನ ಮೊದಲಾದ ಲೇಖಕರು ವೈಜ್ಞಾನಿಕ ಮಾಹಿತಿಯನ್ನು ಕಥನಾತ್ಮಕವಾಗಿ ಹಾಗೂ ರೂಪಕಾತ್ಮಕವಾಗಿ ಸಾಹಿತ್ಯದೊಂದಿಗೆ ಪ್ರಸ್ತುತ ಪಡಿಸಿರುವುದನ್ನು ಹಾಗೂ ಸಾಹಿತ್ಯ ಮತ್ತು ವಿಜ್ಞಾನವನ್ನು ಬೆಸೆದು ವಿಶ್ವವನ್ನು ಪರಿಚಯಿಸಿರುವುದನ್ನು ಕಾಣಬಹುದು. ಈ ಎಲ್ಲಾ ಲೇಖಕರು ಕತೆ, ಕಾದಂಬರಿಗಳು, ಬರಹಗಳು ಓದುಗರನ್ನು ಅಸಾಧಾರಣವಾದ ಕಲ್ಪನೆಯ ಲೋಕಕ್ಕೆ ಕೊಂಡೊಯ್ಯುವ ಮೂಲಕ ವೈಜ್ಞಾನಿಕ ಮಾಹಿತಿ ನೀಡಿರುವುದನ್ನು ಅಧ್ಯಯನದಲ್ಲಿ ಗಮನಿಸಲಾಯಿತು.

ಪೂರ್ಣಚಂದ್ರ ತೇಜಸ್ವಿರವರ 'ಕಾಡಿನ ಕತೆಗಳು', 'ಏರೋಪ್ಲೇನ್ ಚಿಟ್ಟೆ', 'ಫ್ಲೈಯಿಂಗ್ ಸಾಸರ್ಸ್(೧)', 'ಕರ್ವಾಲೋ', 'ಚಿದಂಬರ ರಹಸ್ಯ', ಬಿ.ಜಿ.ಎಲ್ ಸ್ವಾಮಿರವರ 'ಹಸಿರು ಹೊನ್ನು', ಜಿ.ಟಿ.ನಾರಾಯಣರಾವ್‌ರವರ 'ಭವಿಷ್ಯವಿಜ್ಞಾನ', 'ಭವಿಷ್ಯವಾಚನ', ಸಿ.ಆರ್.ಚಂದ್ರಶೇಖರ್‌ರವರ 'ಮನಸ್ಸಿನ ಸುಖ-ದುಃಖ' ಕೃತಿಗಳು ವಿಜ್ಞಾನ ಸಾಹಿತ್ಯ ವಾಗಿದ್ದರೂ, ಸಾಹಿತಿಕ ಅಭಿವ್ಯಕ್ತಿಯೊಂದಿಗೆ ಕಥನಾತ್ಮಕ ಹಾಗೂ ರೂಪಕಾತ್ಮಕ ಮಾದರಿಗಳಲ್ಲಿ ಮೂಡಿಬಂದಿರುವುದು ವಿಶೇಷವಾಗಿದೆ. ಈ ಎಲ್ಲಾ ಸಾಹಿತಿಗಳು ಗಡಸು ವಿಜ್ಞಾನ ವಿಷಯ ವಿಚಾರದಿಂದ ಕೂಡಿದ ಮಾಹಿತಿಯನ್ನು ಕಾಠಿಣ್ಯತೆ ಮತ್ತು ಶುಷ್ಕತೆಯಿಂದ ದೂರಗೊಳಿಸಿ, ವಿಜ್ಞಾನವು ಓದುಗರಿಗೆ ರುಚಿಸುವಂತೆ ಹಾಗೂ ಸುಲಭ ಗ್ರಾಹ್ಯವಾಗುವಂತೆ ಸಾಹಿತ್ಯೀಕರಿಸಿ ವಿಜ್ಞಾನವನ್ನು ವಿಜ್ಞಾನ ಸಾಹಿತ್ಯವನ್ನಾಗಿ ಮಾಡಿದ್ದಾರೆ. ತೀರ ವಸ್ತು ನಿಷ್ಠ ಹಾಗೂ ನಿರ್ಭಾವವಾದ ವಿಜ್ಞಾನದ ವಸ್ತು ವಿಷಯವನ್ನು ರಸರಿಕ್ತವಾಗಿ ಭಾವಯುಕ್ತವಾಗಿ ಸೃಷ್ಟಿಸುವಲ್ಲಿ ಸಾಹಿತಿಗಳ ಕಾರ್ಯವು ವಿಶೇಷವಾದುದು. ವಿಜ್ಞಾನವನ್ನು ಕಾಠಿಣ್ಯತೆಯಿಂದ ಹಾಗೂ ಗಡಸು ಶುಷ್ಕತೆಯಿಂದ ದೂರಗೊಳಿಸಲು ಸಾಹಿತ್ಯೀಕರಿಸುವುದೊಂದೇ ಮಾರ್ಗವೆಂಬುದನ್ನು ಈ ಎಲ್ಲಾ ಲೇಖಕರು ತೋರಿಸಿಕೊಟ್ಟಿದ್ದಾರೆ. ಹೀಗಾಗಿ ಆಯ್ದ ಕೆಲವು ಲೇಖಕರ ಕೃತಿಗಳನ್ನು ಸೃಜನಾತ್ಮಕ ವಿಜ್ಞಾನ ಬರಹಗಳ ಅಧ್ಯಯನದ ನೆಲೆಯ ಆಧಾರದಲ್ಲಿ ಇಲ್ಲಿ ಚರ್ಚಿಲಾಗಿದೆ.

ವಿಜ್ಞಾನ ವಿಷಯ ವಿಚಾರಗಳನ್ನು ಸಾಹಿತ್ಯದಷ್ಟೇ ಸುಲಲಿತವಾಗಿ ರಸಯುಕ್ತವಾಗಿ ಮನರಂಜಕವಾಗಿ ಪ್ರಸ್ತುತಪಡಿಸಬಹುದು ಎಂದು ತೋರಿಸಿಕೊಟ್ಟ ವಿಜ್ಞಾನ ಸಾಹಿತಿಗಳಲ್ಲಿ ಜನಪ್ರಿಯ ಹಾಗೂ ಹೆಸರುವಾಸಿಯಾಗಿ ಪ್ರಮುಖರಾದವರು 'ಬಿ.ಜಿ.ಎಲ್‌ಸ್ವಾಮಿ'(ಬೆಂಗಳೂರು ಗುಂಡಪ್ಪ ಲಕ್ಷ್ಮೀನಾರಾಯಣ ಸ್ವಾಮಿ). ಇವರು ವಿಜ್ಞಾನದ ಬಗೆಗಿನ ಅರಿವನ್ನು ಹೆಚ್ಚಿಸುವುದಕ್ಕಾಗಿ ಸಾಹಿತ್ಯ ಸೌಂದರ್ಯವನ್ನು ತಮ್ಮೆಲ್ಲ ಬರಹಗಳಲ್ಲಿ ಪಡಿಮೂಡಿಸಿರುವುದನ್ನು ಗಮನಿಸಬಹುದು. ಶ್ರೇಷ್ಠ ವ್ಯಂಗ್ಯ ಚಿತ್ರಕಾರ, ಸಾಹಿತಿ ಹಾಗೂ ಸಸ್ಯಶಾಸ್ತ್ರದ ವಿಜ್ಞಾನಿಯಾದ ಬಿ.ಜಿ.ಎಲ್ ಸ್ವಾಮಿರವರ ಪ್ರತಿಯೊಂದು ಕೃತಿಯು ಚಿತ್ರಕ ಭಾಷೆಯಿಂದ ಕೂಡಿದ್ದು, ನವಿರುಹಾಸ್ಯದಿಂದ ಕೂಡಿದ ಆತ್ಮೀಯ ಮಾತಿನಿಂದ ವಿಜ್ಞಾನ ವಿಷಯವನ್ನು ಅದರಲ್ಲೂ ಸಸ್ಯಶಾಸ್ತ್ರದ ಬಗೆಗಿನ ಅರಿವನ್ನು ಕಣ್ಣಿಗೆ ಕಾಣದ ಸೌಂದರ್ಯಯವನ್ನು ಕಣ್ಣಿಗೆ ಕಟ್ಟುವಂತೆ ಮೂಡಿಬಂದಿರುವುದನ್ನು ಗಮನಿಸಬಹುದು. ಮೊದಲೇ ಕಲ್ಪಿಸಿಕೊಂಡದ್ದನ್ನು ಕಾಲಾನುಕ್ರಮದಲ್ಲಿ ಕಾಲ ಸ್ಥಳಕ್ಕನುಗುಣವಾಗಿ ವಿಷಯದ ನಿರೂಪಣೆ ಮೊದಲಾದ ಅಂಶಗಳನ್ನು ಬಿ.ಜಿ.ಎಲ್ ಸ್ವಾಮಿರವರ ಅಭಿವ್ಯಕ್ತಿ ಶೈಲಿಯು ಒಳಗೊಂಡಿರುವುದು.ಅಲ್ಲದೆ ಇವರ ರಚನೆಗಳು ಅದ್ಭುತ ಪದಪ್ರಯೋಗ ಹಾಗೂ ಸೂಕ್ಷ್ಮ ಸಂವೇದನೆಯಿಂದ ಕೂಡಿದ್ದು, ಸರಳವಾಗಿ ಭಾವಾಭಿವ್ಯಕ್ತಿಯೊಂದಿಗೆ ನೈಜತೆಯಿಂದ ಕೂಡಿರುವ ಕಥನಾ ಶೈಲಿಯನ್ನು ಬಳಸಿರುವುದನ್ನು ಕಾಣಬಹುದು.

ಬಿ.ಜಿ.ಎಲ್ ಸ್ವಾಮಿರವರ 'ಹಸಿರು ಹೊನ್ನು' ಕೃತಿಯು ಒಂದು ಚೇತೋಹಾರಿಯಾದ ಕಥನಾತ್ಮಕ ಮಾದರಿಯ ಕೃತಿಯಾಗಿದೆ. ಈ ಕೃತಿಯಲ್ಲಿ ಸಸ್ಯಶಾಸ್ತ್ರದ ಅಂತಿಮ ಸ್ನಾತಕೋತ್ತರ ವಿದ್ಯಾರ್ಥಿಗಳು ಕಡ್ಡಾಯವಾಗಿ ಕಾಡು ಪ್ರದೇಶಗಳಿಗೆ ಹೋಗಿ ಗಿಡ ಮರಗಳನ್ನು ಅಭ್ಯಸಿಸಿ ಸಸ್ಯಗಳ ಮಾದರಿ ಸಂಗ್ರಹಣ ಮಾಡಿ, ಅವುಗಳ ಬಗ್ಗೆ ವರದಿಯನ್ನು ಸಿದ್ದಪಡಿಸಿ, ಪರೀಕ್ಷಾ ಸಮಯದಲ್ಲಿ ಅಧ್ಯಾಪಕರಿಗೆ ಒಪ್ಪಿಸಬೇಕು. ಅಂತಹ ಒಂದು ವಿದ್ಯಾರ್ಥಿ ಸಮೂಹದೊಂದಿಗಿನ ಅನುಭವದ ಜೊತೆಗೆ, ಸಸ್ಯಶಾಸ್ತ್ರಾಭ್ಯಾಸದಲ್ಲಿ ಬರುವ ವಿವಿಧ ಗಿಡ ಮರಗಳ ಪರಿಚಯವನ್ನು ಮಾಡುವುದೇ 'ಹಸಿರು ಹೊನ್ನು' ಕೃತಿಯ ಮೂಲ ಆಶಯ.

ಬಿ.ಜಿ.ಎಲ್ ಸ್ವಾಮಿರವರು 'ಹಸಿರು ಹೊನ್ನು' ಕೃತಿಯಲ್ಲಿ ಸಾಮಾನ್ಯವಾಗಿ ಕಥೆ-ಕಾದಂಬರಿಯಲ್ಲಿನ ಪಾತ್ರಗಳಂತೆ ಪಾತ್ರಗಳನ್ನು ಚಲಿಸುವಂತೆ ಮಾಡಿ, ಕುತೂಹಲದ ಮೂಲಕ ಸಸ್ಯಲೋಕದ ಪರಿಚಯವನ್ನು ಮನೋಜ್ಞವಾಗಿ ಮಾಡಿಕೊಟ್ಟಿದ್ದಾರೆ. ಇಲ್ಲಿ ಲೇಖಕರು ಬಳಸಿರುವ ಅಭಿವ್ಯಕ್ತಿ ಶೈಲಿಯು ಸಾಹಿತ್ಯ ಮತ್ತು ವಿಜ್ಞಾನ ಎರಡರ ನಡುವಿನ ಅಂತರವನ್ನೇ ಅಳಿಸಿಹಾಕುವಂತೆ ಮೂಡಿಬಂದಿದೆ. ಅಲ್ಲದೇ ಈ ಕೃತಿಯಲ್ಲಿ ಪಾತ್ರಗಳಿಂದಾಗಿ(ಸಾಹಿತ್ಯ) ಸಸ್ಯಗಳ(ವಿಜ್ಞಾನದ) ಮಾಹಿತಿಯು ಹೊರಬಂದಿದೆಯೇ ಹೊರತು ಸಸ್ಯ ಶಾಸ್ತ್ರದ ಮಾಹಿತಿಯೊಂದಿಗೆ ಪಾತ್ರಗಳ ಪರಿಚಯವಾಗಿಲ್ಲ ಎಂಬುದು ಸಾಹಿತ್ಯದ

ಅಭಿವ್ಯಕ್ತಿಯ ಪ್ರಭಾವವನ್ನು ತೋರಿಸುವುದು. ಜೊತೆಗೆ ಈ ಕೃತಿಯಲ್ಲಿ ಬಂದಿರುವ ಪಾತ್ರಗಳೆಲ್ಲಾ ಸಂವೇದನಾಶೀಲವಾಗಿದ್ದು, ಅವುಗಳು ಹೇಳುವ ಹಾಗೂ ತಿಳಿಸುವ ಸಸ್ಯವಿಜ್ಞಾನಕ್ಕೆ ಸಂಬಂಧಿಸಿದ ಮಾಹಿತಿಗಳು ವಿಶೇಷವಾಗಿದ್ದು; ಸೃಜನಶೀಲತೆಯ ಪ್ರತೀಕವಾಗಿರುವುದನ್ನು ಗುರುತಿಸಬಹುದು. ಕೇವಲ ಸಾಹಿತ್ಯವನ್ನು ತಮ್ಮ ಲೇಖನದಲ್ಲಿ ಬಳಸಿದ್ದಲ್ಲದೆ ಅಗತ್ಯ ಬಿದ್ದಲ್ಲೆಲ್ಲ ಕನ್ನಡ ತಮಿಳಿನ ಅನೇಕ ಕವಿಗಳ ಕಾವ್ಯಗಳನ್ನು ಬಳಸಿಕೊಳ್ಳುವುದರೊಂದಿಗೆ ವಿಜ್ಞಾನವನ್ನು ಸಾಹಿತ್ಯದೊಂದಿಗೆ ಸಮ್ಮಿಲಿತಗೊಳಿಸಿದ್ದಾರೆ. ಅಲ್ಲದೇ ಪುರಾಣ ಕಥೆಗಳು ಹಾಗೂ ಮಹಾಕಾವ್ಯಗಳಿಂದ ಆಯ್ದ ವಿವರಣೆಗಳನ್ನು ತಮ್ಮ ಬರಹಗಳಲ್ಲಿ ಪ್ರಸ್ತುತ ಪಡಿಸುವುದರೊಂದಿಗೆ ರಸಸೌಂದರ್ಯವನ್ನು ಓದುಗರಿಗೆ ನೀಡುವುದನ್ನು ಕಾಣಬಹುದು.

'ಹಸಿರು ಹೊನ್ನು' ಕೃತಿಯಲ್ಲಿ ಕೇವಲ ಸಸ್ಯಗಳ ವಿಷಯವಾಗಿಯಷ್ಟೇ ಅಲ್ಲದೆ ಇತರ ಬಹಳಷ್ಟು ವಿಷಯಗಳನ್ನು ನವಿರಾದ ಹಾಸ್ಯದೊಂದಿಗೆ ಪಾತ್ರಗಳನ್ನು ಚಲಿಸುವ ಮೂಲಕ ಅನಗತ್ಯವಾದ ಬಹಳಷ್ಟು ವಿಷಯಗಳನ್ನು ಅಂದರೆ ಪ್ರವಾಸಕ್ಕೆ ಹೊರಡುವ ಸಿದ್ದತೆಯಲ್ಲಿ ಮುಖ್ಯೋಪಾದ್ಯಾಯರು ಕೇಳುವ ಹೆಡ್ಡ ಪ್ರಶ್ನೆಗಳು, ಕಾಲೇಜಿನ ಕೆಂಪು ಟೇಪಿನ ಕಾಟ, ಕೂಲಿಯಾಳಿನ ಕೂಲಿದುಡ್ಡಿನ ಉಳಿವಿಗಾಗಿ ಕಾಲೇಜಿಗೆ ಕತ್ತೆಯನ್ನು ಕೊಳ್ಳುವ ಪ್ರಯತ್ನ ಮೊದಲಾದವುಗಳನ್ನು ಮುಖ್ಯ ವಿಷಯದೊಂದಿಗೆ ಚಾಣಾಕ್ಷತನದಿಂದ ಅನಗತ್ಯ ಅನಿಸದಂತೆ ಹೆಣೆದಿರುವುದರಲ್ಲಿ ಸೃಜನಾತ್ಮಕ ಅಭಿವ್ಯಕ್ತಿಯ ಅಂಶವು ಎದ್ದು ಕಾಣುತ್ತದೆ.

ಪ್ರವಾಸಕ್ಕೆ ಹೋಗುವಾಗ ಒಬ್ಬ ಕೂಲಿಯಾಳಿನೊಂದಿಗೆ ಅಡುಗೆಯವರನ್ನು ಕರೆದುಕೊಂಡು ಹೋಗುವ ಪ್ರತೀತಿಯಿಂದಾಗಿ ಚೋಳ ರಾಜಮನೆತನದ ಕುಡಿಯಾದ ಹಾಗೂ ಪಾಕಪ್ರಿಯನಾದ ಇಳವರಸನು "ನೀವು ಮಾಂಸಾಹಾರ ಸೇವಿಸುವುದಿಲ್ಲವೇ?" ಎಂದದ್ದಕ್ಕೆ ಲೇಖಕರು ಇಲ್ಲ ಎಂಬ ಪ್ರತಿಕ್ರಿಯೆ ನೀಡಿದಾಗ, "ಪ್ರವಾಸದಲ್ಲಿ ಒಂದೆರಡು ದಿನದ ಮಟ್ಟಿಗಾದರೂ ಮಾಂಸಾಹಾರಬೇಕೆಂದು ಹುಡುಗರು ಕೇಳುತ್ತಿದ್ದಾರೆ" ಎಂದಾಗ ಸ್ವಾಮಿಯವರು, "ಇಂತಹ ಪ್ರವಾಸ ಏರ್ಪಡಿಸಿದಾಗ ಯಾವ ತರವಾದ ಮಾಂಸಾಹಾರವೂ ಕೂಡದು ಎಂಬ ಸಂಪ್ರದಾಯವನ್ನು ಆಂಗ್ಲರ ಕಾಲದಿಂದ ಪಾಲಿಸಿಕೊಂಡು ಬಂದಿದ್ದಾರೆ. ಈಗ ಹಿಂದಿನ ಪದ್ಧತಿಯನ್ನು ತಪ್ಪಿಸುವ ಸಂದರ್ಭವೇನು ಒದಗಿಲ್ಲವಲ್ಲ" ಎಂದು ಉತ್ತರ ಸ್ಪಷ್ಟಪಡಿಸಿದರು. ಇದಕ್ಕೆ ಇಳವರಸನು "ವೈದ್ಯರು ನನಗೆ ದಿನಕ್ಕೆ ಒಂದು ಬಾರಿಯಾದರೂ ಮಾಂಸಾಹಾರ ಸೇವನೆ ಇಲ್ಲದಿದ್ದರೆ ದಿನಕ್ಕೆ ಐದು ಪೌಂಡ್ ತೂಕ ಕಡಿಮೆಯಾಗುತ್ತೀಯ ಎಂದಿದ್ದಾರೆ" ಎಂದದ್ದಕ್ಕೆ ಲೇಖಕರು "ಯಾವ ವೈದ್ಯ ನಿನಗೆ ಹೇಳಿದ್ದು, ಅವರ ಹತ್ತಿರ ಪ್ರಮಾಣ ಪತ್ರವನ್ನು ತೆಗೆದು ಕೊಂಡು ಬಾ" ಎಂದು ಹೇಳುವುದರೊಂದಿಗೆ ಆರೋಗ್ಯ ವಿಜ್ಞಾನದ ಮಾಹಿತಿಯನ್ನೂ ಹಾಗೂ ವಿಜ್ಞಾನದ ಪ್ರಶ್ನಾತ್ಮಕ ಮನೋಭಾವವನ್ನು ಸಾಹಿತಿಕ ಅಂಶದೊಂದಿಗೆ ಸೂಚಿಸಿರುವುದು ವಿಶೇಷವಾಗಿದೆ. ಹೀಗೆ

'ಹಸಿರು ಹೊನ್ನು' ಕೃತಿಯಲ್ಲಿ ಲೇಖಕರ ನವಿರು ಹಾಸ್ಯ, ಸಂಸ್ಕೃತಿಯ ನೆನಪು ಹಾಗೂ ಸಾಹಿತ್ಯೀಕರಣಗೊಂಡ ವಿವರಣೆಗಳನ್ನು ಕಾಣಬಹುದು. ಅಲ್ಲದೆ ಬಿ.ಜಿ.ಎಲ್.ಸ್ವಾಮಿರವರ ಕೃತಿಗಳು ಆಡುನುಡಿಯಿಂದ ಕೂಡಿದ ಲಘುಧಾಟಿಯ ನಿರೂಪಣೆಯ ಅನ್ಯಾದೃಶ ಕಥನಾ ಶೈಲಿ ಹಾಗೂ ಸುಲಲಿತ ಓದು ವಿಧಾನದಿಂದಾಗಿ ಹೆಚ್ಚು ಜನಪ್ರಿಯತೆಗೊಂಡು ಕೃತಿಯಲ್ಲಿನ ವೈಜ್ಞಾನಿಕ ಅಗತ್ಯ ಮಾಹಿತಿಯು ಸಮಾಜ ಹಾಗೂ ಜನಜೀವನಕ್ಕೆ ಸಹಕಾರಿಯಾಗಿದೆ.

ಅಂತೆಯೇ ವಿಜ್ಞಾನ ಮತ್ತು ಸಾಹಿತ್ಯವನ್ನು ಜೊತೆಜೊತೆಯಲ್ಲಿಯೇ ಕೊಂಡೊಯ್ದ ಮತ್ತೊಬ್ಬ ಮಹಾನ್ ಮೇಧಾವಿ ಸಾಹಿತಿ ಜಿ.ಟಿ.ಎನ್ (ಗುಡ್ಲೆ ಹಿಟ್ಲು ತಿಮ್ಮಪ್ಪಯ್ಯ ನಾರಾಯಣರಾವ್). ಇವರ ಎಲ್ಲಾ ರಚನೆಗಳು ರೂಪಕ, ಉಪಮೆ, ರಸ ಮೊದಲಾದವು ಗಳನ್ನೊಳಗೊಂಡಂತೆ ಸಾಹಿತ್ಯ ಸಮೃದ್ಧಿಯಿಂದ ಕೂಡಿರುತ್ತವೆ. ವಿಜ್ಞಾನ ಬರಹವನ್ನು ಸಾಹಿತ್ಯವು ಸತ್ವಯುತವಾಗಿಯೂ ಹಾಗೂ ಆಕರ್ಷಣೀಯವಾಗಿಯೂ ಮಾಡುತ್ತದೆ ಎಂಬುದನ್ನು ಜಿ.ಟಿ.ಎನ್ ಬರಹಗಳಲ್ಲಿ ಕಾಣಬಹುದು. ಜನಪ್ರಿಯ ವಿಜ್ಞಾನ ವಾಙ್ಮಯ ರಚನೆಯಲ್ಲಿ ಅವರೇ ಹೇಳುವಂತೆ "ವಿಜ್ಞಾನದ ಜಟಿಲ ಪರಿಕಲ್ಪನೆಗಳನ್ನು ಜನಪ್ರಿಯ ಶೈಲಿಯಲ್ಲಿ ನಿರೂಪಿಸಲು ಒಬ್ಬ ಲೇಖಕನಿಗೆ ಸಾಹಿತ್ಯ ಕುರಿತಂತೆ ಸೃಜನಶೀಲ ಪ್ರಭುತ್ವ ಅಗತ್ಯ ಎಂದು ಹೇಳುತ್ತಾ ಮುಂದುವರಿದು ಸೂತ್ರರೂಪದಲ್ಲಿ

೧. ವಿಷಯ ಪ್ರಾವಿಣ್ಯ,

೨, ಭಾಷಾಪ್ರಭುತ್ವ,

೩. ಪರಿಪೂರ್ಣ ನಿಷ್ಠೆ,

೪. ಸಮಕಾಲೀನ ಪ್ರಜ್ಞೆ ಇರುವುದು ಆವಶ್ಯಕ"[೫] ಎಂದು ಹೇಳಿದ್ದಾರೆ.

ಜಿ. ಟಿ. ನಾರಾಯಣರಾವ್‌ರವರು ತಮ್ಮ ಬರಹಗಳು ಸಾಹಿತ್ಯಿಕವಾಗಿರಬೇಕೆಂದು ತಮ್ಮ ಲೇಖನಗಳ ರಚನೆಯ ಸಂದರ್ಭದಲ್ಲಿ ಪದಗಳ ಆಯ್ಕೆ ಮತ್ತು ಅವುಗಳ ಜೋಡಣೆಯತ್ತ ಬಹಳ ಎಚ್ಚರಿಕೆಯನ್ನು ವಹಿಸುತ್ತಿದ್ದರು. ಸ್ಪಷ್ಟ ನಿಯಮಗಳೊಂದಿಗೆ ತಾರ್ಕಿಕ ವಿಚಾರದಿಂದ ಯಾವುದೇ ಗೊಂದಲಕ್ಕೆ ಆಸ್ಪದ ನೀಡದೆ ಹಂತ ಹಂತವಾಗಿ ವಿಷಯ ಮೂಡಿಬರುವಂತೆ ಮಾಡಿದ್ದಾರೆ. ಅಲ್ಲದೇ ರಾಮಾಯಣ, ಮಹಾಭಾರತ, ಡಿ.ವಿ.ಜಿ, ಬೇಂದ್ರೆ, ಪಂಜೆ ಮಂಗೇಶರಾಯರು, ವಚನಕಾರರು, ಹಳಗನ್ನಡದ ಕವಿಗಳು ಮೊದಲಾದವರ ಕಾವ್ಯಗಳ ಜೊತೆಗೆ ತಮ್ಮ ಸ್ವಂತ ಪದ್ಯಗಳ ರಚನೆಯನ್ನು ಮಾಡುತ್ತಿದ್ದದ್ದು ಅವರಲ್ಲಿನ ಸಾಹಿತಿಕ ಜ್ಞಾನ ಹಾಗೂ ಸೃಜನಶೀಲತೆಯೇ ಆಗಿದೆ. ಪರಿಸರದ ಬಗೆಗಿನ ವಿವರಣೆ ನೀಡುವಾಗ ಪಂಜೆ ಮಂಗೇಶರಾಯರ ಒಂದು ಕವನದ ಸಾಲನ್ನು, ಅವರು ಬಳಸಿರುವಲ್ಲಿ ಸೃಜನಶೀಲತೆಯು ಎದ್ದು ಕಾಣುತ್ತದೆ. ಅವರೇ ಹೇಳಿದ ನುಡಿಯಂತೆ "ಕವಿಶಿಷ್ಯ ಪಂಜೆ

ಮಂಗೇಶರಾಯರು ತಾವು ಕಂಡು ನಲಿದ ಕೊಡಗನ್ನು ಕುರಿತು ಬರೆದರು 'ಇದು ಆಗಸ್ತ್ಯನ ತಪದ ಮಣೆ ಕಾವೇರಿತಾಯ ತವರ್ಮನೆ'. ಅದೇ ಪಂಜೆಯವರು ಇಂದಿನ ಕೊಡಗನ್ನು (ಅಷ್ಟೇಕೆ ಭಾರತದ ಯಾವುದೇ ಅರಣ್ಯವಲಯವನ್ನು ಇಲ್ಲವೇ ನಿಸರ್ಗರಮ್ಯ ಪ್ರದೇಶವನ್ನು) ನೋಡಿದ್ದರೆ, ಪ್ರಾಯಶಃ ಹೀಗೆ ಬರೆದಿರುತ್ತಿದ್ದರು: ಇದು ಕಿರಾತರ ಬೇಟೆಗಳ ಮರಕಟುಕರಾಡುಂಬೊಲವಲ!"[೬] ಎಂದು ಅರಣ್ಯಗಳ ನಾಶದಿಂದ ಕೊಡಗಿನ ಪ್ರಾಕೃತಿಕ ಸಮತೋಲನ ಕೆಡುತ್ತಿದೆ ಎಂಬುದನ್ನು ಹೇಳಲು ಪಂಜೆ ಮಂಗೇಶರಾಯರ ಕಾವ್ಯದ ಸಾಲುಗಳನ್ನು ಸಮಯ, ಸಂದರ್ಭ ಹಾಗೂ ಮನೋಚಿತವಾಗಿ ಸೂಕ್ತವಾಗಿ ಬಳಸಿರುವುದು ಸೃಜನಶೀಲ ಬರವಣಿಗೆಗೆ ಉತ್ತಮ ನಿರ್ಶನವಾಗಿದೆ.

ತಮ್ಮ 'ಭವಿಷ್ಯ ವಿಜ್ಞಾನ' ಕೃತಿಯಲ್ಲಿ "ಮುಸುಕು ತೆಗೆಯದ ಮಾಯಾಂಗನೆ. ಮುಸುಕಿನೊಳಗೆ ಧಗ ಧಗಿಸುವ ಕುಂಭೀಪಾಕ ಇರಬಹುದೆಂದು ಊಹೆ"[೭] ಎಂದು ಶುಕ್ರನ ಸ್ವರೂಪ ಲಕ್ಷಣಗಳನ್ನು ಹೇಳುವಲ್ಲಿ ಬಳಸಿದ ಭಾಷಾ ಪ್ರಯೋಗವು ಸಾಹಿತಿಕ ಅಂಶ ಅಂದರೆ ಕಾವ್ಯಾತ್ಮಕತೆದಿಂದ ಕೂಡಿದ್ದು, ಅವರ ಸೃಜನಾತ್ಮಕ ವಿಜ್ಞಾನ ಬರಹದ ಪ್ರತಿಭೆಯು ಅನಾವರಣಗೊಳ್ಳುತ್ತದೆ. ಹೀಗೆ ಜಿ.ಟಿ.ಎನ್‌ರವರು ವಿಷಯಾಂಶ, ಸಾಹಿತ್ಯಾಂಶ ಹಾಗೂ ವಿಜ್ಞಾನಾಂಶಗಳೊಂದಿಗೆ ವಿಜ್ಞಾನದಲ್ಲಿ ಸಾಹಿತ್ಯ ಹಾಗೂ ಸಾಹಿತ್ಯದಲ್ಲಿ ವಿಜ್ಞಾನವನ್ನು ಅಭಿವ್ಯಕ್ತಿಸಿ ಕೃತಿಗಳನ್ನು ರಚಿಸಿದ್ದಾರೆ.

ಜಿ.ಟಿ.ನಾರಾಯಣರಾವ್‌ರವರು 'ಭವಿಷ್ಯ ವಿಜ್ಞಾನ' ಎಂಬ ಕೃತಿಯಲ್ಲಿ ವಿಜ್ಞಾನದ ಅನ್ವಯದಿಂದ ಪ್ರಸ್ತುತ ಸಂದರ್ಭದಲ್ಲಿ ಹಾಗೂ ಭವಿಷ್ಯದಲ್ಲಿ ಒದಗಬಹುದಾದ ಅನುಕೂಲ ಅನಾನುಕೂಲಗಳ ಬಗ್ಗೆ ತಿಳಿಸುತ್ತಾ ಎಚ್ಚರಿಕೆಯನ್ನೂ ನೀಡುವ ಕೆಲಸ ಮಾಡುವುದರೊಂದಿಗೆ ತಮ್ಮ ಜವಾಬ್ದಾರಿಯನ್ನು ಮೆರೆದಿದ್ದಾರೆ. ಅದರಂತೆ 'ಭವಿಷ್ಯ ವಾಚನ' ಎಂಬ ತಮ್ಮ ಕೃತಿಯಲ್ಲಿ ಕಾಲದ ವಿವರಣೆಯೊಂದಿಗೆ ಭವಿಷ್ಯ ಎಂದರೇನು? ಭವಿಷ್ಯ ವಾಚನ ಎಂದರೇನು ಎಂಬುದನ್ನು ಸಂದಭೋ೯ಚಿತವಾದ ನಿದರ್ಶನಗಳ ಮೂಲಕ ವಿವರಣೆ ನೀಡಿರುವುದ ರೊಂದಿಗೆ ಕೃತಿಯ ಕೊನೆಯಲ್ಲಿ ಭೂತ ಭವಿಷ್ಯವೆಂಬುದು ಪ್ರಕೃತಿ ನಿರ್ಧರಿತವಾದುದಾಗಿದ್ದು, ಪ್ರಕೃತಿಗೆ ವಿರುದ್ಧವಾಗಿ ವರ್ತಿಸುವುದು ಅನಾಹುತಕ್ಕೆ ದಾರಿ ಮಾಡಿದಂತೆ ಎಂದು ಹೇಳಿರುವುದು ಮನುಷ್ಯ ಮತ್ತು ಪ್ರಕೃತಿ ನಡುವಿನ ಸಂಬಂಧ ಮತ್ತು ಅಂತರಗಳ ಬಗ್ಗೆ ಮಾಹಿತಿ ನೀಡುವಂತಿದೆ. ಇವರ ಎಲ್ಲಾ ಬರವಣಿಗೆಗಳು ಬುದ್ದಿಸೂಕ್ಷ್ಮತೆಗೆ ಮೀರಿ ವರ್ತಿಸುವಂತೆ ಯೋಚಿಸುವಂತೆ ಮಾಡುವುದರೊಂದಿಗೆ ಕಲ್ಪನಾಶಕ್ತಿ, ವಿವೇಚನಾ ಶಕ್ತಿಯನ್ನು ಹೆಚ್ಚಿಸಿ ವಿಷಯದ ಬಗೆಗಿನ ಪೂರ್ಣ ಅರಿವನ್ನು ಮೂಡಿಸುವಂತೆ ವಿವರಣೆಯಲ್ಲಿ ಬಳಸಿರುವ ಅಭಿವ್ಯಕ್ತಿಯ ಭಾಷಾ ಸ್ವರೂಪವು ಸೂಕ್ತವಾಗಿ ಮೂಡಿಬಂದಿರುವುದನ್ನು ಗಮನಿಸಬಹುದು.

೫೦–೬೦ರ ದಶಕದ ನವ್ಯ ಸಾಹಿತ್ಯದ ಉಚ್ಛ್ರಾಯ ಸಂದರ್ಭದಲ್ಲಿ, ನವ್ಯ ಸಾಹಿತ್ಯ ರಚನೆಗಳಲ್ಲಿ ಆತ್ಮ ವಿಮರ್ಶೆ, ವೈಚಾರಿಕತೆ, ಹೆಣ್ಣು ಗಂಡಿನ ಸಂಬಂಧ, ಹುಟ್ಟು ಸಾವು ನಿರಪರಾಧಿ ಯಾತನೆ, ಸಾಮಾಜಿಕ ಪ್ರಜ್ಞೆ ಮೊದಲಾದ ಅಂಶಗಳನ್ನು ಕಾಣುವ ಕಾಲವಾಗಿತ್ತು. ಅಂದರೆ ಈ ಎಲ್ಲಾ ಅಂಶಗಳು ಸಾಹಿತ್ಯ ಪ್ರಕಾರಗಳಲ್ಲಿ ತಮ್ಮ ಪ್ರಭಾವವನ್ನು ಬೀರಿದ್ದವು. ಇಂತಹ ಕಾಲದಲ್ಲಿ ಬರೆಯಲು ಪ್ರಾರಂಭಿಸಿದ ಕೆ.ಪಿ.ಪೂರ್ಣಚಂದ್ರ ತೇಜಸ್ವಿರವರು ನವ್ಯ ಸಾಹಿತ್ಯ ಸಂಪ್ರದಾಯಕ್ಕೆ ಹೊರತಾಗಿ ಹೊಸದೊಂದು ಮಾರ್ಗದಲ್ಲಿ ತಮ್ಮದೇ ಆದ ಕೆಲವು ತತ್ವ ಪರಿಕಲ್ಪನೆಗಳ ಮೇಲೆ ಕೃತಿ ರಚನೆ ಮಾಡುವ ಮೂಲಕ ವ್ಯಕ್ತಿ ವಿಶಿಷ್ಟ ಸಿದ್ಧಾಂತದೊಂದಿಗೆ ಗಮನ ಸೆಳೆದರು. ತಮ್ಮದೇ ರಚನಾ ತತ್ವಕ್ಕೆ ಬದ್ಧರಾಗಿ, ಹೆಚ್ಚು ಖಚಿತ ಧ್ವನಿಯಲ್ಲಿ ವಿಜ್ಞಾನ ವಿಷಯವನ್ನು ಬರೆಯುತ್ತಿದ್ದರು. ಕಂಡಂತೆ ಮತ್ತು ಕೇಳಿದಂತೆ ಹೇಳುವುದು, ವ್ಯಾಖ್ಯಾನಿಸುವುದು, ಓದುಗರ ಪ್ರತಿಕ್ರಿಯೆಯನ್ನು ಕಲ್ಪಿಸಿಕೊಂಡು ಕಾಲಾನುಕ್ರಮದಲ್ಲಿ ಕಾಲ ಸ್ಥಳಕ್ಕನುಗುಣವಾಗಿ ವಿಷಯದ ನಿರೂಪಣೆ ಮೊದಲಾದ ಅಂಶಗಳನ್ನು ಪೂರ್ಣಚಂದ್ರ ತೇಜಸ್ವಿರವರ ಕೃತಿಗಳು ಒಳಗೊಂಡಿರುವುದು. ಜೊತೆಗೆ ಅದ್ಭುತ ಪದಪ್ರಯೋಗವು ಸೂಕ್ಷ್ಮ ಸಂವೇದನೆಯಿಂದ ಕೂಡಿದ್ದು, ಸರಳವಾಗಿ ಭಾವಾಭಿವ್ಯಕ್ತಿಯೊಂದಿಗೆ ನೈಜತೆಯಿಂದ ವಿಷಯವು ಕೂಡಿರುವುದನ್ನು ಗಮನಿಸಲಾಗಿದೆ.

'ಏರೋಪ್ಲೇನ್ ಚಿಟ್ಟೆ' ಕೃತಿಯಲ್ಲಿನ ಲೇಖಕರ ಮಾತು ಪುಟದಲ್ಲಿ ಅವರೇ ಹೇಳಿದಂತೆ "ಮಕ್ಕಳಿಗೆ ಶುಷ್ಕ ವೈಜ್ಞಾನಿಕ ವಿಚಾರಗಳನ್ನು ಪಾಠ ಹೇಳಿದಂತೆ ವಿವರಿಸಿದರೆ ಅವರ ಮನಸ್ಸು ತಿರಸ್ಕರಿಸುತ್ತದೆ. ಸ್ವಾನುಭವಗಳೊಂದಿಗೆ ಸಂಯೋಜನೆಗೊಂಡು ಜೀವನ ಸಂದರ್ಭಗಳಲ್ಲಿ ಹೇಳಿದಾಗ ಮಾತ್ರ ಎಂಥ ಕ್ಲಿಷ್ಟ ವಿಚಾರವಾದರೂ ಸುಲಭವಾಗಿ ಹೃದ್ಗತವಾಗುತ್ತದೆ"[೮] ಎಂದು ಹೇಳಿರುವಲ್ಲಿ ಅವರು ಗುರುತಿಸಿದ ವಿಜ್ಞಾನ ಕೃತಿಗಳ ಭಾಷಾಭಿವ್ಯಕ್ತಿಯು ಗೋಚರಿಸುವುದು. ಅಲ್ಲದೆ, ಸಾಹಿತ್ಯದ ಮಾರ್ಗದಲ್ಲಿನ ಮಹತ್ವದ ಗುಣಗಳನ್ನು ತನ್ನಲ್ಲಿ ಅರಗಿಸಿಕೊಂಡು, ಅದರಲ್ಲಿನ ಕುಂದು ಕೊರತೆಗಳನ್ನು ಗುರುತಿಸಿ, ಹೊಸ ಮಾರ್ಗದೊಂದಿಗೆ ಜನರಿಗೆ ಅಗತ್ಯ ವಿಜ್ಞಾನ ಮಾಹಿತಿಯನ್ನು ತಲುಪಿಸುವ ರೀತಿಯಲ್ಲಿ ಸರಿಯಾಗಿ ವಿಜ್ಞಾನವನ್ನು ಸೇರಿಸಿ ರಚಿಸಿದ ಕೃತಿಗಳೆಂದರೆ 'ನಿಗೂಢ ಮನುಷ್ಯರು', 'ಕರ್ವಾಲೋ', 'ಚಿದಂಬರ ರಹಸ್ಯ', 'ಪರಿಸರದ ಕತೆಗಳು' ಮೊದಲಾದವು. ಈ ಕೃತಿಗಳೆಲ್ಲವು ಅರ್ಥವಂತಿಕೆ, ಜೀವಂತಿಕೆಯಿಂದ ಕೂಡಿದ್ದು, ವಿಜ್ಞಾನ ವಿಚಾರದಿಂದ ಕೂಡಿದುದಾಗಿದೆ. ಜನರಿಂದ ದೂರ ಸರಿಯುವ ನೀರಸ ವಸ್ತುವಿನಂತಿರುವ ವಿಜ್ಞಾನದ ಸತ್ಯಗಳು ಗರಿಬಿಚ್ಚಿ ಸ್ವಚ್ಛಂಧವಾಗಿ ಹಾರುವುದು ಈ ಕೃತಿಗಳಲ್ಲಿ.

'ಪರಿಸರದ ಕತೆಗಳು', 'ಕಾಡಿನ ಕತೆಗಳು ೧', 'ಏರೋಪ್ಲೇನ್ ಚಿಟ್ಟೆ', 'ಫ್ಲೈಯಿಂಗ್ ಸಾಸರ್ಸ್ ೧' ಮತ್ತು 'ಕರ್ವಾಲೋ' ಕೃತಿಗಳು ಒಂದು ಕಡೆ ಪರಿಸರ ಪ್ರಕೃತಿಗೆ ಸಂಬಂಧಿಸಿದಂತೆ

ಕಂಡು ಬಂದರೆ ಮತ್ತೊಂದು ಕಡೆ ವೈಜ್ಞಾನಿಕ ಅಂಶದಿಂದ ಕೂಡಿದ್ದು, ವಿಜ್ಞಾನದ ವಿಷಯವನ್ನು ಸರಳವಾಗಿ ಅರ್ಥ ಮಾಡಿಸುವಂತೆ ಪ್ರತಿನಿಧಿಸುತ್ತವೆ. ತೇಜಸ್ವೀರವರ ಈ ಕೃತಿಗಳು ವಿಜ್ಞಾನ ತಂತ್ರಜ್ಞಾನ ಕ್ಷೇತ್ರವು ಹೊಸ ಹೊಸ ಆವಿಷ್ಕಾರದಿಂದ ಕೂಡಿದ್ದು, ಮಹತ್ತರ ವೈಜ್ಞಾನಿಕ ಸಾಧನೆಯ ತುತ್ತ ತುದಿಯನ್ನು ತೋರಿಸುತ್ತಾ ವೈಜ್ಞಾನಿಕ ಸಾಧನೆಯ ಅಲ್ಪತೆಯನ್ನು ತೀರ ಕ್ಷುಲ್ಲಕ ವಸ್ತು ಎಂದು ತೋರಿಸುವಲ್ಲಿ ಬಂದು ನಿಲ್ಲುವುದು ವಿಶೇಷವಾಗಿದೆ. ಅಲ್ಲದೇ 'ಕರ್ವಾಲೋ' ಕಾದಂಬರಿಯಲ್ಲಿ ತೀರ ಕ್ಷುಲ್ಲಕ ಎಂದು ಪರಿಗಣಿಸಲ್ಪಟ್ಟ, ಉಪೇಕ್ಷೆಗೆ ಒಳಗಾದ ಪರಿಸರದ ಕೆಲವು ಜೀವಿಗಳು ಅಂದರೆ ಮಂದಣ್ಣ, ಕರಿಯ, ಹಾವುಗೊಲ್ಲರ ಎಂಕ್ಟ, ಹಾರುವ ಓತಿ ಮೊದಲಾದವು ಕೃತಿಯಲ್ಲಿ ಎಳೆ ಎಳೆಯಾಗಿ ಹಂತ ಹಂತವಾಗಿ ತಮ್ಮ ನಿಗೂಢತೆಯನ್ನು ಬಿಚ್ಚುತ್ತ ಕೊನೆಗೆ ನಿಗೂಢವೇ ಆಗಿ ಬಿಡುವುದು ಹಾಗೂ ಅದ್ಭುತಗಳ ತೋರಿಕೆಯಲ್ಲೇ ವಿಸ್ಮಯತೆಯನ್ನು ಕಾಪಾಡಿಕೊಂಡು, ಇನ್ನೇನು ಕೈಗೆ ಸಿಕ್ಕಿತು ಎನ್ನುವಷ್ಟರಲ್ಲಿ ದೂರವಾಗಿ ಕಣ್ಮರೆಯಾಗಿಬಿಡುವುದರ ಮೂಲಕ ಅಹಂಕಾರಿ ಮನುಷ್ಯನಿಗೆ ಪ್ರಕೃತಿಯನ್ನು ನೀನು ಗೆಲ್ಲಲಾರೆ ಎನ್ನುವಂತೆ ಸವಾಲಾಗುವುದು ಕೃತಿಯಲ್ಲಿ ವೈಜ್ಞಾನಿಕ ಪ್ರಜ್ಞೆಯ ದ್ಯೋತಕವಾಗಿರುವಂತೆ ತೋರ್ಪಡುವುದು ಲೇಖಕರ ಅಭಿವ್ಯಕ್ತಿಯ ದ್ಯೋತಕವಾಗಿದೆ.

ಕರ್ವಾಲೋ ಕೃತಿಯಲ್ಲಿ ಬರುವ ಪ್ರತಿಯೊಂದು ಪಾತ್ರಗಳೂ ಕೇವಲ ಪಾತ್ರಗಳಾಗಿರದೆ, ಜೀವಂತ ವ್ಯಕ್ತಿಗಳಾಗಿ ಓದುಗರನ್ನು ತಮ್ಮೊಂದಿಗೆ ಚಲಿಸುವಂತೆ ಮಾಡುವ ನಿಜ ಜೀವನದ ಪಾತ್ರಗಳಾಗಿವೆ. ಈ ಕೃತಿಯಲ್ಲಿ ಲೇಖಕರು ನಿರೂಪಕರಾಗಿ ಕಾಣಿಸಿಕೊಳ್ಳುತ್ತಾರೆ. ಸೃಷ್ಟಿಯನ್ನು ಸ್ನೇಹದ ಹೊನಲಲ್ಲಿ ತೇಲಿಸಿ, ಅದರಲ್ಲಿ ವಿಸ್ಮಯಗಳನ್ನು ವಿಭಿನ್ನ ಚಿಂತನಗಳ ಮೂಲಕ ವಿಜ್ಞಾನ ವಿಚಾರಗಳೊಂದಿಗೆ ಜನಜನಿತ ಆಡು ಭಾಷೆಯಲ್ಲಿ ಪ್ರಸ್ತುತಪಡಿಸುವ ಪರಿ, ಸರಳ ನಿರೂಪಣೆ ಮೊದಲಾದವುಗಳು ಉತ್ತಮವಾಗಿ ಮೂಡಿಬಂದಿವೆ. ವಿಷಯದ ಬಗೆಗಿನ ಪೂರ್ಣ ಅರಿವನ್ನು ಮೂಡಿಸುವಂತೆ ಮಾಹಿತಿಯು ವಿವರಣೆಯಿಂದ ಕೂಡಿರುವುದು.

ಕರ್ವಾಲೋ ಕಾದಂಬರಿಯಲ್ಲಿ ಹಾರುವ ಓತಿಯು ಅಳಿವಿನ ಅಂಚಿಗೆ ಬಂದಿರುವ ಜೀವಿಯೆಂದು ತೋರಿಸುವುದರೊಂದಿಗೆ, ವಂಶನಾಶದ ಅಂಚಿಗೆ ಬಂದಿರುವ ಪ್ರಕೃತಿಯ ಜೀವಿಗಳ ಬಗ್ಗೆ ಜ್ಞಾನ ಹೊಂದಿರುವ ಮಂದಣ್ಣ, ಕರಿಯ, ಹಾವುಗೊಲ್ಲರ ಎಂಕ್ಟ ಮೊದಲಾದವರ ಪರಿಚಯ ಮಾಡಿಕೊಟ್ಟಿರುವುದು ಎಚ್ಚರಿಕೆಯ ಸಂದೇಶದಂತೆ ಮೂಡಿಬಂದಿರುವುದನ್ನು ಗಮನಿಸಬಹುದಾಗಿದೆ. ಮಂದಣ್ಣ ಗ್ಲೋವಾರ್ಮ ಪತ್ತೆ ಹಚ್ಚುವ, ಮಡಕೆಯಲ್ಲಿ ಜೇನು ಕೂರಿಸುವ ಪ್ರತಿಭೆಯನ್ನು ಹೊಂದಿದ್ದ ಕೌಶಲ್ಯಭರಿತ ವ್ಯಕ್ತಿ. ಹೀಗಾಗಿಯೇ ಜೀವ ವಿಕಾಸ ಪ್ರಕ್ರಿಯೆಯ ಹಂತಗಳ ಸಂಕ್ರಮಣ ಸ್ಥಿತಿಯನ್ನು ಮನಗಂಡ ಕರ್ವಾಲೋ

ಮಂದಣ್ಣನನ್ನು ಗೌರವಿಸುವುದರ ಮೂಲಕ ಅವನಲ್ಲಿರುವ ಪ್ರತಿಭೆಯನ್ನು ಉಳಿಸಿಕೊಳ್ಳಲು ಆಸಕ್ತನಾಗಿರುವುದನ್ನು ತಿಳಿಸುತ್ತದೆ. ಸಹಸ್ರಾರು ವರ್ಷಗಳಿಂದ ತಮ್ಮಲ್ಲಿ ವಂಶಪಾರಂಪರ್ಯವಾಗಿ ಕರಗತವಾಗಿಸಿಕೊಂಡ ದೇಸೀ ವಿಜ್ಞಾನದ ಕೌಶಲ್ಯಗಳನ್ನು ಹೊಂದಿರುವ ಮಂದಣ್ಣ, ಕರಿಯಪ್ಪ, ಎಂಕ್ಟ ಇವರೆಲ್ಲರ ನಿರ್ನಾಮದಿಂದ ಇಡೀ ಕೌಶಲ್ಯವೇ ನಾಶವಾಗಿ ಕೇವಲ ಹೆಸರಿಗೆ ಮಾತ್ರ ಪ್ರಗತಿ ಕಾಣಿಸಿಕೊಳ್ಳುವಂತಾಗುವುದು ತೇಜಸ್ವಿರವರ ವಿಜ್ಞಾನ ಸಾಹಿತ್ಯ ಕೃಷಿಯಿಂದ.

ಕರ್ವಾಲೋ ಕಾದಂಬರಿಯಲ್ಲಿ ತೇಜಸ್ವಿರವರು ವಿವರಿಸಿದ ವಿಕಾಸದ ಹಂತವು ವಾಸ್ತವವಾಗಿ ನೈಜತೆಯಲ್ಲಿ ವೈಜ್ಞಾನಿಕ ಸತ್ಯವಾಗಿದೆ ಹಾಗೂ ವೈಜ್ಞಾನಿಕ ತಳಹದಿಯಿಂದ ಕೂಡಿದುದಾಗಿದೆ. ಪ್ರಕೃತಿಯಲ್ಲಿನ ನಿರ್ಲಿಪ್ತ ಭಾವದಂತೆ, ನಿರ್ದಾಕ್ಷಿಣ್ಯವಾಗಿ ದುರಂತವನ್ನು ಚಿತ್ರಿಸುವ ತೇಜಸ್ವಿರವರು ಸನ್ನಿವೇಶ ಪಾತ್ರಗಳ ಬಗೆಗೆ ತರ್ಕವನ್ನು ಹುಡುಕುವ ಸ್ವಭಾವದವರಾಗಿದ್ದರು. ಅಲ್ಲದೇ ವಿಜ್ಞಾನದ ವಸ್ತು ವಿಷಯವನ್ನು ಕಥೆಯಾಗಿಸುವುದರಿಂದ ವಿಜ್ಞಾನ ವಿಷಯಗಳು ಸಾಹಿತಿಕ ಅಭಿವ್ಯಕ್ತಿಯೊಂದಿಗೆ ಸಮಾಜಕ್ಕೆ ಜನತೆಗೆ ತಲುಪುವಂತಾಗಿದೆ. ಹೀಗೆ ತೇಜಸ್ವಿರವರು ತಮ್ಮದೇ ಆದ ವಿಶಿಷ್ಟತೆಯೊಂದಿಗೆ ವಿಜ್ಞಾನದ ಪ್ರತಿಯೊಂದು ವಸ್ತುವನ್ನು ಮಾಹಿತಿಯ ಆಕರವನ್ನಾಗಿ ಮಾಡುವುದರ ಮೂಲಕ ವಿಜ್ಞಾನದಲ್ಲಿ ಓದುಗರಿಗೆ ಆಸಕ್ತಿಯನ್ನು ಮೂಡಿಸಿದ್ದಾರೆ.

ವಿಜ್ಞಾನದ ಸೃಜನಾತ್ಮಕ ಬರಹಗಳಿಗೆ ಪೂರ್ಣಚಂದ್ರ ತೇಜಸ್ವಿಯವರ ಮತ್ತೊಂದು ಕೃತಿಯ ವಿವರಣೆಯನ್ನು ಇಲ್ಲಿ ಗಮನಿಸಬಹುದು. ಈ ಶತಮಾನದ ಪರಮರಹಸ್ಯಗಳೆಂದು ಕರೆಯಲ್ಪಡುವ ಹಾರುವ ತಟ್ಟೆಗಳೆಂದು ಕರೆಯಲ್ಪಡುವ ಫ್ಲೈಯಿಂಗ್ ಸಾಸರ್‌ಗಳ ಕುರಿತಂತೆ ರಚಿಸಿದ ಹಾಗೂ ರೋಚಕ ಕಥಾಹಂದರದಿಂದ ಕೂಡಿದ ಕೃತಿಯೇ 'ಫ್ಲೈಯಿಂಗ್ ಸಾಸರ್' ಕೃತಿಯಾಗಿದೆ. ಇದು ಆಧುನಿಕ ವಿಜ್ಞಾನ ತಂತ್ರಜ್ಞಾನಕ್ಕೆ ಸವಾಲಾಗಿ ಪರಿವರ್ತಿತವಾದ ಹಾರುವ ತಟ್ಟೆಗಳೆಂಬ ವಿಸ್ಮಯವು ಜಗತ್ತಿನ ಉನ್ನತ ವೈಜ್ಞಾನಿಕ ಹಾಗೂ ತಾಂತ್ರಜ್ಞಾನಾಧಾರಿತ ತಿಳುವಳಿಕೆಗೂ ಬಿಡಿಸಲಾಗದ ಒಗಟಾಗಿ ಪರಿವರ್ತಿತಗೊಂಡಿದೆ. ಅಂತಹ ಒಂದು ವಿಸ್ಮಯ ವಿಷಯವನ್ನು ತೇಜಸ್ವಿಯವರ ಕೃತಿಯು ಎಳೆ ಎಳೆಯಾಗಿ ಬಿಡಿಸುತ್ತಾ ವೈಜ್ಞಾನಿಕ ವಿಚಾರಕ್ಕೆ ಕಥಾಹಂದರವನ್ನು ನೀಡಿರುವುದು ಅವರ ಸೃಜನಶೀಲ ಬರವಣಿಗೆಯಾಗಿದೆ. ಕೃತಿಯನ್ನು ಓದುತ್ತಾ ಹೋದಂತೆ ಹಲವು ಸಂಗತಿಗಳು ತಿಳಿಯುವುದಲ್ಲದೆ, ಮನಸ್ಸಿಗೆ ಹೊಸ ಹೊಸ ಆಯಾಮಗಳು ಹೊಳೆಯುತ್ತವೆ. ಕೃತಿಯಲ್ಲಿ ಜನಜನಿತ ಪಾರಿಭಾಷಿಕ ಪದಗಳನ್ನು ಯಥಾವತ್ತಾಗಿ ಬಳಸುವುದರೊಂದಿಗೆ ಲೇಖಕರು ನೈಜತೆಯನ್ನು ಮೆರೆದಿದ್ದಾರೆ.

ಈ ಕೃತಿಯಲ್ಲಿ ಫ್ಲೈಯಿಂಗ್ ಸಾಸರ್(ಯು.ಎಫ್.ಒ)ನ ಪರಿಚಯವನ್ನು ಬಹು ಸುಲಭ ಸುಲಲಿತವಾಗಿ ವಿವರಿಸುವ ಮೂಲಕ ಪ್ರಚಲಿತವಿರುವ ಪಾರಿಭಾಷಿಕ ಪದಗಳಲ್ಲಿ

ನೀಡಿರುವುದು ಎಂತಹ ಓದುಗರಿಗೆ ಅರ್ಥವಾಗುವಂತಿದೆ. "ಯಾವುದೇ ಯಂತ್ರದ ಶಬ್ದವೂ ಇಲ್ಲದೆ ನೆಲದಿಂದ ನೇರವಾಗಿ ಮೇಲಕ್ಕೇರುವ, ಯಾವ ಹೊಗೆಯನ್ನೂ ಉಗುಳದೆ, ಯಾವುದೇ ರೆಕ್ಕೆಗಳ ಬಲವೂ ಇಲ್ಲದೆ ನಿಃಶಬ್ದವಾಗಿ ಆಕಾಶದಲ್ಲಿ ಚಲಿಸುವ, ಆಕಾಶದಲ್ಲೇ ನಿಶ್ಚಲವಾಗಿ ನಿಂತಲ್ಲಿ ನಿಲ್ಲುವ ಮತ್ತು ನಿಂತಲ್ಲಿಂದಲೇ ಗಂಟೆಗೆ ಹನ್ನೆರಡರಿಂದ ಇಪ್ಪತ್ತು ಸಹಸ್ರ ಮೈಲುಗಳ ವೇಗದಲ್ಲಿ ಇದ್ದಕ್ಕಿದಂತೆ ಚಲಿಸುವ ಮತ್ತು ಅದೇ ವೇಗದಲ್ಲಿ ಎಡಕ್ಕೆ ಬಲಕ್ಕೆ ಹಿಂದಕ್ಕೆ ಹಠಾತ್ತಾಗಿ ದಿಕ್ಕು ಬದಲಿಸುವ ಈ ಯು.ಎಫ್.ಒಗಳು ಪೂರ್ವಿಕರ ಮಂತ್ರಚಾಲಿತ ವಿಮಾನಗಳ ಕಲ್ಪನೆಗಳನ್ನು ಮೀರಿಸುವಂತೆ ಕಾಣುತ್ತದೆ" ಎಂದು ಲೇಖಕರು ತಿಳಿಸಿರುವಲ್ಲಿ ಯು.ಎಫ್.ಒಗಳ ಸ್ವರೂಪವು ಕಣ್ಣಿಗೆ ಕಟ್ಟುವಂತೆ ಮೂಡಿಬಂದಿರುವುದು ಸೃಜನಶೀಲತೆಯ ಪ್ರತೀಕವಾಗಿದೆ.

ಪೂರ್ಣಚಂದ್ರ ತೇಜಸ್ವಿರವರಂತೆ ವೈಜ್ಞಾನಿಕ ವಿಶೇಷತೆಯಿಂದ ಕೂಡಿದ ವಿಜ್ಞಾನ ಸಾಹಿತ್ಯವನ್ನು ಜನಪರಗೊಳಿಸಿದವರಲ್ಲಿ ರಾಜಶೇಖರ ಭೂಸನೂರಮಠರವರು ಪ್ರಮುಖರಾಗಿದ್ದಾರೆ. ತಮ್ಮ ಅಭಿರುಚಿಯ ವಿಜ್ಞಾನದಲ್ಲಿ ಅನನ್ಯತೆ ಹಾಗೂ ಬರವಣಿಗೆಯಲ್ಲಿನ ಭಾಷಾ ವಿಶಿಷ್ಟತೆಯಿಂದಾಗಿ ಮತ್ತು ವೈಜ್ಞಾನಿಕ ಕಥಾ ರಚನೆಯ ಶೈಲಿಯಿಂದಾಗಿ ಇವರ ಕೃತಿಗಳು ಹೆಚ್ಚು ಜನಪರವಾಗಿವೆ. ಇವರು ಬರೆದ ಕಥೆಗಳು ಎಲ್ಲರಿಗೂ ಅರ್ಥವಾಗುವ ಸುಲಭ ಶೈಲಿಯಲ್ಲಿದ್ದು, ಜನಸಾಮಾನ್ಯರ ಮೆಚ್ಚುಗೆಯನ್ನು ಪಡೆದಿರುವುದನ್ನು ಕಾಣಬಹುದು. ಪತ್ರಿಕೆಯಲ್ಲಿ ಪ್ರಕಟವಾದ ರಾಜಶೇಖರ ಭೂಸನೂರಮಠರವರ ಕಥೆಗಳು ವಿಜ್ಞಾನದ ನಿಯಮ ಪರೀಧಿಯಲ್ಲಿಯೇ ವಿಹರಿಸುತ್ತಾ, ಮೂಲ ಪರಿಕಲ್ಪನೆಗಳನ್ನು ಕಡೆಗಣಿಸದೆ, ಕಲ್ಪಿತ ಕಥೆಗಳನ್ನು ರಚಿಸಿರುವುದು ಅವರ ರಚನೆಯಲ್ಲಿ ಪಳಗಿದ ಕೈ ಎಂಬುದನ್ನು ತಿಳಿಸುತ್ತದೆ. ಭೂಸನೂರ ಮಠರವರು ಬರೆದ ಕಥೆಗಳಾದ ಮಹಾಶ್ವೇತ, ಮನ್ವಂತರ, ರಾಕ್ಷಸದ್ವೀಪ ಮತ್ತಿತರವು ಓದುಗರನ್ನು ವಿಸ್ಮಯಗೊಳಿಸಿ ರೋಮಾಂಚನದ ಮೂಲಕ ಬೆಚ್ಚಿ ಬೀಳಿಸಿ ಅಂತ್ಯದಲ್ಲಿ ಸಮಾಧಾನಕರ ಸಂತೋಷವನ್ನು ಕೊಟ್ಟಿರುವುದು ಸೃಜನಾತ್ಮಕ ರಚನಾ ಶೈಲಿ ಹಾಗೂ ಅಭಿವ್ಯಕ್ತಿಯ ಸ್ವರೂಪವನ್ನು ವ್ಯಕ್ತಪಡಿಸುತ್ತದೆ.

ವೈಜ್ಞಾನಿಕ ವಿಚಾರಗಳು ಮತ್ತು ಪರಿಭಾಷೆಗಳನ್ನು ಬಳಸಿಕೊಂಡು ಸೃಷ್ಟಿಸಿದ ಕಾಲ್ಪನಿಕ ವಿಜ್ಞಾನ ಕಥೆಗಳು ವಿಜ್ಞಾನ ಸಾಹಿತ್ಯದ ಪ್ರಮುಖ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪವಾಗಿರುವುದನ್ನು ಲೇಖಕರು ಅರಿತು ಕೃತಿ ರಚನೆ ಮಾಡಿರುವರು. ವೈಜ್ಞಾನಿಕ ಪಾರಿಭಾಷೆಯಿಂದ ಕೂಡಿದ ಕಾಲ್ಪನಿಕ ಕಥೆಗಳು ಪಾಶ್ಚಾತ್ಯರಲ್ಲಿ ಮಾತ್ರ ಹೆಚ್ಚು ಬೇಡಿಕೆಯನ್ನು ಹೊಂದಿರದೆ, ನಮ್ಮ ದೇಶದಲ್ಲೂ ಬೇಡಿಕೆ ಮತ್ತು ಅಗತ್ಯವಾಗಿರುವುದನ್ನು ಮನಗಂಡ ರಾಜಶೇಖರ ಭೂಸನೂರಮಠರವರು ಕಾರ್ಯಪ್ರವೃತ್ತರಾಗಿರುವುದನ್ನು ಗಮನಿಸಬಹುದು. ಇವರ ಭವಿಷ್ಯತ್ತಿನ ವೈಜ್ಞಾನಿಕ ಕಾದಂಬರಿ ಎಂದು ಜನಪ್ರಿಯವಾದ ಕೃತಿ 'ಮನ್ವಂತರ'.

ರಾಜಶೇಖರ ಭೂಸನೂರಮಠರವರ 'ಮನ್ವಂತರ' ಕಾದಂಬರಿಯಲ್ಲಿ ವೈಜ್ಞಾನಿಕ ವಿಚಾರದಿಂದ ಕೂಡಿದ ಪ್ರತಿಯೊಂದು ಕತೆಯು ಸಾಮಾನ್ಯವಾಗಿ ಕಾಣುವ ವಿಷಯದಿಂದ ಪ್ರಾರಂಭವಾಗಿ ಮುಂದೇನಾಗುವುದೆಂಬ ಕುತೂಹಲದಿಂದ ಭವಿಷ್ಯತ್ತಿನಲ್ಲಿ ವೈಜ್ಞಾನಿಕವಾಗಿ ಆಗುವ ಬದಲಾವಣೆಯ ಸಾಧ್ಯತೆಗಳನ್ನು ತೋರಿಸುವ ಕಥೆಯಾಗಿ ನಿಲ್ಲುತ್ತವೆ. ಇದರಲ್ಲಿ ಲೇಖಕರು ಮಾಡಿರುವ ಪದ ಪ್ರಯೋಗವು ವಿಶೇಷವಾಗಿದ್ದು, ಅವರ ಕಥನಾ ಶೈಲಿಗೆ ವಿಶೇಷ ಮೆರುಗನ್ನು ನೀಡಿರುವುದು. ಅಂದರೆ ಕಂಪ್ಯೋಟರಿಗೆ ಕಪಟ, ರೋಬೋಟಿಗೆ ರಂಪಟ, ಜಾಗತಿಕ ಸರ್ಕಾರಕ್ಕೆ ಜಾಸ ಮೊದಲಾದ ಪದಪ್ರಯೋಗ ಮಾಡಿರುವುದು ಓದುಗರನ್ನು ವಿಷಯದ ಕಡೆಗೆ ಆಕರ್ಷಿಸುವಂತಿದೆ. ಮಾನವನ ಆವಿಷ್ಕಾರಗಳಲ್ಲಿ ಅತ್ಯಂತ ಪ್ರಭಾವಿ ಹಾಗೂ ಐತಿಹಾಸಿಕ ದಾಖಲೆಯನ್ನು ನಿರ್ಮಿಸಿದ ಕಂಪ್ಯೂಟರ್ ಹಾಗೂ ರೋಬೋಟುಗಳು ಮಾನವನ ಅಧೀನದಲ್ಲಿದ್ದು ಅವನ ಆಜ್ಞೆಯಂತೆ ನೀಡುವ ಕೆಲಸವನ್ನು ಮಾಡುತ್ತಿದ್ದದ್ದು, ಕಾಲ ಬದಲಾದಂತೆ ಮನುಷ್ಯನನ್ನೇ ತನ್ನ ಗುಲಾಮನನ್ನಾಗಿ ಮಾಡಿ ಎಲ್ಲವನ್ನು ಯಂತ್ರಮಯವಾಗಿಸಿ ಪ್ರಕೃತಿಗೆ ವಿರುದ್ಧವಾಗಿ ವರ್ತಿಸುವ ಸ್ಥಿತಿಗೆ ಕಾರಣವಾಗುವ ಅನಾಹುತವನ್ನು ತಿಳಿಸುವ ಕಥೆಯಿಂದ 'ಮನ್ವಂತರ' ಕಾದಂಬರಿಯು ಕೂಡಿದೆ. ಇದರಲ್ಲಿನ ಅಭಿವ್ಯಕ್ತಿಯು ಎಂತಹವರನ್ನು ಹೀಗೂ ಭವಿಷ್ಯದಲ್ಲಿ ನಾವು ತೊಂದರೆಯನ್ನು ಅನುಭವಿಸುತ್ತೇವೆಯೇ ಎಂದು ಯೋಚಿಸುವಂತೆ ಮಾಡಿ ಮಂತ್ರ ಮುಗ್ಧರನ್ನಾಗಿಸುವುದನ್ನು ಅವಲೋಕಿಸಲಾಯಿತು. ಯಾವ ಮನುಷ್ಯ ವಿಜ್ಞಾನ ತಂತ್ರಜ್ಞಾನವನ್ನು ಸೃಷ್ಟಿಸಿದನೋ ಅವನೇ ಅದರ ಅಡಿಯಾಳಾಗಿ ದಾಸನಾಗಿ ಪರಿವರ್ತಿನಾಗುವ ದುರಂತವನ್ನು ಕಥಾನಕ ಅಭಿವ್ಯಕ್ತಿ ಶೈಲಿಯಲ್ಲಿ ನಿರೂಪಿಸಿರುವುದು ಎಂತಹವರಿಗೂ ಒಮ್ಮೆ ತಮ್ಮ ಮುಂದಿನ ಭವಿಷ್ಯದ ಬಗ್ಗೆ ಯೋಚಿಸುವಂತೆ ಮಾಡುತ್ತದೆ.

ಊಹೆ-ಮೂಲತತ್ವ-ಕುತೂಹಲವನ್ನು ಆಧರಿಸಿ ಕೃತಿ ರಚನೆಯನ್ನು ಮಾಡಿದ್ದಾರೆ. ಅಂದರೆ ಈ ಎಲ್ಲಾ ಸಾಹಿತಿಗಳು ವಿಜ್ಞಾನ ವಿಷಯಕ್ಕೆ ತಕ್ಕ ಊಹೆಯೊಂದಿಗೆ ಮೂಲತತ್ವಕ್ಕೆ ಎಲ್ಲೂ ಚ್ಯುತಿಬರದಂತೆ ಕುತೂಹಲದ ಮೂಲಕ ವೈಜ್ಞಾನಿಕ ವಿಷಯ ವಿಚಾರವನ್ನು ತಿಳಿಸುವುದರಿಂದ, ಓದುಗನು ಸ್ವವಿಮರ್ಶೆ ಹಾಗೂ ಭವಿಷ್ಯತ್ತಿನ ಬಗ್ಗೆ ಒಮ್ಮೆ ಯೋಚಿಸದೆ ಇರಲಾರದಂತೆ ವಿಷಯದ ನಿರೂಪಣೆಯು ಮೂಡಿಬಂದಿರುವುದು ವಿಶೇಷವಾಗಿದೆ. ಅಲ್ಲದೇ ವಿಷಯದ ನಿರೂಪಣೆಯಲ್ಲಿ ಮಾಹಿತಿಯೊಂದಿಗೆ ಕುತೂಹಲವು ಕೊನೆಯವರೆಗೂ ಉಳಿಯುವಂತೆ ನಿಭಾಯಿಸಲಾಗಿರುವುದು ಲೇಖಕರ ಸೃಜನಾತ್ಮಕ ಅಭಿವ್ಯಕ್ತಿ ಶೈಲಿಯ ದ್ಯೋತಕವಾಗಿದೆ.

ವಿಜ್ಞಾನ ಸಾಹಿತ್ಯವು ತನ್ನದೇ ಆದ ಭಿನ್ನತೆಯ ಸಂರಚನೆಯನ್ನು ಹೊಂದಿದ್ದು, ವಿಜ್ಞಾನದೊಳಗಿನ ಕುತೂಹಲ ಸೌಂದರ್ಯವನ್ನು ಅತ್ಯಂತ ಸರಳವಾಗಿ ನಿರೂಪಿಸಿರುವುದು

ಮೇಲೆ ವಿವರಿಸಿ ಎಲ್ಲಾ ಲೇಖಕರ ಕೃತಿಗಳಲ್ಲಿನ ಸೃಜನಾತ್ಮಕ ಬರವಣಿಗೆಯಲ್ಲಿ ಕಾಣಬಹುದು. ಅಲ್ಲದೇ ಸೃಜನಾತ್ಮಕ ವಿಜ್ಞಾನ ಲೇಖನಗಳ ನೆಲೆಯಲ್ಲಿ ರಚಿತ ಬಹಳಷ್ಟು ಕೃತಿಗಳು ವಿಷಯದ ಪ್ರಾವಿಣ್ಯತೆ, ಭಾಷೆಯಲ್ಲಿ ಸರಳತೆ ಹಾಗೂ ಅಭಿವ್ಯಕ್ತಿ ಶೈಲಿಯಲ್ಲಿ ವಿಶಿಷ್ಟತೆಯನ್ನು ಹೊಂದಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಯಿತು. ಹೀಗಾಗಿ ಸೃಜನಾತ್ಮಕ ವಿಜ್ಞಾನ ಸಾಹಿತ್ಯವು ವಿಷಯ-ಭಾಷೆ-ಅಭಿವ್ಯಕ್ತಿಶೈಲಿಯ ಅನನ್ಯತೆ ಹಾಗೂ ನಿರ್ದಿಷ್ಟ ಗುಣಗಳಿಂದ ನಿತ್ಯ ಜೀವನದಲ್ಲಿ ಅಗತ್ಯವಾದ ವಿಜ್ಞಾನದ ಕ್ಲಿಷ್ಟ ವಿಷಯಗಳ ಬಗ್ಗೆ ಸರಳವಾಗಿ ವಿವರಿಸಿ ಹೇಳಿರುವುದರೊಂದಿಗೆ, ಸ್ವಾಭಾವಿಕವಾಗಿ ಉಂಟಾಗುವ ಅನುಮಾನ ಮತ್ತು ಉದ್ಭವಿಸುವ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ಸಹಕಾರಿಯಾಗಿರುವುದು.

ಮಕ್ಕಳ ವಿಜ್ಞಾನ ಸಾಹಿತ್ಯ

ಸೃಜನಾತ್ಮಕ ವಿಜ್ಞಾನ ಬರಹಗಳಲ್ಲಿ ಮಕ್ಕಳ ವಿಜ್ಞಾನ ಸಾಹಿತ್ಯವು ಪ್ರಮುಖವಾದುದು. ಮಕ್ಕಳ ಮನಸ್ಸಿಗೆ ಆಹ್ಲಾದವನ್ನು ನೀಡಿ, ಮನಸ್ಸನ್ನು ಅರಳಿಸಿ, ಸಂಶಯ ಕುತೂಹಲವನ್ನು ಮೂಡಿಸಿ, ಭಾವನಾತ್ಮಕ ಕಲ್ಪನೆಯನ್ನು ಪ್ರಚೋದಿಸಿ, ಅನಂದದಲ್ಲಿ ವಿಹರಿಸುವಂತೆ ಮಾಡುವುದೇ ಮಕ್ಕಳ 'ವಿಜ್ಞಾನ ಸಾಹಿತ್ಯ'. "ಮಕ್ಕಳಿಗೆ ಶುಷ್ಕ ವೈಜ್ಞಾನಿಕ ವಿಚಾರಗಳನ್ನು ಪಾಠ ಹೇಳಿದಂತೆ ವಿವರಿಸಿದರೆ ಅವರ ಮನಸ್ಸು ತಿರಸ್ಕರಿಸುತ್ತದೆ. ಸ್ವಾನುಭವಗಳೊಂದಿಗೆ ಸಂಯೋಜನೆಗೊಂಡು ಜೀವನ ಸಂದರ್ಭಗಳಲ್ಲಿ ಹೇಳಿದಾಗ ಮಾತ್ರ ಎಂಥ ಕ್ಲಿಷ್ಟ ವಿಚಾರವಾದರೂ ಸುಲಭವಾಗಿ ಹೃದ್ಗತವಾಗುತ್ತದೆ"[೧೦] ಎಂದು ಪೂರ್ಣಚಂದ್ರ ತೇಜಸ್ವಿರವರು ಹೇಳಿರುವಲ್ಲಿ ಮಕ್ಕಳ ವಿಜ್ಞಾನ ಸಾಹಿತ್ಯದ ಸ್ವರೂಪ ಹಾಗೂ ರಚನಾ ಶೈಲಿಯು ತಿಳಿದುಬರುತ್ತದೆ. ವೈಜ್ಞಾನಿಕ ವಿಷಯ ವಿಚಾರವನ್ನು ಕಥೆ, ಕವನ, ನಾಟಕಗಳ ಮೂಲಕ ತಿಳಿಸುವುದರೊಂದಿಗೆ ಸರಳ ಸುಲಭವಾಗಿ ತಿಳಿಯಪಡಿಸುವುದರಿಂದ ವಿಜ್ಞಾನದ ಮಾಹಿತಿಯು ಮಕ್ಕಳಿಗೆ ತಿಳಿಯುವಂತಾಗುವುದು. ಇದರಿಂದ ಎಳೆಯ ವಯಸ್ಸಿನಲ್ಲಿಯೇ ಮಕ್ಕಳಲ್ಲಿ ವೈಜ್ಞಾನಿಕ ವಿಷಯವು ಹರಡಲು ಸಹಕಾರಿಯಾಗುವುದು.

"ಬೆಳೆಯುವ ಸಿರಿ ಮೊಳಕೆಯಲ್ಲಿಯೇ" ಎಂಬ ನುಡಿಯಂತೆ ವೈಜ್ಞಾನಿಕ ವಿಷಯವನ್ನು ಮಕ್ಕಳಲ್ಲಿ ಬೆಳೆಸುವಲ್ಲಿ ಸೃಜನಾತ್ಮಕ ವಿಜ್ಞಾನ ಬರಹಗಳಲ್ಲಿ ಒಂದಾದ ಮಕ್ಕಳ ವಿಜ್ಞಾನ ಸಾಹಿತ್ಯವು ಪ್ರಮುಖವಾಗಿದೆ. ವಿಜ್ಞಾನ ಲೇಖಕರು ವಿಷಯ ಜ್ಞಾನದಿಂದ ಸಂಗ್ರಹಿತ ಮಾಹಿತಿಯನ್ನು ಸರಳ ಸುಲಭ ಶೈಲಿಯಲ್ಲಿ ಏನು? ಹೇಗೆ? ಏಕೆ? ಯಾವಾಗ? ಎಲ್ಲಿ ಮತ್ತಿತರ ಪ್ರಶ್ನೆಗಳೊಂದಿಗೆ ಪ್ರಸ್ತುತ ಪಡಿಸಿರುವುದರಿಂದ ಮಕ್ಕಳಲ್ಲಿನ ಸಹಜ ಕುತೂಹಲವನ್ನು ಕೆರಳಿಸುವುದರೊಂದಿಗೆ ವೈಜ್ಞಾನಿಕ ಮಾಹಿತಿಯನ್ನು ರೋಚಕಗೊಳಿಸಿ ವಿಜ್ಞಾನವೆಂಬ ವಿಸ್ಮಯ ಜಗತ್ತಿಗೆ ಮೋಜಿನ ವಿಷಯದ ತಿಳುವಳಿಕೆಯ ಬಾಗಿಲನ್ನು ಸೃಷ್ಟಿಸುವಂತಾಗುವುದು.

ಗಡುಸಾದ ವಿಜ್ಞಾನ ಮಾಹಿತಿಯನ್ನು ಮಕ್ಕಳ ಮನಸ್ಸು ತಿರಸ್ಕರಿಸುತ್ತದೆ. ಹೀಗಾಗಿ ಮಕ್ಕಳ ಮನಸ್ಸಿಗೆ ಹಿತಕಾರಿಯಾಗಿ ಆಹ್ಲಾದ ನೀಡುವಂತೆ ರಚಿಸಿದ ವೈಜ್ಞಾನಿಕ ಕಥೆ, ಕವನ, ನಾಟಕ, ಪ್ರಬಂಧಕ್ಕೆ ಸರಿಸಾಟಿಯಾದದ್ದು ಮತ್ತೊಂದಿಲ್ಲ. ಮಕ್ಕಳಲ್ಲಿ ಕಲ್ಪನಾಶಕ್ತಿ ಹಾಗೂ ಸಂಶೋಧನಾ ಭಾವನೆ ಬೆಳೆಯಲು ವಿಜ್ಞಾನ ಸಾಹಿತ್ಯದ ಪಾಲು ಹಿರಿದಾದುದಾಗಿದೆ. ಈ ದೃಷ್ಟಿಯಿಂದ ಬಹಳಷ್ಟು ಸಾಹಿತಿಗಳು ಕಾರ್ಯ ಪ್ರವೃತ್ತರಾಗಿದ್ದು, ಇದಕ್ಕೆ ಶಿವರಾಮ ಕಾರಂತರು ಆದ್ಯ ಪುರುಷರು. ಇವರನ್ನು ಅನುಸರಿಸಿ ಬಹಳಷ್ಟು ಸಾಹಿತಿಗಳು ಮಕ್ಕಳ ವಿಜ್ಞಾನ ಸಾಹಿತ್ಯವನ್ನು ರಚಿಸಿರುವುದನ್ನು ಕಾಣಬಹುದು. ಅವರಲ್ಲಿ ಪ್ರಮುಖರಾದವರು ಶಿವರಾಮ ಕಾರಂತರು, ಪೂರ್ಣಚಂದ್ರ ತೇಜಸ್ವಿ, ರಾಜಶೇಖರ ಭೂಸನೂರಮಠ, ಗಾಯತ್ರಿ ಮೂರ್ತಿ, ಜಂಬುನಾಥ ಕಂಚ್ಯಾಣಿ, ಶ್ಯಾಮಸುಂದರ ಶರ್ಮ, ಬಿ.ಜಿ.ಕುಸುಮಾ, ಜಿ.ಕೆ ವೀರೇಶ್, ಅಡ್ಡೂರು ಕೃಷ್ಣರಾವ್, ಸುರೇಶ ಕುಲಕರ್ಣಿ ಮೊದಲಾದವರು ವಿಜ್ಞಾನ ವಿಷಯಕ್ಕೆ ಸಂಬಂಧಿಸಿದಂತೆ ಕೃತಿಯನ್ನು ರಚಿಸಿರುವುದನ್ನು ಕಾಣಬಹುದು.

ಕುತೂಹಲಭರಿತ ವೈಜ್ಞಾನಿಕ ಮಾಹಿತಿಯಿಂದ ಕೂಡಿದ ಶಿವರಾಮ ಕಾರಂತರ 'ಬಾಲಪ್ರಪಂಚ', ಪ್ರಕೃತಿಯಲ್ಲಿನ ಪಕ್ಷಿ ಮತ್ತು ಕೀಟ ಪ್ರಪಂಚದ ವಿವರದಿಂದ ಕೂಡಿದ ಪೂರ್ಣಚಂದ್ರ ತೇಜಸ್ವಿರವರ 'ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು' ಎಂಬ ಕೃತಿಯು ಜನಪ್ರಿಯ ಮಕ್ಕಳ ವಿಜ್ಞಾನ ಸಾಹಿತ್ಯವಾಗಿದೆ. ಅದರಂತೆ 'ಶಬ್ದದೊಳಗಿನ ನಿಶ್ಯಬ್ದ' ಎಂಬ ಗಾಯತ್ರಿ ಮೂರ್ತಿರವರ ಕೃತಿಯು ಗಾಳಿ, ಬೆಳಕು, ಶಾಖ ಮೊದಲಾದ ವಿಚಾರದಿಂದ ಕೂಡಿದ್ದರೇ, 'ಅಂತರೀಕ್ಷದಲ್ಲಿ ಪುಟಾಣಿ' ಎಂಬ ಜಂಬುನಾಥ ಕಂಚ್ಯಾಣಿ ರವರ ಕೃತಿಯು ಅಂತರೀಕ್ಷದ ಬಗ್ಗೆ ಮಾಹಿತಿಯನ್ನು ನೀಡುವುದು. ರಾಜಶೇಖರ ಭೂಸನೂರಮಠರವರ 'ಮನ್ವಂತರ' ಎಂಬ ಭವಿಷ್ಯತ್ತಿ ವೈಜ್ಞಾನಿಕ ಕಾದಂಬರಿಯು ಕಂಪ್ಯೂಟರ್ ಮತ್ತು ರೋಬೋಟ್‌ಗಳ ಬಗ್ಗೆ ಮಾಹಿತಿ ನೀಡುವುದರೊಂದಿಗೆ ಮನುಷ್ಯನ ಆವಿಷ್ಕಾರವು ಎಂತಹ ಅನಾಹುತಕ್ಕೆ ದಾರಿ ಮಾಡುವುದೆಂಬ ಕುತೂಹಲಭರಿ ವೈಜ್ಞಾನಿಕ ವಿಷಯವನ್ನು ತಿಳಿಸುವುದರೊಂದಿಗೆ ಎಚ್ಚರಿಕೆಯನ್ನು ನೀಡುವಂತಿದೆ. ಹಸುವಿನ ಹಾಲು ಹಳದಿ ಬಣ್ಣದಲ್ಲಿರಲು ಕಾರಣವೇನು ಎಂಬುದನ್ನು ಬಿ.ಜಿ.ಕುಸುಮರವರ 'ಹಸುವಿನ ಹಾಲು ಹಳದಿ ಯಾಕೆ' ಎಂಬ ಲೇಖನವು ತಿಳಿಸುವುದು. ಅದರಂತೆ ಡಾ.ಜಿ.ಕೆ ವೀರೇಶ್, ಅಡ್ಡೂರು ಕೃಷ್ಣ ರಾವ್‌ರವರು ಶಾಲಾ ಮಕ್ಕಳಿಗಾಗಿಯೇ ರಚಿಸಿದ ಕೃಷಿಯ ಬಗ್ಗೆ ಮಾಹಿತಿ ನೀಡುವ 'ಕೃಷಿ ವಿಜ್ಞಾನ ಕೃತಿ' ಹಾಗೂ ಪಕ್ಷಿ ಪ್ರಚಂಚದ ಬಗ್ಗೆ ಮಾಹಿತಿ ನೀಡುವ ಸುರೇಶ ಕುಲಕರ್ಣಿರವರಿಂದ ರಚಿತ 'ಪಕ್ಷಿ ಸಂಕುಲ' ಎಂಬ ಮಕ್ಕಳ ಸಂಚಿಕೆಯು ಪ್ರಮುಖವಾದ ಮಕ್ಕಳ ವಿಜ್ಞಾನ ಸಾಹಿತ್ಯವಾಗಿದ್ದು, ಸೃಜನಾತ್ಮಕ ವೈಜ್ಞಾನಿಕ ಬರಹದಿಂದ ಕೂಡಿವೆ.

೪.೨. ಸೃಜನೇತರ ವಿಜ್ಞಾನ ಬರಹಗಳು : ನೇರ ಮತ್ತು ವಿವರಣಾತ್ಮಕ ಮಾದರಿ.

ನಿರ್ದಿಷ್ಟ ನಿಖರ ಆಧಾರದಿಂದ ಹಾಗೂ ಸತ್ಯದ ಮೂಲ ತತ್ವದಿಂದ ರಚಿತವಾದ ಸಾಹಿತ್ಯ ಪ್ರಕಾರವೇ ಸೃಜನೇತರ ವಿಜ್ಞಾನ ಬರಹಗಳಾಗಿವೆ. ಅಂದರೆ ವಿಮರ್ಶೆ, ಜೀವನ ಚರಿತ್ರೆ, ಮೀಮಾಂಸೆ, ಕೆಲವು ವಿಜ್ಞಾನ ಕೃತಿಗಳು ಮೊದಲಾದವುಗಳನ್ನೆಲ್ಲ ಭಾವ ಮಾರ್ಗದಿಂದ ಹೊರತು ಪಡಿಸಿ, ಜ್ಞಾನ ಮಾರ್ಗಕ್ಕೆ ಸೇರಿಸಿರುವುದರಿಂದ ಇವುಗಳನ್ನೆಲ್ಲ ಸೃಜನೇತರ ಸಾಹಿತ್ಯ ಎಂದು ಗುರ್ತಿಸಲಾಗಿದೆ. ಇದರಲ್ಲಿ ನೇರ ದಿಟ್ಟ ವೈಜ್ಞಾನಿಕ ಅಂಶದಿಂದ ಕೂಡಿದ ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ಅಂಶಗಳ ವಿವರಗಳು ಕಂಡುಬರುತ್ತವೆ. ಇಂದ್ರಿಯ ಗ್ರಹಣಗಳ ಆಧಾರದ ಮೇಲೆ ಪಡೆದ ಊಹೆಗಳನ್ನೂ ಮತ್ತು ಜ್ಞಾನವನ್ನು ತಾರ್ಕಿಕವಾಗಿ ವ್ಯವಸ್ಥಿತವಾಗಿ ತಿಳಿಯುವಂತೆ ಮಾಡುವುದೇ ಸೃಜನೇತರ ವಿಜ್ಞಾನ ಸಾಹಿತ್ಯ ಅಶಯ.

ಜೈವಿಕ ಮತ್ತು ಭೌತಿಕ ಎರಡೂ ವಲಯಗಳಲ್ಲಿಯೂ ವಿಜ್ಞಾನದ ಪ್ರಭಾವಿದ್ದು, ಪ್ರಕೃತಿ–ಮನುಷ್ಯ, ವಿಶ್ವ–ಮಾನವರ ನಡುವಣ ಸಂಬಂಧಗಳ ಸುಸಂಗತ ಜ್ಞಾನಕ್ಕೆ ದಾರಿ ಮಾಡಿಕೊಡುವ ನಿರಂತರ ಪರಿಶೋಧನೆಗಳು ವಿಜ್ಞಾನ ಸಾಹಿತ್ಯದ ಜ್ಞಾನದಿಂದ ಮಾತ್ರ ಸಾಧ್ಯ. ಅಲ್ಲದೇ ಕಾಲ ಕಾಲಕ್ಕೆ ವಿಜ್ಞಾನ ಪರಿಕಲ್ಪನೆಗಳು, ಸಂಶೋಧನೆಗಳು ಬದಲಾವಣೆಗೊಳಪಡುತ್ತಿದ್ದು, ಜಗತ್ತಿನ ಆಗು ಹೋಗುಗಳ ಮೇಲೆ ಪರಿಣಾಮಕಾರಿ ಪ್ರಭಾವವನ್ನು ಬೀರುವ ವಿಷಯವಾರು ಮಾಹಿತಿಯನ್ನು ವಿಜ್ಞಾನ ಕ್ಷೇತ್ರದಲ್ಲಿ ಪರಿಣತಿಯನ್ನು ಪಡೆದ ಹಾಗೂ ವಿಜ್ಞಾನ ವಿಷಯದ ಬಗ್ಗೆ ಜ್ಞಾನ ಹೊಂದಿದ ಲೇಖಕರು ರಚಿಸಿದ ವಿಜ್ಞಾನ ಸಾಹಿತ್ಯದಿಂದ ತಿಳಿಯುವುದು.

ಲಕ್ಷ್ಮೀಕಾಂತ ಹೆಗಡೆಯವರು ಹೇಳಿರುವಂತೆ "ವಿಜ್ಞಾನವು ಇತ್ತೀಚಿನ ಕಾಲದಲ್ಲಿ ವಿಜ್ಞಾನದ ತನ್ನ ತರ್ಕಬದ್ಧ ವಿಧಾನದಿಂದ ಮತ್ತು ಇಂದ್ರೀಯಗಳ ಗ್ರಹಣ ಪಟುತ್ವವನ್ನು ವಿಶಾಲಗೊಳಿಸುವ ಸ್ವರೂಪದ ವಿವಿಧ ಪರಿಕರ, ಸಾಧನ ಸಾಮಗ್ರಿಗಳ ಮೂಲಕ ವಿಶ್ವದ ಜೀವದ ಮತ್ತು ಚೇತನದ ಮೂಲವನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತಿದೆ"[೧೧] ಎಂದು ಹೇಳಿರುವಲ್ಲಿ ಇಂದಿನ ದಿನಗಳಲ್ಲಿ ವಿಜ್ಞಾನದ ಮಹತ್ವ ಹಾಗೂ ಇಂತಹ ಮಾಹಿತಿಯನ್ನು ಜನರಿಗೆ ತಲುಪಿಸುವಲ್ಲಿ ವಿಜ್ಞಾನ ಸಾಹಿತ್ಯದ ಪಾತ್ರವು ಬಹು ಉಪಯುಕ್ತವಾದುದು ಎಂಬುದನ್ನು ತಿಳಿಯಬಹುದು. ಇಂದಿನ ಆಧುನಿಕ ಹಾಗೂ ಪಾರಂಪರಿಕ ಯುಗಕ್ಕೆ ಅನುಕೂಲವಾಗುವ ವಿಜ್ಞಾನದ ತತ್ಕಾಲೀನ ಪ್ರಸ್ತುತದ ಸ್ಥಿತಿಯನ್ನು ವಿವಿಧ ಕ್ಷೇತ್ರಗಳ (ಅಂದರೆ ಸಾಮಾಜಿಕ, ಧಾರ್ಮಿಕ ಮೊದಲಾದವು) ಆಯಾಮಗಳೊಂದಿಗೆ ಅರ್ಥಮಾಡಿಕೊಳ್ಳುವಲ್ಲಿ ಸೃಜನೇತರ ವಿಜ್ಞಾನ ಸಾಹಿತ್ಯದ ಪಾತ್ರವು ಪ್ರಮುಖವಾದದ್ದು

ಸೃಜನೇತರ ವಿಜ್ಞಾನ ಕೃತಿಗಳು ವಿಜ್ಞಾನಕ್ಷೇತ್ರದ ಪರಿಣಿತ ಲೇಖಕರಿಂದ ಬರೆಯಲ್ಪಟ್ಟವು. ಇಲ್ಲಿ ಕಲ್ಪನೆ, ಭಾವನೆ, ಕುತೂಹಲ ಮೊದಲಾದ ಭಾವುಕ ಅಂಶಗಳಿಗೆ ಅವಕಾಶವಿಲ್ಲ. ನಿರ್ದಿಷ್ಟ ವಸ್ತು ವಿಷಯವನ್ನು ಅದರ ಹಲವು ಆಯಾಮಗಳೊಂದಿಗೆ ಓದುಗರ ಮುಂದಿಡುವುದಷ್ಟೇ ಸೃಜನೇತರ ಕೃತಿಗಳ ಉದ್ದೇಶವಾಗಿರುತ್ತದೆ. ವಿಜ್ಞಾನದ ಪ್ರಬಂಧಗಳು, ಲೇಖನಗಳು, ವೈಚಾರಿಕ ಸಾಹಿತ್ಯ, ತಾಂತ್ರಿಕ ಸಾಹಿತ್ಯ, ವಿಮರ್ಶಾ ಸಾಹಿತ್ಯ ಮೊದಲಾದವುಗಳನ್ನು ಸೃಜನೇತರ ಸಾಹಿತ್ಯಗಳು ಎಂದು ಕರೆಯಲಾಗುವುದು. ಸೃಜನಶೀಲ ಅಭಿವ್ಯಕ್ತಿಯಲ್ಲಿರುವ ಪದಗಳು, ವಾಕ್ಯಗಳು, ವಿಷಯ ಗ್ರಹಿಕೆ ಮತ್ತು ಸಂಗ್ರಹಣೆ, ನಿರೂಪಣೆ ಇದ್ದರೂ ಸೃಜನೇತರದಲ್ಲಿ ನೇರ ದಿಟ್ಟ ಅಭಿವ್ಯಕ್ತಿಯೇ ಪ್ರಧಾನವಾಗಿರುವುದನ್ನು ಕಾಣಬಹುದು. ವಿಷಯದ ನಿರೂಪಣೆ, ಅಭಿವ್ಯಕ್ತಿಯು ಯಾವುದೇ ವ್ಯಾಕರಣ ಬದ್ಧತೆಗೆ ಇಲ್ಲವೇ ಛಂದಸ್ಸಿನ ನಿಯಮಗಳಿಗೆ ಒಳಪಡದೆ, ಕಂಡದ್ದನ್ನು ಕಂಡಂತೆ, ತಿಳಿದ್ದದ್ದನ್ನು ತಿಳಿದಂತೆ ನೇರವಾಗಿ ಸತ್ಯಸಂಧತೆಯಿಂದ ನಿರೂಪಿಸುವುದನ್ನು ಸೃಜನೇತರ ವಿಜ್ಞಾನ ಸಾಹಿತ್ಯದಲ್ಲಿ ಕಂಡುಕೊಳ್ಳಲಾಗಿದೆ.

ಹಿಂದೆ ಆದದ್ದನ್ನು ತಿಳಿಸುವ ಸ್ಮೃತಿ ಹಾಗೂ ಮುಂದೆ ಆಗುವುದರ ಬಗ್ಗೆ ಜಾಗೃತಿಯನ್ನು ಮೂಡಿಸುವ ವಿವೇಚನೆಯನ್ನು ಮೂಡಿಸುವಂತೆ ವೈಚಾರಿಕವಾಗಿ ಸೃಜನೇತರ ಕೃತಿಗಳು ಅಭಿವ್ಯಕ್ತಗೊಂಡಿವೆ. ಅಲ್ಲದೆ ವಿಜ್ಞಾನದ ವಿಚಾರಗಳನ್ನು ಚಿಕಿತ್ಸಕ ದೃಷ್ಟಿಯಿಂದ ಪ್ರಯೋಗ ಪೂರ್ವಕವಾಗಿ ವಿಷಯದ ಸತ್ವವನ್ನು ಗುರುತಿಸಿ, ಸಂಗ್ರಹಿಸಿದ ಮಾಹಿತಿಯನ್ನೆಲ್ಲ ವಿಭಾಗಿಸಿಕೊಂಡು ಕರಾರುವಕ್ಕಾಗಿ ಪ್ರಸ್ತುತ ಪಡಿಸಲಾಗುವುದು. ಸಮಾಜಕ್ಕೆ ಸಂಬಂಧಿಸಿದ ವಿಜ್ಞಾನ ವಿಚಾರಗಳು ತರ್ಕಬದ್ಧವಾಗಿ ತಿಳಿಯಲು ಸಾಧ್ಯವಾಗುವಂತೆ ವಿಷಯದ ವಿಸ್ತಾರ, ಸರಳ ಅಭಿವ್ಯಕ್ತಿ, ಸೂಕ್ತ ವಿಷಯ ನಿರೂಪಣೆ, ಸುಸಂಬದ್ಧತೆ, ಸಮತೋಲಿತ ವಿಷಯದ ತಾರ್ಕಿಕ ಜೋಡಣೆ ಮೊದಲಾದವುಗಳನ್ನು ಸೃಜನೇತರ ವಿಜ್ಞಾನ ಬರಹಗಳಲ್ಲಿ ಕಾಣಬಹುದು.

ವಿಜ್ಞಾನದ ವಿಷಯಗಳನ್ನು ಸರಳವಾಗಿ ಸಣ್ಣ ಸಣ್ಣ ಸಾಲುಗಳಲ್ಲಿ ನಿಖರ ಹಾಗೂ ತಾರ್ಕಿಕವಾಗಿ ಮೂಡಿಬರುವಂತೆ ಮಾಡುವ ಮೂಲಕ ಅನಗತ್ಯ ವಿವರಣೆಗೆ ಸೃಜನೇತರ ವಿಜ್ಞಾನ ಬರಹಗಳಲ್ಲಿ ಯಾವುದೇ ಆಸ್ಪದವಿಲ್ಲ. ಇಲ್ಲಿ ಸರಳತೆ, ನಿಖರತೆ, ಉದ್ದೇಶಪೂರತೆ ಹಾಗೂ ತಾರ್ಕಿಕತೆ ಮೊದಲಾದವು ಪ್ರಮುಖ ಅಂಶಗಳಾಗಿವೆ. ಜೊತೆಗೆ ಅಭಿವ್ಯಕ್ತಿಸುವ ವಿಷಯವು ನೇರ ದಿಟ್ಟವಾಗಿದ್ದು, ಯಾವುದೇ ಪೂರ್ವಗ್ರಹ ಊಹೆ ಕಲ್ಪನೆಯಿಂದ ದೂರವಿರುವುದನ್ನು ಕಾಣಬಹುದು. ಇಲ್ಲಿನ ವಿಜ್ಞಾನ ಸಾಹಿತಿಗಳು ವಿಜ್ಞಾನಕ್ಕೆ ಸಂಬಂಧಿಸಿದ ವಿಷಯವನ್ನು ವೈಜ್ಞಾನಿಕ ಶೈಲಿಯಲ್ಲಿ ಅಭಿವ್ಯಕ್ತಿಸುವುದರಿಂದ ಯಾವುದೇ ಗೊಂದಲ ದ್ವಂದ್ವಕ್ಕೆ ಆಸ್ಪದವಿಲ್ಲದೆ ನಿಖರವಾಗಿ ಸ್ಪಷ್ಟವಾಗಿ ವಿಷಯದ ಆಳ ಅರಿವು ಉಂಟಾಗುವುದು.

ಸೃಜನೇತರ ವಿಜ್ಞಾನ ಸಾಹಿತ್ಯದ ಎಲ್ಲಾ ಕೃತಿ ಲೇಖನಗಳು ಕೆಲವು ಪ್ರಮುಖ ಮೂಲಾಂಶದಿಂದ ಕೂಡಿರುವುದು ಅವುಗಳೆಂದರೆ,

೧. ಸಮಸ್ಯೆಯನ್ನು ಗುರುತಿಸಿ ನಿರೂಪಿಸುವುದು.

೨. ಸಮಸ್ಯೆಯ ಕಾರಣವನ್ನು ಶೋಧಿಸಿ ವೈಜ್ಞಾನಿಕವಾಗಿ ಅಧ್ಯಯನ ಮಾಡುವುದು.

೩. ಸಮಸ್ಯೆಗೆ ಸಂಬಂಧಿಸಿದಂತೆ ಮಾಹಿತಿಗಳ ಸಂಗ್ರಹಣೆ, ವೀಕ್ಷಣೆ, ತರ್ಕ, ವಿಶ್ಲೇಷಣೆ ಮತ್ತು ಪ್ರಯೋಗಕ್ಕೆ ಒಳಪಡಿಸುವುದು.

೪. ಸಂಗ್ರಹಿತ ಮಾಹಿತಿಯೊಂದಿಗೆ ಸಮಸ್ಯೆಯನ್ನು ವಿಶ್ಲೇಷಿಸಿ ಸಾರ್ವತ್ರಿಕ ಸಿದ್ಧಾಂತವನ್ನು ರೂಪಿಸಿ ಮಂಡಿಸುವುದು.

೫. ಸಮಸ್ಯೆಗೆ ವೈಜ್ಞಾನಿಕ ವಿಧಾನದೊಂದಿಗೆ ಪರಿಹಾರ ನೀಡುವುದು.

ವಿಷಯ ನಿರೂಪಣೆಯಲ್ಲಿ ಸ್ಪಷ್ಟತೆ, ಖಚಿತತೆ, ಊಹಾಕಲ್ಪನೆ, ಪ್ರಾಯೋಗಿಕತೆ, ಅಂಕಿ ಅಂಶಗಳ ಮೂಲಕ ಸಮರ್ಥನೆ, ಸೈದ್ಧಾಂತಿಕತೆ ಮೊದಲಾದ ಲಕ್ಷಣಗಳು ಹಾಗೂ ವಿಷಯಸಂಬಂಧಿತ ಗುಣಗಳು ವಿಜ್ಞಾನ ಲೇಖನಗಳ ಮುಖ್ಯ ನಿರೂಪಣಾ ವಿಧಾನವಾಗಿರುತ್ತದೆ. ಯಾರು ಎಲ್ಲಿಯೇ ಕುಳಿತು ಪರಿಶೀಲಿಸಿದರೂ ಇಂತಹ ಕೃತಿಗಳು ಹಾಗೂ ಲೇಖನಗಳು ಕರಾರುವಕ್ಕಾದ ಮಾಹಿತಿಯ ವಿವರಣೆಯನ್ನು ನೀಡುತ್ತವೆ. ಸೃಜನೇತರ ವಿಜ್ಞಾನ ಬರಹಗಳಲ್ಲಿನ ವಿಷಯ ಮಂಡಣೆಯಲ್ಲಿ ನೇರವಾಗಿ ಅನುಮಾನಗಳಿಗೆ ಎಡೆಯಿಲ್ಲದ ಭಾಷಾಶೈಲಿಯನ್ನು ಉಪಯೋಗಿಸಲಾಗಿರುತ್ತದೆ. ವಿಜ್ಞಾನ ಸಂಗತಿಗಳ ಅಧ್ಯಯನಯೋಗ್ಯ ವಾಗುವಂತೆ ವೈಜ್ಞಾನಿಕ ಕೃತಿ ಲೇಖನಗಳು ಬರೆಯಲ್ಪಟ್ಟಿರುತ್ತವೆ. ಹೀಗಾಗಿ ವಿಜ್ಞಾನದ ಎಲ್ಲಾ ವಲಯಗಳ ಬಗೆಗೆ ಬರೆದ ಬಹುತೇಕ ಲೇಖನ ಮತ್ತು ಕೃತಿಗಳು ಈಗ ಕನ್ನಡದಲ್ಲಿ ಲಭ್ಯವಾಗುತ್ತಿರುವುದನ್ನು ಕಾಣಬಹುದು.

ರಚನಾ ವಿಧಾನದಿಂದ ಸೃಜನೇತರ ವಿಜ್ಞಾನ ಸಾಹಿತ್ಯವು ಭಿನ್ನವಾಗಿ ಕಂಡರೂ ಅದರ ಅಭಿವ್ಯಕ್ತಿಯ ಸ್ವರೂಪದಿಂದಾಗಿ ಇತರ ಸಾಹಿತಿಕ ಪ್ರಕಾರಗಳಿಗೆ ಸಮನಾಗಿ ಕಂಡು ಬರುವುದು. ಹೀಗಾಗಿಯೆ ಬಹಳಷ್ಟು ವಿಚಾರವಂತರು ಸಾಹಿತಿಗಳು ಸೃಜನೇತರ ವಿಜ್ಞಾನ ಸಾಹಿತ್ಯವನ್ನು ಸೃಜನಾತ್ಮಕವೆಂದೂ ವಾದಿಸುವುದನ್ನು ಗುರ್ತಿಸಲಾಗಿದೆ. ಆದರೂ ಸೃಜನೇತರ ವಿಜ್ಞಾನ ಬರಹಗಳ ಅಧ್ಯಯನದ ನೆಲೆಗಳೇ ಬೇರೆ. ಪಾರಿಭಾಷಿಕ ಶಬ್ದಗಳ ಅರ್ಥನಿರೂಪಣೆ, ವೈಜ್ಞಾನಿಕ ಭಾವನೆಗಳನ್ನು ಪ್ರತಿನಿಧಿಸುವ ಸಂಕೇತಗಳ ಸಂಕ್ಷೇಪ ವಿವರಣೆ, ವಿಜ್ಞಾನ ವಿಷಯಗಳ ಸ್ಪಷ್ಟೀಕರಣ, ಸಾಹಿತ್ಯ ಸೌಂದರ್ಯ ಮೊದಲಾದ ಅಂಶಗಳಿಂದ ಸಾಹಿತಿಗಳಾದ ನಾಗೇಶ್ ಹೆಗಡೆ, ಟಿ.ಆರ್.ಅನಂತರಾಮು, ಶ್ರೀನಿಧಿ, ಅನುಪಮ ನಿರಂಜನ, ಜೆ.ಆರ್.ಲಕ್ಷ್ಮಣರಾವ್, ಪಾ.ವೆಂ.ಆಚಾರ್ಯರು, ಸುಮಂಗಲ ಮುಮ್ಮಿಕಟ್ಟಿ ಮೊದಲಾದವರು

ಸಮಾಜಕ್ಕೆ ವಿಜ್ಞಾನ ವಿಷಯ ಮಾಹಿತಿಯನ್ನು ತಿಳಿಸುವುದರಿಂದ ಸೃಜನೇತರ ವರ್ಗಕ್ಕೆ ಸೇರಿಸಿದರೂ, ಸೃಜನಶೀಲ ಅಧ್ಯಯನ ನೆಲೆಗೇನು ಹೊರತಾಗಿಲ್ಲದಿರುವುದು ಗೋಚರಿಸುವುದು.

ವಿಜ್ಞಾನ ಬರವಣಿಗೆಯ ಕಾರ್ಯದೊಂದಿಗೆ ಮುಕ್ತ ಮನಸ್ಸಿನಿಂದ ನಿಖರವಾದ ಜ್ಞಾನವನ್ನು ಪಡೆದು, ಜನ ಸಾಮಾನ್ಯರಿಗೆ ಅವರದೇ ಅರ್ಥೈಸಿಕೊಳ್ಳುವ ಧಾಟಿಯಲ್ಲಿ ವಿಜ್ಞಾನ ವಿಷಯ ವಿಚಾರಗಳ ವಿನಿಮಯವನ್ನು ಮಾಡುತ್ತಿರುವುದನ್ನು ಸೃಜನೇತರ ವಿಜ್ಞಾನ ಬರಹದ ನೆಲೆಯಲ್ಲಿ ಕಾಣಬಹುದು. ಸಿ.ಆರ್.ಚಂದ್ರಶೇಖರ್, ಎಂ.ಕೆ ರಾಮಸ್ವಾಮಿ, ಪಾ. ವೆಂ ಆಚಾರ್ಯ ನಾಗೇಶ್ ಹೆಗಡೆ, ಸುದೀಂದ್ರ ಹಾಲ್ದೊಡ್ಡೇರಿ, ಆಢ್ಯನಡ್ಕ ಕೃಷ್ಣಭಟ್ಟ, ಶ್ರೀನಿಧಿ ಮೊದಲಾದವರು ಜನಜೀವನಕ್ಕೆ ಸಂಬಂಧಿಸಿದ ಬಹಳಷ್ಟು ವಿಷಯ ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ವ್ಯಕ್ತ ಪಡಿಸುತ್ತಿದ್ದಾರೆ. ಇವರುಗಳ ಕೃತಿ, ಲೇಖನಗಳನ್ನು ಸಾಮಾನ್ಯ ಪ್ರಾಥಮಿಕ ವಿದ್ಯಾಭ್ಯಾಸ ಪಡೆದವರಿಂದ ಹಿಡಿದು ಉನ್ನತ ವಿದ್ಯಾಭ್ಯಾಸ ಪಡೆದವರವರೆಗೆ ಯಾರೇ ಓದಿದರೂ ಸುಲಭವಾಗಿ ಅರ್ಥವಾಗುವ ಸರಳ ಆಕರ್ಷಿತ ಶೈಲಿಯಲ್ಲಿ ಮೂಡಿಬಂದಿರುವುದನ್ನು ಗಮನಿಸಬಹುದು.

ವಿಜ್ಞಾನ ಸಾಹಿತ್ಯ ಕ್ಷೇತ್ರದಲ್ಲಿ ಮಹತ್ವದ ಸಾಧನೆಯನ್ನು ಮಾಡಿದ ಎಂ.ಕೆ.ರಾಮಸ್ವಾಮಿಯವರ ಬಹಳಷ್ಟು ಕೃತಿಗಳು ಹಾಗೂ ಲೇಖನಗಳ ರಚನೆಯನ್ನು ಮಾಡಿದ್ದು, ಅವರ ಎಲ್ಲಾ ಬರಹಗಳು ಸರಳ ಸುಲಭವಾಗಿದ್ದು, ಪಾರಿಭಾಷಿಕ ಪದಗಳನ್ನು ಆದಷ್ಟು ಕಡಿಮೆ ಬಳಸುವ ಮೂಲಕ ವಿಜ್ಞಾನ ವಿಷಯ ವಿಚಾರಗಳು ಎಲ್ಲರಿಗೂ ತಿಳಿಯುವಂತೆ ಮಾಡಿರುವುದನ್ನು ಕಾಣಬಹುದು. ಅದರಂತೆ ಎಂ.ಕೆ ರಾಮಸ್ವಾಮಿರವರಿಂದ ರಚಿತ 'ಜ್ಞಾನ ವಿಜ್ಞಾನ' ಕೃತಿಯನ್ನು ಅಧ್ಯಯನದಲ್ಲಿ ತೊಡಗಿಸಿಕೊಳ್ಳಲಾಯಿತು. ಜ್ಞಾನ ವಿಜ್ಞಾನವು ಸು ೯೧ ಲೇಖನಗಳಿಂದ ಕೂಡಿದ್ದು ಪ್ರತಿಯೊಂದು ಲೇಖನವು ವಿಜ್ಞಾನ ವಿಷಯ ವಿಚಾರ ಉಪಯುಕ್ತ ಮಾಹಿತಿಯಿಂದ ಕೂಡಿದೆ.

'ಸಕಲಜೀವಿಗಳ ಅಸ್ತಿತ್ವಕ್ಕೆ ಕಾರಣ ಸೌರಶಕ್ತಿ', 'ಕಲುಷಿತ ನೀರನ್ನು ಶುದ್ಧೀಕರಿಸಿ ಸದ್ಬಳಕೆ ಮಾಡುವ ಬಗೆ', 'ನೆಗಡಿಯ ಬಗ್ಗೆ ನಮ್ಮ ಅರಿವು', 'ಭೂಮಿಯ ಮೇಲೆ ಎಷ್ಟು ಬಗೆಯ ನೀರುಗಳಿವೆ' ಎಂಬುದು ಸ್ವರೂಪದಲ್ಲಿ ಸಾಮಾನ್ಯವಾಗಿ ಕಂಡರೂ ಗಂಭೀರ ಅಧ್ಯಯನದಲ್ಲಿ ತೊಡಗಿದಾಗ ಮೂಲ ತಿರುಳಿನ ಪರಿಚಯವಾಗುತ್ತದೆ. ಇನ್ನೂ ಕೆಲವು ಲೇಖನಗಳಂತು ಲೇಖಕರ ಅಭಿವ್ಯಕ್ತಿಯಿಂದಲೇ ತನ್ನ ಶಿಷ್ಟ ಸ್ವರೂಪದ ಪರಿಚಯ ಮಾಡಿಕೊಡುವಂತಿವೆ. ಅಂದರೆ, 'ಜೀವತಂತ್ರ ಎಂಬ ಆಧುನಿಕ ಮಂತ್ರ', 'ಪರಮಾಣು ವಿಕಿರಣ ಜೊತೆ ಜೀವನ' ಮೊದಲಾದವು ಶಿಷ್ಟ ಅಭಿವ್ಯಕ್ತಿ ಸ್ವರೂಪದಿಂದ ಕೂಡಿದ್ದು

ಮಾಹಿತಿಯ ಆಗರವಾಗಿವೆ. ಇದೇ ರೀತಿಯಲ್ಲಿ ವಿಜ್ಞಾನದ ವಿಷಯ ವಸ್ತುವಾದ ಪರಿಸರ, ಆರೋಗ್ಯ, ಕೃಷಿ, ಭೌತ ಖಭೌತ, ಮಾಹಿತಿ ತಂತ್ರಜ್ಞಾನ ಮೊದಲಾದ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಬಹಳಷ್ಟು ಲೇಖನಗಳನ್ನು ಇಲ್ಲಿ ಕಾಣಬಹುದು. ಎಲ್ಲಾ ಲೇಖನಗಳ ಮುಖ್ಯ ಆಶಯವೇ ವೈಜ್ಞಾನಿಕ ಮಾಹಿತಿಯು ಜನತೆಗೆ ತಲುಪುವ ಮೂಲಕ ಸಾಮಾಜಿಕ ಹೊಣೆಗಾರಿಕೆಯನ್ನು ನಿಭಾಯಿಸುವಂತೆ ಮಾಡುವುದರಿಂದ ಕೂಡಿದ್ದು, ಎಂ.ಕೆ.ರಾಮಸ್ವಾಮಿ ರವರ ಬರಹಗಳು ಸರಳ ಸುಲಭ ನಿರೂಪಣ ಅಭಿವ್ಯಕ್ತಿಯ ಸ್ವರೂಪ ಮೊದಲಾದವುಗಳ ಮೂಲಕ ಬಹು ಪ್ರಯೋಜನಕಾರಿಯಾಗಿವೆ.

ಸೃಜನೇತರ ವಿಜ್ಞಾನ ಸಾಹಿತ್ಯದ ನೆಲೆಯಲ್ಲಿ ಬರುವ ಮತ್ತೊಂದು ವಿಜ್ಞಾನ ಸಾಹಿತ್ಯದ ಭಾಗವೆಂದರೆ ವೈದ್ಯವಿಜ್ಞಾನವಾಗಿದ್ದು, ಈ ಭಾಗದಲ್ಲಿ ಹೆಸರುವಾಸಿಯಾದ ಲೇಖಕರೆಂದರೆ ಡಾ.ಸಿ.ಆರ್.ಚಂದ್ರಶೇಖರ್‌ರವರು. ಇವರ ಪ್ರತಿಯೊಂದು ಕೃತಿಯು ಆರೋಗ್ಯದ ಮಾಹಿತಿಯೊಂದಿಗೆ ಸಮಾಜದ ಆರೋಗ್ಯ ವರ್ಧನೆಯ ಬಗ್ಗೆಯೂ ಅತ್ಯಗತ್ಯ ವಿಚಾರಗಳಿಂದ ಕೂಡಿರುವುದನ್ನು ಗಮನಿಸಬಹುದು. ಅದರಂತೆ ಆರನೇಯ ಇಂದ್ರಿಯವೆಂದು ಕರೆಯಲ್ಪಡುವ ಮನಸ್ಸು, ಪಂಚೇಂದ್ರಿಯಗಳಿಂದ ಬರುವ ಸಂದೇಶಗಳಿಗೆ ಸೂಕ್ತ ಪ್ರತಿಕ್ರಿಯೆಯನ್ನು ತೋರಿಸುವ ಬಹು ಪ್ರಭಾವಶಾಲಿ ಇಂದ್ರಿಯ ಎಂಬುದನ್ನು 'ಮನಸ್ಸಿನ ಸುಖ-ದುಃಖ ಮತ್ತು ನಿಮ್ಮ ಆರೋಗ್ಯ' ಎಂಬ ಲೇಖನಗಳಲ್ಲಿ ತಿಳಿಸಿರುವುದನ್ನು ಕಾಣಬಹುದು.

ಸುಖ-ದುಃಖ, ಆಸೆ-ನಿರಾಸೆ, ಉತ್ಸಾಹ-ಉದಾಸೀನತೆ, ನೋವು-ನಲಿವು, ಸಫಲತೆ-ವಿಫಲತೆ, ಆರೋಗ್ಯ-ಅನಾರೋಗ್ಯ ಮೊದಲಾದವುಗಳಿಗೆ ಮೂಲವೇ ಮನಸ್ಸು. ಈ ರೀತಿಯಲ್ಲಿ ಹತ್ತು ಹಲವಾರು ಮುಖವನ್ನು ಹೊಂದಿರುವ ಮನಸ್ಸಿನ ಸ್ವಾಸ್ಥ್ಯ-ಸುಖ, ವೈವಿದ್ಯತೆಯಿಂದ ಕೂಡಿದ ವ್ಯಕ್ತಿತ್ವ, ಮದ್ದಿಲ್ಲದ ಮನೋರೋಗ ಹಾಗೂ ಮನೋರೋಗಿಗಳ ಚಿಕಿತ್ಸೆಯಲ್ಲಿ ಉಂಟಾದ ಮರೆಯಲಾಗದ ಅನುಭವಗಳು, ಸ್ತ್ರೀಯರ ಮಾನಸಿಕ ಆರೋಗ್ಯ ಮೊದಲಾದ ವಿಷಯದಿಂದ ಕೂಡಿದ್ದು ಸರಳ ಸುಲಭ ಹಾಗೂ ಉತ್ತಮವಾದ ವಿವರಣೆಯಿಂದ ಕೂಡಿದ್ದು, ಅಗತ್ಯವಿದ್ದಲ್ಲೆಲ್ಲ ಸಲಹೆ ಸೂಚನೆಯನ್ನು ನೀಡುತ್ತಾ, ಅಗತ್ಯ ಮಾಹಿತಿಯನ್ನು ಜನಸಮುದಾಯಕ್ಕೆ ನೀಡುವ ಸಾಮಾಜಿಕ ಹೊಣೆಗಾರಿಕೆಯ ಜವಾಬ್ದಾರಿಯನ್ನು ಪ್ರಕಟಿಸಿರುವ ಬರಹಗಳಾಗಿರುವುದನ್ನು ಅವಲೋಕಿಸ ಬಹುದು.

ಇನ್ನು ಪಾ.ವೆಂ ಆಚಾರ್ಯರ ಲೇಖನವಂತು ಇಂಗ್ಲೀಷ್ ಮತ್ತಿತರ ಭಾಷೆಯ ಪ್ರಭಾವದಿಂದ ಪ್ರಭಾವಿತವಾಗಿ ರಚಿತವಾದುದಾಗಿದೆ. ಇದಕ್ಕೆ ಕಾರಣ ಅವರಲ್ಲಿದ್ದ ಜ್ಞಾನದ ದಾಹ ಹಾಗೂ ತಾನು ತಿಳಿದದ್ದನ್ನು ಜನತೆಗೆ ನೀಡುವ ಉದ್ದೇಶವಾಗಿತ್ತು. ವಿಜ್ಞಾನ

ಸಾಹಿತ್ಯವನ್ನು ಕಬ್ಬಿಣದ ಕಡಲೆಯೆಂದು ಭಾವಿಸಿ ದೂರ ಸರಿಯುತ್ತಿದ್ದ ಜನತೆಗೆ ಇವರ ಲೇಖನವು ಮೃದುವಾಗಿ ಅಸ್ವಾದಕ್ಕೆ ಯೋಗ್ಯವಾಗುವಂತೆ ಬರೆಯುತ್ತಿದ್ದದ್ದು ಲೇಖಕರ ಸೃಜನಶೀಲ ನಿರೂಪಣೆಯ ದ್ಯೋತಕ. ಪಾ.ವೆಂ.ಆಚಾರ್ಯರ ಅಭಿವ್ಯಕ್ತಿ ಸ್ವರೂಪವನ್ನು ಗಮನಿಸಿದ ಎಸ್.ಎಲ್.ಶ್ರೀನಿವಾಸಮೂರ್ತಿರವರು ವಿಜ್ಞಾನ ವಿಸ್ಮಯ ಪ್ರಸ್ತಾವನೆಯಲ್ಲಿ "ಹಲವು ಹತ್ತು ವಿಷಯಗಳನ್ನು ಕುರಿತು ಓದುತ್ತಿದ್ದ ಆಚಾರ್ಯರು ಲೇಖನಿ ವಿಜ್ಞಾನದಂತಹ ಕಬ್ಬಿಣದ ಕಡಲೆಯನ್ನೂ ಮೆತ್ತಗಾಗಿಸಿ ಓದುಗರ ಆಸ್ವಾದನೆಗೆ ದಾರಿ ಮಾಡಿಕೊಟ್ಟಿತು"[೧೨] ಎಂದು ಹೇಳುವಲ್ಲಿ ಅವರಲ್ಲಿದ್ದ ನಿರೂಪಣಾ ಶೈಲಿ ಹಾಗೂ ಭಾಷಾಭಿವ್ಯಕ್ತಿ ಸ್ವರೂಪವೇ ಕಾರಣವಾಗಿದ್ದು, ಇವರ ಪ್ರತಿಯೊಂದು ಲೇಖನವು ಓದಿ ಮರೆತುಬಿಡುವಂತಹದ್ದಲ್ಲ. ಬದಲಿಗೆ ದಿನನಿತ್ಯದ ಜೀವನಕ್ಕೆ ಉಪಯೋಗವಾಗಬಲ್ಲ ಮಾಹಿತಿಯ ಆಗರವಾಗಿರುವುದು.

ಪಾ.ವೆಂ ಆಚಾರ್ಯರ ಪ್ರತಿಯೊಂದು ಲೇಖನವು ಸರಳ ಸುಲಭವಾಗಿದ್ದು ಉತ್ತಮ ನಿದರ್ಶನಗಳಿಂದ ಕೂಡಿದೆ. ಅಂದರೆ ಅವರ ಒಂದು ಲೇಖನದಲ್ಲಿ "ವೇಗವಾಗಿ ಓಡುವ ರೈಲಿನಲ್ಲಿ ಕುಳಿತವನ ಅರ್ಧ ತಾಸೇ ಬೇರೆ, ಕಂಬಿಯ ಬಳಿ ನಿಂತು ಗಾಡಿಯನ್ನು ನೋಡುತ್ತಿರುವವನ ಅರ್ಧ ತಾಸೇ ಬೇರೆ"[೧೩] ಎಂದು ಹೇಳುವಲ್ಲಿ ಕಾಲದ ಮಹತ್ವ ಹಾಗೂ ಬದಲಾವಣೆಯ ವಿವರಣೆಯು ಎಂತಹವರಿಗೂ ಅರ್ಥವಾಗುವಂತೆ ಮೂಡಿ ಬಂದಿರುವುದನ್ನು ಗಮನಿಸಬಹುದು. ತಿಳಿಯಾದ ಭಾಷಾಬಳಕೆ ಹಾಗೂ ಅಗತ್ಯಕ್ಕೆ ತಕ್ಕಂತೆ ಉಪಮೆ ರೂಪಕ ಹಾಗೂ ಹೋಲಿಕೆಗಳ ಬಳಕೆ ಯನ್ನು ಮಾಡಿರುವುದರ ಮೂಲಕ ಪ್ರತಿಯೊಂದು ಲೇಖನದಲ್ಲೂ ಮಾಹಿತಿಯ ಜೊತೆಗೆ ಎಚ್ಚರಿಕೆ ಮುಂದಾಲೋಚನೆಯ ಸಂದೇಶದಿಂದ ಕೂಡಿದೆ. ಪ್ರತಿಯೊಂದು ಲೇಖನದ ಶೀರ್ಷಿಕೆಯು ಆಕರ್ಷಕ ಹಾಗೂ ಇಡೀ ಲೇಖನದ ತಿರುಳಂತಿದ್ದು, ಸರಳ ಸುಲಭ ನಿರೂಪಣೆಯಿಂದ ಕೂಡಿರುವುದು ವಿಶೇಷವಾಗಿದೆ. ಸಾಮಾನ್ಯವಾಗಿ ಗುಡುಗು ಮಿಂಚಿನ ಬಗ್ಗೆ ಬಹಳಷ್ಟು ಲೇಖನಗಳನ್ನು ಓದಿದ್ದು ಸಾಮಾನ್ಯ ಶೀರ್ಷಿಕೆಯಿಂದ ಕೂಡಿರುವುದನ್ನು ಗಮನಿಸಲಾಗಿದೆ. ಆದರೆ ಪಾ.ವೆಂ.ಆಚಾರ್ಯರು 'ಅಪಾಯಕರ ಮಿತ್ರ–ಮಿಂಚು' ಎಂದು ವಿಶೇಷವಾದ ಅಕರ್ಷಕ ಶೀರ್ಷಿಕೆಯನ್ನು ಬಳಸಿರುವುದು ಅವರ ನಿರೂಪಣಾ ಶೈಲಿಯನ್ನು ಸೂಚಿಸುತ್ತದೆ.

ಪಾ.ವೆಂ ಆಚಾರ್ಯರಂತೆ ನಾಗೇಶ್ ಹೆಗಡೆಯವರು ಬಹಷ್ಟು ಲೇಖನಗಳನ್ನು ಕೃತಿಗಳನ್ನು ರಚನೆ ಮಾಡಿದ್ದು, ಇವರ ಪುಸ್ತಕಗಳಲ್ಲಿನ ಲೇಖನಗಳಂತು ತಿಳಿಯದ ಪ್ರಪಂಚದಿಂದ ತಿಳಿಯುವ ಪ್ರಪಂಚಕ್ಕೆ ಕೊಂಡೊಯ್ಯುವಂತಿರುವ ಲೇಖನಗಳು. ಅರಿವಿಲ್ಲದ ಪರಿಚಿತವಲ್ಲದ ಹೊಸಲೋಕ ಪ್ರವೇಶಿಸಿದ ನಮಗೆ ಆತ್ಮೀಯತೆಯಿಂದ ಕಾಳಜಿಯಿಂದ ಪ್ರೀತಿಯಿಂದ ಇಡೀ ಲೋಕದಲ್ಲಿ ತಿರುಗಾಡಿಸಿ, ಇಲ್ಲೇನು ಹೊಸದಾದುದು ನಾವು

ನೋಡುವುದಿದೆ ಎಂದವರಿಗೆ, ಇದ್ದದ್ದರಲ್ಲೆ ಹೊಸತನ್ನು ತೋರಿಸುವ ಸೃಜನಾತ್ಮಕ ವ್ಯಕ್ತಿತ್ವದವರು. ಸಾಮಾನ್ಯ ಎನ್ನುವ ಹಲವಾರು ವಿಷಯಗಳಲ್ಲಿ ಅಸಾಮಾನ್ಯತೆಯನ್ನು ಪರಿಚಯಿಸುತ್ತಾ ಹೋಗುವರು. ಸ್ವಲ್ಪ ವ್ಯಂಗ್ಯತೆ ಹಾಗೂ ಲೇವಡಿ ಬೆರೆತ ಆಕರ್ಷಕ ಪದಪ್ರಯೋಗದ ಬರವಣಿಗೆಯ ಶೈಲಿಯು ನಾಗೇಶ್ ಹೆಗಡೆರವರ ಬರವಣಿಗೆಯಲ್ಲಿ ಕಂಡುಬರುವ ಪ್ರಮುಖ ಅಂಶವಾಗಿದೆ. ನಿತ್ಯ ಜೀವನದಲ್ಲಿ ಅಗತ್ಯವಾದ ವಿಷಯಗಳನ್ನು ವಿಶೇಷವಾದ ರೂಪದಲ್ಲಿ ಪರಿಚಯಿಸುವುದರೊಂದಿಗೆ, ಅವಲೋಕನ, ಎಚ್ಚರಿಕೆ ಹಾಗೂ ಸ್ವವಿಮರ್ಷೆಗೆ ಓದುಗರು ಒಳಗಾಗುವಂತೆ ಮಾಡುವ ಅಭಿವ್ಯಕ್ತಿ ಸ್ವರೂಪದಿಂದ ಇವರ ಕೃತಿಗಳು ಕೂಡಿರುವುದು. ಅವರ 'ಇರುವುದೊಂದೇ ಭೂಮಿ' ಕೃತಿಯಲ್ಲಿನ ಪ್ರತಿಯೊಂದು ಲೇಖನವು ಸಾಮಾನ್ಯವಾಗಿ ಇಷ್ಟೇನಾ ಎಂದು ಉದ್ಗರಿಸುವಂತೆ ಕಂಡರೂ ಪ್ರತಿಯೊಂದು ಲೇಖನವು ಬೆಲೆ ಬಾಳುವ ಮುತ್ತುಗಳಂತಿವೆ. ಜೀವ ವೈವಿಧ್ಯತೆಯಿಂದ ಕೂಡಿರುವ ಭೂಮಿಯು ಇಂದು ಆಧುನಿಕತೆಯ ಜಾಗತೀಕರಣದ ಬರಟೆಗೆ ಸಿಲುಕಿ ತನ್ನ ಅಸ್ಥಿತ್ವವನ್ನೆ ಕಳೆದುಕೊಳ್ಳುವ ಸ್ಥಿತಿಗೆ ತಲುಪಿರುವ ದುಂತದ ಚಿತ್ರಣವನ್ನು ನೀಡುವುದರೊಂದಿಗೆ ಭೂಮಿಯ ಉಳಿವಿಗೆ ಮಾನವ ಕುಲವು ಹೇಗೆ ಎಚ್ಚರಿಕೆ ವಹಿಸಬೇಕು ಎಂಬ ಮಾಹಿತಿಯಿಂದ ಕೂಡಿರುವುದು ವಿಶೇಷವಾಗಿದೆ.

'ಇತಿಹಾಸದಲ್ಲಿ ವಿಜ್ಞಾನದ ನಾಲ್ಕು ಸಂಪುಟಗಳಿಗೆ' ವಿಮರ್ಶೆಯನ್ನು ಬರೆಯುವಾಗ ನಾಗೇಶ್ ಹೆಗಡೆಯವರು ಅಭಿವ್ಯಕ್ತ ಪಡಿಸಿದ ಭಾಷೆಯು ಅವರ ಸಂವಹನ ಶೈಲಿ ಹಾಗೂ ಭಾಷಾಭಿವ್ಯಕ್ತಿಯ ಪ್ರತೀಕವಾಗಿದೆ. ಇದಕ್ಕೆ ಅವರು ನೀಡಿರುವ ಶೀರ್ಷಿಕೆಯೇ ಎಷ್ಟು ಆಕರ್ಷಕವಾಗಿದೆ ಅಂದರೆ 'ಕನ್ನಡ ಪೆಟ್ಟಿಗೆಯಲ್ಲಿ ವಿಜ್ಞಾನದ ವಿರಾಟ್ ಇತಿಹಾಸ' ಎನ್ನುವಲ್ಲಿ ಎಲ್ಲರಿಗೂ ಕುತೂಹಲ ವಿಶೇಷತೆಯು ಗೋಚರಿಸುತ್ತದೆ. "ರೋಚಕತೆಯನ್ನೇ ಹುಡುಕುವವರಿಗೆ ಬರ್ನಾಲ್ ಕೃತಿ ತುಸು ನಿರಾಸೆಯನ್ನೇ ತರಬಹುದು. ನಿಜಕ್ಕೂ ತೂಕದ ಗುಂಡುಗಳನ್ನು ಪೀಸಾ ಗೋಪುರದಿಂದ ಗೆಲಿಲಿಯೋ ಕೆಳಗೆ ಬೀಳಿಸಿದನೇ? ನ್ಯೂಟನ್ ತಲೆಯ ಮೇಲೆ ನಿಜಕ್ಕೂ ಸೇಬು ಬಿತ್ತೇ? ಅಲೆಗ್ಸಾಂಡರ್ ಫ್ಲೆಮಿಂಗ್ ಸೂಕ್ಷ್ಮದರ್ಶಕದಲ್ಲಿ ರೋಗಾಣುಗಳನ್ನು ನೋಡುತ್ತಿದ್ದಾಗ ಗಾಳಿಯಲ್ಲಿ ತೇಲಿಬಂದ ಬೂಷ್ಟಿನ ಕಣವೊಂದು ಗಾಜಿನ ಬಟ್ಟಲಿಗಿಳಿದು ಆತನ ಕಣ್ಣೆದುರೇ ರೋಗಾಣುಗಳನ್ನು ನುಂಗಿದ್ದು ನಿಜವೇ?....."[೧೪] ಎಂದು ಲೇಖನವನ್ನು ವಿಮರ್ಶಿಸುವಲ್ಲಿ ಅವರು ಬಳಸಿರುವ ಭಾಷೆಯ ಸ್ವರೂಪವು ವೈಜ್ಞಾನಿಕ ಅಭಿವ್ಯಕ್ತಿಯ ಮಾದರಿಯಾಗಿದೆ.

ಪ್ರತಿಯೊಂದು ಲೇಖನವು ಎಚ್ಚರಿಕೆಯ ನುಡಿಯನ್ನು ನಮಗರಿವಿಲ್ಲದೆ ನೀಡುತ್ತಾ ನಮ್ಮಿಂದಾಗುತ್ತಿರುವ ಭೂಮಿಯ ಮೇಲಿನ ಅತ್ಯಾಚಾರಕ್ಕೆ ಮುಂದೊಂದು ದಿನ ಎಂತಹ

ಭೀಕರ ತೊಂದರೆಯನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ಹೇಳುವಲ್ಲಿ ಲೇಖನಗಳ ಶೀರ್ಷಿಕೆಯೆ ಸಾಕು. ಅಂದರೆ 'ಬಂತು ೨೯ನೇ ದಿನ ಲೇಖನವು ಭೂಮಿಯು ಹೇಗೆ ಅವಸಾನಕ್ಕೆ ಹತ್ತಿರವಾಗುತ್ತಿದೆ ಇದಕ್ಕೆ ಮಾನವ ಹೇಗೆ ಕಾರಣ'[೧೫] ಎಂಬುದನ್ನು ತಿಳಿಸಿರುವುದು ಎಂತಹವರಿಗೂ ಅರ್ಥವಾಗುತ್ತದೆ. ಹೀಗೆ ನಾಗೇಶ್ ಹೆಗಡೆಯವರ ಪ್ರತಿಯೊಂದು ಲೇಖನಗಳು ನಮ್ಮ ಅರಿವಿಗೆ ಅಗತ್ಯವಾದ ಹೊಸ ಆಲೋಚನೆಯ ದೃಷ್ಟಿಕೋನವನ್ನು ನೀಡುತ್ತಾ, ನಮ್ಮ ಜ್ಞಾನವನ್ನು ವಿಸ್ತರಿಸುವಂತಿವೆ. ವೈಜ್ಞಾನಿಕ ಮಾಹಿತಿಯನ್ನು ಜನಜನಿತ ವಿಷಯಕ್ಕೆ ಸಂಬಂಧಿಸಿದಂತೆ ಸಂಗ್ರಹಿಸಿ ವಿಷಯಕ್ಕೆ ಚ್ಯುತಿ ಬರದಂತೆ ಆಕರ್ಷಕವಾದ ಅಭಿವ್ಯಕ್ತಿಯ ಸ್ವರೂಪದಲ್ಲಿ ನಿರೂಪಿಸುತ್ತಾ ಬರೆದಿರುವುದನ್ನು ಗಮನಿಸಬಹುದು.

ಹಣ್ಣು ಪಕ್ವಗೊಂಡಾಗ ತಿನ್ನಲು ರುಚಿಸುವಂತೆ ನಾಗೇಶ್ ಹೆಗಡೆಯವರು ಶಾಬ್ದಿಕ ಕಸರತ್ತಿನ ಹಾಗೂ ಗಂಭೀರತೆ ಮತ್ತು ಲಘು ಹಾಸ್ಯದೊಂದಿಗೆ ಅಭಿವ್ಯಕ್ತಿಸುವುದರಿಂದ ನಿಸ್ಸಾರತೆಯಿಂದ ಕೂಡಿರುತ್ತದೆ ಎಂದು ತಿಳಿದಿದ್ದ ವಿಜ್ಞಾನ ಲೇಖನಗಳಿಗೆ ಸಾರತೆ ಬಂದು ಸಾಮಾನ್ಯನಿಗೂ ರುಚಿಸುವಂತಾಗಿದೆ. ಅಲ್ಲದೆ ಅವರ ಲೇಖನಗಳಲ್ಲಿ ನವಿರಾದ ತಮಾಷೆ ಗಂಭೀರವಾದ ಎಚ್ಚರಿಕೆ ಎರಡನ್ನೂ ಕಾಣಬಹುದು. ಅಂದರೆ 'ಇರುವುದೊಂದೆ ಭೂಮಿ'ಯಲ್ಲಿನ 'ಮಾನವ ನಿರ್ಮಿತ ಮಹಾಸಮಸ್ಯೆಗಳು' ಎಂಬ ಲೇಖನದಲ್ಲಿನ ಸಾಲನ್ನು ಉದಾಹರಣೆಯಾಗಿ ಇಲ್ಲಿ ಗಮನಿಸಬಹುದು. "ವಸುದೈವ ಕುಟುಂಬಕಂ ಎನ್ನುವ ಮಾತು ಹಳತಾಗಿ ವಸುದೈವ ಶರೀರಕಂ ಎನ್ನಬೇಕಾದ ಹಂತದಲ್ಲಿದ್ದೇವೆ"[೧೬] ನಾವು ಎಂಬಲ್ಲಿ ನವಿರಾದ ಹಾಸ್ಯದೊಂದಿಗೆ ಮಾನವಕುಲವು ಸಮಸ್ಯೆಗಳ ಜಟಿಲತೆಯಲ್ಲಿ ಸಿಲುಕಿರುವ ದುರದೃಷ್ಟತೆಯನ್ನು ಗಂಭೀರತೆಯಿಂದ ಚಿತ್ರಿಸಿದ್ದಾರೆ.

ಒಟ್ಟಾರೆಯಾಗಿ ಗಮನಿಸಿದರೆ ವಿಜ್ಞಾನ ಸಾಹಿತ್ಯವೆನ್ನುವುದು ಇತರ ಸಾಹಿತ್ಯದಂತೆ ಸೃಜನಾತ್ಮಕ ಸಾಹಿತ್ಯವಾಗಿರುವುದು ಎಂದು ವಿಜ್ಞಾನ ವಿಷಯ ವಿಚಾರ ಮಂಡಣೆಯಿಂದ ತಿಳಿದುಬರುವುದು. ಸಾಹಿತಿಗಳು ಬಳಸಿದ ಸಾಹಿತಿಕ ಅಂಶ, ರಚನಾ ಶೈಲಿ ಹಾಗೂ ಭಾಷಾಭಿವ್ಯಕ್ತಿ ಸ್ವರೂಪದ ಆಧಾರದ ಮೇಲೆ ಸೃಜನಶೀಲ ಹಾಗೂ ಸೃಜನೇತರವಾಗಿ ಅಧ್ಯಯನದ ನೆಲೆಯನ್ನು ಕಂಡುಕೊಳ್ಳಲಾಯಿತೇ ಹೊರತು, ಸೃಜನಶೀಲ ಹಾಗೂ ಸೃಜನೇತರ ಎಂಬುದನ್ನು ವಿಜ್ಞಾನ ಸಾಹಿತ್ಯವನ್ನು ನಿರ್ಧರಿಸುವ ಮಾನದಂಡವಲ್ಲ. ಎ.ಓ.ಆವಲಮೂರ್ತಿರವರು ವಿಜ್ಞಾನ ಸಾಹಿತ್ಯ ಎನ್ನುವುದು ಕನ್ನಡ ಸಾಹಿತ್ಯದ ಹಾಗೆ ಒಂದು ಮಿಮಾಂಸೆಯಿದ್ದಂತೆ ಎಂದು ಹೇಳುವುದರೊಂದಿಗೆ ವಿಜ್ಞಾನ ಸಾಹಿತ್ಯವು ಸೃಜನಾತ್ಮಕತೆಯಿಂದ ಕೂಡಿದೆ ಎನ್ನುವ ಅಂಶಕ್ಕೆ ಪುಷ್ಟಿ ನೀಡಿದ್ದಾರೆ. ವಿಷಯದ ಆಳ ಅರಿವು ಪಡೆಯಲು ವಿಜ್ಞಾನ ಲೇಖನ ಕೃತಿಗಳು ಬಹು ಸಹಕಾರಿಯಾದವು ಎಂದು

ಅನೇಕ ಸಾಹಿತಿಗಳು ಹೇಳಿದ್ದಾರೆ. ಅಲ್ಲದೆ ವಿಜ್ಞಾನವು ಜನಜೀವನದ ಪ್ರತಿಯೊಂದು ಹಂತದಲ್ಲೂ ತನ್ನ ಇರುವಿಕೆ ಮತ್ತು ಪ್ರಭಾವವನ್ನು ಬೀರಲು ಮುಖ್ಯ ಕಾರಣವೇ ಅದರಲ್ಲಿನ ಸರಳ ಹಾಗೂ ಸುಲಭ ನಿರೂಪಣಾ ವಿಧಾನವಾಗಿದೆ. ಸಾಮಾನ್ಯವಾಗಿ ವಿಜ್ಞಾನ ಲೇಖನ ಕೃತಿಗಳು ನಿಸ್ಸಾರವಾದುದು. ಅದರಲ್ಲಿ ಶುಷ್ಕತೆ ಕಠಿಣತೆ ಹೆಚ್ಚು ಎಂಬ ಸಾರ್ವತ್ರಿಕ ನಂಬಿಕೆಯು ಅಧಿಕವಾಗಿದ್ದುದನ್ನು, ಕನ್ನಡದ ವಿಜ್ಞಾನ ಸಾಹಿತಿಗಳು ತಮ್ಮ ಕಥನಾ, ವಿಶ್ಲೇಷಣ, ವೈಚಾರಿಕ ಹಾಗೂ ವೈಜ್ಞಾನಿಕ ನಿರೂಪಣಾ ಶೈಲಿಯ ನವಿರಾದ ಬರಹದ ಮೂಲಕ ತೊಡೆದು ಹಾಕಿರುವುದನ್ನು ಕಂಡುಕೊಳ್ಳಲಾಯಿತು.

ಎಲ್ಲಾ ಕಾಲ ಸ್ಥಳಗಳಲ್ಲಿ ನಿಯಮ, ಸಿದ್ಧಾಂತ, ಸೂತ್ರ ಮತ್ತು ವೈಜ್ಞಾನಿಕ ಸಂಬಂಧಗಳ ಮೂಲಕ ಹಾಗೂ ಅನ್ಯ ಭಾಷಾ ನಿರೂಪಣೆಯ ಮೂಲಕ ಸಂವಹನಗೊಳ್ಳುವ ವಿಜ್ಞಾನ ಕೃತಿಗಳು ಜನಸಾಮಾನ್ಯರಿಂದ ಅನ್ಯವಾಗಿ ಬೇರೆಯಾಗಿ ದೂರವೇ ಉಳಿಯುವಂತಿತ್ತು. ಹೀಗಾಗಿ ಯಾವುದೇ ವೈಜ್ಞಾನಿಕ ವಿಷಯವನ್ನು ಸಮಾಜದೆಡೆಗೆ ಕೊಂಡೊಯ್ಯಲು ವಿಜ್ಞಾನ ಸಾಹಿತಿಯು ವಿಷಯದ ಸಂಗ್ರಹ, ಕ್ರೋಢೀಕರಣ, ಮಂಡಣೆಯಲ್ಲಿ ಏನು? ಹೇಗೆ? ಏಕೆ? ಯಾವಾಗ? ಎಲ್ಲಿ? ಮತ್ತಿತರ ಪ್ರಶ್ನೆಗಳ ಮೂಲಕ ಲೇಖನಗಳನ್ನು ರಚಿಸಿದ್ದಾರೆ. ಹೀಗಾಗಿಯೇ "ರುಡ್‌ಯಾರ್ಡ್ ಕಿಪ್ಲಿಂಗ್‌ರವರು ತನಗೆ ತಿಳಿದಿರುವುದನ್ನೆಲ್ಲ ಆರು ಜನ ನಂಬಿಕಸ್ಥ ಸ್ನೇಹಿತರು ಕಲಿಸಿದ್ದಾರೆ ಎಂದು ಕವನ ಕಟ್ಟಿ ಹಾಡಿದ್ದಾನೆ. ಅವರ ಹೆಸರುಗಳು ಏನು? ಏಕೆ? ಯಾವಾಗ? ಹೇಗೆ? ಎಲ್ಲಿ? ಮತ್ತು ಯಾರು? ಎಂದು ಹೇಳಿದ್ದಾರೆ".[೧೭] ಆದುದರಿಂದ ವಿಜ್ಞಾನ ಸಾಹಿತ್ಯದಲ್ಲಿ ಈ ಎಲ್ಲಾ ಅಂಶಗಳು ಓದುಗರಲ್ಲಿ ಕುತೂಹಲವನ್ನು ಕೆರಳಿಸಿ ನಿಸ್ಸಾರವಾದ ವಿಜ್ಞಾನ ವಿಷಯವನ್ನು ರಸಯುಕ್ತವಾಗಿಸಿ ಓದುಗರಿಗೆ ಮಾಹಿತಿಯ ಬಗ್ಗೆ ಆಸಕ್ತಿ ಮೂಡುವಂತೆ ಮಾಡುವುದು.

ಸೃಜನೇತರ ಹಾಗೂ ಸೃಜನಶೀಲ ವಿಜ್ಞಾನ ಬರಹಗಳಲ್ಲಿನ ವಿಷಯುಗಳು ಜನಸಾಮಾನ್ಯರಿಗೆ ಹತ್ತಿರವಾಗುವಲ್ಲಿ ಎದುರಿಸಿದ ಅಂಶವೆಂದರೆ, ಶಿಷ್ಟ ಭಾಷೆಯ ಬಳಕೆ, ಸಂಸ್ಕೃತ ಮತ್ತು ಇಂಗ್ಲೀಷ್ ಪದಗಳ ಬಳಕೆ, ಕೆಲವು ಅನ್ಯಭಾಷೆಯ ಪದಗಳಿಗೆ ಸೃಷ್ಟಿಸಿದ ಹೊಸ ಪದಗಳ ಬಳಕೆ ಮತ್ತು ಪಾರಿಭಾಷಿಕ ಪದಗಳ ಅಳವಡಿಕೆಯಲ್ಲಿನ ಸಮಸ್ಯೆ. ಈ ಎಲ್ಲಾ ಸಮಸ್ಯೆಯಿಂದಾಗಿ ವಿಜ್ಞಾನ ವಿಚಾರಗಳು ಜನಸಾಮಾನ್ಯರಿಂದ ದೂರವಾಗಿ, ನಮ್ಮ ದೇಶದ ವಿಜ್ಞಾನ ನಮ್ಮದು ಎಂದು ಹೇಳುವಂತಾಯಿತೇ ಹೊರತು ವೈಜ್ಞಾನಿಕ ಭಾವನೆಯನ್ನು ನಮ್ಮದಾಗಿಸಿಕೊಳ್ಳಲು ತೊಡಕಾದವು. ಹೀಗಾಗಿಯೇ ಬಿ.ಜಿ.ಎಲ್ ಸ್ವಾಮಿ, ಜಿ.ಟಿ.ನಾರಾಯಣ ರಾವ್, ಪೂರ್ಣಚಂದ್ರ ತೇಜಸ್ವಿ, ಸಿ.ಆರ್ ಚಂದ್ರಶೇಖರ್, ನಾಗೇಶ್ ಹೆಗಡೆ, ಟಿ.ಆರ್.ಅನಂತರಾಮು, ಅನುಪಮ ನಿರಂಜನ, ಕೊಳ್ಳೆಗಾಲ ಶರ್ಮ, ಆಡ್ಯನಡ್ಕ ಕೃಷ್ಣಭಟ್ಟರು,

ಟಿ.ಜಿ ಶ್ರೀನಿಧಿ ಮತ್ತಿತರು ತಮ್ಮ ಲೇಖನಗಳಲ್ಲಿ ವಸ್ತುನಿಷ್ಠತೆ, ಭಾವುಕತೆ, ಸರಳತೆ, ಹಾಸ್ಯ ಪ್ರವೃತ್ತಿ, ಭಾಷೆಯ ಲಾಲಿತ್ಯದ ಜೊತೆಗೆ ವಿಜ್ಞಾನದ ನಿಷ್ಠೂರಪರತೆ ಮೊದಲಾದ ಅಂಶದಿಂದಾಗಿ ವಿಜ್ಞಾನ ವಿಷಯದ ಬಗ್ಗೆ ಓದುಗ ಬಳಗವನ್ನೇ ಸೃಷ್ಟಿಸಿಕೊಂಡಿರುವುದು ಜನಜನಿತ ಸರಳ ಸುಲಭ ಅರ್ಥವಂತಿಕೆಯ ನಿರೂಪಣೆಯ ವಿಧಾನವಾಗಿರುವುದನ್ನು ಸೃಜನಶೀಲ ಹಾಗೂ ಸೃಜನೇತರ ಬರಹಗಳ ಅಧ್ಯಯನದ ನೆಲೆಯಲ್ಲಿ ಅವಲೋಕಿಸಲಾಯಿತು.

ಕೊನೆ ಟಿಪ್ಪಣಿಗಳು

೧. ಅನಂತರಾಮು ಟಿ.ಆರ್., ವಿಜ್ಞಾನ ತಂತ್ರಜ್ಞಾನ., ಪುಟ ಸಂಖ್ಯೆ : xi

೨. ನಿಂಗಣ್ಣ ಚಿ., ಕನ್ನಡ ಸಾಹಿತ್ಯ ಸಂಸ್ಕೃತಿ ಕೋಶ., ಪುಟ ಸಂಖ್ಯೆ: ೩೬೧

೩. ಆವಲಮೂರ್ತಿ ಎ.ಓ., ವಿಜ್ಞಾನ ಸೂರ್ಯ., ಪುಟ ಸಂಖ್ಯೆ : ೨೬೯.

೪. ಸ್ವಾಮಿ ಬಿ.ಜಿ.ಎಲ್., ಹಸಿರು ಹೊನ್ನು., ಪುಟ ಸಂಖ್ಯೆ : ೧೪–೧೬

೫. ಲಕ್ಷ್ಮಣರಾವ್.ಜೆ.ಆರ್., ವಿಜ್ಞಾನ ಬರವಣಿಗೆಯಲ್ಲಿನ ಕೆಲವು ಸಮಸ್ಯೆಗಳು., ಪುಟ ಸಂಖ್ಯೆ : ೨೭ ಮತ್ತು ೨೮.

೬. ನಾರಾಯಣರಾವ್ ಜಿ.ಟಿ., ಭವಿಷ್ಯ ವಿಜ್ಞಾನ ., ಪುಟ ಸಂಖ್ಯೆ : ಶುಕ್ರಾವತರಣ – ಭಾಗ (ಅಂತರ್‌ಜಾಲ ತಾಣದಿಂದ pdf ನಲ್ಲಿ ಪಡೆದ ಪುಸ್ತಕ http://www.athreebook.com /search/ label/ಭವಿಷ್ಯ%20ವಿಜ್ಞಾನ)

೭. ಅದೇ ಪುಟ ಸಂಖ್ಯೆ : ಶುಕ್ರಾವತರಣ ಭಾಗ

೮. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು., ಪುಟ ಸಂಖ್ಯೆ : ಲೇಖಕರ ನುಡಿ

೯. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಫ್ಲೈಯಿಂಗ್ ಸಾಸರ್ಸ್., ಪುಟ ಸಂಖ್ಯೆ : ೩

೧೦. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಏರೋಪ್ಲೇನ್ ಚಿಟ್ಟೆ ಮತ್ತು ಇತರ ಕಥೆಗಳು., ಪುಟ ಸಂಖ್ಯೆ : ಲೇಖಕರ ನುಡಿ

೧೧. ಸುಬ್ಬರಾಯಪ್ಪ ಬಿ.ವಿ(ಮೂಲ)., ಕನ್ನಡಕ್ಕೆ– ಲಕ್ಷ್ಮೀಕಾಂತ ಹೆಗಡೆ., ಭಾರತದಲ್ಲಿ ವಿಜ್ಞಾನ ಒಂದು ಐತಿಹಾಸಿಕ ನೋಟ., ಪುಟ ಸಂಖ್ಯೆ : ೨

೧೨. ಶ್ರೀನಿವಾಸ ಹಾವನೂರು., ವಿಜ್ಞಾನ ವಿಸ್ಮಯ., ಪುಟ ಸಂಖ್ಯೆ : ಪ್ರಸ್ತಾವನೆ ಬಾಗ

೧೩. ಅದೇ ಪುಟ ಸಂಖ್ಯೆ ; ೩೧

೧೪. ಪ್ರಜಾವಾಣಿ.ನೆಟ್.ಅರ್ಟಿಕಲ್// (www.prajavani.net.article/ಕಲೆ/ಸಸಾಹಿತ್ಯ/ಪುಸ್ತಕ ವಿಮರ್ಶೆ>ಕನ್ನಡ ಪಟ್ಟಿಗೆಯಲ್ಲಿ ವಿಜ್ಞಾನದ ವಿರಾಟ್ ಇತಿಹಾಸ)– ೨೧.೩.೨೦೧೯.

೧೫. ನಾಗೇಶ್ ಹೆಗಡೆ., ಇರುವುದೊಂದೇ ಭೂಮಿ., ಪುಟ ಸಂಖ್ಯೆ : ೧೧–೧೨

೧೬. ಅದೇ ಪುಟ ಸಂಖ್ಯೆ : ೧೮

೧೭. ಲಕ್ಷ್ಮಣರಾವ್ ಜೆ.ಆರ್., ವಿಜ್ಞಾನ ಬರವಣಿಗೆಯ ಕೆಲವು ಸಮಸ್ಯೆಗಳು., ಪುಟ ಸಂಖ್ಯೆ : ೪೪.

ಅಧ್ಯಾಯ–ಐದು

ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆಯ ಅವಲೋಕನ– ಸೃಜನೇತರ ವಿಜ್ಞಾನ ಸಾಹಿತ್ಯವನ್ನು ಗಮನಿಸಿ.

೫.೧. ನಿಸರ್ಗ/ಪರಿಸರ

೫.೨. ಕೃಷಿ

೫.೩. ಆರೋಗ್ಯ–ವೈದ್ಯಕೀಯ, ಮನೋವಿಜ್ಞಾನ

೫.೪. ಭೌತ–ಬಾಹ್ಯಾಕಾಶ

೫.೫. ಮಾಹಿತಿ–ತಂತ್ರಜ್ಞಾನ

ಅಧ್ಯಾಯ – ಐದು

ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆಯ ಅವಲೋಕನ– ಸೃಜನೇತರ ವಿಜ್ಞಾನ ಸಾಹಿತ್ಯವನ್ನು ಗಮನಿಸಿ.

ವಿಜ್ಞಾನ ತಂತ್ರಜ್ಞಾನ ಯುಗದಲ್ಲಿ ಪ್ರತಿ ಕ್ಷಣದಲ್ಲೂ ಹೊಸ ಹೊಸ ಸಂಗತಿಗಳು ಘಟಿಸುತ್ತಿರುತ್ತವೆ. ಕೆಲವು ಸಂಗತಿಗಳು ನಮಗೆ ಮಾಹಿತಿಯನ್ನು ನೀಡುವಂತಿದ್ದರೆ, ಮತ್ತೆ ಕೆಲವು ನಮ್ಮ ದೈನಂದಿನ ಬದುಕಿಗೆ ಹೊಂದಿಕೊಳ್ಳುವಂತಿರುತ್ತವೆ. ಇಂತಹ ಸಂಗತಿಗಳನ್ನು ಅದರ ವಿಶೇಷತೆಗಳನ್ನು ಸಾಮಾನ್ಯ ಜನರಿಗೆ ತಲುಪಿಸುವ ಕಾರ್ಯ ವಿಜ್ಞಾನ ಲೇಖಕ ಹಾಗೂ ಸಂವಹನಕಾರರದಾಗಿದ್ದು, ಈ ನಿಟ್ಟಿನಲ್ಲಿ ವಿಜ್ಞಾನ ಲೇಖನಗಳು ಬಹುಮುಖ್ಯ ಪಾತ್ರ ವಹಿಸುವುದು.


ಇಂಗ್ಲೀಷ್ ಪ್ರಭಾವ ಹೆಚ್ಚಾಗಿದ್ದ ಕಳೆದ ಶತಮಾನದಲ್ಲಿ ಕನ್ನಡ ಭಾಷೆಯಲ್ಲಿ ಕತೆ, ಕವನಗಳು, ಕಾದಂಬರಿಗಳನ್ನು ಬರೆಯಲು ಹಿಂದು ಮುಂದು ನೋಡುತ್ತಿದ್ದರು. ಇನ್ನೂ ವಿಜ್ಞಾನ ಸಾಹಿತ್ಯ ಯಾರಿಗೂ ಪರಿಚಿತವಲ್ಲದ ಹಾಗೂ ಬರವಣಿಗೆಯಲ್ಲಿ ಯಾರು ಆಸಕ್ತಿ ವಹಿಸದ ಸ್ಥಿತಿ ಇತ್ತು. ಅನುವಾದ, ಭಾಷಾಂತರ ಕಾರ್ಯವನ್ನು ಕೆಲವು ಆಸಕ್ತ ಲೇಖಕರು ಮಾಡಲು ಮುಂದಾದರೂ ಅವರಿಗೆ ಪಾರಿಭಾಷಿಕ ಶಬ್ದಗಳ ಅಭಾವ ಹಾಗೂ ವಿಷಯ ಪರಿಜ್ಞಾನದ ತೊಡಕುಗಳು ಎದುರಾದವು. ಇಂತಹ ಸಂದಿಗ್ಧ ಸ್ಥಿತಿಯಲ್ಲಿ ಕನ್ನಡದ ಇತರ ಸಾಹಿತ್ಯ ಪ್ರಕಾರಗಳ ಜೊತೆಗೆ ವಿಜ್ಞಾನ ಲೇಖನಗಳನ್ನು ಕನ್ನಡದಲ್ಲಿ ಬರೆಯುವ ಹಾಗೂ ವಿಜ್ಞಾನ ವಿಷಯಾಧಾರಿತ ಕೃತಿಗಳನ್ನು ಬರೆಯುವವರನ್ನು ಬೆಳೆಸುವ ಸಲುವಾಗಿ ಬಹಳಷ್ಟು ಮಹಾನ್ ವಿದ್ವಾಂಸರು, ಸಂಘಗಳು–ಸಂಸ್ಥೆಗಳು ಲೇಖಕರು ಶ್ರಮಿಸಿದರು.

ಸೃಜನೇತರ ವಿಜ್ಞಾನ ಬರಹಗಳಲ್ಲಿ ಕಾಣುವ ವಸ್ತುಗಳ ಆಧಾರದ ಮೇಲೆ ವಿಭಾಗ ಮಾಡಲಾಗಿದೆ. ಅವುಗಳೆಂದರೆ ರಸಾಯನ ವಿಜ್ಞಾನ, ಭೌತ ವಿಜ್ಞಾನ, ಜೀವ ವಿಜ್ಞಾನ, ಖಗೋಳ ವಿಜ್ಞಾನ, ಮನೋ ವಿಜ್ಞಾನ, ಬಾಹ್ಯಾಕಾಶ ವಿಜ್ಞಾನ, ಪರಿಸರ ವಿಜ್ಞಾನ, ವೈದ್ಯ ವಿಜ್ಞಾನ, ಕೃಷಿ ವಿಜ್ಞಾನ, ಗಣಕ ವಿಜ್ಞಾನ ಮೊದಲಾದ ಮೂಲ ಹಾಗೂ ಅನ್ವಯಿಕ

ವಿಜ್ಞಾನದ ವಿಷಯಗಳ ಜೊತೆಗೆ ವಸ್ತು ವಿಜ್ಞಾನದ ವಿಷಯಗಳಾದ ಮಾಹಿತಿ ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮೊದಲಾದವುಗಳಾಗಿ ವಿಂಗಡಿಸಲಾಗಿರುವುದು. ಇದಲ್ಲದೆ ಜನಪ್ರಿಯ ವಿಜ್ಞಾನ, ಜನ ವಿಜ್ಞಾನ, ಜನಪದ ವಿಜ್ಞಾನ, ಆಯುರ್ವೇದ ವಿಜ್ಞಾನ, ಮಕ್ಕಳ ವಿಜ್ಞಾನ ಸಾಹಿತ್ಯ, ಮಾಹಿತಿ ವಿಜ್ಞಾನ ಸಾಹಿತ್ಯ, ಮನರಂಜನೆಯ ವಿಜ್ಞಾನ ಸಾಹಿತ್ಯ, ವೃತ್ತಿ ಕೌಶಲ್ಯಾಭಿವೃದ್ಧಿ ವಿಜ್ಞಾನ ಸಾಹಿತ್ಯ ಮೊದಲಾದ ವಿಂಗಡಣೆಯೊಂದಿಗೆ ಈ ಎಲ್ಲಾ ಕ್ಷೇತ್ರಗಳಿಗೆ ಸಂಬಂಧಿಸಿದ ಪುಸ್ತಕಗಳು ಪ್ರಕಟವಾಗಿರುವುದನ್ನು ಗಮನಿಸಬಹುದು.

ವಿಜ್ಞಾನ ಸಾಹಿತ್ಯದ ಭಾಷೆ ಸ್ವರೂಪ, ವಸ್ತು ವೈವಿಧ್ಯತೆಯ ಅಧಾರದ ಮೇಲೆ ಈಗಾಗಲೆ ಬಹಳಷ್ಟು ಲೇಖಕರು ವಿಜ್ಞಾನ ಸಾಹಿತ್ಯವನ್ನು ವಿಭಾಗಿಸಿಕೊಂಡು ಲೇಖನಗಳನ್ನು ರಚಿಸಿರುವುದನ್ನು ಕಾಣಬಹುದು. ಸೋಮಶೇಖರ್ ಬಿ.ಎಸ್ ರವರು 'ಆರಂಭದ ವಿಜ್ಞಾನ ಕೃತಿಗಳ ಭಾಷೆ ಸ್ವರೂಪ' ಎಂಬಲ್ಲಿ ೧೯೫೦ ಮತ್ತು ೬೦ರ ದಶಕದವರೆಗಿನ ಕಾಲವನ್ನು ಆರಂಭದ ವಿಜ್ಞಾನ ಸಾಹಿತ್ಯ ಎಂದು ಪರಿಗಣಿಸಿ ತಮಗೆ ದೊರೆತಿರುವ ವಿವಿಧ ಆಕರಮೂಲಗಳಲ್ಲಿರುವ ಮಾಹಿತಿಯನ್ನು ಸಂಗ್ರಹಿಸಿ ಒಟ್ಟು ೧೪ ವಿಜ್ಞಾನದ ವಿವಿಧ ಶಾಖೆಗಳನ್ನು ಗುರುತಿಸಿದ್ದಾರೆ.[೧] ಅವುಗಳೆಂದರೆ.

ಶುದ್ಧ ವಿಜ್ಞಾನಗಳು(ಭೌತ) ಅಂದರೆ ಸಾಮಾನ್ಯ ವಿಜ್ಞಾನ, ಭೌತ ವಿಜ್ಞಾನ, ರಸಾಯನ ವಿಜ್ಞಾನ, ಗಣಿತ ವಿಜ್ಞಾನ, ಖಗೋಳ ವಿಜ್ಞಾನ, ಭೂ ವಿಜ್ಞಾನ ಎಂದೂ, ಶುದ್ಧ ವಿಜ್ಞಾನಗಳು(ಜೀವ) ಎಂಬಲ್ಲಿ ಜೀವ ವಿಜ್ಞಾನ, ಸಸ್ಯ ವಿಜ್ಞಾನ, ಪ್ರಾಣಿ ವಿಜ್ಞಾನ ಮತ್ತು ಮನಃಶಾಸ್ತ್ರ ಎಂದೂ ಮತ್ತು ಅನ್ವಯಿಕ ವಿಜ್ಞಾನದಲ್ಲಿ ವೈದ್ಯ ವಿಜ್ಞಾನ, ಕೃಷಿ ವಿಜ್ಞಾನ, ಗೃಹ ವಿಜ್ಞಾನ ಮತ್ತು ಇಂಜಿನಿಯರಿಂಗ್ ಎಂದು ವಿಭಾಗಗಳನ್ನು ಮಾಡಿದ್ದಾರೆ. ಅವುಗಳನ್ನು ಈ ಕೆಳಕಂಡ ನಕ್ಷೆಯಲ್ಲಿ ಚಿತ್ರಿಸಲಾಗಿದೆ.



ಹೀಗೆಯೆ ಎಚ್.ಎಸ್. ನಿರಂಜನಾರಾಧ್ಯರವರು 'ಆಧುನಿಕ ಕನ್ನಡ ವಿಜ್ಞಾನ ಸಾಹಿತ್ಯ ವಸ್ತು ವೈವಿಧ್ಯ'[೨] ಎಂಬಲ್ಲಿ ಕಳೆದ ೨-೩ ದಶಕಗಳಲ್ಲಿ ಪ್ರಕಟಗೊಳ್ಳುತ್ತಿರುವ ಕನ್ನಡ ವಿಜ್ಞಾನ ಸಾಹಿತ್ಯವನ್ನು ಆಧುನಿಕ ಕನ್ನಡ ವಿಜ್ಞಾನ ಸಾಹಿತ್ಯವೆಂದು ಪರಿಗಣಿಸಿದ್ದು, ಕನ್ನಡ ಸಾಹಿತ್ಯದಲ್ಲಿನ ಪ್ರಕಾರಗಳಾದ ಕವನ, ಕಥೆ, ಕಾದಂಬರಿಗಳಲ್ಲಿ ವೈವಿಧ್ಯತೆಯಿರುವಂತೆ ವಿಜ್ಞಾನ ಸಾಹಿತ್ಯದಲ್ಲೂ ವಸ್ತು ಮತ್ತು ರಚನಾ ಶೈಲಿಯಲ್ಲಿ ವೈವಿಧ್ಯತೆಯಿರುವುದನ್ನು ತಿಳಿಸಿದ್ದಾರೆ.

ವಿಜ್ಞಾನ ಸಾಹಿತ್ಯದ ವಸ್ತು ಶೈಲಿಯ ವೈವಿಧ್ಯತ ದೃಷ್ಟಿಯಿಂದ ಹಲವಾರು ವರ್ಗೀಕರಣವನ್ನು ಮಾಡಲಾಗಿದೆ ಎಂದು ಎಚ್.ಎಸ್. ನಿರಂಜನಾರಾಧ್ಯರವರು ತಿಳಿಸಿದ್ದಾರೆ. ಅವರು ತಿಳಿಸಿರುವಂತಹ ವಿಜ್ಞಾನ ಶಾಖೆಗಳೆಂದರೆ ಮೂಲ ಹಾಗೂ ಅನ್ವಯಿಕ ವಿಜ್ಞಾನದ ವಿಷಯಗಳಾದ ಭೌತ, ರಸಾಯನ, ಜೀವ, ಖಗೋಳ, ಬಾಹ್ಯಾಕಾಶ, ವೈದ್ಯ, ಮನೋವಿಜ್ಞಾನಗಳು, ಗಣಿತ, ಕೃಷಿ, ಇಂಜಿನಿಯರಿಂಗ್, ಗಣಕ, ಪರಿಸರ ವಿಜ್ಞಾನ ಮೊದಲಾದವುಗಳೊಂದಿಗೆ ಇತ್ತೀಚಿನ ಜ್ಞಾನ ಶಾಖೆಗಳಾದ ಜೈವಿಕ ತಂತ್ರಜ್ಞಾನ, ಮಾಹಿತಿ ತಂತ್ರಜ್ಞಾನ, ನ್ಯಾನೋ ತಂತ್ರಜ್ಞಾನ, ವಸ್ತು ವಿಜ್ಞಾನ ಎಂದು ವರ್ಗೀಕರಿಸಿರುವುದನ್ನು ಕಾಣಬಹುದು. ಇದರ ಜೊತೆಯಲ್ಲಿಯೇ ಜನಪದ ವಿಜ್ಞಾನ, ಜನಪರ ವಿಜ್ಞಾನ, ಜನ ವಿಜ್ಞಾನ, ಮಾಹಿತಿ ವಿಜ್ಞಾನ, ವೃತ್ತಿ ಕೌಶಲ್ಯ ವಿಜ್ಞಾನ ಮೊದಲಾದ ರೀತಿಯಲ್ಲಿ ವಿಂಗಡಿಸಲು ಸಾಧ್ಯ ಎಂಬುದನ್ನು ವ್ಯಕ್ತ ಪಡಿಸಿದ್ದಾರೆ.

ವಿಜ್ಞಾನ ತಂತ್ರಜ್ಞಾನ ಕ್ಷೇತ್ರದಲ್ಲಿ ಸಾಕಷ್ಟು ಪ್ರಗತಿಯಿಂದಾಗಿ ನಮ್ಮ ದೇಶವು ಎಲ್ಲಾ ಕ್ಷೇತ್ರಗಳಲ್ಲಿ ಅಭಿವೃದ್ಧಿಯನ್ನು ಸಾಧಿಸುತ್ತಿರುವುದು. ಅಲ್ಲದೆ, ವಿಜ್ಞಾನ ಕ್ಷೇತ್ರದಲ್ಲಿನ ಆವಿಷ್ಕಾರಗಳು, ಕೊಡುಗೆಗಳು, ನಿರಂತರ ನೇರವಾಗಿ ಮತ್ತು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಜನಸಾಮಾನ್ಯರಿಗೆ ತಲುಪುತ್ತಲಿವೆ. ಪ್ರಭಾವಿ ವಿಜ್ಞಾನ ವಲಯವನ್ನು ಹೊರತು ಪಡಿಸಿ, ದೈನಂದಿನ ನಾಗರೀಕರ ಬದುಕನ್ನು ಕಲ್ಪಿಸಿಕೊಳ್ಳುವುದು ಅಸಾಧ್ಯವಾಗಿದೆ. ಶಿಕ್ಷಣ, ರಾಜಕೀಯ, ಆರ್ಥಿಕ ಕ್ಷೇತ್ರದಿಂದ ಹಿಡಿದು ಇಂದಿನ ದಿನನಿತ್ಯದ ಪ್ರತಿಯೊಂದು ಚಟುವಟಿಕೆಗಳು ಸುಸೂತ್ರವಾಗಿ ನಡೆಯುವುದು ವಿಜ್ಞಾನ ತಂತ್ರಜ್ಞಾನದಿಂದ.

ವಿಜ್ಞಾನವು ಜನಜೀವನದಲ್ಲಿ ಎಷ್ಟು ಹಾಸು ಹೊಕ್ಕಾಗಿದೆ ಎಂದರೆ ವಿಜ್ಞಾನವನ್ನು ಹೊರತುಪಡಿಸಿ ಬದುಕುವುದೇ ಅಸಾಧ್ಯವಾಗಿದೆ. ಇಂತಹದ್ದರಲ್ಲಿ ವಿಜ್ಞಾನವನ್ನು ಪ್ರತ್ಯೇಕ ಕ್ಷೇತ್ರಕ್ಕೆಂದು ಮೀಸಲಿಟ್ಟು ವಿಜ್ಞಾನದ ಆಯಾ ಸಂಬಂಧಪಟ್ಟ ಕ್ಷೇತ್ರದ ವಿಷಯವೆಂದು ದೂರವಿಡುವಂತಿಲ್ಲ. ರೋಚಕ ಐತಿಹಾಸಿಕ ಮಹತ್ವವನ್ನು ಹೊಂದಿರುವ ವಿಜ್ಞಾನವು ಸಾಮ್ರಾಜ್ಯಶಾಹಿ ಪ್ರಭುತ್ವ ಧರ್ಮಗಳಿಗೆ ಸವಾಲೊಡ್ಡುವುದರೊಂದಿಗೆ ಅವುಗಳ ವಿರೋಧವನ್ನು

ಎದುರಿಸಿ, ಅಂಧಾಚರಣೆ, ಮೂಢನಂಬಿಕೆಯಿಂದ ಕೂಡಿದ ಮೌಢ್ಯತೆಯನ್ನು ಖಡಾಖಂಡಿತವಾಗಿ ತಿರಸ್ಕರಿಸಿ ವೈಜ್ಞಾನಿಕ ಅಭಿವೃದ್ಧಿ, ಬೆಳವಣಿಗೆಗೆ ಬೆನ್ನೆಲುಬಾಗಿ ಸಹಕರಿಸಿ, ಸರ್ವವನ್ನು ಸರ್ವರನ್ನು ತನ್ನ ಒಡಲಲ್ಲಿ ಸೇರಿಸಿಕೊಂಡು ನಿರಂತರ ಬದಲಾವಣೆಯನ್ನು ಮಾಡುತ್ತಾ ಸವಾಲನ್ನು ಸ್ವೀಕರಿಸುತ್ತಾ ಪ್ರಗತಿಯತ್ತ ಸಾಗುತ್ತಿರುವ ಒಂದು ಬೃಹತ್ ಕ್ಷೇತ್ರವಾಗಿ ಬೆಳೆಯುತ್ತಿದೆ.

ಜಾಗತಿಕವಾಗಿ ಅಭಿವೃದ್ಧಿ ಹೊಂದಿದ ಇಂದಿನ ಪ್ರಪಂಚದಲ್ಲಿ ಹಲವು ಅಂಶಗಳಿಗಾಗಿ ಅಂದರೆ ಶೈಕ್ಷಣಿಕ ಇಲ್ಲವೇ ಆರೋಗ್ಯಕ್ಕೆ ಸಂಬಂಧಿಸಿದ ವಿಷಯಗಳಿಗಾಗಿ ವಿಜ್ಞಾನ ವಿಷಯಗಳ ಮಾಹಿತಿಯನ್ನು ಆಶಿಸುತ್ತೇವೆ. ಹೀಗಾಗಿ ಸಮಾಜದಲ್ಲಿ ವಿಜ್ಞಾನಕ್ಕೆ ತಕ್ಕ ವಾತಾವರಣವನ್ನು ಕಲ್ಪಿಸುವುದು ಹಾಗೂ ವಿಜ್ಞಾನ ವಿಷಯ ವಿಚಾರಗಳನ್ನು ಸಾಮಾನ್ಯನೆಡೆಗೆ ಕೊಂಡೊಯ್ಯುವುದು, ವಿಜ್ಞಾನ ವಿಧಾನ ಮತ್ತು ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದು ಬಹಳ ಮುಖ್ಯ. ಆದುದರಿಂದ ವಿಜ್ಞಾನವೆಂಬುದು ಆಯಾ ಕ್ಷೇತ್ರದ ಪರಿಣಿತ ತಜ್ಞರಿಗೆ ಮಾತ್ರ ಸೀಮಿತಗೊಳಿಸಿ, ಅವರಿಗೆ ಮಾತ್ರ ಸಂಬಂಧಪಟ್ಟ ವಿಷಯವೆಂದು ಹೇಳಿ, ಅದರಿಂದ ಸಾಮಾನ್ಯರು ದೂರವಿರಲು ಸಾಧ್ಯವಿಲ್ಲ.

ವಿಜ್ಞಾನದಲ್ಲಿನ ಹೊಸ ಹೊಸ ಆವಿಷ್ಕಾರ, ಸಂಶೋಧನೆಗಳನ್ನು ಜನಸಾಮಾನ್ಯರು ತಿಳಿಯಲೇಬೇಕಾದ ಅಗತ್ಯತೆ ಇದೆ. ದೈನಂದಿನ ಚಟುವಟಿಕೆಗಳಲ್ಲಿ ಸಹಜವಾಗಿ ಕಾಣುವ ಕುತೂಹಲ, ಅನುಮಾನ ಮತ್ತು ವಿಸ್ಮಯಗಳ ಬಗ್ಗೆ ತಿಳಿದುಕೊಳ್ಳಲು ಹಾಗೂ ಅನಿರೀಕ್ಷಿತವಾಗಿ ಉದ್ಭವಿಸುವ ಸಮಸ್ಯೆ, ಸವಾಲುಗಳನ್ನು ಪರಿಹರಿಸಿಕೊಳ್ಳುವುದಕ್ಕೆ ವಿಜ್ಞಾನದ ಮೊರೆ ಹೋಗಬೇಕಾಗುತ್ತದೆ. ಉಪಯೋಗಿಸುವ ಸಂಪನ್ಮೂಲಗಳ, ಸಾಧನ ಸಲಕರಣೆಗಳ ಇತಿ ಮಿತಿಯನ್ನು ತಿಳಿಯಲು, ಸಾಮಾಜಿಕ ಕಳಕಳಿಯ ವಿಷಯಗಳಾದ ಪರಿಸರ, ವಾತಾವರಣ, ಜೀವ ಸಂಕುಲ, ಜೀವ ವೈವಿಧ್ಯದ ಬಗ್ಗೆ ತಿಳಿಯಲು ಹಾಗೂ ವೈಜ್ಞಾನಿಕ ಮನೋಭಾವ ಬೆಳೆಸಲು ಸಹಕಾರಿ.

ವಿಜ್ಞಾನ ಸಾಹಿತ್ಯವು ಬೆಳೆಯುತ್ತಿರುವ ಯುಗಕ್ಕೆ ತಕ್ಕಂತೆ ಸರಿಸಮವಾಗಿ ವೈಜ್ಞಾನಿಕ ಬೆಳವಣಿಗೆ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು, ಆಧುನಿಕ ವಿಷಯಗಳೆಲ್ಲವನ್ನು ಕನ್ನಡ ಭಾಷೆಯ ಮೂಲಕ ಸುಸ್ಪಷ್ಟವಾಗಿ ನಿಕೃಷ್ಟವಾಗಿ ಸರಳ ಸುಲಭವಾಗಿ ಹೇಳುವುದು ಬಹಳ ಮುಖ್ಯ. ಜನರನ್ನು ಮೌಢ್ಯ, ಅಂಧಕಾರ, ನಂಬಿಕೆಗಳಿಂದ ದೂರ ಸರಿಸಿ, ವೈಜ್ಞಾನಿಕ ಮನೋಭಾವ ಬೆಳೆಸುವಲ್ಲಿ ವಿಜ್ಞಾನ ಲೇಖನಗಳ ಪಾತ್ರ ಹಿರಿದಾದುದು. ಅತಿ ವಿಸ್ತಾರ ವಿಶಾಲವಾದ ವಿಜ್ಞಾನ ಲೋಕದ ಎಲ್ಲಾ ರೀತಿಯ ವಿಷಯಗಳ ಆಳ ವಿಸ್ತಾರಗಳನ್ನು ತಮ್ಮ ಸರಳ ಸುಲಭ ತಿಳಿ ಬರಹದ ಶೈಲಿಯಲ್ಲಿ ಜನಸಾಮಾನ್ಯನೆಡೆಗೆ ಕೊಂಡೊಯ್ಯುವುದು


ಸುಲಭವಲ್ಲದಿದ್ದರೂ ವಿಜ್ಞಾನ ಸಾಹಿತಿಗಳ ಶ್ರಮದಿಂದ ರಚಿತ ವಿಜ್ಞಾನ ಲೇಖನದಿಂದ ಸಾಧ್ಯವಾಗಿದೆ.

ವಿಜ್ಞಾನ ಕ್ಷೇತ್ರದ ವಿಷಯಸಗಳನ್ನು ಅರಿತ ಸಾಹಿತಿಗಳ ಬರಹಗಳಿಂದ ಆಧುನಿಕ ವೈಜ್ಞಾನಿಕ ಜಗಕ್ಕೆ ಹೊಂದಿಕೊಳ್ಳಲು ಜನಸಾಮಾನ್ಯರಿಗೆ ಅಗತ್ಯ ಜ್ಞಾನ ಸಿಗುವುದು. ಹೀಗಾಗಿ ದೂರದೃಷ್ಟಿವುಳ್ಳ ಬಹಳಷ್ಟು ಲೇಖಕರು ತಮ್ಮ ಅವಿರತ ಪ್ರಯತ್ನದ ಮೂಲಕ ವಿಜ್ಞಾನದ ಸಂಶೋಧನೆ, ಆವಿಷ್ಕಾರ ಮತ್ತಿತರ ಕ್ಷೇತ್ರಕ್ಕೆ ಸಂಬಂಧಿಸಿದ ವಿಷಯ ವಿಚಾರಗಳನ್ನು ಜನಸಾಮಾನ್ಯರತ್ತ ಕೊಂಡೊಯ್ಯಲು ಸಹಕರಿಸುತ್ತಿದ್ದಾರೆ. ಭೌತವಿಜ್ಞಾನ, ಜೀವ ವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ ಮೊದಲಾದ ಮೊದಲಿನಿಂದ ಬಂದ ಸಾಂಪ್ರದಾಯಿಕ ವಿಭಾಗಗಳಷ್ಟೇ ಅಲ್ಲದೆ, ಮಾಹಿತಿ ತಂತ್ರಜ್ಞಾನ, ಕಂಪ್ಯೂಟರ್, ಜೀವವೈವಿಧ್ಯ, ಕೃಷಿ, ಸಾವಯವ ಕೃಷಿ ವಿಜ್ಞಾನ, ಪರಿಸರ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಕೃತಿ ಲೇಖನಗಳನ್ನು ಬರೆದು ಪ್ರಕಟಿಸುತ್ತಿದ್ದಾರೆ. ಆದುದರಿಂದ ವಿಜ್ಞಾನ ಲೇಖಕರ ಕೃತಿಗಳು ಅಥವಾ ಲೇಖನಗಳು ವಿಭಿನ್ನ ವಸ್ತುಗಳನ್ನು ಒಳಗೊಂಡಿವೆ.

ಸಮಾಜದಲ್ಲಿ ವಿಜ್ಞಾನ ತಂತ್ರಜ್ಞಾನದ ಪ್ರಗತಿಗೆ ಅಗತ್ಯ ವಾತಾವರಣ ನಿರ್ಮಿಸುವುದರ ಜೊತೆಗೆ ಸಾಮಾನ್ಯ ಜನರೆಡೆಗೆ ವಿಜ್ಞಾನ ಮಾಹಿತಿಯನ್ನು ಸಾಗಿಸುವಲ್ಲಿ ವಿಜ್ಞಾನ ಸಾಹಿತಿಗಳು ಕಾರ್ಯಪ್ರವೃತ್ತರಾಗಿದ್ದಾರೆ. ಎಂ.ಕೆ ರಾಮಸ್ವಾಮಿ, ಆಡ್ಯನಡ್ಕ ಕೃಷ್ಣಭಟ್, ನಾಗೇಶ್ ಹೆಗಡೆ, ಕೊಳ್ಳೆಗಾಲ ಶರ್ಮ, ಸುಮಂಗಲಾ ಎಸ್ ಮಮ್ಮಿಗಟ್ಟಿ, ಡಾ.ಸೋಮಶೇಖರ್, ಬಿ.ಎಸ್ ಶೈಲಜಾ, ಟಿ.ಆರ್ ಅನಂತರಾಮು, ಟಿ.ಜಿ.ಶ್ರೀನಿಧಿ, ನೇಮಿಚಂದ್ರ, ಅಖಿಲೇಶ್ ಚಿಪ್ಪಳಿ, ಕಮಲಾ ವೈ.ಸಿ, ಲೀಲಾ ಎಂ.ಎಸ್ ಮೊದಲಾದ ವಿಜ್ಞಾನ ಸಾಹಿತಿಗಳು ವಿಜ್ಞಾನ ವಿಚಾರಗಳನ್ನು ಜನಸಾಮಾನ್ಯರ ಅಗತ್ಯತೆಗೆ ಅನುಗುಣವಾಗಿ ತಮ್ಮ ಲೇಖನಗಳಲ್ಲಿ ವಿಜ್ಞಾನ ವಿಷಯ ವಸ್ತುವನ್ನು ಆಯ್ಕೆ ಮಾಡಿಕೊಂಡು ತಮ್ಮದೇ ಅಭಿವ್ಯಕ್ತಿ ಸ್ವರೂಪದ ಮೂಲಕ ಸುಲಭ ಸರಳೀಕರಿಸಿ ವ್ಯಕ್ತಪಡಿಸಿರುವುದನ್ನು ಕಾಣಬಹುದು. ಈ ಲೇಖಕರ ಲೇಖನಗಳ ಅವಲೋಕನದೊಂದಿಗೆ ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆಯನ್ನು ಕಂಡುಕೊಳ್ಳಲಾಗಿದೆ.

ಕನ್ನಡದಲ್ಲಿ ವಿಜ್ಞಾನ ಸಾಹಿತ್ಯವು ವಿಭಿನ್ನ ವಸ್ತು ವಿಷಯದ ಮೇಲೆ ರಚನೆಗೊಂಡಿದ್ದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಯಿತು. ಪ್ರತಿಯೊಂದು ವಸ್ತು ವಿಷಯದ ಅಭಿವ್ಯಕ್ತಿಯ ಸ್ವರೂಪದ ಕಡೆಗೆ ಗಮನ ಹರಿಸುವುದರ ಜೊತೆಯಲ್ಲಿಯೇ ವಿಷಯ ವಸ್ತುವಿನ ವಿಚಾರವನ್ನು ತಿಳಿಯಲಾಯಿತು. ಅಲ್ಲದೆ ವಿಷಯದ ಪೂರ್ಣ ಗ್ರಹಿಕೆ ಹಾಗೂ ಅಧ್ಯಯನದ ದೃಷ್ಟಿಯಿಂದ ವಿಜ್ಞಾನ ಸಾಹಿತ್ಯವನ್ನು ಅದರ ರಚನೆ, ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪದ ಆಧಾರದ

ಮೇಲೆ ವಿಂಗಡಿಸಿಕೊಂಡು ಅಭ್ಯಸಿಸಲಾಗಿದೆ. ಅಧ್ಯಯನದ ದೃಷ್ಟಿಯಿಂದ ವಿಜ್ಞಾನ ಸಾಹಿತ್ಯವನ್ನು ೫ ಭಾಗಗಳಾಗಿ ವಿಂಗಡಿಸಿಕೊಳ್ಳಲಾಗಿದೆ. ಅವುಗಳೆಂದರೆ,



ಅಧ್ಯಯನದ ದೃಷ್ಟಿಯಿಂದ ಮಾತ್ರ ನಿಸರ್ಗ/ ಪರಿಸರ. ಆರೋಗ್ಯ/ವೈದ್ಯ. ಕೃಷಿ, ಭೌತ ಮತ್ತು ಬಾಹ್ಯಾಕಾಶ, ಮಾಹಿತಿ ತಂತ್ರಜ್ಞಾನ ಎಂಬ ಈ ವಿಭಾಗಗಳನ್ನು ಮಾಡಿಕೊಳ್ಳಲಾಗಿದ್ದು, ಅಧ್ಯಯನಕ್ಕಾಗಿ ಪರಿಗಣಿಸಿದ ರೇಖೆಯು ಒಂದು ಕೃತಕ ಮಿತಿಯೇ ಹೊರತು ಖಡಾಖಂಡಿತವಾಗಿ ನಿಶ್ಚಿತ ಮಿತಿಯಲ್ಲ. ವೈಯಕ್ತಿಕ ಆಲೋಚನೆ, ವಿಚಾರ ದೃಷ್ಟಿಯಿಂದ ಭಿನ್ನತೆಯನ್ನು ಪಡೆಯಬಹುದು. ಹೀಗಾಗಿ ವಿಜ್ಞಾನ ಸಾಹಿತ್ಯದ ಹಿನ್ನೆಲೆಯಲ್ಲಿ ವಸ್ತು ಮತ್ತು ಅಭಿವ್ಯಕ್ತಿ ಸ್ವರೂಪದ ಅಧಾರದ ಮೇಲೆ ವಿಂಗಡಿಸಿಕೊಂಡ ವಿಭಾಗಗಳ ಅಧ್ಯಯನವನ್ನು ಕೈಗೊಳ್ಳಲಾಗಿದೆ. ಅಧ್ಯಯನದ ದೃಷ್ಟಿಯಿಂದ ವಿಭಾಗಿಸಿಕೊಂಡ ಒಂದೊಂದು ವಿಭಾಗಕ್ಕೆ ಸಂಬಂಧಿಸಿದಂತೆ ವಿಷಯವನ್ನು ಸಂಗ್ರಹಿಸಿಕೊಂಡು ಸ್ಥೂಲ ಹಾಗೂ ವಿವರಣಾತ್ಮಕ ಅಧ್ಯಯನವನ್ನು ಮಾಡಲಾಗಿದೆ. ಇದಕ್ಕಾಗಿ ಬಹಳಷ್ಟು ಲೇಖನಗಳನ್ನೊಳಗೊಂಡ ಮೂಲ ಹಾಗೂ ಸಂಪಾದಿತ ಕೃತಿಗಳನ್ನು ಗಮನಿಸಲಾಗಿದ್ದು, ಆಯ್ದ ಲೇಖಕರ ಲೇಖನಗಳನ್ನು ಇಲ್ಲಿ ಚರ್ಚಿಸಲಾಗಿದೆ.

ಎಂ.ಕೆ ರಾಮಸ್ವಾಮಿ, ಆಡ್ಯನಡ್ಕ ಕೃಷ್ಣಭಟ್, ನಾಗೇಶ್ ಹೆಗಡೆ, ಕೊಳ್ಳೆಗಾಲ ಶರ್ಮ, ಸುಮಂಗಲಾ ಎಸ್ ಮುಮ್ಮಿಗಟ್ಟಿ, ಡಾ.ಸೋಮಶೇಖರ್, ಬಿ.ಎಸ್ ಶೈಲಜಾ, ಟಿ.ಆರ್. ಅನಂತರಾಮು, ಟಿ.ಜಿ ಶ್ರೀನಿಧಿ, ನೇಮಿಚಂದ್ರ, ಅಖಿಲೇಶ್ ಚಿಪ್ಪಳಿ, ಕಮಲಾ. ವೈ.ಸಿ., ಲೀಲಾ ಎಂ.ಎಸ್ ಮೊದಲಾದ ವಿಜ್ಞಾನ ಲೇಖಕರ ಲೇಖನಗಳು ಪ್ರಕಟಗೊಂಡ ಕೃತಿಗಳಾದ ವಸುಂಧರಾ ಭೂಪತಿರವರ ಸಂಪಾದಕತ್ವದ 'ವಿಜ್ಞಾನ ಸಾಹಿತ್ಯ ೧೯೯೭, ೨೦೧೦', ಅಖೀಲೇಶ್ ಚಿಪ್ಪಳಿರವರ ಸಂಪಾದಿತ 'ವಿಜ್ಞಾನ ಸಾಹಿತ್ಯ ೨೦೧೨–

೨೦೧೩', ಎಂ.ಕೆ ರಾಮಸ್ವಾಮಿರವರ ವಿಜ್ಞಾನ ಲೇಖನಗಳನ್ನೊಳಗೊಂಡ ಸಮಗ್ರ ಬರಹಗಳ ಕೃತಿಯಾದ 'ಜ್ಞಾನ ವಿಜ್ಞಾನ', ನಾಗೇಶ್ ಹೆಗಡೆಯವರ ಸಂಪಾದಕತ್ವದ 'ವಿಜ್ಞಾನ ಗಂಗೆಯ ಬಿಂದುಸಾರ' ಮತ್ತು 'ಇರುವುದೊಂದೆ ಭೂಮಿ', ಜಿ.ಕೆ ವೀರೇಶ್ ಅಡ್ಡೂರು ಕೃಷ್ಣರಾವ್ ರವರ 'ಕೃಷಿ ವಿಜ್ಞಾನ', ಟಿ.ಆರ್ ಅನಂತರಾಮುರವರ ಸಂಪಾದಕತ್ವದ 'ವಿಜ್ಞಾನ ಹೆದ್ದಾರಿಯಲ್ಲಿ ಮಹಾತಿರುವು' ಇತ್ಯಾದಿಗಳನ್ನು ಅಭ್ಯಾಸಿಸಲಾಗಿದ್ದು, ವಿವಿಧ ಲೇಖಕರು ತಮ್ಮ ಲೇಖನಕ್ಕಾಗಿ ಆಯ್ದುಕೊಂಡ ವಸ್ತುವನ್ನು ಜನಪ್ರಿಯ ಅಭಿವ್ಯಕ್ತಿಯ ಸ್ವರೂಪದೊಂದಿಗೆ ಅರ್ಥವತ್ತಾಗಿ ವಿವರಿಸಿರುವುದನ್ನು ಕಂಡುಕೊಳ್ಳಲಾಯಿತು. ಇದಕ್ಕಾಗಿ ಆಯ್ದ ಲೇಖಕರ ಸು ೨೦೦ ರಕ್ಕೂ ಅಧಿಕ ಲೇಖನಗಳನ್ನು ವಿಜ್ಞಾನ ಸಾಹಿತ್ಯದ ವಸ್ತು ವೈವಿಧ್ಯತೆಯ ಆಧಾರದೊಂದಿಗೆ ಅಭ್ಯಸಿಸಲಾಗಿದೆ.

ವಿಜ್ಞಾನ ಸಾಹಿತ್ಯದ ವಿಷಯ ವಸ್ತುಗಳಾದ ಪರಿಸರ, ವೈದ್ಯ, ಕೃಷಿ, ಭೌತ–ಖಭೌತ, ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ಬಹಳಷ್ಟು ಲೇಖನಗಳು ಪ್ರಕಟಿತಗೊಂಡಿವೆ. ಆದರೆ ವಿಷಯದ ಅಧ್ಯಯನದ ಮಿತಿಯಂತೆ ಆಯ್ದ ಲೇಖಕರ ಲೇಖನಗಳನ್ನು ಮಾತ್ರ ಅಧ್ಯಯನಕ್ಕೆ ಒಳಪಡಿಸಲಾಗಿದ್ದು, ವಿಷಯದ ಬಗ್ಗೆ ಆಳ ಅರಿವಿನ ಪ್ರಯತ್ನವನ್ನು ಮಾಡಲಾಗಿದೆ. ಅದರಂತೆ ಅಧ್ಯಯನದಲ್ಲಿ ತೊಡಗಿಸಿಕೊಂಡ ಪ್ರತಿಯೊಂದು ಲೇಖನಗಳನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಣಾ ವಿಧಾನದಿಂದ ವಿಷಯದ ಮಾಹಿತಿಯನ್ನು ಪಡೆಯಲಾಗಿದೆ.

೫.೧ ಪರಿಸರ ವಿಜ್ಞಾನ ಸಾಹಿತ್ಯ

ನಮ್ಮ ಸುತ್ತ ಮುತ್ತಲಿನ ಕಾಡು, ಪ್ರಾಣಿ–ಪಕ್ಷಿ, ಬೆಟ್ಟ–ಗುಡ್ಡ, ನದಿ ಸರೋವರ, ಝರಿ ಹೊಳೆ ಮೊದಲಾದವುಗಳಿಂದ ಕೂಡಿದ ದೈವ ಸೃಷ್ಟಿಯೇ ಪರಿಸರ. ಇಂತಹ ಪರಿಸರ ವ್ಯವಸ್ಥೆಯನ್ನು ಅಧ್ಯಯನ ಮಾಡುವ ಒಂದು ಭಾಗವೇ 'ಪರಿಸರ ವಿಜ್ಞಾನ'. ಭೂಮಿಯ ಮೇಲೆ ವಾಸಿಸುವ ಮನುಷ್ಯನು ತನ್ನೆಲ್ಲ ಅಗತ್ಯತೆಗಳಿಗಾಗಿ (ವಸತಿ, ಆಹಾರ, ಬಟ್ಟೆ, ನೀರು) ಪ್ರಕೃತಿಯೊಂದಿಗೆ ಅವಲಂಬಿತನಾಗಿದ್ದು, ಅದಕ್ಕಾಗಿ ಆತನು ಪ್ರಕೃತಿಯೊಂದಿಗೆ ಹೊಂದಿರುವ ಸಂಬಂಧದ ಬಗೆಗೆ ರಚಿತವಾದ ಸಾಹಿತ್ಯವನ್ನೇ 'ಪರಿಸರ ವಿಜ್ಞಾನ ಸಾಹಿತ್ಯ'ವೆನ್ನಲಾಗುವುದು. ಭೂಮಂಡಲದಲ್ಲಿ ವಾಸಿಸುವ ಎಲ್ಲಾ ಜೀವಿಗಳಿಗೆ ಬೇಕಾಗುವ ವಸತಿ, ಆಹಾರ, ಬಟ್ಟೆ, ನೀರು ಮೊದಲಾದವುಗಳ ಮೂಲ ಪರಿಸರ. ನಮ್ಮ ಸುತ್ತ ಮುತ್ತಲಿನ ಜೈವಿಕ ಮತ್ತು ಅಜೈವಿಕ ವಸ್ತುಗಳು, ಘಟನೆಗಳು ಮೊದಲಾದವುಗಳನ್ನು ಒಟ್ಟಾರೆಯಾಗಿ ಹೊಂದಿರುವ ಸಹಜವಾಗಿ ವೈಜ್ಞಾನಿಕ ಕ್ರಿಯೆಯೊಂದಿಗೆ ರೂಪಿತ ಪ್ರಾಕೃತಿಕ ವ್ಯವಸ್ಥೆಯೇ ಪರಿಸರವಾಗಿದ್ದು, ಜೀವಿಗಳು ಮತ್ತು ಪರಿಸರದ ನಡುವಿನ ಸಂಬಂಧದ ಅಧ್ಯಯನವೇ ಪರಿಸರ ವಿಜ್ಞಾನದ ಮುಖ್ಯ ಉದ್ದೇಶ.

ಹುಟ್ಟು-ಸಾವು, ಸೃಷ್ಟಿ-ನಾಶ, ಜೀವನ ಸಂಗ್ರಾಮ ಮತ್ತು ವಂಶನಾಶ ಮೊದಲಾದ ಜೀವಿಯ ವಿಕಾಸದ ಪ್ರಕ್ರಿಯೆಯಲ್ಲಿ ಅನಿವಾರ್ಯವಾಗಿ ನಡೆಯುವ ಕ್ರಿಯೆಯಾಗಿದೆ. ಬದಲಾವಣೆಗೆ ಒಳಗಾಗುವ ಕಾಲ ಮತ್ತು ಪರಿಸರಕ್ಕೆ ಪ್ರತಿಯೊಂದು ಜೀವಿಗಳು ಹೊಂದಿಕೊಳ್ಳಬೇಕಾಗುವುದು ಅತ್ಯಗತ್ಯ. ಇಲ್ಲವಾದಲ್ಲಿ ಜೀವಿಗಳ ಉಳಿವು ಸಂಕಟಕ್ಕೆ ಸಿಲುಕುತ್ತದೆ. ನಿಧಾನವಾದ ವಿಕಾಸ ಕ್ರಿಯೆಯು ಅಂದರೆ ಒಂದು ಜೀವಿ ಮತ್ತೊಂದು ಜೀವಿಯಾಗಿ ವಿಕಾಸಗೊಳ್ಳುವಾಗ ಕೆಲವು ಸಂಕ್ರಮಣ ರೂಪವನ್ನು ಹೊಂದಿ ಆಯಾ ಕಾಲ ಪರಿಸರಕ್ಕೆ ತಕ್ಕಂತೆ ಕ್ರಿಯೆಯಲ್ಲಿ ತೊಡಗುತ್ತವೆ ಎಂಬುದನ್ನು ವಿಜ್ಞಾನ ಸಾಹಿತ್ಯ ಅದರಲ್ಲೂ ಪರಿಸರ ವಿಜ್ಞಾನ ಸಾಹಿತ್ಯದಲ್ಲಿ ತಿಳಿಸಲಾಗಿದೆ. ಜಿ.ಟಿ.ನಾರಾಯಣರಾಯರ 'ಭವಿಷ್ಯ ವಿಜ್ಞಾನ'ದಲ್ಲಿ ಪರಿಸರ ವಿಜ್ಞಾನದ ಅರ್ಥ ಹಾಗೂ ಅದೊಂದು ಪ್ರತ್ಯೇಕ ಶಾಖೆಯಾದ ಬಗ್ಗೆ ವಿವರಣೆಯನ್ನು ನೀಡಿದ್ದಾರೆ. ಅದರಂತೆ "ಜೀವಿಗಳ ಮತ್ತು ಅವುಗಳ ಪರಿಸರವನ್ನು ಶಾಸ್ತ್ರೀಯವಾಗಿ ಅಭ್ಯಾಸಿಸುವ ವಿಜ್ಞಾನ ವಿಭಾಗವೇ ಪರಿಸರ ವಿಜ್ಞಾನ. ನಿಸರ್ಗದ ಸಮತೋಲನವನ್ನು ಕುರಿತ ಅಧ್ಯಯನವಿದು. ಜೀವಿಗಳ ಅಂತರಸಂಬಂಧಗಳನ್ನೂ ಅಂತರಕ್ರಿಯೆಗಳನ್ನೂ ಪರಿಸರ ವಿಜ್ಞಾನ ಕೃತಿಗಳಲ್ಲಿ ಪರಿಶೀಲಿಸಲಾಗಿದೆ. ಜೀವ ವಿಜ್ಞಾನದ ಶಾಖೆಯಾದ ಇದಕ್ಕೆ ೧೯೬೦ರಿಂದ ಈಚೆಗೆ ಸ್ವತಂತ್ರವಾದ ಮತ್ತು ಮುಖ್ಯವಾದ ಒಂದು ವಿಜ್ಞಾನ ವಿಭಾಗ ಎಂಬ ಅಂತಸ್ತು ಪ್ರಾಪ್ತವಾಗಿದೆ"[೩] ಎಂದು ತಿಳಿಸಲಾಗಿದೆ

ಅರ್ಥ: **ಟಾನ್ಸ್ ಲೇ** (Taunslay) ಎಂಬ ತತ್ವಜ್ಞಾನಿಯು ಮೊಟ್ಟಮೊದಲ ಬಾರಿಗೆ ಪರಿಸರ ಎಂಬ ಪದವನ್ನು ಅರ್ಥೈಸಿದ್ದಾನೆ. ಇವನ ಪ್ರಕಾರ ಪರಿಸರವೆಂದರೆ "ಜೀವಿಗಳಿಗಿರುವ ಪ್ರಭಾವಕಾರಿ ಪರಿಸ್ಥಿತಿಗಳ ಸಂಪೂರ್ಣ ಸಮೂಹ"[೪] ಎಂದು ವ್ಯಾಖ್ಯಾನಿಸಿದ್ದಾನೆ. ಸಂಕುಚಿತಾರ್ಥದಲ್ಲಿ ಪರಿಸರ ವಿಜ್ಞಾನವೆಂದರೆ, ಪ್ರಕೃತಿಯಲ್ಲಿನ ಜೀವಿಗಳ ಅಂತರ್ ಸಂಬಂಧಗಳನ್ನು ಕುರಿತ ಅಧ್ಯಯನವಾಗಿದೆ. ಪರಿಸರದ ಮೇಲೆ ನಿರ್ಧಾರಿತವಾದ ಉಷ್ಣಾಂಶ, ಬೆಳಕು, ಅನಿಲಗಳು, ಆದ್ರತೆ, ಗಾಳಿ, ನೀರು, ಮಣ್ಣು ಮೊದಲಾದವು ಪರಿಸರದ ಮೂಲಾಂಶಗಳಿಂದ ಕೂಡಿದ ಪರಿಸರ ವಿಜ್ಞಾನದಲ್ಲಿ ಮುಖ್ಯವಾಗಿ ಪ್ರಾಣಿ ಪರಿಸರ ವಿಜ್ಞಾನ (animal ecology) ಮತ್ತು ಸಸ್ಯ ಪರಿಸರ ವಿಜ್ಞಾನ (plant ecology) ಎಂದು ೨ ವಿಭಾಗಳಿವೆ.

ಪ್ರಾಣ ಅಥವಾ ಉಸಿರು ಎಲ್ಲಾ ಜೀವಿಗಳ ಮೂಲ ಚೈತನ್ಯವಾದರೂ, ಪರಿಸರದ ಪ್ರಭಾವಕ್ಕೊಳಗಾಗಿ ಅದು ಅಭಿವ್ಯಕ್ತವಾಗುವುದು ವಿಭಿನ್ನವಾಗಿರುತ್ತದೆ. ಆಯಾ ಪರಿಸರಕ್ಕೆ ಹೊಂದಿ, ಜೀವಿಗಳು ರೂಪುಗೊಂಡಿರುವುದರ ಬಗೆಗೆ ಪರಿಸರ ವಿಜ್ಞಾನ ಸಾಹಿತ್ಯವು ತಿಳಿಸುತ್ತದೆ. ಅಲ್ಲದೆ ಜೀವಿ ಸಮುದಾಯದ ಅಥವಾ ಒಂದು ಜೀವಿಯ ಮೇಲೆ ಪರಿಣಾಮ

ಬೀರುವ ಪ್ರಭಾವಕಾರಿ ಬಾಹ್ಯ ಇಲ್ಲವೇ ಆಂತರಿಕ ನಿಯಮಗಳ ಕ್ರೋಢೀಕೃತ ಮೊತ್ತವೇ ಪರಿಸರ ವಿಜ್ಞಾನದ ಮೂಲ. ವಿಜ್ಞಾನ ಸಾಹಿತಿಗಳ ಪ್ರಕಾರ ಪರಿಸರ ವಿಜ್ಞಾನದ ಅಧ್ಯಯನದಲ್ಲಿ ಮುಖ್ಯವಾಗಿ ನಾಲ್ಕು ಮೂಲ ಅಂಗಗಳನ್ನು ಗುರ್ತಿಸಲಾಗಿದೆ.[೫]

೧. ನೀರಿನ ಕೆಳ ಬದಿಯಲ್ಲಿ ಇಲ್ಲವೇ ಜೀವಿಗಳಲ್ಲಿರುವ ನೀರು, ಇಂಗಾಲದ ಡೈ ಆಕ್ಸೈಡ್, ರಂಜಕ, ಫಾಸ್ಪರಸ್, ಆಮ್ಲಜನಕ, ಸಾರಜನಕ ಮೊದಲಾದವುಗಳ ಸಾವಯವ ಅಥವಾ ನಿರವಯವ ಮಿಶ್ರಣವಾದ ನಿರ್ಜೀವ ವಸ್ತುಗಳು.

೨. ಉಪಯೋಜನ ಜೀವಿಗಳು

೩. ಬಳಕೆದಾರ ಜೀವಿಗಳು

೪. ವಿಘಟಕ ಜೀವಿಗಳು

ಈ ರೀತಿಯಾಗಿ ಜೀವಿಗಳು ಸಂಬಂಧ ಹೊಂದಿರುವ ಮತ್ತು ಜೀವಿಗಳ ಮೇಲೆ ಪ್ರಭಾವ ಬೀರುವ ಪರಿಸರ ವಿಷಯಗಳ ಕುರಿತಂತೆ ಬಹಳಷ್ಟು ವಿಚಾರಗಳಿಂದ ಕೂಡಿದ ಲೇಖನಗಳನ್ನು ವಿಷಯ ಜ್ಞಾನಿಗಳು ತಮ್ಮದೇ ಆದ ಅಭಿವ್ಯಕ್ತಿಯೊಂದಿಗೆ ರಚಿಸಿರುವುದನ್ನು ಕಂಡುಕೊಳ್ಳಲಾಯಿತು. ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದಂತೆ ವಸ್ತು ವಿಷಯದಲ್ಲಿ ಪ್ರತ್ಯೇಕತೆಯನ್ನು ಕಾಯ್ದುಕೊಳ್ಳುವ ಮೂಲಕ ಜನಸಾಮಾನ್ಯನೆಡೆಗೆ ಪರಿಸರದ ಬಗ್ಗೆ ವೈಜ್ಞಾನಿಕ ಮಾಹಿತಿಯನ್ನು ನೀಡುತ್ತಿರುವುದು.

ಪರಿಸರದ ವಿಷಯಗಳಾದ ಸೌರಶಕ್ತಿ, ನೀರು, ಮಿಂಚು, ಗುಡುಗು, ಭೂಮಿ, ಭೂಕಂಪನಗಳು, ಇಂಧನ ಕೋಶಗಳು, ಹಸಿರು ಇಂಧನ, ಬೆಟ್ಟ ಗುಡ್ಡಗಳು, ಜಲಚರಗಳು, ಹಿಮ, ಕಾಡು, ಚಂಡಮಾರುತ, ಪ್ರಾಣಿ ಪ್ರಪಂಚ, ಸಸ್ಯ ಪ್ರಪಂಚ, ಹಕ್ಕಿಗಳು ಮೊದಲಾದವುಗಳ ಬಗ್ಗೆ ಜ್ಞಾನದಾಹಿಗಳಿಗೆ ವಿಷಯಾಸಕ್ತರಿಗೆ ಅನುಕೂಲವಾಗುವ ಜನಪ್ರಿಯ ಸರಳ ಸುಲಭ ರಚನಾ ಶೈಲಿಯಲ್ಲಿ ಬರೆದು ವಿಷಯದ ಬಗೆಗೆ ವೈಜ್ಞಾನಿಕ ಮಾಹಿತಿಯನ್ನು ನೀಡಿದ್ದಾರೆ. ಹೀಗಾಗಿ ಪರಿಸರದ ಬಹು ಅಗತ್ಯ ಹಾಗೂ ಅನಿವಾರ್ಯವಾದ ಮಾಹಿತಿಯು ಜನಸಾಮಾನ್ಯರಿಗೆ ತಿಳಿಯುವಂತಾಯಿತು. ಅಲ್ಲದೇ ಬರಹಗಾರನ ಅಭಿವ್ಯಕ್ತಿಯ ಸ್ವರೂಪವು ಅವನ ಬರವಣಿಗೆಯ ಶೈಲಿಯೆಂಬಂತೆ ಪರಿಸರ ವಿಜ್ಞಾನದ ವಿಚಾರವನ್ನು ಜನಸಾಮಾನ್ಯನೆಡೆಗೆ ತಲುಪಿಸುವಲ್ಲಿ ಪರಿಸರ ವಿಜ್ಞಾನ ಲೇಖಕರ ಕಾರ್ಯವು ಮೌಲ್ಯಯುತವಾದುದು.

ಪರಿಸರ ವಿಜ್ಞಾನದಲ್ಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ಕೃತಿಗಳಲ್ಲಿನ ಲೇಖನಗಳನ್ನು ಅಧ್ಯಯನಕ್ಕೆ ತೊಡಗಿಸಲಾಗಿದ್ದು, ಅವುಗಳಲ್ಲಿ ಪ್ರಮುಖವಾಗಿ ಪರಿಸರದ ಅಂಶಗಳಾದ ಪ್ರಕೃತಿ, ನೀರು, ಜೀವ ವೈವಿಧ್ಯ, ಸಸ್ಯ-ಪ್ರಾಣಿ-ಪಕ್ಷಿ ಸಂಕುಲ, ಭೂಕಂಪ, ಕಾಡುಗಳು, ಘಟ್ಟಗಳು, ಹಸಿರು ಇಂಧನ ಮೊದಲಾದವುಗಳನ್ನು ಪರಿಸರ ವಿಜ್ಞಾನದ

ವಸ್ತು ವೈವಿಧ್ಯತೆಯಾಗಿ ಕಂಡುಕೊಳ್ಳಲಾಯಿತು. ಇದರಲ್ಲಿ ಕೆಲವು ಲೇಖಕರ ಸೃಜನಾತ್ಮಕ ಮೂಲ ಕೃತಿಗಳಾದರೆ ಮತ್ತೆ ಕೆಲವು ಸಂಗ್ರಹಿತ ವಿಷಯದಿಂದ ಕೂಡಿದ ಲೇಖನಗಳ ಸಂಪಾದಿತ ಸೃಜನೇತರ ಕೃತಿಯಾಗಿವೆ. ಈ ಎಲ್ಲಾ ಕೃತಿಗಳ ಅವಲೋಕನದಿಂದ ಹಾಗೂ ವಿಶ್ಲೇಷಣಾತ್ಮಕ ವಿವರಣೆಯಿಂದ ಕೂಡಿದ ಅಧ್ಯಯನದಿಂದ ಪರಿಸರ ವಿಜ್ಞಾನದಲ್ಲಿನ ವಸ್ತು ವೈವಿಧ್ಯತೆಯನ್ನು ಗುರುತಿಸಲಾಯಿತು.

ಅದರಂತೆ 'ಹಸಿರು ಹೊನ್ನು', 'ಭವಿಷ್ಯ ವಿಜ್ಞಾನ', 'ಕರ್ವಾಲೋ', 'ನಮ್ಮ ಜಲಸಂಪನ್ಮೂಲ', 'ನೀರಿಗೆ ವಿಷ ಗಾಳಿಗೆ ವಿಷ', 'ವಿಜ್ಞಾನ ಸಾಹಿತ್ಯ ೧೯೯೭', 'ವಿಜ್ಞಾನ ಸಾಹಿತ್ಯ ೨೦೦೦', 'ವಿಜ್ಞಾನ ಸಾಹಿತ್ಯ ೨೦೧೦', 'ವಿಜ್ಞಾನ ಸಾಹಿತ್ಯ ೨೦೧೨–೧೩', 'ಜ್ಞಾನ ವಿಜ್ಞಾನ', 'ವಿಜ್ಞಾನ ಗಂಗೆಯ ಬಿಂದುಸಾರ', 'ಇರುವುದೊಂದೆ ಭೂಮಿ', 'ವಿಜ್ಞಾನ ವಿಸ್ಮಯ', 'ವಿಜ್ಞಾನ ಹೆದ್ದಾರಿಯಲ್ಲಿ ಮಹಾ ತಿರುವು' ಮೊದಲಾದ ಕೃತಿಗಳಲ್ಲಿನ ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳ ವಿಶ್ಲೇಷಣಾತ್ಮಕ ಹಾಗೂ ವಿಮರ್ಶಾತ್ಮಕ ಅಧ್ಯಯನವನ್ನು ಕೈಗೊಂಡಿದ್ದು ಅದರ ವಿವರಣೆಯನ್ನು ಇಲ್ಲಿ ಚರ್ಚಿಸಲಾಗುವುದು.

ಪರಿಸರ ವಿಜ್ಞಾನದ ಪ್ರಮುಖ ವಸ್ತು ವಿಷಯವಾದ ಸಸ್ಯಶಾಸ್ತ್ರಕ್ಕೆ ಸಂಬಂಧಿಸಿದ ಹಾಗೂ ಇತಿಹಾಸ, ಪುರಾಣ, ಕನ್ನಡ–ತಮಿಳು ಸಾಹಿತ್ಯದಿಂದ ಕೂಡಿದ ಹಾಸ್ಯ ಅಭಿವ್ಯಕ್ತಿ ಸ್ವರೂಪದಲ್ಲಿ ಹೊರಬಂದ ವಿಜ್ಞಾನ ಕೃತಿಯೇ ಬಿ.ಜಿ.ಎಲ್ ಸ್ವಾಮಿರವರ 'ಹಸುರು ಹೊನ್ನು'. ದಕ್ಷಿಣ ಭಾರತದ ಊಟಿ, ಆಗೊಂಬೆ, ಓರುಕುಂಬನ್, ತೆಕ್ಕಡಿ ಕಾಡುಗಳಿಗೆ ಸಸ್ಯಶಾಸ್ತ್ರಾಭ್ಯಾಸಕ್ಕಾಗಿ ಶೈಕ್ಷಣಿಕ ಪ್ರವಾಸಕ್ಕೆ ವಿದ್ಯಾರ್ಥಿಗಳೊಂದಿಗೆ ಹೋದಾಗ ಆದ ಅನುಭವಗಳನ್ನು ವಿವರಿಸಿದ್ದಾರೆ. ಹಾಗೂ ನಿತ್ಯಜೀವನದಲ್ಲಿ ಸಾಮಾನ್ಯವಾಗಿ ಎಲ್ಲರೂ ನೋಡಿರುವಂತಹ ಚಿರಪರಿಚಿತ ಗಿಡ ಮರಗಳ ಪರಿಚಯವನ್ನು ಸಾಮಾನ್ಯ ಭಾಷೆಯೊಂದಿಗೆ ವಿಶ್ಲೇಷಿಸಿದ್ದಾರೆ.

"ಪರಿಸರದ (ನಿಸರ್ಗದ ಅನ್ನಿ ಬೇಕಾದರೆ) ಸುಧೀರ್ಘ ಪ್ರಯೋಗದ ಫಲ ಜೀವಿ. ಇದರ ಉಳಿವಿಗೆ ಬಾಳ್ವೆಗೆ ಪರಿಸರ ಅತ್ಯಗತ್ಯ. ಆದ್ದರಿಂದ ಪರಿಸರವಿಲ್ಲದೇ ಜೀವಿ ಇಲ್ಲ. ಆದರೆ ಜೀವಿ ಇಲ್ಲದಿದ್ದರೂ ಪರಿಸರ ಉಳಿದೀತು(ಇದನ್ನು ಆಗ ಪರಿಸರವೆಂದು ಕರೆಯುವುದಿಲ್ಲ ಮಾತ್ರ)....ಜೀವಿಯನ್ನು ಸೃಷ್ಟಿಸಿದ್ದು ಪರಿಸರ ನಿಜ. ಆದರೆ ಮುಂದೆ ಜೀವಿಯೂ ಪರಿಸರವನ್ನು ಸೃಷ್ಟಿಸದೆ(ಅಥವಾ ಪ್ರಭಾವಿಸದೆ)ಇಲ್ಲ. ಹವಳದ ದಿಬ್ಬಗಳು, ನಿಬಿಡ ಕಾನನಗಳು, ವಿಶಾಲ ಹುಲ್ಲುಗಾವಲುಗಳು, ಮಾನವಕೃತ ಭೂಕೃಷಿ ಇವೆಲ್ಲವೂ ಪರಿಸರದ ಮೇಲೆ ಜೀವಿ ಬೀರಿರುವ ಪ್ರಭಾವಕ್ಕೆ ನಿದರ್ಶನಗಳು. ಈ ಅಂತರಕ್ರಿಯೆಗಳು ಲಕ್ಷಾಂತರ ವರ್ಷಗಳಿಂದ ಎಡೆಬಿಡದೆ ಮಂದಗತಿಯಲ್ಲಿ ನಡೆದುಕೊಂಡು ಬಂದಿರುವುದರಿಂದ

ನಿಸರ್ಗದ ಸಮತೋಲ ಎಂದೂ ವಿಶೇಷವಾಗಿ ಕದಲಲಿಲ್ಲ”[೬] ಎಂದು ಜಿ.ಟಿ ನಾರಾಯಣ ರಾವ್ ತಮ್ಮ 'ಭವಿಷ್ಯ ವಿಜ್ಞಾನ' ಕೃತಿಯಲ್ಲಿನ 'ಮುನಿದು ಪೊಡವಿಯ ನುಂಗುವಡೆ' ಎಂಬ ಭಾಗದಲ್ಲಿ ಸೊಗಸಾಗಿ ಅಭಿವ್ಯಕ್ತಿಸಿರುವ ಶೈಲಿಯು ಎಂತಹವರಿಗೂ ಅರ್ಥವಾಗುವಂತೆ ಮೂಡಿಬಂದಿದೆ.

ಸುಭಾಷ್ ಎನ್ ನೇಳಗರವರ ಸಂಪಾದಕತ್ವದಲ್ಲಿ ಮುದ್ರಿತಗೊಂಡ 'ವಿಜ್ಞಾನ ಸಾಹಿತ್ಯ ೧೯೯೭'ರಲ್ಲಿ ಪರಿಸರ ವಿಜ್ಞಾನದ ವಸ್ತು ವೈವಿಧ್ಯತೆಗೆ ಸಂಬಂಧಿಸಿದ ಸುಮಾರು ೭ ಲೇಖನಗಳಿದ್ದು, ಪ್ರಾಣಿ, ಪಕ್ಷಿ, ನೆಲ, ಜಲ, ಅರಣ್ಯ ಮೊದಲಾದ ವಸ್ತು ವೈವಿದ್ಯತೆಯಿಂದ ಕೂಡಿರುವುದು. ಈ ಕೃತಿಯಲ್ಲಿನ ಪ್ರತಿಯೊಂದು ಲೇಖನವು ಆಕರ್ಷಕ ಸರಳ ಸುಲಭ ಶೈಲಿಯಲ್ಲಿದ್ದು, ಪ್ರತಿಯೊಬ್ಬ ವಿಜ್ಞಾನ ಲೇಖಕನ ಕಾರ್ಯವು ಪರಿಸರ ಮಾಹಿತಿಯನ್ನು ತಿಳಿಸುವಲ್ಲಿ ಕಾರ್ಯಪ್ರವೃತ್ತವಾಗಿರುವುದನ್ನು ಸೂಚಿಸುತ್ತದೆ. ಅಲ್ಲದೆ ಈ ಕ್ಷೇತ್ರದಲ್ಲಿ ರಚನೆಯನ್ನು ಮಾಡಿರುವ ಪ್ರತಿಯೊಬ್ಬ ಲೇಖಕರು ತಿಳಿಯಾದ ಭಾಷೆಯೊಂದಿಗೆ ಹಾಗೂ ಅಭಿವ್ಯಕ್ತಿಯ ಶೈಲಿಯೊಂದಿಗೆ ಪರಿಸರ ರಕ್ಷಣೆಯನ್ನು ಹಾಗೂ ಅಮೂಲ್ಯ ಪರಿಸರ ಸಂಪತ್ತನ್ನು ಪರಿಚಯಿಸಿ ಮುಂದಿನ ಜನಾಂಗದವರಿಗೂ ಅದು ದೊರೆಯುವಂತೆ ಮಾಡುವ ಕಾಳಜಿಯನ್ನು ವ್ಯಕ್ತಪಡಿಸಿರುವುದು ವಿಶೇಷವಾಗಿದೆ.

ಪೂರ್ಣಚಂದ್ರ ತೇಜಸ್ವಿ ಹಾಗೂ ಬೆಳವಾಡಿರವರಿಂದ ರಚಿತವಾದ 'ಕಾಡಿನ ನಗಾರಿ ಜೀರುಂಡೆ' ಲೇಖನವು ಪ್ರಕೃತಿಯ ವಿಸ್ಮಯ ಜೀವ ಜಗತ್ತಿನಲ್ಲಿನ ಹುಟ್ಟು ಸಾವುಗಳೊಂದಿಗೆ ನಡೆಯುವ ಜೀವನ ಚಕ್ರದಲ್ಲಿ ಇತರ ಜೀವಿಗಳಂತೆ ಕ್ರಿಮಿ ಕೀಟಗಳ ಪಾತ್ರವು ಮಹತ್ವದ್ದಾಗಿದೆ ಎಂದು ಹೇಳುತ್ತದೆ. ಕೀಟ ಜಾತಿಗೆ ಸೇರಿದ ಜೀರುಂಡೆಯ ಹುಟ್ಟು, ಬೆಳವಣಿಗೆ, ಕಾರ್ಯ, ಆಹಾರ ಚಕ್ರ, ಜನನ ಚಕ್ರ, ಜಾತಿ, ಸಂತಾನೋತ್ಪತ್ತಿ, ಹೆಣ್ಣು ಗಂಡು ಜೀರುಂಡೆಯ ಕಾರ್ಯವೈಖರಿ ಮೊದಲಾದವುಗಳ ವಿವರಣೆಯಿಂದ ಕೂಡಿದ್ದು, ಸಾಮಾನ್ಯವಾದ ಪ್ರಕೃತಿಯ ಒಂದು ಕೀಟದ ಹುಟ್ಟು ಬದುಕಿನ ವೈಖರಿಯ ಚಿತ್ರಣವು ಪ್ರಭಾವಿತವಾಗಿದೆ.

ಪ್ರಕೃತಿ ಸ್ನೇಹಿ ಎಂದು ಕರೆಯುವ ಹಾಗೂ ನಿಸರ್ಗಕ್ಕೆ ಬಹುವಿಧವಾಗಿ ಹೊಂದಿಕೊಳ್ಳುವ ಮತ್ತು ರೈತಸ್ನೇಹಿಯಾದ ಪಕ್ಷಿ ಗುಬ್ಬಚ್ಚಿಯ ಕಣ್ಮರೆಯನ್ನು 'ಗುಬ್ಬಿಗಳನ್ನು ನೀವು ಕಂಡಿರಾ? ಕಂಡಿರಾ?' ಎಂಬ ಲೇಖನದಲ್ಲಿ ಎಚ್.ಕೃಷ್ಣಮೂರ್ತಿರವರು ವಿಶ್ಲೇಷಿಸುವುದರೊಂದಿಗೆ, ಅವುಗಳ ಕಾರ್ಯವೈಖರಿ ಆಹಾರಾವಲಂಬನೆ ಮತ್ತು ಜೀವಿಸುವ ಸ್ಥಳವನ್ನು ಪರಿಚಯಿಸಿರುವುದನ್ನು ಕಾಣಬಹುದು. ಗುಬ್ಬಿಗಳು ಇಂದು ಕಣ್ಮರೆಯಾಗುತ್ತಿವೆ ಎಂದು ಲೇಖಕರು ಹೇಳುತ್ತಾ ಕಾರಣಗಳ ಪರಿಣಾಮಗಳ ತಿಳುವಿದ್ದರೂ ಹೇಳದೆ ಓದುಗರಿಗೆ ಕಂಡುಕೊಳ್ಳಲು ಹೇಳುವ ಶೈಲಿಯು ಓದುಗರಲ್ಲಿ ಆತಂಕ ವಿಸ್ಮಯವನ್ನುಂಟು

ಮಾಡುವುದರೊಂದಿಗೆ ಜಾಗೃತಿಯನ್ನು ಮೂಡಿಸುವಲ್ಲಿ ಯಶಸ್ವಿಯಾಗಿರುವುದನ್ನು ಗಮನಿಸಬಹುದು. ಡಿ.ಡಿ.ಟಿ, ಬಿ.ಹೆಚ್.ಸಿ ಎಂಬ ರಾಸಾಯನಿಕಗಳ ಪರಿಣಾಮಗಳನ್ನೂ ಪ್ರಸ್ತಾಪಿಸುವ ಮೂಲಕ ಆರೋಗ್ಯದ ಕಾಳಜಿಯು ಲೇಖನದಲ್ಲಿ ವ್ಯಕ್ತವಾಗಿದೆ.

ನೀಲತ್ತಹಳ್ಳಿ ಕಸ್ತೂರಿರವರಿಂದ ಅನುವಾದಿತವಾದ 'ಪ್ರಕೃತಿಯ ಮೇಲೆ ಸಮರ ನಮ್ಮ ಉಳಿವಿಗೆ ದಾರಿ ಯಾವುದು?' ಎಂಬ ಲೇಖನದಲ್ಲಿ ಸಕಲಜೀವಿಗಳ ಅಸ್ತಿತ್ವಕ್ಕೆ ಮೂಲವಾದ ಪ್ರಕೃತಿಯು ಇಂದು ಮನುಷ್ಯನ ದುರಾಸೆಯ ಪ್ರವೃತ್ತಿಗೊಳಗಾಗಿ ತನ್ನ ಅಸ್ಥಿತ್ವವನ್ನೇ ಕಳೆದುಕೊಳ್ಳುವ ಸ್ಥಿತಿಗೆ ಬಂದು ತಲುಪಿರುವ ದುಸ್ಥಿತಿಯನ್ನು ತಿಳಿಸಲಾಗಿದೆ. ಮಾನವನ ಅಧಿಕಾರಶಾಹಿತ್ವ ನೀತಿಯಿಂದಾಗಿ ನಡೆದ ಯುದ್ಧಗಳು ವಿನಾಶಕಾರಿಯಾದುದು ಎಂಬುದಕ್ಕೆ ೨ನೇ ಮಹಾಯುದ್ಧದ ಸಂದರ್ಭದಲ್ಲಿ ಹಿರೋಷಿಮ ನಾಗಸಾಕಿಯಲ್ಲಿ ನಡೆದ ಅಣುಬಾಂಬುಗಳ ದಾಳಿಗಳೇ ಪ್ರತ್ಯಕ್ಷ ನಿದರ್ಶನಗಳಾಗಿರುವುದು ಗೋಚರವಾಗುತ್ತದೆ.

ರಸಗೊಬ್ಬರಗಳ ಬಳಕೆಯಿಂದ ಸಾರ ಕಳೆದುಕೊಳ್ಳುತ್ತಿರುವ ಭೂಮಿ, ಹೆಚ್ಚುತ್ತಿರುವ ನೀರಿನ ಬಳಕೆಯಿಂದ ಬರಿದಾಗಿ ಬತ್ತುತ್ತಿರುವ ನೀರಿನ ಒರತೆಗಳು, ದುರಾಸೆಯ ಕೈಗಾರಿಕೆಗಳಿಂದ ಭೂಮಿಯು ತನ್ನ ಹಸಿರನ್ನು ಕಳೆದುಕೊಂಡು ಕಂದಾಗಿ ನಿಸ್ಸಾರವಾಗುತ್ತಿರುವುದು, ನದಿಗಳನ್ನು ನಾಶ ಮಾಡಿ ಕೃತಕ ಅಣೆಕಟ್ಟು ನಿರ್ಮಿಸುತ್ತಿರುವುದು, ನೆಲವನ್ನು ಕೊರೆದು ಗಾಸಿಗೊಳಿಸುತ್ತಿರುವ ಗಣಿಗಾರಿಕೆ, ಜೈವಿಕ ವೈವಿಧ್ಯತೆಯನ್ನು ಅರಣ್ಯನಾಶದ ಮೂಲಕ ಹಾಳು ಮಾಡಿರುವುದರಿಂದ ಸೊರಗುತ್ತಿರುವ ನದಿಗಳು, ಕೊಚ್ಚಿ ಹೋಗುತ್ತಿರುವ ಮಣ್ಣು, ಸಹಜ ಮೀನುಗಾರಿಕೆಯ ಸ್ಥಾನದಲ್ಲಿ ಹಾಗೂ ಕೃಷಿಯ ಸಹಜ ಬೇಸಾಯದಲ್ಲಿ ಬರುತ್ತಿರುವ ಕೃತಕ ವಿಧಾನ ಮತ್ತು ಮಾರಾಟದ ವಸ್ತುವಾಗುತ್ತಿರುವ ಮಾನವನ ದೇಹದ ಅಂಗಗಳು ಮೊದಲಾದವುಗಳ ವಿವರಣೆಯಲ್ಲಿ ಮೂಲ ಕೃತಿಕಾರರಾದ ಸುಂದರ್‌ಲಾಲ್ ಬಹುಗುಣರ ಚಿಂತನೆಗಳನ್ನು ಅನುಸರಿಸಿ ನೀಲತ್ತಹಳ್ಳಿ ಕಸ್ತೂರಿರವರು ಅತ್ಯಂತ ಸವಿಸ್ತಾರವಾಗಿ ತಿಳಿಸಿದ್ದಾರೆ.

ಪರಿಸರವನ್ನು ಸಮತೋಲನದಲ್ಲಿಡಲು ಹಾಗೂ ತಮ್ಮ ಪೀಳಿಗೆಯನ್ನು ಮುಂದುವರಿಸಲು ಪ್ರಾಣಿಗಳು, ಪಕ್ಷಿಗಳು ತಮ್ಮದೇ ಜಾತಿಯ ಜೀವಿಗಳನ್ನು ಭಕ್ಷಿಸಿ ಜೀವಿಸುವ ವಿಚಿತ್ರ ರೂಡಿಯ ಪರಿಚಯವನ್ನು ಬೋನ್ಸೈ ಶ್ರೀನಿವಾಸ್‌ರವರು 'ಪ್ರಾಣಿಗಳಲ್ಲಿ ಸಜಾತಿ ಭಕ್ಷಣೆ' ಲೇಖನದಲ್ಲಿ ಹೇಳಿದರೆ, ಶಂಕರ ಅಜ್ಜಂಪುರ ಲೇಖಕರು, ನಮ್ಮ ಸಮಾಜದಲ್ಲಿ ಕ್ರೂರಕೃತ್ಯವೆನಿಸಿಕೊಂಡ ನರಭಕ್ಷಣೆಯ ಬಗ್ಗೆ 'ನಮ್ಮ ಪೂರ್ವಜರು ನರಭಕ್ಷಕರಾಗಿದ್ದರು' ಎಂಬ ಲೇಖನದಲ್ಲಿ ತಿಳಿಸಿದ್ದಾರೆ. ಅಂದರೆ, ಇಂದಿಗೂ ಪ್ರಾಣಿ ಪಕ್ಷಿಗಳಲ್ಲಿ ಸಜಾತಿಯ ಭಕ್ಷಣೆಯು ಇರುವುದು ಆಹಾರದ ಕೊರತೆ, ಶಾರೀರಿಕ ದುರ್ಬಲತೆ, ಸಂತಾನೋತ್ಪತ್ತಿ

ಶಕ್ತಿ ವೃದ್ಧಿ ಮೊದಲಾದ ಕಾರಣವಾದರೆ, ನರಭಕ್ಷಣೆ ಒಂದು ಕಾಲದಲ್ಲಿ ಅನಿವಾರ್ಯವಾಗಿದ್ದು, ಧಾರ್ಮಿಕ ವಿಧಿವಿಧಾನದ ಆಚರಣೆ, ಹಸಿವು, ದ್ವೇಷ ಇಲ್ಲವೇ ಶತ್ರುಗಳನ್ನು ಭಯಪಡಿಸಲು ಮಾನವರಲ್ಲಿ ನರಭಕ್ಷತೆಯನ್ನು ಕಾಣಬಹುದು ಎಂಬುದರ ಬಗ್ಗೆ ಈ ೨ ಲೇಖನಗಳು ಮಾಹಿತಿಯಿಂದ ಕೂಡಿದ್ದು, ವಿಶ್ಲೇಷಣಾತ್ಮಕವಾಗಿ ಮೂಡಿಬಂದಿದೆ.

ಅಂತೆಯೇ ವಿಜ್ಞಾನ ಸಾಹಿತ್ಯ ೧೯೯೦ರಲ್ಲಿ ಪರಿಸರ ಸ್ನೇಹಿ ಜೇಡನ ಸ್ವರೂಪ ಕಾರ್ಯ ವೈಖರಿಯನ್ನು 'ಚಿತ್ತಾರದ ಕವಿತೆ ಬರೆವ ಜೇಡ' ಎಂಬ ಡಾ.ಪಿ.ಎಸ್.ರೈರವರ ಲೇಖನ ತಿಳಿಸಿದರೆ, ಪ್ರಾಣಿ ಪಕ್ಷಿ, ಜೇನು, ಜೇಡ, ಇರುವೆಗಳ ಭಾಷೆ ಹಾಗೂ ವ್ಯವಹಾರವನ್ನು ಎಸ್.ವಿಜಯಕುಮಾರಿರವರು ತಮ್ಮ ಲೇಖನ 'ಪ್ರಾಣಿ, ಪಕ್ಷಿ, ಜೇನು, ಜೇಡ, ಇರುವೆಗಳಲ್ಲಿ ವ್ಯವಹಾರ' ಎಂಬಲ್ಲಿ ಚಿತ್ರಿಸಿದ್ದಾರೆ. ಜಿರಲೆಗಳ ಪ್ರಬೇಧ, ಜಾತಿಯನ್ನು ತಿಳಿಸುತ್ತಾ ಅವುಗಳಿಂದ ಸಾಂಕ್ರಾಮಿಕ ರೋಗಗಳು ಹೇಗೆ ಹರಡುತ್ತವೆ ಹಾಗೂ ಜಿರಲೆಗಳ ಸಂತತಿಯನ್ನು ಹೇಗೆ ಕಡಿಮೆಗೊಳಿಸಬೇಕು ಎಂಬುದರ ಬಗ್ಗೆ ಜಾಗೃತಿಯನ್ನು ಮೂಡಿಸುವ ಲೇಖನ ಜಿ.ಅನಂತನಾರಾಯಣ ಸ್ವಾಮಿರವರ 'ಜಿರಲೆ ಜಿರಲೆ ಏನಿದು ನಿನ್ನಯ ತರಲೆ?' ಎಂಬುದಾದರೆ, ಪ್ರಾಣಾಂತಿಕ ಹಾಗೂ ಔಷಧೀಯ ಗುಣದಿಂದ ಕೂಡಿರುವ ಹಾವಿನ ವಿಷವು ವೈದ್ಯಕೀಯ ರಂಗಕ್ಕೆ ಹೇಗೆ ಮಹತ್ತರ ಕೊಡುಗೆಯಾದ ವೈಜ್ಞಾನಿಕ ಮಾಹಿತಿಯನ್ನು 'ವರವಾಗುತ್ತಿದೆ ಹಾವಿನ ವಿಷ' ಲೇಖನದಲ್ಲಿ ಪ.ರಾಮಕೃಷ್ಣ ಶಾಸ್ತ್ರಿರವರು ವೈಚಾರಿಕ ಹಾಗೂ ವೈಜ್ಞಾನಿಕವಾಗಿ ಹೇಳಿರುವುದನ್ನು ಕಾಣಬಹುದು.

ಹಲವಾರು ವಿಸ್ಮಯ ಕುತೂಹಲದಿಂದ ಕೂಡಿದ ಪ್ರಕೃತಿಯ ಸೌಂದರ್ಯವನ್ನು ಹೆಚ್ಚಿಸುವಲ್ಲಿ ಮಿಂಚುಹುಳುಗಳಂತೆ ಬೆಳಕು ಚಿಮ್ಮಿಸುವ ಜೀವಿಗಳು ಅಂದರೆ ಜೈವಿಕ ದೀಪ್ತಿ (ಬಯೋಲುಮಿನಿಸೆನ್ಸ್)ಗಳು ಮಹತ್ವದ ಪಾತ್ರ ವಹಿಸುತ್ತವೆ. ಆಹಾರಕ್ಕಾಗಿ ಜೀವಿಯ ಭಕ್ಷಣೆಗಾಗಿ ಜೀವಿಗಳನ್ನು ಆಕರ್ಷಿಸಲು, ಬೇರೆ ಭಕ್ಷಕ ಜೀವಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಹಾಗೂ ಮತ್ತಿತರ ಪ್ರಾಕೃತಿಕ ಕಾರ್ಯ (ಸಂಪರ್ಕ/ಸಂತಾನೋತ್ಪತ್ತಿ)ಕ್ಕಾಗಿ ಜೈವಿಕದೀಪ್ತಿಯನ್ನು ಉಪಯೋಗಿಸುವ ಜೀವಿಗಳು ತಮಗರಿವಿಲ್ಲದೆ ಇತರ ಜೀವಿಗಳಿಗೆ ಅದರಲ್ಲೂ ಸಮುದ್ರಯಾನ ಮಾಡುವವರಿಗೆ ಸಹಕಾರಿಯಾದುದರ ಬಗ್ಗೆ 'ಬೆಳಕು ಚೆಲ್ಲುವ ಜೀವಿಗಳು' ಎಂಬ ಲೇಖನದಲ್ಲಿ ಸುಭಾಷ್ ಎನ್ ನೇಳಗ ಬರೆದಿದ್ದಾರೆ.

ಜೈವಿಕ ವೈವಿದ್ಯತೆಯ ನೆಲೆಯಾದ ಪ್ರಕೃತಿಯಲ್ಲಿನ ಪ್ರತಿಯೊಂದು ಚರಾಚರವು ತನ್ನದೇ ಆದ ವಿಶಿಷ್ಟ ಗುಣಗಳಿಂದ, ಸ್ವರೂಪ ಲಕ್ಷಣಗಳಿಂದ ಕೂಡಿರುತ್ತವೆ. ಅದರಲ್ಲೂ ಹಕ್ಕಿ ಪ್ರಪಂಚದ ಮಾತೆ ಬೇರೆ. ಹಕ್ಕಿಗಳು ತಮ್ಮ ಗಾತ್ರ ಬಣ್ಣ, ಸ್ವರೂಪ, ಲಕ್ಷಣಗಳಿಂದ ಎಲ್ಲರನ್ನೂ ಆಕರ್ಷಿಸುವ ಮಾಂತ್ರಿಕರು. ಹಕ್ಕಿಗಳ ಹಾಡು ಕೇಳಿ ಅದಕ್ಕೆ ತಲೆದೂಗದವರೇ

ಇಲ್ಲ. ಸುಮಾರು ೪೦೦೦ ಜಾತಿಯ ಪಕ್ಷಿಗಳು ಗಾಯಕರಾಗಿದ್ದು, ಹಾಡಿದವರಲ್ಲಿ ಕೆಲವು ಹೆಣ್ಣು ಹಕ್ಕಿಗಳಾದರೆ ಮತ್ತೇ ಕೆಲವು ಗಂಡು ಹಕ್ಕಿಗಳು. ಆಹಾರದ ಶೇಖರಣೆಗೆ ಹಾಗೂ ಸಂತಾನೋತ್ಪತ್ತಿಗಾಗಿ ಮತ್ತು ಪ್ರಕೃತಿಯಲ್ಲಿನ ಬದಲಾವಣೆಗಳನ್ನು ಆಸ್ವಾದಿಸುತ್ತಾ ಆಹ್ಲಾದಕ್ಕಾಗಿ ಹಾಡುತ್ತವೆ ಎಂಬುದನ್ನು ಲೇಖಕರಾದ ಎಚ್.ಆರ್ ಕೃಷ್ಣಮೂರ್ತಿ ತಮ್ಮ ಲೇಖನ 'ಹಕ್ಕಿಗಳುಲಿಯೆ ಚಂದ'ದಲ್ಲಿ ತಿಳಿಸಿದ್ದಾರೆ.

ಅಪಾರ ಪ್ರಾಕೃತಿಕ ಸಂಪತ್ತಲ್ಲಿ ಸಸ್ಯ ಸಂಪತ್ತು ಪ್ರಮುಖವಾಗಿದ್ದು, ಸು ೪.೫ ಲಕ್ಷ ಸಸ್ಯ ಪ್ರಬೇಧಗಳನ್ನು ವಿಶ್ವದಲ್ಲಿ ಕಾಣಬಹುದು. ಅದರಲ್ಲಿ ೬೦೦೦ ಸಸ್ಯಗಳು ಔಷಧೀಯ ಸಸ್ಯಗಳಾಗಿದ್ದು, ಸು ೮೦೦ ಸಸ್ಯಗಳನ್ನು ನಮ್ಮ ದೇಶೀಯ ವೈದ್ಯ ಪದ್ಧತಿಯಲ್ಲಿ ಬಳಸುತ್ತಿರುವುದು ಹಾಗೂ ಔಷಧೀಯ ಸಸ್ಯಗಳ ಇತಿಹಾಸದ ಜೊತೆಯಲ್ಲಿ ಸ್ವದೇಶಿ ವೈದ್ಯ ಪದ್ದತಿಯ ಬೆಳವಣಿಗೆಯ ವಿವರಣೆಯೊಂದಿಗೆ ಔಷದೀಯ ಸಸ್ಯ ಶೋಧನೆ ಮತ್ತು ಸಂರಕ್ಷಣೆಯ ವಿಷಯವಾಗಿ ಉತ್ತಮ ಮಾಹಿತಿಯನ್ನು ಡಾ. ವೈ.ಎನ್.ಸೀತಾರಾಮ್ ರವರು 'ಔಷದೀಯ ಸಸ್ಯಗಳ ವೈವಿದ್ಯದ ನೆಲೆ ಬೆಲೆ' ಲೇಖನದಲ್ಲಿ ತಿಳಿಸಿದ್ದಾರೆ.

ನಮ್ಮ ದೇಶವು ಜೈವಿಕತೆಯಲ್ಲಿ ವೈವಿದ್ಯತೆಯನ್ನು ಪಡೆದಿದ್ದು ಪುರಾಣ ಕಾಲದಿಂದಲೂ ಬಹಳಷ್ಟು ಸಸ್ಯಗಳು ಔಷದೋಪಯೋಗಿ ಸಸ್ಯಗಳಾಗಿ ಜನಪ್ರಿಯತೆ ಪಡೆದವು. ನಮ್ಮಲ್ಲಿನ ಲಿಖಿತ ದಾಖಲೆಗಳ ಅಭಾವದಿಂದಾಗಿ ಹೊರ ದೇಶದವರು ನಮ್ಮಲ್ಲಿನ ಸಸ್ಯ ಸಂಪತ್ತನ್ನು ತಮ್ಮ ದೇಶಕ್ಕೆ ಕೊಂಡೊಯ್ದು ಅಲ್ಲಿ ಅವುಗಳ ಮೇಲೆ ಸ್ವಾಮ್ಯತ್ವವನ್ನು ಪಡೆಯುತ್ತಿವೆ. ಉದಾ: ಕಹಿಬೇವು ಮತ್ತು ಅರಿಶಿನದಲ್ಲಿನ ಔಷಧೀಯ ಗುಣವನ್ನು ಮೊದಲು ತಾವು ಕಂಡು ಹಿಡಿದುದಾಗಿ ಅಮೇರಿಕಾದ ಇಬ್ಬರು ವಿಜ್ಞಾನಿಗಳು ಪೇಟೆಂಟ್ ಪಡೆಯುವ ಬಗ್ಗೆ ಹೇಳುವುದರೊಂದಿಗೆ, ಜೈವಿಕ ವೈವಿದ್ಯದ ದಾಖಲೆಯೊಂದಿಗೆ, ಪರಂಪರಾಗತವಾಗಿ ಬಂದ ಔಷಧೀಯ ಸಸ್ಯಗಳ ಜ್ಞಾನದ ದಾಖಲೆಯಾಗಬೇಕು ಎಂದು ಹೇಳಲಾಗಿದೆ. ಜೈವಿಕ ಸಂಪತ್ತಿನ ವೈವಿದ್ಯತೆಯ ಅರಿವು ಹಾಗೂ ಅವುಗಳನ್ನು ರಕ್ಷಿಸುವ ಕ್ರಮ, ಅಂತರ್ ರಾಷ್ಟ್ರೀಯವಾಗಿ ಅವುಗಳ ಹಕ್ಕನ್ನು ಪಡೆಯುವುದು ಮೊದಲಾದವುಗಳ ಮೂಲಕ ನಮ್ಮ ಜೈವಿಕ ಸಂಪತ್ತನ್ನು ರಕ್ಷಿಸಿ ಬೆಳಸಬೇಕೆಂದು 'ಜೈವಿಕ ವೈವಿದ್ಯತೆಯ ನೆಲೆ ಬೆಲೆ' ಲೇಖನದಲ್ಲಿ ಡಾ.ಎಸ್.ಎ ಮದ್ಯಸ್ಥರವರು ಹೇಳಿದ್ದಾರೆ.

ಅದರಂತೆ 'ತಳಿ ಬೇಟೆಯ ವಿರುದ್ದ ಜನಜಾಗೃತಿ' ಕೃತಿಯಲ್ಲಿ ಪ್ರೊ ಮಾದವ ಗಾಡಗೀಳರು ಗ್ರಾಮೀಣ ತಜ್ಞರ ಪರಂಪರಾಗತ ಜ್ಞಾನಕ್ಕೆ ಪ್ರತಿಯಾಗಿ ಸಂಭಾವನೆ ನೀಡುವುದರೊಂದಿಗೆ ಅವರಲ್ಲಿನ ಔಷಧೀಯ ಜ್ಞಾನಕ್ಕೆ ಬೆಲೆಕೊಡುವುದು, ಸ್ಥಳಿಯ ವಿಜ್ಞಾನಿಗಳೊಂದಿಗೆ ಸೇರಿ ದೇಶದ ಸಂಪತ್ತು ನಮ್ಮಲ್ಲಿಯೇ ಉಳಿಯುವಂತೆ ಮಾಡುವುದು,

ಗಿಡಮೂಲಿಕೆಗಳ ಸಂರಕ್ಷಣೆಗೆ ಹಾಗೂ ದಾಖಲಾತಿಗೆ ಸ್ಥಳೀಯ ಪಂಚಾಯತಿಗಳು ಹಣದ ಸಹಾಯ ಮಾಡುವುದು ಮೊದಲಾದ ಜನಜಾಗೃತಿಯ ವಿಚಾರಗಳನ್ನು ವಿವರವಾಗಿ ತಿಳಿಸಿದ್ದಾರೆ.

ಎಂ.ಕೆ ರಾಮಸ್ವಾಮಿರವರ 'ಜ್ಞಾನ ವಿಜ್ಞಾನ' ಕೃತಿಯಲ್ಲಿ ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳಿರುವುದನ್ನು ಗುರುತಿಸಲಾಗಿದ್ದು, ಅವುಗಳ ವಿವರಣೆಯನ್ನು ಇಲ್ಲಿ ನೀಡಲಾಗಿದೆ. ಭೂಮಿಯ ಸೃಷ್ಟಿಯಾದಾಗಿನಿಂದ ಇಡೀ ಜೀವ ಸಂಕುಲದ ಬದುಕಿಗೆ ಅತ್ಯಾವಶ್ಯಕವಾದ ನೀರು, ಬೆಳಕು, ಗಾಳಿ ಆಹಾರ ಮೊದಲಾದವುಗಳ ಅಸ್ತಿತ್ವಕ್ಕೆಲ್ಲಾ ಕಾರಣ ಸೌರಶಕ್ತಿಯಾಗಿದ್ದು, ಗಾಳಿಯ ಚಲಿಸುವಿಕೆಗೆ, ಜೀವಾನಿಲ ಆಮ್ಲಜನಕದ ಬಿಡುಗಡೆಗೆ ನೀರಿನ ಸೃಷ್ಟಿಗೆ(ಮೋಡ ಮಳೆಯಾಗಿ ನೀರು ಭೂಮಿಗೆ ಬರಲು) ಹಾಗೂ ಬೆಳಕು ಮತ್ತು ಶಾಖದ ರೂಪ ಪಡೆಯಲು ಮೂಲ ಚೈತನ್ಯದಾಯಕ ಶಕ್ತಿಯೇ ಸೌರಶಕ್ತಿಯಾಗಿದೆ ಎಂಬುದನ್ನು 'ಸಕಲ ಜೀವಿಗಳ ಅಸ್ತಿತ್ವಕ್ಕೆ ಕಾರಣ ಸೌರಶಕ್ತಿ' ಎಂಬ ಲೇಖನದಲ್ಲಿ ತಿಳಿಸಲಾಗಿದ್ದು, ಮಾನವನ ಮತ್ತು ಇತರ ಜೀವಿಯ ದೈನಂದಿನ ಅಗತ್ಯತೆಯಲ್ಲಿ ಉಪಯೋಗಿಸುವ ನೀರು ಒಂದು ಬಗೆಯಲ್ಲಿ ಮಾತ್ರವಲ್ಲದೆ, ನೀರು ಇನ್ನಿತ ಬಗೆಯಿಂದ ಕೂಡಿದೆ ಎಂಬುದನ್ನು ಹಾಗೂ ಭೂಮಿಯ ಮೇಲಿರುವ ಹಲವಾರು ಬಗೆಯ ನೀರುಗಳ ಪರಿಚಯವನ್ನು 'ಭೂಮಿಯ ಮೇಲೆ ಎಷ್ಟು ಬಗೆಯ ನೀರುಗಳಿವೆ?' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

ನೀರು ಪೂರ್ಣ ಮಂಜುಗಡ್ಡೆಯಾಗದೆ ತಳಭಾಗದಲ್ಲಿರುವ ನೀರು ೪ಡಿಗ್ರಿ ಸೆಲ್ಸಿಯಸ್‌ನದ್ದಾಗಿದ್ದು, ಎಲ್ಲಾ ಜಲಚರ ಪ್ರಾಣಿಗಳು ಬದುಕಲು ಅನುಕೂಲವಾದ ನೀರಿನ ಅಸಾಮಾನ್ಯ ವಿಕಾಸ ಗುಣ, ಮಂಜುಗಡ್ಡೆ ನೀರಿನ ಮೇಲೆ ತೇಲುವ ಗುಣ, ೧೦೦ ಡಿಗ್ರಿ ಸೆಲ್ಸಿಯಸ್ ಮೀರದ ನೀರಿನ ಉಷ್ಣತೆಯ ಗುಣ, ನೀರು ಮೇಲಿಂದ ಕೆಳಗೆ ಮಾತ್ರ ಹರಿಯುವುದು, ಶುದ್ಧ ನೀರು ವಿದ್ಯುತ್ ಅವಾಹಕವಾಗಿರುವುದು ಮೊದಲಾದ ನೀರಿನ ವಿಶೇಷತೆಯನ್ನು ತಿಳಿಸುವುದರೊಂದಿಗೆ ದಾಹವನ್ನು ನಿವಾರಿಸುವ ಗುಣವಲ್ಲದೆ, ಇತರೆ ವಿಶೇಷ ಗುಣಗಳನ್ನು ನೀರು ಹೊಂದಿದೆ ಎಂಬುದನ್ನು 'ನೀರಿನ ವಿಶೇಷ ಗುಣಗಳು' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

ಅವೈಜ್ಞಾನಿಕ ಕಥೆಗಳಿಂದ ಕೂಡಿದ್ದ ಮಿಂಚು ಗುಡುಗಿನ ಸೃಷ್ಟಿಯನ್ನು ವಿದ್ಯುತ್ ಪ್ರವಾಹ (electric current) ಮತ್ತು ವಿದ್ಯುತ್ ಪೂರಣ (electric charge) ಗಳ ವೈಜ್ಞಾನಿಕ ವಿವರಣೆಯೊಂದಿಗೆ ಮೋಡಗಳ ಚಲನವಲನಗಳಿಂದ ಗುಡುಗು ಮಿಂಚು ಆಗುವುದನ್ನು 'ಮಿಂಚು ಗುಡುಗು ಆಗುವ ಬಗೆ' ಲೇಖನವು ಒಳಗೊಂಡಿದ್ದು, ಗಾಳಿಯ ಜೊತೆ ವೇಗವಾಗಿ ಚಲಿಸುವ ಮೋಡಗಳು ಘರ್ಷಣೆ ಹೊಂದಿ ವಿದ್ಯುದಾವೇಶದಿಂದ

ಮಿಂಚಿನ ರೂಪ ಪಡೆದರೆ, ಮಿಂಚಿನ ರೂಪದೊಂದಿಗೆ ಉರಿದು ಸೃಷ್ಟಿಯಾದ ನಿರ್ವಾತ ಪ್ರದೇಶ ಆಕ್ರಮಿಸಿಕೊಳ್ಳಲು ಮುನ್ನುಗ್ಗಿ ಗಾಳಿಯಿಂದ ಸಿಡಿಲಿನೊಂದಿಗೆ ಗುಡುಗು ಶಬ್ದವು ಬರುವುದೆಂದು ತಿಳಿಸಲಾಗಿದೆ.

ಮಾನವ ತನ್ನ ಸ್ವಾರ್ಥ ಸುಖಕ್ಕಾಗಿ ಪರಿಸರವನ್ನು ಹೇಗೆ ಸರ್ವನಾಶದ ಅಂಚಿಗೆ ತಂದೊಡ್ಡಿದ್ದಾನೆ ಎಂಬುದನ್ನೂ ಹಾಗೂ ಆರ್ಥಿಕಾಭಿವೃದ್ಧಿಗಾಗಿ ಕೈಗಾರಿಕೆಗಳ ಸ್ಥಾಪನೆ, ಕೃಷಿಯಲ್ಲಿ ಆಹಾರೋತ್ಪಾದನೆಗಾಗಿ ಬಳಸಿದ ರಾಸಾಯನಿಕ ಗೊಬ್ಬರಗಳು, ಕ್ರಿಮಿಕೀಟನಾಶಗಳು ಮತ್ತು ವಾಹನಗಳಿಂದಾಗಿ ಪರಿಸರವು ವಿವಿಧ ಮಾಲಿನ್ಯಕ್ಕೊಳಗಾಗಿ ನಾಶವಾಗುತ್ತಿದ್ದು, ಅದರಿಂದ ವಿನಾಶಕಾರಿ ಪರಿಣಾಮವನ್ನು ಎದುರಿಸುವಂತಾಗಿದೆ ಎಂದು ವಿವರಿಸುವುದ ರೊಂದಿಗೆ ನಿವಾರಣೋಪಾಯವನ್ನು 'ಪರಿಸರ' ಲೇಖನದಲ್ಲಿ ವಿಶ್ಲೇಷಿಸಲಾಗಿದೆ.

ಪ್ರಕೃತಿಯು ಹಲವಾರು ಅದ್ಭುತ ಹಾಗೂ ವಿಸ್ಮಯ ಕುತೂಹಲ ವಿಚಿತ್ರಗಳಿಂದ ಕೂಡಿದ್ದು ಅಂತಹ ವಿಚಿತ್ರ ಸರ್ವನಾಶಕ ಭಯಾನಕತೆಯಲ್ಲಿ ಒಂದಾದ ಭೂಕಂಪಗಳು ಎಂದರೇನು? ಹೇಗೆ ಆಗುತ್ತವೆ, ಕಾರಣಗಳು, ಭೂಕಂಪನದ ಲಕ್ಷಣಗಳು, ಭೂಕಂಪನದ ಅಲೆಗಳು, ಭೂಕಂಪನದ ತೀವ್ರತೆ, ಭೂಕಂಪದ ಮುನ್ಸೂಚನೆ ಮೊದಲಾದ ವಿಚಾರಗಳನ್ನು ಸುಲಭ ಸರಳ ಶೈಲಿಯಲ್ಲಿ 'ಭೂಕಂಪಗಳು' ಲೇಖನದಲ್ಲಿ ಲೇಖಕರು ತಿಳಿಸುವುದರೊಂದಿಗೆ, ಪ್ರಕೃತಿಯು ನಮ್ರತೆಯಿಂದ ಎಷ್ಟು ನೀಡಿದೆಯೋ, ಮುನಿದರೆ ಅಷ್ಟೇ ಘೋರ ಪರಿಣಾಮವನ್ನು ಎದುರಿಸಬೇಕಾಗುತ್ತದೆ ಎಂಬ ಎಚ್ಚರಿಕೆಯ ನುಡಿಯನ್ನು ಕಾಣಬಹುದು.

ನಾಗೇಶ್ ಹೆಗಡೆರವರ 'ವಿಜ್ಞಾನ ಗಂಗೆಯ ಬಿಂದುಸಾರ' ಕೃತಿಯಲ್ಲಿಯೂ ಪರಿಸರ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಿಸಿದ ಲೇಖನಗಳ ಅಧ್ಯಯನವನ್ನು ಮಾಡಲಾಯಿತು. ಅವರ ವಿವರಣೆಯು ಈ ಮುಂದಿನಂತಿದೆ. ಅದ್ಭುತ ವಿಶ್ವದಲ್ಲಿನ ಪ್ರತಿಯೊಂದು ಸೃಷ್ಟಿಯು ಸಾಮಾನ್ಯ ಮನುಷ್ಯನ ಎಣಿಕೆಗೂ ನಿಲುಕದ ಅಸಂಖ್ಯ ನಿಸ್ಸಂಖ್ಯೆಯಿಂದ ಕೂಡಿದ್ದು, ಗರಿಷ್ಠ ಸಾಂತ ಸಂಖ್ಯೆಯನ್ನು ಮೀರಿದ್ದು. ಸಾಂತ ಸಂಖ್ಯೆಗಳ (ಎಣಿಕೆಗೆ ಅಳವಡುವ ಎಲ್ಲಾ ಸಂಖ್ಯೆ) ಸಂಖ್ಯೆ ಅನಂತವಾದುದು. ಎಣಿಕೆಗೆ ಅಥವಾ ನಮ್ಮ ಅಳತೆಗೆ ನಿಲುಕದ್ದು ಎಂಬುದನ್ನು ೯೯೯೯೯೯೯೯೯೯೯೯ ಎಂದು ಇಲ್ಲವೇ ೧೦೧೧+೧೦೧೪ + ೧೦೨೦ + ೧೦೧೧ + ೧೦೪೦ + ೧೦೪೪ ಎಂದು ಅಂಕಿಗಳ ಮೂಲಕ ಸೂಚಿಸಲಾಗುವ ಪರಿಯನ್ನು ನಾಗೇಶ್ ಹೆಗಡೆರವರ ಸಂಪಾದಕತ್ವದ ವಿಜ್ಞಾನ ಗಂಗೆಯ ಬಿಂದುಸಾರದಲ್ಲಿನ 'ಸಾಂತತೆ ಅಸಂಖ್ಯತೆ ನಿಸ್ಸಂಖ್ಯತೆ' ಲೇಖನದಲ್ಲಿ ಜಿ.ಟಿ ನಾರಾಯಣರಾವ್ ಚಿತ್ರಿಸಿದ್ದಾರೆ.

ಅಂತೆಯೇ ವೈಜ್ಞಾನಿಕ ಆವಿಷ್ಕಾರಗಳಲ್ಲಿ ಕೆಲವು ಎಷ್ಟು ಹಿತಕಾರಿಯೋ ಅಷ್ಟೇ ಅಪಾಯಕಾರಿಯಾದುದು ಎಂಬುದಕ್ಕೆ ಚೆರ್ನೋಬಿಲ್‌ನ ದುರಂತವೇ ಸಾಕ್ಷಿ. ೧೯೮೬ ರ ಏಪ್ರಿಲ್ ೨೬ ರಂದು ಚೆರ್ನೋಬಿಲ್‌ನ ನಾಲ್ಕು ಘಟಕಗಳಲ್ಲಿನ ಸುರಕ್ಷತೆಯ ಹಾಗೂ ಕಾರ್ಯನಿರ್ವಹಣೆಯಲ್ಲಿನ ದೋಷದಿಂದಾಗಿ ಶಕ್ತಿಯು ನೂರು ಪಟ್ಟು ಹೆಚ್ಚಾಗಿ ತಾಪ ಮಿತಿಮೀರಿ ಅತಿಯಾದ ಹಬೆಯ ಒತ್ತಡದಿಂದ ಸ್ಫೋಟ ಉಂಟಾಯಿತು. ವಿಕಿರಣಪಟು ಧಾತುಗಳು ಹೊರವಾತಾವರಣವನ್ನು ಸೇರಿತು. ಇದರಿಂದ ಪರಿಸರದ ಮೇಲೆ ಬಹಳಷ್ಟು ದುಷ್ಪರಿಣಾಮ ಉಂಟಾಯಿತು. ಮಕ್ಕಳಲ್ಲಿ ಥೈರಾಯ್ಡ್ ಕ್ಯಾನ್ಸರ್ ಕಾಣಿಸಿಕೊಂಡು ಸೇವಿಸುವ ಆಹಾರ ಮಲೀನವಾಯಿತು ಎಂದು ಹೇಳುವುದರೊಂದಿಗೆ ಭಾರತದಲ್ಲಿನ ಬೈಜಿಕ ಘಟಕಗಳ ವಿನ್ಯಾಸ ಮತ್ತು ಕಾರ್ಯನಿರ್ವಹಣೆಯಲ್ಲಿ ಯಾವುದೇ ಭಯವಿಲ್ಲವೆಂಬ ಆಶ್ವಾಸನೆಯನ್ನು ನೀಡದಿರುವುದನ್ನು(ಅಂದರೆ ಅಪಾಯಕರವಾದ ಅಂಶಗಳನ್ನು ಮರೆಮಾಚಲಾಗಿದೆ ಎಂಬರ್ಥ) ಅಭಿವ್ಯಕ್ತಿಸಿರುವುದು ಎಂ.ಎಸ್.ಎಸ್.ಮೂರ್ತಿ ರವರ 'ಚೆರ್ನೋಬಿಲ್ ದುರಂತ : ಒಂದು ಹಿನ್ನೋಟ' ಲೇಖನದಲ್ಲಿ ಕಾಣಬಹುದು.

ನಮ್ಮ ಭೂರಮೆಯ ಒಡಲು ಸದಾ ಒಂದಲ್ಲಾ ಒಂದು ತಲ್ಲಣಗಳ ಆಗರ. ಜೊತೆಗೆ ಕಂಪನಗಳ ಕಣಜವಾಗಿದ್ದು, ಕಂಪನಗಳ ತೀವ್ರತೆಯು ಕೆಲವು ವೇಳೆ ತಣ್ಣಗಿದ್ದು ಮತ್ತೇ ಕೆಲವು ವೇಳೆ ಮಿತಿಮೀರಿ ಭೂಕಂಪನ ಸಂಭವಿಸಿ, ಅಪಾರ ಪ್ರಾಣ ಹಾಗೂ ಆಸ್ತಿ ಹಾನಿ ಉಂಟು ಮಾಡುತ್ತದೆ. ಇಂತಹ ತಲ್ಲಣ, ಕಂಪನಗಳನ್ನು ಅಳೆಯಲು, ಎಚ್ಚರಿಕೆಯ ಸಂದೇಶವನ್ನು ನೀಡಲು ಸ್ಟೆಥೊಸ್ಕೋಪ್ ಎಂಬ ಸಾದನವಿದೆ. ಈ ಸಾದನವು ಗೌರಿಬಿದನೂರಿನ ಬಳಿಯಿದ್ದು ಪ್ರತೀಕ್ಷಣವು ಭೂಮಿಯಲ್ಲಿ ಉಂಟಾಗುವ ಎಂಥದೇ ಕಂಪನ ಆದರೂ ಕರಾರುವಕ್ಕಾಗಿ ದಾಖಲಿಸುತ್ತದೆ ಎಂದು ಹೇಳುವುದರೊಂದಿಗೆ ಅದರ ರಚನೆ ಸ್ವರೂಪ ಕಾರ್ಯ ವೈಖರಿ ಹಾಗೂ ಅದರ ಇತಿಹಾಸವನ್ನು 'ಭೂರಮೆಗೆ ಸ್ಟೆಥೊಸ್ಕೋಪ್' ಎಂಬ ಲೇಖನದಲ್ಲಿ ಎಚ್.ಎ. ಪುರುಷೋತ್ತಮರಾವ್‌ರವರು ವಿವರಿಸಿದ್ದಾರೆ.

ಹಾಗೆಯೇ ನೈಸರ್ಗಿಕವಾಗಿ ಬೆಳೆದ ಅರಣ್ಯ ಸಂಪತ್ತಿನಲ್ಲಿ ವಿವಿಧ ಜಾತಿಯ ಕ್ರಿಮಿ ಕೀಟಗಳಿಗೆ ಆಶ್ರಯ ಹಾಗೂ ಆಹಾರವನ್ನೇ ಅವಲಂಬಿತ ಜೀವಿಗಳಿಗೆ ಪರಾವಲಂಬಿತ ಆಹಾರ ಪದ್ದತಿಯಂತೆ ಆಹಾರವು ಯಥೇಚ್ಛವಾಗಿ ಇಲ್ಲಿ ದೊರೆಯುತ್ತಿತ್ತು. ಆದರೆ ವಿನಾಶಕಾಲೆ ವಿಪರೀತ ಬುದ್ದಿ ಎಂಬಂತೆ ಅಧಿಕಾರ ಹಾಗೂ ಹಣದ ವ್ಯಾಮೋಹದಿಂದಾಗಿ ಬಹು ಉಪಯೋಗಕಾರಿಯಾದ ನೈಸರ್ಗಿಕ ಅರಣ್ಯವನ್ನು ನಾಶಮಾಡಿ ಏಕ ಜಾತಿಯ ಮರಗಳನ್ನು ಬೆಳೆಸುವ ಬಂಡವಾಳಶಾಹಿಗಳ, ಅರಣ್ಯಾಧಿಕಾರಿಗಳ ಕಾರ್ಯದಿಂದಾಗಿ ಜೀವಜಾಲದ ನೈಸರ್ಗಿಕ ಕೊಂಡಿಯೇ ಕಳಚಿಬಿತ್ತು. ಪ್ರಕೃತಿಯ ಸೌಂದರ್ಯಕ್ಕೆ ಹೆಸರಾದ

ಎಲೆ ಉದುರಿಸುವ ಅರೆ ನಿತ್ಯಹರಿದ್ವರ್ಣ ಕಾಡುಗಳಲ್ಲಿ, ಅಮರಕಂಕದ ಸಾಲ್‌ಕಾಡು ಕಾಸಸ್ ಕಾಡಾಂಬೆ, ಕಾಂಡ ಕೊರಕ ದುಂಬಿ ಎಂಬ ಕೀಟಗಳ ಬಾಧೆಯಿಂದ ಬಹಳಷ್ಟು ಮರಗಳು ಹಾನಿಗೀಡಾದವು ಎಂಬುದನ್ನು ಹೇಳುವುದರೊಂದಿಗೆ ಅರಣ್ಯಾಧಿಕಾರಿಗಳ ಬೇಜವಾಬ್ದಾರಿತನವನ್ನು ನಾಗೇಶ್ ಹೆಗಡೆರವರ ಸಂಪಾದಕತ್ವದ ವಿಜ್ಞಾನ ಗಂಗೆಯ ಬಿಂದುಸಾರದಲ್ಲಿನ 'ಕೀಟದಿಂದ ಕೋಟಿ ನಾಶ' ಎಂಬ ಲೇಖನದಲ್ಲಿ ಶಿವಾನಂದ ಕಳವೆ ತಿಳಿಸಿದ್ದಾರೆ.

ಪಂಚಭೂತಗಳಲ್ಲಿ ಒಂದಾದ ಭೂಮಿಯೊಂದಿಗೆ ಕ್ರಿಮಿ-ಕೀಟ, ಪಶು-ಪಕ್ಷಿಗಳಲ್ಲದೆ, ಪ್ರತಿಯೊಬ್ಬ ಮನುಷ್ಯನ ಜೀವನ ಬದುಕು ಬೆಸೆದುಕೊಂಡಿದೆ. ಇತರ ಎಲ್ಲಾ ಜೀವಿಗಳಂತೆ ಮಾನವನ ಬದುಕಿಗೆ ಭೂಮಿಯು ವರದಾನವಾಗಿದ್ದು ಭೂಮಿಯಿಲ್ಲದೆ ಬದುಕಿಲ್ಲ ಎಂಬಂತಾಗಿದೆ. ಹೀಗಾಗಿ ಅತ್ಯಮೂಲ್ಯ ಕೊಡುಗೆಯಾದ ಭೂಮಿಯನ್ನು ರಕ್ಷಿಸಿ ಉಳಿಸಲೇಬೇಕಾಗಿದೆ. ಇಡೀ ಜೀವಸಂಕುಲಕ್ಕೆ ಆಶ್ರಯ ನೀಡಿ, ಅಡಿಅಡಿಗೆ ಸಲಹುತ್ತಿರುವ ಧರಣಿಯನ್ನು ಸ್ವಚ್ಛ ಸುಂದರ, ಮಾಲಿನ್ಯ ಮುಕ್ತಗೊಳಿಸಿ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಿರುವ ಹಸಿರುಮನೆ ಪರಿಣಾಮವನ್ನು ತಗ್ಗಿಸಿ, ಭೂಮಿಯನ್ನು ಚಿರಾಯುಗೊಳಿಸಬೇಕಾಗಿದೆ. ಇದಕ್ಕೆ ತಕ್ಕಂತೆ ನಾಗೇಶ್ ಹೆಗಡೆಯವರು 'ಇರುವುದೊಂದೇ ಭೂಮಿ' ಕೃತಿಯು ಭೂಮಿಗೆ ಬಂದೊರಗಿದ ಸಮಸ್ಯೆಗಳು, ಸಮಸ್ಯೆಯ ಬಗ್ಗೆ ಜಾಗೃತಿ ಹಾಗೂ ಪರಿಹಾರೋಪಾಯ ಗಳೊಂದಿಗೆ ಪ್ರತಿಯೊಬ್ಬ ಓದುಗನು ಭೂಮಿಯ ರಕ್ಷಣೆಯ ದೀಕ್ಷೆ ತೊಡುವಂತೆ ಪ್ರೇರೇಪಿಸುವಂತಿದೆ.

ಮಾನವನ ದುರಾಸೆಯಿಂದಾಗಿ ಸಸ್ಯ ಸಂಕುಲ, ಪ್ರಾಣಿ ಸಂಕುಲಗಳಲ್ಲಿನ ವೈವಿಧ್ಯತೆಯು ನಾಶವಾಗುತ್ತಿದೆ. ಪರಿಸರ ಮಾಲಿನ್ಯ ಹೆಚ್ಚಾಗುತ್ತಿದೆ. ಇದರಿಂದ ಭೂಮಿಯ ಆಯಸ್ಸು ಕಡಿಮೆಯಾಗಿ ಸರ್ವನಾಶಕ್ಕೆ ಕಾರಣವಾಗುತ್ತಿದೆ ಎಂಬುದನ್ನು ತಿಳಿಸುವ ಸುಮಾರು ೧೮ ಲೇಖನಗಳು 'ಇರುವುದೊಂದೇ ಭೂಮಿ' ಕೃತಿಯಲ್ಲಿದ್ದು, ಪ್ರತಿಯೊಂದು ಲೇಖನವು ಬೆಲೆಬಾಳುವ ಹರಳಿನಂತೆ ವಿಶೇಷತೆಯಿಂದ ಕೂಡಿರುವುದನ್ನು ಕಾಣಬಹುದು. ಅಲ್ಲದೆ ಪರಿಸರದ ಬಗೆಗಿನ ಈ ಕೃತಿಯಲ್ಲಿನ ಪ್ರತಿಯೊಂದು ಲೇಖನದ ವಿವರಣೆಯು ಬಹು ಅಮೂಲ್ಯ ಮಾಹಿತಿಯಿಂದ ಕೂಡಿದ್ದು, ಮಾನವನ ಅರಿವಿಗೆ ಬಾರದೆಯೇ ಹೇಗೆ ಭೂಮಂಡಲವು ವಿನಾಶದ ಅಂಚಿಗೆ ಹೋಗುತ್ತಿರುವ ದುರಂತವನ್ನು ಕಣ್ಣಿಗೆ ಕಟ್ಟುವಂತೆ ಬಹು ಸರಳ ಅಭಿವ್ಯಕ್ತಿ ಸ್ವರೂಪದಲ್ಲಿ ವ್ಯಕ್ತ ಪಡಿಸಿದ್ದಾರೆ.

ಭೂಮಿಯು ಪ್ರತಿದಿನ ಬೆಳೆಯುತ್ತಿರುವ ಜನಸಂಖ್ಯೆಯಿಂದ ಅಸಮರ್ಪಕ ಸಂಪನ್ಮೂಲ ನಿರ್ವಹಣೆ ಹಾಗೂ ಮಾಲಿನ್ಯದಿಂದಾಗಿ ದಿನೇ ದಿನೇ ಅಳಿವಿನಂಚಿಗೆ ಹೋಗುವ

ಕರಾಳತೆಯನ್ನು 'ಬಂತು ೨೯ನೇ ದಿನ' ಲೇಖನದಲ್ಲಿ ತಿಳಿಸಿದರೆ, ಅಭಿವೃದ್ಧಿಯ ಹಿಂದೆ ಬಿದ್ದು ಜನಾಂಗದ ಅನುಕೂಲಕ್ಕಾಗಿ ಮಾಡಿದ ಕಾರ್ಯಗಳು ಮಹಾಸಮಸ್ಯೆಗಳಾಗುತ್ತಿರುವ ದುರಂತವನ್ನು 'ಮಾನವ ನಿರ್ಮಿತ ಮಹಾಸಮಸ್ಯೆಗಳು ಮತ್ತು ಪ್ರಗತಿಗೂ ಮಿತಿ ಬೇಕು' ಲೇಖನವು ಚರ್ಚಿಸುವುದು.

ಅದರಂತೆ 'ಅಣುಚಳಿಗಾಲ:ಅಡಗಲು ಸ್ಥಳವೆಲ್ಲಿ?', 'ಮಲೆನಾಡಿನ ಹಣ್ಣಡಿಕೆ ಚೇಳು', 'ಬ್ರಿಟನ್ನಿನ ನೀಲಿ ಪಾತರಗಿತ್ತಿ ಎಲ್ಲಿ ಹೋದವು', 'ಇದು ಗ್ರೀನ್ ಪೀಸ್ ವೃಕ್ಷಗಳ ರಕ್ಷಣೆಗೆ ಅಪ್ಪಿಕೋ', 'ಹಸಿರಿನ ಹರಿಕಾರ ಸುಂದರ್‌ಲಾಲ್ ಬಹುಗುಣ', 'ಅಣುಶಕ್ತಿ ವರವೇ? ಶಾಪವೇ?', 'ಬುಲ್ಡೋಝರ್ ಸಂಸ್ಕೃತಿ', 'ಆಹಾರವೆಂಬ ಆಯುಧ' ಮೊದಲಾದ ಲೇಖನಗಳು ವಿಷಯದ ಬಗ್ಗೆ ಮಾಹಿತಿಯನ್ನು ನೀಡುವುದರೊಂದಿಗೆ, ಇರುವುದೊಂದೇ ಭೂಮಿಯನ್ನು ಏಕೆ ಹೇಗೆ ರಕ್ಷಿಸಿಕೊಳ್ಳಬೇಕೆಂಬ ಜಾಗೃತಿಯನ್ನು ಮೂಡಿಸುವಂತೆ ಮೂಡಿಬಂದಿರುವುದನ್ನು ಕಾಣಬಹುದು.

ವಸುಂಧರ ಭೂಪತಿರವರ ಸಂಪಾದಕತ್ವದಲ್ಲಿ ಪ್ರಕಟಿತವಾದ 'ವಿಜ್ಞಾನ ಸಾಹಿತ್ಯ ೨೦೧೦' ಕೃತಿಯು ಪರಿಸರ, ಕೃಷಿ, ವೈದ್ಯ, ಭೌತ, ಖಭೌತ ವಿಷಯ ವಸ್ತುವಿಗೆ ಸಂಬಂಧಿಸಿದ್ದು, ಮಾಹಿತಿಯ ಆಗರವಾಗಿರುವುದನ್ನು ಕಾಣಬಹುದು. ಜೀವ ವೈವಿದ್ಯತೆಯ ಪ್ರಮುಖ ಹಾಗೂ ಸೂಕ್ಷ್ಮ ಸ್ಥಳವಾದ ಪಶ್ಚಿಮ ಘಟ್ಟಗಳ ಮೇಲೆ ತಾಪಮಾನದ ಏರಿಕೆಯಿಂದಾಗಿ ಹಲವಾರು ವಿಶೇಷ ಜೀವಿಗಳ ಆವಾಸ ಸ್ಥಾನದ ಮೇಲೆ, ಜೀವಿ ವೈವಿಧ್ಯತೆಯ ಮೇಲೆ ಹಾಗೂ ಅಂತರ್ಜಲದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುತ್ತಿದೆ. ಇದರಿಂದಾಗಿ ಜಗತ್ತಿನ ಅತ್ಯಂತ ೧೮ ಸೂಕ್ಷ್ಮ ತಾಣಗಳಲ್ಲಿ ಒಂದಾಗಿರುವುದು ಪಶ್ಚಿಮ ಘಟ್ಟಗಳು ಅಪಾಯದ ಗಡಿಯಲ್ಲಿವೆ. ಮುಂದಾಲೋಚನೆಯಿಲ್ಲದ ಸರ್ಕಾರದ ಜಲವಿದ್ಯುತ್ ಯೋಜನೆಗಳು, ಗಣಿಗಾರಿಕೆ, ಪ್ರವಾಸ, ರಸ್ತೆ, ಕಟ್ಟಡಗಳ ಹಾಗೂ ಶಾಖೋತ್ಪನ್ನ ಘಟಕಗಳ ನಿರ್ಮಾಣದ ಪರಿಣಾಮದಿಂದಾಗಿ ಪಶ್ಚಿಮ ಘಟ್ಟದ ದಟ್ಟ ಅರಣ್ಯದ ಅಮೂಲ್ಯ ಸಸ್ಯ ಸಂಪತ್ತು ಗಣನೀಯವಾಗಿ ಇಳಿಕೆಗೊಂಡು, ವನ್ಯ ಜೀವ ಜಂತುಗಳಿಗೆ ನೆಲೆಯಿಲ್ಲದಂತಾಗಿ, ಪ್ರಾಣಿ-ಪಕ್ಷಿ ಸೇರಿದಂತೆ ವನ್ಯ ಜೀವಿಗಳು ವಲಸೆ ಹೋಗುವಂತಾಗಿದೆ ಎಂದು ಹತಾಶೆ ನಿರಾಸೆಯಿಂದ ಲೇಖಕರು ವಿವರಿಸಿದ್ದಾರೆ.

ಪಶ್ಚಿಮ ಘಟ್ಟಗಳನ್ನು ಸಂರಕ್ಷಿಸುವ ದೃಢ ಪಣ ತೊಟ್ಟು, ಪರಿಸರ ಹೋರಾಟಗಾರರು ಹಾಗೂ ಇತರ ಸಂಸ್ಥೆಗಳು ಪ್ರಯತ್ನ ನಡೆಸುತ್ತಿರುವ ಹಾಗೂ ಯಾವ ಯಾವ ಕಾರ್ಯಕ್ರಮದ ಮೂಲಕ ರಕ್ಷಣಾ ಕಾರ್ಯ ಮಾಡಬೇಕೆಂದು ಹೇಳುವುದರೊಂದಿಗೆ ಲೇಖಕರಾದ

ಸುಮಂಗಲಾ ಎಸ್ ಮುಮ್ಮಿಗಟ್ಟಿರವರು 'ಪಶ್ಚಿಮ ಘಟ್ಟದ ಮೇಲೆ ಏರುತ್ತಿರುವ ತಾಪಮಾನದ ಪರಿಣಾಮ' ಲೇಖನದಲ್ಲಿ ಪರಿಸರದ ಬಗ್ಗೆ ವಿಶೇಷ ಕಾಳಜಿಯನ್ನು ಅಭಿವ್ಯಕ್ತಿಸಿದ್ದಾರೆ.

ಅಗಾದ ಬೆಲೆಬಾಳುವ ಸಂಪತ್ತಿನಿಂದ ಕೂಡಿದ ಪ್ರಕೃತಿಯಲ್ಲಿ ಎಲ್ಲವೂ ಅದ್ಭುತವೇ. ಅದು ಬೆಟ್ಟ-ಗುಡ್ಡ, ಮರ-ಗಿಡ, ಪ್ರಾಣಿ-ಪಕ್ಷಿಗಳಾಗಿರಬಹುದು ಇಲ್ಲವೇ ತರಕಾರಿ ಹಣ್ಣುಗಳಾಗಿರಬಹುದು. ಪ್ರತಿಯೊಂದರಲ್ಲೂ ವಿಸ್ಮಯ ವಿಶೇಷತೆಯನ್ನು ಗಮನಿಸಬಹುದು. ಅದರಲ್ಲೂ ಹಣ್ಣುಗಳಲ್ಲಿ ಗಣನೆಗೆ ಸಿಗದಷ್ಟು ವೈವಿಧ್ಯತೆಯನ್ನು ಕಾಣಬಹುದು. ವಿದೇಶದ ಮೂಲಸ್ಥಾನ ಹೊಂದಿರುವ ನವನೀತ ಫಲ/ಬಟ್ಟರ್ ಫ್ರೂಟ್/ಬೆಣ್ಣೆ ಹಣ್ಣಿನ ವಿಶೇಷತೆಯೇ ಬೇರೆ. ನೋಡಲು ಆಕರ್ಷಕವಲ್ಲ ಹಾಗೂ ತಿನ್ನಲೂ ರುಚಿಯಿಲ್ಲದ ಹಣ್ಣು. ಇದರ ಮರ ಬೆಳೆದು ಫಸಲನ್ನು ನೀಡಲು ಸುಮಾರು ೫-೧೦ ವರ್ಷಗಳನ್ನು ಪಡೆದು, ಕೊನೆಯಲ್ಲಿ ಫಲ ನೀಡುತ್ತದೆ. ಅದುವೇ ನವನೀತ ಫಲ ಎಂದು ಕರೆಯಲ್ಪಡುವ ಬಟ್ಟರ್ ಫ್ರೂಟ್. ಈ ಮರವು ತಾನು ಬೆಳೆದ ನಂತರ ತನ್ನ ಸುತ್ತ ಮುತ್ತ ಇತರ ಮರ ಗಿಡ ಬೆಳೆಯಲು ಆದ್ಯತೆ ನೀಡದ ವಿಚಿತ್ರ ಮರ ಎಂದು ಲೇಖಕರಾದ ಎನ್.ಎಸ್.ಲೀಲಾರವರು ಬೆಣ್ಣೆ ಹಣ್ಣಿನ ಚರಿತ್ರೆ ಹಾಗೂ ವಿಶೇಷತೆಯನ್ನು 'ನವನೀತ ಫಲ ಶ್ರುತಿ' ಎಂಬ ಲೇಖನದಲ್ಲಿ ಚಿತ್ರಿಸಿದ್ದಾರೆ.

ತುಮಕೂರು ಜಿಲ್ಲೆಯ ಪರಿಸರವನ್ನು ಪರಿಚಯಿಸುತ್ತಾ ನೋಡಲು ಮೂಡಲಸೀಮೆ ಯಂತೆ ಕಂಡು ಬಂದರೂ ಈ ಜಿಲ್ಲೆಯಲ್ಲಿ ಅಪಾರ ಸಸ್ಯಸಂಪತ್ತು ಸ್ವಾಭಾವಿಕವಾಗಿ ನೆಲೆಗೊಂಡಿದೆ. ತುಮಕೂರು ಜಿಲ್ಲೆಯು ಭೌಗೋಳಿಕವಾಗಿ ಅಷ್ಟು ಎತ್ತರವಲ್ಲದ ಬೆಟ್ಟಗಳಿಂದ ಹಾಗೂ ಮೈದಾನ ಪ್ರದೇಶದಿಂದ ಕೂಡಿದ್ದುದನ್ನು ವಿವರಿಸುತ್ತಾ, ಸುಮಾರು ೫೦೦ ಸಸ್ಯಪ್ರಭೇದಗಳ ತವರೂರಾಗಿದೆ. ಅದರಲ್ಲಿ ಸುಮಾರು ೩೦೦ ಸಸ್ಯಪ್ರಭೇದಗಳು ಔಷಧಿ ಸಸ್ಯಗಳಾಗಿವೆ. ಕಿರಿದಾದ ಒಂದೆಲಗ ಸಸ್ಯದಿಂದ ಹಿಡಿದು ಹಿರಿದಾದ ಆಲದವರೆಗಿನ ಎಲ್ಲಾ ಗಾತ್ರದ ಸಸ್ಯಗಳನ್ನು ಇಲ್ಲಿ ಕಾಣಬಹುದು. ನಿತ್ಯಹರಿದ್ವರ್ಣಕಾಡಿನ ಅಂಶಗಳಿಂದ ಕೂಡಿದ್ದು, ಅಂತಃಸ್ಸೀಮಿತ ಸಸ್ಯಗಳು(ಜಾಲಾರಿ ಮರಗಳು, ಅಶೋಕ ವೃಕ್ಷ) ಅವಿನಾಶಿ ಸಸ್ಯಗಳು(ಸು ೭೦ ಅವಿನಾಶಿ ಸಸ್ಯಗಳಲ್ಲಿ ಸು೧೧ ಅವಿನಾಶಿ ಸಸ್ಯ ಪ್ರಭೇದಗಳು ತುಮಕೂರು ಜಿಲ್ಲೆಯಲ್ಲಿವೆ) ಔಷಧೀ ಸಸ್ಯಗಳು ಮೊದಲಾವುಗಳನ್ನು ಪರಿಚಯಿಸಿದ್ದಾರೆ. ಇಂತಹ ಅಸಮಾನ ಮದ್ದುಗಳನ್ನು ರಕ್ಷಿಸಿಕೊಳ್ಳಲು ವಿವಿಧ ಸಂರಕ್ಷಣಾ ಕಾರ್ಯವನ್ನು ಮಾಡಬೇಕೆಂದು ಹೇಳುವುದರೊಂದಿಗೆ ನೈಸರ್ಗಿಕ ಮಾಹಿತಿಯನ್ನು ಲೇಖಕರಾದ ಬಿ.ಎಸ್.ಸೋಮಶೇಖರ್ ರವರು 'ಮೂಡಲಸೀಮೆಯ ಅಸಮಾನ ಮದ್ದುಗಳು' ಲೇಖನದಲ್ಲಿ ತಿಳಿಸಿದ್ದಾರೆ.

ಅಖಿಲೇಶ್ ಚಿಪ್ಪಳ್ಳಿಯವರ ಸಂಪಾದಕತ್ವದ ಕೃತಿ 'ವಿಜ್ಞಾನ ಸಾಹಿತ್ಯ ೨೦೧೨-೧೩'ರಲ್ಲಿನ ಪ್ರಕೃತಿಗೆ ಸಂಬಂಧಿಸಿದ ಎಲ್ಲಾ ಲೇಖನಗಳು ಅಗತ್ಯ ಮಾಹಿತಿಯಿಂದ ಕೂಡಿರುವುದು. ಔಷಧೀ ಸಸ್ಯಗಳಿಗೆ ಹೆಸರುವಾಸಿಯಾದ ಹಾಗೂ ವಿಶೇಷವಾದ ಸಸ್ಯ ಸಂದಣಿಯಿಂದ ಕೂಡಿದ ಸಿದ್ದರಬೆಟ್ಟ, ಇಂದು ಸರ್ಕಾರದ ಹಾಗೂ ದುರಾಸೆಯ ಮನುಷ್ಯನ ಕೈಗೆ ಸಿಲುಕಿ ತನ್ನ ಸರ್ವಸ್ವವನ್ನೆ ಕಳೆದುಕೊಳ್ಳುವ ಸ್ಥಿತಿಗೆ ಬಂದಿರುವ ಕರಾಳತೆಯನ್ನು ತಿಳಿಸುವುದರೊಂದಿಗೆ, ಸಿದ್ದರಬೆಟ್ಟದ ವಿಶೇಷತೆಯನ್ನು ಲೇಖಕ ಬಿ.ಎಸ್.ಸೋಮಶೇಖರ್ ರವರು ತಿಳಿಸಿದ್ದಾರೆ. ಔಷಧೀ ಸಸ್ಯಗಳ ಕಾಶಿ ಎಂದು ಕರೆಯಲ್ಪಡುವ ಸಿದ್ದರಬೆಟ್ಟದಲ್ಲಿ ಎಲ್ಲಾ ರೀತಿಯ ಸಸ್ಯಗಳು, ಅದು ಔಷಧಿ ಸಸ್ಯವಾಗಿರಬಹುದು ಇಲ್ಲವೇ ಹೊನ್ನೆ ಬೀಟೆಯಂತಹ ದೊಡ್ಡ ಮರ, ಕೀಟಹಾರಿ ಸಸ್ಯಗಳು ಮೊದಲಾದ ವಿಭಿನ್ನ ಸಸ್ಯವರ್ಗಗಳಿಂದ ಕೂಡಿದ್ದು, ಆ ಎಲ್ಲಾ ಸಸ್ಯರಾಶಿಗಳ ತವರೂರು ಸಿದ್ಧರಬೆಟ್ಟವಾಗಿದೆ ಎಂದು 'ಸಿದ್ಧರಬೆಟ್ಟ ಎಂಬ ಹಸಿರುಬೊಟ್ಟು' ಲೇಖನದಲ್ಲಿ ಲೇಖಕರು ತಿಳಿಸಿದ್ದಾರೆ.

ಪ್ರಕೃತಿಯು ಎಲ್ಲಾ ವಿಶೇಷತೆಯ ಮೂಲ ನೆಲೆ. ಮನುಷ್ಯನ ಜೀವನಕ್ಕೆ ಬದುಕಲು ಅಗತ್ಯವಾದ ಎಲ್ಲವನ್ನು ನೀಡಿರುವ ಧಾತ್ರಿ. ಆದರೆ ಮನುಷ್ಯನ ಅತಿಯಾಸೆ ಹಾಗೂ ಅತಿಯಾದ ಬಳಕೆಯಿಂದ ನವೀಕರಿಸಲಾಗದ ಕೆಲವು ವಸ್ತುಗಳು ಅದರಲ್ಲೂ ಸಾವಿರಾರು ವರ್ಷಗಳಿಂದ ಭೂಮಿಯ ಒಡಲಲ್ಲಿರುವ ಇಂಧನ ಮೂಲಗಳು ಬರಿದಾಗುತ್ತಿವೆ. ಜಗತ್ತಿನ ಎಲ್ಲಾ ಕಾರ್ಯಗಳು ಈ ಇಂಧನಕ್ಕೆ ಅವಲಂಬಿತವಾಗಿದ್ದು, ಅದು ಬರಿದಾದಾಗ ಎಲ್ಲಾ ಕೆಲಸ ಕಾರ್ಯಗಳು ಸ್ತಬ್ಧವಾಗುವ ಸ್ಥಿತಿಯಲ್ಲಿ ಜಗತ್ತಿದೆ. ಹೀಗಾಗಿ ಇದಕ್ಕೆ ಪರ್ಯಾಯವಾಗಿ ಬದಲೀ ಇಂಧನ ಮೂಲಗಳನ್ನು ಹುಡುಕುವ ಸಂಶೋಧನೆಯ ಆವಿಷ್ಕಾರದ ಪ್ರಯತ್ನದಲ್ಲಿ ವಿಜ್ಞಾನಿಗಳು ಯಶಸ್ವಿಯಾಗಿದ್ದು, ಸಾಮಾನ್ಯವಾಗಿ ಬೇಲಿಗಿಡ ಇಲ್ಲವೇ ಕಾಚಿಗಿಡ ಎಂದು ಕರೆಯಲ್ಪಡುವ ಜಾತ್ರೋಪ ಎಂಬುದರಿಂದ ಇಂಧನವನ್ನು ಪಡೆಯಬಹುದು ಎಂಬುದು ಆವಿಷ್ಕಾರದಿಂದ ತಿಳಿದುಬಂದಿದೆ. ಹೀಗೆ ಪಡೆಯುವುದು ಜೈವಿಕ ಇಂಧನವಾಗಿದ್ದು, ಯಾವುದೇ ಮರಗಿಡಗಳಿಂದ, ಅದರ ಬೀಜಗಳಿಂದ, ಕೃಷಿ ತ್ಯಾಜ್ಯಗಳಿಂದ, ಪ್ರಾಣಿಜನ್ಯ ಮೂಲಗಳಿಂದ ಪಡೆದ ಜೈವಿಕ ತೈಲವನ್ನು ಸಂಸ್ಕರಿಸಿ ಬಳಸಲಾಗುವುದು ಎಂಬ ಮಾಹಿತಿಯನ್ನು ವಿವರವಾಗಿ ಸುಲಲಿತ ಅಭಿವ್ಯಕ್ತಿಯಲ್ಲಿ ಲೇಖಕರಾದ ಟಿ.ಎಸ್.ಗೋಪಾಲ್ ರವರು 'ಭವಿಷ್ಯದ ಭರವಸೆ ಹಸಿರು ಇಂಧನ' ಲೇಖನದಲ್ಲಿ ತಿಳಿಸಿರುವುದು ಮುಖ್ಯವಾಗಿದೆ.

ಈ ಎಲ್ಲಾ ಲೇಖನಗಳ ಜೊತೆಗೆ ಪರಿಸರ ರಕ್ಷಣೆಯ ಬಗ್ಗೆ ಮಾನವನಲ್ಲಿ ಭಿನ್ನವಿಸುವುದರೊಂದಿಗೆ ಪರಿಸರದ ಬಗ್ಗೆ ಜಾಗೃತಿಯನ್ನು ನೀಡುವ ಪರಿಯನ್ನು 'ಒಂದು ಬಿನ್ನಹ ಮನುಜ ಕೇಳು' ಲೇಖನ ತಿಳಿಸಿದರೆ, ಪರಿಸರದಲ್ಲಿನ ವಿಶೇಷತೆಯಿಂದಾಗಿ

ವಿಶ್ವಪರಂಪರೆಯ ಹೆಸರಿಗೆ ಕಾರಣವಾದುದನ್ನು 'ಪಶ್ಚಿಮ ಘಟ್ಟದ ತಾಣಗಳಿಗೆ ವಿಶ್ವಪರಂಪರೆಯ ಮಾನ್ಯತೆ' ಲೇಖನವು ತಿಳಿಸುವುದು. ಭೂಮಿಯ ಮೇಲಿನ ತಾಪಮಾನದ ಹೆಚ್ಚಿಕೆಯ ದುಷ್ಪರಿಣಾಮದ ಬಗ್ಗೆ 'ಭೂಹೊಸ್ತಿಲ ಬಳಿ ಹಿಮಯುಗ' ತಿಳಿಸುವುದು. ಇದರಂತೆ 'ವಿಜ್ಞಾನ ಸಾಹಿತ್ಯ ೨೦೧೩'ರಲ್ಲಿ ಪರಿಸರಕ್ಕೆ ಸಂಬಂಧಿಸಿದ ಲೇಖನಗಳಿವೆ. ಅವುಗಳೆಂದರೆ ಜೈವಿಕ ವೈವಿಧ್ಯತೆಯಿಂದ ಕೂಡಿದ ಪರಿಸರದ ರಕ್ಷಣೆಯು ಅಗತ್ಯ ಅನಿವಾರ್ಯ ಎಂಬುದನ್ನು 'ಜೈವಿಕ ವೈವಿಧ್ಯ ಸಂರಕ್ಷಣೆ ಅನಿವಾರ್ಯ' ಲೇಖನವು ಅವಲೋಕಿಸಿದರೆ, ಬಾವಲಿಗಳು ಸಸ್ಯಹಾರಿಗಳೆಂದು ತಿಳಿದಿದ್ದ ನಮಗೆ ರಕ್ತ ಹೀರುವ ರಾಕ್ಷಸ ಬಾವುಲಿಗಳ ಬಗ್ಗೆ 'ರಕ್ತಾಸುರ ಬಾವಲಿಗಳು' ಲೇಖನದಲ್ಲಿ ಸವಿಸ್ತಾರವಾಗಿ ಲೇಖಕರು ತಿಳಿಸಿದ್ದಾರೆ.

ಮೇಲೆ ವಿವರಣೆಗೆ ಒಳಪಟ್ಟ ಎಲ್ಲಾ ಲೇಖನಗಳು ಪರಿಸರಕ್ಕೆ ಸಂಬಂಧಿಸಿದ ಎಲ್ಲಾ ಅಂಶಗಳನ್ನು ಒಳಗೊಂಡಿದ್ದು, ಲೇಖಕರ ಅಭಿವ್ಯಕ್ತಿ ಕೌಶಲ್ಯದಿಂದಾಗಿ ವಿಷಯದ ಬಗೆಗೆ ಪೂರ್ಣ ಮಾಹಿತಿಯನ್ನು ನೀಡುವುದರ ಜೊತೆಗೆ ಪರಿಸರ ಉಳಿಸಿ ಬೆಳಸುವ ಜಾಗೃತಿಯ ಕಲ್ಪನೆಯನ್ನು ಮೂಡಿಸುವಂತೆ ಉಲ್ಲೇಖಿತವಾಗಿರುವುದು. ಪರಿಸರ ವಿಜ್ಞಾನಕ್ಕೆ ಸಂಬಂಧಿಸಿದ ಈ ಎಲ್ಲಾ ಲೇಖನಗಳಲ್ಲಿ ಪರಿಸರದ ಬಗ್ಗೆ ಪ್ರಸ್ಥಾಪಿಸಲಾದ ಎಲ್ಲಾ ವಿಚಾರಗಳು ವೈಜ್ಞಾನಿಕ ಅಂಶದಿಂದ ಕೂಡಿದ್ದು, ಸಮಾಜದಲ್ಲಿ ಪರಿಸರದ ಬಗೆಗೆ ವಿಶೇಷ ಕಾಳಜಿ ಹಾಗೂ ಜಾಗೃತಿಯನ್ನು ಮೂಡಿಸುವುದರೊಂದಿಗೆ, ಅದನ್ನು ರಕ್ಷಿಸುವಲ್ಲಿ ಎಲ್ಲರೂ ದೃಢ ನಿರ್ಧಾರ ಕೈಗೊಳ್ಳುವಂತೆ ಮಾಡುವ ಮೂಲಕ ಪರಿಸರ ರಕ್ಷಣೆಯ ಧೀಕ್ಷೆ ತೊಡುವಂತೆ ಮಾಡುವಲ್ಲಿ ಪರಿಸರ ವಿಜ್ಞಾನ ಸಾಹಿತ್ಯವು ಮಹತ್ವದ ಪಾತ್ರ ವಹಿಸುವುದು.

೫.೨ ಕೃಷಿ ವಿಜ್ಞಾನ

ಕೃಷಿ ಎಂಬ ಪದವು ಆಂಗ್ಲ ಭಾಷೆಯ ಪದವಾದ 'ಅಗ್ರಿಕಲ್ಚರ್' ನ ಸಂವಾದಿಯಾದ ಕನ್ನಡ ಪದವಾಗಿದ್ದು, ಲ್ಯಾಟಿನ ಭಾಷೆಯ 'ಅಗ್ರಿಕಲ್ಚುರ' ಎಂಬ ಪದದಿಂದ ಉತ್ಪತ್ತಿಯಾಗಿದೆ. ಅಗ್ರಿಕಲ್ಚುರ ಪದವು 'ಅಗರ್' ಅಂದರೆ ಒಂದು ಹೊಲ ಮತ್ತು 'ಕಲ್ಚುರ' ಎಂದರೆ ಸಾಗುವಳಿ ಎಂಬ ಅರ್ಥದಿಂದ ಕೂಡಿದೆ. ಅಂದರೆ "ಒಂದು ಹೊಲ ಸಾಗುವಳಿ ಮಾಡುವ ವ್ಯವಸ್ಥೆಯೇ" ಕೃಷಿಯಾಗಿದೆ.

ನಾಗರೀಕತೆಯು ಬೆಳೆಯುವಲ್ಲಿ ಹಾಗೂ ಮಾನವನನ್ನು ನಾಗರೀಕನನ್ನಾಗಿಸುವಲ್ಲಿ ಕೃಷಿಯ ಪಾತ್ರವು ಹಿರಿದಾದುದಾಗಿದೆ. ಕೃಷಿಯಲ್ಲಿನ ವಿವಿಧ ಉಪ ಕೆಲಸಗಳಾದ ಸಸ್ಯಗಳನ್ನು ಬೆಳೆಸುವುದು, ಪ್ರಾಣಿಗಳ ಸಂಗೋಪನೆ ಮೊದಲಾದವುಗಳ ವೈವಿಧ್ಯತೆ ಹಾಗೂ ವಿಸ್ತೃತ ಕೌಶಲ್ಯಗಳ ವಿಶೇಷತೆಯನ್ನು ಕೃಷಿಯು ಒಳಗೊಂಡಿದೆ. ಕೈಗಾರಿಕಾ ಕ್ಷೇತ್ರದ ಬೆಳವಣಿಗೆ ಮತ್ತು ಕೈಗಾರಿಕಾ ಕ್ರಾಂತಿ ಆಗುವವರೆಗೂ ಬಹುದೊಡ್ಡ ಸಂಖ್ಯೆಯ ಜನಸಮುದಾಯವು

ಕೃಷಿಯನ್ನು ಮುಖ್ಯ ಕಸುಬಾಗಿ, ಕೃಷಿ ಕೆಲಸದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುವುದನ್ನು ಗಮನಿಸಬಹುದು. ಇಂದೂ ಸಹ ಬಹಳಷ್ಟು ಜನರ ಜೀವನದ ಮುಖ್ಯ ಕಸುಬೇ ಕೃಷಿಯಾಗಿದ್ದು, ಕೃಷಿ ಕಾರ್ಯದಲ್ಲಿ ನಿರತರಾದ ಬಹಳಷ್ಟು ಜನರು ವಿಧ್ಯಾವಂತರಾಗಿರುವ ಕಾರಣ ಅತ್ಯಾಧುನಿಕ ವಿಧಾನ ಹಾಗೂ ತಂತ್ರಜ್ಞಾನವನ್ನು ಕೃಷಿಯಲ್ಲಿ ಅಳವಡಿಸುವಲ್ಲಿ ಯಾವುದೇ ಸಮಸ್ಯೆಯನ್ನು ಎದುರಿಸುವುದಿಲ್ಲ. ಆದುದರಿಂದ ಕೃಷಿಗೆ ಸಂಬಂಧಿಸಿದ ಹೊಸ ಹೊಸ ಆವಿಷ್ಕಾರ ಅನ್ವೇಷಣೆಯಿಂದ ಕೂಡಿದ ಮಾಹಿತಿಯನ್ನು ತಿಳಿಯುವ ಅಗತ್ಯತೆಯು ಇಂದು ಕೃಷಿಕರಿಗೆ ಅತಿಹೆಚ್ಚು ಇರುವುದು. ಹೀಗಾಗಿ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದಂತೆ ಲೇಖನ ಕೃತಿಗಳ ಅಗತ್ಯತೆಯು ಹಿಂದಿಗಿಂತ ಇಂದು ಅಧಿಕವಾಗಿದ್ದು, ಕೃಷಿಗೆ ಸಂಬಂಧಿಸಿ ಕೃತಿ ಲೇಖನಗಳ ಬೇಡಿಕೆಯು ಹೆಚ್ಚಾಗಿದೆ.

ಕೃಷಿ ವಲಯದ ಹಾಗೂ ಕೃಷಿಕರ ನಿರ್ದಿಷ್ಟ ಅಗತ್ಯತೆಗಳಿಗನುಗುಣವಾಗಿ ಬಹಳಷ್ಟು ಪರಿಣಿತ ಜ್ಞಾನಿಗಳು ಕೃಷಿಕ ವಿಷಯಗಳನ್ನು ವಸ್ತುವನ್ನಾಗಿ ಆಯ್ಕೆ ಮಾಡಿಕೊಂಡು ಹಲವು ಕೃತಿಗಳನ್ನು, ಕೈಪಿಡಿಗಳನ್ನು, ಲೇಖನಗಳನ್ನು, ಮಾರ್ಗದರ್ಶಿ ಬರಹಗಳನ್ನು ರಚಿಸಿರುವುದನ್ನು ಗಮನಿಸಬಹುದು. ಜೊತೆಗೆ ಆಯಾ ಕಾಲದ, ಸ್ಥಳ, ಸ್ಥಿತಿಗತಿಗೆ ಅನುಗುಣವಾಗಿ ಅಗತ್ಯಕ್ಕೆ ತಕ್ಕಂತೆ ಕೃಷಿ ಸಾಹಿತ್ಯವು ರಚನೆಯಾಗುತ್ತಾ ಬಂದಿರುವುದನ್ನು ಗುರ್ತಿಸಬಹುದು. ಹೀಗಾಗಿ ಕೃಷಿ ಚಟುವಟಿಕೆಗಳಿಗೆ ಅಗತ್ಯವಾದ ಪರಿಸರ, ಹವಾಮಾನ, ಬೆಳೆಗಳು, ಕೃಷಿ ವಿಧಾನಗಳು(ಕಾಲಾಧಾರಿತ, ಸ್ಥಳಾಧಾರಿತ), ಅನುಸರಿಸಬೇಕಾದ ಪದ್ಧತಿ ಮೊದಲಾದ ಕೃಷಿ ಸಂಬಂಧಿತ ವಿಷಯಗಳಿಗನುಗುಣವಾಗಿ ಲೇಖನ, ಕೈಪಿಡಿ ಹಾಗೂ ಕೃತಿಗಳಿಂದ ಕೂಡಿದ ಕೃಷಿ ವಿಜ್ಞಾನ ಸಾಹಿತ್ಯವು ಬೆಳವಣಿಗೆಯಾಗುತ್ತಿವೆ.

ಭಾರತದ ಕೃಷಿಯ ಇತಿಹಾಸವು ವೇದಗಳ ಕಾಲದಷ್ಟು ಹಳೆಯದಾಗಿದ್ದು, ಬೇಸಾಯ ಎಂಬುದೇ ಕೃಷಿಯಾಗಿದೆ. ಬೇಸಾಯದಲ್ಲಿ ಆಹಾರ ಮತ್ತು ಸರಕುಗಳನ್ನು ಉತ್ಪಾದಿಸುವ ಒಂದು ವ್ಯವಸ್ಥಿತ ವಿಧಾನವೇ ಕೃಷಿ. ಮಾನವನ ನಾಗರೀಕತೆಯ ಉಗಮ ಮತ್ತು ಬೆಳವಣಿಗೆಯಲ್ಲಿ ಕೃಷಿಯು ಪ್ರಮುಖವಾದುದಾಗಿದ್ದು, ಜೀವನದ ಮುಖ್ಯ ವಿಧಾನವೇ ಕೃಷಿಯಾಗಿತ್ತು. ಸಸ್ಯಗಳನ್ನು ಬೆಳೆಸುವುದು, ಪ್ರಾಣಿಗಳನ್ನು ಸಾಕುವುದು, ತೋಟಗಾರಿಕೆ ಮೊದಲಾದ ಕೃಷಿ ಸಂಬಂಧಿ ವಿಷಯಗಳನ್ನು ವೈಜ್ಞಾನಿಕ ವಿಧಾನದೊಂದಿಗೆ ಅಧ್ಯಯನಕ್ಕೆ ಒಳಪಡಿಸುವುದೇ ಕೃಷಿ ವಿಜ್ಞಾನವಾಗಿದೆ. ಸಸ್ಯಗಳ ಹಾಗೂ ಪ್ರಾಣಿಗಳ ಸಂಗೋಪನೆಯಿಂದ, ಆಹಾರ ಮತ್ತಿತರ ಸಮಸ್ಯೆಗಳನ್ನು ನಿವಾರಿಸುವುದರೊಂದಿಗೆ ಸಮಾಜದ ಅಭಿವೃದ್ಧಿಗೆ ಕಾರಣವಾದ ಕೃಷಿಯ ಬಗೆಗಿನ ಅಧ್ಯಯನವೇ 'ಕೃಷಿ ವಿಜ್ಞಾನದ' ಮೂಲ.

ಇಂದಿನ ಕೃಷಿ ಎಂಬುದು ಕೇವಲ ಉಳುಮೆ, ಬಿತ್ತನೆ ಮತ್ತು ಕಟಾವಿನ ಕೆಲಸ ಮಾತ್ರವಲ್ಲ. ಅದೊಂದು ವೈಜ್ಞಾನಿಕ ಕೌಶಲ್ಯ. ಅದೊಂದು ವಿಜ್ಞಾನ. ಹೀಗಾಗಿಯೇ ಅದಕ್ಕೆ ತಕ್ಕಂತೆ ವಾತಾವರಣ ಮಾಹಿತಿಯನ್ನು ನೀಡುವುದರೊಂದಿಗೆ, ಇಂದು ಭಾರತವು ಕೃಷಿ ಉತ್ಪಾದನೆಯಲ್ಲಿ ಅಪಾರ ಪ್ರಗತಿಯನ್ನು ಸಾಧಿಸಿ ವಿಶ್ವದಾದ್ಯಂತ ಕೃಷಿಯಲ್ಲಿ ೨ನೇ ಸ್ಥಾನದಲ್ಲಿದೆ. ಅಭಿವೃದ್ಧಿ ಯುಗದಲ್ಲಿ ಕೃಷಿಯು ಬಹುವೇಗವಾಗಿ ಬೆಳೆಯುವುದರೊಂದಿಗೆ ಪರಿಸರಕ್ಕೆ ತಕ್ಕಂತೆ ಬದಲಾಗುತ್ತಾ, ಹೊಸ ರೀತಿಯಲ್ಲಿ ಹೊಸ ಬಗೆಯಲ್ಲಿ, ಹೊಸ ವಿಧಾನದೊಂದಿಗೆ ಕಾಲಾಧಾರಿತವಾಗಿ ವಿಭಿನ್ನ ಸ್ವರೂಪವನ್ನು ಪಡೆಯುತ್ತಿದ್ದು, ಕೃಷಿ ವಿಜ್ಞಾನ ಲೇಖಕರು ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು, ಕೃಷಿಯಲ್ಲಿ ಆಸಕ್ತರಿರುವವರಿಗೆ ಹಾಗೂ ಕೃಷಿಯನ್ನೇ ಮೂಲ ಕಸುಬನ್ನಾಗಿ ಹೊಂದಿರುವ ಕೃಷಿಕರಿಗೆ ಉಪಯೋಗವಾಗುವ ಕೃತಿಗಳ ರಚನೆಯನ್ನು ಮಾಡುತ್ತಿರುವುದನ್ನು ಕಾಣಬಹುದು. ಕೃಷಿ ಸಾಹಿತ್ಯದ ರಚನೆಯ ಜೊತೆಯಲ್ಲಿಯೇ ಕೃಷಿಯಲ್ಲಿ ವಿಜ್ಞಾನದ ಸತ್ಯಾಸತ್ಯತೆ ಹಾಗೂ ಅದರ ಪ್ರಸ್ತುತತೆಯ ಬಗ್ಗೆ ಜಾಗೃತರಾಗಿ ರೈತರನ್ನು ದೃಷ್ಟಿಯಲ್ಲಿರಿಸಿಕೊಂಡು ಸಾಹಿತಿಗಳು ಕೃಷಿ ವಿಜ್ಞಾನ ಸಾಹಿತ್ಯ ರಚನಾ ಕಾರ್ಯದಲ್ಲಿ ತೊಡಗಿರುವುದು ಮಹತ್ವವಾದುದಾಗಿದೆ.

ಕೃಷಿ ವಿಜ್ಞಾನ ಸಾಹಿತ್ಯದಲ್ಲಿ ಕೃಷಿಗೆ ಸಂಬಂಧಿಸಿದಂತೆ ಪ್ರಮುಖವಾದ ಮಾಹಿತಿಗಳಿದ್ದು, ಜನತೆಯು ಅದರ ಉಪಯುಕ್ತತೆಯನ್ನು ಪಡೆಯುವಲ್ಲಿ ಲೇಖನಗಳ ಪಾತ್ರವು ಮುಖ್ಯವಾಗಿದೆ. ಕೃಷಿ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಬಹಳಷ್ಟು ಲೇಖನಗಳಲ್ಲಿ ಕೃಷಿಗೆ ಸಂಬಂಧಿಸಿದ ಮಾಹಿತಿಗಳು ವೈಜ್ಞಾನಿಕವಾಗಿ ಮೂಡಿ ಬಂದಿದ್ದು, ಬಹಳ ಪ್ರಯೋಜನಕಾರಿಯಾದ ಮಾಹಿತಿಯಿಂದ ಕೂಡಿದೆ.

ಸುಭಾಷ್ ಎನ್ ನೇಳಗರವರ ಸಂಪಾದಕತ್ವದಲ್ಲಿ ಹೊರ ಬಂದ '೯೯೦ರ ವಿಜ್ಞಾನ ಸಾಹಿತ್ಯ' ಕೃತಿಯಲ್ಲಿನ ಸುಮಾರು ೧೧ ಲೇಖನಗಳು ಕೃಷಿ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಿಸಿದ್ದು ಉತ್ತಮ ಪಸಲಿನ ಬೀಜಗಳು, ಸಾವಯವ ಕೃಷಿ, ಅಧಿಕ ಇಳುವರಿ, ಕಾಂಪೋಸ್ಟ್ ಗೊಬ್ಬರದ ಉಪಯೋಗ, ಒಣ ಬೇಸಾಯ, ಒಣ ಮೇವು, ಕೃಷಿ ರಾಸಾಯನಿಕ ಮೊದಲಾದ ಕೃಷಿ ಸಂಬಂಧಿತ ವಸ್ತು ವೈವಿದ್ಯತೆಯ ವಿಷಯಗಳಿಂದ ಕೂಡಿದೆ. ನಮ್ಮ ದೇಶದ ಆರ್ಥಿಕತೆಯಲ್ಲಿ ಪ್ರಧಾನ ಪಾತ್ರವಹಿಸುವ ಹಾಗೂ ಅತ್ಯಧಿಕ ಸಂಖ್ಯೆಯಲ್ಲಿ ಉದ್ಯೋಗ ಸೃಷ್ಟಿಸುವ ಕ್ಷೇತ್ರ ಕೃಷಿ ವಲಯವಾಗಿದ್ದು, ಅದನ್ನು ಅಭಿವೃದ್ಧಿ ಪಡಿಸುವಲ್ಲಿ ವಿಜ್ಞಾನದ ಪಾತ್ರ ಹಿರಿದಾದುದು. ಇದಕ್ಕೆ ಪೂರಕವಾಗಿ ೯೯೦ರ ವಿಜ್ಞಾನ ಸಾಹಿತ್ಯದಲ್ಲಿ ಲೇಖನಗಳು ಮೂಡಿಬಂದಿವೆ.

ಕೃಷಿಯಲ್ಲಿ ಬೆಳೆಗಳಿಗೆ ತಗಲುವ ರೋಗವು ಸಾಮಾನ್ಯವಾದ ಕಾಡುವ ಸಮಸ್ಯೆಯಾಗಿದ್ದು, ಅಂತಹ ಬೆಳೆಗೆ ತಗಲುವ ರೋಗಗಳಿಂದ ಉಂಟಾಗುವ ಎಲ್ಲಾ ರೀತಿಯ ಸಮಸ್ಯೆಗಳಿಗೆ ಇರುವ ಪರಿಹಾರ ವಿಧಾನವಾದ ಬೀಜೋಪಚಾರದ ಬಗ್ಗೆ ಮಾಹಿತಿಯನ್ನೊಳಗೊಂಡ ಲೇಖನ 'ಉತ್ತಮ ಫಸಲಿಗೆ ಬೀಜೋಪಚಾರದಲ್ಲಿ' ಸಂಗ್ರಾಮ ಆರ್. ಪಾಟೀಲರವರು, ಬೆಳೆಯನ್ನು ರಕ್ಷಿಸಿ ಬೆಳೆಸಿ ಉತ್ತಮ ಫಸಲನ್ನು ಪಡೆಯುವಲ್ಲಿ ಬೀಜೋಪಚಾರದ ಪ್ರಾಮುಖ್ಯತೆಯನ್ನು ತಿಳಿಸಿದ್ದಾರೆ. ಅದರಂತೆ ಬಹಳಷ್ಟು ವಿರೋಧಗಳ ನಡುವೆ ಪರಿಚಯಿಸಿದ 'ಬೀಜಾಂತಕ' ತಂತ್ರಜ್ಞಾನದ ಸಾದಕ ಬಾದಕಗಳ ಚರ್ಚೆಯೊಂದಿಗೆ, ಅದು ರೈತರಿಗೆ ವರಧಾನವಾಗಿ ಭಾರತಕ್ಕೆ ವರದಾನವಾಗಿದೆ ಎಂಬುದನ್ನು ಬಹಳಷ್ಟು ಪ್ರಶ್ನೆಗಳ ಮೂಲಕ ನಾಗೇಶ್ ಹೆಗಡೆಯವರು 'ಬೀಜಾಂತಕ ತಂತ್ರಜ್ಞಾನ! ಭಾರತಕ್ಕೆ ಶಾಪವೇ? ವರವೇ?' ಎಂಬ ಲೇಖನದಲ್ಲಿ ವಿವರಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಅಧಿಕ ರಸಾಯನಯುಕ್ತ ಕೃಷಿ ಬೀಜಗಳನ್ನೊಳಗೊಂಡಂತೆ ವಿವಿಧ ವಸ್ತುಗಳ ಬಳಕೆಯಿಂದಾಗಿ, ಸಸ್ಯದ ಬೆಳವಣಿಗೆಗೆ ಬೇಕಾದ ಪೋಷಕಾಂಶಗಳು ದೊರೆಯದೆ ಕೃಷಿ ಭೂಮಿಯು ತನ್ನ ಫಲವತ್ತತೆಯನ್ನು ಕಳೆದುಕೊಂಡು ಇಳುವರಿಯು ಕಡಿಮೆಗೊಳ್ಳುತ್ತಿದೆ. ಹೀಗಾಗಿ ಭೂಮಿಯ ಫಲವತ್ತತೆಯನ್ನು ಕಾಪಾಡಿಕೊಂಡು ಹೋಗುವ ದೃಷ್ಟಿಯಿಂದ ಹಾಗೂ ಮುಂದಿನ ಜನಾಂಗಕ್ಕೆ ಫಲವತ್ತಾದ ಉತ್ತಮ ಜಮೀನನ್ನು ಕಾಪಾಡಿ ನೀಡುವ ದೃಷ್ಟಿಯಿಂದ ಜೈವಿಕ ಗೊಬ್ಬರವು ಬಹುಮುಖ್ಯ. ಈ ಜೈವಿಕ ಗೊಬ್ಬರವನ್ನು ಸೂಕ್ಷ್ಮಾಣು ಜೀವಿಗಳಾದ ನೀಲಿ ಮತ್ತು ಹಸಿರು ಪಾಚಿಗಳಾದ ಅಜೋಲ (ನೀರಿನ ಮೇಲೆ ತೇಲಾಡಿಕೊಂಡು ಬೆಳೆಯುವ ಸಸ್ಯ) ರೈಜೋಬಿಯಂ ಮತ್ತು ಮೈಕೋರೈಜಾ ಮೊದಲಾದವುಗಳನ್ನು ಬೆಳೆಸುವ ಹಾಗೂ ಬಳಸುವ ಕ್ರಮವನ್ನು ಈಶ್ವರಲಾಲ್ ಬಿ ಸೇಡಂಕರ್‌ರವರು 'ಅಧಿಕ ಇಳುವರಿಗೆ ಸೂಕ್ಷ್ಮಾಣುಜೀವಿಗಳ ಬಳಕೆ' ಲೇಖನದಲ್ಲಿ ತಿಳಿಸಿದ್ದಾರೆ.

ಕನಿಷ್ಠ ಮೂರರಿಂದ ಒಂದು ವರ್ಷದ ಸಮಯದಲ್ಲಿ ತಯಾರಾಗುವ ಸಾವಯವ/ ಕಾಂಪೋಸ್ಟ ಗೊಬ್ಬರವನ್ನು ಒಂದೇ ತಿಂಗಳಲ್ಲಿ ತಯಾರಿಸುವ ವಿಧಾನವನ್ನು ಹಂತ ಹಂತವಾಗಿ ವಿಜಯ್ ಅಂಗಡಿರವರು 'ಒಂದೇ ತಿಂಗಳಲ್ಲಿ ಕಾಂಪೋಸ್ಟ್ ಗೊಬ್ಬರ!' ಲೇಖನದಲ್ಲಿ ತಿಳಿಸಿದ್ದಾರೆ. ಗುಟುಕು ನೀರಾವರಿಯನ್ನು ತೋಟಗಾರಿಕೆಗೆ, ಅರಣ್ಯೀಕೃತ ಸಸ್ಯಗಳಿಗೆ ಹಾಗೂ ಅಲಂಕಾರಿಕ ಗಿಡಗಳಿಗೆ ಬಳಸುವ ಮೂಲಕ ಒಣಬೇಸಾಯವನ್ನು ಮಾಡುವುದು ಮತ್ತು ಗಿಡಗಳಿಗೆ ಅವಶ್ಯವಾಗಿರುವ ಸಾರಜನಕದ ಪೂರೈಕೆಯೊಂದಿಗೆ ಉತ್ತಮ ಫಲಿತಾಂಶ ಪಡೆಯಬಹುದು ಎಂಬುದನ್ನು 'ಗುಟುಕು ನೀರಾವರಿ:ಒಣ ಬೇಸಾಯದ ರೈತರಿಗೊಂದು ವರದಾನ' ವಸಂತ್ ಮಾಲವಿರವರು ತಿಳಿಸಿದ್ದಾರೆ.

ಭೂಮಿಯ ಮೇಲ್ಪದರವು ಫಲವತ್ತಾದ ಮಣ್ಣಿನಿಂದ ಕೂಡಿದ್ದು ಎಲ್ಲಾ ರೀತಿಯ ಬೆಳೆಗಳ ಬೆಳವಣಿಗೆಗೆ ಪ್ರಶಸ್ತವಾದುದಾಗಿದೆ. ಹೀಗಾಗಿ ಈ ಫಲವತ್ತಾದ ಮಣ್ಣನ್ನು ರಕ್ಷಿಸುವ ದೃಷ್ಟಿಯಿಂದ ಬೇಸಿಗೆಯ ಸಮಯದಲ್ಲಿ ಒಂದು ಬೆಳೆಯ ಕಟಾವಿನ ನಂತರ ಬರಿದಾದ ಭೂಮಿಯಲ್ಲಿ ಆಳವಾಗಿ ಚೆನ್ನಾಗಿ ಉಳುಮೆ ಮಾಡುವ ಮಾಗಿ ಉಳುಮೆಯ ಉಪಯೋಗವನ್ನು 'ಬೇಸಿಗೆಯಲ್ಲಿ ಮಾಗಿ ಉಳುಮೆಯ ಉಪಯೋಗಗಳು' ಎಂಬ ಲೇಖನದಲ್ಲಿ ಓಂಕಾರ ಕಾಕಡೆಯವರು ತಿಳಿಸಿದರೆ, ಅನಿವಾರ್ಯವಾಗಿ ಉಪಯೋಗಿಸಲೇಬೇಕಾದ ಕೀಟನಾಶಕಗಳನ್ನು ಅತ್ಯಂತ ವಿವೇಕದಿಂದ ಉಪಯೋಗಿಸಬೇಕೆಂಬ ಮುಂಜಾಗ್ರತೆಯನ್ನು 'ಕೃಷಿ ರಾಸಾಯನಿಕಗಳು' ಎಂಬ ಲೇಖನದಲ್ಲಿ ಸೋಮಶೇಖರ ಎಸ್ ರುಳಿರವರು ತಿಳಿಸಿದ್ದಾರೆ. ಸಾಮಾನ್ಯವಾಗಿ ಹಸುಗಳು ಅನುಭವಿಸುವ ಸಮಸ್ಯೆಗಳನ್ನು 'ಪುಣ್ಯಕೋಟಿಯ ಕಷ್ಟಕೋಟಲೆಗಳು' ಎಂಬಲ್ಲಿ ಅನಿಲಕುಮಾರ ಮುಗಳಿರವರು ತಿಳಿಸಿದರೆ, 'ಒಣಮೇವಿನ ಶೇಖರಣೆಗೆ ವೈಜ್ಞಾನಿಕ ವಿಧಾನದ ಅಳವಡಿಕೆಯ' ಬಗ್ಗೆ ಆರ್.ಎಸ್.ಪಾಟೀಲರವರು ಹಾಗೂ 'ಹಾಲು ವಿತರಣೆಗೆ ಸುರಕ್ಷಿತ ಪದ್ಧತಿಯ' ಬಗ್ಗೆ ಡಾ.ಎ.ಮುರುಗಪ್ಪರವರು ತಿಳಿಸಿದ್ದಾರೆ.

ಎಂ.ಕೆ ರಾಮಸ್ವಾಮಿರವರಿಂದ ವಿರಚಿತ 'ಜ್ಞಾನ ವಿಜ್ಞಾನ' ಕೃತಿಯಲ್ಲಿ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಅನೇಕ ಮಹತ್ವದ ಲೇಖನಗಳಿವೆ. ಯಾವ ಭೂಮಿಗೆ ಯಾವ ಗೊಬ್ಬರ ಹಾಕಿದರೆ ಉತ್ತಮ ಇಳುವರಿ ಬರುತ್ತದೆ ಹಾಗೂ ಯಾವ ಭೂಮಿಗೆ ಯಾವ ಬೆಳೆ ಸೂಕ್ತ ಎಂಬುದನ್ನು ಕಂಡುಕೊಳ್ಳಲು, ಗಿಡಗಳನ್ನು ಕೀಟಬಾಧೆಯಿಂದ ತಡೆಯಲು, ದವಸ ಧಾನ್ಯಗಳಿಗೆ ಕ್ರಿಮಿ ಕೀಟಗಳು ತಗುಲದಂತೆ ತಡೆಯಲು ಮತ್ತು ಹಣ್ಣು ತರಕಾರಿಗಳು ಕೊಳೆಯದಂತೆ ಮಾಡಲು ರೇಡಿಯೋ ರಂಜಕವು ಬಹು ಉಪಯೋಗಕಾರಿ ಎಂಬುದನ್ನು ಎಂ.ಕೆ.ರಾಮಸ್ವಾಮಿರವರ 'ಜ್ಞಾನ ವಿಜ್ಞಾನ'ದಲ್ಲಿನ ಲೇಖನವಾದ 'ರೇಡಿಯೋ ಐಸೋಟೋಪುಗಳು' ತಿಳಿಸುವುದು.

ವಸುಂಧರಾ ಭೂಪತಿಯವರ ಸಂಪಾದಕತ್ವದ 'ವಿಜ್ಞಾನ ಸಾಹಿತ್ಯ ೨೦೧೦' ರಲ್ಲಿ ತಿಳಿಸಿರುವಂತೆ, ಆವಿಷ್ಕಾರ ಅನ್ವೇಷಣೆ ಸಂಶೋಧನೆಗಳು ಪ್ರತಿಯೊಂದು ಕ್ಷೇತ್ರದಲ್ಲೂ ಒಂದಲ್ಲ ಒಂದು ರೀತಿಯಲ್ಲಿ ಆಗುತ್ತಿರುವುದರಿಂದ ಸಮಾಜಕ್ಕೆ ಅನುಕೂಲವಾಗುತ್ತಿದ್ದು ಪ್ರಗತಿಪರ ವಾತಾವರಣ ಸೃಷ್ಟಿಯಾಗುವಂತಾಗಿದೆ. ಭಾರತದ ಆರ್ಥಿಕತೆಯ ಬೆನ್ನೆಲುಬಾದ ಕೃಷಿ ಕ್ಷೇತ್ರದಲ್ಲಂತು ವಿಶೇಷ ಆವಿಷ್ಕಾರಗಳು ನಡೆಯುತ್ತಿದ್ದು, ಇನ್ನೂ ನಡೆಯುತ್ತಿವೆ. ಅಂತಹ ಒಂದು ಆವಿಷ್ಕಾರವೇ Bt/ಬಿ.ಟಿ ಬದನೆ ಎಂಬ ಕೀಟನಾಶಕದ ಜೊತೆಗೆ ಬದನೆಯನ್ನು ನೀಡುವ ಕುಲಾಂತರಿ ತರಕಾರಿಯಾಗಿದೆ. ಭಾರತದಲ್ಲಿ ಆಲೂಗಡ್ಡೆಯ

ನಂತರ ಅತಿಹೆಚ್ಚಿನ ಸಂಖ್ಯೆಯಲ್ಲಿ ಬಳಸುವ ತರಕಾರಿ ಎಂದರೆ ಬದನೆ. ಸಾಮಾನ್ಯವಾಗಿ ಬದನೆಯು ಹೆಚ್ಚಿನದಾಗಿ ಕಾಂಡಕೋರಕ ಮತ್ತು ಕಾಯಿಕೋರಕ ಕೀಟಗಳ ಬಾಧೆಗೆ ಬಹಳಷ್ಟು ಫಸಲು ಒಳಗಾಗಿ ರೈತರಿಗೆ ಗರಿಷ್ಠ ಬೆಳೆಯನ್ನು ಪಡೆಯುವಲ್ಲಿ ತೊಂದರೆಯಾಗಿತ್ತು. ಹೀಗಾಗಿ ರೈತರನ್ನು ಈ ತೊಂದರೆಯಿಂದ ರಕ್ಷಿಸಲು, ೩೮/ಬಿ.ಟಿ ಎಂಬ ಕುಲಾಂತರಿ ತರಕಾರಿಯು ನೈಸರ್ಗಿಕವಾಗಿ ಆವಿಷ್ಕಾರ ಗೊಂಡಿತು.

Bt/ಬಿ.ಟಿ ಎಂಬ ತರಕಾರಿಯು ಮಣ್ಣಿನಲ್ಲಿ ಜೀವಿಸುವ bacillus thuringiensis ಎಂಬ ಬ್ಯಾಕ್ಟೀರಿಯಾವಾಗಿದ್ದು, ಇದರ ಜೀನನ್ನು ತೆಗೆದು ಕೃತಕವಾಗಿ ಬದನೆ ಗಿಡಕ್ಕೆ ಸೇರಿಸುವ ಮೂಲಕ ಸಾಮಾನ್ಯವಾಗಿ ಸಸ್ಯಗಳಿಗೆ ಮಾರಕವಾದ ಕಾಂಡಕೋರಕ ಮತ್ತು ಕಾಯಿಕೋರಕ ಕೀಟದ ಬಾಧೆಯಿಂದ ಬದನೆಯನ್ನು ರಕ್ಷಿಸಿ, ಉತ್ತಮ ಫಸಲನ್ನು ಪಡೆಯಲು Bt/ಬಿ.ಟಿ ಸಸಿಯು ಸಹಕಾರಿಯಾಗಿದೆ. ಅಂದರೆ Bt/ಬಿ.ಟಿ ಎಂಬುದೊಂದು ಕೀಟನಾಶಕ ಬ್ಯಾಕ್ಟೀರಿಯಾವಾಗಿದ್ದು, ಇದೊಂದು ಪ್ರಕೃತಿದತ್ತವಾದುದಾಗಿದೆ. ಇದನ್ನು ಯಾವುದೇ ಕೃತಕತೆ ಇಲ್ಲದೆ ನೈಸರ್ಗಿಕವಾಗಿ ಗಿಡದಲ್ಲಿ ಸೇರಿಸುವುದರಿಂದ ಆರೋಗ್ಯಕ್ಕೆ ಯಾವುದೇ ಅಪಾಯಕಾರಿ ತೊಂದರೆಯಾಗುವುದಿಲ್ಲವೆಂದು ವಿಜ್ಞಾನಿಗಳು ಅಭಿಪ್ರಾಯ ಪಟ್ಟಿರುವುದನ್ನು ವಿವರಿಸುವುದರೊಂದಿಗೆ ಕೃತಕತೆಗಿಂತ ಪ್ರಕೃತಿಯಲ್ಲಿನ ನೈಜ ವಿಧಾನಕ್ಕೆ ಮೊರೆ ಹೋದರೆ ಯಾವುದೇ ಅಪಾಯವಿಲ್ಲ ಎಂಬುದನ್ನು ಲೇಖಕರಾದ ಡಾ.ಟಿ.ಎಸ್.ಚನ್ನೇಶ್‌ರವರು 'Bt/ಬಿ.ಟಿ ಬದನೆ ಎಂಬ ಮೊದಲ ಕುಲಾಂತರಿ ತರಕಾರಿ' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

"ಬೆಳೆಯುವ ಸಿರಿ ಮೊಳಕೆಯಲ್ಲಿಯೇ" ಎಂಬಂತೆ ಕೃಷಿಯ ಬಗೆಗೆ ಅಸಕ್ತಿ ಅಭಿರುಚಿಯನ್ನು ಮೂಡಿಸುವ ಹಾಗೂ ಕೃಷಿ ವಿಜ್ಞಾನದ ಬಗ್ಗೆ ಪರಿಚಯಿಸುವ ದೃಷ್ಟಿಯಿಂದ ಜಿ.ಕೆ ವೀರೇಶ್ ಹಾಗೂ ಅಡ್ಡೂರು ಕೃಷ್ಣ ರಾವ್‌ರವರು 'ಕೃಷಿ ವಿಜ್ಞಾನ' ಕೃತಿಯಲ್ಲಿ ಉತ್ತಮವಾದ ಮಾಹಿತಿಯನ್ನು ನೀಡಿದ್ದಾರೆ. ಸಾಮಾನ್ಯವಾಗಿ ಮಕ್ಕಳಲ್ಲಿ ಕುತೂಹಲ ಹೆಚ್ಚಿದ್ದು ಪ್ರಕೃತಿಯಲ್ಲಿನ ಪ್ರತಿಯೊಂದು ಬದಲಾವಣೆಯನ್ನು ವಿಶೇಷ ದೃಷ್ಟಿಯಿಂದ ನೋಡುತ್ತಾರೆ. ಅದರಲ್ಲೂ ಬೀಜ ಬಿರಿದು ಮೊಳಕೆ ಒಡೆಯುವಾಗ ಅವರಿಗೆ ಆಗುವ ಆಶ್ಚರ್ಯದ ಮುಂದೆ ಇನ್ಯಾವ ಅದ್ಭುತವು ಸರಿಸಮವಲ್ಲ. ಹೀಗಾಗಿ ಓದುವ ಮಕ್ಕಳನ್ನು ದೃಷ್ಟಿಯಲ್ಲಿಟ್ಟುಕೊಂಡು ಲೇಖಕರು 'ಕೃಷಿ ವಿಜ್ಞಾನ' ಕೃತಿ ರಚಿಸಿರುವುದನ್ನು ಗಮನಿಸಬಹುದು. ಆದರೆ ಈ ಕೃತಿಯು ಹೊಸದಾಗಿ ಕೃಷಿ ಮಾಡುವವರಿಗೂ ಹಾಗೂ ಕೃಷಿಯ ಬಗ್ಗೆ ತಿಳಿಯದವರಿಗೂ ಉತ್ತಮ ಮಾಹಿತಿಯನ್ನು ಸರಳ ಸುಲಭ ಶೈಲಿಯಲ್ಲಿ ನೀಡುವುದನ್ನು ಕಾಣಬಹುದು.

'ಕೃಷಿ ವಿಜ್ಞಾನ' ಕೃತಿಯಲ್ಲಿ ಕೃಷಿಗೆ ಸಂಬಂಧಿಸಿದ ಒಟ್ಟು ೨೫ ಲೇಖನಗಳಿದ್ದು ಪ್ರತಿಯೊಂದು ಲೇಖನವು ಬೆಲೆಬಾಳುವ ಮುತ್ತಿನಂತೆ ಅಧ್ಯಯನಯೋಗ್ಯ ವಿಶೇಷ ಮಾಹಿತಿಯಿಂದ ಕೋಡಿದೆ. ಕೃಷಿಯ ಪ್ರಾರಂಭದಿಂದ ಹಿಡಿದು ಭಾರತದಲ್ಲಿ ಕೃಷಿಯ ಕಾಲಘಟ್ಟ, ಕರ್ನಾಟಕದಲ್ಲಿ ಕೃಷಿ, ಕೃಷಿಯ ಮಣ್ಣು, ಕೃಷಿಯಲ್ಲಿ ನೀರಿನ ಬಳಕೆ ಅಗತ್ಯ ನಿರ್ವಹಣೆ, ಗೊಬ್ಬರದ ಅಗತ್ಯ ಬಳಕೆ, ಜೈವಿಕ ಗೊಬ್ಬರ ಮತ್ತು ಎರೆಗೊಬ್ಬರದ ತಯಾರಿ ಮತ್ತು ಉಪಯೋಗ, ನೈಸರ್ಗಿಕವಾಗಿ ಕಾಂಪೋಸ್ಟ್ ಮಾಡುವ ವಿಧಾನ, ಕೃಷಿಯಲ್ಲಿನ ಇತರ ವೃತ್ತಿಗಳಾದ ತೋಟಗಾರಿಕೆ, ಪ್ಲಾಂಟೇಷನ್, ಜೇನ್ನೊಣ ಸಾಕಣೆ, ಹೈನುಗಾರಿಕೆ, ಮೀನುಗಾರಿಕೆ ಮೊದಲಾದವುಗಳ ಪರಿಚಯದೊಂದಿಗೆ ಸಾವಯವ ಕೃಷಿ ಹಾಗೂ ಕೃಷಿ ಉಪಕರಣಗಳು, ಕೃಷಿ ಮಾರುಕಟ್ಟೆ ಮೊದಲಾದ ಬಹು ಅಗತ್ಯ ಕೃಷಿ ಮಾಹಿತಿಯನ್ನು ವಿವರವಾಗಿ ಸರಳವಾದ ಮಾತುಗಳಲ್ಲಿ ಸುಲಭೀಕರಿಸಿ ಲೇಖಕರು ನೀಡಿರುವುದರಿಂದ ಸಾಮಾನ್ಯವಾಗಿ ಎಲ್ಲರಿಗೂ ಅರ್ಥವಾಗುವಂತಿದ್ದು, ಕೃಷಿಯ ಬಗ್ಗೆ ಒಲವು ಮೂಡಿ ಕೃಷಿಯ ವಿಷಯದ ಬಗ್ಗೆ ಜ್ಞಾನ ವೃದ್ಧಿಯಾಗಲು ಸಹಕಾರಿಯಾದುದನ್ನು ಕೃಷಿ ವಿಜ್ಞಾನ ಕೃತಿಯಲ್ಲಿ ಕಂಡು ಕೊಳ್ಳಲಾಯಿತು.

'ವಿಜ್ಞಾನ–ತಂತ್ರಜ್ಞಾನ–ಕರ್ನಾಟಕದಲ್ಲಿ' ಎಂಬಲ್ಲಿನ 'ಕೃಷಿ ವಿಜ್ಞಾನ' ಎಂಬ ಲೇಖನದಲ್ಲಿ ಸಾವಿರಾರು ವರ್ಷಗಳ ಇತಿಹಾಸವಿರುವ ನಮ್ಮ ಆಹಾರ ಬೆಳೆಗಳು ಮನುಷ್ಯನ ಸ್ವಇಚ್ಛೆಯಿಂದ ಬದಲಾವಣೆಗೆ ಒಳಗಾಗಿ ತನ್ನ ಉಳಿವಿಗಾಗಿ ಮನುಷ್ಯನನ್ನು ಅವಲಂಬಿಸುವ ಸ್ಥಿತಿ ಉಂಟಾಗಿದೆ. ಆಹಾರ ಬೆಳೆಗಳು ಮನುಷ್ಯನ ದುರಾಸೆಗೆ ಒಳಗಾಗಿ ನೈಸರ್ಗಿಕವಾದ ತಮ್ಮ ನಿರೋಧಕ ಗುಣವನ್ನು ಕಳೆದುಕೊಂಡು ಕ್ರಿಮಿ–ಕೀಟನಾಶಕಗಳ ಬಳಕೆಯ ಅನಿವಾರ್ಯತೆಗೆ ಒಳಗಾಗಿದೆ. ಇದರಿಂದ ಮಾನವನ ಆರೋಗ್ಯದ ಮೇಲೆ ದುಷ್ಪರಿಣಾಮವಾಗುವುದನ್ನು ಮನಗಂಡ ವಿಜ್ಞಾನಿಗಳು ಕುಲಾಂತರಿ ಬೆಳೆಗಳ ಆವಿಷ್ಕಾರಕ್ಕೆ ಮುಂದಾಗಿದ್ದಾರೆ. ಆದರೆ ಈ ಕುಲಾಂತರಿ ಆಹಾರ ವಸ್ತುಗಳ ಉಪಯೋಗದಿಂದ ಮಾನವನ ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗುವುದೆಂಬ ತಪ್ಪು ಕಲ್ಪನೆಯಿಂದಾಗಿ ನಮ್ಮ ದೇಶದಲ್ಲಿ ಕುಲಾಂತರಿ ಸಸಿಗಳ ಕೃಷಿಗೆ ಮೀನ ಮೇಷ ಎಣಿಸುವಂತಾಗಿದೆ.

ಬಹಳಷ್ಟು ವಿಜ್ಞಾನಿಗಳು ಅಭಿಪ್ರಾಯ ಪಟ್ಟಂತೆ ಕುಲಾಂತರಿ ಬೆಳೆಗಳಿಗೆ ಪರಿಸರಸ್ನೇಹಿ ಹಸಿರುಕ್ರಾಂತಿಯನ್ನುಂಟು ಮಾಡುವ ಸಾಮರ್ಥ್ಯವಿದೆ. "ಕುಲಾಂತರಿ ಬಿಟಿ ತಳಿಗಳ ಬಳಕೆಯಿಂದಾಗಿ ೧೫ ವರ್ಷಗಳಲ್ಲಿ ಸುಮಾರು ನಾಲ್ಕು ಲಕ್ಷ ಟನ್ ಕೀಟನಾಶಕಗಳ ಬಳಕೆ ತಪ್ಪಿದೆ"[೭] ಎಂದು ಲೇಖಕರು ತಿಳಿಸುತ್ತಾರೆ. ಅಲ್ಲದೆ ಕುಲಾಂತರಿ ಬೆಳೆಗಳಾದ ಅಧಿಕ ಪೋಷಕಾಂಶವುಳ್ಳ ಕಿತ್ತಳೆ ಬಣ್ಣದ ಸಿಹಿಗೆಣಸು, ವೈರಾಣು ರೋಗ ನಿರೋಧಕ

ಮರಗೆಣಸು, ಎ ವಿಟಮಿನ್‌ಭರಿತ ಬಂಗಾರದ ಭತ್ತ ಮೊದಲಾದವುಗಳಿಂದ ಗಣನೀಯವಾಗಿ ಕೃಷಿ ಮತ್ತು ಆಹಾರ ಪದ್ಧತಿಗಳನ್ನು ವೃದ್ಧಿಸಬಹುದು. ಊಹಾ ಪೋಹಗಳಿಗೆ ನಮ್ಮ ಸರ್ಕಾರವು ಒಳಗಾಗಿ ಕುಲಾಂತರಿ ಬೆಳೆಗಳಿಗೆ ಆಧ್ಯತೆ ನೀಡದಿದ್ದರೆ, ಅತಿಯಾದ ಕ್ರಿಮಿ-ಕೀಟನಾಶಕಗಳ ಹಾಗೂ ರಸಗೊಬ್ಬರಗಳ ಬಳಕೆಯಿಂದ ಅಗತ್ಯವಿರುವಷ್ಟು ಬೆಳೆಯನ್ನು ಬೆಳೆಯಲು ಸಾಧ್ಯವಿಲ್ಲ.

ಕುಲಾಂತರಿ ಬೆಳೆಗಳು ಎಲ್ಲಾ ಕೃಷಿ ಸಮಸ್ಯೆಗಳಿಗೆ ಪರಿಹಾರವಾಗಲಿಕ್ಕಿಲ್ಲ. ಆದರೆ ಇಳುವರಿ ಹೆಚ್ಚಿಸಲು ಹಾಗೂ ಪೌಷ್ಟಿಕಾಂಶಗಳ ಮೌಲ್ಯವರ್ಧನೆಗೆ ನೇರವಾಗಿ ಕ್ರಿಮಿ ಕೀಟನಾಶಕಗಳ ರಸಗೊಬ್ಬರಗಳ ಅತಿ ಬಳಕೆಯನ್ನು ತಡೆದು ನೀರಿನ ಸಮರ್ಪಕ ಬಳಕೆಗೆ ಸಹಾಯಕವಾಗುವ ಹಾಗೂ ಪರಿಸರದ ನೈಸರ್ಗಿಕ ವಿಜ್ಞಾನದ ಲಾಭಗಳನ್ನು ನೀಡುವ ಕುಲಾಂತರಿ ಬೆಳೆಗಳು ಭವಿಷ್ಯದಲ್ಲಿ ಆಹಾರದ ಕೊರತೆಯನ್ನು ನೀಗಿಸುವ ಬೆಳೆಯಾಗುವಲ್ಲಿ ಯಾವುದೇ ಸಂದೇಹವಿಲ್ಲ. ಹೀಗಾಗಿ ಅನವಶ್ಯಕ ಭಯ, ಪ್ರೇರಿತ ಕಲ್ಪನೆಗಳಿಗೆ ಒಳಗಾಗಿ ಅಪಾರ ಸಾಮರ್ಥ್ಯವುಳ್ಳ ಕುಲಾಂತರಿ ಬೆಳೆಯನ್ನು, ತಂತ್ರಜ್ಞಾನದ ಬಳಕೆಯಿಂದಾಗಿ ರೈತರು ವಂಚಿತರಾಗಿ ಮೂರ್ಖರಾಗಬಾರದು ಎಂದು ಲೇಖಕರಾದ ಶರಣ ಬಸವೇಶ್ವರ ಅಂಗಡಿರವರು ಕುಲಾಂತರಿ ಬೆಳೆಯ ಗುಣಾವಗುಣ ಹಾಗೂ ಅಗತ್ಯತೆಯನ್ನು ಹೇಳುತ್ತಾ ವಿಜ್ಞಾನ ತಂತ್ರಜ್ಞಾನದ ಆವಿಷ್ಕಾರವು ಜನತೆಯ ಒಳಿತಿಗಾಗಿಯೇ ಹೊರತು ಕೆಡುಕಿಗಾಗಿ ಅಲ್ಲ. ಯಾವುದೇ ವಿಜ್ಞಾನದ ಆವಿಷ್ಕಾರವು ಬಹಳಷ್ಟು ಸಾರಿ ಪ್ರಯೋಗಕ್ಕೆ ಒಳಪಟ್ಟು ಒಂದು ದೃಡ ನಿರ್ಧಾರಕ್ಕೆ ಬರುವುದರಿಂದ, ಕೆಲವು ವಿಧಿ ವಿದಾನಗಳಿಗೆ ಒಳಪಟ್ಟು ಹೆಚ್ಚು ಪ್ರಯೋಜನ ಪಡೆಯುವುದು ಜಾಣತನ ಎಂದು 'ಕುಲಾಂತರಿ ಬೆಳೆಗಳು' ಲೇಖನದಲ್ಲಿ ಉತ್ತಮವಾದ ಮಾಹಿತಿಯನ್ನು ನೀಡಿರುವುದನ್ನು ಕಾಣಬಹುದು.

ಕೃಷಿ ಎಂಬುದು ಕೇವಲ ಒಂದು ಜೀವನಾಧಾರ ವೃತ್ತಿಯಾಗಿರದೆ, ಅದೊಂದು ವಿಜ್ಞಾನ ಎಂಬುದನ್ನು ಕೃಷಿ ವಿಜ್ಞಾನ ಸಾಹಿತಿಗಳು ವ್ಯಕ್ತಪಡಿಸಿದ್ದಾರೆ. ಅಲ್ಲದೇ, ಕೃಷಿ ವಿಜ್ಞಾನ ಸಾಹಿತ್ಯದಲ್ಲಿ ಕೃಷಿಗೆ ಮತ್ತು ಕೃಷಿಯಲ್ಲಿನ ಉಪ ಕಸುಬುಗಳಿಗೆ ಸಂಬಂಧಿಸಿದಂತೆ ಅಗತ್ಯ ಹಾಗೂ ಬಹು ಉಪಯೋಗಕಾರಿ ಮಾಹಿತಿಯನ್ನು ಲೇಖಕರು ಜನಪ್ರಿಯ ಹಾಗೂ ಸರಳವಾಗಿ ತಿಳಿಸಿದ್ದಾರೆ.

೫.೩ ಆರೋಗ್ಯ ವಿಜ್ಞಾನ

"ಆರೋಗ್ಯವೇ ಭಾಗ್ಯ" ಎಂಬಂತೆ ಮನುಷ್ಯನಿಗೆ ಅತ್ಯಮೂಲ್ಯವಾದ ಸಂಪತ್ತು ಆಸ್ತಿಯೇ ಆರೋಗ್ಯ. ಮಾನಸಿಕ ಹಾಗೂ ದೈಹಿಕವಾಗಿ ಸದೃಢವಾಗಿರುವುದನ್ನು ಸೂಚಿಸುವುದೇ

ಆರೋಗ್ಯ. ಹೀಗಾಗಿ ಆದಿಕಾಲದಿಂದ ಹಿಡಿದು ಇಂದಿನ ೨೦ನೇ ಶತಮಾನದವರೆಗೂ ಆರೋಗ್ಯದ ಬಗೆಗಿನ ಮಾಹಿತಿ ನೀಡುವಲ್ಲಿ ಮತ್ತು ಪಡೆಯುವಲ್ಲಿ ಆರೋಗ್ಯ ಕ್ಷೇತ್ರದ ಪಾತ್ರವು ಹಿರಿದಾದುದು. ಪ್ರತಿಯೊಂದು ಕ್ಷೇತ್ರದ ನಿರ್ವಹಣೆಯಲ್ಲಿ ಆರೋಗ್ಯ ಪಾಲನೆಯು ಒಂದು ಪೂರಕ ಹಾಗೂ ಪ್ರೇರಕ ಭಾಗವಾಗಿ ಪಾತ್ರ ವಹಿಸುವುದು. ಪ್ರಾಚೀನ ಕಾಲದಿಂದಲೂ ಆರೋಗ್ಯ ಪಾಲನೆ ಮತ್ತು ಆರೋಗ್ಯಕ್ಕೆ ಸಂಬಂಧಿಸಿದ ವಿಚಾರಗಳು ಬಹು ಮೌಲ್ಯಯುತವಾಗಿವೆ.

ಬಹಳಷ್ಟು ಆರೋಗ್ಯ ಸಂಬಂಧಿ ವಿಚಾರಗಳು, ಅಚ್ಚರಿ, ನಿಗೂಢತೆ, ವಿಸ್ಮಯಕಾರಿ ಅಂಶಗಳಿಂದ ಕೂಡಿದ್ದು, ಸಾಮಾನ್ಯನಿಗೆ ನಿಲುಕದ ವಿಚಾರವಾಗಿತ್ತು. ಹೀಗಾಗಿ ಆರೋಗ್ಯ ವಿಜ್ಞಾನದ ವಿಷಯಗಳನ್ನು ಹೇಳುವಲ್ಲಿ ಪರಿಣಿತರ ಅಭಿವ್ಯಕ್ತಿ ಸಾಮರ್ಥ್ಯವು ಹೆಚ್ಚು ಮಾನ್ಯತೆ ಪಡೆದಿತ್ತು. ವೈದ್ಯ, ಆರೋಗ್ಯ ವಿಚಾರಗಳನ್ನು ಮಂಡಿಸುವ ಸಾಹಿತಿಯು ಖಚಿತತೆ, ಉತ್ಸುಕತೆಯಿಂದ ಕೂಡಿದ್ದು, ಸ್ಪಷ್ಟ ಸರಳ ಭಾಷೆಯಲ್ಲಿ ಲೇಖನಗಳ ರಚನೆಯನ್ನು ಮಾಡಿ, ಜನಸಾಮಾನ್ಯನೆಡೆಗೆ ವೈದ್ಯಕೀಯ ಮಾಹಿತಿಯನ್ನು ತಲುಪಿಸುವ ಪ್ರಯತ್ನವನ್ನು ಮಾಡಿರುವರು.

ಈ ನಿಟ್ಟಿನಲ್ಲಿ ಬಹುಶಃ ಉಳಿದೆಲ್ಲ ವಿಜ್ಞಾನ ಕೃತಿಗಳಿಗೆ ಹೋಲಿಸಿದರೆ ವೈದ್ಯ ವಿಜ್ಞಾನ ಸಾಹಿತ್ಯದ ಕೃತಿಗಳ ಸಂಖ್ಯೆ ಅಧಿಕವಾಗಿದೆ. ರಚನೆ ಹಾಗೂ ವಿಷಯ ವಿಚಾರದ ದೃಷ್ಟಿಯಿಂದ ಕನ್ನಡದಲ್ಲಿ ಆರೋಗ್ಯ ಸಾಹಿತ್ಯವು ಪ್ರಮುಖವಾಗಿ ಎರಡು ವಿಭಾಗಗಳಿಂದ ಕೂಡಿರುವುದನ್ನು ಕಾಣಬಹುದು. ಒಂದು ಶಾಸ್ತ್ರೀಯ ಆರೋಗ್ಯ ಸಾಹಿತ್ಯವಾದರೆ, ಮತ್ತೊಂದು ಜನಪ್ರಿಯ ಆರೋಗ್ಯ ಸಾಹಿತ್ಯ. ಇದಲ್ಲದೆ ಆಯುರ್ವೇದ ಆರೋಗ್ಯ ಸಾಹಿತ್ಯ, ಹೋಮಿಯೋಪತಿ ಆರೋಗ್ಯ ಸಾಹಿತ್ಯ, ಯೂನಾನಿ ಆರೋಗ್ಯ ಸಾಹಿತ್ಯ, ಪರ್ಯಾಯ ಆರೋಗ್ಯ ಸಾಹಿತ್ಯ (ಯೋಗ ಹಾಗೂ ಪ್ರಕೃತಿ ಚಿಕಿತ್ಸೆ) ಮೊದಲಾದ ಪ್ರಕಾರಗಳನ್ನು ಕಾಣಬಹುದು.

ಕೇವಲ ವಿಷಯ ಪರಿಣಿತ ಪಂಡಿತ ವಿದ್ವಾಂಸರು ಮಾತ್ರ ಓದಿ ಅರ್ಥೈಸಿಕೊಳ್ಳಬಹುದಾದ ಅಂದರೆ ವೈದ್ಯರಿಂದ ವೈದ್ಯರಿಗಾಗಿ ವೈದ್ಯರಿಗೋಸ್ಕರ ರಚಿತವಾದ ಕೃತಿಗಳು 'ಶಾಸ್ತ್ರೀಯ ಆರೋಗ್ಯ ಕೃತಿಗಳು'. ಈ ಕೃತಿಗಳು ವಿಷಯ ಮಂಡನೆ ಹಾಗೂ ರಚನಾ ಶೈಲಿಯಿಂದಾಗಿ ಜನಸಾಮಾನ್ಯರಿಗೆ ಅಷ್ಟು ರುಚಿಸುವುದಿಲ್ಲ. ಶ್ರೀಸಾಮಾನ್ಯನ ಜ್ಞಾನಕ್ಕೆ ಎಟುಕುವಂತಿರಲಿಲ್ಲ. ಕೃತಿಗಳಲ್ಲಿನ ವಿಷಯಗಳನ್ನು ಓದಿ ಅರ್ಥೈಸಿಕೊಳ್ಳಲು ಸಾಮಾನ್ಯನು ತಾಂತ್ರಿಕ ವೈಜ್ಞಾನಿಕ ಪದಗಳ ಮೊರೆ ಹೋಗಬೇಕಾಗಿತ್ತು. ಕೃತಿಗಳ ರಚನಾ ಶೈಲಿಯು ಆಕರ್ಷಕವಾಗಿ, ಸರಳವಾಗಿ, ರೋಚಕವಾಗಿ, ಆಕರ್ಷಕವಾಗಿ, ವರ್ಣನಾತ್ಮಕವಾಗಿ, ರಸಮಯವಾಗಿರುತ್ತಿರಲಿಲ್ಲ. ಶ್ರೀಸಾಮಾನ್ಯನಿಗೆ ವಿಚಾರಗಳು ಕಬ್ಬಿಣದ ಕಡಲೆಯಂತಾಗಿತ್ತು. ಹೀಗಾಗಿ ಈ ಎಲ್ಲಾ

ಕೃತಿಗಳಿಂದ ಸಾಮಾನ್ಯನು ದೂರವಾಗುತ್ತಾ ಹೋದನು. ಇದಕ್ಕೆ ತದ್ವಿರುದ್ಧವಾಗಿ ಈಗ ರಚಿಸುತ್ತಿರುವ ಆರೋಗ್ಯ ವಿಜ್ಞಾನ ಸಾಹಿತ್ಯವು ಜನಪ್ರಿಯ ಆರೋಗ್ಯ ಸಾಹಿತ್ಯವಾಗಿದ್ದು, ಹೆಸರೇ ಸೂಚಿಸುವಂತೆ ಜನಪ್ರಿಯತೆ ಪಡೆದಿರುವ ಸಾಹಿತ್ಯವಾಗಿದೆ.

ಆರೋಗ್ಯ ವಿಜ್ಞಾನ ಸಾಹಿತ್ಯವನ್ನು ರಚಿಸಿದವರಲ್ಲಿ ವೈದ್ಯ ಕ್ಷೇತ್ರದಲ್ಲಿ ಪರಿಣಿತಿ ಪಡೆದ ಲೇಖಕಿಯರಾದ ತ್ರಿವೇಣಿ ಹಾಗೂ ಅನುಪಮ ನಿರಂಜನರವರು ಮೊದಲಿಗರಾದ ಕಾರಣ ಇವರನ್ನು ಆರೋಗ್ಯ ವಿಜ್ಞಾನ ಸಾಹಿತ್ಯದ ಆಧ್ಯ ಪ್ರವರ್ತಕರೆಂದು ಕರೆಯುತ್ತಾರೆ. ಇವರು ಹಾಕಿಕೊಟ್ಟ ಹಾದಿಯಲ್ಲಿ ಬಹಳಷ್ಟು ಸಾಹಿತಿಗಳು ಸಾಹಿತ್ಯ ಕೃಷಿಯನ್ನು ಮಾಡುತ್ತಿದ್ದು, ಆರೋಗ್ಯದ ಬಗೆಗೆ ಮಾಹಿತಿಯನ್ನು ಜಾಗೃತಿಯನ್ನು ಸರಳ ಸ್ಪಷ್ಟ ಅಭಿವ್ಯಕ್ತಿ ಸ್ವರೂಪದಲ್ಲಿ ಪ್ರಕಟಿಸುತ್ತಿದ್ದಾರೆ. ಈ ರೀತಿ ರಚನೆಯಾದ ಆರೋಗ್ಯ ವಿಜ್ಞಾನ ಸಾಹಿತ್ಯವು ಆರೋಗ್ಯದ ತಿಳುವಳಿಕೆ ಮತ್ತು ಜಾಗೃತಿ ಮೂಡಿಸುವುದು ಎರಡೂ ಮುಖ್ಯವಾದ ಆಶಯದಿಂದ ಕೂಡಿರುವುದನ್ನು ಕಾಣಬಹುದು. ಈ ಎರಡು ಮೂಲ ಉದ್ದೇಶವನ್ನು ಸರಿದೂಗಿಸುವಲ್ಲಿ ಆರೋಗ್ಯ ವಿಜ್ಞಾನ ಸಾಹಿತ್ಯದ ಪಾತ್ರವು ಮಹತ್ವದ್ದಾಗಿದೆ. ಇದಕ್ಕೆ ಸರಿಹೊಂದುವ ಅಗತ್ಯ ಲೇಖನಗಳನ್ನು ಸೃಷ್ಟಿಸುವಲ್ಲಿ ಆರೋಗ್ಯ ವಿಜ್ಞಾನ ಸಾಹಿತಿಗಳು ಯಶಸ್ವಿಯಾಗಿದ್ದಾರೆ.

ತಿಳುವಳಿಕೆ ಹಾಗೂ ಮಾಹಿತಿಯ ಅಭಾವದಿಂದಾಗಿ ಹಿಂದಿನ ಸಮಾಜದಲ್ಲಿದ್ದ ಮಹಾಮಾರಿ ಸಾಂಕ್ರಾಮಿಕ ರೋಗಗಳಾದ ಮಲೇರಿಯಾ, ಪ್ಲೇಗು, ಕ್ಷಯಾ, ಸಿಡುಬು ಮೊದಲಾದವುಗಳಿಗೆ ಜನಸಾಮಾನ್ಯರು ತುತ್ತಾಗಿ ತಮ್ಮ ಜೀವವನ್ನು ಕಳೆದುಕೊಳ್ಳುತ್ತಿದ್ದರು. ಹೀಗಾಗಿ ಅಂತಹ ಮಹಾಮಾರಿ ಸಾಂಕ್ರಾಮಿಕ ರೋಗಗಳ ಬಗ್ಗೆ ತಿಳುವಳಿಕೆ ನೀಡುವುದರೊಂದಿಗೆ ರೋಗವು ಬರದಂತೆ ಹಾಗೂ ಬಂದ ನಂತರ ವಹಿಸಬೇಕಾದ ಎಚ್ಚರಿಕೆಯ ಬಗೆಗೆ ಜಾಗೃತಿಯನ್ನುಂಟು ಮಾಡುವುದು ಬಹು ಅಗತ್ಯವಾಗಿತ್ತು. ಈ ಸಂದರ್ಭದಲ್ಲಿ ಆರೋಗ್ಯ ವಿಜ್ಞಾನ ಸಾಹಿತ್ಯದಲ್ಲಿ ಅಸಂಖ್ಯ ಲೇಖನಗಳು, ಕೃತಿಗಳು ರಚನೆಯಾದುದು ಗಮನಾರ್ಹ ಸಂಗತಿ.

ಆರಂಭದಲ್ಲಿ ಸಾಂಕ್ರಾಮಿಕ ರೋಗಗಳಿಗೆ ಸಂಬಂಧಿಸಿದಂತೆ ಬಹಳಷ್ಟು ಚುಚ್ಚು ಮದ್ದುಗಳ ಬಗ್ಗೆ (ಬಿ.ಸಿ.ಜಿ, ಬೂಸ್ಟಾರ್, ಟಿ.ಟಿ) ಕೃತಿಗಳು ರಚಿತವಾದುದು ವಿಶೇಷವಾಗಿತ್ತು. ಈ ಸಮಯದಲ್ಲಿ ರಚಿತವಾದ ಕೃತಿ, ಲೇಖನಗಳ ಶೈಲಿಯು ಶಿಷ್ಟ ಭಾಷೆಯ ಪ್ರಯೋಗವಿಲ್ಲದೆ ಸರಳವಾಗಿತ್ತು. ಪ್ರಾಥಮಿಕ ಶಿಕ್ಷಣ ಪಡೆದ ಸಾಮಾನ್ಯ ಜ್ಞಾನ ಹೊಂದಿದ ಯಾರೇ ಆದರೂ ಓದಿ ಅರ್ಥ ಮಾಡಿಕೊಳ್ಳುವಂತಿದ್ದವು. ಇಂದಿನ ಆಧುನಿಕ ಯುಗದಲ್ಲಿ ರಚಿತವಾಗುವ ಸಾಹಿತ್ಯವೂ ಸಹ ಇಂತಹ ಸ್ವರೂಪದ್ದಾಗಿದ್ದು, ಅತಿ ಹೆಚ್ಚು ರಚನೆ ಹಾಗೂ ಜನಪ್ರಿಯತೆಯನ್ನು ಪಡೆದುದಾಗಿದೆ.

ಜನಸಾಮಾನ್ಯನ ಸಮಗ್ರ ಆರೋಗ್ಯ ವರ್ಧನೆಯ ಜೊತೆಗೆ ಕುಟುಂಬದ ಹಾಗೂ ಸಮಾಜದ ಆರೋಗ್ಯವನ್ನು ಕಾಪಾಡಿಕೊಳ್ಳಲು ಸಹಕರಿಸುವುದು ಆರೋಗ್ಯ ವಿಜ್ಞಾನ ಲೇಖನಗಳ ಮೂಲ ಜವಾಬ್ದಾರಿಯಾಗಿದೆ. ಹಿಂದಿಗಿಂತ ಇಂದು ಹಾಗೂ ಮುಂದಿನ ದಿನಗಳಲ್ಲಿ ಆರೋಗ್ಯ ವಿಜ್ಞಾನ ಸಾಹಿತ್ಯದ ಅಗತ್ಯತೆ ಜನಸಾಮಾನ್ಯನಿಗಿದೆ. ಪರಿಣಿತ, ಯೋಗ್ಯ, ತಜ್ಞ, ಅರ್ಹ ಸಾಹಿತಿಗಳು ಬರೆದ ಆರೋಗ್ಯದ ಕುರಿತಾದ ಲೇಖನ, ಕೈಪಿಡಿ, ಪ್ರಬಂಧಗಳು ಮೌಲ್ಯಯುತವಾಗಿದ್ದು, ವೈದ್ಯರ ಪ್ರಾಥಮಿಕ ಚಿಕಿತ್ಸೆಯ ಕಾರ್ಯ ಮಾಡಬಲ್ಲದು. ಹೀಗಾಗಿ ಉತ್ತಮ ಮುಂಜಾಗ್ರತಾ ವೈದ್ಯಕೀಯದ (ಪ್ರಿಮಿಟಿವ್ ಮೆಡಿಸಿನ್) ಕೆಲಸವನ್ನು ಮಾಡಬಲ್ಲುದು ಎಂದು ಸೋಮೇಶ್ವರ ಹಾಗೂ ವಸುಂಧರ ಭೂಪತಿಯವರು ಹೇಳಿರುವುದರೊಂದಿಗೆ ಆರೋಗ್ಯ ವಿಜ್ಞಾನ ಸಾಹಿತ್ಯದ ಮಹತ್ವ ಹಾಗೂ ಪ್ರಾಮುಖ್ಯತೆಯನ್ನು ಸೂಚಿಸುವುದನ್ನು ಅವಲೋಕಿಸಬಹುದು.

ಈ ಹಿನ್ನೆಲೆಯಲ್ಲಿ ಆರೋಗ್ಯ ಸಾಹಿತ್ಯವನ್ನು ರಚಿಸುವಲ್ಲಿ ಮನರಂಜನೆಗಿಂತ, ಆರೋಗ್ಯದ ಬಗೆಗೆ ಮಾಹಿತಿ ತಿಳುವಳಿಕೆ ನೀಡುವ ಜವಾಬ್ದಾರಿಯುತ ಮಾಹಿತಿ ಸಂವಹನಕ್ಕೆ ಹೆಚ್ಚಿನ ಒತ್ತನ್ನು ನೀಡಲಾಗಿದೆ. ಆರೋಗ್ಯದ ವಿಚಾರಗಳನ್ನು ತಿಳಿಯಪಡಿಸುವಲ್ಲಿ ಸುಲಭವಾಗಿ ಅರ್ಥೈಸಿಕೊಳ್ಳುವ ಪರ್ಯಾಯ ಪದಗಳನ್ನು ಬಳಸುವುದರೊಂದಿಗೆ ಲೇಖನ, ಕೈಪಿಡಿ, ಪ್ರಬಂಧ ಮತ್ತಿತರ ರೂಪಗಳಲ್ಲಿ ಸಾಹಿತ್ಯವು ರಚನೆಗೊಂಡು ಆರೋಗ್ಯ ಸಾಹಿತ್ಯದಲ್ಲಿ ವೈವಿದ್ಯತೆಯನ್ನು ಕಾಪಾಡಿಕೊಂಡಿದೆ.

ಸಮಾಜ ಹಾಗೂ ಜನರ ಆರೋಗ್ಯ ರಕ್ಷಣೆಯ ದೃಷ್ಟಿಯಿಂದ ಸಾಮಾಜಿಕ ಜವಾಬ್ದಾರಿಯುಕ್ತ ವೈದ್ಯರು ಹಾಗೂ ಆರೋಗ್ಯ ಪ್ರಜ್ಞೆ ಸದಾ ಜಾಗೃತವಾಗಿರುವ ನಾಗರೀಕರು ಬಹಳ ಮುಖ್ಯ. ಇದಕ್ಕೆ ಪೂರಕವಾಗಿ ಆರೋಗ್ಯ ಸಾಹಿತ್ಯವು ಕಾರ್ಯ ಪ್ರವೃತ್ತವಾಗಿದೆ. ವೈದ್ಯರು ಮನುಷ್ಯರ ಅಂತರಂಗವನ್ನು ಸೂಕ್ಷ್ಮವಾಗಿ ಅವಲೋಕಿಸುವುದರಿಂದ ಅಂತಹ ತಜ್ಞ ವೈದ್ಯರಿಂದ ರಚಿತ ಆರೋಗ್ಯ ವಿಜ್ಞಾನ ಸಾಹಿತ್ಯವು ಅಷ್ಟೇ ಪರಿಣಾಮಕಾರಿಯಾಗಿರುವುದು. ಅಂಧಾಚಾರ, ಮೂಢನಂಬಿಕೆ ತೊಲಗಿಸಿ ಆರೋಗ್ಯದ ಬಗ್ಗೆ ಅರಿವು ಮೂಡಿಸಿ ಧೈರ್ಯ ತುಂಬುವಲ್ಲಿ ಆರೋಗ್ಯ ವಿಜ್ಞಾನ ಸಾಹಿತ್ಯದ ಪಾಲು ಹಿರಿದಾದುದು.

ಜಾಗತೀಕರಣದಿಂದಾಗಿ ಜನರ ಜೀವನ ಕ್ರಮ ಬದಲಾಗಿದ್ದು, ಜನಸಾಮಾನ್ಯರೆಲ್ಲರೂ ಕೆಲಸದ ಹಾಗೂ ಮತ್ತಿತರ ಸನ್ನಿವೇಶದಿಂದಾಗಿ ತೀವ್ರ ಒತ್ತಡದ ಬದುಕಿನಲ್ಲಿ ಬದುಕುವಂತಾಗಿ, ಬಹಳಷ್ಟು ಜನರು ಮಾನಸಿಕ ಹಾಗೂ ದೈಹಿಕ ಸಮಸ್ಯೆಗಳನ್ನು ಎದುರಿಸುವಂತಾಗಿದೆ. ಈ ನಿಟ್ಟಿನಲ್ಲಿ ಆರೋಗ್ಯ ವಿಜ್ಞಾನ ಸಾಹಿತ್ಯದ ಮಾಹಿತಿಯು ಬಹು ಅವಶ್ಯಕ. ಹೀಗಾಗಿ ವಿಜ್ಞಾನ ಸಾಹಿತ್ಯದಲ್ಲಿನ ಒಂದು ವಸ್ತು ವಿಷಯವಾದ ಆರೋಗ್ಯ ವಿಜ್ಞಾನದ ಬಗ್ಗೆ ಸಂಶೋಧನಾತ್ಮಕ ಅಧ್ಯಯನವನ್ನು ಕೈಗೊಳ್ಳಲಾಗಿದೆ.

ತುಮಕೂರು ನಾಗಭೂಷಣರವರ ಸಂಪಾದಕತ್ವದ 'ವಿಜ್ಞಾನ ಸಾಹಿತ್ಯ ೧೯೯೭' ರಲ್ಲಿನ ಒಂದು ಸಣ್ಣ ಲಲಿತ ಪ್ರಬಂಧದ ರೀತಿಯಲ್ಲಿ ಪ್ರಾರಂಭವಾಗುವ 'ಜನಾಂಗೀಯ ಸಸ್ಯಶಾಸ್ತ್ರ' ಎಂಬ ಜಯಕರ ಭಂಡಾರಿಎಂ.ರವರ ಲೇಖನವು ಬಹುಮುಖ್ಯವಾದ ವೈದ್ಯಕೀಯ ಸಸ್ಯ ಮಾಹಿತಿಯ ಆಕರವಾಗಿದೆ. ವೈದ್ಯಕೀಯ ಔಷಧಿಗುಣಯುಕ್ತ ಸಸ್ಯ ಸಂಪತ್ತನ್ನು ಸಾಮಾನ್ಯ ಬುಡಕಟ್ಟು ಆದಿವಾಸಿಗಳು ರೋಗನಿರೋಧಕವಾಗಿ ಉಪಯೋಗಿಸುತ್ತಿದ್ದುದ ರಿಂದಾಗಿ, ಅದು ಜಗತ್ತಿಗೆ ಪರಿಚಯವಾದುದರ ಪ್ರಕ್ರಿಯೆಯನ್ನು ತಿಳಿಸಿದ್ದಾರೆ. ಮಹಾಮಾರಿ ಭಯಂಕರ ರೋಗಗಳಾದ ಮಲೇರಿಯಾ, ಅಧಿಕ ರಕ್ತದೊತ್ತಡ, ಕ್ಯಾನ್ಸರ್ ಮೊದಲಾದ ರೋಗಗಳನ್ನು ವಾಸಿಮಾಡುವ ಗುಣ ಕಾಡುಗಳಲ್ಲಿರುವ ಔಷಧೀಯ ಸಸ್ಯಗಳಲ್ಲಿದೆ. ಕಾಡುಗಳಲ್ಲಿ ದೊರೆಯುವ ಸಿಂಕೋನಾದ ಕವಿನೈನ್ ಎಂಬ ತೊಗಟೆ ಮಲೇರಿಯಾ, ರಾವೋಲ್ಫಿಯ ಸರ್ಪಂಟಿನದ ಬೇರಾದ ರಿಸರ್ಪಿನ್ ಅಧಿಕ ರಕ್ತದೊತ್ತಡ, ಕೆಥರಾಂತಸ್ ರೋಸಿಯಸ್ ಕ್ಯಾನ್ಸರ್ ಮೊದಲಾದವುಗಳೊಂದಿಗೆ ಇತರ ಸಸ್ಯಗಳ ಪರಿಚಯವನ್ನು ಮಾಡಿಕೊಡುವ ಮೂಲಕ ಜನಾಂಗೀಯ ಸಸ್ಯಗಳು ಹಾಗೂ ಜನಾಂಗೀಯ ವೈದ್ಯವಿಜ್ಞಾನವನ್ನು ತನ್ನ ಲೇಖನದ ಪ್ರಮುಖ ವಸ್ತುವಾಗಿ ಸುಲಲಿತ ಅಭಿವ್ಯಕ್ತಿಯ ಸ್ವರೂಪದೊಂದಿಗೆ ಸುಲಭ ವಿವರಣಾ ಶೈಲಿಯಲ್ಲಿ ವಿವರಿಸಿದ್ದಾರೆ.

ಜನಾಂಗೀಯ ಸಸ್ಯಶಾಸ್ತ್ರದ ಪಿತಾಮಹರಾದ ಸಸ್ಯ ವಿಜ್ಞಾನಿ 'ಸರ್ ರಿಚರ್ಡ್ ಇವಾನ್ ಶುಲ್ವಿಸ್'ರವರು ಜನಾಂಗೀಯ ಔಷಧಿ ಸಸ್ಯರಾಶಿಗಳ ಸಂಗ್ರಹಕ್ಕೆ ಪಟ್ಟ ಶ್ರಮ, 'ಎಸ್.ಕೆ.ಜೈನ್' ಮತ್ತು 'ಪಾರ್ವತಿ ಅಮ್ಮಾಳ್'ರವರ ಸಂಶೋಧನೆಗಳ ಜೊತೆಗೆ ಆಧುನೀಕರಣದ ತೆಕ್ಕೆಗೆ ಜೋತುಬಿದ್ದು ಜನಪದ ಸಸ್ಯಜ್ಞಾನ ಸಸ್ಯಸಂಕುಲಗಳು ಬರಿದಾಗುತ್ತಿರುವ ನಿಸರ್ಗದ ಕುರಿತಾದ ಅವರ ಜ್ಞಾನ, ನಶಿಸಿ ಹೋಗುತ್ತಿರುವ ಸಸ್ಯ ಸಂಕುಲಗಳು ಮೊದಲಾದವುಗಳ ಬಗ್ಗೆ ಹಾಗೂ ಗಿಡಮೂಲಿಕೆಗಳು ಜೀವಂತವಿರುವ ಹಳ್ಳಿಮನೆಗಳ ಮುದಿ ಅಜ್ಜ, ಅಜ್ಜಿ, ನಾಟಿವೈದ್ಯರುಗಳ ಸಸ್ಯಗಳ ರೋಗಹರಣ ಗುಣಗಳ ಗುಟ್ಟು ಮತ್ತು ಪರಂಪರಾಗತ ಜ್ಞಾನ ನೀಡಿದ ಸಸ್ಯಜನ್ಯ ಔಷಧಿಗಳ ಮಾಹಿತಿಯನ್ನು ತಿಳಿಸುವುದರೊಂದಿಗೆ ಗಿಡಮೂಲಿಕೆಯ ಬಗ್ಗೆ ಒಂದಷ್ಟು ಅರಿವು ಮೂಡಿಸುವಂತೆ ಲೇಖನವು ಮೂಡಿಬಂದಿದ್ದು, ಪಾರಿಭಾಷಿಕ ಪದಗಳ ಬಳಕೆಯನ್ನು ಬಹಳ ಕಡಿಮೆ ಮಾಡಲಾಗಿರುವುದನ್ನು ಗಮನಿಸಬಹುದು.

ತದ್ರೂಪಿಯನ್ನು ಸೃಷ್ಟಿಸುವ ಕ್ಲೋನಿಂಗನ್ನು ಪ್ರಾಯೋಗಿಕವಾಗಿ ಉಪಯೋಗಿಸಬೇಕೆ ಬೇಡವೇ ಎಂಬುದನ್ನು ಬೌದ್ಧಿಕವಾಗಿ ಯೋಚಿಸಿ ತೀರ್ಮಾನಿಸುವ ಮಾನವನ ಹಕ್ಕು ಜವಾಬ್ದಾರಿಯನ್ನು ಹೇಳುವುದರೊಂದಿಗೆ, ನಮ್ಮ ಅನುಕೂಲಕ್ಕೆ ತಕ್ಕಂತೆ ಪ್ರಕೃತಿ ನಿಯಮವನ್ನು ತಿದ್ದುವುದು ವಿಜ್ಞಾನದಿಂದ ಮಾತ್ರ ಸಾಧ್ಯ ಇದನ್ನು ಮಾನವ ಕುಲದೊಂದಿಗೆ ಇಡೀ

ಜೀವಸಂಕುಲಕ್ಕೆ ಮಾರಕವಾಗದಂತೆ ನೋಡಿಕೊಳ್ಳುವ ಗುರುತರ ಜವಾಬ್ದಾರಿ ಎಲ್ಲರ ಮೇಲಿದೆ ಎಂಬ ಕಿವಿ ಮಾತನ್ನು ಹೇಳಿದ್ದಾರೆ.

ಕ್ಲೋನಿಂಗ್‌ನಿಂದ ಕೋಶದ ಒಂದು ತಿರುಳು ಅಥವಾ ನ್ಯೂಕ್ಲಿಯಸ್ಸನ್ನು ಮತ್ತೊಂದು ಕೋಶದೊಳಕ್ಕೆ ವರ್ಗಾಯಿಸುವ ಕೋಶ ಕೇಂದ್ರ ವರ್ಗಾವಣೆಯಿಂದ ತದ್ರೂಪ ಜೀವಿಯ ಸೃಷ್ಟಿ ಸಾಧ್ಯ ಎಂಬುದನ್ನು ಹಾಗೂ ಈ ಕ್ರಿಯೆಯಿಂದ ಜೈವಿಕ ಔಷಧಿಗಳ ಉತ್ಪಾದನೆ ಸಾಧ್ಯ ಎಂಬುದನ್ನು ಎಲ್ಲರಿಗೂ ಅರ್ಥವಾಗುವಂತೆ ಶರಣ ಬಸವೇಶ್ವರ ಅಂಗಡಿ ಮತ್ತು ವಸಂತಕುಮಾರ ತಿಮಕಾಪುರರವರ ಲೇಖನ 'ಕ್ಲೋನಿಂಗ್‌ನ ಕೋಲಾಹಲದಲ್ಲಿ" ಸರಳ ಸುಲಭವಾಗಿ ತಿಳಿಸಿದ್ದಾರೆ.

ಪ್ರಖ್ಯಾತ ಜನಪ್ರಿಯ ವಿಜ್ಞಾನ ಲೇಖಕರಾದ ನಾ. ಸೋಮೇಶ್ವರರವರು 'ರಕ್ತರಹಿತ ಶಸ್ತ್ರಚಿಕಿತ್ಸೆ'ಯ ಬಗ್ಗೆ ಮಾಹಿತಿಯನ್ನು ನೀಡಿದ್ದಾರೆ. ಯಾವುದೇ ರೀತಿಯ ಆರೋಗ್ಯಕರ ಸಮಸ್ಯೆಗೆ ಅಂದರೆ ಅದು ಕ್ಯಾನ್ಸರ್ ಆಗಿರಬಹುದು ಇಲ್ಲವೇ ಮತ್ತಿತರ ರೀತಿಯ ಗಂತಿ/ಗಡ್ಡೆಯಾಗಿರಬಹುದು ಅದನ್ನು ಯಾವುದೇ ತೊಂದರೆಯಿಲ್ಲದೆ ರೋಬೋಟಿಕ್ ಆರ್ಮ್ (ಸ್ವಯಂಚಾಲಿತ ಬಾಹು) ಸೈಬರ್ ಚೂರಿ (ಗಣಕ ನಿಯಂತ್ರಿತ ಆಯಾಮ ಜೋಡಣಾ ವಿಕಿರಣ ಶಸ್ತ್ರಚಿಕಿತ್ಸಾ ವ್ಯವಸ್ಥೆ), ದ್ಯುತಿಚಾಲಕ ಚಿಕಿತ್ಸೆ (ಫೋಟೋ ಡೈನಮಿಕ್ ಥೆರಪಿ) ಮೊದಲಾದ ಆಧುನಿಕ ರಕ್ತರಹಿತ ಚಿಕಿತ್ಸಕಗಳ ಮೂಲಕ ಕೆಲವೇ ನಿಮಿಷಗಳಲ್ಲಿ (೪೦-೬೦ನಿಮಿಷಗಳು) ಶಸ್ತ್ರ ಚಿಕಿತ್ಸೆಯನ್ನು ಮಾಡಲಾಗುವುದನ್ನು ಹಿಂದಿನ ಶಸ್ತ್ರಚಿಕಿತ್ಸಾ ವಿಧಾನದೊಂದಿಗೆ ಹೋಲಿಸಿ ಅರ್ಥೈಸಿದ್ದಾರೆ.

ಸಾಮಾನ್ಯವಾಗಿ ಎಲ್ಲರೂ ಎದುರಿಸುವ ಆರೋಗ್ಯ ಸಮಸ್ಯೆಗಳಾದ ಕಾಲಿಗೆ ಅಥವಾ ಇತರೆ ಅಂಗಗಳಿಗೆ ಬಿದ್ದ ಪೆಟ್ಟು, ಕೀಲುನೋವು, ಉರಿ, ಊತ ಮೊದಲಾದ ವೈವಿಧ್ಯಮಯ ಕ್ಷೇತ್ರಗಳಲ್ಲಿನ ನೋವನ್ನು ರಕ್ತರಹಿತ ಶಸ್ತ್ರಚಿಕಿತ್ಸೆಯಿಂದ ಗುಣಪಡಿಸುವುದು ಸಾಧ್ಯ ಎಂಬುದನ್ನು ಲೇಖನದ ಕೊನೆಯಲ್ಲಿ ಹೇಳುವುದರೊಂದಿಗೆ ರೋಗದ ಬಗೆಗಿನ ಮುಂದಾಲೋಚನೆಯನ್ನು ಸೂಚಿಸಿರುವುದು ಎಲ್ಲರಿಗೂ ಮನವರಿಕೆಯಾಗುವ ಶೈಲಿಯಲ್ಲಿದೆ.

ಅನಿರೀಕ್ಷಿತವಾಗಿ ಯಾವುದೇ ಮುನ್ಸೂಚನೆ ನೀಡದೆ ಬರುವ ರೋಗ ಹೃದಯಘಾತ. ಹೃದಯಘಾತ ಬರುವುದು ಹೇಗೆ? ಯಾವಾಗ? ಯಾರಿಗೆ? ಮೊದಲಾದವುಗಳನ್ನು ಟಿ.ಎನ್.ಕೃಷ್ಣರಾಜುರವರು 'ಹಠಾತ್ ಎರಗುವ ಹೃದಯಾಘಾತ' ಲೇಖನದಲ್ಲಿ ವಿವರಿಸಿದ್ದಾರೆ. ಹಠಾತ್ ಎರಗುವ ಹೃದಯಾಘಾತವು ಹೃದಯದ ರಕ್ತನಾಳಗಳ ಕಾಯಿಲೆಯಾದ್ದರಿಂದ ಅದನ್ನು ಕೊರೊನರಿ ಆರ್ಟರಿ ಡಿಸೀಸ್(ಸಿ.ಎ.ಡಿ/ಕ್ಯಾಡ್) ಎಂದು ತಜ್ಞರು ಕರೆಯುತ್ತಾರೆ. ಈ ಹಠಾತ್ ಎರಗುವ ಹೃದಯಾಘಾತ ಭಾರತದಲ್ಲಿ ಹೆಚ್ಚಾಗಿದ್ದು ರಕ್ತನಾಳದ ಗೋಡೆಯೊಳಗೆ

ಕೊಬ್ಬಿನಂಶದ ಬೆಳೆಯುವಿಕೆಯಿಂದುಂಟಾಗುವ ಉಸಿರಾಟದ ತೊಂದರೆಯೇ ಅದಕ್ಕೆ ಕಾರಣ ಎಂಬುದನ್ನು ಹಾಗೂ ಯಾರಿಗೆ ಯಾವ ವಯಸ್ಸಿನಲ್ಲಿ ಇದು ಸಂಭವಿಸುತ್ತದೆಂದು ಹೇಳುವುದರೊಂದಿಗೆ ಹೃದಯಾಘಾತದ ಅಪಾಯದ ಸೂಚನೆ, ಭಾರತೀಯರಿಗೆ ಅನ್ವಯಿಸುವ ವಿಶೇಷ ಅಪಾಯದ ಸೂಚನೆ, ಸಸ್ಯಹಾರಿ ಅಡುಗೆಯ ಎಣ್ಣೆಗಳ ಮತ್ತು ಮಾಂಸ ಪದಾರ್ಥಗಳ ಗುಣ ಲಕ್ಷಣಗಳು ಮೊದಲಾದ ಉಪಯುಕ್ತ ಮಾಹಿತಿಯನ್ನು ನೀಡಿರುವುದು ಕಂಡು ಬರುತ್ತದೆ. ಈ ಲೇಖನದಲ್ಲಿನ ಮತ್ತೊಂದು ವಿಶೇಷವಾದ ಅಂಶವೆಂದರೆ ಅತಿ ಕಡಿಮೆ ಪಾರಿಭಾಷಿಕ ಪದಗಳ ಬಳಕೆಯಾಗಿದ್ದು ನಿರೂಪಣಾ ಶೈಲಿಯು ಸುಲಭ ಗ್ರಾಹ್ಯ ಸ್ವರೂಪದ್ದಾಗಿದೆ.

ಬಿ.ಎಸ್ ಮಂಜುನಾಥ್‌ರವರಿಂದ ರಚಿತವಾದ 'ಕೃತಕ ಪೇಸ್ ಮೇಕರ್' ಲೇಖನವು ವೈದ್ಯಕೀಯ ಲೋಕದಲ್ಲಿನ ಮಹತ್ತರ ಆವಿಷ್ಕಾರಗಳಾದ ಕೃತಕ ಅಂಗಗಳ ಸೃಷ್ಟಿಯನ್ನು ಉಲ್ಲೇಖಿಸುವ ಜೊತೆಯಲ್ಲಿ ಕೃತಕ ಪೇಸ್ ಮೇಕರ್‌ನ ಅವಶ್ಯಕತೆ, ರಚನೆ, ಅಳವಡಿಕೆ ಕಾರ್ಯವಿಧಾನ ಅನುಕೂಲ ಅನಾನುಕೂಲಗಳ ಬಗ್ಗೆ ವಿಶಿಷ್ಟ ವೈಜ್ಞಾನಿಕ ಶೈಲಿಯಲ್ಲಿ ಅಭಿವ್ಯಕ್ತಿಸಿರುವುದನ್ನು ಕಾಣಬಹುದು. ಬಹಳಷ್ಟು ಆಂಗ್ಲ ವೈಜ್ಞಾನಿಕ ಪದಗಳಿಂದ ಲೇಖನವು ಕೂಡಿದ್ದು ಶಿಷ್ಟ ಭಾಷೆಯ ಬಳಕೆಯನ್ನು ಗಮನಿಸಬಹುದು.

ಸುಭಾಶ್ ಎನ್ ನೇಳಗರವರ ಸಂಪಾದಕತ್ವದ 'ವಿಜ್ಞಾನ ಸಾಹಿತ್ಯ ೧೯೯೮'ರಲ್ಲಿನ ಗರ್ಭಕೋಶದ ಕಾರ್ಯವೈಖರಿಯನ್ನು ಎನ್.ಆರ್.ಆಡೂರರವರು 'ಮನುಕುಲ ಉಳಿಸಿ ಬೆಳೆಸುತ್ತಿರುವ ಕೋಶ' ಲೇಖನದಲ್ಲಿ ತಿಳಿಸಿದ್ದಾರೆ. ಹೊಸ ಜೀವದ ಪಾಲನೆ ಪೋಷಣೆಯಲ್ಲಿ ಬೆಳವಣಿಗೆಯಲ್ಲಿ ಸುಗಮ ಕಾರ್ಯನಿರ್ವಹಿಸುವುದು ಮರಿಗಳನ್ನು ಸಾಕುವ ಚೀಲ, ಗರ್ಭಧರಿಸುವುದಕ್ಕಿಂತ ಮುಂಚೆ (೫೧ ಗ್ರಾಂ) ಹಾಗೂ ಗರ್ಭಧಾರಣೆಯ ನಂತರದ (೧ಕೆ.ಜಿ) ತೂಕ ವ್ಯತ್ಯಾಸವನ್ನು ಹೊಂದುವುದರೊಂದಿಗೆ ಒಂದು ಜೀವಿಯ ಜೀವನಕ್ಕೆ ಕಾರಣವಾಗುವ ಗರ್ಭಕೋಶವು ಮಹಿಳೆಯರಲ್ಲಿ ಮಹತ್ವದ ಕಾರ್ಯ ನಿರ್ವಹಿಸುವುದು. ಪ್ರಸವ ಕಾರ್ಯ ನಡೆಯುವಾಗ ಹಾಗೂ ನಿಂತ ನಂತರವು ನಿರಂತರ ಕಾರ್ಯದಲ್ಲಿ ಗರ್ಭಕೋಶವು ತೊಡಗಿರುತ್ತದೆ. ಋತು ಚಕ್ರ ನಿಂತ ನಂತರ ಗರ್ಭಕೋಶವು ಒಳಗಾಗುವ ರೋಗ(ಕ್ಯಾನ್ಸರ್), ಲಕ್ಷಣ, ಗುಣಪಡಿಸುವ ಕ್ರಮ ಮೊದಲಾದವುಗಳನ್ನು ಸೋದಾಹರಣೆ ಯೊಂದಿಗೆ ವಿವರಿಸಿರುವುದನ್ನು ಲೇಖನದಲ್ಲಿ ಕಾಣಬಹುದು.

ಮಹಾಭಾರತ, ಚೆನ್ನಬಸವ ಪುರಾಣ ಹಾಗೂ ಇಂಗ್ಲೆಂಡಿನ ಕೀಲ್ ಮತ್ತು ಭಾಥ್ ವಿಶ್ವವಿದ್ಯಾಲಯಗಳ ವಿಜ್ಞಾನಿಗಳು ನಡೆಸಿದ ಸಂಶೋಧನೆಗಳ ಆಧಾರದೊಂದಿಗೆ ಗರ್ಭಾಶಯದಲ್ಲಿರುವ ಭ್ರೂಣವು ಕೇಳುವ ಹಾಗೂ ಕೇಳಿಸಿಕೊಂಡದ್ದನ್ನು ಸ್ಮರಣೆಯಲ್ಲಿಟ್ಟು

ಕೊಳ್ಳುವ ಶಕ್ತಿಯನ್ನು ಪ್ರಕೃತಿದತ್ತವಾಗಿ ಪಡೆದಿರುತ್ತದೆ ಎಂಬುದನ್ನು ವಿವರಿಸುವುದರೊಂದಿಗೆ, ಗರ್ಭಸ್ಥ ಮಗುವಿನ ಶ್ರವಣ ಶಕ್ತಿಯು ಗರ್ಭದ ೨೦ನೆ ವಾರದಿಂದ ಕಾರ್ಯ ಪ್ರಾರಂಭವಾಗಿ ೩೦ನೇಯ ವಾರದಲ್ಲಿ ಶ್ರವಣ ಶಕ್ತಿಯು ಇನ್ನೂ ತೀಕ್ಷ್ಣವಾಗಿ ಗರ್ಭದಲ್ಲಿದ್ದಾಗ ಆಲಿಸಿದ್ದು ಜನನ ನಂತರದಲ್ಲಿ ಸ್ಮರಣೆಯಲ್ಲಿರುತ್ತದೆ ಎಂಬುದನ್ನು ಎಸ್.ಜೆ.ನಾಗಲೋಟಮಠರವರು 'ಗರ್ಭಸ್ಥ ಶಿಶುವಿಗೆ ಕಿವಿ ಕೇಳುವುದೇ!' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

'ನಾವು ತಿನ್ನುವ ಆಹಾರ ಎಷ್ಟು ಸುರಕ್ಷಿತ', 'ಕಲಬೆರಕೆ ಆಹಾರ ಆರೋಗ್ಯಕ್ಕೆ ಹಾನಿಕರ' ಹಾಗೂ 'ಯಾವ ಎಣ್ಣೆ ಆರೋಗ್ಯಕ್ಕೆ ಒಳ್ಳೆಯದು' ಮೊದಲಾದ ಲೇಖನದಲ್ಲಿ ಲೇಖಕರಾದ ಶ್ರೀನಿವಾಸ ಬಾಲನಕೊಪ್ಪ, ಬಿ.ಎಂ ವೀರಭದ್ರಸ್ವಾಮಿ ಹಾಗೂ ಡಿ.ಕೆ.ಮಹಾಬಲರಾಜುರವರು "ಆರೋಗ್ಯವೇ ಭಾಗ್ಯ" ಎಂಬ ನುಡಿಗೆ ತಕ್ಕಂತೆ ವಿವರಿಸಿ, ಆರೋಗ್ಯ ಕಾಳಜಿಯನ್ನು ಬೆಳೆಸುವಲ್ಲಿ ಸಹಕರಿಸಿರುವ ಒಳ್ಳೆಯ ಲೇಖನ ಬರೆದಿದ್ದಾರೆ. ಬಿ.ಎಂ ವೀರಭದ್ರಸ್ವಾಮಿರವರು ಬೇಳೆ ಕಾಳುಗಳು ಮೊದಲಾದವುಗಳಲ್ಲಿನ ಕಲಬೆರಕೆ ಯಿಂದುಂಟಾಗುವ ಆರೋಗ್ಯ ವೈಪರೀತ್ಯವನ್ನು ಹಾಗೂ ಆಹಾರದಲ್ಲಿನ ಕೀಟನಾಶಕಯುಕ್ತ ಆಹಾರ ಸೇವನೆಯಿಂದ ಆರೋಗ್ಯ ತೊಂದರೆಗಳು ಕಟ್ಟಿಟ್ಟ ಬುತ್ತಿ ಎಂದು ನೈಸರ್ಗಿಕ ಆಹಾರವನ್ನು ಸೇವಿಸುವುದು ಒಳ್ಳೆಯದೆಂದು ಹೇಳಿರುವುದನ್ನು ಕಾಣಬಹುದು.

ನಗರ/ಪಟ್ಟಣಗಳಲ್ಲಿ ಪ್ಯಾಕ್ ಆಗಿ ಬರುವ ಆಹಾರವು ಬಹಳಷ್ಟು ರಾಸಾಯನಿಕ ಪದಾರ್ಥಗಳಿಂದ ಕೂಡಿದ್ದು ಮನುಷ್ಯನ ಆರೋಗ್ಯಕ್ಕೆ ಮಾರಕವಾದುದು ಎಂಬುದನ್ನು 'ನಮ್ಮ ಆಹಾರ ಎಷ್ಟು ಸುರಕ್ಷಿತ?' ಎಂಬ ಲೇಖನದಲ್ಲಿ ಶ್ರೀನಿವಾಸ್‌ರವರು ಹೇಳುವುದರೊಂದಿಗೆ ಆಧುನಿಕ ಜನಜೀವನವು ಕೃತಕ ಆಹಾರಕ್ಕೆ ಒಗ್ಗಿರುವ ದುರಂತವನ್ನು ತಿಳಿಸಿದ್ದಾರೆ.

ಎಣ್ಣೆ ಅಥವಾ ಕೊಬ್ಬಿನ ಅಂಶವಿಲ್ಲದ ಆಹಾರವೇ ಇಲ್ಲ. ಆದರೆ ಅತಿಯಾಸೆ ಹಾಗೂ ಶೀಘ್ರವಾಗಿ ಲಾಭಗಳಿಸುವ ದುರ್ಬುದ್ಧಿಯಿಂದ ವ್ಯಾಪಾರಿಗಳು ಎಣ್ಣೆ ಅಥವಾ ಜಿಡ್ಡಿನ ಪದಾರ್ಥಗಳಲ್ಲಿ ಆರೋಗ್ಯಕ್ಕೆ ಮಾರಕವಾದ ಅತಿಯಾದ ಕೊಬ್ಬಿನಂಶವಿರುವ ಪೂಪ, ಕೊಲೆಸ್ಟರಾಲ್ ಮೊದಲಾದವುಗಳನ್ನು ಅಧಿಕ ಪ್ರಮಾಣದಲ್ಲಿ ಬೆರೆಸುತ್ತಿದ್ದಾರೆ. ಇಂತಹ ಎಣ್ಣೆಯನ್ನು ಉಪಯೋಗಿಸುವುದರಿಂದ ಹೃದಯದ ಆರೋಗ್ಯಕ್ಕೆ ಅಪಾಯಕಾರಿಯಾದುದು ಎಂಬುದನ್ನು ಹಾಗೂ ಯಾವ ಕೊಬ್ಬು ಒಳ್ಳೆಯದು? ನಮಗೆ ಕೊಬ್ಬು ಬೇಕೇ? ಒಬ್ಬ ಮನುಷ್ಯ ಒಂದು ದಿನಕ್ಕೆ ಎಷ್ಟು ಕೊಬ್ಬು ಸೇವಿಸಬಹುದು? ಮೊದಲಾದವುಗಳನ್ನು ತಿಳಿಸಿರುವುದನ್ನು ಗಮನಿಸಬಹುದು. ಜೊತೆಗೆ ಹೃದಯದ ಆರೋಗ್ಯಕ್ಕಾಗಿ ಎಂತಹ ಎಣ್ಣೆಯನ್ನು ಆಯ್ಕೆ ಮಾಡಬೇಕು ಎಂಬುದರ ಕಿವಿಮಾತನ್ನು ಹೇಳುವುದರೊಂದಿಗೆ

ಡಿ.ಕೆ.ಮಹಾಬಲರಾಜುರವರು 'ಹೃದಯಾರೋಗ್ಯ ಕಾಪಾಡಿಕೊಳ್ಳುವ ಬಗ್ಗೆ ಜಾಗೃತಿಯನ್ನು ಮೂಡಿಸಿರುವುದನ್ನು ಕಾಣಬಹುದು.

ಆರೋಗ್ಯಕ್ಕೆ ಒಳ್ಳೆಯದು ಖನಿಜಾಂಶಗಳಿಂದ ಕೂಡಿದ ನೀರು ಎಂದು ಭಾವಿಸುವ ಮಿನರಲ್ ವಾಟರ್ ಬಗೆಗಿರುವ ಹಲವಾರು ಮಿಥ್ಯಗಳ ಅನಾವರಣದೊಂದಿಗೆ ಮನೆಯಲ್ಲಿಯೇ ಮಿನರಲ್ ವಾಟರನ್ನು ತಯಾರಿಸಿ ಕುಡಿಯುವುದು ಒಳ್ಳೆಯದೆಂಬ ಕಿವಿಮಾತಿನೊಂದಿಗೆ ಆರೋಗ್ಯಕರ ಮಾಹಿತಿ ನೀಡಿದ ಕೆ.ಎಸ್ ರವಿಕುಮಾರ್‌ರವರು 'ಮಿನರಲ್ ವಾಟರ್ ಎಂಬ ಮಾರಕ ನೀರು' ಎಂಬ ಲೇಖನದಲ್ಲಿ ಉತ್ತಮವಾಗಿ ವಿಚಾರವಿನಿಮಯ ಮಾಡಿಕೊಂಡಿದ್ದಾರೆ. ಇನ್ನು ಕೊಳ್ಳೆಗಾಲ ಶರ್ಮರವರು 'ಖಾಲಿ ಹೊಟ್ಟೆ, ಖಾಲಿ ಮೆದುಳು' ಲೇಖನದಲ್ಲಿ ಇಲಿಗಳ ಮೇಲೆ ಮಾಡಿದ ಒಂದು ಸಣ್ಣ ಪ್ರಯೋಗದೊಂದಿಗೆ ದೇಹಕ್ಕೆ ಆಹಾರವು ಎಷ್ಟು ಮುಖ್ಯ ಎಂಬುದನ್ನು ಚಿಕ್ಕದಾಗಿ ಚೊಕ್ಕವಾಗಿ ಹೇಳಿದ್ದಾರೆ. ಹಾಗೆಯೇ ಸಾಮಾನ್ಯವಾಗಿ ಮಕ್ಕಳ ಮೇಲೆ ಮಾಯಾಜಾಲವನ್ನೇ ಬೀಸಿರುವ ಚಾಕೊಲೇಟ್ ನಾವೆಲ್ಲರೂ ಸಾಮಾನ್ಯವಾಗಿ ತಿಳಿದುಕೊಂಡಷ್ಟು ಕೆಟ್ಟದಲ್ಲ. ಹಿತಮಿತವಾಗಿ ವಾರಕ್ಕೆ ೨–೩ ರಂತೆ ಒಳ್ಳೆಯ ಗುಣಮಟ್ಟದ ಚಾಕೋಲೇಟ್ ತಿನ್ನುವುದು ಆರೋಗ್ಯದ ದೃಷ್ಟಿಯಿಂದ ಒಳ್ಳೆಯದಾಗಿದ್ದು, ಮಕ್ಕಳ ಆರೋಗ್ಯದ ಬಗ್ಗೆ ಅತೀವ ಕಾಳಜಿ ವಹಿಸುವ ತಾಯಂದಿರು ಚಾಕೋಲೇಟಿನ ಸ್ವಾಧಾನುಭವದಿಂದ ಮಕ್ಕಳನ್ನು ದೂರವಿಡಬಾರದು ಎಂದು ಆರತಿ ವೆಂಕಟೇಶ್‌ರವರು ತಮ್ಮ ಲೇಖನ 'ಚಾಕೋಲೇಟ್: ಮಕ್ಕಳ ಆರೋಗ್ಯಕ್ಕೆ ಹಾನಿಕಾರಕವೇ?' ಎಂಬಲ್ಲಿ ತಿಳಿಸಿದ್ದಾರೆ.

ಇತ್ತೀಚಿನ ದಿನಗಳಲ್ಲಿ ಬಹಳ ಭಯಂಕರ ಹಾಗೂ ಶಾಂತವಾಗಿ ಯಾರಿಗೂ ತಿಳಿಯದಂತೆ ದೇಹವನ್ನು ಆಕ್ರಮಿಸಿ ಯಾರಿಗೂ ಸೂಚನೆ ನೀಡದೆ ಕೊನೆಗಳಿಗೆಯಲ್ಲಿ ತನ್ನ ಇರುವಿನ ಬಗ್ಗೆ ಮಾಹಿತಿ ನೀಡುವ ಭಯಂಕರ ಹೆಮ್ಮಾರಿ ಕ್ಯಾನ್ಸರ್ ಕಾಯಿಲೆಗೆ ಮದ್ದು ನಮ್ಮಲ್ಲೇ ನೈಸರ್ಗಿಕವಾಗಿಯೇ ಇದೆ. ಅದು ಪ್ರತಿಯೊಂದು ಹಂತದಲ್ಲಿ ಅನುಸರಿಸಬೇಕಾದ ಆರೋಗ್ಯ ನಿಯಮಗಳ ಪಾಲನೆಯಲ್ಲಿನ ಆಹಾರಕ್ರಮವಾಗಿದ್ದು, ಅದನ್ನು ಸರಿಯಾಗಿ ಪಾಲಿಸಿದರೆ ರೋಗ ತಡೆಯಲು ನೇರ, ಖಚಿತ, ಸುಲಭ ದಾರಿ ಮತ್ತೊಂದಿಲ್ಲ ಎಂದು ಲೇಖಕರು ಹೇಳಿರುವುದನ್ನು ಕಾಣಬಹುದು.

ನಮ್ಮ ಆಹಾರದಲ್ಲಿ ತಾಜಾ ಹಣ್ಣುಗಳು, ಸೊಪ್ಪು ತರಕಾರಿಗಳು, ಗೋಧಿ ಹುಲ್ಲಿನ ರಸ, ಸೋಯಾ ಬೀನ್ಸ್ ಮತ್ತು ಬೀನ್ಸ್, ಈರುಳ್ಳಿ ಬೆಳ್ಳುಳ್ಳಿ ಮೊದಲಾದವುಗಳನ್ನು ಸರಿಯಾದ ಪ್ರಮಾಣದಲ್ಲಿ ಪ್ರತಿನಿತ್ಯ ಉಪಯೋಗಿಸುವುದರಿಂದ ದೇಹದ ರಕ್ಷಣೆ ಕೋಟೆಯನ್ನು ಭದ್ರಪಡಿಸಿಕೊಂಡು, ರೋಗದಲ್ಲಿನ ವಿವಿಧ ರೀತಿಯ ಕ್ಯಾನ್ಸರ್‌ಗಳನ್ನು

ತಡೆಯಬಹುದು ಎಂಬುದನ್ನು ಬಹಳ ಸರಳವಾಗಿ ಕೆ.ಎನ್ ಪೈರವರು 'ಕ್ಯಾನ್ಸರ್ ತಡೆಗೆ ಒಂದು ಗುರಾಣಿ!?' ಎಂಬಲ್ಲಿ ಹೇಳಿದರೆ, ಹೃದಯವು ದೇಹಕ್ಕೆ ಎಷ್ಟು ಅಮೂಲ್ಯ ಹಾಗೂ ಆರೋಗ್ಯವಂತ ಹೃದಯವು ದೇಹಕ್ಕೊಂದು ಜೈವಿಕ ಅದ್ಭುತ. ಹೃದಯವನ್ನು ಹೃದಯಾಘಾತದಿಂದ ಹೃದಯರೋಗದಿಂದ ಹೇಗೆ ಪಾರುಮಾಡಿ ಆರೋಗ್ಯವಂತರಾಗಿರಬೇಕೆಂದು 'ನಮ್ಮ ನಿಮ್ಮ ಹೃದಯದ ಕಥೆ' ಲೇಖನದಲ್ಲಿ ಅನಿತಾ ಪಿಂಟೋರವರು ಹೇಳಿದ್ದಾರೆ.

ಎಂ.ಕೆ ರಾಮಸ್ವಾಮಿರವರ 'ಜ್ಞಾನ ವಿಜ್ಞಾನ' ಎಂಬ ವೈಜ್ಞಾನಿಕ ಲೇಖನದಲ್ಲಿ ವೈದ್ಯ ವಿಜ್ಞಾನಕ್ಕೆ ಸಂಬಂಧಿಸಿದಂತೆ ಒಟ್ಟು ೧೨ ಲೇಖನಗಳಿದ್ದು ಪ್ರತಿಯೊಂದು ಲೇಖನವು ಆರೋಗ್ಯವೇ ಭಾಗ್ಯ ಎಂಬ ನಾನ್ನುಡಿಯಂತಿದ್ದು ವೈದ್ಯಕೀಯ ವಿಚಾರಗಳನ್ನು ತಿಳಿದುಕೊಂಡು ಆರೋಗ್ಯದ ಬಗ್ಗೆ ಕಾಳಜಿ ಹೊಂದಿ ಆರೋಗ್ಯ ರಕ್ಷಣೆಯ ತಮ್ಮ ಕರ್ತವ್ಯವನ್ನು ಪಾಲಿಸಬೇಕೆಂದು ಒತ್ತಿ ಹೇಳುವಂತಿವೆ. ವೈದ್ಯಕೀಯ ಕ್ಷೇತ್ರದಲ್ಲಿ ಕ್ರಾಂತಿಯನ್ನೇ ಉಂಟು ಮಾಡಿರುವ ಲೇಸರ್ ಬಳಕೆಯು ಕಣ್ಣಿನ ಶಸ್ತ್ರಚಿಕಿತ್ಸೆಯಿಂದ ಹಿಡಿದು ಕಣ್ಣಿನ ಶುಕ್ಲಪಟಲಕ್ಕೆ(ಕಾರ್ನಿಯ) ಪುನರ್ ರೂಪ ನೀಡುವುದು, ದೇಹ ಶಾಸ್ತ್ರಜ್ಞರಿಗೆ ಕರುಳುಗಳ ಒಳಹಾದಿ, ದೇಹದ ಇತರ ಒಳ ಅಂಗಗಳನ್ನು ಪರೀಕ್ಷೆ ಮಾಡಲು ಮೂತ್ರ ಕೋಶದ ಹರಳುಗಳನ್ನು ಕರಗಿಸಲು, ಹುಣ್ಣುಗಳನ್ನು ನಾಶ ಮಾಡಲು ಮೊದಲಾದವುಗಳಲ್ಲಿ ಕಾಣಬಹುದು ಎಂಬುದನ್ನು ಲೇಖಕರು ಬಹು ಪ್ರಭಾವಕಾರಿಯಾಗಿ 'ವೈದ್ಯಕೀಯ ಕ್ಷೇತ್ರದಲ್ಲಿ ಲೇಸರ್ ಬಳಕೆ ಭಾಗ ೧ ಮತ್ತು ೨' ಲೇಖನದಲ್ಲಿ ತಿಳಿಸಿದ್ದಾರೆ.

ದೇಹದ ಒಳಗೆ ಕರುಳು, ಹೊಟ್ಟೆ ಭಾಗಗಳನ್ನು ಸೂಕ್ಷ್ಮವಾಗಿ ವೀಕ್ಷಿಸಲು ಮತ್ತು ಎಲ್ಲಾ ದಿಕ್ಕಿಗೂ ತಿರುಗಿಸಿ ನೋಡಲು ಹಾಗೂ ಹೃದಯದಲ್ಲಿ ರಕ್ತದ ಹರಿಯುವಿಕೆಯ ಪರಿಚಲನೆಯನ್ನು ಫೋಟೋಮೆಟ್ರಿಕ್ ಸೆನ್ಸಾರ್‌ನಿಂದ ಅಳತೆ ಮಾಡಲು ಸಹಕಾರಿಯಾದ ದೃಗ್ ತಂತುಗಳ ಅನುಕೂಲ ಬಳಕೆಯನ್ನು 'ದೃಗ್ ತಂತುಗಳೂ(ಅಪ್ಟಿಕಲ್ ಫೈಬರ್) ಲೇಖನವು ತಿಳಿಸಿದರೆ, ದೇಹದ ಮೇಲೆ ಬೆಳಗಿನ ವೇಳೆ ಕಿರಣಗಳು ಬೀಳುವುದರೊಂದಿಗೆ ವಿಟಮಿನ್ ಡಿ ಉತ್ಪತ್ತಿಯಾಗಲು ಹಾಗೂ ರಿಕೆಟ್ಸ್ ಮತ್ತು ಕೆಲವು ಮೂಳೆ ರೋಗ ನಿವಾರಣೆಗೆ ಔಷಧಿಯಾಗಿ ಬಳಸುವ ಸೂರ್ಯನಿಂದ ಉತ್ಪತ್ತಿಯಾಗುವ ಅತೀ ನೇರಳೆ ಕಿರಣಗಳು ಹಾಗೂ ಸೂಜಿ, ನಾಣ್ಯ, ಕಲ್ಲು ಮತ್ತಿತರ ವಸ್ತುಗಳು ದೇಹದೊಳಗೆ ಇದ್ದರೆ ಪತ್ತೆ ಹಚ್ಚಲು, ದೇಹದೊಳಗೆ ದುರ್ಮಾಂಸ ಬೆಳೆಯುವುದನ್ನು ತಡೆಯಲು ಬಳಸುವ ಕ್ಷ-ಕಿರಣಗಳು ಉಂಟಾಗುವ ಬಗೆಯನ್ನು ವಿವರಿಸುವುದರೊಂದಿಗೆ ಅವುಗಳ ಗುಣಗಳು ಅವಗುಣಗಳು ಹಾಗೂ ಉಪಯೋಗಗಳನ್ನು ಬೆಳಕಿಗಿಂತ ಶಕ್ತಿಯುತವಾದ 'ವಿದ್ಯುತ್

ಕಾಂತೀಯ ವಿಕಿರಣಗಳು ಮತ್ತು ಕ್ಷ ಕಿರಣಗಳು' ಲೇಖನವು ಸೋಧಾಹರಣೆಯೊಂದಿಗೆ ತಿಳಿಸಿರುವುದನ್ನು ಕಾಣಬಹುದು.

ಹೃದಯದ ರಕ್ತನಾಳಗಳ ಆರೋಗ್ಯ ವೃದ್ಧಿಸುವಲ್ಲಿ ಸಹಕರಿಸುವ, ಥೈರಾಯ್ಡ್ ಗ್ರಂಥಿಯು ಹೆಚ್ಚು ಕೆಲಸ ಮಾಡುವಂತೆ ಮಾಡುವ, ಕ್ಯಾನ್ಸರ್ ರೋಗ ತಡೆಗಟ್ಟುವ, ಮಕ್ಕಳಲ್ಲಿ ಕರುಳು ಸಂಬಂಧಿ ವಾಂತಿ, ಬೇದಿ, ಅಲರ್ಜಿ ಮೊದಲಾದ ರೋಗಗಳ ನಿವಾರಣೆಗೆ ಸಹಕರಿಸುವ, ಮೂಳೆಗಳನ್ನು ಸುರಕ್ಷಿತವಾಗಿಡುವಂತೆ ಮಾಡುವ ಒಟ್ಟಾರೆಯಾಗಿ ಉತ್ತಮ ಆರೋಗ್ಯ ರಕ್ಷಣೆಯಲ್ಲಿ ಪ್ರಮುಖ ಪಾತ್ರ ವಹಿಸುವ ಸೋಯಾ ಬೀಜದ ಗುಣಗಳನ್ನು 'ನಮ್ಮ ಆರೋಗ್ಯ ರಕ್ಷಣೆಯಲ್ಲಿ ಸೋಯಾ ಬೀಜದ ಪಾತ್ರ' ಲೇಖನವು ತಿಳಿಸಿದರೆ, ಖಾದ್ಯ ತೈಲಗಳ ಮತ್ತು ಕೊಬ್ಬುಗಳ ಅವಶ್ಯಕತೆ ಹಿತ ಮಿತ ಉಪಯೋಗವು ಆರೋಗ್ಯಕ್ಕೆ ಒಳ್ಳೆಯದು ಹಾಗೂ ಅದರ ಅತಿಯಾದ ಉಪಯೋಗದಿಂದಾಗುವ ತೊಂದರೆಗಳನ್ನು 'ಖಾದ್ಯ ತೈಲಗಳು ಮತ್ತು ಕೊಬ್ಬುಗಳು' ಲೇಖನವು ವಿವರವಾಗಿ ತಿಳಿಸುತ್ತದೆ.

ಸಾಮಾನ್ಯವಾಗಿ ಎಲ್ಲರಿಗೂ ಕಾಡುವ ನೆಗಡಿಯು ೧೧೩ ರೀತಿಯದ್ದಾಗಿದ್ದು, ನೆಗಡಿಯು ಉಂಟಾಗುವ ಬಗೆ, ಬಂದಾಗ ಅನುಸರಿಸಬೇಕಾದ ಕ್ರಮ ಮತ್ತು ನೆಗಡಿ ಬರದಂತೆ ಮುನ್ನೆಚ್ಚರಿಕೆಗಳು ಮೊದಲಾದವನ್ನು ಬಹಳ ಸುಲಭ ಶೈಲಿಯಲ್ಲಿ 'ನೆಗಡಿಯ ಬಗ್ಗೆ ನಮ್ಮ ಅರಿವು' ಲೇಖನವು ತಿಳಿಸುವುದು. ದೇಹದ ಹೈಡ್ರೋಜನ್ ಪರಮಾಣುವಿನ ವಿದ್ಯುನ್ಮಾನ ಗಣತಿಯನ್ನು ತೆಗೆದುಕೊಳ್ಳುವ ವ್ಯವಸ್ಥೆಯೇ ಎಂ.ಆರ್.ಐ ಆಗಿದ್ದು, ತಲೆ ಬುರುಡೆ ಒಳಗೆ ಇರುವ ಮೆದುಳಿನ ಅಂಗಾಂಶಗಳನ್ನು ಪರೀಕ್ಷಿಸಲು, ದೇಹದ ಮೂಳೆ ಮುರಿತ ಮತ್ತು ಮೂಳೆಗಳಲ್ಲಿ ಕಂಡು ಬರುವ ಊನತೆ ಪತ್ತೆ ಹಚ್ಚಲು ಎಂ.ಆರ್.ಐ ಸಹಕಾರಿಯಾದುದನ್ನು ಹಾಗೂ ಎಂ.ಆರ್.ಐ ಸಾಧನವು ವೈದ್ಯಕೀಯ ಕ್ಷೇತ್ರದಲ್ಲಿ ರೋಗ ಪತ್ತೆ ಮಾಡುವಲ್ಲಿ ಪ್ರಮುಖ ಸಾಧನವೆಂಬುದನ್ನು ಲೇಖಕರು 'ಕಾಂತೀಯ ಅನುರಣನೆ ಬಿಂಬನ (ಎಂ.ಆರ್.ಐ ಮ್ಯಾಗ್ನಟಿಕ್ ರಿಸೋನನ್ಸ್ ಇಮ್ಯಾಜಿಂಗ್)' ಲೇಖನದಲ್ಲಿ ತಿಳಿಸಿದ್ದಾರೆ.

ಜಾಂಡೀಸ್ ಮತ್ತು ರಕ್ತಹೀನತೆಗೆ ಒಳಗಾಗಲು ಮುಖ್ಯ ಕಾರಣ ರಕ್ತದಲ್ಲಿರುವ ಆರ್.ಎಚ್ ಆಗಿದ್ದು, ಆರ್ ಎಚ್ ನಿಂದ ಕೂಡಿದ ಮಕ್ಕಳನ್ನು ಹೇಗೆ ರಕ್ಷಿಸಬಹುದು ಎಂಬುದನ್ನು ಲೇಖಕರು 'ಆರ್.ಎಚ್ ಮಕ್ಕಳನ್ನು ಉಳಿಸಬಹುದು' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

ವಿಜ್ಞಾನ ಗಂಗೆಯ ಬಿಂದುಸಾರ ಎಂಬ ನಾಗೇಶ್ ಹೆಗಡೆಯವರ ಕೃತಿಯಲ್ಲಿ ತಿಳಿಸಿರುವಂತೆ ನಿಸರ್ಗದ ಜೀವ-ಜಗತ್ತಿನ ಅತ್ಯಂತ ಬುದ್ಧಿ ಜೀವಿ ಎನಿಸಿದ ಮಾನವನು ಇತರ ಜೀವಿಗಳಂತೆ ಗಂಡು ಹೆಣ್ಣು ಎಂಬ ಪ್ರಭೇದಗಳಿಂದ ಕೂಡಿದ್ದು, ಆಕಾರ ಸ್ವರೂಪ

ಸಾಮರ್ಥ್ಯಕ್ಕನುಗುಣವಾಗಿ ಕೆಲಸ ಕಾರ್ಯಗಳು ಅವರಿಬ್ಬರಲ್ಲೂ ಹಂಚಿಕೆಯಾಗಿರುತ್ತದೆ. ಕೆಲವು ಸಾಮ್ಯತೆಗಳು ಗಂಡು ಹೆಣ್ಣು ಇಬ್ಬರಲ್ಲಿಯೂ ಇದ್ದು, ದಿಟ್ಟತನ ಶೌರ್ಯ, ಕ್ರೌರ್ಯಕ್ಕೆ ಗಂಡಾದರೆ, ಸಂಯಮ ಪ್ರೇಮಕ್ಕೆ ಹೆಣ್ಣು ಹೆಸರುವಾಸಿಯಾಗಿದ್ದಾಳೆ. ಇಬ್ಬರೂ ಜಗತ್ತನ್ನು ಮುಂದುವರೆಸಲು ಕಾರಣಕರ್ತರೆಂಬುದನ್ನು ಹಾಗೂ ಕೆಲವು ವೇಳೆ ಗಂಡು ಹೆಣ್ಣಾಗಿ, ಹೆಣ್ಣು ಗಂಡಾಗಿ ಪರಿವರ್ತನೆಗೊಂಡದ್ದು ಮತ್ತು ಸಂತಾನೋತ್ಪತ್ತಿಯಲ್ಲಿ ಇಬ್ಬರೂ ಪ್ರಮುಖರು ಎಂಬುದನ್ನು 'ಗಂಡು ಹೆಣ್ಣು' ಲೇಖನದಲ್ಲಿ ಕೃಷ್ಣಾನಂದ ಕಾಮತ್ ರವರು ತಿಳಿಸಿದ್ದಾರೆ. ಅದರಂತೆ ಮಾನವನ ಹುಟ್ಟಿಗೆ ಕಾರಣವಾದ ವಂಶವಾಹಿಯ ಹುಟ್ಟು ಸ್ವರೂಪ ಬೆಳವಣಿಗೆಯನ್ನು ವಿವರಣಾತ್ಮಕವಾಗಿ 'ವಂಶವಾಹಿ ಕುರಿತ ಒಂದು ಕಲ್ಪನಾ ವಿಲಾಸ' ಎಂಬಲ್ಲಿ ಎಂ.ಆರ್.ಎನ್.ಮೂರ್ತಿರವರು ತಿಳಿಸುತ್ತಾರೆ. ಸ್ತನ ಪಾನವು ಎಲ್ಲಾ ಹುಟ್ಟುವ ನವಜಾತ ಜೀವಿಗಳಿಗೆ ಅಮೃತಪಾನವಾಗಿರುವ ಮೊದಲಾದ ವಿಚಾರಗಳನ್ನು ಲೇಖಕಿ ಎನ್.ಎಸ್.ಲೀಲಾರವರು 'ಉಣಿಸಿದಳಾ ತಾಯಿ' ಲೇಖನದಲ್ಲಿ ತಿಳಿಸುವುದ ರೊಂದಿಗೆ ಸ್ತನಪಾನದ ಮಹತ್ವ ಹಾಗೂ ಅಗತ್ಯತೆಯನ್ನು ಸರಳವಾಗಿ ಚರ್ಚಿಸಿದ್ದಾರೆ.

ಎಂ.ಎಸ್ ತಿಮ್ಮಪ್ಪನವರು ಮನಸ್ಸಿನ ಪ್ರಭಾವವು ದೇಹದ ಮೇಲಾದಾಗ ದುಃಖ, ಸಂತೋಷ, ಕೋಪ, ಉದ್ವೇಗ, ಆಕ್ರೋಷ, ಭಯ ಮೊದಲಾದ ಭಾವನೆಗಳು ಹೊರಹೊಮ್ಮುವುದನ್ನು ವೈವಿಧ್ಯಮಯ ದೃಷ್ಟಾಂತಗಳ ಮೂಲಕ ಸ್ಪಷ್ಟ ಪರಿಕಲ್ಪನೆಯೊಂದಿಗೆ ನೇರ ವಿವರಣಾ ಶೈಲಿಯೊಂದಿಗೆ ಅಭಿವ್ಯಕ್ತಿಸಿದ್ದಾರೆ. ದ್ವೈತ, ಅದ್ವೈತ, ವಿಶಿಷ್ಟಾದ್ವೈತ ಸಿದ್ಧಾಂತಗಳ ವಿವರಣೆಯನ್ನು ಲೇಖನದ ಮಧ್ಯದಲ್ಲಿ ಸೂಕ್ಷ್ಮವಾಗಿ ಮಾಡಿ, ಮನಸ್ಸು ಮತ್ತು ದೇಹದ ಸಂಬಂಧವನ್ನು ಇಲಿಯ ಮೇಲೆ ನಡೆಸಿದ ಪ್ರಯೋಗದ ವಿವರಣೆಯೊಂದಿಗೆ ವಿಶ್ಲೇಷಿಸಿ ಕೆಟ್ಟ ಭಾವನೆಗಳಾದ ಕೋಪ ತಾಪಗಳ ಪ್ರಭಾವವು ವಿಕೃತಕ್ಕೆ ತಿರುಗುವ ಸ್ಥಾನಪಲ್ಲಟವನ್ನು ತಿಳಿಸಿದ್ದಾರೆ. ಜೊತೆಗೆ ದೇಹ-ಮನಸ್ಸು ಸಂಬಂಧದ ಅರಿವಿನಿಂದ ಹಲವು ನೋವು ರೋಗಗಳ ನಿವಾರಣೆಯು ಸಾಧ್ಯ ಎಂಬುದನ್ನು ಕಿವಿಮಾತಾಗಿ 'ಮನಸ್ಸು ಮತ್ತು ದೇಹ' ಲೇಖನದಲ್ಲಿ ತಿಳಿಸಿದ್ದಾರೆ.

ಗುಣಗಳು ಒಂದು ಪೀಳಿಗೆಯಿಂದ ಇನ್ನೊಂದು ಪೀಳಿಗೆಗೆ ಸಾಗುವ ಅನುವಂಶೀಯತೆ ಯನ್ನು ಕುರಿತಂತೆ ಸುಧೀರ್ಘವಾಗಿ ವಿವರಿಸುತ್ತಾ ವರ್ಣತಂತುಗಳ ಹುಟ್ಟು ಬೆಳವಣಿಗೆ ಕಾರ್ಯತತ್ಪರತೆ ಪ್ರಭಾವಗಳನ್ನು 'ಮನುಷ್ಯ ಕುಲಕ್ಕೊಂದು ವರದಾನ: ಮಾನವ ಅನುವಂಶೀಯತಾ ನೀಲನಕ್ಷೆ ಯೋಜನೆ' ಲೇಖನವನ್ನು ವಿವರಿಸುವಲ್ಲಿ ಡಾ.ಎಸ್.ಎನ್.ಹೆಗಡೆ ರವರು ಬಳಸಿರುವ ಶೈಲಿ ಹಾಗೂ ಅಭಿವ್ಯಕ್ತಿ ಸ್ವರೂಪವು ಸಹಜ ಸರಳವಾಗಿದೆ. ಆದಷ್ಟು ವೈದ್ಯಕೀಯ ಪದಗಳಿಗೆ ಕನ್ನಡಾನುವಾದ ಮಾಡಿದ ಪದಗಳ ಬಳಕೆಯೊಂದಿಗೆ ಹೋಲಿಕೆ

ನಿದರ್ಶನಗಳನ್ನು ನೀಡುತ್ತಾ ವಂಶಾವಳಿ, ಡಿ.ಎನ್.ಎ, ಆರ್.ಎನ್ ಎ ಗಳ ರಚನೆ ಮತ್ತು ಕ್ರಿಯೆಯನ್ನು ವಿವರಿಸುವುದರೊಂದಿಗೆ ಅನುವಂಶೀಯತೆಯ ಭಾಷೆಯ ಬಗ್ಗೆ ತಿಳಿಸಿದ್ದಾರೆ. ಕೊನೆಯಲ್ಲಿ ಇದರ ಮೇಲೆ ನಡೆದ ಹಾಗೂ ನಡೆಯುತ್ತಿರುವ ಸಂಶೋಧನೆಗಳ ಬಗ್ಗೆಯೂ ಮಾಹಿತಿ ನೀಡಿರುವುದನ್ನು ಕಾಣಬಹುದು.

ಆವಿಷ್ಕಾರ ಸಂಶೋಧನೆಗಳು ಎಲ್ಲಾ ಕ್ಷೇತ್ರಗಳಲ್ಲಿ ನಡೆಯುವಂತೆ ವೈದ್ಯಕೀಯ ಕ್ಷೇತ್ರದಲ್ಲಿ ಹೊಸ ಬಗೆಯಲ್ಲಿ ನಡೆದಿದೆ ಎಂಬುದಕ್ಕೆ ಡಿಸೈನರ್ಸ್ ಬೇಬೀಸ್ ಉದಾಹರಣೆಯಾಗಿದೆ. ಇದು ಜರ್ಮಲೈನ್ ಥೆರಪಿಯ ಮುಂದುವರಿದ ಭಾಗವಾಗಿದ್ದು, ಹೀಗೆ ಮಾಡುವುದರಿಂದ ಮುಂದೆ ಹುಟ್ಟುವ ಮಗುವನ್ನು ವಂಶಪಾರಂಪರ್ಯ ರೋಗದಿಂದ ತಡೆಯಬಹುದು ಹಾಗೂ ತಮಗೆ ಬೇಕಾದ ಸರ್ವ ಲಕ್ಷಣಗಳನ್ನು ಹೊಂದಿರುವ ಮಗುವನ್ನು ಪಡೆಯಬಹುದು ಎಂಬುದನ್ನು ಹಾಗೂ ಸರ್ಕಾರದ ಕೆಲವು ನೀತಿ ನಿಯಮಗಳೊಂದಿಗೆ ಸ್ವೇಚ್ಛಾಚಾರಕ್ಕೆ ಒಳಗಾಗದೇ ಜನೋಪಯೋಗಿಯಾಗಿ ಈ ಥೆರಪಿಯನ್ನು ಬಳಸಬೇಕೆಂದು ಟಿ.ಜಿ.ಶ್ರೀನಿಧಿರವರು 'ಡಿಸೈನರ್ಸ್ ಬೇಬೀಸ್' ಲೇಖನದಲ್ಲಿ ವಿವರಿಸಿದ್ದಾರೆ.

ಮಾನವ ಕುಲಕ್ಕೆ ವೈದ್ಯ ಲೋಕ ಎಷ್ಟು ದೊಡ್ಡದು, ಅಮೃತ ಸಂಜೀವಿನಿ ಬೆಟ್ಟವಿದ್ದಂತೆ. ಅಂತಹ ವೈದ್ಯ ಲೋಕದ ತಪ್ಪು ಮಾಹಿತಿಯಿಂದಾಗಿ ಅನುಭವಿಸುವ ದೈಹಿಕ ಮಾನಸಿಕ ನರಕಯಾತನೆಯನ್ನು ನೇಮಿಚಂದ್ರರವರ 'ಫೈನಲ್ ಡಯಾಗ್ನೋಸಿಸ್' ಲೇಖನವು ತಿಳಿಸುವುದು. ಸಾಮಾನ್ಯವಾಗಿ ಪೈಥಾಲಜಿಸ್ಟ್ ಕೊಡುವ ರಿಪೋರ್ಟಿನ ಆಧಾರದ ಮೇಲೆ ವೈದ್ಯರು ಚಿಕಿತ್ಸೆ ನೀಡುವುದು ಸಾಮಾನ್ಯ. ಪೈಥಾಲಜಿಸ್ಟ್ ಕೊಡುವ ರಿಪೋರ್ಟನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೆ ವೈದ್ಯರು ಮಾಡುವ ಎಡವಟ್ಟಿನಿಂದಾಗಿ ಒರ್ವ ತಾಯಿಯು ತನ್ನ ಮಗಳಿಗೆ ಭಯಾನಕ ರೋಗ ಬಂದಿದೆ ಎಂದು ಗೊತ್ತಾದಾಗ, ರೋಗದ ಮೇಲಿನ ಸಂದೇಹದಿಂದ ಪಡಬಾರದ ಯಾತನೆಯನ್ನೂ ಹಾಗೂ ರೋಗದ ಹಂತ, ಗುಣಪಡಿಸುವ ವಿಧಾನಕ್ಕೆ ಅಂತರ್‌ಜಾಲ ಮಾಹಿತಿಯಿಂದ ಹಿಡಿದು ಎಲ್ಲಾ ರೀತಿಯ ಮಾಹಿತಿ ಆಕರಗಳ ಮೊರೆ ಹೊಗುವ ಪರಿಯನ್ನೂ, ಮಾನಸಿಕವಾಗಿ ಪಡುವ ನೋವಿನ ಬಗೆಯನ್ನು ವಿಮರ್ಶಾತ್ಮಕವಾಗಿ ತಿಳಿಸಿದ್ದಾರೆ. ಜೊತೆಗೆ ಸಂಯಮದಿಂದ ಜನಸಾಮಾನ್ಯರು ರೋಗದ ನೈಜತೆಯನ್ನು ತಿಳಿಯುವ ಪ್ರಯತ್ನ ಮಾಡಬೇಕೆಂದು ಎಚ್ಚರಿಸುವುದನ್ನು ಲೇಖನವು ತಿಳಿಸುವುದು.

ವಸುಂದರಾ ಭೂಪತಿರವರ 'ವಿಜ್ಞಾನ ಸಾಹಿತ್ಯ-೨೦೧೦'ರ ಒಂದು ಲೇಖನದಲ್ಲಿ ತಿಳಿಸಿರುವಂತೆ, ಕೆಲವು ದೈಹಿಕ ಕಾರಣದಿಂದ ಹೆಣ್ಣು ಮತ್ತು ಗಂಡಸಿನಲ್ಲಿ ಉಂಟಾಗುವ

ಬಂಜೆತನಕ್ಕೆ ೧೯೫೦ರ ದಶಕದಲ್ಲಿ ಇಂಗ್ಲೆಂಡಿನ ರಾಬರ್ಟ್ ಎಡ್ವರ್ಡ್ಸ್‌ರವರು ಮಾನವನ ದೇಹದಿಂದ ಹೊರತೆಗೆದ ಅಂಡವನ್ನು ಪ್ರನಾಳದಲ್ಲಿ ಫಲೀಕರಿಸುವ ಸಾಧ್ಯತೆಯನ್ನು ಪರಿಚಯಿಸಿದರು. ಇದರ ಫಲ ಸ್ವರೂಪದಂತೆ ಪ್ರನಾಳ ಶಿಶುಗಳ ಜನನವು ಹೊರ ದೇಶದಲ್ಲಿ ಪ್ರಾರಂಭವಾಯಿತು. ಅದರಂತೆ ನಮ್ಮ ದೇಶದಲ್ಲೂ ಪ್ರನಾಳ ಶಿಶುಗಳ ಜನನಕ್ಕೆ ಕಾರಣ ಕರ್ತರಾದರು ಎಂದು ವೈಜ್ಞಾನಿಕ ತಂತ್ರಗಳಿಗೆ ನೋಬೆಲ್ ಗೌರವ ಎಂಬಲ್ಲಿನ 'ಪ್ರನಾಳದಲ್ಲಿ ಫಲೀಕರಣ– ಬಂಜೆತನಕ್ಕೊಂದು ಪರಿಹಾರ' ಎಂಬ ಲೇಖನದಲ್ಲಿ ಆಡ್ಯನಡ್ಕ ಕೃಷ್ಣಭಟ್ಟರು ತಿಳಿಸಿದ್ದಾರೆ.

ವ್ಯಕ್ತಿಯ ಬೆಳವಣಿಗೆ, ವಯಸ್ಕ, ವೃದ್ಧಾಪ್ಯದ ಮೇಲೆ ವರ್ಣತಂತುಗಳ ಪ್ರಭಾವ ಹಾಗೂ ವರ್ಣದಂಡದ ತುದಿ ರಕ್ಷಣಾ ಕವಚವನ್ನು ಕಳೆದುಕೊಂಡಾಗ ಜೀವಕೋಶದ ಸಾವಿಗೆ ಕಾರಣವಾಗುವ ಮೊದಲಾದ ಅತ್ಯವಶ್ಯಕ ಮಾಹಿತಿ ವಿಚಾರಗಳನ್ನು ಲೇಖಕರಾದ ಪಿ.ಎಸ್ ಶಂಕರ್‌ರವರು 'ಬೆಳವಣಿಗೆಯ ಮೇಲೆ ವರ್ಣದಂಡಗಳ ತುದಿಯ ಪ್ರಭಾವ' ಲೇಖನದಲ್ಲಿ ತಿಳಿಸಿದ್ದಾರೆ.

ನಗುವಿನಲ್ಲಿ ಆರೋಗ್ಯ. ನಗುವಿನಲ್ಲೇ ಸ್ವರ್ಗ ಎಂಬಂತೆ ಮನಸ್ಸಿಗೆ ಆಹ್ಲಾದವಾದಾಗ ಆಂಗಿಕ ಭಾಷೆಯ ಮೂಲಕ ಹೊರ ಹೊಮ್ಮುವುದೇ ನಗು. ಹಲವಾರು ರೀತಿಯಿಂದ ಕೂಡಿದ ನಗುವು ಒಂದು ಯೋಗವಿದ್ದಂತೆ. ಮಾನವಕುಲದ ಆರೋಗ್ಯ ರಕ್ಷಣೆಯಲ್ಲಿ ಪರಮೌಷಧಿಯಂತೆ. ಅನುಸಂವೇಧನೆ ಹಾಗೂ ಸ್ವಾಯತ್ತ ನರ ಸಂವೇದನೆಗಳಿಂದ ನಿರಾಳಗೊಳ್ಳುವ ಮನಸ್ಸಿಗೆ ಮೂಲವೇ ನಗು. ನೆನಪಿನ ಶಕ್ತಿ ವೃದ್ಧಿಯಲ್ಲಿ, ಭಯ ದುಃಖಗಳ ನಿವಾರಣೆಯಲ್ಲಿ, ರಕ್ತದ ಏರೊತ್ತಡ ಕಡಿಮೆಗೊಳಿಸುವಲ್ಲಿ, ಮಧುಮೇಹ ಆಸ್ತಮಗಳ ಹತೋಟಿಯಲ್ಲಿ ನಗುವು ಮಹತ್ವದ ಪಾತ್ರ ವಹಿಸುತ್ತದೆ ಎಂದು ವಿವರಿಸುತ್ತಾ ಇಂದಿನ ಒತ್ತಡಯುಕ್ತ ಜೀವನಕ್ಕೆ ನಗು ಎಷ್ಟು ಮುಖ್ಯ ಎಂಬುದನ್ನು ಬಹಳಷ್ಟು ನಿದರ್ಶನದ ಸಹಯೋಗಗಳೊಂದಿಗೆ ಲೇಖಕರಾದ ವಸಂತ ಕುಲಕರ್ಣಿಯವರು 'ನಗು ಪರಮೌಷಧಿ' ಲೇಖನದಲ್ಲಿ ಮನುಷ್ಯನ ಆರೋಗ್ಯದ ಬಗ್ಗೆ ಕಾಳಜಿಯನ್ನು ವ್ಯಕ್ತ ಪಡಿಸಿದ್ದಾರೆ.

ಮಹಾಮಾರಿಯಾಗಿ ಮನುಷ್ಯ ಕುಲವನ್ನೇ ಆತಂಕಕ್ಕೆ ಒಳಪಡಿಸಿರುವ ಭಯಾನಕ ರೋಗವೇ ಕ್ಯಾನ್ಸರ್. ಇದೊಂದು ಗೆದ್ದಲಿನಂತಿದ್ದು, ಮಾನವನ ದೇಹದ ಒಂದು ಅಂಗದಿಂದ ಪ್ರಾರಂಭವಾಗಿ ಇಡೀ ದೇಹಕ್ಕೆ ಹರಡುವುದರೊಂದಿಗೆ ಕೊನೆಗೆ ಸಾವಿನಲ್ಲೇ ಮುಕ್ತಾಯವನ್ನು ಪಡೆಯುವ ಹೆಮ್ಮಾರಿ. ಈ ರೋಗವು ಹರಡಿದ ನಂತರ ಒಂದು ಕಡೆ ನಿಯಂತ್ರಿಸಿದರೆ ಮತ್ತೆಲ್ಲೋ ಮೊಳಕೆಯೊಡೆಯುವ ವಿನಾಶಕಾರಿ ರೋಗವಿದು.

ಆರಂಭದಲ್ಲೇ ಈ ವ್ಯಾಧಿಯನ್ನು ಪತ್ತೆ ಹಚ್ಚುವುದರೊಂದಿಗೆ ಕಿಮೋ ತೆರಫಿ ಇಲ್ಲವೇ ಲೇಝುರ್ ಚಿಕಿತ್ಸೆಯಿಂದ ಬಹಳ ಜಾಗರೂಕತೆಯಿಂದ ಚಿಕಿತ್ಸೆಯನ್ನು ನೀಡಬೇಕಾಗುವ ಕ್ಯಾನ್ಸರ್, ಸ್ತನ, ದೊಡ್ಡ ಕರುಳು, ಶ್ವಾಸಕೋಶ ಮೊದಲಾದ ದೇಹದ ಬಾಗವನ್ನು ಗುರಿಮಾಡಿಕೊಂಡು ಬಹುಬೇಗ ಹರಡುವ ರೋಗವಾಗಿದೆ. ಇತ್ತೀಚಿನ ಮುಂದುವರಿದ ಜಗತ್ತಿನಲ್ಲಿ ಅತ್ಯಂತ ಕಡಿಮೆ ವೆಚ್ಚದ ಹಾಗೂ ಪೂರ್ಣಗುಣಪಡಿಸುವ ಪ್ರಭಾವಕಾರಿ ಚಿಕಿತ್ಸಾ ವಿಧಾನದ ಆವಿಷ್ಕಾರ ಆಗುವುದೆಂದು ಹೇಳುವುದರೊಂದಿಗೆ ಆಶಾಭಾವನೆಯನ್ನು ಲೇಖಕರಾದ ಡಾ.ಸಿ.ಜಿ ಕೇಶವ ಮೂರ್ತಿರವರು 'ಕ್ಯಾನ್ಸರ್ ಗುಟ್ಟು ರಟ್ಟು?' ಲೇಖನದಲ್ಲಿ ಸರಳವಾಗಿ ತಿಳಿಸಿದ್ದಾರೆ.

ಮಿದುಳು ಆರೋಗ್ಯವಾಗಿದ್ದರೆ ಇಡೀ ದೇಹವೇ ಆರೋಗ್ಯವಾಗಿದ್ದಂತೆ. ಹೀಗಾಗಿ ಮಿದುಳಿಗೆ ಆಹಾರವಾದ ನೀರು, ಆಮ್ಲಜನಕ, ಪೋಷಕಾಂಶಯುಕ್ತ ಆಹಾರ ನೀಡುವುದರೊಂದಿಗೆ ವ್ಯಾಯಾಮಗಳ ಅಭ್ಯಾಸವು ಬಹು ಅಗತ್ಯ ಎಂದು ಲೇಖಕರಾದ ಎನ್.ಗೋಪಾಲಕೃಷ್ಣರವರು 'ಆರೋಗ್ಯ ಜೀವನ ಲಹರಿ' ಲೇಖನದಲ್ಲಿ ಹೇಳಿದ್ದಾರೆ. ವಾಸ್ತವತೆಯ ಅರಿವಿನೊಂದಿಗೆ ಸಕಾರಾತ್ಮಕ ಭಾವನೆಗಳು ಅಗತ್ಯ. ನಕಾರಾತ್ಮಕ ಭಾವನೆಗಳಿಂದ ದೂರವಿರಬೇಕು ಎಂದೂ ಲೇಖನದಲ್ಲಿ ಹೇಳಿದ್ದಾರೆ.

"ಪ್ರತಿಯೊಬ್ಬರ ದೇಹದಲ್ಲಿರುವ ಆರಂಭಿಕ ಅಂದರೆ ದೇಹ ಬೆಳೆದ ಹಾಗೆ ದೇಹದ ಬೇರೆ ಬೇರೆ ಜೀವಕೋಶಗಳಾಗಿ ಬದಲಾಗುವ ಸಾಧ್ಯತೆ ಇರುವ ಪ್ರಮುಖ ಜೀವಕೋಶಗಳೇ ಆಕರಕೋಶ/ಸ್ಟೆಮ್‌ಸೆಲ್"[೮] ಆಗಿದ್ದು, ರೋಗಿಯ ದೇಹದ ಯಾವುದೇ ಅಂಗ ಕಸಿ ಮಾಡುವಲ್ಲಿ ಹಾಗೂ ಕ್ಯಾನ್ಸರ್ ರೋಗದ ಚಿಕಿತ್ಸೆಯಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ. ದೇಹದ ಯಾವುದೇ ಅಂಗ ಕಸಿ ಮಾಡುವಲ್ಲಿ ಚಿಕಿತ್ಸೆಗೆ ಅಗತ್ಯವಿರುವ ಜೀವಕೋಶಗಳನ್ನು ಕಸಿಗೆ ಒಳಪಡುವ ಅಂಗಗಳಲ್ಲಿ ಬೆಳೆಸುವುದರೊಂದಿಗೆ ಯಶಸ್ವಿ ಶಸ್ತ್ರಚಿಕಿತ್ಸೆ ಮಾಡಲು ಆಕರಕೋಶಗಳು ಸಹಕಾರಿ ಎಂಬುದನ್ನು ವಿವರಿಸುವುದರೊಂದಿಗೆ ವೈದ್ಯ ಲೋಕದಲ್ಲಿನ ಅದ್ಭುತ ಸಾಧನೆಗಳಲ್ಲೊಂದು ಎಂದು ಎಚ್.ಎಸ್.ಮೋಹನ್‌ರವರು 'ಆಪರೇಷನ್ ಸ್ಟೆಮ್‌ಸೆಲ್!' ಲೇಖನದಲ್ಲಿ ವಿವರಿಸಿದ್ದಾರೆ.

೨೦೦೯ರಲ್ಲಿ ಎಲ್ಲಾ ಸುದ್ದಿ ವಾಹಿನಿಗಳಲ್ಲಿ ಗರ್ಭಕೋಶದ ಕೊರಳಿನ '(ಸೆರ್ವಿಕ್ಸ್) ಕ್ಯಾನ್ಸರ್ ರೋಗಕ್ಕೆ ಲಸಿಕೆಯಾದ ಗಾರ್ಡಾಸಿಲ್(ಎಂ.ಎಸ್.ಡಿ ಕಂಪನಿ) ಹಾಗೂ ಸರ್ವರೆಕ್ಸ್ (ಗ್ಲಾಕ್ಸೊಸ್ಮಿತ್‌ಕ್ಲೈನ್) ನೀಡಲು ಆಂದ್ರಪ್ರದೇಶದ ಖಮ್ಮಂ ಜಿಲ್ಲೆಯಲ್ಲಿ ೧೪೦೦೦ ಹೆಣ್ಣು ಹುಡುಗಿಯರ ಮೇಲೆ ಪ್ರಯೋಗ ಮಾಡುವ ಯೋಜನೆ ಔಷಧಿ ಕಂಪನಿಯವರು ಹಾಗೂ ವೈದ್ಯರು ಕಾರ್ಯಪ್ರವೃತ್ತರಾದರು. ೨೦೦೬ರ ಜೂನ್‌ನಲ್ಲೇ ಅಮೇರಿಕಾದಲ್ಲಿ

ಈ ಲಸಿಕೆಯಿಂದಾಗಿ ಸು ೬೧ ಸಾವುಗಳು ಸಂಭವಿಸಿದ್ದರಿಂದ ಅಲ್ಲಿನ ಸರ್ಕಾರ ಈ ಲಸಿಕೆಯನ್ನು ನಿಷೇಧಿಸಿತ್ತು. ಹೀಗಾಗಿ ಯಾವುದೇ ಪ್ರಾಯೋಗಿಕ ಪಲಿತಾಂಶವಿಲ್ಲದೆ ಆ ಲಸಿಕೆಯನ್ನು ಬಳಸಬಾರದೆಂಬ ನಿಯಮ ಇದ್ದರೂ ಕೆಲವರು ಅದರ ಉಪಯೋಗ ಮಾಡಿದರು.

ಇದನ್ನು ಗಮನಿಸಿದ ಕೆಲವು ಔಷಧಿ ಕಂಪನಿಯವರು ಯಾವುದೇ ಅಡ್ಡ ಪರಿಣಾಮವಿಲ್ಲವೆಂದು ಮಾತನಾಡಿದವು. ಇದು ಸುಳ್ಳು ಎಂದು ತಿಳಿದ ಕೂಡಲೇ ಕೆಲವು ಮಹಿಳಾ ಪರ ಸಂಸ್ಥೆಗಳು, ಸಖಿ ಸಂಸ್ಥೆಯೂ ಸೇರಿದಂತೆ ಬಹಳಷ್ಟು ಸಂಸ್ಥೆಗಳು ಕಾನೂನಾತ್ಮಕ ಹೋರಾಟ ಮಾಡಿದರು. ಪರಿಣತ ವಿಷಯ ತಜ್ಞರು ಗರ್ಭಕೋಶ ಕರುಳಿನ ಕ್ಯಾನ್ಸರ್ ಬರುವುದು ೩೫ ವರ್ಷ ವಯಸ್ಸಿನ ನಂತರ ಹಾಗೂ ಅದಕ್ಕೆ ಕಾರಣಗಳು ವಿಭಿನ್ನವಾಗಿದ್ದು, ಅನಾವಶ್ಯಕವಾಗಿ ೧೫–೨೬ ವರ್ಷದ ಹೆಣ್ಣು ಮಕ್ಕಳನ್ನು ಪ್ರಯೋಗದ ಪಶುಗಳಾಗಿ ಮಾಡುವುದು ಎಷ್ಟು ನ್ಯಾಯ ಎಂಬುದನ್ನು ಲೇಖಕರಾದ ಪ್ರಕಾಶ್ ಸಿ ರಾವ್ ರವರು 'ಹದಿಹರೆಯದ ಹೆಣ್ಣುಮಕ್ಕಳಾಗುತ್ತಿದ್ದಾರೆ ಪ್ರಯೋಗದ ಪಶುಗಳು' ಎಂಬ ಲೇಖನದಲ್ಲಿ ವಿವರಿಸುವುದರೊಂದಿಗೆ ಗರ್ಭಕೋಶದ ಕರುಳಿನ ಕ್ಯಾನ್ಸರ್‌ನ ಬಗ್ಗೆ ಹುಟ್ಟು ಬೆಳವಣಿಗೆ ಮತ್ತು ಅದರ ಕಾರಣಗಳ ಬಗ್ಗೆ ವಿವರಿಸಿರುವುದನ್ನು ಗಮನಿಸಬಹುದು.

ಆರೋಗ್ಯ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಿಸಿದ ಸುಮಾರು ೭೦ ಲೇಖನಗಳನ್ನು ಗಮನಿಸಲಾಗಿದ್ದು, ಸಾಮಾನ್ಯ ಜನತೆಯು ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ತಮ್ಮ ಕುಟುಂಬ ಹಾಗೂ ತಾನು ವಾಸಿಸುವ ಸಮಾಜದ ಆರೋಗ್ಯ ಕಾಪಾಡಿಕೊಳ್ಳಲು ವೈದ್ಯಕೀಯ ವಿಜ್ಞಾನ ಲೇಖನವು ಅಮೂಲ್ಯ ಮಾಹಿತಿಯ ಆಗರವಾಗಿರುವುದನ್ನು ಗಮನಿಸಲಾಯಿತು. ಇಂದಿನ ಯುಗದಲ್ಲಿ ಹಿಂದೆಂದಿಗಿಂತಲು ಆರೋಗ್ಯದ ಬಗೆಗಿನ ಅರಿವು ಜಾಗೃತಿಯು ಅಗತ್ಯ ಅನಿವಾರ್ಯವಾಗಿರುವುದನ್ನು ಗಮನಿಸಿದ ತಜ್ಞ ಸಾಹಿತಿಗಳು ಆರೋಗ್ಯದ ವಿಷಯವನ್ನಾಧರಿಸಿ ವಿವಿಧ ಬಗೆಯ ಲೇಖನಗಳ ರಚನೆಯನ್ನು ಮಾಡಿರುವುದನ್ನು ಅಧ್ಯಯನದಲ್ಲಿ ಗುರುತಿಸಲಾಯಿತು.

ಪ್ರತಿಯೊಂದು ಯುಗದಲ್ಲೂ ಆರೋಗ್ಯದ ವಿಷಯದ ಬಗ್ಗೆ ಹೆಚ್ಚಿನ ಕಾಳಜಿಯನ್ನು ಹೊಂದಿದ್ದು ಜನತೆಗೆ ಅಗತ್ಯ ಮಾಹಿತಿಯನ್ನು ನೀಡಿರುವುದನ್ನು ಕಾಣಬಹುದು. ಅದರಂತೆ ಆರೋಗ್ಯ ಸಾಹಿತ್ಯದ ಮಹತ್ವದ ಹಿನ್ನೆಲೆಯಲ್ಲಿ ಸಾಹಿತಿಗಳು ವಿಷಯವನ್ನು ಜನತೆಗೆ ತಲುಪಿಸಲು ಸುಲಭ ಅರ್ಥಗ್ರಾಹ್ಯದ ಪದಗಳ ಬಳಕೆಯೊಂದಿಗೆ ಲೇಖನಗಳನ್ನು ರಚಿಸಿರುವುದನ್ನು ಗುರುತಿಸಲಾಯಿತು.

೫.೪ ಭೌತ ಮತ್ತು ಬಾಹ್ಯಾಕಾಶ ವಿಜ್ಞಾನ

ಭೌತ ವಿಜ್ಞಾನ: ಭೌತ ವಿಜ್ಞಾನ ಅಥವಾ ಫಿಸಿಕ್ಸ್ ಎಂಬ ಪದಕ್ಕೆ ಗ್ರೀಕ್ ಭಾಷೆಯಲ್ಲಿ 'ಪ್ರಕೃತಿ ಜ್ಞಾನ' ಎಂದು ಅರ್ಥ. ಸಾಮಾನ್ಯವಾಗಿ ಬ್ರಹ್ಮಾಂಡದ ನೈಸರ್ಗಿಕ ವಿದ್ಯಮಾನಗಳನ್ನು ವಿಶ್ಲೇಷಿಸುವ ಮತ್ತು ತಿಳಿಸುವ ಗುರಿಯನ್ನು ಭೌತ ವಿಜ್ಞಾನವು ಹೊಂದಿದೆ. ಪ್ರಕೃತಿಯಲ್ಲಿನ ಭೌತ ವಸ್ತುಗಳ ಗುಣಲಕ್ಷಣ ಮತ್ತು ಸ್ವರೂಪವನ್ನು ವೈಜ್ಞಾನಿಕ ದೃಷ್ಟಿಯಿಂದ ಅಭ್ಯಸಿಸಿ ಕೃತಿ ರೂಪದಲ್ಲಿ ತಿಳಿಸುವುದೇ ಭೌತ ವಿಜ್ಞಾನ ಸಾಹಿತ್ಯ. ತೀವ್ರ ಕುತೂಹಲ ಏನು? ಹೇಗೆ? ಏಕೆ? ಎಂಬುದರ ಬಗೆಗಿನ ಜಿಜ್ಞಾಸೆ ಹಾಗೂ ಸಾಮಾನ್ಯವಾದ ಪ್ರಯೋಗಗಳೇ ಭೌತ ವಿಜ್ಞಾನ ಸಾಹಿತ್ಯದ ಜೀವಾಳ.

ಪ್ರಕೃತಿಯಲ್ಲಿ ಅಡಗಿರುವ ಅಂಶಗಳನ್ನು ಪ್ರಯೋಗ ಎಂಬ ತನ್ನ ಮೂಲ ಅಸ್ತ್ರದ ಮೂಲಕ ಶೋಧಿಸಿ ಪರೀಕ್ಷಿಸಿ ವಿಚಾರವನ್ನು ಖಾತ್ರಿ ಪಡಿಸುವುದೇ ಭೌತವಿಜ್ಞಾನ ಸಾಹಿತ್ಯದ ಸ್ವರೂಪ. ಅಲ್ಲದೆ ಸುತ್ತಮುತ್ತಲಿನ ಪ್ರಕೃತಿಯಲ್ಲಿ ದೊರೆಯುವ ವಸ್ತುಗಳನ್ನೇ ಸೃಜನಾತ್ಮಕವಾಗಿ ಬಳಸಿ ಸತ್ಯಾಸತ್ಯತೆಯ ಶೋಧನೆಯನ್ನು ಮಾಡಿ ನಿಖರ ಉತ್ತರ ಪಡೆಯುವುದೇ ಇದರ ಮೂಲ ಉದ್ದೇಶ. ಭೌತ ಜಗತ್ತಿನ ವಸ್ತುಗಳು ಮತ್ತು ಸಂಗತಿಗಳು, ಪದಾರ್ಥ ವಿಷಯಗಳು ಇಲ್ಲಿನ ಪ್ರಾಯೋಗಿಕ ಅಧ್ಯಯನದ ಪ್ರಧಾನ ವಿಷಯಗಳು. ವಿಶ್ವದಾದ್ಯಂತ ಸಂಚಲನವನ್ನುಂಟು ಮಾಡಿದ ಶಕ್ತಿ, ವಿದ್ಯುತ್ ಶಕ್ತಿ, ಪರಮಾಣು ವಿಕಿರಣ, ಗುರುತ್ವಾಕರ್ಷಣೆ ಮೊದಲಾದವು ಭೌತ ವಿಜ್ಞಾನ ಸಾಹಿತ್ಯದ ಆದ್ಯತೆಯ ವಿಷಯಗಳು.

ಬೆಳಕು ನೇರ ಗೆರೆಯಲ್ಲಿ ಪ್ರವಹಿಸುವ ಗುಣವನ್ನು ಖಾತ್ರಿಪಡಿಸಿದ ವಿಜ್ಞಾನಿ ಅಲ್ಹಾಜಾನ್ ಎಂಬುವವನು ಗುರುತ್ವಾಕರ್ಷಣೆಯ ಬಗ್ಗೆ ನಡೆಸಿದ ಶೋಧನೆ, ಐನ್ ಸ್ಟೈನ್ ರವರ ಬೆಳಕಿನ ಶೋಧನೆ, ಸಿ.ವಿ ರಾಮನ್ ರವರ ಆಕಾಶದ ನೀಲಿ ಬಣ್ಣಕ್ಕೆ ತಿರುಗುವ ಕಾರಣಗಳ ಶೋಧನೆ ಮೊದಲಾದವು ನಡೆದದ್ದು ಸೃಷ್ಟಿಯ ಬಗೆಗಿದ್ದ ತೀವ್ರ ಕುತೂಹಲದಿಂದ. ಇವೆಲ್ಲವು ಭೌತ ವಿಜ್ಞಾನದಲ್ಲಿ ಕ್ರಾಂತಿಯನ್ನೇ ಉಂಟು ಮಾಡಿದ್ದು, ಇವರುಗಳ ಶೋಧನೆಯ ಫಲದ ಮೇಲೆ ನವ ನವೀನ ಪರಿಕಲ್ಪನೆಗಳು ಶಕ್ತಿ ಮತ್ತಿತರ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಮೂಡಿಬಂದಿರುವುದು ಭೌತ ವಿಜ್ಞಾನದ ಫಲವಾಗಿದೆ. ವಸ್ತುವಿನ ಬಗೆಗಿನ ಕುತೂಹಲ ಆಸಕ್ತಿ ತಿಳಿದುಕೊಳ್ಳಬೇಕೆಂಬ ಬಯಕೆಯಿಂದಾಗಿ ವಿಶ್ವವನ್ನು ಹೊಸದಾಗಿ ನೋಡುವಂತೆ ಭೌತವಿಜ್ಞಾನ ಪ್ರಚೋದಿಸುತ್ತದೆ.

ಭೌತ ವಿಜ್ಞಾನದ ಪ್ರಯೋಗದ ಮೂಲವಾದ ಲೇಸರ್, ಎಕ್ಸ್ ರೇ. ಸ್ಕ್ಯಾನ್. ಆಪ್ಟಿಕಲ್ ಫೈಬರ್ ಮೊದಲಾದವುಗಳು ವೈದ್ಯಕೀಯ ಕ್ಷೇತ್ರದಲ್ಲಿ ಪವಾಡ ಸದೃಶ ಪ್ರಗತಿಯನ್ನು ಸಾಧಿಸುವಂತಾಗಿದೆ. ಇವುಗಳೆಲ್ಲದರ ಪರಿಚಯಾತ್ಮಕ ಜ್ಞಾನವನ್ನು ಜನಸಾಮಾನ್ಯರಲ್ಲಿಗೆ

ಕೊಂಡೊಯ್ಯುವಲ್ಲಿ ಭೌತ ವಿಜ್ಞಾನ ಸಾಹಿತ್ಯದ ಪಾಲು ಹಿರಿದಾದುದು. ಅಗತ್ಯ, ಅವಶ್ಯಕ ಸರಳ ಸುಲಲಿತ ಸ್ಪಷ್ಟ ನಿರೂಪಣೆಯೊಂದಿಗೆ ಬಹಳಷ್ಟು ಲೇಖಕರು ಕೃತಿಗಳನ್ನು, ಲೇಖನಗಳನ್ನು, ಪ್ರಬಂಧಗಳನ್ನು, ಕೈಪಿಡಿಗಳನ್ನು ರಚಿಸಿರುವುದನ್ನು ಕಾಣಬಹುದು.

'ವಿಜ್ಞಾನ ಸಾಹಿತ್ಯ ೧೯೯೭'ರಲ್ಲಿ ಸುಲಭ ಸುಲಲಿತ ಮಾತುಗಾರಿಕೆಯೊಂದಿಗೆ ರಚನೆಯಲ್ಲಿ ಬೆಳಕಿನ ಅಗತ್ಯ ಮತ್ತು ಮಹತ್ವವನ್ನು ಅವಶ್ಯಕತೆಯನ್ನು ಹೇಳುವುದರೊಂದಿಗೆ ಸೋಡಿಯಂ ಮತ್ತಿತರದಿಂದ ಆದ ವಿದ್ಯುತ್ ದ್ವೀಪದ ಪ್ರಖರತೆಯ ಮುಂದೆ ಅದ್ಭುತ ರಾತ್ರಿಯ ಆಕಾಶದ ಮನೋಹರ ದೃಶ್ಯಗಳು ಕಾಣದಂತಾಗುತ್ತಿದೆ. ನೈಜ ಸಹಜ ಇರುಳ ನೋಟದಿಂದ ಮಕ್ಕಳು ವಂಚಿತರಾಗಿ ಕೃತಕ ತಾರಾಲಯದ ಆಕಾಶ ದೃಶ್ಯವನ್ನೇ ತಮ್ಮ ನೈಜ ಕಲ್ಪನಾಲೋಕಕ್ಕೆ ಸೇರಿಸುವ ದುರಂತ ಸ್ಥಿತಿಯುಂಟಾಗಿದೆ. ಇದನ್ನು ಗಮನಿಸಿದ ಖ್ಯಾತ ಖಗೋಳಜ್ಞ ಮೈಕೆಲ್ ಸ್ಮಿತ್‌ರವರು "ನಾವು ಒಂದು ಮಹಾದುರಂತವನ್ನು ಎದುರಿಸಬೇಕಾಗಿದೆ. ನಮ್ಮ ಮುಂದಿನ ಪೀಳಿಗೆಯನ್ನು ಆಕಾಶದ ಜ್ಞಾನದಿಂದ ವಂಚಿತಗೊಳಿಸುತ್ತಿದ್ದೇವೆ. ಮುಂದೊಂದು ದಿನ ಅವರು ಈ ಬಗ್ಗೆ ತಮಗೆ ಯಾರು ಹೇಳಲೇ ಇಲ್ಲ ಎಂದು ದೂರಿದರೆ, ಈ ಹೊಣೆಗೇಡಿತನ ಯಾರದ್ದು?" ಎಂದು ಹೇಳುವುದರೊಂದಿಗೆ ನೈಜ ಆಕಾಶಕಾಯಗಳ ಬೆಳಕಿನ ಮಾಲಿನ್ಯ ಉಂಟಾಗುತ್ತಿದ್ದು, ನಗರದಲ್ಲಿ ಆಕಾಶಕಾಯಗಳ ಹಾಗೂ ಬೆಳಕಿನ ಸಂಶೋಧನಾತ್ಮಕ ಅಧ್ಯಯನಕ್ಕೆಂದು ಸ್ಥಾಪಿತವಾಗಿದ್ದ ದೂರದರ್ಶಕ ಕೇಂದ್ರಗಳು ತಮ್ಮ ಸ್ಥಾನವನ್ನು ನಗರದಿಂದ ಅರಣ್ಯ ಪ್ರದೇಶಕ್ಕೆ ಬದಲಾಯಿಸುವಂತಾಗಿದೆ ಎಂದಿದ್ದಾರೆ. ಬೆಳಕಿನ ಮಾಲಿನ್ಯ ತಡೆಗೆ ಬಹಳಷ್ಟು ಸಲಹೆ ಸೂಚನೆಯನ್ನು ಲೇಖಕರು ನೀಡಿರುವುದನ್ನು ಗಮನಿಸಬಹುದು. ಅಂದರೆ ಸೋಡಿಯಂ ಮತ್ತು ಪಾದರಸದ ದೀಪಗಳಿಗೆ ಬದಲಾಗಿ ಲೋ ಪ್ರಷರ್ ಸೋಡಿಯಂ (ಎಲ್.ಪಿ.ಎಸ್)ಗಳ ಅಳವಡಿಕೆ ಮೊದಲಾದ ಸಲಹೆಗಳನ್ನು ನೀಡುವುದರೊಂದಿಗೆ, ಬೆಳಕಿನ ಅಗತ್ಯತೆಗಾಗಿ ಕೃತಕ ಬೆಳಕಿನ ಮೊರೆ ಹೋಗದೆ, ಸಹಜ ನೈಜ ಬೆಳಕಿನ ಮಹತ್ವವನ್ನು ಸಂಭಾಷಣೆಯ ರೀತಿಯಲ್ಲಿ ಲೇಖಕಿ ಬಿ.ಎಸ್ ಶೈಲಜಾರವರು 'ಬೆಳಕಿನಿಂದ ಕತ್ತಲೆಗೆ ಸಾಗೋಣ ಬನ್ನಿ' ಲೇಖನದಲ್ಲಿ ತಿಳಿಸಿರುವುದು ಓದುಗರಿಗೆ ಸುಲಭ ಗ್ರಾಹ್ಯವಾಗಿದೆ.

'ವಿಜ್ಞಾನ ಸಾಹಿತ್ಯ ೧೯೯೮'ರಲ್ಲಿ ಭೌತವಿಜ್ಞಾನಕ್ಕೆ ಸಂಬಂಧಿಸಿದ ಹಲವು ಲೇಖನಗಳಿರುವುದನ್ನು ಗಮನಿಸಲಾಗಿದೆ. ವಿಕಿರಣಗಳು ಅವಿಭಾಜ್ಯ ಅಂಗವಾಗಿರುವ ವಾತಾವರಣದಲ್ಲಿ ನಾವು ಜೀವಿಸುತ್ತಿದ್ದು, ಅವುಗಳ ಪ್ರಮಾಣ ಜೀವ ಸಂಕುಲಕ್ಕೆ ಅಪಾಯವನ್ನು ತಂದೊಡ್ಡುತ್ತಿದೆ. ಭೂಮಿಯಿಂದ, ಮಾನವ ನಿರ್ಮಿತ ಮೂಲಗಳಿಂದ ಹಾಗೂ ಹೊರ ಜಗತ್ತಿನಿಂದ ಬರುವ ವಿವಿಧ ವಿಕಿರಣಗಳಿಗೆ ನಾವೆಲ್ಲರು ಮೈ ಒಡ್ಡುತ್ತಿದ್ದು,

ಈ ವಿಕಿರಣಗಳಿಂದ ಯಾವುದೇ ರೀತಿಯ ಕಟ್ಟಡಗಳ ಗೋಡೆಗಳು ಅಥವಾ ಮೇಲ್ಛಾವಣಿಗಳು ರಕ್ಷಣೆಯನ್ನು ಒದಗಿಸಲಾರವು ಎಂದು ವಿವರಿಸುವುದರೊಂದಿಗೆ ವಿಕಿರಣಗಳಿಂದ ಉಂಟಾಗುವ ಹಾನಿಯಿಂದ ಪಾರಾಗಲು ಯಾವ ಯಾವ ಸುರಕ್ಷತಾ ಕ್ರಮಗಳನ್ನು ಅನುಸರಿಸಿದರೆ ಕ್ಷೇಮ ಎನ್ನುವ ಎಚ್ಚರಿಕೆಯ ನುಡಿಯನ್ನು ಲೇಖಕರು 'ವಿಕಿರಣಗಳ ಜೊತೆ ಜೀವನ' ಲೇಖನದಲ್ಲಿ ಸರಳೀಕರಣದೊಂದಿಗೆ ಹಲವಾರು ಅಂಶಗಳನ್ನು ತಿಳಿಸಿದ್ದಾರೆ.

ನಮ್ಮ ಪರಿಸರದಲ್ಲಿರುವ ವಿಕಿರಣ ಧಾತುಗಳ ಸಾದಕ ಬಾದಕಗಳನ್ನು ವಿಕಿರಣ ನಮೂನೆಗಳನ್ನು ವಿಕಿರಣದ ವಿಧಗಳಾದ ನೈಸರ್ಗಿಕ ವಿಕಿರಣ, ವಿಶ್ವವಿಕಿರಣ, ಭೂವಿಕಿರಣಗಳ ಹಾಗೂ ಮಾನವ ನಿರ್ಮಿತ ವಿಕಿರಣಗಳ ಪರಿಚಯವನ್ನು ಪರಿಸರದಲ್ಲಿನ ಸ್ವಾಂತರ್ಯಾಮಿ ವಿಕಿರಣಗಳಿಂದ ಮಾನವನು ಅನಿವಾರ್ಯವಾಗಿ ಪ್ರಭಾವಿತವಾಗುವುದನ್ನು, ವಿಕಿರಣದ ತೀವ್ರತೆಯ ಸ್ವರೂಪ ಮತ್ತು ಬದಲಾವಣೆಯನ್ನು ಹಾಗೂ ನೈಸರ್ಗಿಕ ವಿಕಿರಣದ ಪ್ರಯೋಜನ ಹಾಗೂ ತೊಂದರೆಯನ್ನು ಉತ್ತಮ ಮಾದರಿಯೊಂದಿಗೆ ಎಂ.ಎಸ್.ಎಸ್ ಮೂರ್ತಿರವರು ತಮ್ಮ ಲೇಖನ 'ನಮ್ಮ ಪರಿಸರದಲ್ಲಿರುವ ವಿಕಿರಣ ಧಾತುಗಳು' ಲೇಖನದಲ್ಲಿ ತಿಳಿಸಿದ್ದಾರೆ.

ಎಂ.ಕೆ ರಾಮಸ್ವಾಮಿರವರ 'ಜ್ಞಾನ ವಿಜ್ಞಾನ' ಕೃತಿಯಲ್ಲಿ ಭೌತ ವಿಜ್ಞಾನಕ್ಕೆ ಸಂಬಂಧಿಸಿದ ಒಟ್ಟು ೧೮ ಲೇಖನಗಳಿವೆ. ಅತ್ಯಂತ ಬೆಲೆಬಾಳುವ ಹಾಗೂ ಎಲ್ಲರನ್ನು ಆಕರ್ಷಿಸುವ ಗುಣ ಹೊಂದಿರುವ ವಜ್ರವು ಪ್ರಕೃತಿದತ್ತವಾಗಿ ದೊರೆತ ಹರಳಾಗಿದ್ದರು, ಅದು ತನ್ನದೇ ಕೆಲವು ಗುಣಗಳಾದ ಪ್ರಜ್ವಲತೆ ಮತ್ತು ಕಾಠಿಣ್ಯತೆಯ ಗುಣಗಳಿಂದ ವಿಶ್ವವಿಖ್ಯಾತ ಹಾಗೂ ಮೌಲ್ಯವನ್ನು ಪಡೆದಿದೆ. ವಜ್ರದಲ್ಲಿ ಕಿರಣಗಳು ಹಲವು ಬಾರಿ ಪೂರ್ಣಾಂತರಿಕ ಪ್ರತಿಫಲನ ಹೊಂದುವುದರಿಂದ ಅದು ಹೊಳೆಯುತ್ತದೆ ಹಾಗೂ ಇಂಗಾಲ ಪರಮಾಣುಗಳ ಜ್ಯಾಮಿತಿಯ ಜೋಡಣೆಯಿಂದ ಕಾಠಿಣ್ಯತೆಯನ್ನು ಪಡೆದಿದ್ದು, ಅದಕ್ಕೆ ಸರಿಸಾಟಿಯಾದ ವಸ್ತು ಮತ್ತೊಂದಿಲ್ಲ ಎಂಬುದನ್ನು ಹಾಗೂ ವಜ್ರಕ್ಕೆ ತದ್ರೂಪಿಯಾಗಿ ಕೃತಕ ವಸ್ತುವನ್ನು ಸೃಷ್ಟಿಸುವಲ್ಲಿ ಸಂಶೋಧನೆಗಳು ನಡೆಯುತ್ತಿವೆ ಎಂಬುದನ್ನು ವಿಶ್ಲೇಷಣಾತ್ಮಕವಾಗಿ 'ಪ್ರಜ್ವಲತೆ ಮತ್ತು ಕಾಠಿಣ್ಯಕ್ಕೆ ಹೆಸರಾದ ವಜ್ರದ ಕಥೆ' ಲೇಖನವು ಉಲ್ಲೇಖಿಸಿರುವುದನ್ನು ಗುರುತಿಸಬಹುದು.

ಧ್ವನಿ ಉತ್ಪತ್ತಿ ಹೇಗೆ, ಧ್ವನಿ ವಿಜ್ಞಾನದಲ್ಲಿನ ವಿಧಗಳು (ವಿದ್ಯುತ್, ಸಂಗೀತ) ಉತ್ತಮ ಧ್ವನಿ ಪಡೆಯಲು ಒಂದು ಸಭಾಂಗಣಕ್ಕೆ ಬೇಕಾದ ಅವಶ್ಯಕತೆಗಳು, ಶಬ್ದದ/ಧ್ವನಿಯ ತೀವ್ರತೆಯನ್ನು ಅಳೆಯುವ ವಿಧಾನ ಹಾಗೂ ಉತ್ತಮ ಧ್ವನಿಯನ್ನು ಸಭಾಂಗಣವು ಪಡೆಯಲು ಬೇಕಾದ ಅವಶ್ಯಕತೆಯನ್ನು ಪೂರೈಸುವ ಬಗೆಗಳು ಮೊದಲಾದ ವಿಚಾರಗಳನ್ನು 'ಕಟ್ಟಡಗಳ ಧ್ವನಿ ವಿಜ್ಞಾನ' ಲೇಖನವು ತಿಳಿಸುವುದು.

ವಿಶ್ವದಲ್ಲಿ ಪ್ರತಿಯೊಂದು ವಸ್ತುವೂ ಇತರ ವಸ್ತುಗಳನ್ನು ಅವುಗಳ ದ್ರವ್ಯರಾಶಿಯ ಗುಣಲಬ್ಧಕ್ಕೆ ಅನುಗುಣವಾಗಿಯೂ ಮತ್ತು ಅವುಗಳ ದೂರ ವರ್ಗಕ್ಕೆ ವಿಲೋಮವಾಗಿರುವ ಬಲದಿಂದ ಆಕರ್ಷಿಸುವ ಗುರುತ್ವಾಕರ್ಷಣ ಗುಣದಿಂದ ಕೂಡಿದ್ದು, ಭೂಮಿಯಿಂದ ಮೇಲಕ್ಕೆ ಹೋದಂತೆಲ್ಲ ಹಾಗೂ ಭೂಮಿಯ ಒಳಗೆ ಹೋದಂತೆಲ್ಲಾ ಗುರುತ್ವಾಕರ್ಷಣ ಬಲ ಕಡಿಮೆಯಾಗಿ, ವಸ್ತುಗಳನ್ನು ಆಕರ್ಷಿಸುವ ಮಾಹಿತಿಯನ್ನು ಹಾಗೂ ಗುರುತ್ವಾಕರ್ಷಣೆಯ ಪರಿಣಾಮಗಳನ್ನು ಲೇಖಕರು 'ಗುರುತ್ವಾಕರ್ಷಣೆ' ಲೇಖನದಲ್ಲಿ ವಿವರಿಸಿರುವುದರೊಂದಿಗೆ ಜಗತ್ತಿನ ಪ್ರತಿಯೊಂದು ಚಲನವಲನಗಳ ಮೇಲೆ ಗುರುತ್ವಾಕರ್ಷಣೆಯು ಮಹತ್ವದ ಪರಿಣಾಮ ಬೀರುವುದನ್ನು ತಿಳಿಸಿದ್ದಾರೆ.

ಅತೀ ವಾಹಕತ್ವ(ಕಡಿಮೆ ಉಷ್ಣತೆಯಲ್ಲಿ ಶೂನ್ಯರೋಧಕತ್ವ ಹೊಂದಿದ ವಾಹಕ)ದ ಗುಣವಿಶೇಷಗಳು ಹಾಗೂ ಬಳಕೆಯನ್ನು ತಿಳಿಸುವುದರೊಂದಿಗೆ ವಿದ್ಯುತ್ ಪ್ರಸರಣದ ನಷ್ಟ ಕಡಿಮೆ ಮಾಡುವಲ್ಲಿ ಅವುಗಳು ಮುಖ್ಯ ಪಾತ್ರ ವಹಿಸುವುದನ್ನು 'ಅತೀ ವಾಹಕಗಳು' ಲೇಖನವು ತಿಳಿಸಿದ್ದಾರೆ. ಜೊತೆಗೆ ಮಾಧ್ಯಮದಲ್ಲಿ ತಲ್ಲಣ(ಡಿಸ್ಟರ್ಬೆನ್ಸ್) ಉಂಟಾದರೆ, ಉಂಟಾಗುವ ಅಲೆಗಳು, ಅವುಗಳ ವಿಶೇಷ ಗುಣಗಳಿಂದ ಹೊಂದಿರುವ ವಿವಿಧ ಗುಂಪುಗಳ ಬಗ್ಗೆ ಹಾಗೂ ಅಲೆಯ ಕಂಪನ ವಿಸ್ತಾರ, ಅಲೆಯ ಆವರ್ತಕಾಲ, ಅಲೆಯ ಆವರ್ತ ಸಂಖ್ಯೆ, ಅಲೆಯ ವೇಗ ಮೊದಲಾದವನ್ನು 'ತರಂಗಗಳು' ಲೇಖನವು ಚಿತ್ರಿಸುತ್ತದೆ.

ಬಣ್ಣವು ಅಸ್ತಿತ್ವಪಡೆಯುವ ಬಗ್ಗೆ, ಪ್ರಾಥಮಿಕ ಹಾಗೂ ದ್ವಿತೀಯ ವರ್ಗದ ಬಣ್ಣಗಳೆಂದರೇನು? ವಿವಿಧ ವಸ್ತುಗಳು ವಿವಿಧ ಬಣ್ಣವನ್ನು ತೋರಿಸಲು ಕಾರಣವೇನು? ಮೊದಲಾದ ವಿಷಯಗಳನ್ನು 'ಬಣ್ಣಗಳು' ಲೇಖನ ಒಳಗೊಂಡಿದ್ದರೆ, ವಿದ್ಯುತ್ ಆವೇಶಗಳು ವಾಹಕದಲ್ಲಿ ಚಲಿಸಿದಾಗ ಉಂಟಾಗುವ ವಿದ್ಯುತ್ ಪ್ರವಾಹ, ಅದರ ದಿಕ್ಕು, ವಿಧಗಳು, ಯಾಂತ್ರಿಕ, ಶಾಖ ಹಾಗೂ ರಾಸಾಯನಿಕ ಪರಿಣಾಮಗಳು ಮೊದಲಾದವನ್ನು 'ವಿದ್ಯುತ್ ಪ್ರವಾಹ' ಲೇಖನವು ತಿಳಿಸಿದರೆ, ಆಮೆಯ ವೇಗದಲ್ಲಾಗುತ್ತಿದ್ದ ರಸಾಯನ ಕ್ರಿಯೆಯನ್ನು ಮಿಂಚಿನ ವೇಗದಲ್ಲಾಗುವಂತೆ ಮಾಡುವ ವೇಗವರ್ಧಕ, ಅದರ ಲಕ್ಷಣ ಹಾಗೂ ಕಾರ್ಯ ತಂತ್ರವನ್ನು 'ಆಮೆಯ ವೇಗದಲ್ಲಿ ಹೋಗುವುದನ್ನು ಮಿಂಚಿನ ವೇಗದಲ್ಲಿ ಹೋಗುವ ಹಾಗೆ ಮಾಡುವ ವಸ್ತು- ವೇಗವರ್ಧಕ' ಲೇಖನವು ತಿಳಿಸುವುದು.

ಸಾವಿರಾರು ವರ್ಷಗಳ ಇತಿಹಾಸವಿರುವ ಗಾಜನ್ನು ತಯಾರಿಸುವ ವಿಧಾನ, ಗಾಜಿನ ಗುಣ ಮೊದಲಾದವನ್ನು 'ಗಾಜು' ಲೇಖನವು ತಿಳಿಸಿದರೆ, ಶಬ್ದದ ಕಂಪನಾಂಕವು ೨೦,೦೦೦ ಹರ್ಟ್ಸ್‌ಗಿಂತ ಜಾಸ್ತಿ ಇರುವ ಅತೀತ ಶಬ್ದ, ಅತೀತ ಶಬ್ದದ ಉತ್ಪಾದನೆ ಅತೀತ ಶಬ್ದಗಳ ಪತ್ತೆ ಹಚ್ಚುವ ವಿಧಾನಗಳು ಅವುಗಳ ಗುಣಗಳು ಮತ್ತು ಉಪಯೋಗದ ಬಗ್ಗೆ 'ಅತೀತ ಶಬ್ದ(ಅಲ್ಟ್ರಸೋನಿಕ್ಸ್)' ಲೇಖನವು ವಿವರಿಸಿರುವುದನ್ನು ಕಾಣಬಹುದು.

ಬೆಳಕು ಶಕ್ತಿಯ ಒಂದು ರೂಪ, ಅದು ನಿರ್ವಾತ ಪ್ರದೇಶದಲ್ಲೂ ಚಲಿಸುತ್ತದೆ ಮೊದಲಾದ ಬೆಳಕಿನ ಅನೇಕ ಸಂಗತಿಗಳನ್ನು ಬೆಳಕಿನ ಸ್ವಭಾವ ಲೇಖನವು ತಿಳಿಸಿದರೆ, ಬೆಳಕಿನ ಪ್ರಭಾವದಿಂದ ವಸ್ತುಗಳ ಮೇಲ್ಮೈನಿಂದ ಎಲೆಕ್ಟ್ರಾನುಗಳು ಬಿಡುಗಡೆಯಾಗುವ ದ್ಯುತಿ ವಿದ್ಯುತ್ ಪರಿಣಾಮವನ್ನು ಐನ್‌ಸ್ಟೈನ್‌ರವರ ಚಿಂತನೆಯಲ್ಲಿ ವಿವರಿಸುವದರೊಂದಿಗೆ ದ್ಯುತಿ ವಿದ್ಯುತ್ ಪರಿಣಾಮದ ಉಪಯೋಗಗಳನ್ನು 'ದ್ಯುತಿ ವಿದ್ಯುತ್ ಪರಿಣಾಮ' ಲೇಖನವು ವಿಶ್ಲೇಷಿಸಿದೆ.

ಅಂತೆಯೇ ಕಬ್ಬಿಣದ ವಸ್ತುಗಳನ್ನು ಆಕರ್ಷಿಸುವ ವಸ್ತುವಾದ ಕಾಂತ ಹಾಗೂ ಅದರ ಗುಣ ಸ್ವಭಾವವಾದ ಉತ್ತರ ದಕ್ಷಿಣವಾಗಿ ನೇತು ಹಾಕಿದಾಗ ನಿಲ್ಲುವುದು, ಸಜಾತೀಯ ಕಾಂತ ದೃವಗಳು ವಿಕರ್ಷಿಸಲ್ಪಟ್ಟು, ವಿಜಾತೀಯ ದೃವಗಳು ಆಕರ್ಷಿಸಲ್ಪಡುವುದು ಮೊದಲಾದವುಗಳ ಜೊತೆಗೆ ಅದರ ವಿಧಗಳು ಹಾಗೂ ಭೂಮಿಯು ಒಂದು ದೊಡ್ಡ ಕಾಂತ ಎಂದು ಚಿಕ್ಕದಾಗಿ ಚೊಕ್ಕವಾಗಿ ವಿಷಯ ನಿರೂಪಣೆಯನ್ನು 'ಕಾಂತತ್ವ' ಲೇಖನವು ಮಾಡಿದರೆ, ವಿದ್ಯುತ್ ವಸ್ತುಗಳ ಮೂಲಕ ವಾಹಕಗಳು, ಅವಾಹಕಗಳು ಮತ್ತು ಅರೆವಾಹಕಗಳೆಂದು ಮೂರು ಗುಂಪುಗಳಾಗಿ ಮಾಡಿರುವ ಬಗೆ ಹಾಗೂ ಸ್ವರೂಪ ಲಕ್ಷಣಗಳ ಬಗ್ಗೆ ವಿವರಣೆಯನ್ನು 'ವಾಹಕಗಳು, ಅವಾಹಕಗಳು ಮತ್ತು ಅರೆವಾಹಕಗಳು' ಲೇಖನವು ನೀಡುವುದನ್ನು ಗಮನಿಸಬಹುದು.

ನಾಗೇಶ್ ಹೆಗಡೆಯವರ 'ವಿಜ್ಞಾನ ಗಂಗೆಯ ಬಿಂದುಸಾರ' ಕೃತಿಯಲ್ಲಿ ಸಾಮರ್ಥ್ಯ ಅಳೆಯುವ ಮಾಪನ 'ವಾಟ್‌ನ ವಿವರಣೆಯನ್ನು ಸ್ಪಿರಿಯೋದ ಆಂಪ್ಲಿಫೈಯರ್‌ಗಳ ಉದಾಹರಣೆಯೊಂದಿಗೆ ನೀಡುವ ಮೂಲಕ ಹಾಗೂ ಟಿ.ಎಚ್.ಟಿ ಮತ್ತು ಡೆಸಿಬೆಲ್‌ನ ಮಹತ್ವದ ಬಗ್ಗೆ ತಿಳಿಸುವುದರೊಂದಿಗೆ ವ್ಯಾಟ್ ಎಂದರೇನು? ಹೇಗೆ ಅದನ್ನು ಅಳೆಯಲಾಗುತ್ತದೆ ಎಂಬ ಭೌತ ವಿಜ್ಞಾನದ ಮಾಹಿತಿಯನ್ನು ಡಾ.ಯು.ಬಿ.ಪವನಜರವರು ತಿಳಿಸಿದರೆ, ಕೃತಕ ಬೆಳಕಿನ ಅನುಭವವಾಗುತ್ತಿಲ್ಲ ಎಂಬುದನ್ನು ಹಾಗೂ ಅಗತ್ಯಬಿದ್ದಾಗ ಮಾತ್ರ ಕೃತಕ ಬೆಳಕಿನ ಉಪಯೋಗ ಒಳ್ಳೆಯದೆಂದು ಹೇಳುವುದರೊಂದಿಗೆ ನೈಸರ್ಗಿಕ ಬೆಳಕಿನ ಆಗರವಾದ ಸೂರ್ಯನನ್ನು ಉಪಯೋಗಿಸಿಕೊಳ್ಳಬೇಕೆಂದು ಹೇಳಿ ನಿಸರ್ಗಕ್ಕೆ ಹೊಂದಿಕೊಂಡು ಬದುಕುವ ಕಿವಿಮಾತನ್ನು ಸುದರ್ಶನ ಬೇಳೂರುರವರು 'ಬೆಳಕಿನ ವಕ್ರೀಭವನ' ಲೇಖನದಲ್ಲಿ ಹೇಳಿದ್ದಾರೆ.

ವಸುಂಧರಾ ಭೂಪತಿಯವರಿಂದ ಸಂಪಾದಿತವಾದ ಕೃತಿ 'ವಿಜ್ಞಾನ ಸಾಹಿತ್ಯ-೨೦೧೦'ರಲ್ಲಿ ಹಲವು ಅನ್ವಯಗಳ ಹೊಸ ಪದಾರ್ಥ-ಗ್ರಾಫೀನ್ ಕಾನ್ಸ್ಟಾಂಟಿನ್ ಎಸ್ ನೊವೊಸೆಲಾವ್ ರವರು ಪ್ರತ್ಯೇಕಿಸಿದ ಕಾರ್ಬನ್‌ನ ಹೊಸ ರೂಪವಾದ ಗ್ರಾಫೀನ್‌ನನ್ನು ಕಂಡು ಹಿಡಿದು,

ಅದರ ಹಲವು ಉಪಯೋಗಗಳನ್ನು ಪರಿಚಯಿಸಿದರು. ಲೇಖಕರು ತಮ್ಮ ಲೇಖನದಲ್ಲಿ ಭೌತ ವಿಜ್ಞಾನ ಕ್ಷೇತ್ರದಲ್ಲಿ ಅತ್ಯಂತ ಪ್ರಚಲಿತ ಗ್ರಾಫಿನ್‌ನ ಸ್ವರೂಪದ ವಿವರಣೆಯನ್ನು ನೀಡುತ್ತಾ, ಅದರ ಉಪಯೋಗ ಹಾಗೂ ಅನುಕೂಲಗಳ ಪಟ್ಟಿಯ ವಿವರಣೆಯನ್ನು ನೀಡುವ ವಿಷಯದ ಬಗೆಗೆ ಸಕಾರತ್ಮಕ ಮಾಹಿತಿಯು ದೊರೆಯುವಂತಾಯಿತು. ಅಂದರೆ ಗ್ರಾಫೀನ್‌ನ ಉಪಯೋಗದಿಂದ ಕಾರ್ಬನೇತರ ಪರಮಾಣುಗಳನ್ನು ಉಪಯೋಗಿಸಿ ವಿದ್ಯುತ್ ವಾಹಕತೆಯ ಗುಣಗಳನ್ನು ಬದಲಾಯಿಸಬಹುದು. ಗ್ರಾಫೀನ್‌ನನ್ನು ಟಚ್‌ಸ್ಕ್ರೀನ್, ಅನಿಲ ಸಂವೇದಕ, ಹೊಸ ಕಾಂಪೋಸಿಟ್ ಪದಾರ್ಥ, ಟ್ರಾನ್ಸಿಸ್ಟರ್, ಸೌರಕೋಶಗಳ ತಯಾರಿ ಮೊದಲಾದ ಹಲವು ಅನ್ವಯಗಳಾಗಿ ಉಪಯೋಗಿಸುವ ವಿಶೇಷ ವಿಚಾರವನ್ನು ಆಡ್ಯನಡ್ಕ ಕೃಷ್ಣಭಟ್‌ರವರು 'ಹಲವು ಅನ್ವಯಗಳ ಹೊಸ ಪದಾರ್ಥ–ಗ್ರಾಫೀನ್' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.'

ಅಖಿಲೇಶ್ ಚಿಪ್ಪಳಿರವರು ಸಂಪಾದಿಸಿದ 'ವಿಜ್ಞಾನ ಸಾಹಿತ್ಯ–೨೦೧೨–೧೩' ಕೃತಿಯಲ್ಲಿ ತಂತ್ರಜ್ಞಾನ ಆವಿಷ್ಕಾರದ ಒಂದು ಮಾದರಿಯೇ ಮೊಬೈಲ್ ಟವರ್. ನಮ್ಮ ರಾಜ್ಯದ ಸುತ್ತ ಮುತ್ತ ಸುಮಾರು ೧೧೮೦ ರಷ್ಟು ಟವರ್‌ಗಳಿದ್ದು, ಅದರಿಂದ ಹೊರ ಬರುವ ವಿಕಿರಣಗಳ ಪ್ರಭಾವಕ್ಕೆ ಹೇಗೆ ನಾವೆಲ್ಲ ಗುರಿಯಾಗುತ್ತಿದ್ದೇವೆ ಎಂಬುದನ್ನು ತಿಳಿಸುವುದರೊಂದಿಗೆ ಲೇಖಕರಾದ ಟಿ.ಆರ್ ಅನಂತರಾಮುರವರು ಸರ್ಕಾರದ ಕಾರ್ಯನೀತಿಯನ್ನು ತಿಳಿಸಿರುವುದನ್ನು ಕಾಣಬಹುದು.

ವಿಜ್ಞಾನ ಸಾಹಿತ್ಯದ ಇತರ ಪ್ರಕಾರಗಳಂತೆ ಭೌತ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸುಮಾರು ೩೦ ಲೇಖನಗಳನ್ನು ಸಂಶೋಧನಾತ್ಮಕ ಅಧ್ಯಯನಕ್ಕೆ ಒಳಪಡಿಸಲಾಯಿತು. ಪ್ರತಿಯೊಂದು ಲೇಖನದ ಅಧ್ಯಯನದಲ್ಲಿ ಭೌತ ಪ್ರಪಂಚಕ್ಕೆ ಸಂಬಂಧಿಸಿದಂತೆ ಅಗತ್ಯ ಅನಿವಾರ್ಯ ಮಾಹಿತಿಯನ್ನು ತಿಳಿಯಲಾಯಿತು. ಅದರೊಂದಿಗೆ ವಿಷಯದ ಪ್ರಸ್ತುತತೆಯಲ್ಲಿ ವಿಷಯ ಜ್ಞಾನಿ ಪಂಡಿತರು ಅಭಿವ್ಯಕ್ತಿಸಿದ ಸ್ವರೂಪ, ಭಾಷಾ ಬಳಕೆ, ವಿಷಯ ಮಂಡಣೆ ಮೊದಲಾದವುಗಳನ್ನು ಗಮನಿಸುವುದರೊಂದಿಗೆ ಲೇಖನದಲ್ಲಿನ ವೈಜ್ಞಾನಿಕ ವಿಷಯಾಧಾರಿತ ಮಾಹಿತಿಯನ್ನೊಳಗೊಂಡ ಸಾಮಾಜಿಕ ಹೊಣೆಗಾರಿಕೆಯನ್ನು ಗುರ್ತಿಸಲಾಯಿತು.

ಖಗೋಳ ವಿಜ್ಞಾನ: ಇದು ಭಾರತದ ಅತ್ಯಂತ ಪ್ರಾಚೀನ ಹಾಗೂ ಗಣಿತದ ಮೂಲ ವಿಜ್ಞಾನವಾಗಿದ್ದು ಇಡೀ ಬ್ರಹ್ಮಾಂಡವನ್ನು ವೀಕ್ಷಿಸಿ, ಗಮನಿಸಿ, ಅವಲೋಕಿಸಿ, ಸಂಶೋಧನೆಗೆ ಒಳಪಡಿಸಿ ಉಲ್ಲೇಖಿಸುವ ವಿಜ್ಞಾನವೇ ಖಗೋಳ ವಿಜ್ಞಾನವಾಗಿದೆ. ಭೂಮಂಡಲ ಮತ್ತು ವಾಯುಮಂಡಲವನ್ನು ಹೊರತುಪಡಿಸಿ ಇಡೀ ನಭೋಮಂಡಲವನ್ನು ಅಧ್ಯಯನಕ್ಕೆ ಒಳಪಡಿಸಲಾಗುತ್ತದೆ. ವಿಷಯ ಪರಿಣಿತರಲ್ಲದೆ ಇತರ ಹವ್ಯಾಸಿ ಜ್ಞಾನದಾಹಿಗಳು ಕೂಡ

ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದ ಹಲವು ಮಹತ್ವದ ಕೃತಿಗಳನ್ನು ಬರೆಯುವುದರೊಂದಿಗೆ ಸಾಹಿತಿಕ ಕೊಡುಗೆಯನ್ನು ನೀಡಿದ್ದಾರೆ.

ಭಾರತದ ಖಗೋಳ ವಿಜ್ಞಾನದ ಪಿತಾಮಹನೆಂದು ಆರ್ಯಭಟನನ್ನು ಕರೆಯಲಾಗುತ್ತದೆ. ಬ್ರಹ್ಮಾಂಡದಲ್ಲಿನ ಆಕಾಶಕಾಯಗಳು ಹೊರಸೂಸುವ ಬೆಳಕಿನ ಬಗೆಗಿನ ಅಧ್ಯಯನವೇ ಖಗೋಳ ವಿಜ್ಞಾನದ ಹುಟ್ಟಿಗೆ ಮೂಲ. ಖಗೋಳ ವಿಜ್ಞಾನದ ಆಧ್ಯತೆಯ ವಿಷಯಗಳಾದ ಆಕಾಶದಲ್ಲಿನ ವಿಧ್ಯಮಾನಗಳು, ಸಂಗತಿಗಳು, ನಿಗೂಢತೆಗಳು ಸಹಜವಾಗಿ ವಿಸ್ಮಯಗಳಿಂದ ಕೂಡಿದ್ದು, ಎಲ್ಲರ ಗಮನವನ್ನು ಸೆಳೆಯುತ್ತವೆ. ಇಂಥ ಎಂದೂ ಬರಿದಾಗದ ವಿಷಯಗಳು ಖಗೋಳ ವಿಜ್ಞಾನಿಗಳ ಕುತೂಹಲಕ್ಕೆ ಕಾರಣವಾಗಿ ಖಗೋಳ ವಿಜ್ಞಾನ ಸಾಹಿತ್ಯ ರಚನೆಗೆ ಪ್ರೇರಣೆಯಾದವು.

ಜಗತ್ತಿನಲ್ಲಿನ ಜೀವಿಗಳ ಅಸ್ತಿತ್ವಕ್ಕೆ ಕಾರಣ ಸೂರ್ಯನ ಬೆಳಕು ಮತ್ತು ಶಾಖ. ಸೂರ್ಯನ ಶಾಖ ಮತ್ತು ಬೆಳಕಿನ ಕಾರಣದಿಂದಾಗಿ ಸಾರಜನಕ, ಜಲಜನಕ, ಆಮ್ಲಜನಕ ಮತ್ತು ಇಂಗಾಲಗಳು ಒಂದುಗೂಡುತ್ತದೆ. ದೈತ್ಯಾಕಾರ ಹೊಂದಿರುವ ಸೂರ್ಯನು ಒಳಗೋಳ, ವರ್ಣಗೋಳ ಮತ್ತು ಕರೋನ ಎಂಬ ಮೂರು ಪದರಗಳಿಂದ ಕೂಡಿದ್ದು, ಇಡೀ ಸೌರ ಮಂಡಲದಲ್ಲಿ ಕೇಂದ್ರ ಸ್ಥಾನದಲ್ಲಿದ್ದು ಇಡೀ ಗ್ರಹಗಳ ಮೇಲೆ ಪ್ರಭಾವ ಬೀರುವುದನ್ನು ಎಂ.ಕೆ ರಾಮಸ್ವಾಮಿರವರ 'ಸೂರ್ಯನು ಹೊರಸೂಸುವ ಅಗಾದ ಶಕ್ತಿಯ ಮೂಲ ಯಾವುದು?' ಲೇಖನ ತಿಳಿಸಿದರೆ, ಭೂಮಿಯ ಸುತ್ತಲೂ ಸುತ್ತುವ ಮಾನವ ನಿರ್ಮಿತ ಕೃತಕ ವಸ್ತುಗಳಾದ ಉಪಗ್ರಹಗಳು ವಿಭಿನ್ನ ರೀತಿಯದಾಗಿದ್ದು, ಭೂಸಂಪರ್ಕ ಹವಾಮಾನ ಮುನ್ಸೂಚನೆ, ನೌಕಾಯಾನ, ಜೈವಿಕ ಮಿಲಿಟರಿ, ಭೂವೈಜ್ಞಾನಿಕ ಮೊದಲಾದ ಉದ್ದೇಶದ ಉಪಗ್ರಹಗಳನ್ನು ಉಡಾವಣೆ ಮಾಡಲಾಗಿದೆ. ಆಯಾ ಉದ್ದೇಶಗಳಿಗಾಗಿ ಅವುಗಳನ್ನು ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು 'ವಿವಿಧ ರೀತಿಯ ಕೃತಕ ಉಪಗ್ರಹಗಳು ಮತ್ತು ಅವುಗಳ ಬಳಕೆ' ಲೇಖನವು ವಿಚಾರಾತ್ಮಕವಾಗಿ ತಿಳಿಸಿರುವುದನ್ನು ಕಾಣಬಹುದು.

ತೆಳುವಾದ ಪೊರೆಯಂತೆ ಭೂಮಿಯನ್ನು ಸುತ್ತಿರುವ ಆಮ್ಲಜನಕ, ಇಂಗಾಲದ ಡೈ ಆಕ್ಸೈಡ್ ಮತ್ತಿತರ ಅನಿಲರಾಶಿಯಿಂದ ಕೂಡಿರುವುದೇ ವಾಯುಮಂಡಲವಾಗಿದ್ದು, ಅದು ಅನಿಲಗಳು, ನೀರಾವಿ, ಸೂಕ್ಷ್ಮಕಣಗಳು ಮೊದಲಾದ ಘಟಕಗಳನ್ನು ಹೊಂದಿದ್ದು, ಜೀವಿಗಳ ಬದುಕಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ ಎಂಬುದನ್ನು 'ವಾಯುಮಂಡಲ' ಲೇಖನ ತಿಳಿಸಿದರೆ, ಚಂದ್ರನ ಅಸ್ತಿತ್ವ ಅದರಲ್ಲಿರುವ ಅನಿಲರಾಶಿ ಹಾಗೂ ಅಂತರಾಷ್ಟ್ರೀಯ ಮಟ್ಟದಲ್ಲಿ ದೇಶದ ಗೌರವ ಹೆಚ್ಚಿಸುವ ದೃಷ್ಟಿಯಿಂದ ಉಡಾಯಿಸಿದ ಚಂದ್ರಯಾನ ೧ ಉಪಗ್ರಹದ ಬಗ್ಗೆ 'ಚಂದ್ರಯಾನ' ಲೇಖನದಲ್ಲಿ ವೈಜ್ಞಾನಿಕವಾಗಿ ತಿಳಿಸಿದ್ದಾರೆ.

ಭೂಮಿಯ ರಚನೆ, ಪಥ, ಪದರಗಳು, ಭೂಮಿಯ ಮಹತ್ವ ಮತ್ತಿತರ ಅಂಶಗಳನ್ನು 'ಭೂಮಿ' ಲೇಖನವು ತಿಳಿಸಿದರೆ, ನಕ್ಷತ್ರಪುಂಜ(ಗ್ಯಾಲಕ್ಸಿ) ಮತ್ತು ಕ್ಷೀರ ಪಥ (ಮಿಲ್ಕ್ ವೇ) ರಾಶಿ ಚಕ್ರಗಳು ಮತ್ತು ಅವುಗಳನ್ನು ಗುರುತಿಸುವ ವಿಧಾನಗಳು, ನಕ್ಷತ್ರಗಳ ಹುಟ್ಟು, ಗಾತ್ರ, ಕಾಂತಿ ಮಹಾನವ್ಯಗಳು (ಸೂಪರ್‌ನೋವ), ನಕ್ಷತ್ರಗಳ ಸಾವು ಮೊದಲಾದ ವಿಚಾರಗಳಿಂದ 'ಆಕಾಶ' ಲೇಖನವು ಕೂಡಿದ್ದರೆ ಸೂರ್ಯನ ರಚನೆ ಗಾತ್ರ, ಸೂರ್ಯನ ಸಾಂದ್ರತೆ, ಸೂರ್ಯನ ಮೈಯಲ್ಲಿನ ಉರಿ, ಭೂಮಿಯ ಜೀವಿಗಳ ಅಸ್ತಿತ್ವಕ್ಕೆ ಕಾರಣಕರ್ತ ಸೂರ್ಯ, ಸೂರ್ಯನ ಶಾಖದ ಅಳತೆ, ಸೂರ್ಯನಲ್ಲಿ ಶಕ್ತಿ ಉತ್ಪಾದನೆಯ ಆಂತರಿಕ ಕ್ರಿಯೆಗಳು ಮೊದಲಾದ ವಿಷಯಗಳನ್ನೊಳಗೊಂಡಂತೆ ಇಡೀ ಸೂರ್ಯನ ಬಗ್ಗೆ ಮಾಹಿತಿಯನ್ನು 'ಸೂರ್ಯ' ಲೇಖನವು ನೀಡುತ್ತಿದ್ದು ಸೌರಶಕ್ತಿಯ ಮೂಲ ಹಾಗೂ ಬಳಕೆಯನ್ನು 'ಸೌರ ಚೈತನ್ಯ' ಲೇಖನವು ತಿಳಿಸುವುದನ್ನು ಗುರ್ತಿಸಬಹುದು.

ನಾಗೇಶ್ ಹೆಗಡೆಯವರ 'ವಿಜ್ಞಾನ ಗಂಗೆಯ ಬಿಂದುಸಾರ' ಕೃತಿಯಲ್ಲಿ ಪ್ರಕೃತಿಯ ಪ್ರತಿಯೊಂದು ಅಂಶಕ್ಕೂ ಇತಿಹಾಸ ಇರುವಂತೆ ಭೂಮಿಯ ಸುತ್ತ ಸುತ್ತುವ ಚಂದ್ರನಿಗೂ ಒಂದು ಇತಿಹಾಸವಿದೆ ಎಂದು ಹೇಳುವುದರೊಂದಿಗೆ ಪ್ರೊ.ಎಮ್.ಆರ್.ನಾಗರಾಜುರವರು ಚಂದ್ರನ ಹುಟ್ಟು ಹಾಗೂ ಅದರ ಬೆಳದಿಂಗಳ ರೂಪದ ಗುಟ್ಟು ಮತ್ತು ಭೂಮಿಯಂತೆ ಚಂದ್ರನು ತಾಪ ಒತ್ತಡ ಹೊಂದಿದ್ದಾನೆ ಎಂದು 'ಚಂದ್ರ(ಇತಿ)ಹಾಸ'ದಲ್ಲಿ ಮಾಹಿತಿ ನೀಡುವುದರೊಂದಿಗೆ ಖಭೌತದಲ್ಲೂ ವಿಶೇಷತೆ ಇದೆ ಎಂಬುದನ್ನು ತಿಳಿಸಿದ್ದಾರೆ.

ಶಿಶುಗಳ ಲಾಲನೆ ಪಾಲನೆಯು ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿರುವ ಸಂಗತಿಯಾಗಿದೆ. ಶಿಶುಗಳು ಎಂದರೆ ನಮಗೆಲ್ಲ ತಿಳಿದದ್ದು, ಜೀವಿಗಳನ್ನೆ ಹೋಲುವ ಮತ್ತೊಂದು ಜೀವಿ ಎಂದು ಮಾತ್ರ. ಶಿಶುಗಳ ಪಾಲನೆಗೆ ಒಂದು ಕೇಂದ್ರವೇ ಇದ್ದು, ಅದು ಎಲ್ಲಾ ರೀತಿಯ ಪಾಲನಾ ಜವಾಬ್ದಾರಿಯನ್ನು ವಹಿಸುವುದು. ಸಾಮಾನ್ಯವಾಗಿ ಶಿಶುಪಾಲನಾ ಕೇಂದ್ರಗಳನ್ನು ಭೂ ಮಂಡಲದಲ್ಲಿ ಮಾತ್ರ ಕಾಣಲಾಗುವುದು ಎಂಬ ತಪ್ಪು ಕಲ್ಪನೆಯನ್ನು ಲೇಖಕಿ ಬಿ.ಎಸ್ ಶೈಲಜಾರವರು ತಮ್ಮ ಲೇಖನ 'ಖಗೋಳದಲ್ಲಿ ಶಿಶುಪಾಲನಾ ಕೇಂದ್ರಗಳು' ಎಂಬಲ್ಲಿ ಆಕಾಶದಲ್ಲಿ ಹಲವು ಶಿಶುಪಾಲನಾ ಕೇಂದ್ರಗಳಿವೆ ಎಂದು ಹೇಳಿದ್ದಾರೆ. ಅಂದರೆ, ಮೋಡದಿಂದ ಜನ್ಮ ಪಡೆದ ಹಲವಾರ ನಕ್ಷತ್ರಗಳು ಹಾಗೂ ನಕ್ಷತ್ರ ಪುಂಜಗಳಿಂದ ಕೂಡಿದ ನವಜಾತ ಶಿಶುಗಳ ಪಾಲನ ಕೇಂದ್ರಗಳಿವೆ. ಈ ನವಜಾತ ಶಿಶು ನಕ್ಷತ್ರಪುಂಜಗಳನ್ನು ಓರೈಯನ್ ನೆಬ್ಯೂಲ ಎಂದು ಕರೆಯಲಾಗಿದ್ದು, ಇವುಗಳು ಜಲಜನಕ ಹೀಲಿಯಂನಿಂದ ಕೂಡಿರುವಂತಹದ್ದಾಗಿದ್ದು ಸಣ್ಣ ದೂರದರ್ಶಕದ ಸಹಾಯದಿಂದಲೇ ಅವುಗಳ ಇರುವಿಕೆಯನ್ನು ಕಾಣಬಹುದೆಂದು ಲೇಖಕರು ಹೇಳಿದ್ದಾರೆ.

ವಸುಂಧರ ಭೂಪತಿಯವರ ಸಂಪಾದಿತ ಕೃತಿ 'ವಿಜ್ಞಾನ ಸಾಹಿತ್ಯ -೨೦೧೦'ರಲ್ಲಿ ಸೌರಮಂಡಲದಲ್ಲಿ ಉಂಟಾದ ಮಹಾಸ್ಫೋಟದ ಪರಿಣಾಮವಾಗಿ ಬಹಳಷ್ಟು ಕ್ರಿಯೆ ಪ್ರಕ್ರಿಯೆಗೆ ಒಳಗಾಗಿ ವಿಶ್ವದ ಉಗಮವಾಯಿತು. ಅನಂತರ ಮಿಲಿಯಾನು ವರ್ಷಗಳ ನಂತರ ವಿಶ್ವದ ವಾತಾವರಣಕ್ಕೆ ಅನುಗುಣವಾಗಿ ಜೀವಿಗಳ ಉಗಮವಾಗಿ ಮಾನವನ ಉಗಮವಾಯಿತು ಎಂಬುದನ್ನು ಶ್ರೀಮತಿ ಹರಿಪ್ರಸಾದ್‌ರವರು 'ವಿಶ್ವ ಉಗಮ-ಮಾನವ ಉಗಮ' ಲೇಖನದಲ್ಲಿ ತಿಳಿಸಿದರೆ, ಅಂತರೀಕ್ಷದಲ್ಲಿ ನಡೆಯುವ ಗ್ರಹಗಳ ಹುಟ್ಟು ಸಾವುಗಳ ಮಧ್ಯೆ ಮತ್ತೊಂದು ಭೂಮಿಯು ಹುಟ್ಟಬಹುದು ಎಂದು ಹೇಳುತ್ತಾ ಬಿ.ಎಸ್.ಶೈಲಜಾರವರು 'ಇನ್ನೊಂದು ಭೂಮಿಗಾಗಿ ಹುಡುಕಾಟ' ಲೇಖನದಲ್ಲಿ ಮತ್ತೊಂದು ಭೂಮಿಯ ಹುಡುಕಾಟ ಕಾರ್ಯ ನಡೆಯುತ್ತಿದೆ ಎಂದು ತಿಳಿಸಿದ್ದಾರೆ.

ದೈತ್ಯ ಅಲೆಗಳ ಸರದಾರ ಸುನಾಮಿಯು ಭೂಮಿಯ ಮೇಲೆ ಮಾತ್ರವಲ್ಲದೆ ಸೌರಮಂಡಲದಲ್ಲೂ ಸುನಾಮಿ ಸಂಭವಿಸುತ್ತದೆ. ಭೂಮಿ ಮತ್ತು ಸೌರ ಮಂಡಲದಲ್ಲಿ ನಡೆಯುವ ಸುನಾಮಿಗೂ ಸ್ವರೂಪದಲ್ಲಿ ಮಾತ್ರ ವ್ಯತ್ಯಾಸವಿದೆ. ಅಂದರೆ ಭೂಮಿಯ ಮೇಲಿನ ಸುನಾಮಿಯು ದೈತ್ಯ ಅಲೆಗಳಿಂದ ಕೂಡಿದ್ದರೆ, ಸೌರಮಂಡಲದ ಸುನಾಮಿಯು ಸೂರ್ಯನಲ್ಲಿನ ಜ್ವಾಲೆಯ ಸಿಡಿತದಿಂದ ಉಂಟಾಗುವಂತಹದ್ದು. ಸೌರಮಂಡಲದಲ್ಲಿ ಸೂರ್ಯನಲ್ಲಿ ಉಂಟಾಗುವ ತಳಮಳದ (ದ್ರುವಗಳ ಬದಲಾಣೆ, ಚಲನಾವೇಗದ ವ್ಯತ್ಯಾಸ) ಕಾರಣದಿಂದಾಗಿ ಸೂರ್ಯನಲ್ಲಿರುವ ಜ್ವಾಲೆಯು ಚಿಮ್ಮಿದಾಗಿ ಭೂಮಿಯ ಮೇಲೆ ಹಾಗೂ ನಭೋಮಂಡಲದಲ್ಲಿ ಕಾಂತಕ್ಷೇತ್ರದಲ್ಲಿ ಬಿರುಗಾಳಿ ಉಂಟಾಗಿ, ಭೂಮಂಡಲದ ಕಾರ್ಯಗಳನ್ನೆಲ್ಲ ಅಲ್ಲೋಲ ಕಲ್ಲೋಲ ಮಾಡುತ್ತದೆ ಎನ್ನುವುದನ್ನು ಸೌರ ಸುನಾಮಿಯ ಇತಿಹಾಸದೊಂದಿಗೆ ಡಾ.ವೈಸಿ ಕಮಲರವರು 'ಸೌರ ಸುನಾಮಿ' ಲೇಖನದಲ್ಲಿ ತಿಳಿಸಿದ್ದಾರೆ.

'ವಿಜ್ಞಾನ ಸಾಹಿತ್ಯ ೨೦೧೨' ಎಂಬ ಕೃತಿಯು ಅಖಿಲೇಶ್ ಚಿಪ್ಪಳ್ಳಿಯವರ ಸಂಪಾದಿತ ಕೃತಿಯಾಗಿದ್ದು, ಖಗೋಳ ವಿಜ್ಞಾನಕ್ಕೆ ಸಂಬಂಧಿಸಿದಂತೆ ಬಹಳಷ್ಟು ಮಾಹಿತಿಗಳಿವೆ. ವಾಯೇಜರ್ ಎಂಬ ೨ ಜೋಡಿ ನೌಕೆಗಳನ್ನು ಬಾಹ್ಯಾಕಾಶಕ್ಕೆ ಹಾರಿಸಿ ಹವಾಮಾನ, ಸೂರ್ಯನ ತಾಪ ಮತ್ತಿತರ ಮಾಹಿತಿಯ ಸಂದೇಶವನ್ನು, ಬಾನಡಿಯ ಮಿಡಿತವನ್ನು ಪಡೆಯುವುದರೊಂದಿಗೆ ಮಾನವನ ಜ್ಞಾನ ವಿಸ್ತರಣೆಗೆ ಈ ನೌಕೆಗಳು ಬಹು ಪ್ರಯೋಜನಕಾರಿ ಎಂಬುದನ್ನು 'ಹಾರಿದ ನೌಕೆ ದೂರ ದೂರಕೆ' ಎಂಬಲ್ಲಿ ಸರೋಜಾ ಪ್ರಕಾಶರವರು ತಿಳಿಸಿದರೆ ಹಾರುವ ತಟ್ಟೆಗಳ ಬಗೆಗಿನ ಊಹಾ ಪೋಹ ಹಾಗೂ ಅವುಗಳ ಬಗೆಗಿನ ಕಾಲ್ಪನಿಕ ಮಾಹಿತಿಯನ್ನು ಪಾಲಹಳಿ ವಿಶ್ವನಾಥ್‌ರವರು 'ಭ್ರಮಾಲೋಕದ ನೌಕೆಗಳು' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

ಖಭೌತ ವಿಜ್ಞಾನ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಸುಮಾರು ೨೦ ಲೇಖನಗಳನ್ನು ಅಭ್ಯಸಿಸಲಾಗಿದ್ದು, ಪ್ರತಿಯೊಂದು ಲೇಖನವು ಯಾವುದೇ ರೀತಿಯ ಅವೈಜ್ಞಾನಿಕತೆಗೆ ಒಳಗಾಗಿ ತಪ್ಪು ಗ್ರಹಿಕೆಗೆ ಹೊಂದಿರದೆ ಇರುವ ವಿಚಾರವನ್ನು, ವೈಜ್ಞಾನಿಕ ಸ್ವರೂಪದೊಂದಿಗೆ ಲೇಖಕರ ಸೃಜನಾತ್ಮಕ ಅಭಿವ್ಯಕ್ತಿಯೊಂದಿಗೆ ಯಾವುದೇ ಅನವಶ್ಯಕ ವಿವರಣೆಯಿಲ್ಲದೆ ಮೂಡಿಬಂದಿರುವುದನ್ನು ಕಾಣಲಾಯಿತು. ಅತಿಯಾದ ಅನ್ಯದೇಶಿಯ ಪದಗಳ ಬಳಕೆ ಇಲ್ಲದೆ ಸಮಯ ಸನ್ನಿವೇಶಕ್ಕೆ ತಕ್ಕಂತೆ ಅಗತ್ಯಕ್ಕೆ ಅನುಗುಣವಾಗಿ, ಸಾರತೆಯೊಂದಿಗೆ ವಿಷಯ ನಿರೂಪಣೆಯು ಸರಳವಾಗಿರುವುದನ್ನು ಗುರುತಿಸಲಾಯಿತು.

೫.೫ ಮಾಹಿತಿ ತಂತ್ರಜ್ಞಾನ ವಿಜ್ಞಾನ

ಅಧ್ಯಯನ ಇಲ್ಲವೇ ಉಪಯೋಗಕ್ಕಾಗಿ ವಿದ್ಯುನ್ಮಾನ ಉಪಕರಣಗಳನ್ನು ವಿಶೇಷವಾಗಿ ಗಣಕಯಂತ್ರವನ್ನು ಬಳಸಿಕೊಂಡು ಮಾಹಿತಿಯನ್ನು ಸಂಗ್ರಹಿಸುವ, ದಾಖಲಿಸುವ ಹಾಗೂ ರವಾನಿಸುವ ಕಾರ್ಯವನ್ನು ಮಾಡುವುದೇ 'ಮಾಹಿತಿ ತಂತ್ರಜ್ಞಾನ'. ಮಾಹಿತಿ ಮತ್ತು ತಂತ್ರಜ್ಞಾನ ಎಂಬ ಎರಡು ಪದಗಳಿಂದ ಕೂಡಿದ್ದು, ಒಂದು ನಿರ್ದಿಷ್ಟ ವಿಷಯದ ಜ್ಞಾನ ನೀಡುವುದೇ ಮಾಹಿತಿಯಾದರೆ, ನಿರ್ದಿಷ್ಟ ವಿಷಯಗಳ ಕಾರ್ಯ ನಿರ್ವಹಣೆಯನ್ನು ಯಂತ್ರಾಂಶದ ಮೂಲಕ ತಿಳಿಸುವ ಜ್ಞಾನ ಸಂಗ್ರಹವೇ ತಂತ್ರಜ್ಞಾನ.

ಅಭಿವೃದ್ಧಿ ಹೊಂದಿದ ಇಂದಿನ ಯುಗಕ್ಕೆ ಮಾಹಿತಿ ತಂತ್ರಜ್ಞಾನ ಎಂಬುದು ಸಂಪತ್ತಿದ್ದ ಹಾಗೆ. ವಿಶ್ವದಲ್ಲಿನ ಸ್ಪರ್ಧಾತ್ಮಕತೆಯನ್ನು ಎದುರಿಸಲು ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರತಿದಿನವೂ ಒಂದಲ್ಲ ಒಂದು ತಂತ್ರಜ್ಞಾನಗಳು ಸೃಷ್ಟಿಯಾಗುತ್ತಿದ್ದು, ವ್ಯವಹಾರಿಕ ಕ್ಷೇತ್ರದಲ್ಲಿ ಅಭಿವೃದ್ಧಿ ಸಾಧಿಸುತ್ತಿರುವ ವ್ಯಕ್ತಿ ಹಾಗೂ ಸಂಸ್ಥೆಗಳಿಗೆ ತಂತ್ರಜ್ಞಾನವು ಆದಾಯದ ಮೂಲ. ಹೀಗಾಗಿ ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಹೊಸ ಹೊಸ ಆವಿಷ್ಕಾರಗಳು ನಡೆಯುತ್ತಿರುತ್ತವೆ.

ಮಾಹಿತಿಯು ಮನುಷ್ಯನಿಗೆ ಬಹಳ ಹಿಂದಿನಿಂದಲೂ ಒಂದಲ್ಲ ಒಂದು ವಿಚಾರದಲ್ಲಿ ಅರಿವಿಗೆ ಬರುತ್ತಿದ್ದು, ಇತ್ತೀಚೆಗಷ್ಟೆ ತಂತ್ರಜ್ಞಾನವು ಸೇರಿ ವಿಶೇಷ ಅಧ್ಯಯನ ಕ್ಷೇತ್ರವಾಗಿ ಪರಿಣಮಿಸಿದೆ. ಮಾಹಿತಿಯನ್ನು ಪಡೆದು ತಂತ್ರಜ್ಞಾನದ ಸಂಯೋಗದೊಂದಿಗೆ ಶೇಖರಿಸಿ, ಸಂಸ್ಕರಿಸಿ ಸುರಕ್ಷಿತವಾಗಿ ಇಡುವುದರ ಜೊತೆಗೆ ಅತಿ ವೇಗವಾಗಿ ಮಾಹಿತಿಯನ್ನು ರವಾನಿಸುವಲ್ಲಿ ತಂತ್ರಜ್ಞಾನದ ಪಾತ್ರವು ಹಿರಿದಾದುದು. ಇಂದು ಮಾಹಿತಿ ತಂತ್ರಜ್ಞಾನ ಹೊರತು ಪಡಿಸಿದ ಕ್ಷೇತ್ರವೇ ಇಲ್ಲವೆನ್ನಬಹುದು.

ಜಗತ್ತಿನ ಪ್ರತಿಯೊಂದು ಕ್ಷೇತ್ರದಲ್ಲೂ ಮಾಹಿತಿ ತಂತ್ರಜ್ಞಾನದ ಪ್ರಭಾವ ಇದ್ದೇ ಇರುತ್ತದೆ. ಹೀಗಾಗಿಯೇ ಮಾಹಿತಿ ತಂತ್ರಜ್ಞಾನವು ಮಾನವ ಕುಲಕ್ಕೆ ವರದಾನವಿದ್ದಂತೆ. ಯಂತ್ರಗಳ,

ಉಪಕರಣಗಳ, ತಂತ್ರಗಳ ಸಹಾಯದೊಂದಿಗೆ, ಈಗಾಗಲೇ ಇರುವ ಸಮಸ್ಯೆಗಳಿಗೆ ಪರಿಹಾರವನ್ನು ಹಾಗೂ ಮುಂದೆ ಬರುವ ಸಮಸ್ಯೆಗಳಿಗೆ ಮುಂದಾಲೋಚನಾ ಪರಿಹಾರಗಳನ್ನು ಸೂಚಿಸುವಲ್ಲಿ ಮಾಹಿತಿ ತಂತ್ರಜ್ಞಾನವು ಮಹತ್ವದ್ದಾಗಿದೆ. ಮಾಹಿತಿ ತಂತ್ರಜ್ಞಾನದಿಂದಾಗಿ ಅನೇಕ ಅಂದರೆ ಶೈಕ್ಷಣಿಕ, ವಾಣಿಜ್ಯ, ಸಾಮಾಜಿಕ, ರಾಜಕೀಯ ಮೊದಲಾದ ಕ್ಷೇತ್ರಗಳು ತ್ವರಿತ ಅಭಿವೃದ್ಧಿಯನ್ನು ಸಾಧಿಸಿ ಸಾಧನೆಯ ಶಿಖರವನ್ನು ಮುಟ್ಟಿರುವುದನ್ನು ಗಮನಿಸಬಹುದು.

ಮಾಹಿತಿ ತಂತ್ರಜ್ಞಾನದಿಂದ ಹೊಸ ಬಗೆಯ ವಿಜ್ಞಾನದ ಆವಿಷ್ಕಾರವಾಗುತ್ತಿದ್ದು, ಊಹಿಸಲೂ ಕಷ್ಟವಾದ ಅನೇಕ ಸಂಶೋಧನೆಗಳು ನಡೆಯುತ್ತಿವೆ. ವಿಜ್ಞಾನದ ಅಂಗಗಳಾದ ಭೌತ, ಬಾಹ್ಯ, ಪರಿಸರ, ವೈದ್ಯ ಮೊದಲಾದ ಕ್ಷೇತ್ರಗಳಲ್ಲಿ ಮಾಹಿತಿ ತಂತ್ರಜ್ಞಾನದ ಪ್ರಭಾವವು ಎದ್ದು ಕಾಣುತ್ತದೆ. ಟೆಲಿಸ್ಕೋಪ್, ಮೈಕ್ರೋಸ್ಕೋಪ್ ಮೊದಲಾದ ಉಪಕರಣಗಳ ಮೂಲವೇ ಮಾಹಿತಿ ತಂತ್ರಜ್ಞಾನ.

ಸೂರ್ಯ, ನಕ್ಷತ್ರಗಳ ಕೋಟಿ ಕೋಟ್ಯಂತರ ತೇಜೋಃ ಪುಂಜಗಳ, ಇತರ ಗ್ರಹಗಳ ಪರಿಚಯವಾದುದೇ ಮಾಹಿತಿ ತಂತ್ರಜ್ಞಾನ ವಿಜ್ಞಾನದಿಂದ. ಅಲ್ಲದೆ ಸೂಕ್ಷ್ಮಾತಿಸೂಕ್ಷ್ಮ ಜೀವಜಗತ್ತಿನ ಆಗು ಹೋಗುಗಳ ಬಗೆಗೆ ತಿಳಿದದ್ದೂ ಮಾಹಿತಿ ವಿಜ್ಞಾನದಿಂದಲೇ. ಹಲವು ಗ್ರಹಗಳ ಹುಡುಕಾಟಕ್ಕೆ ಮೂಲವಾಗಿದ್ದು, ಮಾನವನ ಜೀವನ ಬದುಕಿಗೆ ಯೋಗ್ಯ ಮತ್ತೊಂದು ಗ್ರಹದ ಹುಡುಕಾಟಕ್ಕೆ ಕಾರಣವೇ ಮಾಹಿತಿ ತಂತ್ರಜ್ಞಾನ. ಪ್ರಕೃತಿಯಲ್ಲಿನ ಏರುಪೇರು, ವಾತಾವರಣದಲ್ಲಿನ ವೈಪರೀತ್ಯ ಮಾಹಿತಿ ನೀಡುವ ಯಂತ್ರ, ಸೂಕ್ಷ್ಮಾತಿಸೂಕ್ಷ್ಮ ಯುದ್ಧೋಪಕರಣಗಳು, ರಕ್ಷಣಾ ವ್ಯವಸ್ಥೆಯಲ್ಲಿನ ಯಂತ್ರಗಳು ಮೊದಲಾದವುಗಳು ಮಾಹಿತಿ ತಂತ್ರಜ್ಞಾನ ವಿಜ್ಞಾನದ ಫಲ ಸ್ವರೂಪವಾಗಿದೆ.

ಅನ್ವೇಷಣೆಯ ಹುಡುಕಾಟದ ಸಮಯದಲ್ಲಿ ಮೂಡಿ ಬಂದ ಜ್ಞಾನದಂತೆ ಮಾನವನ ಸೇವೆಯಲ್ಲಿರುವ ಎಲ್ಲಾ ಉನ್ನತ ತಂತ್ರಜ್ಞಾನವೂ ಪ್ರತಿಯೊಂದು ಕ್ಷೇತ್ರದಲ್ಲೂ ದೊಡ್ಡಪ್ರಮಾಣದಲ್ಲಿ ಕಂಡು ಬರುತ್ತದೆ. ಒಂದು ರೀತಿಯಲ್ಲಿ ಮಾಹಿತಿ ತಂತ್ರಜ್ಞಾನ ಹೊರತಾದ ಕ್ಷೇತ್ರವನ್ನು ಊಹಿಸಲೂ ಸಾಧ್ಯವಿಲ್ಲ. ಮತ್ತೊಂದೆಡೆ ಮಾಹಿತಿ ತಂತ್ರಜ್ಞಾನ ವಿಜ್ಞಾನವು ಮಾನವನನ್ನು ತನ್ನ ಅಡಿಯಾಳಾಗಿ ಪರಿವರ್ತಿಸಿದ್ದರೂ, ಅದರ ವಿಶಾಲ ಉಪಯೋಗ ಕ್ಷೇತ್ರವನ್ನು ಗಮನಿಸಿದರೆ ದೇಶವು ಸಹಜವಾಗಿ ಒಂದು ಉತ್ತಮ ಸ್ಥಿತಿಗೆ ಬರಲು ಮಾಹಿತಿ ತಂತ್ರಜ್ಞಾನ ವಿಜ್ಞಾನವು ಸಹಕಾರಿಯಾಗಿದೆ.

ಮಾಹಿತಿ ತಂತ್ರಜ್ಞಾನದ ವೇಗವರ್ಧಕ ಪ್ರಗತಿಯಿಂದಾಗಿ ಜೀವವಾಹಿನಿ ತಂತ್ರಜ್ಞಾನದ ಬೆಳವಣಿಗೆಯೊಂದಿಗೆ ಮೂಲಭೂತ ಕಣಗಳ ಕ್ರಿಯೆಪ್ರಕ್ರಿಯೆಗಳ ಸೂಕ್ಷ್ಮ ನಿಕಟ ದರ್ಶನವು

ಆಗಿ ಎಲ್ಲಾ ಜೀವ ಪದಾರ್ಥಗಳ ಒಳಗುಟ್ಟನ್ನರಿಯಲು ಸಹಕಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಮಾಹಿತಿ ತಂತ್ರಜ್ಞಾನಾಧಾರಿತ ಲೇಖನಗಳ, ಕೃತಿಗಳ ಪಾತ್ರವು ಹಿರಿದಾಗಿದ್ದು, ಜನಸಾಮಾನ್ಯಡೆಗೆ ಮಾಹಿತಿಯನ್ನು ತಲುಪಿಸಿ ಪ್ರಸ್ತುತ ಸ್ಥಿತಿಗೆ ಹೊಂದಿಕೊಳ್ಳುವಂತೆ ಮಾಡುವುದು ವಿಜ್ಞಾನ ಸಾಹಿತಿಗಳ ಜವಾಬ್ದಾರಿಯಾಗಿದೆ.

'ವಿಜ್ಞಾನ ಸಾಹಿತ್ಯ ೧೯೯೭'ರಲ್ಲಿ ತಿಳಿಸಿರುವಂತೆ ಬಹಳಷ್ಟು ಸಾಹಿತಿಗಳು ಕಾಲಕಾಲಕ್ಕೆ ಆಗುವ ತಂತ್ರಜ್ಞಾನದ ಬದಲಾವಣೆ, ಆವಿಷ್ಕಾರಗಳ ಮಾಹಿತಿಯನ್ನು ಲೇಖನಗಳ ಮೂಲಕ ಜನರಿಗೆ ತಲುಪಿಸುವ ಕಾರ್ಯವನ್ನು ಮಾಡುತ್ತಿರುವುದು ಜನತೆಯಲ್ಲಿ ಮಾಹಿತಿ ತಂತ್ರಜ್ಞಾನದ ವಿಚಾರವನ್ನು ತಲುಪಿಸುವಂತದ್ದಾಗಿದೆ. ವಿಜ್ಞಾನ ತಂತ್ರಜ್ಞಾನದಲ್ಲಿ ಅತ್ಯಧಿಕ ಅಭಿವೃದ್ಧಿ ಸಾಧಿಸಿರುವ ಇಂದಿನ ಯುಗದಲ್ಲಿ ಮಾನವನು ತನ್ನ ಬುದ್ಧಿಮತ್ತೆಯನ್ನುಪಯೋಗಿಸಿ, ಪ್ರಕೃತಿಯ ಅನುಕರಣೆಯೊಂದಿಗೆ ತದ್ರೂಪಿ ಕೃತಕ ವಸ್ತುಗಳ ಸೃಷ್ಟಿಯ ಜೊತೆಯಲ್ಲಿ ನವೀನ ವಿಜ್ಞಾನದ ಪ್ರಾರಂಭಕ್ಕೆ ಕಾರಣವಾಗಿದ್ದಾನೆ ಎಂಬುದನ್ನು ಲೇಖಕರಾದ ಎನ್. ವಾಸುದೇವರವರು 'ನಿಸರ್ಗಾನುಕರಣೆಯ ನವೀನ ವಿಜ್ಞಾನ' ಲೇಖನದಲ್ಲಿ ಅಧಿಕ ಪಾರಿಭಾಷಿಕ ಪದಗಳ ಬಳಕೆಯಿಲ್ಲದೆ ವಿವರಿಸಿರುವುದು ಅವರ ಸರಳ ಅಭಿವ್ಯಕ್ತಿ ಶೈಲಿಯನ್ನು ಸೂಚಿಸುತ್ತಿದೆ. ಮನುಷ್ಯರನ್ನೊಳಗೊಂಡಂತೆ ಈ ಭುವಿಯ ಎಲ್ಲಾ ಜೀವಿಗಳು ತಮ್ಮ ಜ್ಞಾನೇಂದ್ರಿಯಗಳನ್ನು ತಿಳಿವು ಗ್ರಹಿಕೆಗೆ ಬಳಸಿಕೊಳ್ಳುವ ಜೈವಿಕ ವ್ಯವಸ್ಥೆಯನ್ನು ಅಭ್ಯಸಿಸಿ ಅವುಗಳನ್ನು ಎಲೆಕ್ಟ್ರಾನಿಕ್ಸ್‌ನ ಸಹಾಯದಿಂದ ತದ್ರೂಪಿಯಾಗಿ ಕೃತಕವಾಗಿ ಸೃಷ್ಟಿಸುವ 'ಬಯಾನಿಕ್' ಎಂಬ ಹೊಸ ಅಧ್ಯಯನ ಕ್ಷೇತ್ರವನ್ನು ಪರಿಚಯಿಸಿದ್ದಾರೆ.

ಮನುಷ್ಯರು ಪ್ರಕೃತಿಯ ಮಡಿಲಲ್ಲಿ ಇಂದಿನ ಯುಗದ ಅಗತ್ಯವಾಗಿರುವ ಮಾಹಿತಿ ವ್ಯವಸ್ಥೆಯನ್ನು ಸರಳಗೊಳಿಸುವ ದಾರಿಯನ್ನು ಕಲಿತು, ಪ್ರಸ್ತುತ ಸ್ಥಿತಿಗೆ ಹೊಂದಿಕೊಂಡು ಬದುಕುತ್ತಿದ್ದಾನೆ. ಬಯಾನಿಕ್ ಎಂಬ ಕೃತಕ ಸೃಷ್ಟಿಯೊಂದಿಗೆ ಬಹಳಷ್ಟು ಪ್ರಕೃತಿಯ ಜೀವಿಗಳ ರಚನಾ ಹಾಗೂ ಜೀವನ ಕ್ರಮದಿಂದ ಕೃತಕ ಜೀವಿಗಳು ಸೃಷ್ಟಿಯಾಗಿರುವುದನ್ನು ಗಮನಿಸಬಹುದು. ರಾಡಾರ(ಬಾವಲಿಗಳ ಹಾರಾಟ) ಸೋನಾರ್(ಡಾಲ್ಫಿನ್) ರೋಬಾಟ್‌ಗಳು (ಕಂಪ್ಯೂಟರ್ ಸ್ವನಿಯಂತ್ರಣ ಮತ್ತು ಸಂಪರ್ಕ ವ್ಯವಸ್ಥೆ) ಮೊದಲಾದವುಗಳ ಜೊತೆಯಲ್ಲಿಯೇ ನವೀನ ಅನ್ವಯಗಳಾದ ನಕ್ಷತ್ರ ಮೀನುಗಳು ಸ್ರವಿಸುವ ಅಂಟನ್ನು ಅನುಕರಿಸುವ ಯಂತ್ರಗಳು, ಬಿದಿರು, ತೆಂಗಿನ ಮರ, ಬಾಳೆಯನ್ನನುಸರಿಸುವಂತ ಕಟ್ಟಗಳ ನಿರ್ಮಾಣಗಳು ಕೃತಕವಾಗಿದ್ದು, ಸುಲಭ ನಿಸರ್ಗಾನುಕರಣೆಯಿಂದಾದದ್ದು ಎಂಬುದನ್ನು ಬಹಳಷ್ಟು ಉದಾಹರಣೆಗಳೊಂದಿಗೆ ತಿಳಿಸಿದ್ದಾರೆ.

ಪ್ರಾಚೀನ ಪ್ರಯೋಗಗಳೇ ಅಂತರ್ಜಲ ಸಂಶೋಧನೆಯ ಮೂಲ ಎಂಬುದನ್ನು ಕುಮಾರವ್ಯಾಸ, ಬೇಂದ್ರೆ, ವರಾಹ ಮಿಹೀರ ಮೊದಲಾದ ಸಾಹಿತಿಗಳ ರಚನೆಯ ಪದ್ಯಗಳ

ಮುಖಾಂತರ ವಿವರಿಸಿರುವಲ್ಲಿ ಗಂಭೀರ ಅಭಿವ್ಯಕ್ತಿ ಸ್ವರೂಪವು ಒಡಮೂಡಿದ್ದು ಬಹಳಷ್ಟು ಸಂಸ್ಕೃತ ಹಾಗೂ ಇಂಗ್ಲೀಷಿನ ಪಾರಿಭಾಷಿಕ ಪದಗಳನ್ನು 'ಅಂತರ್ಜಲ ಸಂಶೋಧನೆ' ಲೇಖನದಲ್ಲಿ ಬಳಸಿರುವುದು ಗಮನಿಸಬೇಕಾದ ಅಂಶವಾಗಿದೆ.

ನಮಗೆಲ್ಲರಿಗೂ ತಿಳಿದ ಸಂಗತಿ ೧೯೯೯ರ ನಂತರ ವಿಜ್ಞಾನ ಕ್ಷೇತ್ರದ ಆವಿಷ್ಕಾರಗಳಲ್ಲೇ ಜನಜನಿತ ಹಾಗೂ ಇತ್ತೀಚೆಗೆ ಎಲ್ಲಾ ಕಾರ್ಯಗಳಲ್ಲೂ ಉಪಯೋಗಿಸುವ ಕಂಪ್ಯೂಟರ್‌ನಲ್ಲಿ ಸಮಯದ ಆಧಾರದ ಮೇಲೆ ಸಂಭವಿಸಿದ ವೈ೭ಕೆ ಎಂಬ ಸಮಸ್ಯೆಯೇ ಕಂಪ್ಯೂಟರ್ ಲೋಕಕ್ಕೆ 'ಟೈಂ ಬಾಂಬ್' ಆಗಿದ್ದುದನ್ನು ಆಕರ್ಷಕ ಅಭಿವ್ಯಕ್ತಿ ಶೈಲಿಯಲ್ಲಿ ನಾಗೇಶ್ ಹೆಗಡೆಯವರು ಪ್ರಸ್ತುತ ಪಡಿಸಿದ್ದಾರೆ. ಓದುಗರಿಗೆ ಅರ್ಥೈಸಿಕೊಳ್ಳುವಲ್ಲಿ ಯಾವದೇ ಸಮಸ್ಯೆಯಾಗಬಾರದೆಂಬ ಉದ್ದೇಶದಿಂದ ಆದಷ್ಟು ಸುಲಭ ಸರಳ ಕನ್ನಡ ಪದಗಳ ಬಳಕೆ ಮಾಡುವುದರೊಂದಿಗೆ ಅನ್ಯ ಭಾಷೆಯ ಪದಗಳ ಬಳಕೆಯನ್ನು ಕಡಿಮೆಗೊಳಿಸುವುದ ರೊಂದಿಗೆ ಸುಲಭ ಗ್ರಾಹ್ಯಕ್ಕೆ ಸಹಕರಿಸುವುದರೊಂದಿಗೆ ಓದಿಗೆ ಸಿಗುವಂತೆ ಮಾಡಿರುವುದು ಮುಖ್ಯವಾಗಿದೆ.

ಪ್ರಳಯಾಂತಕ ಪ್ರಮಾದ, ಮಾಹಿತಿ ಜಾಲದ ಕುಸಿತ, ಸರ್ವಾಂತರ್ಯಾಮಿ ಹುಳ, ತೋಳ ಬಂತಲೇ ತೋಳ ಮೊದಲಾದ ಉಪ ಶೀರ್ಷಿಕೆಗಳೊಂದಿಗೆ ವಿಷಯದ ನಿರೂಪಣಾ ಶೈಲಯು ಬಹು ಆಕರ್ಷಕವಾಗಿದೆ. ಅಲ್ಲದೆ ೧೯೯೯ರ ಡಿಸೆಂಬರ್ ೩೧ರ ರಾತ್ರಿ ಉದ್ಭವಿಸುವ ಕಂಪ್ಯೂಟರ್‌ನಲ್ಲಿನ ಸಮಸ್ಯೆಯಿಂದಾಗುವ ಪರಿಣಾಮವನ್ನು ಹೇಳುತ್ತಾ, ಅದಕ್ಕೆ ಬೆಂಗಳೂರಿನ ವಿದ್ಯಾವಂತ ಕಂಪ್ಯೂಟರ್ ಪರಿಣತರಿಗೆ ಅತಿ ಹೆಚ್ಚು ಬೇಡಿಕೆ ಬಂದುದನ್ನು ಹೇಳುವುದರೊಂದಿಗೆ ಬಹಳಷ್ಟು ಉದ್ಯೋಗ ಸೃಷ್ಟಿಯಾದುದರ ಬಗ್ಗೆಯೂ ಮಾಹಿತಿ ನೀಡಿದ್ದಾರೆ. ಈ ಲೇಖನದ ವಿವರಣೆಯಲ್ಲಿ ವಿಜ್ಞಾನ ತಂತ್ರಜ್ಞಾನದ ಆವಿಷ್ಕಾರವು ಎಷ್ಟು ಒಳಿತನ್ನು ಮಾಡುವುದೋ ಅಷ್ಟೇ ತೊಂದರೆಯಿಂದ ಕೂಡಿರುತ್ತದೆ ಎಂಬುದರ ಎಚ್ಚರಿಕೆಯ ನುಡಿಯನ್ನು ನೀಡುವುದರೊಂದಿಗೆ ಜಾಗೃತಿಯನ್ನು ಮೂಡಿಸುವಲ್ಲಿ ಸಾಮಾಜಿಕ ಕಳಕಳಿಯು ಎದ್ದು ಕಾಣುತ್ತಿದೆ.

ವಿಜ್ಞಾನ ತಂತ್ರಜ್ಞಾನಗಳು ಒಂದಕ್ಕೊಂದು ಅವಿನಾಭಾವ ಸಂಬಂಧವನ್ನು ಹೊಂದಿದ್ದು, ದಿನನಿತ್ಯದ ಬದುಕಿಗೆ ಅವಶ್ಯಕವಾದ ವಸ್ತು ಸೇವೆಗಳಿಗಾಗಿ ಹಾಗೂ ದೈನಂದಿನ ಸಮಸ್ಯೆಗಳ ಪರಿಹಾರ ನಿವಾರಣೆಗಾಗಿ ನೆರವಾಗುತ್ತದೆ ಎಂಬುದನ್ನು ಬಹಳಷ್ಟು ನಿದರ್ಶನಗಳ ಮೂಲಕ ಲೇಖಕ ಬಿ.ವಿ.ಶ್ರೀಕಂಠನ್‌ರವರು ತಿಳಿಸಿರುವುದನ್ನು ಕಾಣಬಹುದು. ಪರಿಸರ, ಕೃಷಿ, ಆರೋಗ್ಯ, ಭೌತ, ಬಾಹ್ಯಾಕಾಶ ಮತ್ತಿತರ ಸಹ ಕ್ಷೇತ್ರಗಳ ಮೇಲೆ ವಿಜ್ಞಾನ ತಂತ್ರಜ್ಞಾನದ ಪ್ರಭಾವವು ಅಧಿಕವಾಗಿದ್ದು, ವಿಜ್ಞಾನ ತಂತ್ರಜ್ಞಾನವನ್ನು ಹೊರತು ಪಡಿಸಿ ಜೀವನವನ್ನು

ಊಹಿಸಿಕೊಳ್ಳಲು ಸಾಧ್ಯವಿಲ್ಲ ಎನ್ನುವುದನ್ನು ಪ್ರಭಾವಕಾರಿಯಾಗಿ ತಿಳಿಸುವುದರೊಂದಿಗೆ ಜೀವನಕ್ಕೆ ವಿಜ್ಞಾನ ತಂತ್ರಜ್ಞಾನದ ಅಗತ್ಯ ಅನಿವಾರ್ಯತೆಯನ್ನು 'ವಿಜ್ಞಾನ ತಂತ್ರಜ್ಞಾನ ಇಲ್ಲಿಂದ ಮುಂದೆಲ್ಲಿಗೆ?' ಲೇಖನದಲ್ಲಿ ತಿಳಿಸಿದ್ದಾರೆ.

ಎಂ.ಕೆ ರಾಮಸ್ವಾಮಿರವರ 'ಜ್ಞಾನ ವಿಜ್ಞಾನ' ಕೃತಿಯಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದ ಕೆಲವು ಲೇಖನಗಳನ್ನು ಕಾಣಬಹುದು. ಪ್ರಕೃತಿಗೆ ಸಹಕಾರಿಯಾಗಿರುವ ಇಂಗಾಲದ ಡೈ ಆಕ್ಸೈಡ್ ಎಥೆನಾಲ್‌ನನ್ನು ಇಂಧನವಾಗಿ ಉಪಯೋಗಿಸುವುದರಿಂದ ಕಡಿಮೆ ಇಂಗಾಲದ ಡೈ ಆಕ್ಸೈಡ್ ಉತ್ಪತ್ತಿಯಾಗುತ್ತದೆ. ಪೆಟ್ರೋಲ್‌ಗೆ ಹೋಲಿಸಿದರೆ ಇದು ಬಹಳ ಅಗ್ಗ ಹಾಗೂ ಸಕ್ಕರೆ ಹರಳುಗಳನ್ನು ಉತ್ಪಾದಿಸಿದ ನಂತರ ಉಳಿಯುವ ಕಪ್ಪಾದ ದ್ರವವಾದ ಕಾಕಂಬಿ(ಮೋಲೇವ್ಸ್)ಯಿಂದ ಹಾಗೂ ಆಲೂಗಡ್ಡೆಯಿಂದ, ಒಣಗಿದ ಬಾರ್ಲಿಯ ಮೊಳೆಗೆಯಿಂದ ಪೆಟ್ರೋಲ್ ಹೊರಬಂದ ನಂತರ ಉಳಿಯುವ ಅಂಗವಸ್ತು ಎಥಿಲೀನ್‌ನಿಂದ ಎಥೆನಾಲನ್ನು ಉತ್ಪಾದಿಸುವುದರಿಂದ ಬೆಲೆಯು ಕಡಿಮೆಯಿರುವುದೆಂಬ ಮಾಹಿತಿಯನ್ನು 'ವಾಹನಗಳ ಇಂಧನವಾಗಿ ಎಥೆನಾಲ್' ಲೇಖನವು ತಿಳಿಸುತ್ತದೆ,

ವಿದ್ಯುತ್ ಶಕ್ತಿಯ ವಿವಿಧ ಮೂಲಗಳಿಂದ ಜಲ, ಕಲ್ಲಿದ್ದಲು, ಗಾಳಿ, ನೈಸರ್ಗಿಕ ಅನಿಲ, ಜೈವಿಕ ಅನಿಲ, ಡೀಸೇಲ್, ಸಮುದ್ರದ ಅಲೆ, ಸೌರಶಕ್ತಿ ಮೊದಲಾದವುಗಳಿಂದ ವಿದ್ಯುತ್ತನ್ನು ಪಡೆಯುತ್ತಿದ್ದು, ಜನಜೀವನದಿಂದ ಹಿಡಿದು ಎಲ್ಲಾ ಕ್ಷೇತ್ರದಲ್ಲೂ ಅದರ ಬಳಕೆಯನ್ನು ಮಾಡಲಾಗುತ್ತಿರುವುದನ್ನು ಸವಿಸ್ತಾರವಾಗಿ 'ವಿದ್ಯುಚ್ಛಕ್ತಿಯ ವಿವಿಧ ಮೂಲಗಳು' ಲೇಖನವು ತಿಳಿಸಿದರೆ, ಆಧುನಿಕ ತಂತ್ರಜ್ಞಾನವನ್ನು ಜೈವಿಕ ವಿಷಯದಲ್ಲಿ ವ್ಯವಸಾಯ ಪಶುಸಂಗೋಪನೆ, ವೈದ್ಯ, ಪರಿಸರ ವಲಯಗಳಲ್ಲಿ ಎಷ್ಟು ಪ್ರಭಾವಶಾಲಿಯಾಗಿ ಬಳಸಲಾಗುತ್ತಿದೆ ಎಂಬುದನ್ನು ಜೀವತಂತ್ರ ಎಂಬ ಆಧುನಿಕ ಮಂತ್ರ ಲೇಖನವು ತಿಳಿಸುತ್ತದೆ.

ಸೌರಶಕ್ತಿಯನ್ನು ನೇರವಾಗಿ ವಿದ್ಯುಚ್ಛಕ್ತಿಯಾಗಿ ಪರಿವರ್ತಿಸುವ ಸಾಧನಗಳಾದ ಸೌರಕೋಶಗಳ ಬಗ್ಗೆ 'ಸೌರಕೋಶಗಳು' ಲೇಖನವು ತಿಳಿಸುವುದರೊಂದಿಗೆ, ವ್ಯೋಮ ಸಂಶೋಧನೆ ಮತ್ತು ಭಾರತದಲ್ಲಿ ಅದರ ಪ್ರಗತಿ, ದೂರದರ್ಶನದ ಉಗಮ, ಕಲುಷಿತ ನೀರನ್ನು ಶುದ್ಧೀಕರಿಸಿ ಸದ್ಬಳಕೆ ಮಾಡುವ ಬಗೆ ಮೊದಲಾದ ವಿಷಯಗಳ ಬಗೆಗೆ ಮಾಹಿತಿ ನೀಡುತ್ತದೆ.

'ವಿಜ್ಞಾನ ಗಂಗೆಯ ಬಿಂದುಸಾರ' ಎಂಬ ನಾಗೇಶ್ ಹೆಗಡೆಯವರಿಂದ ಸಂಪಾದಿತ ಕೃತಿಯಲ್ಲಿ ಚಟ ಎಂದರೇನು? ನಾರ್ಕೋಟಿಕ್ (ಮತ್ತು ಬರುವ/ಆನಂದಾನುಭವ/ಸುಖಾನುಭವ ನೀಡುವ ವಸ್ತು) ವಸ್ತುಗಳೆಂದರೆ ಯಾವುವು, ಎಲೆ, ಅಡಕೆ, ತಂಬಾಕು, ಅಫೀಮು, ಗಾಂಜಾ, ಕಾಫಿ, ಟೀಗಳನ್ನು ಸೇವಿಸಿದಾಗ ಆಗುವ ವೈವಿಧ್ಯ ಅನುಭವಗಳು

ಹಾಗೂ ಈ ಅನುಭವಗಳಿಗೆ ಉಂಟುಮಾಡುವ ಸಾಮಾನ್ಯ ಪ್ರತಿಕ್ರಿಯೆಯ ಗುಣ ಮೊದಲಾದ ಮಾಹಿತಿಯನ್ನು 'ಚಟವನ್ನು ಕುರಿತು' ಲೇಖನವು ತಿಳಿಸಿದರೆ, ದೋಸೆ ಹಿಟ್ಟನ್ನು ಮಾಡುವುದರಿಂದ ಹಿಡಿದು ದೋಸೆ ತಯಾರಿಸುವವರೆಗೂ ನಡೆಯುವ ಜೀವರಾಸಾಯನಿಕ ಕ್ರಿಯೆಯ ಸವಿಸ್ತಾರವಾದ ವಿವರವನ್ನು ಜೆ.ಆರ್.ಲಕ್ಷ್ಮಣರಾವ್‌ರವರ 'ದೋಸೆ ಮತ್ತು ವಿಜ್ಞಾನ ಲೇಖನವು ತಿಳಿಸುವುದು. ಅದರಂತೆ ಸಾಮಾನ್ಯವಾಗಿ ಕಂಡು ಬರುವ ಉಗ್ಗುವಿಕೆಯನ್ನು ವೈಜ್ಞಾನಿಕ ವಿಧಾನದಿಂದ ಕೆಲವು ಕಾರ್ಯತಂತ್ರಗಳ ಮೂಲಕ ಕಂಡುಕೊಂಡು ಪರಿಹರಿಸುವ ಬಗೆಯನ್ನು ಸ್ವಾರಸ್ಯಕರವಾಗಿ 'ಗ್‌ಗ್‌ಗ್‌ಗ್‌ಗಣೇಶನು ಗಣೇಶನಾದನು' ಎಂಬ ಮೀನಗಂಡಿ ಸುಬ್ರಮಣ್ಯ ರವರು ಲೇಖನದಲ್ಲಿ ತಿಳಿಸಿದ್ದಾರೆ.

ಅನ್ವೇಷಣೆ, ಆವಿಷ್ಕಾರ, ಸಂಶೋಧನೆಗಳು ಒಂದಲ್ಲಾ ಒಂದು ಕ್ಷೇತ್ರದಲ್ಲಿ ನಡೆಯುತ್ತಿರುವ ನಿರಂತರ ಪ್ರಕ್ರಿಯೆಯಾಗಿದೆ. ಇಂತಹ ಒಂದು ಅನ್ವೇಷಣಾ ಕಾರ್ಯವು ೧೯೬೯ರಲ್ಲಿ ಅಪೋಲೋ ೧೧ ನೌಕೆಯನ್ನು ಮೂರು ವಿಜ್ಞಾನಿಗಳೊಂದಿಗೆ ಚಂದ್ರನ ಒಡಲಿಗೆ ಕಳುಹಿ, ಅಲ್ಲಿಂದ ಶಿಲೆಯನ್ನು ತರಿಸಿದ್ದರು. ಅದನ್ನು ೧೩೫ ದೇಶಗಳಿಗೆ ಅಮೇರಿಕಾದ ಆಗಿನ ಅಧ್ಯಕ್ಷ ನಿಕ್ಸನ್ ಹಂಚಿದರು. ಹೀಗೆ ಹಂಚಿದ ಶಿಲೆಗಳನ್ನು ಕೆಲವು ದೇಶಗಳಲ್ಲಿ ಕದು ಮಾರಲು ಹೋಗಿ ಸಿಕ್ಕಿಬಿದ್ದದ್ದು, ಆಯಾ ಸಂಬಂಧಿತ ದೇಶಕ್ಕೆ ಕೊಟ್ಟುದರ ಬಗ್ಗೆ ಹಾಗೂ ಚಂದ್ರಶಿಲೆಯೆಲ್ಲಿದೆ? ಎಂಬುದನ್ನು 'ಚಂದ್ರಶಿಲೆಯ ಚೋರರ ನೀವು ಕಂಡಿರಾ?' ಲೇಖನದಲ್ಲಿ ಟಿ.ಆರ್ ಅನಂತರಾಮುರವರು ವಿವರಿಸುವುದರೊಂದಿಗೆ ಬಾಹ್ಯಾಕಾಶದಲ್ಲೂ ಮಾನವನ ವಾಸದ ಹಾಗೂ ಮತ್ತೊಂದು ಗ್ರಹದ ಜೀವಿಯ ಹುಡುಕಾಟ ನಡೆದಿದೆ ಎಂಬದರ ಕುರುಹನ್ನು ನೀಡಿದ್ದಾರೆ.

ಮುಗ್ಧ ಮಾನವನಲ್ಲಿನ ಸಮೂಹ ಸನ್ನಿಯ ವಿಷಯಗಳು ಕಾಡ್ಗಿಚ್ಚಿನಂತೆ ಹರಡಲು ಕಾರಣ ಹಾಗೂ ಸಮಾಜದಲ್ಲಿ ನಡೆಯುವ ಅನಗತ್ಯ ಪವಾಡಗಳು ಎಷ್ಟರ ಮಟ್ಟಿಗೆ ಸತ್ಯ ಎಂಬುದನ್ನು ವೈಜ್ಞಾನಿಕ ಹಾಗೂ ಮನೋವೈಜ್ಞಾನಿಕ ಹಿನ್ನೆಲೆಯಲ್ಲಿ ನಾಗೇಶ್ ಹೆಗಡೆಯವರು ೧೯೯೫ರ ಸೆಪ್ಟೆಂಬರ್ ೨೧ರಂದು ನಡೆದ 'ಗಜಮುಖನು ಚಮಚಾದ ಮೂಲಕ ಕ್ಷೀರ ಕುಡಿಯುವ ಪವಾಡವನ್ನು ತಿಳಿಸಿದ್ದಾರೆ. ಗಜಮುಖನ ಕ್ಷೀರದಾಹಕ್ಕೆ ವೈಜ್ಞಾನಿಕವಾಗಿ ಕಾರಣ ದ್ರವ ವಸ್ತುಗಳ ಮೇಲ್ಮುಖ ಸೆಳೆತ (ಕ್ಯಾಪಿಲರಿ ಪರಿಣಾಮ) ಕಾರಣವಾದರೆ, ಮನೋವೈಜ್ಞಾನಿಕವಾಗಿ ಜನರ ಮರೆಯಲ್ಲಿರುವ ಬಯಕೆ ಕಾರಣ ಎಂಬುದನ್ನು ಹೇಳುವುದರೊಂದಿಗೆ ಜೀವನಕ್ಕೆ ವೈಜ್ಞಾನಿಕ ಚಿಂತನೆಯ ಅಗತ್ಯತೆಯನ್ನು 'ಗಜಮುಖ ಕ್ಷೀರದಾಹ' ಲೇಖನದಲ್ಲಿ ವ್ಯಕ್ತಪಡಿಸಿದ್ದಾರೆ.

ಕೃತಕ ಬುದ್ಧಿಮತ್ತೆಯನ್ನು ಕೃತಕ ಸೃಷ್ಟಿಯಾದ ಕಂಪ್ಯೂಟರ್ ನಿರ್ದೇಶಿತ ರೋಬೋಟಿಕ್ ಸೃಷ್ಟಿಯೊಂದಿಗೆ ಎಲ್ಲಾ ಕೆಲಸ ಕಾರ್ಯಗಳಿಗೆ ಅದನ್ನು ಒಂದು ಸ್ಪರ್ಧಾತ್ಮಕವಾಗಿ ಬಳಸುವಲ್ಲಿ ವೈಜ್ಞಾನಿಕ ಜ್ಞಾನದ ಅಗತ್ಯತೆಯನ್ನು ಲೇಖಕರಾದ ಹಾಲ್ದೊಡ್ಡೇರಿ ಸುಧೀಂದ್ರರವರು 'ನನ್ನಂಥ ಸೇವಕ ನಿನಗುಂಟು. ಎನಗಿಲ್ಲ ನಿನ್ನಂಥ ಸ್ವಾಮಿ' ಲೇಖನದಲ್ಲಿ ತಿಳಿಸಿದ್ದಾರೆ.

ಯುದ್ಧವೆಂಬುದು ಎಂದಿದ್ದರು ವಿನಾಶಕ್ಕೆ ಕಾರಣ. ಆದರೂ ವಿಶ್ವದ ಬಹುತೇಕ ರಾಷ್ಟ್ರಗಳು ತಮ್ಮ ರಕ್ಷಣೆ ಹಾಗೂ ತಮ್ಮ ಬಲದ ಪ್ರತ್ಯಕ್ಷಿಕೆಗಾಗಿ ಯುದ್ಧವನ್ನೇ ಅಸ್ತ್ರವಾಗಿ ಹೊಂದಿವೆ. ಆದರೆ ಈ ಅಸ್ತ್ರಗಳಿಂದ ರಕ್ಷಣೆಯೇನೋ ಪಡೆಯಬಹುದು, ಯುದ್ಧಾಸ್ತ್ರಗಳಿಂದಾಗಿ ರಾಸಾಯನಿಕ ಪರಿಣಾಮ ಮಾತ್ರ ಪೀಳಿಗೆ ಕಳೆದರೂ ಮಾಸುವುದಿಲ್ಲ. ಯುದ್ಧ ಶತೃ ರಾಷ್ಟ್ರಗಳಿಗೆ ಮಾತ್ರವಲ್ಲದೆ ಸ್ವರಾಷ್ಟ್ರಕ್ಕೂ ನರಕಕಾರಕ. ಕ್ಯಾನ್ಸರ್ ಮತ್ತಿತರ ಭಯಂಕರ ರೋಗದಿಂದ ನಮ್ಮ ಬೆನ್ನ ಹಿಂದೆ ಬಿದ್ದ ಬೇತಾಳದಂತೆ ಕಾಡುತ್ತದೆ ಎಂಬ ಅತಿ ಅಗತ್ಯ ಮಾಹಿತಿಯನ್ನು ಆಡ್ಯನಡ್ಕ ಕೃಷ್ಣಭಟ್ಟರು ತಮ್ಮ ಲೇಖನವಾದ 'ವಿಶ್ವಯುದ್ಧದ ಬಗ್ಗೆ' ಎಂಬಲ್ಲಿ ತಿಳಿಸಿದ್ದಾರೆ.

ವಸುಂಧರಾ ಭೂಪತಿಯವರಿಂದ ಸಂಪಾದಿತ 'ವಿಜ್ಞಾನ ಸಾಹಿತ್ಯ –೨೦೧೦' ಎಂಬ ಕೃತಿಯಲ್ಲಿ ಪ್ರತಿಯೊಬ್ಬರ ಶ್ರಮಕ್ಕೆ ತಕ್ಕ ಫಲ ಸಿಕ್ಕೆ ಸಿಗುತ್ತದೆ ಎಂಬಂತೆ ಅನ್ವೇಷಣೆ ಆವಿಷ್ಕಾರ ಸಾಧನೆಗಳನ್ನು ಗುರುತಿಸಿ ನೀಡುವ ಅತ್ಯುನ್ನತ ಪ್ರಶಸ್ತಿಯಾದ ನೋಬೆಲ್ ಪ್ರಶಸ್ತಿಯನ್ನು ೨೦೧೦ರಲ್ಲಿ ವೈದ್ಯಕೀಯ, ಭೌತ, ರಾಸಾಯನ ಕ್ಷೇತ್ರದಲ್ಲಿ ಮಹತ್ವಪೂರ್ಣ ಸಾಧನೆಯನ್ನು ಮಾಡಿ, ಮಾನವನ ಒಳಿತು ಕ್ಷೇಮಕ್ಕಾಗಿ ಹೊಸ ಆವಿಷ್ಕಾರ ಶೋಧನೆಯೊಂದಿಗೆ ಸಮಾಜಕ್ಕೆ ಕೊಡುಗೆ ನೀಡಿದ, ಸುಮಾರು ೧೦ ಮಂದಿಗೆ ನೋಬೆಲ್ ಪ್ರಶಸ್ತಿಯನ್ನು ನೀಡಲಾಯಿತು. ಈ ೧೦ ಮಂದಿ ವಿಜ್ಞಾನಿಗಳು ಪ್ರನಾಳದಲ್ಲಿ ಫಲೀಕರಣ, ಗ್ರಾಫೈಟ್‌ನಿಂದ ಗ್ರಾಫೀನ್ ತಯಾರಿ ಹಾಗೂ ಪಲೇಡಿಯಂ ಲೋಹದ ಹಾಜರಿಯಲ್ಲಿ ಅಣು ತಯಾರಿ ಮೊದಲಾದ ಆವಿಷ್ಕಾರವನ್ನು ಮಾಡಿ ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ ಎಂಬುದನ್ನು ಲೇಖಕರಾದ ಆಡ್ಯನಡ್ಕ ಕೃಷ್ಣಭಟ್ಟರವರು 'ವೈಜ್ಞಾನಿಕ ತಂತ್ರಗಳಿಗೆ ನೊಬೆಲ್ ಗೌರವ' ಲೇಖನದಲ್ಲಿ ವಿವರಣೆಯೊಂದಿಗೆ ತಿಳಿಸಿರುವುದನ್ನು ಕಾಣಬಹುದು.

ಸಮಾಜಕ್ಕೆ ಒಳಿತನ್ನು ಮಾಡುವ ವಿಜ್ಞಾನಿಯೇ (ಎಮಿ ಬಿಷಪ್) ಕೊಲೆಗಡುಕಳಾದ ಪ್ರಸಂಗ ಹಾಗೂ ವಿಜ್ಞಾನಿಯ ಹುಚ್ಚಿಗೆ ಅಮಾಯಕ ಪ್ರತಿಭಾವಂತ ವಿದ್ಯಾರ್ಥಿಗಳನ್ನೊಳಗೊಂಡ ವಿಜ್ಞಾನಿಗಳು ಜೀವ ಕಳೆದುಕೊಂಡ ಸನ್ನಿವೇಶವನ್ನು ಹಾಗೂ ಹತ್ಯೆಗೀಡಾದವರಲ್ಲಿ ಭಾರತೀಯ ವಿಜ್ಞಾನಿಯಾದ ಎಲ್.ಜಿ ಲೋಗನಾಥನ್ ಮತ್ತು ಹೆಸರಾಂತ ವ್ಯಕ್ತಿಯಾದ ಗೋಪಿನಾಥನ್‌ರವರು ಸಾವಿಗೀಡಾದರು ಎಂಬುದನ್ನು ಹಾಗೂ ಈ ವಿಜ್ಞಾನಿಗಳ ಆವಿಷ್ಕಾರವು

ಎಷ್ಟು ಪ್ರಮುಖವಾದುದು ಎಂಬುದನ್ನು ತಿಳಿಸಿದ್ದಾರೆ. ಮೇಲ್ನೋಟಕ್ಕೆ ಲೇಖನವು ಮಾಹಿತಿ ವಿಜ್ಞಾನದ ವಿವರದಂತೆ ಕಂಡರೂ ವೈದ್ಯ(ನರವಿಜ್ಞಾನ) ಮತ್ತು ಪರಿಸರ ವಿಜ್ಞಾನದ (ಅಣಬೆಗಳ ಹುಟ್ಟು ಬದುಕು)ಅಂಶಗಳ ಆವಿಷ್ಕಾರದ ಮಾಹಿತಿಯಿಂದ ಕೂಡಿರುವುದನ್ನು ಗಮನಿಸಬಹುದು.

ಹಂತಕಿ ಎಮಿ ಬಿಷಪ್ ವೈದ್ಯ ಕ್ಷೇತ್ರದ ನರವಿಜ್ಞಾನ ವಿಭಾಗದಲ್ಲಿ ಸಂಶೋಧನೆ ಮಾಡುತ್ತಿದ್ದು, ಸಂಶೋಧನಾ ಗುತ್ತಿಗೆಯ ಅವಧಿ ಮುಗಿದದ್ದಕ್ಕಾಗಿ ಸಲ್ಲಿಸಿದ್ದ ಅವಧಿ ವಿಸ್ತರಣೆಯ ಅರ್ಜಿಯು ತಿರಸ್ಕೃತವಾಗಿದೆ ಎಂಬ ಅನುಮಾನದಿಂದ ಹತಾಶೆಗೀಡಾಗಿ, ಸಮಾಲೋಚನಾ ಸಭೆಗೆ ನುಗ್ಗಿ ಗುಂಡಿನ ಮಳೆ ಸುರಿಸಿ ಹಂತಕಳಾಗುವುದರೊಂದಿಗೆ ನರವಿಜ್ಞಾನ ಕ್ಷೇತ್ರದಲ್ಲಿ ಅವಳು ಮಾಡುತ್ತಿದ್ದ ಸಂಶೋಧನೆಯು ಅರ್ಧಕ್ಕೆ ನಿಂತಿತು. ಇತ್ತ ಗುಂಡಿನ ದಾಳಿಗೆ ಒಳಗಾಗಿ ಮರಣ ಹೊಂದಿದ ಗೋಪಿ ಪಾಡಿಲರವರು ಅಣಬೆಗಳ ಮೇಲೆ ಸಂಶೋಧನೆಯನ್ನು ಮಾಡುತ್ತಿದ್ದು, ಅಣಬೆಗಳಲ್ಲಿಯೇ ವಿಶೇಷವಾದ ಎಕ್ಟೋರೈಝಾ ಎಂಬ ಪರಿಸರ ಸ್ನೇಹಿ ಅಣಬೆಯ ಹುಟ್ಟು, ಬೆಳವಣಿಗೆ ಅದರಿಂದ ಪರಿಸರಕ್ಕಾಗುವ ಅನುಕೂಲ(ಮರಗಳ ಶೀಘ್ರ ಬೆಳವಣಿಗೆಯಲ್ಲಿ ಅವುಗಳ ಪಾತ್ರ) ಹಾಗೂ ಪೆಟ್ರೋಲಿಯಂ ಬದಲು ಅಪಾರ ಪ್ರಮಾಣದ ಜೈವಿಕ ಇಂಧನಕ್ಕಾಗಿ ದ್ರವ್ಯವನ್ನು ನೀಡಬಲ್ಲ ಜೀವಿಯ ತಳಿಸೂತ್ರವಾಗಿರುವ ಪ್ರಕೃತಿಯ ಸೂಕ್ಷ್ಮಲೋಕದ ತಂತು ಜೀವಿಯಾಗಿರುವ ಬಗೆ ಮೊದಲಾದ ವಿಚಾರಗಳನ್ನು ನಾಗೇಶ್ ಹೆಗಡೆಯವರು ತಮ್ಮ 'ಕೊಲೆಗಡುಕ ವಿಜ್ಞಾನಿ ಮತ್ತು ಸೂಕ್ಷ್ಮಲೋಕದ ತಂತು ಜೀವಿ' ಲೇಖನದಲ್ಲಿ ತಿಳಿಸಿದ್ದಾರೆ.

ಸಾಮಾನ್ಯವಾಗಿ ನಮಗೆಲ್ಲರಿಗೂ ತಿಳಿದಿರುವುದು ಕಪ್ಪು ಮಸಿಯಿಂದಾದ ಅಕ್ಷರ ಮತ್ತು ಪದಜೋಡಣೆಯಿಂದ ಕೂಡಿದ ಇಲ್ಲವೇ ಖಾಲಿ ಬಿಳಿಯಾದ ಕಾಗದ ಮಾತ್ರ. ಆದರೆ ಅಮೇರಿಕೆಯ ಮಿಶಿಗನ್ ವಿಶ್ವವಿದ್ಯಾಲಯದ ವಸ್ತುವಿಜ್ಞಾನಿ ನಿಲೋಲಸ್ ಕೊಟೋವ್ ಮತ್ತು ಚೀನಾದ ಜಿಯಾಂಗ್‌ಯನ್ ವಿಶ್ವವಿದ್ಯಾನಿಲಯದ ಆಹಾರವಿಜ್ಞಾನಿ ಚುನ್‌ಲಾಯ್ ಷುರವರು ಜೊತೆಯಾಗಿ ಸಾಮಾನ್ಯ ಕಾಗದದಲ್ಲಿ ಜೈವಿಕ ಸಂವೇದಕವೊಂದನ್ನು ಅಭಿವೃದ್ಧಿ ಪಡಿಸಿದ್ದಾರೆ. ಇವರು ಅಭಿವೃದ್ಧಿ ಪಡಿಸಿದ ಈ ಕಾಗದಕ್ಕೆ 'ನಯಾ ಕಾಗಜ್' ಎಂದು ಹೇಳುವುದರೊಂದಿಗೆ ನೀರಿನಲ್ಲಿ ಅತ್ಯಂತ ಅಲ್ಪ ಪ್ರಮಾಣದಲ್ಲಿರುವ ಹಾನಿಕಾರಕ ವಸ್ತುಗಳನ್ನು ಪತ್ತೆ ಹಚ್ಚುವಷ್ಟು ಸೂಕ್ಷ್ಮ ಸಂವೇದಿ ಸಾಧನವಾಗಿ ಹಾಗೂ ನ್ಯಾನೋ ಕಾರ್ಬನ್ ತಂತುಗಳನ್ನೊಳಗೊಂಡ ಕಾಗದದ ಬ್ಯಾಟರಿಯಾಗಿ ರೂಪಗೊಂಡ ಕಾಗದ ಪತ್ರ ಎಂದು ಲೇಖಕರಾದ ಕೊಳ್ಳೆಗಾಲ ಶರ್ಮರವರು 'ನಯಾ ಕಾಗಜ್!' ಲೇಖನದಲ್ಲಿ ತಿಳಿಸಿರುವುದನ್ನು ಗಮನಿಸಲಾಗಿದೆ.

ವೇದಗಳ ಕಾಲದಿಂದಲೂ ಕೃತಕ ಮಳೆಗಾಗಿ ನಾನಾ ರೀತಿಯ ಆಚರಣೆಗಳು, ಪ್ರಯೋಗಗಳು ನಡೆದಿರುವುದು ಇತಿಹಾಸದಿಂದ ತಿಳಿದುಬಂದಿದೆ. ಮಳೆಯ ಅಭಾವಕ್ಕೆ ಸ್ವಾರ್ಥಿ ಮಾನವನ ಕಾರ್ಯಗಳೇ ಕಾರಣವಾಗಿದ್ದು, ಬಹಳಷ್ಟು ಮುಂದುವರಿದ ರಾಷ್ಟ್ರಗಳಾದ ಚೀನಾ, ಆಸ್ಟ್ರೇಲಿಯಾ, ಅಮೇರಿಕಾಗಳಲ್ಲಿ ಕೃತಕ ಮಳೆಯನ್ನು ಬರಿಸಲು ಸಿಲ್ವರ್ ಅಯೋಡೈಡ್‌ನ ಉಪಯೋಗ ಮಾಡುತ್ತಿವೆ. ಆದರೆ ಈ ಸಿಲ್ವರ್ ಅಯೋಡೈಡ್ ಮಳೆಯ ನಂತರ ಭೂಮಿಯ ಮೇಲೆ ಬಿದ್ದು ವಿಷಕಾರಿ ವಸ್ತುವಾಗಿ ಮಣ್ಣಿನಲ್ಲಿ ಬೆರೆತು ಹಲವಾರು ಜೀವ ಸಂಕುಲ, ಸಸ್ಯ ಸಂಕುಲಗಳ ನಾಶಕ್ಕೆ ಕಾರಣವಾಗುವ ಅಪಾಯವನ್ನರಿತ ಕೆಲವು ದೇಶಗಳು ಅದನ್ನು ನಿಷೇಧಿಸಿರುವ ಬಗ್ಗೆ ಹಾಗೂ ಅಮೇರಿಕಾದ ವಿನ್ಸೆಂಟ್ ಶೀಫರ್‌ನ ಮೋಡ ಬಿತ್ತನೆಯ ಆವಿಷ್ಕಾರವನ್ನು ತಿಳಿಸುವುದರೊಂದಿಗೆ ಕೃತಕ ಮಳೆ ಎಂಬುದು ಕೇವಲ ಕೃತಕ ಮಾತ್ರ ನೈಸರ್ಗಿಕ ಮಳೆಯೇ ಶಾಶ್ವತ ಎಂಬುದನ್ನು ಡಾ. ಶೇಖರ್ ಗೌಳೇರ್‌ರವರು 'ಕೃತಕ ಮಳೆಯ ಬೆನ್ನು ಹತ್ತಿದ ಬೇತಾಳ' ಲೇಖನದಲ್ಲಿ ತಿಳಿಸಿದ್ದಾರೆ.

ತಂತ್ರಜ್ಞಾನವು ಸಾಮಾನ್ಯವಾಗಿ ಜನಜೀವನದ ಪ್ರತಿಯೊಂದು ಹಂತದಲ್ಲೂ ಪ್ರಮುಖವಾದ ಪಾತ್ರ ವಹಿಸುತ್ತಿದೆ. ಮಾಹಿತಿ ತಂತ್ರಜ್ಞಾನ ಕ್ಷೇತ್ರದಲ್ಲಿ ಪ್ರತಿ ದಿನ ಪ್ರತಿ ಕ್ಷಣದಲ್ಲಿ ಒಂದಲ್ಲಾ ಒಂದು ಆವಿಷ್ಕಾರ ಅನ್ವೇಷಣೆಗಳು ನಡೆಯುತ್ತಿವೆ. ಅಂತಹ ಒಂದು ಆವಿಷ್ಕಾರವು ಜಿ.ಪಿ.ಎಸ್(ಗ್ಲೋಬಲ್ ಪೊಸಿಷನಿಂಗ್ ಸಿಸ್ಟಮ್/ಭೌಗೋಳಿಕ ಸ್ಥಾನ ನಿರ್ದೇಶಕ)ನದ್ದಾಗಿದ್ದು, ಉಪಗ್ರಹಗಳ ಆದೇಶದ ಮೇರೆಗೆ ಸ್ಥಳಗಳ ವಿವರ, ಹೋಗ ಬೇಕಾದ ಮಾರ್ಗವನ್ನು ಧ್ವನಿಸುರುಳಿಯ ಮೂಲಕ ಮಾಹಿತಿಯನ್ನು ನೀಡುವ ಅದ್ಭುತ ತಾಂತ್ರಿಕ ಸಾಧನವಾಗಿದೆ. ಸ್ಥಳದ ಪರಿಚಯವಿಲ್ಲದವರೂ ಜಿ.ಪಿ.ಎಸ್‌ನ ಸಹಾಯದಿಂದ ಯಾವುದೇ ಅಡೆತಡೆಯಿಲ್ಲದೆ ಸರಾಗವಾಗಿ ಯಾವುದೇ ತೊಂದರೆಯಿಲ್ಲದೆ ತಲುಪಬಹುದು ಎಂಬುದನ್ನು ಹಾಗೂ ವೈಜ್ಞಾನಿಕ ವಾಣಿಜ್ಯ ಜಗತ್ತಿನ ದಿನನಿತ್ಯ ಜೀವನದ ವೈವಿಧ್ಯಮಯ ಕಾರ್ಯಗಳಲ್ಲಿ ಅದರ ಉಪಯೋಗವನ್ನು ಜಿ.ವಿ ನಿರ್ಮಲರವರು ಸ್ವತಃ ತಮಗಾದ ಅನುಭವದ ಮೂಲಕ 'ದಾರಿ ತೋರುವ ಸಂಗಾತಿ–ಜಿ.ಪಿ.ಎಸ್' ಲೇಖನದಲ್ಲಿ ತಿಳಿಸಿದ್ದಾರೆ.

ಎಕ್ಸ್–ರೇ ಎಂದಾಕ್ಷಣ ನಮ್ಮ ಮನಸ್ಸಿಗೆ ಬರುವುದು ಪ್ರಯೋಗಾಲಯ. ಆದರೇ 'ವಿಶ್ವದಲ್ಲಿ ಎಕ್ಸ್–ರೇ ಮೂಲಗಳು' ಲೇಖನದಲ್ಲಿ ಎಕ್ಸ್–ರೇ ಮೂಲಗಳು ಕೇವಲ ಪ್ರಯೋಗಾಲಯವಲ್ಲ. ಜೊತೆಗೆ ಸೂರ್ಯ, ಚಂದ್ರ, ನಕ್ಷತ್ರಗಳೂ ಸಹ ಮೂಲಗಳಾಗಿವೆ. ಬಹಳಷ್ಟು ಶೋಧನೆಗಳಿಂದ ತಿಳಿದು ಬಂದಿರುವಂತೆ ಸೂರ್ಯ, ಚಂದ್ರ, ನಕ್ಷತ್ರ ಹಾಗೂ ಗ್ಯಾಲಕ್ಸಿಗಳ ಹೊರ ಮೈಯಲ್ಲಿ ಎಕ್ಸ್–ಗಳು ಉರ್ಜಿತಗೊಳ್ಳುತ್ತವೆ. ಹೀಗಾಗಿ ಸೌರಮಂಡಲವು

ಒಂದು ಪ್ರಯೋಗಾಲಯವಾಗಿದೆ ಎಂಬುದನ್ನು ಗಾಯತ್ರಿ ಮೂರ್ತಿರವರು ಲೇಖನದಲ್ಲಿ ತಿಳಿಸಿದ್ದಾರೆ.

ಗೋವು ತಿನ್ನುವ ಎಲ್ಲಾ ಮೇವನ್ನು ಒಂದು ದೊಡ್ಡ-ದೊಡ್ಡ ಟ್ಯಾಂಕುಗಳಲ್ಲಿ ಸಂಗ್ರಹಿಸಿ, ಅಲ್ಲಿ ಉತ್ಪತ್ತಿಯಾಗುವ ಬ್ಯಾಕ್ಟೀರಿಯಾದಿಂದ, ಪರಿಸರ ಸ್ನೇಹಿ ವಿದ್ಯುತ್ ಉತ್ಪಾದಿಸುವ ಒಂದು ಯೋಜನೆಯನ್ನು ವಿವರಿಸುವುದರೊಂದಿಗೆ ವಿದ್ಯುತ್ತಿನ ಉತ್ಪತ್ತಿಗಾಗಿ ಮಾಡುತ್ತಿರುವ ವಿವಿಧ ಪ್ರಯೋಗಗಳಲ್ಲಿ ಒಂದಾದ ಚರಂಡಿಯ ನೀರು, ದನಗಳ ಸಗಣಿ, ಪ್ರಾಣಿಗಳ ಮಲ ಮೊದಲಾದವುಗಳಲ್ಲಿ ಶಕ್ತಿಯು ಅಡಗಿದ್ದು ಜೀವಂತ ವಿದ್ಯುತ್ ಕೋಶದಿಂದ ಎಲೆಕ್ಟ್ರಾನುಗಳನ್ನು ಉಪಯೋಗಿಸಿಕೊಂಡು ವಿದ್ಯುತ್ ಉತ್ಪಾದನೆ ಮಾಡಬಹುದೆಂದು ಲೇಖಕರಾದ ಸೋಮಶೇಖರ ಎಸ್. ರುಳಿರವರು 'ಜೈವಿಕ ಬ್ಯಾಟರಿ-ಬ್ಯಾಕ್ಟೀರಿಯಾ' ಲೇಖನದಲ್ಲಿ ತಿಳಿಸಿದ್ದಾರೆ.

'ವಿಜ್ಞಾನ ಸಾಹಿತ್ಯ ೨೦೧೨' ಎಂಬ ಅಖಿಲೇಶ್ ಚಿಪ್ಪಳಿರವರಿಂದ ಸಂಪಾದಿತ ಕೃತಿಯು ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿದಂತೆ ವಿಶಿಷ್ಟವಾದ ಲೇಖನಗಳಿಂದ ಕೂಡಿದೆ. ನಮ್ಮ ವಿಶ್ವದ ಸೃಷ್ಟಿಯು ಕಣಗಳಿಂದಾಗಿದ್ದು ವಿಜ್ಞಾನಿಗಳು ಈ ಕಣಗಳು ಪ್ರೋಟಾನ್ ಮತ್ತು ನ್ಯೂಟ್ರಾನ್‌ನಿಂದ ಆಗಿದೆ. ಇದಕ್ಕೆ ದೇವಕಣಗಳು ಎಂದು ಕರೆಯುತ್ತಾರೆ. ಆದರೆ ವಿಜ್ಞಾನ ಮತ್ತು ವಿಜ್ಞಾನಿಗಳು ದೇವರ ಇರುವಿಕೆಯನ್ನು ಒಪ್ಪುವುದಿಲ್ಲ. ಹೀಗಾಗಿ ಬಹಳಷ್ಟು ವಿಜ್ಞಾನಿಗಳು ಅದರಲ್ಲೂ ಎಸ್.ಎನ್ ಬೋಸ್ ಮತ್ತು ಪೀಟರ್ ಹಿಗ್ಸ್‌ರವರು ಪ್ರೋಟಾನ್ ಮತ್ತು ನ್ಯೂಟ್ರಾನ್‌ನಿಂದ ಕೂಡಿದ ವಿಶಿಷ್ಟ ಕಣಗಳ ಬಗ್ಗೆ ವಿಶೇಷವಾದ ಮಾಹಿತಿ ನೀಡಿದ ಕಾರಣ ಅದಕ್ಕೆ ಅವರ ಹೆಸರನ್ನೆ ಅಂದರೆ ಹಿಗ್ಸ್ ಬೋಸನ್ ಎಂದು ಹೆಸರಿಡಲಾಯಿತು ಎಂದು ದೇವಕಣದ ಇರುವಿಕೆಯನ್ನು ವಿಶೇಷವಾಗಿ ಲೇಖಕರಾದ ನಾಗೇಶ್ ಹೆಗಡೆರವರು 'ದೇವರನ್ನೇ ದೂರ ಸರಿಸಬಲ್ಲ ದೇವಕಣಗಳು' ಲೇಖನದಲ್ಲಿ ವಿವರಿಸಿರುವುದನ್ನು ಕಾಣಬಹುದು.

ಜಾಗತೀಕರಣದಿಂದಾಗಿ ಇಂದು ನಾವು ಎಲ್ಲಾ ಕ್ಷೇತ್ರಗಳಲ್ಲೂ ಎಲ್ಲಿಲ್ಲದ ಪ್ರಗತಿಯನ್ನು ಸಾಧಿಸಿದ್ದೇವೆ. ತಾಂತ್ರಿಕತೆಯು ಇದರಿಂದ ಹೊರತಾದುದಲ್ಲ. ಸಾಮಾನ್ಯ ಜನರ ಮೇಲೆ ಪ್ರಭಾವ ಬೀರುವ ಮೊಬೈಲ್ ಹಾಗೂ ಮೊಬೈಲ್ ಟವರ್‌ನ ಆವಿಷ್ಕಾರವು ತಾಂತ್ರಿಕತೆಯ ಅತ್ಯದ್ಭುತ ಹಾಗೂ ಮಾಯಾವಿ ಆವಿಷ್ಕಾರವಾಗಿದೆ. ಇಂದು ಇದರ ಪ್ರಭಾವ ಎಷ್ಟಿದೆ ಎಂದರೆ ಪ್ರತಿಯೊಂದು ಮನೆಯ ಮೇಲೆ ತನ್ನ ಸ್ಥಾನ ಪಡೆದು ಶೃಂಗಾರ ಸಾಧನವಾಗಿ ಅದಿಲ್ಲದೆ ಮನೆಯೇ ಇಲ್ಲ ಎನ್ನುವಷ್ಟರ ಮಟ್ಟಿಗಾಗಿದೆ. ಮೊಬೈಲ್ ಟವರಿನ ಅನುಕೂಲ ಎಷ್ಟಿದೆಯೋ ಅಷ್ಟೇ ಅನಾನುಕೂಲವಿದ್ದು ಆರೋಗ್ಯದ ಮೇಲೆ ಅದರಿಂದ ಹೊರಡುವ

ವಿಕಿರಣಗಳು ಬಹು ಅಪಾಯಕಾರವಾಗಿದ್ದು, ಕ್ಯಾನ್ಸರ್ ಮತ್ತಿತರ ಭಯಾನಕ ರೋಗಕ್ಕೆ ಕಾರಣವಾಗುತ್ತದೆ ಎಂಬು ಟಿ.ಆರ್ ಅನಂತರಾಮುರವರು 'ಮೊಬೈಲ್ ಟವರ್ ಎಷ್ಟಿದೆ ಪವರ್' ಎಂಬ ಲೇಖನದಲ್ಲಿ ತಿಳಿಸಿದ್ದಾರೆ.

ಸಮಾಜದ ಒಳಿತಿಗಾಗಿ ಆವಿಷ್ಕಾರ, ಸಂಶೋಧನೆಗಳು ಮಾಡಿದ ಬಹುತೇಕ ಮೇಧಾವಿಗಳು ದುರಂತದ ಬದುಕನ್ನು ಹಾಗೂ ದುರಂತದ ಸಾವನ್ನು ಕಂಡುದರ ಬಗ್ಗೆ ಹಾಗೂ ಸಾಧಕರ ಸಾವಿನ ನಂತರ ಅವರ ಪ್ರತಿಭೆಯ ಅನಾವರಣ ಗೌರವ ಸನ್ಮಾನವೆಂಬ ತೋರಿಕೆಯನ್ನು ಪ್ರದರ್ಶಿಸುವ ನೀತಿಯನ್ನು ಟಿ.ಜಿ ಶ್ರೀನಿಧಿರವರು ತಮ್ಮ ಲೇಖನವಾದ 'ಆಲನ್ ಟ್ಯೂರಿಂಗ್ ನೆನಪಿನಲ್ಲಿ' ತಿಳಿಸಿದ್ದಾರೆ. ಆಲನ್ ಟ್ಯೂರಿಂಗ್ ಒಬ್ಬ ಪ್ರತಿಭಾವಂತ ಮೇಧಾವಿ ಸಾಧಕ. ಎರಡನೇ ಮಹಾ ಯುದ್ಧದ ಸಂದರ್ಭದಲ್ಲಿ ಗುಪ್ತ ಹಾಗೂ ರಹಸ್ಯ ಸಂದೇಶಗಳನ್ನು ಅರ್ಥ ಮಾಡಿಕೊಂಡು ಓದುವ ಯಂತ್ರದಿಂದ ಹಿಡಿದು ಇಂದಿನ ಕಂಪ್ಯೂಟರ್‌ಗೆ ಆಲನ್ ಟ್ಯೂರಂಗ್‌ನ ಜ್ಞಾನವೇ ಮೂಲ. ಈತನು ಕಂಡುಹಿಡಿದ ಟ್ಯೂರಿಂಗ ಮಷಿನ್ ಪರಿಕಲ್ಪನೆಯೇ ಮೂಲ ಇಂದಿನ ಕಂಪ್ಯೂಟರಿಗೆ. ಇಂತಹ ಮೇಧಾವಿಗೆ ಸಮಾಜದಿಂದ ಹಾಗೂ ಸರ್ಕಾರದಿಂದ ಯಾವುದೇ ಮನ್ನಣೆ ಜೀವಂತವಿದ್ದಾಗ ದೊರಕದೆ ಇರುವುದು ದುರಂತ ಎಂಬುದನ್ನು ಲೇಖಕರು ವಿಷಾದದಿಂದ ಹೇಳಿದ್ದಾರೆ.

ಮನುಷ್ಯ ತನ್ನ ಏಳಿಗೆ, ಅಭಿವೃದ್ಧಿಗಾಗಿ ಎಷ್ಟು ಸ್ವಾರ್ಥಿಯಾಗುತ್ತಾನೆ ಎಂದರೆ ಆತನಿಗೆ ಇತರ ಜೀವ ಸಂಕುಲಗಳ ಬಗೆಗೆ ಅವುಗಳ ಕಷ್ಟ ನೋವಿನ ಬಗೆಗೆ ಪರಿವೆ ಇರುವುದಿಲ್ಲ. ತನ್ನ ಅಗತ್ಯತೆಗಾಗಿ ಅನುಕೂಲಕ್ಕಾಗಿ ಆವಿಷ್ಕಾರ ಸಂಶೋಧನೆಗಳನ್ನು ಮಾಡಿ ಅದರ ಪ್ರಯೋಜನ ಪಡೆಯುವಲ್ಲಿ ತನ್ನಿಂದ ಆದ ಪ್ರಮಾದವನ್ನು ಹಾಗೂ ತಾನು ಕಂಡು ಹಿಡಿದ ಸಾಧನದ ದೋಷವನ್ನು ಮರೆಮಾಚುತ್ತಾನೆ ಎಂಬುದನ್ನು ಲೇಖಕರಾದ ರೋಹಿತ ಚಕ್ರತೀರ್ಥರವರು ತಿಳಿಸಿದ್ದಾರೆ. ರಷ್ಯಾದ ವಿಜ್ಞಾನಿಗಳು ತಾವು ರೂಪಿಸಿದ ತಂತ್ರಜ್ಞಾನ(ರಾಕೆಟ್)ದ ಅರ್ಥಹೀನ ಔನ್ನತ್ಯಕ್ಕೆ ಸಂಕೇತವೆಂಬಂತೆ ಬೀದಿಯಲ್ಲಿ ತಿರುಗಾಡಿಕೊಂಡಿದ್ದ ಅಮಾಯಕ ನಾಯಿ(ಲೈಕಾ)ವನ್ನು ಭೂಮಿಯಿಂದ ಸಾವಿರಾರು ಮೈಲಿ ದೂರ ಸಾಗಿಸಿ, ಅದು ಪಡಬಾರದ ನೋವನ್ನು ಪಟ್ಟು ಕೊನೆಯುಸಿರೆಳೆಯುವಂತೆ ಮಾಡಿ ನಯ ನಾಜೂಕಿನ ಮಾತಿನಿಂದ ಮೇಲಾಧಿಕಾರಿ ಹಾಗೂ ರಷ್ಯಾದ ಅಧ್ಯಕ್ಷ ಜಾರಿಕೊಂಡದ್ದನ್ನು ತಿಳಿಸಿರುವುದನ್ನು ಕಾಣಬಹುದು. ಸಮಾಜದ ಸುಧಾರಣೆಯ ಹೊಣೆಗಾರಿಕೆಯನ್ನು ಹೊಂದಿರುವ ವಿಜ್ಞಾನವು ತಂತ್ರಜ್ಞಾನಾಧಾರಿತ ಸುಧಾರಿತ ಮಾಹಿತಿಯೊಂದಿಗೆ ಕೂಡಿದೆ. ಆದರೆ, ಕೆಲವು ವೇಳೆ ತನ್ನ ಜವಾಬ್ದಾರಿಯನ್ನು ಸರಿಯಾಗಿ ನಿರ್ವಹಿಸಲಾಗದೆ ದುರಂತಕ್ಕೆ ಕಾರಣವಾಗುತ್ತದೆ ಎಂಬುದನ್ನು 'ಶ್ವಾನ ಸ್ವರ್ಗಾರೋಹಣ' ಲೇಖನವು ಉಲ್ಲೇಖಿಸಿದೆ.

ವಿಜ್ಞಾನ ಸಾಹಿತ್ಯದ ಪ್ರಮುಖ ಹಾಗೂ ಜಾಗತೀಕರಣದಲ್ಲಿ ಪ್ರಮುಖ ಪಾತ್ರ ವಹಿಸುವ ಮತ್ತು ನಿರಂತರ ಆವಿಷ್ಕಾರ ಸಂಶೋಧನೆಗೆ ಒಳಪಡುವ ಸಾಹಿತ್ಯ ವಿಜ್ಞಾನವೇ ಮಾಹಿತಿ ತಂತ್ರಜ್ಞಾನ ಸಾಹಿತ್ಯವಾಗಿದೆ. ಅದರಂತೆ ಮಾಹಿತಿ ವಿಜ್ಞಾನಕ್ಕೆ ಸಂಬಂಧಿಸಿದಂತೆ ಸುಮಾರು ೩೦ ಲೇಖನಗಳ ಅಧ್ಯಯನವನ್ನು ಮಾಡಲಾಗಿದ್ದು, ವಿಜ್ಞಾನವು ಪ್ರಯೋಗ ಅವಿಷ್ಕಾರಗಳಿಂದ ಕೂಡಿದ್ದು, ಸಮಾಜಕ್ಕೆ ಅಗತ್ಯವಾದ ವೈಜ್ಞಾನಿಕ ಮಾಹಿತಿಯನ್ನು ತಿಳಿಸುವ ಸಾಮಾಜಿಕ ಜವಾಬ್ದಾರಿಯನ್ನು ಹೊಂದಿರುವುದನ್ನು ಗುರ್ತಿಸಲಾಯಿತು.

ಮೇಲೆ ವಿವರಣೆಗೆ ಒಳಪಟ್ಟ ಎಲ್ಲಾ ವೈಜ್ಞಾನಿಕ ಲೇಖನಗಳನ್ನು ಕಠಿಣತೆಯಿಂದ ದೂರಗೊಳಿಸಿ ರಸಯುಕ್ತವಾಗಿ ಮೆತ್ತಗಾಗಿಸಿ ಓದುಗರ ಆಸ್ವಾದನೆಗೆ ಯೋಗ್ಯಗೊಳಿಸಿದ್ದಾರೆ. ಅಲ್ಲದೆ ಎಲ್ಲಾ ಲೇಖಕರು ವಿಷಯದ ಮಾಹಿತಿಗೆ ಬಳಸುವ ಮೂಲ ವಸ್ತುವಾಗಿ ಆಯ್ದುಕೊಂಡ ವಿಷಯದ ಬಗ್ಗೆ ಆಳವಾದ ವಿಷಯ ಗ್ರಹಣೆ, ಆಕರ್ಷಕ ಅಭಿವ್ಯಕ್ತಿ ಸ್ವರೂಪ ಮತ್ತು ಶೈಲಿ ಓದುಗರನ್ನು ತಪ್ಪುದಾರಿಗೆ ಎಳೆಯದೆ ಅಗತ್ಯ ಅವಶ್ಯಕ ಮಾಹಿತಿಯನ್ನು ತಿಳಿಸುವಂತೆ ಎಲ್ಲಾ ಲೇಖನಗಳು ಮೂಡಿಬಂದಿರುವುದನ್ನು ಗಮನಿಸಲಾಯಿತು.

ಕೇವಲ ಓದಿ ಹಾಗೆ ಬಿಡುವ ಲೇಖನಗಳಿಗಿಂತ ಜನಸಾಮಾನ್ಯರು ತಮ್ಮ ದಿನನಿತ್ಯದ ಬದುಕಿನಲ್ಲಿ ಉಪಯೋಗವಾಗಬಲ್ಲ ಹಾಗೂ ಸರಿ ತಪ್ಪು ಒಪ್ಪುಗಳ ವಿಷಯ ವಿಚಾರವನ್ನು ತಾಳೆ ಹಾಕುವಂತಹ ಬರಹಗಳ ಮೂಲಕ ಸರಳ ಸುಲಭವಾಗಿ ಅಭಿವ್ಯಕ್ತಿಸಿರುವುದು ಇಡೀ ಕನ್ನಡ ಸಾಹಿತ್ಯದಲ್ಲಿನ ವಿಜ್ಞಾನ ಸಾಹಿತ್ಯದ ವಿಶೇಷತೆಯಾಗಿರುವುದು ಹಾಗೂ ಪರಿಸರ, ವೈದ್ಯಕೀಯ, ಖಗೋಳ, ಸಸ್ಯ-ಪ್ರಾಣಿ, ಮಾಹಿತಿ ತಂತ್ರಜ್ಞಾನದ ವಿಚಾರಗಳು ಜನಜೀವನಕ್ಕೆ ಸಹಕಾರಿಯಾದುದನ್ನು ಕಾಣಬಹುದು.

ಆದಿ ಮಾನವನಾಗಿದ್ದ ಮಾನವನಲ್ಲಿ ವೈಜ್ಞಾನಿಕ ಮನೋಭಾವ ಹುಟ್ಟಿದ್ದು ಯಾವಾಗ, ಯಾವ ಸಂದರ್ಭದಲ್ಲಿ ಎಂದು ಹೇಳುವುದು ದೃಢೀಕರಿಸುವುದು ಬಹಳ ಕಷ್ಟವಾದರು, ಬೆಂಕಿಯ ಆವಿಷ್ಕಾರದೊಂದಿಗೆ ವೈಜ್ಞಾನಿಕ ಮನೋಭಾವದ ಮೊದಲ ಕಿಡಿ ಹುಟ್ಟಿತು ಎಂದು ಹಲವಾರು ವಿದ್ವಾಂಸರು ಹೇಳುವರು. 'ಅಗತ್ಯತೆಯೆ ಆವಿಷ್ಕಾರದ ಜನನಿ' ಎಂಬುದು ಜನಜನಿತವಾದ ವಿಷಯವಾಗಿದೆ. ಮಾನವನು ತನ್ನ ಪ್ರತಿ ನಿತ್ಯದ ಎಲ್ಲಾ ಅಗತ್ಯತೆಗಳಿಗೆ ಬಹಳ ಹಿಂದಿನಿಂದಲೂ ಪ್ರಕೃತಿಯಲ್ಲಿದ್ದ ಎಲ್ಲಾ ವಸ್ತುಗಳನ್ನು ಬಳಸಿಕೊಳ್ಳುತ್ತಾ ಬಂದಿದ್ದಾನೆ. ಭವಿಷ್ಯದ ಪರಿಜ್ಞಾನವೇ ಇಲ್ಲದಂತೆ ಮನುಷ್ಯನು ತನ್ನ ಸ್ವಾರ್ಥಕ್ಕಾಗಿ ಉಚಿತವಾಗಿ ಸಿಗುತ್ತಿರುವ ಪ್ರಕೃತಿಯ ಎಲ್ಲಾ ಪರಿಕರಗಳನ್ನು ಅಗತ್ಯಕ್ಕಿಂತ ಹೆಚ್ಚು ಬಳಸುತ್ತಿರುವುದು ಮುಂದೆ ಆ ವಸ್ತುಗಳ ಬರಿದಾಗುವಿಕೆಗೆ ಕಾರಣವಾಗುತ್ತಿದ್ದಾನೆ. ಹೀಗೆ ನಮ್ಮ ಮುಂದಿನ ಹಾಗೂ ಭವಿಷ್ಯದಲ್ಲಿ ಎದುರಾಗುವ ಸಮಸ್ಯೆಗಳನ್ನು ಅರಿತು ಅದರತ್ತ ಮುಖ ಮಾಡುವುದು

ಇಂದಿನ ಅಗತ್ಯ ಅನಿವಾರ್ಯವಾಗಿದೆ. ಈ ಹಿನ್ನೆಲೆಯಲ್ಲಿ ವಿಜ್ಞಾನ ಬರಹಗಾರರು, ಸಾಹಿತಿಗಳು ತಮ್ಮ ಬರವಣಿಗೆಯ ಮೂಲಕ ಪ್ರಕೃತಿ, ಪರಿಸರ, ಆರೋಗ್ಯ, ಮಾಹಿತಿ ತಂತ್ರಜ್ಞಾನದ ಬಗೆಗೆ ಅರಿವು ಮೂಡಿಸುವುದು ಅಗತ್ಯವಾಗಿದ್ದು, ಇದರತ್ತ ಬಹಳಷ್ಟು ಕನ್ನಡ ಸಾಹಿತಿಗಳು ಕಾರ್ಯಪ್ರವೃತ್ತರಾಗಿರುವುದನ್ನು ಕಾಣಬಹುದು ಹಾಗೂ ಜ್ಞಾನ ವಿಚಾರ ಕೋಶದಂತಿರುವ ಕನ್ನಡ ಸಾಹಿತ್ಯದಲ್ಲಿನ ವಿಜ್ಞಾನ ಸಾಹಿತ್ಯದ ಕುರಿತು ಬಹಳಷ್ಟು ಕೃತಿ, ಲೇಖನಗಳ ರಚನೆಯಾಗಿರುವುದನ್ನು ಇಲ್ಲಿ ಗಮನಿಸುವುದರೊಂದಿಗೆ 'ಕನ್ನಡದಲ್ಲಿ ವಿಜ್ಞಾನ ಬರಹಗಳ ವಸ್ತು ವೈವಿಧ್ಯತೆಯನ್ನು' ಕಂಡುಕೊಳ್ಳಲಾಯಿತು.

ಕೊನೆ ಟಿಪ್ಪಣಿಗಳು

೧. ಅನಂತರಾಮು ಮತ್ತು ಎಚ್.ಆರ್ ರಾಮಕೃಷ್ಣರಾವ್(ಸಂಪಾದಕರು) ಕನ್ನಡದಲ್ಲಿ ವಿಜ್ಞಾನ ಸಂವಹನೆ. ಪುಟ.ಸಂಖ್ಯೆ – ೨೨

೨. ಅದೇ ಪುಟ ಸಂಖ್ಯೆ – ೮೩

೩. ನಾರಾಯಣ ರಾವ್ ಜಿ.ಟಿ. 'ಭವಿಷ್ಯ ವಿಜ್ಞಾನ'., ಪುಟ ಸಂಖ್ಯೆ – 'ಮುನಿದು ಪೊಡವಿಯ ನುಂಗುವಡೆ' ಎಂಬ ಭಾಗ ಕೊನೆ ಪ್ಯಾರ. (ಅಂತರ್ಜಾಲ–ಅತ್ರಿ ಬುಕ್ ಸೆಂಟರ್.ಕಾಂ)

೪. ವಿಕಿಪೀಡಿಯಾ.ಕಾಂ – ೮.೯.೨೦೧೭

೫. ಅದೇ ೧೫.೯.೨೦೧೭

೬. ನಾರಾಯಣ ರಾವ್ ಜಿ.ಟಿ. 'ಭವಿಷ್ಯ ವಿಜ್ಞಾನ'., ಪುಟ ಸಂಖ್ಯೆ – 'ಮುನಿದು ಪೊಡವಿಯ ನುಂಗುವಡೆ' ಎಂಬ ಭಾಗ. (ಅಂತರ್ಜಾಲ–ಅತ್ರಿ ಬುಕ್ ಸೆಂಟರ್.ಕಾಂ)

೭. ಅನಂತರಾಮು. ಟಿ.ಆರ್(ಸಂಪಾದಕರು) ವಿಜ್ಞಾನ ತಂತ್ರಜ್ಞಾನ. ಪುಟ ಸಂಖ್ಯೆ – ೩೦೬

೮. ವಸುಂಧರ ಭೂಪತಿ(ಸಂಪಾದಕರು) ವಿಜ್ಞಾನ ಸಾಹಿತ್ಯ ೨೦೧೦. ಪುಟ.ಸಂಖ್ಯೆ – ೧೦೧ ಮತ್ತು ೧೦೨

ಅಧ್ಯಾಯ–ಆರು

ವಿಜ್ಞಾನ ಬರಹಗಳಲ್ಲಿ ಅಭಿವ್ಯಕ್ತಿಯ ಸವಾಲುಗಳು

೬.೧. ಭಾಷೆ ಮತ್ತು ನಿರೂಪಣೆಯ ಸವಾಲುಗಳು ಮತ್ತು ಸಾಧ್ಯತೆಗಳು

೬.೨. ಭಾಷಾಂತರ/ ಅನುವಾದದ ಸಮಸ್ಯೆಗಳು


ಅಧ್ಯಾಯ – ಆರು

ವಿಜ್ಞಾನ ಸಾಹಿತ್ಯದ ಅಭಿವ್ಯಕ್ತಿಯ ಸವಾಲುಗಳು

ವಿಜ್ಞಾನ ಸಾಹಿತ್ಯದಲ್ಲಿ ಕಥೆ, ಕಾದಂಬರಿಗಳ ರೂಪದಲ್ಲಿರುವ ಸೃಜನಶೀಲ ಸಾಹಿತ್ಯ ಮತ್ತು ವಿಚಾರಾತ್ಮಕವಾಗಿ ಲೇಖನಗಳ ರೂಪದಲ್ಲಿರುವ ಸೃಜನೇತರ ಸಾಹಿತ್ಯವೆಂಬ ಎರಡು ಬಗೆಗಳಿರುವುದನ್ನು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಲಾಗಿದೆ. ಈ ಎರಡೂ ಪ್ರಕಾರಗಳ ಬರವಣಿಗೆಯಲ್ಲಿ ಅಡಕವಾಗಿರುವ ಭಾಷಿಕ ರಚನೆ ಯಾವ ಬಗೆಯದು? ಎರಡೂ ಕಡೆ ಕನ್ನಡವು ಒಂದೇ ರೀತಿಯಲ್ಲಿ ಬಳಕೆಯಾಗಿದೆಯೇ? ಅಥವಾ ಏನಾದರೂ ವ್ಯತ್ಯಾಸಗಳಿದ್ದರೇ ಅವು ಯಾವುವು? ಏಕೆ ಮತ್ತು ಯಾವ ಕಾರಣಗಳಿಂದ ಈ ವ್ಯತ್ಯಾಸಗಳು ಆಗುತ್ತಿವೆಯೇ? ಎಂಬ ಇತ್ಯಾದಿ ವಿಚಾರಗಳನ್ನು ಈ ಅಧ್ಯಾಯದಲ್ಲಿ ಸೂಕ್ತ ಉದಾಹರಣೆಗಳೊಂದಿಗೆ ಚರ್ಚಿಸಲಾಗಿದೆ.

ಅಭಿವ್ಯಕ್ತಿಯು ಬರಹದ ರೂಪ ಪಡೆದಾಗ ಒಂದು ಕ್ಷೇತ್ರದಲ್ಲಿ ಮೂಡಿಬಂದಂತೆ ಮತ್ತೊಂದು ಕ್ಷೇತ್ರದಲ್ಲಿ ಮೂಡಿಬರುವುದಿಲ್ಲ. ಅಂದರೆ ಸಾಮಾನ್ಯ ಸಾಹಿತ್ಯದ ಬರಹಗಳ ಅಭಿವ್ಯಕ್ತಿ ಸ್ವರೂಪವೇ ಬೇರೆ ವೈಜ್ಞಾನಿಕ ಬರಹಗಳ ಅಭಿವ್ಯಕ್ತಿ ಸ್ವರೂಪವೇ ಬೇರೆಯಾಗಿದ್ದು, ವಿಜ್ಞಾನ ಸಾಹಿತ್ಯವು ನೇರ ದಿಟ್ಟ ಸತ್ಯ ಸಂಗತಿಗಳಿಂದ ಕೂಡಿದ್ದು, ವೈಜ್ಞಾನಿಕ ವಿಷಯಗಳನ್ನು ಬರಹದಲ್ಲಿ ಅಭಿವ್ಯಕ್ತಿಗೊಳಿಸಲಾಗಿರುತ್ತದೆ.

ವಿಜ್ಞಾನದ ವಿಷಯ ಪರಿಕಲ್ಪನೆಗಳನ್ನು ಸುಸಂಬದ್ಧ ವಾಕ್ಯಗಳಲ್ಲಿ ಭಾವಕ್ಕನುಗುಣವಾದ ಶೈಲಿಯಲ್ಲಿ, ಆತ್ಮವಿಶ್ವಾಸದೊಂದಿಗೆ ವ್ಯಕ್ತಪಡಿಸುವಲ್ಲಿ ಅಭಿವ್ಯಕ್ತಿಯ ಪಾತ್ರ ಮಹತ್ವದ್ದಾಗಿದ್ದು, ಊಹೆ, ಕುತೂಹಲ, ಮೂಲತತ್ವ, ಸ್ಪಷ್ಟ ನಿಯಮ, ವಿವೇಚನೆ ನಿಖರತೆ, ತಾರ್ಕಿಕತೆ, ವಿಷಯ ವಿಸ್ತಾರ, ಉದ್ದೇಶಪೂರತೆ, ಸುಸಂಬದ್ಧತೆ, ಸಾರ್ವತ್ರಿಕ ಸಿದ್ಧಾಂತ, ಸಮತೋಲಿತ ವಿಷಯ ಜೋಡಣೆ ಮೊದಲಾದ ಪ್ರಮುಖ ಅಂಶದಿಂದ ಕೂಡಿರುವುದನ್ನು ಕಾಣಬಹುದು. ವಿಜ್ಞಾನ ವಿಷಯಗಳ ಭಾಷಾಭಿವ್ಯಕ್ತಿಯಲ್ಲಿ ಕಂಡುಕೊಂಡ ಪ್ರಮುಖ ಅಂಶಗಳನ್ನು ಈ ಕೆಳಗಿನ ನಕ್ಷೆಯಲ್ಲಿ ಚಿತ್ರಿಸಲಾಗಿದೆ.



ಸರಳ ಸುಲಭ ಭಾಷೆ ಮತ್ತು ನಿರೂಪಣೆ ಹಾಗೂ ಸೃಜನಾತ್ಮಕ ಬರವಣಿಗೆಯ ಕಾರ್ಯದೊಂದಿಗೆ ಮುಕ್ತ ಮನಸ್ಸಿನಿಂದ ನಿಖರವಾದ ಜ್ಞಾನವನ್ನು ಪಡೆದು, ಜನ ಸಾಮಾನ್ಯರಿಗೆ ಅವರದೇ ಅರ್ಥೈಸಿಕೊಳ್ಳುವ ಧಾಟಿಯಲ್ಲಿ ವಿಜ್ಞಾನ ವಿಷಯ ವಿಚಾರಗಳ ವಿನಿಮಯವನ್ನು ವಿಜ್ಞಾನ ಲೇಖಕರು ಮಾಡುತ್ತಿರುವುದನ್ನು ಕಾಣಬಹುದು. ಈ ನಿಟ್ಟಿನಲ್ಲಿ ಬಿ.ಜಿ.ಎಲ್.ಸ್ವಾಮಿ, ಜಿ.ಟಿ.ನಾರಾಯಣರಾವ್, ಪೂರ್ಣಚಂದ್ರ ತೇಜಸ್ವಿ, ಸಿ.ಆರ್. ಚಂದ್ರಶೇಖರ್, ಎಂ.ಕೆ ರಾಮಸ್ವಾಮಿ, ಪಾ. ವೆಂ ಆಚಾರ್ಯ, ನಾಗೇಶ್ ಹೆಗಡೆ, ಹಾಲ್ದೊಡ್ಡೇರಿ, ಅಡ್ಯನಡ್ಕ ಕೃಷ್ಣಭಟ್ಟರು, ಶ್ರೀನಿಧಿ ಮೊದಲಾದವರು ಜನಜೀವನಕ್ಕೆ ಸಂಬಂಧಿಸಿದ ಬಹಳಷ್ಟು ವಿಚಾರಗಳನ್ನು ತಮ್ಮ ಕೃತಿಗಳಲ್ಲಿ ವ್ಯಕ್ತ ಪಡಿಸಿದ್ದಾರೆ. ಇವರುಗಳ ಲೇಖನವನ್ನು ಸಾಮಾನ್ಯ ಪ್ರಾಥಮಿಕ ವಿದ್ಯಾಭ್ಯಾಸ ಪಡೆದವರಿಂದ ಹಿಡಿದು ಉನ್ನತ ವಿದ್ಯಾಭ್ಯಾಸ ಪಡೆದವರವರೆಗೆ ಯಾರೇ ಓದಿದರು ಸುಲಭವಾಗಿ ಅರ್ಥವಾಗುವ ಸರಳ ಆಕರ್ಷಿತ ಶೈಲಿಯಲ್ಲಿ ರಚಿಸಿರುವುದನ್ನು ಗಮನಿಸಬಹುದು.

ವಿಜ್ಞಾನ ಸಾಹಿತಿ ಜಿ.ಟಿ.ಎನ್ ಎಂದೇ ಪ್ರಖ್ಯಾತರಾದ ಜಿ.ಟಿ.ನಾರಾಯಣರಾಯರ ಭಾಷೆ ಗಂಭೀರ ಹಾಗೂ ಅಷ್ಟೇ ನಿಖರ. ವಿಜ್ಞಾನ ಸಾಹಿತ್ಯಕ್ಕೆ ಅದರದೇ ಭಾಷೆ ಹಾಗೂ ಶೈಲಿ ಇದೆ ಎಂದು ನಂಬಿದ್ದವರು. ಹೀಗಾಗಿಯೇ ಅವರ ಕೃತಿಗಳು ವಿಜ್ಞಾನ ಸಾಹಿತ್ಯಾಸಕ್ತರಿಗೆ ಕೈದೀವಿಗೆಯಾಗಿರುವುದನ್ನು ಗಮನಿಸಲಾಯಿತು. ಅಲ್ಲದೇ ಜಿ.ಟಿ.ನಾರಾಯಣರಾವ್‌ರವರ

ಕೃತಿಗಳಲ್ಲಿ ಸ್ಪಷ್ಟ ಪರಿಕಲ್ಪನೆ, ಆಕರ್ಷಕ ಶೈಲಿ ಹಾಗೂ ಶುದ್ಧ ಭಾಷೆಯಿಂದ ಕೂಡಿರುವುದನ್ನು ಕಾಣಬಹುದು. 'ಭವಿಷ್ಯವಾಚನ'ದಲ್ಲಿ "ಮುಂದೆ ಸಂಭವಿಸಬಹುದಾದುದ್ದನ್ನು ಇಂದು ಕಣಿನುಡಿಯುವ ಪ್ರಯತ್ನವೇ ಭವಿಷ್ಯವಾಚನ....ನಿನ್ನೆಗಳು ಸಂದಿವೆ, ಅವನ್ನು ಹಿಂದೆ ಪಡೆಯುವಂತಿಲ್ಲ. ನಾಳೆಗಳು ಬರಲಿವೆ. ಅವನ್ನು ತರುವಂತಿಲ್ಲ"[೧] ಎಂದು ಮುಂದುವರಿದು, "ಇರುವುದೆಲ್ಲವ ಬಿಟ್ಟು ಇರದುದರೆಡೆಗೆ ತುಡಿವುದೆ ಜೀವನ?"[೨] ಎಂದು ಭವಿಷ್ಯದ ಪರಿಕಲ್ಪನೆಯನ್ನು ತಿಳಿಸುವುದರೊಂದಿಗೆ ಪ್ರಕೃತಿಗೆ ವಿರುದ್ಧವಾಗಿ ಭವಿಷ್ಯದ ಬಗೆಗೆ ತಿಳಿಯುವುದು ಸರಿಯಲ್ಲ ಎಂಬ ತಿಳುವಳಿಕೆಯನ್ನೂ ನೀಡುವ ಮೂಲಕ ವಿಷಯವನ್ನು ಲೇಖಕರು ವೈಜ್ಞಾನಿಕವಾಗಿ ಗ್ರಹಿಸುವುದರೊಂದಿಗೆ ಸುಲಭ ಅರ್ಥವಾಗುವ ರೀತಿಯಲ್ಲಿ ಅಭಿವ್ಯಕ್ತಿಸಿರುವುದು ಅವರು ಬಳಸಿದ ಭಾಷೆ ಮತ್ತು ನಿರೂಪಣಾ ವಿಧಾನದಿಂದಾಗಿದೆ.

ವಿಜ್ಞಾನ ಮತ್ತು ಸಾಹಿತ್ಯವನ್ನು ಒಂದರೊಳಗೊಂದು ಮೇಳೈಸಿರುವುದನ್ನು ಜಿ.ಟಿ.ನಾರಾಯಣರಾಯರ ಪ್ರತಿಯೊಂದು ಕೃತಿಯಲ್ಲೂ ಕಾಣಬಹುದು. ಸಾಹಿತ್ಯ ಕುರಿತಂತೆ ಸೃಜನಶೀಲ ಪ್ರತಿಭೆಯ ಮೂಲಕ ಜನಪ್ರಿಯ ಶೈಲಿಯಲ್ಲಿ ಜಟಿಲವಾದ ವಿಜ್ಞಾನದ ಪರಿಕಲ್ಪನೆಗಳನ್ನು ನಿರೂಪಿಸುವಲ್ಲಿ ಜಿ.ಟಿ.ನಾರಾಯಣರಾವ್ ರವರ ಭಾಷೆ ಮತ್ತು ನಿರೂಪಣೆಯು ಗೋಚರಿಸುವುದು. ಅವರ 'ಭವಿಷ್ಯ ವಿಜ್ಞಾನ' ಎಂಬ ಕೃತಿಯನ್ನು ಅವಲೋಕಿಸಿದರೆ ಅದರಲ್ಲಿ "ನಾಗರೀಕತೆಯು ಬೆಳೆದುಬಂದ ರೀತಿಯನ್ನು ವೈಜ್ಞಾನಿಕವಾಗಿ ವಿಶ್ಲೇಷಿಸಿ ವಿಮರ್ಶಿಸಿ, ಪ್ರಸ್ತುತ ದಿನಗಳನ್ನು ಪರಿಶೀಲಿಸಿ, ಭವಿಷ್ಯದ ದಿನಗಳಲ್ಲಿನ ಸ್ಥಿತಿಗತಿಯನ್ನು ಊಹೆ ಮಾಡಿರುವಲ್ಲಿ ವಿಷಯದ ಮಾಹಿತಿಯ ಜೊತೆಗೆ ಮುನ್ನೆಚ್ಚರಿಕೆ ನೀಡುವ"[೩] ಉತ್ತಮ ನಿರೂಪಣೆಯಿಂದ ಕೂಡಿರುವುದನ್ನು ಗಮನಿಸಲಾಯಿತು.

ವಿಜ್ಞಾನ ಕಥಾ ಸಾಹಿತಿಗಳಾಗಿ ಜನಪ್ರಿಯರಾದ ಬಿ.ಜಿ.ಎಲ್ ಸ್ವಾಮಿರವರೂ ಕೃತಿ ರಚನೆಯಲ್ಲಿ ಅವರು ಬಳಸಿದ ಭಾಷೆ ಹಾಗೂ ಕಥನಾ ನಿರೂಪಣೆಯಿಂದ ಕೂಡಿದ ಕೃತಿಗಳಿಗೆ ಪ್ರಸಿದ್ಧರಾದವರು. ಇವರ 'ಹಸಿರು ಹೊನ್ನು' ಕೃತಿಯು ವಿಜ್ಞಾನ ಕೃತಿಯಾಗಿದ್ದು ಒಂದು ಮಾದರಿ ಗ್ರಂಥವಾಗಿದೆ. ತನ್ನ ಲವಲವಿಕೆಯ ಸೃಜನಶೀಲ ಬರಹದ ಗುಣದಿಂದಾಗಿಯೇ ಈ ಕೃತಿಯು ಕೇಂದ್ರಸಾಹಿತ್ಯ ಅಕಾಡೆಮಿಯ ಪ್ರಶಸ್ತಿಯನ್ನು ಪಡೆಯಿತು. ಈ ಕೃತಿಯಲ್ಲಿ ಲೇಖಕರು ವಿಜ್ಞಾನದ ಅದರಲ್ಲೂ ಸಸ್ಯವಿಜ್ಞಾನದ ಸಾರವನ್ನು ಹಾಸ್ಯಮಯವಾಗಿ ಪ್ರಬಂಧಚಿತ್ರಗಳಲ್ಲಿ ಅಭಿವ್ಯಕ್ತಿಸಲು ಪ್ರಯತ್ನಿಸಿದ್ದಾರೆ. ವಿಜ್ಞಾನದ ತಿಳುವಳಿಕೆಯನ್ನು ಕೆಲವು ಘಟನೆ ಮತ್ತು ಅನುಭವಗಳ ಮೂಲಕ ಓದುಗರ ಮನಮುಟ್ಟುವಂತೆ ವಿವರಿಸಲು ಲೇಖಕರು ಯತ್ನಿಸಿದ್ದಾರೆ. ಸಾಹಿತ್ಯದ ಕ್ಲಿಷ್ಟವಾದ ವೈಜ್ಞಾನಿಕ ಮಾಹಿತಿಯನ್ನು ನಕ್ಕು ನಲಿಸುತ್ತಾ, ಜನಸಾಮಾನ್ಯರಿಗೆ ಮುಟ್ಟಿಸುವ ಕಾರ್ಯ ಮಾಡಿದ್ದಾರೆ.

ಅಲ್ಲದೇ ಪದಗಳ ಮೇಲಿನ ಹಿಡಿತದೊಂದಿಗಿನ ಮಧುರಲಾಸ್ಯ ಹಾಗೂ ಹಾಸ್ಯ, ವಿಷಯ ಪ್ರಾವೀಣ್ಯತೆ ಮೊದಲಾದ ವಿಶೇಷತೆಯಿಂದ ಕೂಡಿದ ವಿವರಣೆಯು ಮಾದರಿ ಕಥನಾ ನಿರೂಪಣೆಗೆ ಪೂರಕವಾಗಿದೆ.

ಕಥನದ ಗುಣ, ಭಾವನೆಯನ್ನು ಭಾಷೆಯಲ್ಲಿ ಹಿಡಿದಿಡುವ ಗುಣ, ಸರಿಹೊಂದುವ ವರ್ಣನೆಗಳು ಮೊದಲಾದವುಗಳ ಜೊತೆಯಲ್ಲಿಯೇ ಹಲವು ಭಾಷೆಯ ಸಂಗತಿಗಳ ಮೂಲಕ ಗಮನಸೆಳೆಯುವುದನ್ನು ಇವರ ಕೃತಿಯಲ್ಲಿ ಕಾಣಬಹುದು. ಇದಕ್ಕೆ ಸಂಬಂಧಿಸಿದಂತೆ ಉದಾರಣೆಯನ್ನು ಇಲ್ಲಿ ಗಮನಿಸಬಹುದು. "ದೊಡ್ಡ ಮರಗಳ ಮುಖ್ಯ ರಂಬೆಗಳ ಮೇಲೆಲ್ಲ ಜರಿ ಗಿಡದ ಜಾತಿಯೊಂದು ಹೇರಳವಾಗಿ ಬೆಳೆದು ತೊಗಟೆಯನ್ನು ಮುಚ್ಚಿರುತ್ತದೆ. ಈ ಜರಿ ಜಾತ ಅಪರೂಪವಲ್ಲದಿದ್ದರೂ ಸ್ವಲ್ಪ ವಿಚಿತ್ರವಾದದ್ದು. ಇದಕ್ಕೆ ಎರಡು ಬಗೆಯ ಎಲೆಗಳಿವೆ. ಒಂದನೆಯದು ಕಾಂಡವನ್ನು ಅಪ್ಪಿಕೊಂಡಂತಿರುತ್ತದೆ. ಹೃದಯಾಕಾರ, ಅಂಚು ಸ್ವಲ್ಪ ಮೂಲೆ, ತೊಟ್ಟಿಲ್ಲ; ಎರಡನೆಯದು ಗಾತ್ರದಲ್ಲಿ ದೊಡ್ಡದು, ಬೆರಳುಗಳಂತೆ ಸೀಳಾದ ಅಂಚು, ಉದ್ದನೆಯ ತೊಟ್ಟುಗೊಂಡದ್ದು. ಎರಡು ಬಗೆಯ ಎಲೆಗಳೂ ಆಹಾರೋತ್ಪನ್ನ ಕಾರ್ಯದಲ್ಲಿ ಪಾಲುಗೊಳ್ಳುವುವಾದರೂ ಮೊದಲನೆ ಬಗೆಯ ಎಲೆಗಳು ರೆಂಬೆಯನ್ನು ಕಚ್ಚಿ ಜರಿಗಿಡ ಸ್ಥಾನಪಲ್ಲಟಗೊಳ್ಳದಂತೆ ಸ್ಥಿರವಾಗಿ ನಿಂತು ಬೆಳೆಯುವುದಕ್ಕೆ ಆಸರೆ ಕೊಡುತ್ತವೆ; ಎರಡನೆಯ ಬಗೆ ಮುಖ್ಯವಾಗಿ ಆಹಾರೋತ್ಪನ್ನ ಕಾರ್ಯವನ್ನೂ ಜನಕಜೀವ ಕಣ(ಸ್ಪೋರು)ಗಳನ್ನು ತಳೆಯುವ ಕಾರ್ಯವನ್ನೂ ನಿರ್ವಹಿಸುತ್ತವೆ"[೫]. ಎಂದು ಲೇಖಕರು ಡ್ರೈನೇರಿಯ ಮರದ ವಿವರಣೆಯನ್ನು ನೀಡಿರುವುದು ಗಮನಿಸಬಹುದು ಭಾಷಾ ಅಭಿವ್ಯಕ್ತಿಯ ಸ್ವರೂಪವಾಗಿದೆ.

ವಿಷಯ ಸ್ಪಷ್ಟತೆ, ಸಮೃದ್ಧ ಹಾಗೂ ಪೂರಕ ವಿಷಯ ಮಾಹಿತಿಯ ಕಲಾತ್ಮಕ ಅಭಿವ್ಯಕ್ತಿ ಪದಗಳ ಮೇಲಿನ ಹಿಡಿತದೊಂದಿಗಿನ ಸೃಜನಾತ್ಮಕ ಸ್ವರೂಪದಿಂದ ಕೂಡಿದ ಹಾಗೂ ಜನಸಾಮಾನ್ಯರೂ ಓದಿ ಅರ್ಥ ಮಾಡಿಕೊಳ್ಳುವ ರೀತಿಯಲ್ಲಿ ರಚನೆ ಮಾಡಿದ ಲೇಖಕರೆಂದರೆ ಪೂರ್ಣಚಂದ್ರ ತೇಜಸ್ವಿ ಮತ್ತು ವೈಜ್ಞಾನಿಕ ಮಾಹಿತಿಯೊಂದಿಗೆ ರಚಿತವಾದ ಇವರ ಕೃತಿಯೆಂದರೆ 'ಕರ್ವಾಲೋ', 'ಚಿದಂಬರ ರಹಸ್ಯ', 'ಜುಗಾರಿ ಕ್ರಾಸ್' ಮೊದಲಾದವು. ಈ ಕೃತಿಗಳು ವೈಜ್ಞಾನಿಕತೆ ಮತ್ತು ವಿಜ್ಞಾನದ ಮೇಲಿನ ಪ್ರಬಂಧದ ಗಡಿಯನ್ನು ತೊಡೆದುಹಾಕಿ, ಜನಸಾಮಾನ್ಯರಿಗೆ ಅರ್ಥವಾಗುವಂತೆ ಪ್ರಭಾವಿತವಾಗಿ ಮೂಡಿಬಂದಿರುವ ಕೃತಿಗಳು. ಇವರ ಕೃತಿಗಳಲ್ಲಿ ಪರಿಸರದ ವಿಶೇಷತೆಯನ್ನು ವಿವರಿಸುವುದರೊಂದಿಗೆ, ಪ್ರಕೃತಿಯೊಂದಿಗೆ ಮನುಷ್ಯರು ಹೊಂದಿಕೊಂಡಾಗ ಕೌಶಲ್ಯಭರಿತರಾಗುತ್ತಾರೆ ಎಂಬುದನ್ನು ತಾವು ಬಳಸಿರುವ ಜನಜನಿತ ಭಾಷಾ ನಿರೂಪಣೆಯೊಂದಿಗೆ ತಿಳಿಸಿರುವುದನ್ನು ಕಂಡುಕೊಳ್ಳಲಾಯಿತು.

'ಕರ್ವಾಲೋ' ಕಾದಂಬರಿಯಲ್ಲಿ ಶತಮಾನಗಳ ಹಿಂದೆ ಕಣ್ಮರೆಯಾದ ಹಾರುವ ಓತಿಯನ್ನು ಹುಡುಕುವ ಕಥನವಿದೆ. ಇದರ ಹಿನ್ನೆಲೆಯಲ್ಲಿಯೇ ವಿಜ್ಞಾನದ ಸಂಶೋಧನೆಗಳ ಹಿಂದಿರುವ ಹಾದಿ, ಇಂದಿನ ಕಾಡುಗಳು ಎದುರಿಸುತ್ತಿರುವ ಅರಣ್ಯನಾಶದ ಪರಿಸ್ಥಿತಿ ಮೊದಲಾದ ಅಂಶಗಳ ವಿವರಣೆಯಿದೆ. ಇದೇ ರೀತಿಯಲ್ಲಿ ಲೇಖಕರ 'ಚಿದಂಬರ ರಹಸ್ಯ', 'ಜುಗಾರಿ ಕ್ರಾಸ್' ಮತ್ತು 'ಮಾಯಾಬಜಾರ್' ಕಾದಂಬರಿಗಳಲ್ಲೂ ಬೆಳೆನಾಶ, ಅರಣ್ಯನಾಶ, ಪರಿಸರನಾಶಗಳ ಕಾರಣ ಮತ್ತು ಪರಿಣಾಮಗಳನ್ನು ಚಿತ್ರಿಸಲಾಗಿದೆ. ಇಲ್ಲಿನ ಭಾಷೆ ಮತ್ತು ಅಭಿವ್ಯಕ್ತಿಯ ಕ್ರಮಗಳ ಸೃಜನಶೀಲ ನೆಲೆಯಲ್ಲಿಯೇ ಇದೆ. ಪರಿಣಾಮಕಾರಿಯಾದ ಮತ್ತು ಆಯಾ ಸಂದರ್ಭದ ಸೂಕ್ಷ್ಮತೆಗಳನ್ನು ಹಿಡಿದಿಡುವ ರೀತಿಯಲ್ಲಿ ಭಾಷೆಯು ಬಳಕೆಯಾಗಿದೆ. ಕನ್ನಡದ ಸೊಬಗಿನ ಹಲವು ಸಾಧ್ಯತೆಗಳನ್ನು ಲೇಖಕರು ಇಲ್ಲಿ ಬಳಸಿಕೊಂಡಿದ್ದಾರೆ.

ಕೆಲವು ಉದಾಹರಣೆಗಳನ್ನು ಗಮನಿಸುವುದಾದರೆ, 'ಕರ್ವಾಲೋ' ಕಾದಂಬರಿಯಲ್ಲಿನ ಕೊನೆಯ ಒಂದು ಸನ್ನಿವೇಶದ ವಿವರಣೆಯು ಹೀಗಿದೆ, "ನಾವು ಸುತ್ತಮುತ್ತಲಿನ ಪರಿವೆಯೇ ಇಲ್ಲದೆ ಹತ್ತಿಳಿದು ಓಡೋಡಿ ಸಹ್ಯಾದ್ರಿಯ ಕೊಟ್ಟ ಕೊನೆಯ ಅಂಚಿಗೆ ಬಂದಿದ್ದೆವು. ನಾವು ಹತ್ತಿದ ಭಾಗದಿಂದ ಅದು ಸಾಮಾನ್ಯ ಗುಡ್ಡದಂತೆಯೇ ಆರಂಭವಾಗಿದ್ದರೂ ಅದರ ಇನ್ನೊಂದು ಮೈ ಕಡಿದಾದ ಸಾವಿರಾರು ಅಡಿ ಆಳವಾದ ಪ್ರಪಾತವಾಗಿತ್ತು. ದಕ್ಷಿಣ ಭಾರತದ ಪ್ರಸ್ಥಭೂಮಿಯ ಅಂಚು ಕತ್ತರಿಸಿದಂತೆ ಕೊನೆಯಾಗಿ ಸುಮಾರು ಎರಡು ಮೂರು ಸಾವಿರ ಅಡಿ ಆಳದಲ್ಲಿ ಕಾಡು ಅನೇಕ ಮೈಲಿ ವಿಸ್ತಾರಕ್ಕೆ ಸಮುದ್ರ ತೀರದವರೆಗೆ ಹಬ್ಬಿದ್ದು ಕಾಣುತ್ತಿತ್ತು. ನಾವು ಹಿಂದೆ ಬಿಟ್ಟುಬಂದ ಸಣ್ಣ ನದಿ ಕೆಳಗೆಲ್ಲೋ ಜಲಪಾತವಾಗಿ ಧುಮು ಧುಮು ಧುಮ್ಮಿಕ್ಕುವುದು ಕೇಳುತ್ತಿತ್ತು. ಓತಿ ನಮ್ಮ ಕೈಗೆ ಸರಿಯಾಗಿ ಸಿಕ್ಕಿಕೊಂಡಿತ್ತು. ಕೋಡುಗಲ್ಲಿನ ಮುಂದೆ ಕಾಲವೇ ಕೊನೆಗೊಂಡಂತೆ ವಿಶಾಲ ಶೂನ್ಯ ಒಂದು ಅದಕ್ಕೆ ಇದಿರಾಗಿತ್ತು. ಹಿಂದಕ್ಕೆ ಹಾದಿ ತಪ್ಪಿಸಿಕೊಳ್ಳಲಸಾಧ್ಯವಾದ ಚಿಕ್ಕ ಚಿಕ್ಕ ವೃಕ್ಷಗಳ ಸಮೂಹ. ಸುತ್ತ ಸುತ್ತುಗಟ್ಟಿ ನಿಂತಿದ್ದ ನಾವುಗಳು"[೨] ಎಂದು ಹೇಳುವಲ್ಲಿ ಅವರು ಬಳಸಿರುವ ಭಾಷಾಭಿವ್ಯಕ್ತಿಯು ಉತ್ತಮವಾಗಿ ಮೂಡಿಬಂದಿದೆ. ಇಲ್ಲಿ ಅವರು ಬಳಸಿರುವ ಪದಗಳಾದ 'ಕೊಟ್ಟಕೊನೆ, ಅಂಚು, ಆಳವಾದ ಪ್ರಪಾತ, ಕೋಡುಗಲ್ಲಿನ ಮುಂದೆ ಕಾಲವೇ ಕೊನೆ, ವಿಶಾಲ ಶೂನ್ಯ ಮೊದಲಾದವು ಓದುಗರನ್ನು ಆಕರ್ಷಿಸುವಂತಿವೆ.

ಇದರಂತೆ 'ಜುಗಾರಿ ಕ್ರಾಸ್' ಕೃತಿಯಲ್ಲಿನ ಮೇದರಹಳ್ಳಿಯ ಅವಸಾನದ ನಿರೂಪಣೆಯು ಹೀಗಿದೆ, "ಈ ಹಾಳೂರನ್ನು ಒಂದಾನೊಂದು ಕಾಲದಲ್ಲಿ 'ಮೇದರಹಳ್ಳಿ' ಅಥವಾ 'ಮೇದರಳ್ಳಿ' ಎಂದು ಕರೆಯುತ್ತಿದ್ದರು. ಅದು ಜೀರ್ಣಾವಸ್ಥೆಗೆ ಹೋಗುತ್ತಿದ್ದಂತೆಯೇ ಅದರ ಹೆಸರು

ಎಲ್ಲರ ಜ್ಞಾಪಕದಿಂದಲೂ ನಾಲಗೆಯಿಂದಲೂ ಆಗೀಗ ಏಳುವ ಹೊಗೆಯೊಂದೆ ಅಲ್ಲಿ ಇನ್ನೂ ಜೀವಸಂಚಾರ ಇದೆ ಎನ್ನುವುದಕ್ಕೆ ಕುರುಹಾಗಿತ್ತು. ನಾಗರೀಕತೆಯಿಂದ ಸಂಪೂರ್ಣ ಕಣ್ಮರೆಯಾಗಿ ಈ ಮಹಾರಣ್ಯದೊಳಗೆ ಕಳೆದೇ ಹೋಗಲು ಯಾರು ಏಕಾದರೂ ಕರಡದ ಹುಲ್ಲಿನ ಜೋಪಡಿಗಳನ್ನು ಅಲ್ಲಿ ನಿರ್ಮಿಸಿದರೋ ಎಂದು ಅಚ್ಚರಿಯಾಗುತ್ತದೆ. ಈ ಮೇದರಹಳ್ಳಿಗೆ ಟಿಪ್ಪೂಸುಲ್ತಾನನ ಕಾಲದಷ್ಟು ಹಳೆಯ ಚರಿತ್ರೆ ಇದೆಯೆಂದರೆ ಯಾರಿಗೂ ನಂಬಿಕೆ ಬರುವುದಿಲ್ಲ"[೬] ಎಂದು ಹೇಳಿರುವಲ್ಲಿ ಲೇಖಕರು ಬಳಸಿರುವ ಭಾಷಾಭಿವ್ಯಕ್ತಿಯು ಮನೋಜ್ಞವಾಗಿ ಮೂಡಿಬಂದಿದೆ.

ಮತ್ತೊಂದು ಕೃತಿ 'ಚಿದಂಬರ ರಹಸ್ಯ'ದಲ್ಲಿನ ಅಧ್ಯಾಯ ೨ರಲ್ಲಿನ ಒಂದು ಪ್ರಸಂಗದ ವಿವರಣೆಯು ಹೀಗಿದೆ, "ಸಿದ್ದಪ್ಪ ನಕ್ಕು 'ಮಿಸ್ಟರ್ ಅಂಗಾಡಿ, ಏಲಕ್ಕಿ ಬೆಳೆ ಕುಸಿಯೋದಕ್ಕೆ, ತುಂಬಾ ಕಾರಣಗಳಿವೆ. ಕ್ರಿಮಿಕೀಟಗಳು, ಫಂಗಸ್‌ಗಳು, ವೈರಸ್‌ಗಳು, ಪ್ರತಿಕೂಲ ಹವಾಮಾನ, ಮಾರುಕಟ್ಟೆ ಏರಿಳಿತ ಹೀಗೇ ನೂರಾರು ಕಾರಣಗಳಿರುತ್ತವೆ. ಅದನ್ನು ತನಿಖೆ ಮಾಡೋದಕ್ಕೆ ಸಸ್ಯಶಾಸ್ತ್ರಜ್ಞರ ಅಧ್ಯಯನ ಮುಖ್ಯವೇ ಹೊರತು ಪೋಲೀಸ್ ಡಿಪಾರ್ಟ್‌ಮೆಂಟಿನವರಿಗೆ, ಇಂಟಲಿಜೆನ್ಸ್‌ನವರಿಗೆ ಕೆಲಸ ವಿಸಿದರೆ ಪ್ರಯೋಜನಾದರೂ ಏನು? ಈಗ ಏಲಕ್ಕಿಗೆ ಏಫಿಡ್ಸ್ ಅನ್ನೋ ತಿಗಣೆಕಾಟ ಇದೆ ಅನ್ನಿ, ಅದನ್ನು ನಾನ ಪತ್ತೆಮಾಡಿ ಅದಕ್ಕೆ ಯಾವ ಔಷಧಿ ಹೊಡೆಯಬೇಕು ಎಂದು ರಿಪೋರ್ಟ್ ಮಾಡಬಲ್ಲೆನೇ ಹೊರತು, ಪೋಲೀಸ್ ಡಿಪಾರ್ಟ್‌ಮೆಂಟಿನವರೇನು ಮಾಡಬಲ್ಲರು ಏಫಿಡ್ಸ್‌ಗಳಿಗೆ ಕೈಕೊಳ ಹಾಕುತ್ತಾರೋ!" ಎಂದು ವಿನೋದವಾಗಿ ಕೇಳಿದ".[೭] ಎಂಬ ವಿವರಣೆಯಲ್ಲಿನ ವಿಷಯ ಮಾಹಿತಿಯ ನಿರೂಪಣೆಯು ಗಂಭೀರ ಹಾಗೂ ಅಕರ್ಷಕವಾಗಿ ಮೂಡಿಬಂದಿರುವುದನ್ನು ಗಮನಿಸಬಹುದು

೬.೧. ಭಾಷೆ ಮತ್ತು ನಿರೂಪಣೆಯ ಸವಾಲುಗಳು ಮತ್ತು ಸಾಧ್ಯತೆಗಳು

ಸಾಹಿತಿಯು ವಿಜ್ಞಾನದ ವಿಷಯಕ್ಕೆ ಸಂಬಂಧಿಸಿದ ಯಾವುದೋ ಮಾಹಿತಿಯನ್ನು ಸಂಗ್ರಹಿಸಿ, ಅರ್ಥ ಪರಿಕಲ್ಪನೆಗೆ ಚ್ಯುತಿಯಾಗದಂತೆ ಪ್ರಸ್ತುತ ಪಡಿಸುವಲ್ಲಿ ಸಾಹಿತ್ಯದ ಭಾಷೆ ಮತ್ತು ನಿರೂಪಣೆಯು ಬಹುಮುಖ್ಯ ಪಾತ್ರ ವಹಿಸುತ್ತದೆ. ಈ ದೃಷ್ಟಿಯಿಂದ ಬಹಳಷ್ಟು ವಿಜ್ಞಾನ ಲೇಖಕರು ಜನಸಾಮಾನ್ಯರನ್ನು ಗಮನದಲ್ಲಿಟ್ಟುಕೊಂಡು ವಸ್ತುವಿನ ಆಯ್ಕೆಯೊಂದಿಗೆ ಸೃಜನಾತ್ಮಕ ಬರವಣಿಗೆಯಲ್ಲಿ ತೊಡಗಿದ್ದಾರೆ. ಸಾಮಾನ್ಯ ಓದುಗನನ್ನು ಗಮನದಲ್ಲಿಟ್ಟುಕೊಂಡು ಹೇಗೆ ಬರೆಯಬೇಕು ತಾಂತ್ರಿಕ ವೈಜ್ಞಾನಿಕ ಪರ್ಯಾಯ ಪದಗಳು ಹೇಗಿರಬೇಕು, ಜನಸಾಮಾನ್ಯರಿಗೆ ಅರ್ಥವಾಗುವ ಹಾಗೂ ಕನ್ನಡ ಜಾಯಮಾನಕ್ಕೆ ಒಪ್ಪುವ ಪದಗಳನ್ನು ಹೇಗೆ ಎಲ್ಲಿ ಬಳಸಬೇಕು ಮೊದಲಾದವುಗಳ ಹಿನ್ನೆಲೆಯಲ್ಲಿ, ಸಾಹಿತಿಗಳು

ವಿಜ್ಞಾನ ಕೃತಿಗಳ ರಚನೆಯನ್ನು ಮಾಡಿದ್ದಾರೆ ಹಾಗೂ ಮಾಡುತ್ತಿದ್ದಾರೆ. ಇದರಿಂದಾಗಿ ಕನ್ನಡದಲ್ಲಿ ವಿಜ್ಞಾನ ಕೃತಿಗಳ ಸಂಖ್ಯೆ ಹೆಚ್ಚುತ್ತಿವೆ. ಅಲ್ಲದೆ ವೈಜ್ಞಾನಿಕ, ತಾಂತ್ರಿಕ ಪದಗಳು ಶಿಷ್ಟ ರೂಪದಲ್ಲಿ ಬಳಕೆಗೆ ಬಂದಿವೆ. ಬಹಳಷ್ಟು ಮೂಲಪದಕ್ಕೆ ಒಂದಕ್ಕಿಂತ ಹೆಚ್ಚು ಪರ್ಯಾಯ ಪದಗಳು ಬಳಕೆಗೆ ಬರುವುದರೊಂದಿಗೆ ವಿಜ್ಞಾನ ಸಾಹಿತ್ಯ ಕೃತಿಗಳು ರಚನೆಗೊಂಡಿವೆ.

ಸಮಾಜದಲ್ಲಿ ಅನಕ್ಷರಸ್ಥರಿಗಿಂತ ಅಕ್ಷರಸ್ಥರೇ ಗ್ರಹಗಳ ಚಲನವಲನವನ್ನು ಆಧರಿಸಿ ಭವಿಷ್ಯವನ್ನು ಹೆಚ್ಚು ನಂಬುವುದು, ಡಾರ್ವಿನ್ನನ ವಿಕಾಸವಾದದ ಬಗ್ಗೆ ಅಧ್ಯಯನ ಮಾಡಿದ ಜ್ಞಾನಿಗಳು ಹುಟ್ಟು ಸಾವುಗಳ ವಾದವನ್ನು ಮೌಢ್ಯವಾಗಿ ನಂಬುವುದು, ತಮ್ಮ ಕಷ್ಟ ಕಾರ್ಪಣ್ಯ ರೋಗರುಜಿನಗಳಿಗಾಗಿ ನರಬಲಿ ಪ್ರಾಣಿ ಬಲಿಯನ್ನು ನೀಡುವುದು, ಕಪಟ ಮುಖವಾಡ ಧರಿಸಿ ದೈವಾಂಶ ಸಂಭೂತರಂತೆ ವರ್ತಿಸುವ ಪವಾಡ ಪುರುಷರಿಗೆ ಸಮಾಜದಲ್ಲಿ ಎಲ್ಲಿಲ್ಲದ ಸ್ಥಾನ ಅಗ್ರಪಟ್ಟ. ಮದುವೆ ಮತ್ತಿತರ ಶುಭಸಮಾರಂಭಗಳಲ್ಲಿ ಪಂಚಾಂಗ ಜಾತಕಗಳ ಮೊರೆ ಹೋಗುವುದು ಮೊದಲಾದ ಅಂಧ ಮೂಡನಂಬಿಕೆಗಳು ಸಮಾಜದ ಜನರಲ್ಲಿ ಮೌಢ್ಯತೆ ಮತ್ತು ಅಸಂಗತ ನಡವಳಿಕೆಗಳನ್ನು ಹುಟ್ಟುಹಾಕಿವೆ.

ನಮ್ಮ ಸಂವಿಧಾನದಲ್ಲಿನ ಮೂಲಭೂತ ಕರ್ತವ್ಯದಲ್ಲಿ ವೈಜ್ಞಾನಿಕ ಮನೋಭಾವವನ್ನು ಉಲ್ಲೇಖಿಸಲಾಗಿದ್ದರೂ, ಸಮಾಜದಲ್ಲಿ ಮೌಢ್ಯತೆ, ಅಂಧ ನಂಬಿಕೆಗಳು ಎದ್ದು ಕಾಣುತ್ತಿರುವುದನ್ನು ಮನಗಂಡ ಸಾಹಿತಿಗಳು ಸಮಾಜದ ಸುಸ್ಥಿತಿ ಹಾಗೂ ಉತ್ತಮ ಜೀವನ ಶೈಲಿಗಾಗಿ ಹಾಗೂ ಸಾಮಾಜಿಕ ಕಂಟಕಗಳಿಂದ ಪಾರಾಗಲು ಪ್ರತಿಯೊಬ್ಬರೂ ವಿಚಾರಶೀಲರಾಗಬೇಕೆಂದು ಬಯಸಿದರು. ಯಾವುದೇ ಪಕ್ಷಪಾತ ಹೇಳಿಕೆಗಳಿಲ್ಲದ ವೈಜ್ಞಾನಿಕ ಮನೋಭಾವ ಬೆಳೆಸುವ ನಿಟ್ಟಿನಿಂದ ತಾವೇ ಸ್ವತಃ ವಿಜ್ಞಾನ ಲೇಖನಗಳನ್ನು ಕೆಲವರು ಬರೆದರೆ ಮತ್ತೆ ಕೆಲವರು ಅನುವಾದ ಭಾಷಾಂತರದ ಮೂಲಕ ಕೃತಿಗಳನ್ನು ನೀಡಿದರು.

ಕನ್ನಡ ವಿಜ್ಞಾನ ಸಾಹಿತ್ಯದ ಸೃಜನೇತರ ಲೇಖನಗಳು ಹಾಗೂ ಕೃತಿಗಳು ಭಾಷಿಕವಾಗಿ ಎದುರಿಸುವ ಸವಾಲುಗಳು ಬೇರೆ ಬಗೆಯವು. ಇಲ್ಲಿಯೂ ವಿಜ್ಞಾನದ ಹಲವು ಕ್ಷೇತ್ರಗಳ ವಸ್ತುಗಳನ್ನು ಕುರಿತು ಬರೆಯಲಾಗಿದ್ದರೂ, ಅಭಿವ್ಯಕ್ತಿಯ ಸ್ವರೂಪವು ಭಿನ್ನವಾಗಿರುತ್ತದೆ. ಇಲ್ಲಿ ನೇರವಾಗಿ, ಸ್ಪಷ್ಟವಾಗಿ ಮತ್ತು ಯಾವುದೇ ಗೊಂದಲಕ್ಕೆಡೆಯಿಲ್ಲದಂತೆ ವಿಜ್ಞಾನದ ವಿಷಯಗಳನ್ನು ನಿರೂಪಿಸಬೇಕು. ಕಥೆ, ಕಾವ್ಯ, ಕಾದಂಬರಿಗಳ ಹಾಗೆ ಸುತ್ತಿಬಳಸಿ ವಿಷಯವನ್ನು ಹೇಳುವಂತಿಲ್ಲ. ವರ್ಣನೆ, ಕಲ್ಪನೆಗಳನ್ನು ಸೇರಿಸಿ ರೋಚಕವಾಗಿ ಬರೆಯುವಂತಿಲ್ಲ. ವಿಜ್ಞಾನದ ತಾತ್ವಿಕತೆ ಮತ್ತು ಸಿದ್ಧಾಂತಗಳು ಓದುಗರ ಮನಸ್ಸಿನಲ್ಲಿ ಹೇಗಿದೆಯೋ ಹಾಗೆಯೇ ಅವರ ಅರಿವಿನ ರೂಪದಲ್ಲಿ ನಿರೂಪಿಸಬೇಕು. ವಿಷಯದ

ಅಭಿವ್ಯಕ್ತಿಯಲ್ಲಿ ಖಚಿತತೆಯೇ ಪ್ರಮಾಣ. ಅಂಕಿ-ಅಂಶಗಳೇ ಆಧಾರ. ಮತ್ತು ಪ್ರಯೋಗಿಕತೆಯೇ ಜೀವಾಳ. ಆದುದರಿಂದಲೇ ಇಂತಹ ಬರಹಗಳಲ್ಲಿ ಭಾಷೆಯ, ಅಂದರೆ ಕನ್ನಡದ ಅಭಿವ್ಯಕ್ತಿಯು ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ.

ಕನ್ನಡ ವಿಜ್ಞಾನ ಸಾಹಿತ್ಯದ ಸೃಜನೇತರ ವಿಭಾಗದಲ್ಲಿ ಮೂರು ಬಗೆಯ ಬರವಣಿಗೆಗಳಿರುವುದನ್ನು ಕಾಣಬಹುದು. ಇವು ಮೂರರಲ್ಲೂ ಭಾಷೆಯು(ಕನ್ನಡ) ಭಿನ್ನಭಿನ್ನವಾಗಿ ಬಳಕೆಯಾಗಿದೆ. ಅವುಗಳು

೧. ಸಂಶೋಧನಾತ್ಮಕ ಲೇಖನ/ಕೃತಿಗಳು.

೨. ವಿಜ್ಞಾನ ಪಠ್ಯಪುಸ್ತಕಗಳು.

೩. ಜನಪ್ರಿಯ ವಿಜ್ಞಾನ ಕೃತಿಗಳು.

೧. ಸಂಶೋಧನಾತ್ಮಕ ಕೃತಿಗಳು : ಈ ಕೃತಿಗಳಲ್ಲಿನ ಭಾಷಾಭಿವ್ಯಕ್ತಿಗೆ ಉದಾರಣೆಯಾಗಿ ಟಿ. ಆರ್. ಅನಂತರಾಮುರವರ 'ವಿಜ್ಞಾನ ಹೆದ್ದಾರಿಯಲ್ಲಿ ಮಹಾತಿರುವುಗಳು' ಕೃತಿಯಲ್ಲಿ ನೀಡಲಾದ ವಿವರಣೆಯ ಭಾಗವನ್ನು ಇಲ್ಲಿ ಗಮನಿಸಬಹುದು. "ವಿಕಿರಣಪಟು ಧಾತುವಿಗಿಂತಲೂ ಅವು ಉತ್ಸರ್ಜನೆ ಮಾಡುತ್ತಿದ್ದ ಆಲ್ಫಾ, ಬೀಟ ಕಣಗಳು, ಗ್ಯಾಮಾ ಕಿರಣಗಳೂ ಮುಖ್ಯವೆಂದು ಭಾವಿಸಿ ಸಂಶೋಧನೆ ಆ ನಿಟ್ಟಿನಲ್ಲಿ ಪ್ರಗತಿಯಾಯಿತು. ಆಲ್ಫಾ ಕಣದಲ್ಲಿ ಎರಡು ಪ್ರೋಟಾನುಗಳು, ಎರಡು ನ್ಯೂಟ್ರಾನುಗಳು ಇರುತ್ತವೆ. ಬೀಟ ಕಣಗಳು ಬೇರೇನೂ ಅಲ್ಲ, ಉತ್ಸರ್ಜಿತ ಎಲೆಕ್ಟ್ರಾನುಗಳು. ಗ್ಯಾಮಾ ಕಿರಣಗಳು ವಿದ್ಯುತ್ಕಾಂತೀಯ ವಿಕಿರಣದ ಪ್ರೋಟಾನುಗಳು ಎಂಬುದು ಅನಂತರ ತಿಳಿಯಿತು. ರದರ್‌ಫರ್ಡ್ ತನ್ನ ಶೋಧವನ್ನು ಮುಂದುವರೆಸಿ, ಈ ಎಲ್ಲವೂ ಬೇರೆ ಬೇರೆ ಪ್ರಮಾಣದ ಶಕ್ತಿಯನ್ನು ಹೊಂದಿವೆ ಎಂದು ತೋರಿಸಿಕೊಟ್ಟ. ಒಂದೇ ಗಂಟೆಯಲ್ಲಿ ರೇಡಿಯಂ ತನ್ನ ತೂಕಕ್ಕಿಂತ ಹೆಚ್ಚಿನ ಹಿಮಗಡ್ಡೆಯನ್ನು ಕರಗಿಸುವಷ್ಟು ಶಾಖವನ್ನು ಹೊರಬಿಡುತ್ತದೆಂದು ೧೯೦೩ರಲ್ಲಿ ಪಿಯರಿಕ್ಯೂರಿ ತೋರಿಸಿಕೊಟ್ಟ."[೮] ಎಂದು ಲೇಖಕರು ಭೂಮಿಯ ಮೇಲೆ ಜೀವಿಯ ವಿಕಾಸಕ್ಕೆ ಕಾರಣವಾದ ವಿಕಿರಣಗಳ ಮಾಹಿತಿಯನ್ನು ತಿಳಿಸಿರುವುದನ್ನು ಕಾಣಬಹುದು.

ಮತ್ತೊಂದು ಎ.ಓ ಆವಲಮೂರ್ತಿರವರ ಸಂಶೋಧನಾ ಕೃತಿಯಾದ 'ವಿಜ್ಞಾನ ಸೂರ್ಯ' ಕೃತಿಯಲ್ಲೂ ವಿಷಯದ ನಿರೂಪಣೆಯು ಉತ್ತಮವಾಗಿ ಮೂಡಿಬಂದಿದೆ. ಅದರ ವಿವರಣೆಯ ಒಂದು ಭಾಗವನ್ನು ಉದಾಹರಣೆಯಾಗಿ ಇಲ್ಲಿ ಗಮನಿಸಬಹುದು. "ಸಂಪ್ರದಾಯ ಜ್ಞಾನದ ಜಿಗುಟುತನದಿಂದ ಬಿಡಿಸಿ, ವಸ್ತು ನಿಷ್ಠವಾಗಿ ಆಲೋಚಿಸುವಂತೆ

ಮಾಡಿ, ಆಚಾರ ಮತ್ತು ವಿಚಾರಗಳ ನಡುವಿನ ಕಂದರವನ್ನು ತೊಲಗಿಸಲು ಮತ್ತು ಹಳೆಯ ನಂಬಿಕೆಗಳನ್ನು ಕದಲಿಸುವ ಕೆಲಸ ಸುಲಭ ಸಾಧ್ಯವಿಲ್ಲವಾದರೂ ಅಸಾಧ್ಯವಿಲ್ಲ ಎಂಬ ಮಾತು ಹಿಂದೆಯೇ ಬಂದಿದೆ. ಆಚಾರ–ವಿಚಾರಗಳ ನಡುವಿನ ಸಂಘರ್ಷವನ್ನು ನಿವಾರಿಸಿ ಎರಡೂ ಸಮಾಂತರವಾಗಿ ಒಂದೇ ದಿಕ್ಕಿನಲ್ಲಿ ಹರಿಯುವಂತೆ ಮಾಡುವಲ್ಲಿ 'ಸಮಗ್ರ ವಿಜ್ಞಾನ' ಸಹಕಾರಿಯಾಗಬಲ್ಲದು.... ಗ್ರಹಣದ 'ಸತ್ಯ'ವನ್ನು ವಿಜ್ಞಾನ ಅರ್ಥ ಮಾಡಿಕೊಂಡು ಸುಮಾರು ೨೦೦ ವರ್ಷಗಳೇ ಕಳೆದಿದ್ದರೂ ಜನರ ನಂಬಿಕೆಗಳು ಬದಲಾಗಿರಲಿಲ್ಲ. ದೀರ್ಘಕಾಲವೂ ಉಳಿದು ಬಂದಿದೆ. ಇದು ಇಂಥ ನಂಬಿಕೆಗಳ ಅಚಲತೆಯನ್ನು ತೋರಿಸುತ್ತದೆ. ಅದು ಸುಲಭವಾಗಿ ಬದಲಾಗುವುದಿಲ್ಲ. ಅದರಲ್ಲೂ ಧಾರ್ಮಿಕ ನಂಬಿಕೆಗಳು ತನ್ನನ್ನು ತಾನು ವಿಮರ್ಶಿಸಿಕೊಂಡು ಬದಲಾಗುವುದು ತುಂಬಾ ಅಪರೂಪ. ಆದರೆ ಈ ಗುಣ ವಿಜ್ಞಾನಕ್ಕಿದೆ. ಹೊಸ ಸತ್ಯದ ಬೆಳಕಲ್ಲಿ ಬದಲಾಗುವ ನಮ್ಯತೆ ಮತ್ತು ತೆರೆದ ಮನಸ್ಸು ವಿಜ್ಞಾನಕ್ಕಿದೆ. ವಿಜ್ಞಾನದ ಒಂದು ಮುಖ್ಯ ವೈಶಿಷ್ಟ್ಯ".[೯] ಎಂದು ಲೇಖಕರಾದ ಎ.ಓ.ಆವಲಮೂರ್ತಿರವರು ತಮ್ಮ ಸಂಶೋಧನಾ ಪ್ರಬಂಧದಲ್ಲಿ ವಿಜ್ಞಾನ ಸಾಹಿತ್ಯದ ಮಹತ್ವವನ್ನು ವಿವರಿಸುವಲ್ಲಿ ಅಭಿವ್ಯಕ್ತಿಸಿರುವ ಭಾಷೆಯು ಗಂಭೀರತೆಯಿಂದ ಕೂಡಿರುವುದನ್ನು ಗಮನಿಸಬಹುದು.

೨. ಪಠ್ಯಪುಸ್ತಕಗಳು : ದ್ವಿತೀಯ ಪಿ.ಯು.ಸಿಯ ಭೌತವಿಜ್ಞಾನ ಪಠ್ಯಪುಸ್ತಕದಲ್ಲಿನ ವಿವರಣೆಯನ್ನು ಉದಾಹರಣೆಯಾಗಿ ಗಮನಿಸಬಹುದು. " ಸ್ಥಾಯಿ ವಿದ್ಯುತ್‌ನ ಅಧ್ಯಯನ ಕ್ಷೇತ್ರಕ್ಕೆ ವಿದ್ಯುತ್ ಕ್ಷೇತ್ರದ ತತ್ವವು ತುಂಬಾ ಅನುಕೂಲಕರವಾಗಿದೆ. ಆದರೆ, ಇದು ಖಂಡಿತ ಅನಿವಾರ್ಯವಲ್ಲ. ವಿದ್ಯುದಾವೇಶಗಳ ವ್ಯವಸ್ಥೆಯಿಂದ ಮೂಡಿದ ವಿದ್ಯುತ್ ಪರಿಸರವನ್ನು ಲಕ್ಷಣೀಕರಿಸಲಿಕ್ಕೆ ವಿದ್ಯುತ್ ಕ್ಷೇತ್ರ ಒಂದು ಸೊಗಸಾದ ದಾರಿ. ವಿದ್ಯುದಾವೇಶಗಳ ವ್ಯವಸ್ಥೆಯ ಸುತ್ತಲಿನ ಸ್ಥಳಾವಕಾಶದಲ್ಲಿನ ಒಂದು ಬಿಂದುವಿನಲ್ಲಿನ ವಿದ್ಯುತ್ ಕ್ಷೇತ್ರವು, ಅದೇ ಬಿಂದುವಿನಲ್ಲಿ ಇರಿಸಿದ ಧನಾತ್ಮಕ ಪರೀಕ್ಷಕ ಘಟಕ ವಿದ್ಯುದಾವೇಶವು (ವಿದ್ಯುದಾವೇಶಗಳ ವ್ಯವಸ್ಥೆಯನ್ನು ಕದಲಿಸದಂತೆ) ಅನುಭವಿಸುವ ಬಲವನ್ನು ಹೇಳುತ್ತದೆ. ವಿದ್ಯುತ್ ಕ್ಷೇತ್ರ ಎಂಬುದು ವಿದ್ಯುದಾವೇಶಗಳ ವ್ಯವಸ್ಥೆಯ ಒಂದು ಲಕ್ಷಣ ಮತ್ತು ಇದನ್ನು ಕಂಡುಕೊಳ್ಳಲು ಒಂದು ಬಿಂದುವಿನಲ್ಲಿ ನೀವು ಇರಿಸಿದ ಪರೀಕ್ಷ ವಿದ್ಯುದಾವೇಶದ ಮೇಲೆ ಇದು ಅವಲಂಬಿತವಾಗಿಲ್ಲ. ಕ್ಷೇತ್ರ ಎನ್ನುವ ಪದ ಭೌತಶಾಸ್ತ್ರದಲ್ಲಿ ಸಾಮಾನ್ಯವಾಗಿ ಆಯಾ ಸ್ಥಳಾವಕಾಶದಲ್ಲಿನ ಪ್ರತಿಯೊಂದು ಬಿಂದುವಿನಲ್ಲಿನ ಪ್ರಮಾಣವನ್ನು ವ್ಯಾಖ್ಯಾನಿಸುತ್ತದೆ ಮತ್ತು ಇದು ಬಿಂದುವಿನಿಂದ ಬಿಂದುವಿಗೆ ಬದಲಾಗಬಹುದು. ವಿದ್ಯುತ್ ಕ್ಷೇತ್ರವು ಒಂದು ಸದಿಶ ಕ್ಷೇತ್ರವಾಗಿದೆ ಏಕೆಂದರೆ, ಬಲ ಒಂದು ಸದಿಶ ಪರಿಮಾಣವಾಗಿದೆ."[೧೦] ಎಂದು ವಿದ್ಯುತ್ ಕ್ಷೇತ್ರದ ಭೌತಿಕ ಮಹತ್ವವನ್ನು ತಿಳಿಸಿದ್ದಾರೆ.

ಸಂಶೋಧನಾ ಕೃತಿ/ಲೇಖನ ಮತ್ತು ಪಠ್ಯಪುಸ್ತಕಗಳಲ್ಲಿ ಬಳಸಿರುವ ಕನ್ನಡವು ಪ್ರಮಾಣಭಾಷೆಯ ಸ್ವರೂಪದ್ದಾಗಿದ್ದು, ಶಿಷ್ಟ ಕನ್ನಡವೆಂದು ಕರೆಯಲಾಗುವ ಬಗೆಯದು. ವಿದ್ವಾಂಸರು, ಸಂಶೋಧಕರು ಮತ್ತು ವಿಜ್ಞಾನವನ್ನು ವಿಶೇಷವಾಗಿ ಅಧ್ಯಯನ ಮಾಡುವವರಿಗಾಗಿ ಇವು ರಚಿತವಾಗುತ್ತವೆ. ಆದ್ದರಿಂದ ಇಂತಹ ಕೃತಿಗಳಲ್ಲಿನ ನಿರೂಪಣೆ ಮತ್ತು ಅಭಿವ್ಯಕ್ತಿ ವಿಧಾನಗಳು ಬೇರೆಯ ರೀತಿಯಲ್ಲಿಯೇ ಇರುತ್ತವೆ. ವಿಷಯವನ್ನು ಅಧಿಕೃತವಾಗಿ ಸಂಬಂಧಿತ ಅಂಕಿ-ಅಂಶಗಳೊಡನೆ ಮಂಡಿಸಬೇಕಾದ ಜವಾಬ್ದಾರಿ ಇಂತಹ ಗ್ರಂಥಗಳಿಗಿರುತ್ತದೆ. ಗಂಭೀರವಾದ ವಿಜ್ಞಾನದ ವಿಚಾರಗಳನ್ನು ಅಷ್ಟೇ ಗಂಭೀರವಾದ ಧಾಟಿಯಲ್ಲಿಯೇ ಆಸಕ್ತರಿಗೆ ತಲುಪಿಸುವ ಗುಣವನ್ನು ಇವು ಹೊಂದಿರುತ್ತವೆ.

ವಿಷಯದ ಪ್ರಾಮುಖ್ಯತೆಯನ್ನು ಉಳಿಸಿಕೊಳ್ಳಲು ಅಗತ್ಯವಾದ ಕಡೆಗಳಲ್ಲಿ ಸಂಸ್ಕೃತ ಅಥವಾ ಇಂಗ್ಲೀಷ್ ಪದಪುಂಜಗಳು ಹಾಗೂ ಪರಿಕಲ್ಪನೆಗಳನ್ನು ಲೇಖಕರು ಬಳಸಿದ್ದಾರೆ. ಅಲ್ಲದೆ ಪ್ರತಿದಿನಬಳಕೆಯಲ್ಲಿರುವ ಪದಗಳಿಗೆ ವಿಶೇಷವಾದ ಪಾರಿಭಾಷಿಕ ಅರ್ಥದೊಂದಿಗೆ ಬಳಸುತ್ತಿರುವ ಪದಗಳು ಮತ್ತು ಉದ್ದೇಶಪೂರ್ವಕವಾಗಿ ಸೃಷ್ಟಿಸಿರುವ ಪದಗಳನ್ನು ಬಳಸುತ್ತಿದ್ದಾರೆ. ಬಹುಮಟ್ಟಿಗೆ ಭಾಷಾಂತರಿಸದೆ ಅಥವಾ ರೂಪಾಂತರಿಸದೆ ಅನ್ಯ ಭಾಷೆಗಳ ಪದಗಳನ್ನು ಯಥಾವತ್ತಾಗಿ ಹಾಗೆಯೇ ಉಳಿಸಿಕೊಂಡಿರುವುದು ಕಂಡುಬರುತ್ತದೆ. ಇದರಿಂದಾಗಿ ವಿಜ್ಞಾನದ ಪರಿಕಲ್ಪನೆಗಳನ್ನು ಅರ್ಥಮಾಡಿಕೊಳ್ಳುವುದು ಸಾಮಾನ್ಯ ಓದುಗರಿಗೂ ಕ್ಲಿಷ್ಟವಾಗಿಯೂ, ಕಗ್ಗಂಟಾಗಿಯೂ ಪರಿಣಮಿಸುತ್ತದೆ. ಹಲವಾರು ಸಂದರ್ಭಗಳಲ್ಲಿ ಲೇಖಕರು ವಿಷಯವನ್ನು ವಿವರಿಸಿದರೂ, ಪದಗಳ ಅರ್ಥವನ್ನು ತಿಳಿಸದಿರುವುದು, ಸಮಾನಾರ್ಥಕ ದೇಸಿ ಪದಗಳನ್ನು ಬಳಸದಿರುವುದು ವಿಜ್ಞಾನ ಸಾಹಿತ್ಯದ ಒಟ್ಟಾರೆ ಸಂವಹನಕ್ಕೆ ತೊಡಕಾಗಿದೆ. ಇಲ್ಲಿ ಅನ್ಯಭಾಷೆಗಳ ಅಂದರೆ ಸಂಸ್ಕೃತ ಇಲ್ಲವೆ ಇಂಗ್ಲೀಷ್ ಬಗೆಗಿನ ಮೇಲರಿಮೆಯೇ ಅಥವಾ ಸರಿಯಾದ ಭಾಷಾಂತರ ಸಾಧ್ಯವಾದಿರುವುದೇ ಅಥವಾ ವಿಜ್ಞಾನ ಲೇಖಕರು ಹಳೆಯ ಭಾಷಾಸೂತ್ರಗಳಿಗೆ ಕಟ್ಟುಬಿದ್ದಿರುವುದೋ ಹೀಗೆ ಕೆಲವು ಪ್ರಮುಖ ಕಾರಣಗಳನ್ನು ಗುರುತಿಸಬಹುದು.

ವಿಜ್ಞಾನದ ಸಂಶೋಧನಾತ್ಮಕ ಕೃತಿ/ಲೇಖನಗಳು ಹಾಗೂ ವಿಜ್ಞಾನ ಪಠ್ಯಪುಸ್ತಕಗಳಿಂದ ಆರಿಸಿಕೊಳ್ಳಲಾದ ಕೆಲವು ಪದಗಳನ್ನು ಇಲ್ಲಿ ನೀಡಿದೆ. ಇವು ಕನ್ನಡದಲ್ಲಿ ಅಥವಾ ಯಾವುದೇ ಭಾಷೆಯ ಪಠ್ಯದಲ್ಲಿ ಬಳಸಬೇಕಾದರೂ ಹೆಚ್ಚಿನ ವಿವರಣೆಯನ್ನು ಬೇಡುವ ಪದಗಳಾಗಿವೆ. ಈ ಪದಗಳು ಸ್ವತಂತ್ರಪದಗಳಾಗಿಯೋ ಅಥವಾ ಅನುವಾದಿತ ಪದಗಳಾಗಿಯೋ ಪುಸ್ತಕಗಳಲ್ಲಿ ಬಂದರೆ ವಿಜ್ಞಾನ ಸಂವಹನವು ಅತ್ಯಂತ ಸುಲಭವು, ಅರ್ಥಗ್ರಹಿಕೆಗೆ ಸಿಗುವಂತಾಗುತ್ತವೆ.

ವಿಜ್ಞಾನ ಕೃತಿ(ಸಂಶೋಧನಾ/ಪಠ್ಯಪುಸ್ತಕ)ಗಳಲ್ಲಿ ಕಂಡುಬಂದಿರುವ ಪದಗಳು

೧. ಫೋರ್ಸ್ (force) – ಬಲ

೨. ಬೇಸ್ (base) – ತಳ, ಅಡಿಪಾಯ

೩. ಫ್ಲೂಇಡ್ (fluid) – ದ್ರವ

೪. ಇಂಜಿನಿಯರ್ (engineer) – ಅಭಿಯಂತರು

೫. ಸ್ಟಾರ್ಚ್ (starch) - ಪಿಷ್ಟ, ಸ್ಟಾರ್ಚ್

೬. ರೇಡಿಯೋಆಕ್ಟಿವ್ (radioactive)- ವಿಕಿರಣಪಟುತ್ವ

೭. ಆಟಮ್ (atum) - ಪರಮಾಣು

೮. ಗ್ರಾವಿಟಿ (gravity) – ಗುರುತ್ವ

೯. ನ್ಯೂಕ್ಲಿಯರ್ (nucler) - ಬೈಜಿಕ, ನ್ಯೂಕ್ಲಿಯರ್

೧೦. ಎಲೆಕ್ಟ್ರಾನಿಕ್ಸ್ (electronics) – ವಿದ್ಯುನ್ಮಾನ, ಎಲೆಕ್ಟ್ರಾನಿಕ್ಸ್

೧೧. ಎನರ್ಜಿ (energy)- ಶಕ್ತಿ, ಊರ್ಜ

೧೨. ಫೋಟೋಸಿಂತಸೀಸ್ (photosynthesis) – ದ್ಯುತಿಸಂಶ್ಲೇಷಣೆ

೧೩. ಪಿ.ಹೆಚ್‌ವ್ಯಾಲ್ಯು (ph value) – ಪಿಹೆಚ್ ಮೌಲ್ಯ

೧೪. ಪ್ಯಾಂಕ್ರಿಯಾಸ್ (pancreas) – ಮೇದೋಜೀರಕಾಂಗ, ಪ್ಯಾಂಕ್ರಿಯಾಸ್

೧೫. ಆರ್ಗನ್ (organ) – ಅಂಗ

೧೬. ಎಲೆಕ್ಟ್ರಿಕ್ (electric)- ವಿದ್ಯುತ್

೧೭. ಪ್ರೋಟಾನ್ (proton) – ಪ್ರೋಟಾನ್

೧೮. ನ್ಯೂಟ್ರಾನ್ (nutron) – ನ್ಯೂಟ್ರಾನ್

೧೯. ಎಲೆಕ್ಟ್ರಿಕಲ್ ಕರೆಂಟ್ (electric current) – ವಿದ್ಯುತ್ ಪ್ರವಾಹ

೨೦. ಎಲೆಕ್ಟ್ರಿಕಲ್ ಚಾರ್ಜ್ (electric charge) – ವಿದ್ಯುತ್ ಪೂರಣ

೨೧. ಸ್ಟೆಥೊಸ್ಕೋಪ್ (stethoscope) – ಎದೆದರ್ಶಕ/ವಕ್ಷದರ್ಶಕ

೨೨. ಅಪ್ಟಿಕಲ್ ಫೈಬರ್ (optical fiber) – ದೃಗ್ ತಂತುಗಳೂ

೨೩. ಎಕ್ಸ್ ರೇ (x-ray) – ಕ್ಷ–ಕಿರಣ, ಎಕ್ಸ್ ಕಿರಣ

೨೪. ಎಲೆಕ್ಟ್ರಾನ್ (electron) – ವಿದ್ಯುನ್ಮಾನ, ಎಲೆಕ್ಟ್ರಾನು

೨೫. ಗ್ಯಾಮ ರೇ (gama ray) – ಗ್ಯಾಮ ಕಿರಣ

ಕೆಲವು ಪದಗಳನ್ನು ಮಾತ್ರ ಇಲ್ಲಿ ಪ್ರಸ್ತುತಪಡಿಸಲಾಗಿದ್ದು, ಇಲ್ಲಿ ಗಮನಿಸಿದಂತೆ ಕೆಲವು ಸಂಸ್ಕೃತ ಪದಗಳು, ಮತ್ತೆ ಕೆಲವು ಪದಗಳು ಮೂಲ ಸ್ವರೂಪದಂತೆ ಇಂಗ್ಲೀಷಿನಲ್ಲಿದ್ದಂತೆಯೇ ಅಭಿವ್ಯಕ್ತಿಗೊಂಡಿದ್ದರೆ, ಮತ್ತೆ ಕೆಲವು ಕನ್ನಡದ ಪಾರಿಭಾಷೆಯೊಂದಿಗೆ ಮೂಡಿಬಂದಿರುವುದನ್ನು ಗುರುತಿಸಬಹುದು. ಭಾಷಾಭಿವ್ಯಕ್ತಿಯಲ್ಲಿನ ಪದ ಬಳಕೆ, ಸಂಸ್ಕೃತ ಪದಗಳ ಬಳಕೆ ಮತ್ತಿತರ ಸಮಸ್ಯೆಗಳನ್ನು ತಕ್ಕಮಟ್ಟಿಗೆ ಲೇಖಕರು ನಿವಾರಿಸಿಕೊಂಡು ಕೃತಿ ರಚನೆಯನ್ನು ಮಾಡಿರುವುದನ್ನು ಕಾಣಬಹುದು.

೩. ಜನಪ್ರಿಯ ವಿಜ್ಞಾನ ಕೃತಿಗಳು ವಿಜ್ಞಾನ ಸಾಹಿತ್ಯದಲ್ಲಿ ಹೆಚ್ಚು ಮಹತ್ವವನ್ನು ಗಳಿಸಿಕೊಂಡಿವೆ. ಆರೋಗ್ಯ. ಪರಿಸರ, ದಿನನಿತ್ಯದ ವೈಜ್ಞಾನಿಕ ಆವಿಷ್ಕಾರಗಳು, ಹೊಸ ಹೊಸ ತಾಂತ್ರಿಕತೆಗಳು ಮೊದಲಾದ ವಿಷಯಗಳನ್ನು ಕುರಿತಂತೆ ಕನ್ನಡದಲ್ಲಿ ಸಾವಿರಾರು ಪುಸ್ತಕಗಳು ಪ್ರಕಟವಾಗಿವೆ. ಇವುಗಳಲ್ಲಿ ಬಳಕೆಯಾಗಿರುವ ಭಾಷೆ ಮತ್ತು ನಿರೂಪಣಾ ವಿಧಾನಗಳು ನೇರವಾಗಿ ಮತ್ತು ವಿಚಾರಗಳನ್ನು ಆದಷ್ಟು ಅರ್ಥವಾಗುವ ಪದ ಮತ್ತು ಶೈಲಿಗಳಲ್ಲಿ ವಿವರಿಸುವುದರಿಂದ ಹೆಚ್ಚು ಜನಪ್ರಿಯವಾಗುತ್ತವೆ. ಪ್ರಸಿದ್ಧ ವಿಜ್ಞಾನ ಮತ್ತು ವೈದ್ಯಕೀಯ ರಂಗದ ಲೇಖಕರ ಹಲವು ಕೃತಿಗಳು ಇಲ್ಲಿ ನೆನಪಾಗುತ್ತವೆ. ಡಾ.ಸಿ.ಆರ್ ಚಂದ್ರಶೇಖರ್, ವಸುಂಧರಾ ಭೂಪತಿ, ನಾಗೇಶ ಹೆಗಡೆ ಮೊದಲಾದವರ ಕೃತಿಗಳಲ್ಲಿ ಜನಪ್ರಿಯ ವಿಜ್ಞಾನ ಬರವಣಿಗೆಯ ಶೈಲಿಯನ್ನು ಕಾಣಬಹುದು. ಪ್ರಮುಖ ದಿನಪತ್ರಿಕೆಗಳು ಹಾಗೂ ಸುಧಾ ಮುಂತಾದ ವಾರಪತ್ರಿಕೆಗಳಲ್ಲಿ ಪ್ರಕಟವಾಗುವ ವೈಜ್ಞಾನಿಕ ಲೇಖನ ಮತ್ತು ಬರಹಗಳನ್ನು ಜನಪ್ರಿಯ ವಿಜ್ಞಾನ ಸಾಹಿತ್ಯದ ಗುಂಪಿಗೆ ಸೇರಿಸಬಹುದು.

ಜನಪ್ರಿಯ ವಿಜ್ಞಾನ ಬರಹಗಳು ಓದುಗರಲ್ಲಿ ವಿಷಯದ ಬಗೆಗೆ ಕುತೂಹಲ ಮತ್ತು ಆಸಕ್ತಿಯನ್ನು ಮೂಡಿಸುವಂತೆ ಇರುತ್ತವೆ. ಪಾರಿಭಾಷಿಕ ಪದಗಳು ಮತ್ತು ತಾತ್ವಿಕ ವಿಚಾರಗಳನ್ನು ಕೈಬಿಟ್ಟು ಅಥವಾ ಸರಳವಾಗುವಂತೆ ಪರಿವರ್ತಿಸಿ ಕೃತಿರಚನೆ ಮಾಡಲಾಗಿರುತ್ತದೆ. ಯಾವುದೇ ಬಗೆಯ ಅಂಕಿ-ಅಂಶಗಳು, ವಾದ-ವಿವಾದಗಳು, ಗೊಂದಲಗೊಳಿಸುವ ವಿಚಾರಗಳು ಇಂತಹ ಕೃತಿಗಳಲ್ಲಿ ಇರುವುದಿಲ್ಲ. ಕೆಲವೊಮ್ಮೆ ವಿಚಾರಗಳನ್ನು ತಿಳಿಯಾಗಿಸಿ, ಹಾಸ್ಯಮಯವಾಗಿಯೂ ಹೇಳುವುದುಂಟು. ಇದಕ್ಕೆ ಸಿ.ಆರ್.ಚಂದ್ರಶೇಖರ್, ನಾಗೇಶ್ ಹೆಗಡೆ ಮೊದಲಾದವರ ಲೇಖನಗಳು ಹಾಗೂ ಕೃತಿಗಳನ್ನು ನಿದರ್ಶನವಾಗಿ ಗಮನಿಸಬಹುದು. ಒಟ್ಟಿನಲ್ಲಿ ಸರಳವಾಗಿ ವಿಜ್ಞಾನವನ್ನು ಸಾಮಾನ್ಯ

ಜನರಿಗೆ ತಲುಪಿಸುವ ಹಾಗೂ ಅದರಲ್ಲಿ ದಿನನಿತ್ಯದ ಸಮಸ್ಯೆಗಳಿಗೆ ವಿಜ್ಞಾನದ ಸತ್ಯಗಳ ಮೂಲಕ ಪರಿಹಾರ ಕಂಡುಕೊಳ್ಳುವ ರೀತಿಯಲ್ಲಿ ಜನಪ್ರಿಯ ವಿಜ್ಞಾನದ ಪುಸ್ತಕಗಳು ರಚನೆಯಾಗಿರುವುದನ್ನು ಗಮನಿಸಬಹುದು. ಇಂತಹ ಕೃತಿಗಳಲ್ಲಿಯೂ ಹಲವಾರು ವಿಜ್ಞಾನದ ವಿಷಯಗಳು ಮತ್ತು ಆಯಾಮಗಳು ಓದುಗರಿಗೆ ಸಿಗುವಂತಾಗಿ ಅವರ ಜ್ಞಾನ ಮತ್ತು ತಿಳುವಳಿಕೆಗಳು ಹೆಚ್ಚಾಗುತ್ತವೆ.

ಜನಪ್ರಿಯ ವಿಜ್ಞಾನ ಸಾಹಿತ್ಯದ ಭಾಷೆ ಮತ್ತು ಶೈಲಿಗಳನ್ನು ತಿಳಿಯಲು ಈ ಕೆಳಗಿನ ಒಂದೆರಡು ಉದಾಹರಣೆಗಳನ್ನು ಗಮನಿಸಬಹುದು.

ವಿಜ್ಞಾನ ಸಾಹಿತ್ಯದ ಪ್ರಮುಖ ವಸ್ತು ವಿಷಯವಾದ ವೈದ್ಯ/ಆರೋಗ್ಯ ವಿಜ್ಞಾನ ಸಾಹಿತ್ಯ ಕ್ಷೇತ್ರದಲ್ಲಿ ಪ್ರಖ್ಯಾತರಾದ ಹಾಗೂ ಜನಪ್ರಿಯರಾದ ವೈದ್ಯ ವಿಜ್ಞಾನ ಸಾಹಿತಿಯಾದ ಸಿ.ಆರ್.ಚಂದ್ರಶೇಖರ್‌ರವರು ಸಾಮಾನ್ಯ ಆರೋಗ್ಯ ಮತ್ತು ಮನೋವಿಜ್ಞಾನಕ್ಕೆ ಸೇರಿದ ಹಲವಾರು ಕೃತಿಗಳನ್ನು ರಚಿಸಿದ್ದಾರೆ. ಇವರ ಪ್ರತಿಯೊಂದು ಕೃತಿಯು ಆರೋಗ್ಯದ ಬಗ್ಗೆ ಮಾಹಿತಿಯನ್ನು ನೀಡುವುದರೊಂದಿಗೆ ಸಲಹೆ ಸೂಚನೆಯನ್ನೂ ನೀಡುವ ವಿಶೇಷ ಕೃತಿಯಾಗಿರಲು ಕಾರಣ ಅವರ ಭಾಷೆ ಮತ್ತು ನಿರೂಪಣಾ ವಿಧಾನವಾಗಿದೆ. ಲೇಖಕರು ಕೃತಿ ರಚನೆಯಲ್ಲಿ ಬಳಸಿರುವ ಭಾಷೆ ಹಾಗೂ ಸಾಹಿತಿಕ ನಿರೂಪಣೆಯು ಆಕರ್ಷಕವಾಗಿದ್ದು ಸಾಮಾನ್ಯ ಜ್ಞಾನ ಹೊಂದಿದ ಯಾರೇ ಓದಿದರು ಅರ್ಥವಾಗುವಂತಿದೆ. "ಪ್ರಕ್ಷುಬ್ಧ ಭಾವನೆಗಳಿದ್ದರೆ, ನಮ್ಮ ಶಕ್ತಿ ಸಾಮರ್ಥ್ಯಗಳ ಕುಗ್ಗುವುದಲ್ಲದೆ ಆರೋಗ್ಯವೂ ಹಾಳಾಗುತ್ತದೆ. ಅನೇಕ ಮನೋದೈಹಿಕ ರೋಗಗಳು ನಮ್ಮನ್ನು ಕಾಡುತ್ತವೆ. ನೆಮ್ಮದಿಯ ಮನಸ್ಸೇ, ನಮ್ಮ ಆರೋಗ್ಯಕ್ಕೆ ಬುನಾದಿ".[೧೧] ಎಂದು ಹೇಳುವ ಮೂಲಕ, "ಆರೋಗ್ಯವೇ ಭಾಗ್ಯ" ಎಂಬ ನಾಣ್ಣುಡಿಯ ನಿಜವಾದ ಅರ್ಥವನ್ನು ಇವರ ಕೃತಿಯಲ್ಲಿ ಕಾಣಬಹುದು. ದೈಹಿಕ ಸದೃಢತೆ ಎಷ್ಟು ಮುಖ್ಯವೋ ಅಷ್ಟೇ ಮುಖ್ಯವಾದುದು ಮಾನಸಿಕ ಆರೋಗ್ಯ ಎಂಬುದನ್ನು ಸಿ.ಆರ್ ಚಂದ್ರಶೇಖರ್‌ರವರ ಪ್ರತಿಯೊಂದು ಕೃತಿಯಲ್ಲೂ ಕಾಣಬಹುದು.

'ಮನಸ್ಸಿನ ಸುಖ-ದುಃಖ ಮತ್ತು ನಿಮ್ಮ ಆರೋಗ್ಯ' ಕೃತಿಯಲ್ಲಿನ ವಿವರಣೆಯ ಭಾಗವನ್ನು ಉದಾಹರಣೆಯಾಗಿ ಗಮನಿಸಬಹುದು. "ಎಲ್ಲಾ ಭಾಗ್ಯಗಳಿಗೂ ಮಿಗಿಲಾದ ಭಾಗ್ಯ-ಆರೋಗ್ಯ ಭಾಗ್ಯ ಎಂದು ಬಲ್ಲವರು ಹೇಳುತ್ತಾರೆ. ಆರೋಗ್ಯವೆಂದರೇನು? ಕಾಯಿಲೆ ಇಲ್ಲದಿರುವುದೇ ಆರೋಗ್ಯ ಎಂದು ಜನಸಾಮಾನ್ಯರು ನಂಬುತ್ತಾರೆ. ಯಾವುದೇ ದೈಹಿಕ ಕಾಯಿಲೆ, ಮಾನಸಿಕ ಕಾಯಿಲೆ ಇಲ್ಲದಿರುವುದು ಆರೋಗ್ಯವೇ ಎಂದರೆ, ವಿಶ್ವ ಆರೋಗ್ಯ ಸಂಸ್ಥೆಯು ಕಾಯಿಲೆ ಇಲ್ಲದಿರುವುದಷ್ಟೇ ಆರೋಗ್ಯವೆನಿಸಿಕೊಳ್ಳುವುದಿಲ್ಲ. ನಮ್ಮ ದೈನಂದಿನ

ಕೆಲಸ ಕಾರ್ಯಗಳನ್ನು ವಿಶೇಷ ಕೆಲಸ ಕಾರ್ಯಗಳನ್ನು ಮಾಡಲು ಅವಶ್ಯಕವಿರುವ ದೈಹಿಕ ಮತ್ತು ಮಾನಸಿಕ ಸಾಮರ್ಥ್ಯ ಮತ್ತು ಮಾನಸಿಕ ಸಾಮರ್ಥ್ಯ ಚೆನ್ನಾಗಿರಬೇಕು. ಮನಸ್ಸು ಭಾವೋದ್ವೇಗಗಳಿಗೆ ಒಳಗಾಗಿರದೇ ಪ್ರಶಾಂತವಾಗಿರಬೇಕು. ವ್ಯಕ್ತಿ ತನ್ನ ಕ್ಷೇಮವಷ್ಟೇ ಅಲ್ಲ ಇತರರ ಸಾಧ್ಯವಾದರೆ ಎಲ್ಲರ ಯೋಗಕ್ಷೇಮವನ್ನು ಗಮನಿಸುವಂತಾದರೆ, ಅದು ಪರಿಪೂರ್ಣ ಆರೋಗ್ಯ ಎನಿಸಿಕೊಳ್ಳುತ್ತದೆ. ಆ ಪರಿಪೂರ್ಣ ಆರೋಗ್ಯವನ್ನು ಸಂಪಾದಿಸಿ, ಉಳಿಸಿಕೊಳ್ಳಲೂ ನಾವೆಲ್ಲರೂ ಪ್ರಾಮಾಣಿಕವಾಗಿ ಪ್ರಯತ್ನ ಮಾಡಬೇಕು. ನಮ್ಮ ಬೆಳೆಯುವ ಮಕ್ಕಳು ದೈಹಿಕವಾಗಿ, ಮಾನಸಿಕವಾಗಿ ಮತ್ತು ಸಾಮಾಜಿಕವಾಗಿ ಗರಿಷ್ಠ ಮಟ್ಟಕ್ಕೆ ಬೆಳೆಯಬೇಕು....”[೧೨] ಎಂದು ಆರೋಗ್ಯದ ಬಗ್ಗೆ ಮಾಹಿತಿ ನೀಡಿರುವುದನ್ನು ಕಾಣಬಹುದು.

ನಾಗೇಶ್ ಹೆಗಡೆಯವರು ಕೃತಿ ರಚನೆಯಲ್ಲಿ ಬಳಸುತ್ತಿದ್ದ ಭಾಷಾಭಿವ್ಯಕ್ತಿಯಿಂದಾಗಿ ಓದುಗರನ್ನು ವಿಷಯದ ಬಗೆಗೆ ಆಸಕ್ತಿ ಮೂಡುವಂತೆ ಮಾಡುವಂತಿದ್ದು, ಹೆಚ್ಚು ಜನಪ್ರಿಯತೆಯನ್ನು ಪಡೆದ ಕೃತಿಗಳಾಗಿವೆ. ಇವರ ‘ಇರುವುದೊಂದೆ ಭೂಮಿ’ ಕೃತಿಯಲ್ಲಿನ ವಿವರಣೆಯನ್ನು ಇಲ್ಲಿ ಗಮನಿಸಬಹುದು. “ಇಂದು ಇಡೀ ಭೂಮಂಡಲವೇ ಸಮಸ್ಯೆಗಳ ಮಡುವಾಗಿದೆ. ಹಿಂದೆಲ್ಲ ದುಷ್ಟ ಉದ್ದೇಶಗಳಿಂದಾಗಿಯೇ ಸಮಸ್ಯೆಗಳ ಸೃಷ್ಟಿಯಾಗುತ್ತಿತ್ತು. ಇಂದು ಹಾಗಲ್ಲ. ತನ್ನವರ ಏಳಿಗೆಯ ಸದುದ್ದೇಶದಿಂದ ಮಾನವ ಮಾಡುವ ಕೆಳಸಗಳಿಂದಲೇ ಹೊಸ ಹೊಸ ಸಮಸ್ಯೆ ಉದ್ಭವವಾಗುತ್ತಿವೆ. ನಮ್ಮ ಸೌಕರ್ಯಗಳು ಇನ್ನೂ ಹೆಚ್ಚುತ್ತ ಹೋಗಬೇಕೆ? ಅಥವ ಇಷ್ಟು ಪ್ರಗತಿಯಾದದ್ದೇ ಸಾಕೆಂದು ಏಳಿಗೆಯನ್ನೇ ಸ್ಥಗಿತಗೊಳಿಸಬೇಕೆ?”[೧೩] ಎಂದು ಹೇಳುತ್ತಾ ಮುಂದುವರಿದು, “ಇಂದು ಜಗತ್ತಿನ ಯಾವ ಭಾಗವೂ, ಯಾವ ಚಟುವಟಿಕೆಯೂ ಇತರರಿಗೆ ಸಂಬಂಧವಿಲ್ಲದಂತೆ ಕಾರ್ಯನಿರ್ವಹಿಸುವುದು ಸಾಧ್ಯವಿಲ್ಲ. ‘ವಸುಧೈವ ಕುಟುಂಬಕಂ’ ಎಂಬ ಮಾತೂ ಹಳತಾಗಿ ಈಗ ‘ವಸುಧೈವ ಶರೀರಕಂ’ ಎನ್ನಬೇಕಾದ ಹಂತದಲ್ಲಿ ನಾವಿದ್ದೇವೆ. ಇಡೀ ಮಾನವಕುಲವೇ ಒಂದು ಸಜೀವ ಶರೀರವೆಂಬಂತೆ ಒಟ್ಟಾಗಿ ಸಮಸ್ಯಗಳೊಂದಿಗೆ ಸೆಣಸಾಡಬೇಕಾಗಿದೆ.”[೧೪] ಎಂದು ವಿಷಯ ನಿರೂಪಣೆಯನ್ನು ಆಕರ್ಷಕವಾಗಿ ಮಾಡಿದ್ದಾರೆ.

ಹೀಗೆ ವೈಜ್ಞಾನಿಕ ಮಾಹಿತಿ ವಿಷಯವನ್ನು ಜನಸಾಮಾನ್ಯರ ಗ್ರಹಿಕೆಗೆ ತರುವಲ್ಲಿ ಎದುರಾದ ಬಹಳಷ್ಟು ಸಮಸ್ಯೆಗಳನ್ನು ಪರಿಹರಿಸಿಕೊಂಡು ಲೇಖನ ಹಾಗೂ ಕೃತಿಗಳ ರಚನೆಯನ್ನು ಮಾಡಿರುವುದನ್ನು ಗಮನಿಸಬಹುದು. ಅಂದರೆ ಪಾರಿಭಾಷಿಕ ಪದಗಳ ಹಾಗೂ ಪರ್ಯಾಯ ಪದಗಳ ಬಳಕೆ, ನೇರ ಸರಳ ನಿರೂಪಣೆ ಮೊದಲಾದ ಸಮಸ್ಯೆಗಳನ್ನು ನಿವಾರಿಸಿಕೊಂಡು ವೈಜ್ಞಾನಿಕ ಸಾಹಿತ್ಯದ ರಚನೆಯನ್ನು ಮಾಡಿರುವರು. ಈ ರೀತಿಯಾಗಿ ಎಲ್ಲಾ ಲೇಖಕರು ವೈಜ್ಞಾನಿಕ ವಿಷಯವನ್ನು ಜನತೆಗೆ ಸಮಾಜಕ್ಕೆ ತಲುಪಿಸಲು ಭಾಷೆ

ಮತ್ತು ನಿರೂಪಣೆಯ ಹಾದಿಯಲ್ಲಿ ಬಂದಂತಹ ಸಮಸ್ಯೆ ಮತ್ತು ಅದನ್ನು ಪರಿಹರಿಸುವಲ್ಲಿನ ಸಾಧ್ಯತೆಗಳನ್ನು ಯಶಸ್ವಿಯಾಗಿ ನಿಭಾಯಿಸಿರುವುದನ್ನು ಗಮನಿಸಲಾಯಿತು.

೬.೨. ಭಾಷಾಂತರ / ಅನುವಾದದ ಸಮಸ್ಯೆಗಳು

ಒಂದು ಭಾಷೆಯಲ್ಲಿನ ವಿಚಾರ, ಮಾತು ಅಥವಾ ಬರವಣಿಗೆಯನ್ನು ಮತ್ತೊಂದು ಭಾಷೆಗೆ ಸಮಾನ ಅರ್ಥ ನೀಡುವಂತೆ ಬದಲಾಯಿಸಿ ಇಲ್ಲವೇ ಪರಿವರ್ತಿಸಿ ನಿರೂಪಿಸುವ ಕ್ರಿಯೆಯೇ 'ಭಾಷಾಂತರ/ಅನುವಾದವಾಗಿದೆ'. ಕ್ಯಾಟ್‌ಫರ್ಡ್‌ರವರ ಪ್ರಕಾರ "ಮೂಲ ಭಾಷೆಯ ಪಠ್ಯ ಸಾಮಗ್ರಿಯನ್ನು ಉದ್ದಿಷ್ಟ ಭಾಷೆಯ ಸಾಮಗ್ರಿಯನ್ನಾಗಿ ಪರಿವರ್ತಿಸುವುದೇ ಭಾಷಾಂತರ/ಅನುವಾದ".[೧೫] ಭಾಷಾಂತರದಲ್ಲಿ ಭಾಷೆಯಲ್ಲಿ ವಿಭಿನ್ನತೆ ಇದ್ದರೂ ನಿರೂಪಣಾ ಭಾವನೆಗಳು ಒಂದೇ ಎಂಬಂತೆ ಯಥಾವತ್ತಾಗಿ ವ್ಯಕ್ತವಾಗಿರುತ್ತದೆ. ಯಾವುದೇ ಒಂದು ಭಾಷೆಯಲ್ಲಿನ ಲೇಖನ, ಸಾಹಿತ್ಯ, ಮಾತು ಮೊದಲಾದವುಗಳು ಕೃತಿಯ ಭಾಷೆಯಾದ ಮೂಲ ಭಾಷೆಯಲ್ಲಿರುವಂತೆಯೇ ಅನುವಾದ ಮಾಡಿ ಉದ್ದಿಷ್ಟ ಭಾಷೆಯಲ್ಲಿ ಬರೆಯುವುದರಿಂದ ನೈಜತೆಗೆ ಹೊಂದುವಂತಿರುತ್ತದೆ. ಮೂಲ ವಿಷಯ ವಸ್ತುವಿನ ಪ್ರತಿಬಿಂಬವನ್ನು ಭಾಷಾಂತರವು ನಿರೂಪಿಸುತ್ತದೆ.

ಈ ನಿಟ್ಟಿನಲ್ಲಿ ವಿಜ್ಞಾನ ವಿಚಾರ ಸಂಗತಿಗಳನ್ನು ಕನ್ನಡದಲ್ಲಿ ಸಂವಹಿಸಲು ಸಾಧ್ಯ ಎಂಬುದನ್ನು ಸ್ವತಃ ಬರಹಗಳ ಮೂಲಕ ಹಾಗೂ ವಿಜ್ಞಾನ ಬರಹಗಾರರನ್ನು ಉತ್ತೇಜಿಸುವ ಮೂಲಕ ಸಂಘ ಸಂಸ್ಥೆಗಳು, ಲೇಖಕರು ಕಾರ್ಯಪ್ರವೃತ್ತರಾದರು. ಎಲ್ಲಾ ಆಸಕ್ತರಿಗೆ ತಲುಪುವಂತೆ ರಚಿಸಿಕೊಂಡ ಪದಗಳು, ಪದಗುಚ್ಛಗಳು, ವಾಕ್ಯರಚನೆ ಇವುಗಳ ಸಾಂದರ್ಭಿಕ ಬಳಕೆಯನ್ನು ವಿಜ್ಞಾನ ಲೇಖಕರು ತಮ್ಮ ಲೇಖನಗಳಲ್ಲಿ ಮಾಡಿರುವುದು ಪ್ರಮುಖವಾಗಿದೆ. ಎಚ್.ಆರ್.ರಾಮಕೃಷ್ಣರಾವ್‌ರವರು "ಕನ್ನಡದಲ್ಲಿ ವಿಜ್ಞಾನ ಎಂದರೆ ಸಾಮಾನ್ಯವಾಗಿ ಕಳೆದ ಮುನ್ನೂರು ವರ್ಷಗಳಲ್ಲಿ ಪಾಶ್ಚಾತ್ಯರೊಡನೆ ಚಾರಿತ್ರಿಕವಾಗಿ ಏರ್ಪಟ್ಟ ಸಂಪರ್ಕದಿಂದಾಗಿ ಮತ್ತು ಇಂಗ್ಲೀಷ್ ಭಾಷೆಯ ಕಲಿಕೆಯೊಡನೆ ಲಭ್ಯವಾದ ವೈಜ್ಞಾನಿಕ ಮಾಹಿತಿಗಳನ್ನು ಕನ್ನಡದಲ್ಲಿ ತಿಳಿಸುವ ಪ್ರಯತ್ನದೊಂದಿಗೆ ಗುರುತಿಸಿಕೊಳ್ಳುವುದು ರೂಢಿಯಲ್ಲಿದೆ".[೧೬] ಎಂದು ಹೇಳಿರುವಲ್ಲಿ ಇಂಗ್ಲೀಷ್ ಭಾಷೆಯ ಪ್ರಭಾವದೊಂದಿಗೆ ವಿಜ್ಞಾನ ಮಾಹಿತಿಯು ಕನ್ನಡದಲ್ಲಿ ದೊರೆಯುತ್ತಿದ್ದುದು ತಿಳಿದುಬರುತ್ತದೆ. ಜೊತೆಗೆ ಒಂದು ಭಾಷೆಯ ಮೇಲಿನ ಹಿಡಿತ ಹಾಗೂ ಭಾಷಾ ಪ್ರೌಢಿಮೆಯು ವಿಷಯದ ಆಳ ಅರಿವಿಗೆ ಅತ್ಯಗತ್ಯ. ಇದರಿಂದಾಗಿ ಜೀವಂತ ಸಮಾಜದ ಅಭಿವ್ಯಕ್ತಿಯ ಮಾಧ್ಯಮವಾದ ಭಾಷೆ ಮೂಲಕ ಪ್ರತಿಯೊಂದು ಕಾಲಘಟ್ಟದಲ್ಲಿನ ಚಿಂತನೆ ಹಾಗೂ ವೈಜ್ಞಾನಿಕ ವಿಚಾರಗಳನ್ನು ನಿಖರಗೊಳಿಸುವ ಶಬ್ದ

ಸಂಪತ್ತಿನ ಅಗತ್ಯತೆಯನ್ನು ವೈಜ್ಞಾನಿಕ ಕೃತಿ ಹಾಗೂ ಲೇಖನಗಳಲ್ಲಿ ಉಲ್ಲೇಖಿತ ಮಾಹಿತಿಯ ಅವಲೋಕನದೊಂದಿಗೆ ತಿಳಿಯಲಾಯಿತು.

ನಮ್ಮ ದೇಶದ ಮೇಧಾವಿ ಜ್ಞಾನಿಗಳಾದ ಮಹಾತ್ಮ ಗಾಂಧಿ, ಪಂಡಿತ ಜವಹರಲಾಲ್ ನೆಹರೂರವರಿಂದ ಹಿಡಿದು ವಿಜ್ಞಾನಿ ಎ.ಪಿ.ಜೆ.ಅಬ್ದುಲ್ ಕಲಾಂರವರವರೆಗೆ ಅಭಿಪ್ರಾಯ ಪಟ್ಟಂತೆ "ಅನಕ್ಷರತೆ, ಮೂಡನಂಬಿಕೆ ಅಂಧ ಆಚರಣೆಗಳಂತಹ ಜ್ವಲಂತ ಸಮಸ್ಯೆಗಳಿಗೆ ವಿಜ್ಞಾನದಿಂದ ಮಾತ್ರ ಪರಿಹಾರ ಒದಗಿಸಲು ಸಾಧ್ಯ". ಎಂತಹವರಿಗೂ ಬಡಿದೆಬ್ಬಿಸುವ ಈ ಒಂದು ಹೇಳಿಕೆಯಿಂದಲೇ ವಿಜ್ಞಾನ ಸಾಹಿತಿಗಳು ಪ್ರೇರೇಪಿತರಾಗಿ ಜನಸಾಮಾನ್ಯರಿಗೆ ವಿಜ್ಞಾನ ವಿಚಾರಗಳನ್ನು ತಲುಪಿಸುವ ಧೃಡ ನಿಲುವು ಹಾಗೂ ವೈಜ್ಞಾನಿಕ ಮಾಹಿತಿಯನ್ನು ಜನಸಾಮಾನ್ಯನೆಡೆಗೆ ತಲುಪಿಸುವ ಆಶಯ ಉದ್ದೇಶದಿಂದ ವೈಜ್ಞಾನಿಕ ಕೃತಿಗಳನ್ನು ರಚಿಸಿ ಪ್ರಕಟಿಸಲು ಮುಂದಾದರು. ವಿಜ್ಞಾನ ಸಾಹಿತಿಗಳು, ಜಾತಿ, ಮತ ಮತ್ತಿತರ ಯಾವುದೇ ಹಿತಾಸಕ್ತಿಗಳಿಗೆ ಒಳಗಾಗದೆ, ವೈಚಾರಿಕ ವಿಚಾರಗಳನ್ನೊಳಗೊಂಡ ಲೇಖನ ಕೃತಿಗಳನ್ನು ಬರೆದಿರುವುದರ ಫಲಶೃತಿಯಂತೆ ಬಹಳಷ್ಟು ವಿಜ್ಞಾನ ಪುಸ್ತಕಗಳು ಮುಕ್ತ ಚಿಂತನೆ ಮತ್ತು ಸಮಾಜದಲ್ಲಿ ನಡೆಯುವ ಪ್ರಚಲಿತ ನಂಬಿಕೆ ಆಚರಣೆಗಳನ್ನೆಲ್ಲಾ ಸಂದೇಹಿಸಿ ನೈಜತೆಯ ಜಾಡನ್ನು ತಿಳಿಯುವ ಮನೋಪ್ರವೃತ್ತಿಯನ್ನು ಬೆಳೆಸಲು ಸಹಕಾರಿಯಾದ ಸರಳ ಅಭಿವ್ಯಕ್ತಿಯಲ್ಲಿ ಪ್ರಕಟಗೊಂಡವು.

ವಿಜ್ಞಾನ ವಿಚಾರಗಳ ಸಂವಹನೆಗೆ ಸರಿಹೊಂದುವ ಕನ್ನಡ ಪದಗುಚ್ಚ, ನುಡಿಗಟ್ಟುಗಳು ಪ್ರಾರಂಭದಲ್ಲಿ ನಿರ್ಮಾಣವಾಗಿರಲಿಲ್ಲ. ಈ ಕಾಲದಲ್ಲಿ ಬರೆದ ಸಾಹಿತಿಗಳೂ ಕೂಡ ಶಿಷ್ಟ ಸಾಹಿತಿಗಳ ವರ್ಗದವರಾಗಿದ್ದರು. ಹೀಗಾಗಿ ವಿಜ್ಞಾನ ಸಂವಹನೆಯ ಭಾಷೆ ಯಾವ ನಿಟ್ಟಿನಲ್ಲಿ ಹೇಗೆ ತನ್ನ ಸ್ವರೂಪವನ್ನು ರೂಪಿಸಿಕೊಳ್ಳಬೇಕೆಂದು ನಿರ್ದೇಶಿಸಿದರೆ ಹೊರತು, ಕಾಲಕ್ಕೆ ತಕ್ಕಂತೆ ಪರಿವರ್ತಿತಗೊಳ್ಳುವ ವಿಭಿನ್ನ ಆಯಾಮಗಳಿಗೆ ತಮ್ಮನ್ನು ಅಳವಡಿಸಿಕೊಳ್ಳಲು ಸಿದ್ಧರಿರಲಿಲ್ಲ. ಇಂತಹ ಸಂದರ್ಭದಲ್ಲಿ ಇದಕ್ಕೆ ವಿರುದ್ಧವಾಗಿ ಕೆಲವು ಲೇಖಕರು ವಿಜ್ಞಾನ ವಿಷಯದ ಬಗ್ಗೆ ಆಸಕ್ತಿ ತೋರಿಸಿ, ತಮ್ಮ ಜ್ಞಾನ ತೃಷೆಯನ್ನು ಉತ್ಸಾಹವನ್ನು ತಣಿಸಲು ಅಗತ್ಯವಾದ ವೈಜ್ಞಾನಿಕ ವಿಚಾರಗಳನ್ನು ಕನ್ನಡದಲ್ಲಿ ಹೇಳುವುದರೊಂದಿಗೆ ವಿಜ್ಞಾನವನ್ನು ಸಾಮಾನ್ಯ ಜನರತ್ತ ಕೊಂಡೊಯ್ಯುವ ಪ್ರಯತ್ನಕ್ಕೆ ಮುಂದಾದರು. ಇವರು ವಿಜ್ಞಾನದ ಪರಿಕಲ್ಪನೆಗಳನ್ನು ಹಾಗೂ ಇಂಗ್ಲೀಷ್ ಮತ್ತು ಕನ್ನಡ ಭಾಷೆಗಳನ್ನು ಚೆನ್ನಾಗಿ ಅರ್ಥ ಮಾಡಿಕೊಂಡಿದ್ದ ಕಾರಣದಿಂದ ಯಾವುದೇ ಆತಂಕವಿಲ್ಲದೆ ಧೈರ್ಯವಾಗಿ ವಿಜ್ಞಾನ ಸಾಹಿತ್ಯ ಕೃಷಿಗೆ ಮುಂದಾದರು.

ವಿಜ್ಞಾನ ಅಧ್ಯಯನ ಹಾಗೂ ಬೋಧನೆಗೆ ಹೆಸರುವಾಸಿಯಾದ ಹಾಗೂ ವಿಜ್ಞಾನ ಬೋಧನೆಯ ಕರ್ಮಭೂಮಿ ಎಂದು ಕರೆಯಲ್ಪಡುವ ಬೆಂಗಳೂರಿನ ಸೆಂಟ್ರಲ್ ಕಾಲೇಜಿನ ಭೌತ ವಿಜ್ಞಾನದ ಪ್ರಾಧ್ಯಾಪಕರಾಗಿದ್ದ ಬೆಳ್ಳಾವೆ ವೆಂಕಟನಾರಣಪ್ಪ ಮತ್ತು ಮೈಸೂರಿನ ಪವನ ವಿಜ್ಞಾನ ಇಲಾಖೆಯಲ್ಲಿದ್ದ ನಂಗಪುರಂ ವೆಂಕಟೇಶ ಅಯ್ಯಂಗಾರ್, ಶಿವರಾಮ ಕಾರಂತ್, ಆರ್.ಎಲ್ ನರಸಿಂಹಯ್ಯ, ಜಿ.ಟಿ ನಾರಾಯಣರಾವ್, ಪೂರ್ಣಚಂದ್ರ ತೇಜಸ್ವಿ ಡಾ.ಸಿ.ಆರ್.ಚಂದ್ರಶೇಖರ್ ಮೊದಲಾದವರು ವಿಜ್ಞಾನ ವಿಚಾರಗಳನ್ನು ಜನಸಾಮಾನ್ಯರಿಗೆ ತಿಳಿಸುವ ಕಾರ್ಯ ಮಾಡಿರುವುದನ್ನು ಕಾಣಬಹುದು. ಇವರೆಲ್ಲರೂ ಕೇವಲ ವಿಜ್ಞಾನ ವಿದ್ಯಾರ್ಥಿಗಳು, ವಿಜ್ಞಾನಾಸಕ್ತರು ಮೊದಲಾದವರಿಗೆ ಮಾತ್ರವಲ್ಲದೆ ಎಲ್ಲಾ ವರ್ಗದವರಿಗೂ ರುಚಿಸಬಲ್ಲ, ಜ್ಞಾನ ದಾಹವನ್ನು ತಣಿಸಬಲ್ಲ ವಿಜ್ಞಾನ ವಿಚಾರಗಳನ್ನು ಯಾವುದೇ ಭಾಷೆಯ ಸಾಹಿತಿಗಳನ್ನಾಗಲಿ ಇಲ್ಲವೇ ಅವರ ರಚನಾ ಶೈಲಿಯನ್ನಾಗಲಿ ಅನುಕರಿಸದೇ ಕನ್ನಡ ಭಾಷೆಯಲ್ಲಿ ತಮ್ಮದೇ ವಿಶಿಷ್ಟ ಶೈಲಿಯಲ್ಲಿ ಮತ್ತೊಬ್ಬರು ಅನುಕರಣೆ ಮಾಡಲು ಸಾಧ್ಯವಾಗದ ಅಭಿವ್ಯಕ್ತಿ ಸ್ವರೂಪದಲ್ಲಿ ವಿಷಯ ವಿಚಾರಗಳನ್ನೊಳಗೊಂಡ ವೈಜ್ಞಾನಿಕ ಮನೋಭಾವವನ್ನು ಬೆಳೆಸುವಂತಹ ಲೇಖನಗಳನ್ನು ರಚಿಸಿದರು.

ಎಂದೋ ಬರೆದ ಇಂಗ್ಲೀಷಿನ ಲೇಖನದಷ್ಟೇ ಖಚಿತವಾದ ಅರ್ಥ ಹೊಮ್ಮಿಸುವಂತೆ ಸಂಪಾದಿತ ಲೇಖನಗಳನ್ನು ತಿದ್ದಿ, ಮರುಸೃಷ್ಟಿಸಿ, ನಿರ್ದಿಷ್ಟತೆಯನ್ನು ಕಾಪಾಡುತ್ತಿದ್ದರು. ಜೊತೆಗೆ ವಿಜ್ಞಾನ ಲೇಖನಗಳ ಭಾಷೆ ಹಾಗೂ ಶೈಲಿಯ ಅಗತ್ಯತೆಯನ್ನು ಮನಗಂಡು ಕಾವ್ಯಮಯವಾಗಿ ಕಥಾನಕವಾಗಿ ರೋಚಕವಾಗಿ ಎಲ್ಲ ಓದುಗ ಸಮೂಹವು ನಿಬ್ಬೆರಗಾಗುವಂತೆ ನಿಖರ ಹಾಗೂ ಗಂಭೀರವಾಗಿ ಬರೆದರು. ಅಲ್ಲದೆ ವಿಜ್ಞಾನ ಸಾಹಿತ್ಯ ರಚಿಸುವವರು ಬಳಸುತ್ತಿದ್ದ ಪಾರಿಭಾಷಿಕ ಶಬ್ದಗಳಲ್ಲೂ ಅಷ್ಟೇ ಖಚಿತತೆ ಮತ್ತು ಏಕರೂಪತೆಯಿರುವುದನ್ನು ಕಾಣಬಹುದು. ಅಂದರೆ ವಿಜ್ಞಾನ ಸಾಹಿತ್ಯದಲ್ಲಿ ಬಳಸಿದ ಪಾರಿಭಾಷಿಕ ಪದಗಳಾದ ಜಂಗಮವಾಣಿ(ಮೊಬೈಲ್), ವಿದ್ಯುತ್, ಅರ್ಬುದ(ಕ್ಯಾನ್ಸರ್), ಶಿರಸ್ತ್ರಾಣ(ಹೆಲ್ಮೆಟ್) ಮೊದಲಾದವುಗಳನ್ನು ಗಮನಿಸಬಹುದು.

ವಿಜ್ಞಾನದ ವಿಷಯಗಳು ಅರ್ಥೈಸಿಕೊಳ್ಳುವಲ್ಲಿ ತೊಡಕಾಗುತ್ತಿರುವುದನ್ನು ಮನಗಂಡ ವಿಜ್ಞಾನ ಲೇಖಕರು ಪ್ರಸಿದ್ಧ ವಿಜ್ಞಾನ ನಿಯತಕಾಲಿಕೆಗಳು, ವಿದ್ಯುನ್ಮಾನ ಮಾಧ್ಯಮಗಳು ಹಾಗೂ ಅಂತರ್ ಜಾಲಗಳಲ್ಲಿನ ಕೆಲವು ಮಾಹಿತಿ ಜಾಲತಾಣಗಳಲ್ಲಿ ತಮಗೆ ತಿಳಿದ, ಉಪಯೋಗಕಾರಿ ಜೊತೆಗೆ ಬೌದ್ಧಿಕವಾಗಿ ಸಹಕಾರಿಯಾದ ಮಾಹಿತಿಗಳನ್ನು ಅರ್ಥೈಸಿ ಕೊಂಡು, ಸಾಮಾನ್ಯವಾಗಿ ಎಲ್ಲರಿಗೂ ಸುಲಭವಾಗಿ ಅರ್ಥವಾಗುವಂತೆ ಲೇಖನಗಳನ್ನು ರಚಿಸಿ ಎಲ್ಲರಿಗೂ ದೊರಕುವಂತೆ ಮಾಡಿರುವುದನ್ನು ಗಮನಿಸಬಹುದು. ಉದಾಹರಣೆಗೆ

ಸಿ.ಆರ್. ಚಂದ್ರಶೇಖರ್, ಪ್ರಜಾವಾಣಿಯ ವಿಜ್ಞಾನ ವಿಶೇಷದ ಅಂಕಣಕಾರರಾದ ನಾಗೇಶ್ ಹೆಗಡೆ, ಮತ್ತು ಟಿ.ಆರ್.ಅನಂತರಾಮು, ಪ್ರಜಾವಾಣಿ ವಿಜ್ಞಾನ ವಿಹಾರದ ಅಂಕಣಕಾರರಾದ ಕೊಳ್ಳೆಗಾಲ ಶರ್ಮ, ಅಂತರ್ಮುಖಿಯ ಸುಧೀಂದ್ರ ಹಾಲ್ದೊಡ್ಡೇರಿ ಮೊದಲಾದವರು ವಿಜ್ಞಾನ ಸಾಹಿತ್ಯಕ್ಕೆ ಹೊಸ ದಿಕ್ಕನ್ನೇ ನೀಡಿರುವರು.

ಮತ್ತೆ ಕೆಲವು ವಿಜ್ಞಾನ ಲೇಖಕರಂತು ತಮ್ಮಲ್ಲಿರುವ ಹಾಸ್ಯ ಸ್ವಭಾವವನ್ನು ತಮ್ಮ ಲೇಖನಗಳಲ್ಲೂ ಅಭಿವ್ಯಕ್ತಿಯ ಸ್ವರೂಪವಾಗಿ ಬಳಸಿ ವೈಜ್ಞಾನಿಕ ವಿಚಾರಗಳನ್ನು ಎಲ್ಲರಿಗೂ ಮನಮುಟ್ಟುವಂತೆ ಮಾಡುವ ಮೂಲಕ ವಿಜ್ಞಾನ ಮಾಹಿತಿಗಳನ್ನು ಅರ್ಥೈಸಿ ಕೊಳ್ಳುವುದು ಮತ್ತು ಬದುಕಿನಲ್ಲಿನ ಬಹಳಷ್ಟು ಸಣ್ಣ ಪುಟ್ಟ ವಿಚಾರಗಳಿಗೆ ಅನ್ವಯಿಸಿಕೊಳ್ಳಲು ಸಹಕರಿಸಿರುವುದನ್ನು ಗಮನಿಸಬಹುದು. ಆಂದರೆ ಬಿ.ಜಿ.ಎಲ್.ಸ್ವಾಮಿ, ಪೂರ್ಣಚಂದ್ರ, ಕೃಷ್ಣಾನಂದ ಕಾಮತ್, ಡಾ.ಬಿ.ಎಸ್ ಶೈಲಜಾ, ಬಿ.ಆರ್.ಗುರುಪ್ರಸಾದ್ ಮೊದಲಾದವರ ಕೃತಿಗಳು ಅಗತ್ಯವಾದ ಸ್ಪಷ್ಟತೆ, ನಿಖರವಾದ ವಿಷಯ ಜ್ಞಾನ, ಪರಿಪಕ್ವವಾದ ಗ್ರಹಿಕೆ, ತೀರ ಬಿಗುವಿನಿಂದ ಕೂಡಿರದ ಹಾಸ್ಯಭರಿತ ನಿರೂಪಣಾ ಶೈಲಿ, ಯಾವುದೇ ವಿಕೃತ ರೂಪ ತಾಳದ ವಿಡಂಬನೆ, ವಿಸ್ಮಯಗಳ ಖಚಿತ ನಿರೂಪಣೆ ಮೊದಲಾದ ಸ್ವರೂಪದಿಂದ ಕೂಡಿರುವುದನ್ನು ಗಮನಿಸಬಹುದು.

ವಿಜ್ಞಾನ ಲೇಖಕರು ಭಾಷಾ ಮಡಿವಂತಿಕೆಯನ್ನು ಬದಿಗೊತ್ತಿ, ವಿಜ್ಞಾನ ಸಾಹಿತ್ಯ ಬರವಣಿಗೆಯು ತಮ್ಮ ಮನೋಭೂಮಿಕೆಗೆ ಒಗ್ಗುವುದಿಲ್ಲ ಎಂದು ಹಿಂಜರಿಯದೆ ಮುನ್ನುಗ್ಗಿ ಬರವಣಿಗೆಯನ್ನು ಮಾಡಿರುವುದರಿಂದ ಲೇಖನಗಳಿಗೆ ಒಂದು ಅಂದ ದೊರಕಿದೆ. ಪ್ರೊ.ಎಚ್.ಆರ್ ರಾಮಕೃಷ್ಣ ರಾವ್ ರವರು 'ಕನ್ನಡದಲ್ಲಿ ವಿಜ್ಞಾನ ಸಾಹಿತ್ಯ ನಡೆದು ಬಂದ ದಾರಿ' ಎಂಬ ಲೇಖನದಲ್ಲಿ "ಬೇರೆ ಬೇರೆ ವಿಜ್ಞಾನಾಧಾರಿತ ಉದ್ಯೋಗಗಳಲ್ಲಿ ನಿರತರಾದವರು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದ ಜಟಿಲವೆನಿಸಬಹುದಾದ ವಿಷಯಗಳ ಬಗ್ಗೆ ಆಕರ್ಷಕವಾದ ಶೈಲಿಯಲ್ಲಿ ಬರೆದಾಗ ಹೆಚ್ಚು ಹೆಚ್ಚು ಯುವಕ ಯುವತಿಯರು ಆ ಕ್ಷೇತ್ರಕ್ಕೆ ಪ್ರವೇಶಿಸುವ ಸಂಕಲ್ಪ ಮಾಡುತ್ತಾರೆ"[೧೭] ಎಂದು ಹೇಳಿರುವುದು ಇಲ್ಲಿ ಉಲ್ಲೇಖಾರ್ಹವಾಗಿದೆ.

ಕನ್ನಡ ಸಾಹಿತ್ಯ ಪ್ರಕಾರಗಳಾದ ಕಥೆ, ಕವನ, ಕಾದಂಬರಿ ಮೊದಲಾದವುಗಳ ವಸ್ತು, ಶೈಲಿ ಮತ್ತು ಅಭಿವ್ಯಕ್ತಿಯ ಸ್ವರೂಪದಲ್ಲಿ ವೈವಿಧ್ಯತೆ ಇರುವಂತೆ ವಿಜ್ಞಾನ ಸಾಹಿತ್ಯದಲ್ಲಿಯೂ ಇರುವುದನ್ನು ಕಾಣಬಹುದು. ಮೊದಲೆಲ್ಲ ವಿಜ್ಞಾನ ಸಾಹಿತ್ಯವನ್ನು ಸೃಜನೇತರ ಸಾಹಿತ್ಯವೆಂದು ಭಾವಿಸಲಾಗಿದ್ದದ್ದು, ಇತ್ತೀಚಿನ ಎರಡು ಮೂರು ದಶಕಗಳಲ್ಲಿ ಕನ್ನಡದಲ್ಲಿ ಪ್ರಕಟಿತವಾಗಿರುವ

ವಿಜ್ಞಾನ ಸಾಹಿತ್ಯವನ್ನು ಗಮನಿಸಿದ ನಂತರ ಇತರ ಸಾಹಿತ್ಯ ಪ್ರಕಾರದಂತೆ ಅದೂ ಸಹ ಸೃಜನಶೀಲ ಸಾಹಿತ್ಯವೆಂದು ಸಾಬೀತು ಪಡಿಸಲಾಗಿದೆ. ಇದನ್ನು ಸಮರ್ತಿಸುವಂತೆ ವಿಜ್ಞಾನ ಪ್ರಾಧ್ಯಾಪಕರೂ ಹಾಗೂ ವಿಜ್ಞಾನ ಸಾಹಿತಿಯಾದ ಡಾ.ಎ.ಓ.ಆವಲಮೂರ್ತಿಯವರು ತಮ್ಮ ಪಿ.ಹೆಚ್.ಡಿ ಪ್ರಬಂಧದಲ್ಲಿ (೨೦೦೦ ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯಕ್ಕೆ ಸಲ್ಲಿಸಲಾಗಿದ್ದ ಸಂಶೋಧನಾ ಪ್ರಬಂಧ) ವಿಜ್ಞಾನ ಸಾಹಿತ್ಯವು ಸೃಜನಶೀಲ ಸಾಹಿತ್ಯದ ಎಲ್ಲಾ ಲಕ್ಷಣಗಳನ್ನು ಹೊಂದಿದ್ದು, ಒಂದು ಸೃಜನಶೀಲ ಸಾಹಿತ್ಯವಾಗಿದೆ ಎಂದು ಹೇಳಿದ್ದಾರೆ.

ನೇರ, ಸರಳ ವಿಶ್ಲೇಷಣೆ ವಿವರಣೆ ನೀಡುವ ವಿಜ್ಞಾನ ಮಾಹಿತಿ ಪುಸ್ತಕಗಳು, ವೈಜ್ಞಾನಿಕ ಸಾಧನ ಉಪಕರಣಗಳ ಬಗ್ಗೆ ತಿಳಿಸುವ ಚುಟುಕುಗಳು, ಒಗಟುಗಳು, ಸಣ್ಣ ಸಣ್ಣ ಕವನಗಳು ಹಾಗೂ ವಿಜ್ಞಾನ ವಿಷಯಾಧಾರಿತ ಕಲ್ಪಿತ ಕಾದಂಬರಿ, ಕಥೆಗಳು ಮತ್ತಿತರ ಪ್ರಕಾರಗಳು ವಿಭಿನ್ನ ವಸ್ತು ಮತ್ತು ಅಭಿವ್ಯಕ್ತಿಯ ಸ್ವರೂಪದೊಂದಿಗೆ ಪ್ರಕಟಗೊಂಡಿರುವುದು ಅಧ್ಯಯನದಲ್ಲಿ ಕಂಡುಕೊಳ್ಳಲಾಗಿದೆ.

ವಿಜ್ಞಾನ ವಿಷಯಗಳನ್ನು ಜನರಿಗೆ ತಲುಪಿಸುವಲ್ಲಿ ಭಾಷಾಂತರ, ಅನುವಾದ ಬಹುಮುಖ್ಯ ಹಾಗೂ ಅತ್ಯಗತ್ಯ. ವಿಜ್ಞಾನ ತಂತ್ರಜ್ಞಾನದ ವಿಷಯಗಳನ್ನು ತಿಳಿದುಕೊಳ್ಳುವಲ್ಲಿ ಪಾರಿಭಾಷಿಕ ಶಬ್ದಗಳ ಹಾಗೂ ಭಾಷೆಯ ಸಮಸ್ಯೆಗಳು ಉಂಟಾಗುತ್ತವೆ. ಬಹಳಷ್ಟು ಸಂದರ್ಭಗಳಲ್ಲಿ ಪಾರಿಭಾಷಿಕ ಶಬ್ದಗಳ ಸಮಸ್ಯೆಯಿಂದಾಗಿ ಅರ್ಥವಿವರಣೆಗಾಗಿ ಶಬ್ದ ಉತ್ಪತ್ತಿ ಶಾಸ್ತ್ರಗಳ ಮೊರೆ ಹೋಗುವ ಸ್ಥಿತಿಗಳು ಎದುರಾಗುತ್ತವೆ. ಮೂಲ ಪದದ ಅರ್ಥವನ್ನು ಅರಗಿಸಿಕೊಂಡು ಅದರ ಸ್ವರೂಪಕ್ಕೆ, ಭಾಷೆಗೆ ತಕ್ಕಂತೆ ಪದಗಳನ್ನು ಬಳಸುವುದು ಬಹಳ ಮುಖ್ಯ. ಹೀಗಾದಾಗ ಮಾತ್ರ ಬೇರೊಂದು ಭಾಷೆಯಲ್ಲಿ ಪ್ರಕಟವಾದ ಪ್ರಮುಖ ಕೃತಿಗಳು ಇತರ ಭಾಷೆಗಳಲ್ಲಿ ಅಂದರೆ ಕನ್ನಡದಲ್ಲೂ ಸಿಗುವಂತಾಗುತ್ತದೆ.

ವಿಜ್ಞಾನ ಪ್ರಗತಿಯ ಇಂದಿನ ದಿನಗಳಲ್ಲಿ ವಿಜ್ಞಾನ ಕ್ಷೇತ್ರದಲ್ಲಿನ ಸಾಧನೆಗಳು, ದೈನಂದಿನ ನಮ್ಮ ಬದುಕಿನಲ್ಲಿ ಹೊಸ ತಿರುವಿಗೆ ಕಾರಣವಾಗುತ್ತಿದೆ. ಇಂತಹದ್ದರಲ್ಲಿ ಬೇರೆ ಭಾಷೆಯಲ್ಲಿ ಪ್ರಕಟಗೊಂಡ ವಿಜ್ಞಾನ ಮಾಹಿತಿಯಿಂದ ಎಲ್ಲವನ್ನೂ ಕಲಿಯಲೂ ತಿಳಿದುಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ಇಂದಿನ ಸ್ಥಿತಿಗತಿಗೆ ಅಗತ್ಯವಾದ ಕೃತಿಗಳು ಅಲಭ್ಯವಾಗುತ್ತಿವೆ ಎಂಬುದನ್ನು ಗಮನಿಸಿದ ಬಹಳಷ್ಟು ವಿಜ್ಞಾನ ಲೇಖಕರು ಅನುವಾದ ಮತ್ತು ಭಾಷಾಂತರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡು ಇತರ ಭಾಷೆಗಳಲ್ಲಿನ ವೈಜ್ಞಾನಿಕ ವಿಷಯವನ್ನು ಜನಸಾಮಾನ್ಯರಲ್ಲಿಗೆ ಕೊಂಡೊಯ್ಯುವ ಪ್ರಯತ್ನವನ್ನು ಮಾಡಿರುವುದು ಪ್ರಮುಖವಾಗಿದೆ.

ವಿಜ್ಞಾನ ಸಾಹಿತ್ಯದಲ್ಲಿನ ಕೆಲವು ಕೃತಿಗಳು ಅನುವಾದಗೊಂಡ ಕೃತಿಗಳಾಗಿವೆ, ಹೀಗಾಗಿ ಭಾಷಾಂತರ/ಅನುವಾದದದಲ್ಲಿ ತೊಡಗುವವರು ಭಾಷೆ ಮತ್ತು ವಿಷಯದ ಪರಿಚಯ

ತಿಳುವಳಿಕೆ ಹೊಂದಿದ್ದು, ತಮ್ಮ ತಮ್ಮ ಭಾಷೆಯಲ್ಲಿನ ವಿಜ್ಞಾನ ಕೃತಿಗಳನ್ನು ಭಾಷಾಂತರಿಸುವುದರಿಂದ ಎಲ್ಲರಿಗೂ ಉಪಯೋಗವಾಗುತ್ತದೆ. ಆದುದರಿಂದ ಅನುವಾದ ಮತ್ತು ಭಾಷಾಂತರ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಬಹಳಷ್ಟು ಲೇಖಕರು ತಮಗೆ ತಿಳಿದ, ಕೇಳಿದ, ಓದಿದ ವೈಜ್ಞಾನಿಕ ವಿಷಯಗಳನ್ನು ತಮ್ಮದೇ ಆದ ಸ್ವಂತ ಅಭಿವ್ಯಕ್ತಿಯೊಂದಿಗೆ ಹೊರತರುವ ಕಾರ್ಯ ಮಾಡಿ ಯಶಸ್ವಿಯಾಗಿದ್ದಾರೆ. ಇದರ ಫಲಸ್ವರೂಪದಂತೆ ಬಾಹ್ಯಾಕಾಶದಿಂದ ಹಿಡಿದು ನ್ಯಾನೋ ತಂತ್ರಜ್ಞಾನದವರೆಗೆ, ಜೀವಿಯ ಸೃಷ್ಟಿಗೆ ಕಾರಣವಾಗುವ ಜೀವಕಣದ ಅನ್ವೇಷಣೆಯಿಂದ ಬೇರೆ ಗ್ರಹಗಳಲ್ಲಿ ವಾಸವಾಗಿದ್ದಾರೆ ಎಂಬುದರ ಆಧಾರದ ಮೇಲೆ ಅನ್ಯಗ್ರಹ ಜೀವಿಗಳ ಇರುವಿಕೆಯ ಸಾಧ್ಯತೆಯವರೆಗೆ, ಕೃತಕ ಬುದ್ಧಿಮತ್ತೆಗೆ ಹೆಸರಾದ ರೋಬೋ ತಂತ್ರಜ್ಞಾನದಿಂದ ಹಿಡಿದು ತದ್ರೂಪಿಗಳ ಸೃಷ್ಟಿಯವರೆಗೆ ಬಹಳಷ್ಟು ವಿಜ್ಞಾನ ವಿಷಯಗಳು ಕನ್ನಡ ವಿಜ್ಞಾನ ಸಾಹಿತ್ಯದಲ್ಲಿ ಸ್ಥಾನ ಪಡೆದುಕೊಂಡಿದೆ.

ಇಂದಿನ ಜಗತ್ತು ಜಾಗತೀಕರಣದಿಂದಾಗಿ ಆಲೋಚನೆ, ಆಚರಣೆಗಳನ್ನು ಬದಲಾಗುತ್ತಿದ್ದು, ಅಂಥ ಆಚರಣೆಯನ್ನು ಬದಿಗೊತ್ತಿ ಎಲ್ಲವನ್ನು ಸಂದೇಹಿಸುವ, ಪ್ರಶ್ನಿಸುವ, ನೈಜತೆಯ ಜಾಡನ್ನು ಸೀಳುವ ಪ್ರವೃತ್ತಿಯು ಜನಸಾಮಾನ್ಯರಲ್ಲಿ ಮೂಡುತ್ತಿದೆ. ವಿಜ್ಞಾನ ತಂತ್ರಜ್ಞಾನದ ಬೆಳವಣಿಗೆಯಿಂದ ಇಡೀ ಪ್ರಪಂಚವೇ ಒಂದು ಸಣ್ಣ ಪ್ರದೇಶವಾಗಿ ಮಾರ್ಪಡುತ್ತಿದೆ. ಜಾಗತಿಕ ಅಂತರ್‌ಸಂಬಂಧಗಳ ನೆಲೆಯಲ್ಲಿ ಸಾಹಿತ್ಯ ಸಂಸ್ಕೃತಿ, ವಿಜ್ಞಾನ ತಂತ್ರಜ್ಞಾನ, ಶಿಕ್ಷಣ, ಕೈಗಾರಿಕೆ, ಆರ್ಥಿಕತೆ, ರಾಜಕೀಯ ಎಲ್ಲವೂ ಒಂದಕ್ಕೊಂದು ಅವಲಂಬಿಸಿ ವಿಕಾಸಗೊಳ್ಳುತ್ತಿವೆ. ಹೀಗಾಗಿ ಜಗತ್ತಿನ ಯಾವ ಮೂಲೆಯಲ್ಲಿ ಏನೇ ಆದರೂ ತೆರೆಮರೆಯಲ್ಲಿ ಉಳಿಯಲಾರದು.

ಈ ಹಿನ್ನೆಲೆಯಲ್ಲಿ ಸಾಮಾಜಿಕ, ರಾಜಕೀಯ, ಸಾಹಿತಿಕ, ಸಾಂಸ್ಕೃತಿಕ, ವೈಜ್ಞಾನಿಕ ಯಾವುದೇ ಕ್ಷೇತ್ರದಲ್ಲಿ ಆಗುವ ಪರಿವರ್ತನೆಯು ಯಾಂತ್ರಿಕವಾಗಿ ಆಗದೆ, ಜನರ ತಿಳುವಳಿಕೆ ಅನುಭವ ಯೋಚನೆಗಳೊಂದಿಗೆ ಪರಿವರ್ತಿತಗೊಳ್ಳುವಲ್ಲಿ ಸಾಹಿತ್ಯ ಮತ್ತು ಅದನ್ನು ನಿರೂಪಿಸುವ ಭಾಷೆಯು ಪ್ರಮುಖವಾಗಿದೆ. ವಿಷಯ ವಿಚಾರ ಮಾಹಿತಿಯು ವಿನಿಮಯ ಆಗಬೇಕಾಗಿರುವುದು ಇಂದಿನ ಜಾಗತಿಕ ಅವಶ್ಯಕತೆಯಾಗಿರುವುದರಿಂದ ಭಾಷಾಂತರ/ ಅನುವಾದವು ಪ್ರಮುಖ್ಯತೆಯನ್ನು ಹೊಂದಿದೆ. ಜಾಗತಿಕ ಮಾಹಿತಿಯನ್ನೊಳಗೊಂಡ ವಿವಿಧ ಭಾಷೆಗಳ ಉಪಯುಕ್ತ ಮಾಹಿತಿಯನ್ನು ತಮ್ಮ ಭಾಷೆಗೆ ಭಾಷಾಂತರಿಸುವುದರಿಂದ ಜ್ಞಾನ ವಿಕಾಸಕ್ಕೆ, ಜ್ಞಾನಾರ್ಜನೆಗೆ, ವಿಷಯ ಸಂಗ್ರಹಣೆಗೆ ಹಾಗೂ ಬಳಕೆಗೆ ಸಹಕಾರಿಯಾಗಿದೆ.

ಉತ್ತಮ ಭಾಷಾಂತರದ ತತ್ವಗಳಾದ ವಿಧೇಯತಾ ತತ್ವ, ಆನಂದ ತತ್ವ, ಮೂಲಾಧಾರ ತತ್ವ, ಅನುರೂಪ ತತ್ವ, ಪರಿಹಾರ ತತ್ವಕ್ಕನುಗುಣವಾಗಿ ಆಂತರಿಕ, ಅಂತರ್,

ಸಂಜ್ಞಾವ್ಯವಸ್ಥೆಯೆಂಬ ಭಾಷಾಂತರ ವಿಧಗಳು ಕಾರ್ಯಪ್ರವೃತ್ತಗೊಳ್ಳುತ್ತವೆ. ಮೂಲ ಕೃತಿಯ ಯಥಾರ್ಥ ರೂಪದಂತೆ, ಯಾವ ಭಾಷೆಗೆ ಭಾಷಾಂತರಿಸಲಾಗುತ್ತಿದೆಯೋ, ಆ ಭಾಷೆಯ ಜನರಿಗೆ ಅರ್ಥವಾಗುವಂತೆ, ಒಪ್ಪಿಗೆಯಾಗುವಂತೆ ನಿರೂಪಿತಗೊಂಡಿರುವುದು ಉತ್ತಮ ಭಾಷಾಂತರ ನಿರೂಪಣೆಯ ಮೂಲ ಲಕ್ಷಣ. ಹೀಗಾಗಿಯೇ ಸಾಹಿತ್ಯದ ಎಲ್ಲಾ ಕ್ಷೇತ್ರಗಳಲ್ಲಿ ಭಾಷಾಂತರ ಕಾರ್ಯ ನಡೆದಿದ್ದು ವಿಜ್ಞಾನ ಸಾಹಿತ್ಯವು ಅದರಿಂದ ಹೊರತಾದುದಲ್ಲ. ನಿರ್ದಿಷ್ಟತೆ, ಸಂಕ್ಷಿಪ್ತತೆ, ಸರಳತೆ, ಸ್ಪಷ್ಟತೆ, ಶುದ್ಧತೆ, ಅರ್ಥಬದ್ಧತೆಗನುಗುಣವಾಗಿ ವಿಜ್ಞಾನ ಸಾಹಿತ್ಯದಲ್ಲಿ ಭಾಷಾಂತರ ನಿರೂಪಣೆಯು ನಡೆದಿರುವುದನ್ನು ಗುರುತಿಸಬಹುದು.

ವಿಜ್ಞಾನ ಸಾಹಿತ್ಯದ ಬಹಳಷ್ಟು ವಿಷಯಗಳು ಭಾಷಾಂತರ /ಅನುವಾದಕ್ಕೊಳಗಾಗಿರುವುದರಿಂದ, ವಿಜ್ಞಾನ ಸಾಹಿತ್ಯದ ಭಾಷಾಂತರವು ಹೇಗಿದೆ ಎಂದರೆ, ಓದುಗರಿಗೆ ಮೂಲ ಕೃತಿಯನ್ನೇ ಓದುತ್ತಿದ್ದೇವೆ ಎಂಬ ಭಾವನೆ ಹಾಗೂ ಅನುಭವವುಂಟು ಮಾಡುವ ವಿಶೇಷತೆಯಿಂದ ಕೂಡಿದೆ. ಮೂಲಕೃತಿಯ ಅನುರೂಪದಂತೆಯೇ ವಸ್ತು ನಿರೂಪಣಾ ಕ್ರಮ ಭಾಷಾಶೈಲಿ ಮೊದಲಾದವು ಯಥಾರ್ಥ ರೂಪದಂತೆ ಭಾಷಾಂತರ/ಅನುವಾದದಲ್ಲಿ ಮೂಡಿಬಂದಿರುವುದನ್ನು ಗುರುತಿಸಬಹುದು.

ಅನುವಾದಿತ ಕೃತಿಯಲ್ಲಿ ಶಬ್ದಾನುವಾದಕ್ಕಿಂತ ಅರ್ಥಾನುವಾದ, ಭಾವಾನುವಾದ ಹಾಗೂ ವಿಷಯಾನುವಾದಕ್ಕೆ ಹೆಚ್ಚಿನ ಆಧ್ಯತೆ ನೀಡಲಾಗಿರುತ್ತದೆ. ಹೀಗಾಗಿ ಬಹಳಷ್ಟು ಲೇಖಕರು ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ಓದುಗರಿಗೆ ಒಪ್ಪಿಗೆಯಾಗುವಂತೆ ಅರ್ಥವಾಗುವಂತೆ ನಿರೂಪಿಸಿರುವುದು ವಿಶೇಷವಾಗಿದೆ. ಅಲ್ಲದೆ ಮೂಲಭಾಷೆ ಮತ್ತು ವಿಷಯಗಳೆರಡನ್ನು ಯಥಾವತ್ತಾಗಿ ಪ್ರತಿಬಿಂಬಿಸುವಂತೆ ರಚಿಸಲಾಗಿರುವುದರಿಂದ ಓದುಗನಿಗೆ ಸಹಕಾರಿಯಾಗುವುದು. ಭಾಷೆಯ ವಿಲಾಸದಲ್ಲಿ ಯಾವುದೇ ವಿಷಯವನ್ನು ಕಡೆಗಣಿಸದೆ ಭಾಷೆಯಷ್ಟೇ ಶ್ರದ್ಧೆ ಹಾಗೂ ನಿಯಮದಂತೆ ಜಾಣ್ಮೆಯಿಂದ ವ್ಯಕ್ತ ಪಡಿಸಲಾಗಿರುವುದನ್ನು ಗಮನಿಸಬಹುದು. ಆದರೂ ಇತರ ವಿಜ್ಞಾನ ಸಾಹಿತ್ಯ ಹಾಗೂ ಸಾಹಿತ್ಯದ ವಿಷಯಗಳ ಅನುವಾದವು ಗರಿಷ್ಟ ನಿರೀಕ್ಷೆಯ ಮಟ್ಟವನ್ನು ತಲುಪದಿರುವುದನ್ನು ಕಾಣಬಹುದು. ಅಲ್ಲದೇ ಅನುವಾದಿಸುವಾಗ ಅನ್ಯದೇಶದ ಪದಗಳನ್ನು ಕೆಲವು ಸಂದರ್ಭದಲ್ಲಿ ಎಥಾವತ್ತಾಗಿ ಮೂಲ ಭಾವಕ್ಕೆ ಅರ್ಥಕ್ಕೆ ಚ್ಯುತಿಬರದಂತೆ ಉಪಯೋಗಿಸಿರುವುದನ್ನು ಗಮನಿಸಬಹುದು. ಉದಾಹರಣೆಗೆ ಪೂರ್ಣಚಂದ್ರ ತೇಜಸ್ವಿರವರ ವಿರಚಿತ ಫ್ಲೈಯಿಂಗ್ ಸಾಸರ್ಸ್ ಕೃತಿಯಲ್ಲಿ ಹೇಳಿರುವಂತೆ 'ಯು.ಎಫ್.ಒ ಫ್ಲೈಯಿಂಗ್ ಸಾಸರ್‌ಗಳೆಂಬ ಪದಗಳು ಈಗ ಜಾಗತಿಕ ವಿಜ್ಞಾನ ಕ್ಷೇತ್ರದಲ್ಲಿ ಹೆಚ್ಚು ಕಡಿಮೆ ಪಾರಿಭಾಷಿಕ ಪದಗಳಾಗಿವೆ. ಈ ಪದಗಳನ್ನು ತರ್ಜುಮೆ

ಮಾಡಿ ಕನ್ನಡದಲ್ಲಿ ಉಪಯೋಗಿಸುವ ಬದಲು ಹಾಗೇ ಉಪಯೋಗಿಸಿ ಇದನ್ನು ಕನ್ನಡದ ಪದವಾಗಿಸಿಕೊಳ್ಳುವುದು ಒಳ್ಳೆಯದು'[೧೮] ಎಂಬ ವಿವರಣೆಯಲ್ಲಿ ಪಾರಿಭಾಷಿಕ ಪದಗಳ ಯಥಾವತ್ತಾದ ಬಳಕೆಯ ಅಗತ್ಯ ಅನಿವಾರ್ಯತೆಯನ್ನು ಕಾಣಬಹುದು.

ಈಗಲೂ ಬಹಳಷ್ಟು ವಿಜ್ಞಾನದ ವಸ್ತು ವಿಷಯಗಳು ಇತರ ಭಾಷೆಗಳಲ್ಲಿ ಮತ್ತು ಇಂಗ್ಲೀಷಿನಲ್ಲಿ ದೊರೆತಷ್ಟು ಕನ್ನಡದಲ್ಲಿ ದೊರೆಯುವುದಿಲ್ಲ. ಹೀಗಾಗಿ ಮಾಹಿತಿಯ ತಿಳುವಳಿಕೆ ಹಾಗೂ ವಿಷಯದ ಪರಿಪೂರ್ಣತೆಗಾಗಿ ಇತರ ಭಾಷಾ ಸಾಹಿತ್ಯಗಳ ಮೊರೆ ಹೋಗುವಂತ ವಿಷಮ ಸ್ಥಿತಿಯನ್ನು ಗಮನಿಸಿದ ಬಹಳಷ್ಟು ವಿಜ್ಞಾನ ಸಾಹಿತಿಗಳು ಭಾಷಾಂತರ/ಅನುವಾದದ ಮೂಲಕ ಇತರ ಭಾಷೆಗಳಲ್ಲಿನ ವಿಜ್ಞಾನ ವಿಷಯಗಳನ್ನು ಕನ್ನಡದಲ್ಲಿ ಪ್ರಕಟಪಡಿಸಿರುವುದನ್ನು ಗಮನಿಸಬಹುದು.

ಇತರ ಸಾಹಿತ್ಯ ಪ್ರಕಾರಗಳ ಅನುವಾದ/ಭಾಷಾಂತರಕ್ಕಿಂತ ವಿಜ್ಞಾನ ಸಾಹಿತ್ಯದ ಅನುವಾದವು ಭಿನ್ನವಾಗಿರುವುದನ್ನು ಕಾಣಬಹುದು. ಅಂದರೆ ವಿಜ್ಞಾನ ಸಾಹಿತ್ಯ ಇಲ್ಲವೇ ಲೇಖನಗಳನ್ನ ಭಾಷಾಂತರಿಸುವಾಗ ಅನುವಾದಕನು ದ್ವಿಭಾಷಾ ಪಂಡಿತ್ಯ ಇಲ್ಲವೇ ಜ್ಞಾನವನ್ನು ಹೊಂದಿರಬೇಕು. ಅಂದರೆ ಮೂಲ ಕೃತಿಯ ಭಾಷೆ ಹಾಗೂ ಅನುವಾದಿಸುವ ಭಾಷೆಯ ಮೇಲೆ ಹಿಡಿತವನ್ನು ಹೊಂದಿದ್ದು, ಭಾಷಾಂತರಿಸುವಾಗ ಇಲ್ಲವೇ ಅನುವಾದಿಸುವಾಗ ಬಹಳ ಎಚ್ಚರಿಕೆಯಿಂದ ಮೂಲ ಕೃತಿ/ಲೇಖನದ ಅರ್ಥಕ್ಕೆ ಯಾವುದೇ ದಕ್ಕೆಯಾಗದಂತೆ ಹಾಗೂ ವಿಷಯವನ್ನು ಪೂರ್ಣವಾಗಿ ಓದುಗರಿಗೆ ಅರ್ಥವಾಗುವಂತೆ ಬರೆಯಬೇಕಾಗು ವುದು. ಕೇವಲ ಪದ ಹಾಗೂ ಪದಗಳ ಅರ್ಥ ಬದಲಾವಣೆಯೊಂದಿಗೆ ಮಾಡುವ ಅನುವಾದ ಕಾರ್ಯವು ನಿಸ್ಸಾರದಿಂದ ಕೂಡಿದ್ದು, ವಿಷಯ ವಿಚಾರವು ಜನತೆ ಸಮಾಜದಿಂದ ದೂರವಾಗಬಹುದು. ಹೀಗಾಗಿ ಬಹಳಷ್ಟು ವಿಜ್ಞಾನ ಸಾಹಿತ್ಯದ ಅನುವಾದಕರು ಅನುವಾದ ಹಾಗೂ ಭಾಷಾಂತರ ಕಾರ್ಯವನ್ನು ಬಹಳ ಎಚ್ಚರಿಕೆಯಿಂದ ಆದಷ್ಟು ಜನತೆಯ ಸುಲಭ ಗ್ರಾಹ್ಯಕ್ಕೆ ಅನುಕೂಲವಾಗುವ ಅಭಿವ್ಯಕ್ತಿ ಹಾಗೂ ಪದಗಳ ಬಳಕೆಯೊಂದಿಗೆ ಮಾಡಿರುವುದನ್ನು ಗುರುತಿಸಬಹುದು.

ವಿಜ್ಞಾನವು ನಿತ್ಯಜೀವನದ ಪ್ರತಿಯೊಂದರ ಮೇಲು ತನ್ನ ಗಾಢ ಪ್ರಭಾವ ಬೀರಿರುವುದು ಪ್ರತಿದಿನವು ಉಪಯೋಗಿಸುವ ಮೊಬೈಲ್ ಫೋನ್‌ನಿಂದ ಹಿಡಿದು ಮನೆಯಲ್ಲಿ ಪ್ರತಿಯೊಬ್ಬ ಗೃಹಿಣಿಯ ಮೇಲೆ ಪ್ರಭಾವ ಬೀರಿರುವ ಟಿ.ವಿ ಚಾನೆಲ್‌ಗಳ ಜನಪ್ರಿಯತೆಯ ಹೆಚ್ಚಿಕೆಯು ಸೂಚಿಸುವುದು. ವಿಜ್ಞಾನ ತಂತ್ರಜ್ಞಾನದ ಪ್ರಭಾವವು ಜನತೆಯ ಮೇಲೆ ಸಮಾಜದ ಮೇಲೆ ಆವರಿಸಿದಷ್ಟು, ಜೀವನದ ಮೇಲೆ ಮಹಾಕ್ರಾಂತಿಯೇ ಸಂಭವಿಸಿದೆ. ಕೈಗಾರಿಕೆ, ಕೃಷಿ, ವಾಣಿಜ್ಯ, ಆರೋಗ್ಯ, ಕ್ರೀಡೆ, ಮಾಹಿತಿ ಸಂಪರ್ಕ, ಫ್ಯಾಶನ್, ಶೈಕ್ಷಣಿಕ ಮತ್ತಿತರ

ಕ್ಷೇತ್ರದ ಮೇಲೆ ನಿರೀಕ್ಷೆಗೂ ಮೀರಿದ ಸುಧಾರಣೆ ಬದಲಾವಣೆಯನ್ನು ತರುತ್ತಿರುವ ವಿಜ್ಞಾನ ಇಡೀ ಮನುಕುಲವನ್ನೇ ತನ್ನ ಪರವಶ ಮಾಡಿಕೊಳ್ಳುತ್ತಾ ಮಾನವನ ಬದುಕನ್ನೆ ಬದಲಾಯಿಸುತ್ತಿದೆ. ಇಂತಹದ್ದರಲ್ಲಿ ಹೆಚ್ಚು ಮಾಹಿತಿಯನ್ನೊಳಗೊಂಡ ವಿಜ್ಞಾನ ಕೃತಿಗಳ ಅಗತ್ಯವು ಅತ್ಯಧಿಕ. ಹೀಗಾಗಿ ಕೇವಲ ನಮ್ಮಲ್ಲಿರುವ ವೈಜ್ಞಾನಿಕ ಮಾಹಿತಿಗಳನ್ನೊಳಗೊಂಡ ಲೇಖನ ಕೃತಿಗಳು ಸಾಲದು. ಅವುಗಳ ಜೊತೆ ಜೊತೆಯಲ್ಲಿಯೇ ಇತರ ಭಾಷೆಯಲ್ಲಿನ ಕೃತಿಗಳ ಅನುವಾದ ಭಾಷಾಂತರವು ಅನಿವಾರ್ಯವಾಗಿರುವುದನ್ನು ಮನಗಂಡ ಬಹಳಷ್ಟು ವಿಜ್ಞಾನ ಲೇಖಕರು ಅಗತ್ಯ ಮಾಹಿತಿಯನ್ನೊಳಗೊಂಡ ಕೃತಿಗಳನ್ನು ಹಾಗೂ ಲೇಖನಗಳನ್ನು ಅನುವಾದ/ಭಾಷಾಂತರ ಮಾಡಿರುವುದನ್ನು ಕಾಣಬಹುದು.

ಇತರ ಭಾಷೆಯಲ್ಲಿನ ವೈಜ್ಞಾನಿಕ ಮಾಹಿತಿಯನ್ನು ಜನಜನಿತ ಭಾಷೆಯಲ್ಲಿ ಅನುವಾದಿಸುವುದು ಸುಲಭದ ಕೆಲಸವಲ್ಲ. ಮೊದಲೇ ಸೃಷ್ಟಿಯಾದದ್ದನ್ನು ಮರುಸೃಷ್ಟಿಸುವುದು ಅಂದರೆ ಸೃಷ್ಟಿಗಿಂತ ಮರುಸೃಷ್ಟಿಯು ಸುಲಭವಾದುದಲ್ಲ. ಮೂಲಕೃತಿಯ ರಚನಾ ಆಕೃತಿಯನ್ನು ಯಥಾವತ್ತಾಗಿ ಅರ್ಥಕೆಡದಂತೆ ಅನುವಾದಿಸುವುದು ಸವಾಲಿನ ಕಾರ್ಯ. ಭಾಷೆ, ವಿಷಯ ಪರಿಣತಿ, ಶೈಲಿ, ನಿರೂಪಣೆ ಮೊದಲಾದವುಗಳಿಗೆ ಸಂಬಂಧಿಸಿದಂತೆ ಅನೇಕ ಸಮಸ್ಯೆ ಸವಾಲುಗಳನ್ನು ಎದುರಿಸಬೇಕಾಗುವುದು. ಅಂತಹ ಅನುವಾದದ/ಭಾಷಾಂತರದ ಸಮಸ್ಯೆ ಸವಾಲುಗಳನ್ನು ನಿವಾರಿಸಿಕೊಳ್ಳುವ ಸಾಧ್ಯತಾ ನಿಯಮಗಳನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಯಿತು.

ಅನುವಾದ/ಭಾಷಾಂತರದಲ್ಲಿ ಅನುಸರಿಸಬೇಕಾದ ಸಾಧ್ಯತಾ ನಿಯಮಗಳು

೧. ಅನುವಾದಿಸುವಾಗ ಅನುವಾದಿಸುವ ವಿಷಯದ ಮೂಲ ಪದಗಳ ಭಾವ ಮತ್ತು ಅರ್ಥಕ್ಕೆ ಯಾವುದೇ ದಕ್ಕೆಯಾಗದಂತೆ ಯಥಾವತ್ತಾಗಿ ಪಡಿಮೂಡುವಂತೆ ರಚಿಸಬೇಕು. ಯಾವುದೇ ಕೃತಕತೆಯಿಂದ ದೂರವಿರಬೇಕು. ಸಂಶೋಧನಾತ್ಮಕ ಅಧ್ಯಯನಕ್ಕೆ ಬಳಸಿದ ಅನುವಾದಿತ ಕೃತಿಗಳಾದ ಅನಂತರಾಮುರವರಿಂದ ಅನುವಾದಿಸಲ್ಪಟ್ಟ 'ನಮ್ಮ ಜಲಸಂಪನ್ಮೂಲಗಳು', ನಾಗೇಶ್ ಹೆಗಡೆಯವರಿಂದ ಅನುವಾದಗೊಂಡ 'ಗಾಳಿಗೆ ವಿಷ ನೀರಿಗೆ ವಿಷ', ಲಕ್ಷ್ಮೀಕಾಂತ ಹೆಗಡೆಯವರ ಭಾರತದಲ್ಲಿ 'ವಿಜ್ಞಾನ–ಒಂದು ಐತಿಹಾಸಿಕ ನೋಟ' ಮೊದಲಾದ ಕೃತಿಗಳು ಮೂಲ ಕೃತಿಗಳಂತೆ ವಿಷಯ ವಿಚಾರಕ್ಕೆ ದಕ್ಕೆಯಾಗದಂತೆ ಯಥಾವತ್ತಾಗಿ ಮೂಡಿಬಂದಿರುವುದನ್ನು ಗುರುತಿಸಲಾಯಿತು.

೨. ಅನುವಾದಿಸುವಾಗ ಅನುವಾದಕನಿಗೆ ವಿಷಯ ಜ್ಞಾನವು ಯಥೇಚ್ಛವಾಗಿರಬೇಕು. ಅನುವಾದ ಮಾಡುವಾಗ ಓದಿ ಗ್ರಹಿಸಿದ ವಿಷಯವನ್ನು ಸರಿಯಾದ ಅಗತ್ಯಕ್ಕೆ ತಕ್ಕ

ಪಾರಿಭಾಷಿಕ ಪದಗಳ ಬಳಕೆಯೊಂದಿಗೆ ಸರಳ ಸುಲಭ ಶೈಲಿಯಲ್ಲಿ ವ್ಯಕ್ತಪಡಿಸಿದಾಗ ಮಾಹಿತಿಯು ಜನತೆಯಲ್ಲಿಗೆ ತಲುಪುವಲ್ಲಿ ಯಶಸ್ವಿಯಾಗುವುದು. ಕೆಲವು ಪದಗಳ ಅರ್ಥವು ವಿಷಯದ ಪ್ರಸ್ತುತತೆಗೆ ತಕ್ಕಂತೆ ಇರುವುದು. ಹೀಗಾಗಿ ನಿರ್ದಿಷ್ಟ ವಿಷಯದಲ್ಲಿ ಬಳಕೆಯಾಗಿರುವ ಪದಕ್ಕೆ ಸರಿಯಾಗುವ ಪದವನ್ನು ಪ್ರಯೋಗಿಸಲಾಗಿರುವ ಅರ್ಥಕ್ಕನುಗುಣವಾಗಿ ವಾಕ್ಯದಲ್ಲಿ ಉಪಯೋಗಿಸುವಂತಿರಬೇಕು. ಅಂದರೆ ಅಧ್ಯಯನದಲ್ಲಿ ಗಮನಿಸಿದಂತೆ ಗುಣಾಣು(ಜೀನ್), ವರ್ಣತಂತು(ಕ್ರೋಮೋಸೋಮ್), ವಿದ್ಯುದ್ವಾರ (ಎಲೆಕ್ಟ್ರೋಡ್), ಕ್ಯಾನ್ಸರ್(ಅರ್ಬುಧ), ಸ್ಥಾನಿಕ ಸೋಂಕು(ಲೋಕಲ್ ಇನ್ಫೆಕ್ಷನ್), ಕಂದು ಕುಬ್ಜ(ಬ್ರೌನ್ ಡ್ವಾರ್ಫ) ಮೊದಲಾದಗಳ ಪಾರಿಭಾಷಿಕ ಪದಗಳ ಬಳಕೆಯು ಅಗತ್ಯಕ್ಕೆ ತಕ್ಕಂತೆ ಸರಳತೆಯೊಂದಿಗೆ ಮೂಡಿಬಂದಿದೆ.

೩. ಸಾಮಾನ್ಯವಾಗಿ ವಿಜ್ಞಾನ ವಿಚಾರವು ವಿಶಿಷ್ಟ ಪಾರಿಭಾಷೆಯಲ್ಲಿ ವ್ಯಕ್ತವಾಗಿರುವುದರಿಂದ ಅದನ್ನು ಅರ್ಥೈಸಿಕೊಳ್ಳುವಲ್ಲಿ ತೊಂದರೆಯನ್ನು ಅನುಭವಿಸಬೇಕಾಗುವುದು. ಹೀಗಾಗಿ ಸಮರ್ಥ ಅನುವಾದವು ಮೂಲ ಕೃತಿಯ ಶಬ್ದಗಳಿಗಿಂತ ಶಬ್ದಗಳು ಪ್ರಕಟಿಸುವ ವಿಚಾರಗಳ ಕಡೆಗೆ ಇರುವಂತಾದರೆ ಮೂಲ ಭಾಷೆಯ ಪರಿಚಯ ಇಲ್ಲದವರು ಅರ್ಥೈಸಿಕೊಳ್ಳುವಲ್ಲಿ ಯಾವುದೇ ಸಮಸ್ಯೆಯಾಗುವುದಿಲ್ಲ ಎಂಬುದನ್ನು ನೋಡಬಹುದು.

೪. ಅನುವಾದಿಸುವಾಗ ಅನುವಾದಕನು ಕೆಲವು ವಿಶಿಷ್ಟ ಅಂಶಗಳಾದ ಸಂವಾದಿ ಶಬ್ದಗಳು, ಸಮಾನ ಶಬ್ದಗಳು, ಯಥಾವತ್ತಾದ ಶಬ್ದಗಳ ಬಳಕೆ ಮೊದಲಾದವುಗಳನ್ನು ಗಮನಿಸುವುದು ಅತ್ಯಗತ್ಯ. 'ಕನ್ನಡದಲ್ಲಿ ವಿಜ್ಞಾನ ಸಂವಹನೆ' ಎಂಬ ಕೃತಿಯಲ್ಲಿನ ವಿಜ್ಞಾನ ಸಾಹಿತ್ಯದಲ್ಲಿ ಅನುವಾದಗಳು ಎಂಬ ಲೇಖನದಲ್ಲಿ ಲೇಖಕರು "ಅನುವಾದದಲ್ಲಿ ಗಮನಿಸಬೇಕಾದ ಅಂಶಗಳಾದ ಶಬ್ದ ಅತ್ಯಂತ ಪಾರಿಭಾಷಿಕವಾದುದೇ?, ಸಂವಾದಿ ಶಬ್ದಗಳನ್ನು ನಿರ್ಮಿಸುವ ಅಗತ್ಯವಿದೆಯೇ?, ನಮ್ಮ ಭಾಷೆಗೆ ಹೊಂದಿಕೊಳ್ಳುಬಲ್ಲುದೇ"[೧೯] ಮೊದಲಾದವುಗಳನ್ನು ತಿಳಿಸಲಾಗಿದೆ. ಅದರಂತೆಯೇ 'ವಿಜ್ಞಾನದ ಭಾಷೆ' ಲೇಖನದಲ್ಲಿ "ವಿಜ್ಞಾನಕ್ಕೆ ಒಂದು ಭಾಷೆ ಇದೆ. ವಾಸ್ತವಿಕತೆಗೆ ಬರೆದ ಭಾಷ್ಯ ಇದು. ಇದರ ಮೂಲ ಇಟ್ಟಿಗೆಗಳು ಪಾರಿಭಾಷಿಕ ಪದಗಳು. ತಳಹದಿ ದ್ಯುಕ್ತಿಗಳು, ಗಾರೆ ಪ್ರತೀಕಗಳು, ಆಲೇಖ್ಯ ಆಧಾರ ಭಾವನೆಗಳು ಸೌಧ ಸಿದ್ದಾಂತ. ಇದು ತಾರ್ಕಿಕವಾಗಿ ಸಮಂಜಸವಾಗಿರಬೇಕು ಮತ್ತು ಸಾಹಿತ್ಯ ಸೌಂದರ್ಯ ಪೂರಿತವಾಗಿರಬೇಕು".[೨೦] ಎಂದು ಹೇಳಿರುವಲ್ಲಿ ವಿಜ್ಞಾನ ಸಾಹಿತ್ಯದ ಭಾಷಾ ಸ್ವರೂಪವು ತಿಳಿಯುವುದು.

ಮೇಲೆ ವಿವರಿಸಿದ ಎಲ್ಲಾ ಸಾಧ್ಯತೆಗಳನ್ನು ಅನುಸರಿಸಿಕೊಂಡು ಅನುವಾದ ಅಥವಾ ಭಾಷಾಂತರದ ಸಮಸ್ಯೆ ಮತ್ತು ಸವಾಲುಗಳನ್ನು ಯಶಸ್ವಿಯಾಗಿ ನಿಭಾಯಿಸುವಲ್ಲಿ ನಾಗೇಶ್

ಹೆಗಡೆ, ಟಿ.ಆರ್ ಅನಂತರಾಮು, ಎಚ್.ಆರ್.ರಾಮಕೃಷ್ಣರಾವ್, ಡಾ.ಎನ್.ಎಸ್ ಲೀಲಾ ಮೊದಲಾದವರು ಮಹತ್ವದ ಪಾತ್ರ ವಹಿಸಿದ್ದಾರೆ. ವೈಜ್ಞಾನಿಕ ಸಾಹಿತ್ಯದ ಅನುವಾದದ ಕಾರ್ಯದಲ್ಲಿ ವಸ್ತು ವಿಷಯದ ಮೇಲೆ ಪ್ರಭುತ್ವ ಹೊಂದುವುದರೊಂದಿಗೆ ಪಾರಿಭಾಷಿಕ ಪದಗಳನ್ನು ಸಮರ್ಪಕವಾಗಿ ಬಳಕೆ ಮಾಡಿ ವಿಷಯದ ಮಾಹಿತಿ ನೀಡಿವಲ್ಲಿ ಯಶಸ್ವಿಯಾಗಿದ್ದಾರೆ. ಅನುವಾದಿಸುವಾಗ ಕೆಲವು ಕಡೆಯಲ್ಲಿ ಸಂವಾದಿ ಅಥವಾ ಯಥಾವತ್ತಾದ ಪದಗಳು ದೊರೆಯದಿದ್ದಾಗ ಅರ್ಥಕ್ಕೆ ಚ್ಯುತಿಯಾಗದಂತೆ ಹೊಸ ಶಬ್ದವನ್ನು ನಿರ್ಮಿಸಿ ಪ್ರಸ್ತುತಪಡಿಸುವುದರ ಜೊತೆಯಲ್ಲಿ ಸೂಚಿತ ಪದದ ಮೂಲ ಪದವನ್ನು ಆವರಣದೊಳಗೆ ಸೂಚಿಸುವುದರೊಂದಿಗೆ ಅನಗತ್ಯ ಗೊಂದಲಕ್ಕೆ ಆಸ್ಪದ ನೀಡದಿರುವುದನ್ನು ಗಮನಿಲಾಗಿದೆ.

ಸುಮಾರು ೧೯೦೧ ರಿಂದ ೧೯೭೧ರ ಅವಧಿಯಲ್ಲಿ ಇಂಗ್ಲೆಂಡಿನಲ್ಲಿ ಜೀವಿಸಿದ್ದ ಪ್ರಖ್ಯಾತ ಜೀವ ವಿಜ್ಞಾನಿ ಹಾಗೂ ವಿಜ್ಞಾನ ಇತಿಹಾಸದ ಪ್ರಾಧ್ಯಾಪಕನಾಗಿದ್ದ ಜೆ.ಡಿ.ಬರ್ನಾಲ್(ಜಾನ್ ಡೆಸ್ಮಂಡ್ ಬರ್ನಾಲ್)ನ ಜೀವ ವಿಜ್ಞಾನ ಹಾಗೂ ಸಾಮಾಜಿಕ ವಿಜ್ಞಾನದ ಸ್ವರೂಪದ ಕುರಿತು ಉಪನ್ಯಾಸ ನೀಡುತ್ತಿದ್ದುದನ್ನು ಸಂಸ್ಕರಿಸಿ 'ಸೈನ್ಸ್ ಇನ್ ಹಿಸ್ಟರಿ' ಎಂಬ ನಾಲ್ಕು ಸಂಪುಟಗಳ ಕೃತಿಯನ್ನಾಗಿ ೧೯೫೪ರಲ್ಲಿ ಪೆಂಗ್ವಿನ್ ಪ್ರಕಾಶನದ ಆಶ್ರಯದಲ್ಲಿ ಹೊರತಂದ ಕೃತಿಯನ್ನು ಟಿ.ಆರ್ ಅನಂತರಾಮುರವರ ಸಂಪಾದಕತ್ವದಲ್ಲಿ ವಿಜ್ಞಾನದ ಉದಯ, ವಿಜ್ಞಾನ ಮತ್ತು ಕೈಗಾರಕಾ ಕ್ರಾಂತಿ, ಸಮಕಾಲೀನ ನೈಸರ್ಗಿಕ ವಿಜ್ಞಾನಗಳು, ಸಮಾಜವಿಜ್ಞಾನ ಸಮಾರೋಪ ಎಂದು ನಾಲ್ಕು ಸಂಪುಟಗಳಲ್ಲಿ 'ಇತಿಹಾಸದಲ್ಲಿ ವಿಜ್ಞಾನ'[೨೧] ಎಂಬ ಶೀರ್ಷಿಕೆಯೊಂದಿಗೆ ಅನುವಾದಿಸಲಾಗಿದೆ.

ಒಟ್ಟಾರೆಯಾಗಿ ಗಮನಿಸಿದರೆ ಇತಿಹಾಸದಲ್ಲಿ ವಿಜ್ಞಾನದ ನಾಲ್ಕು ಸಂಪುಟಗಳ ಅನುವಾದದಲ್ಲಿ ವಿಜ್ಞಾನವು ಮನುಷ್ಯನ ವಿಕಾಸದಿಂದಲೇ ತನ್ನ ವಿಕಾಸವನ್ನು ಪಡೆಯುತ್ತ ಬೆಳೆಯಿತು. ಶಿಲಾಯುಗದಿಂದ ಮನುಷ್ಯನು ಹಂತಹಂತವಾಗಿ ಬೆಳವಣಿಗೆಯನ್ನು ಪಡೆಯುತ್ತಾ, ಸ್ವಾವಲಂಬಿಯಾಗಿ ಆಯುಧಗಳನ್ನು ತಯಾರಿಸಿಕೊಂಡು ತಾನು ರಕ್ಷಣೆಯನ್ನು ಪಡೆಯುತ್ತಾ ಇತರರನ್ನು ತನ್ನ ಅಡಿಯಾಳಾಗಿ ಪರಿವರ್ತಿಸುತ್ತಾ ಬರಲು ಕಾರಣ ವಿಜ್ಞಾನವಾಗಿದೆ ಎಂಬುದನ್ನು ತಿಳಿಸಿರುವುದು ಅನುವಾದಕರ ವಿಷಯ ಹಾಗೂ ಸೃಜನಾತ್ಮಕ ಅಭಿವ್ಯಕ್ತಿಯ ದ್ಯೋತಕವಾಗಿದೆ.

ಕನ್ನಡ ಭಾಷೆಯ ಮೇಲೆ ಪ್ರಭುತ್ವವಿದ್ದು, ಪಾರಿಭಾಷಿಕ ಪದಗಳ ಸಮರ್ಪಕ ಬಳಕೆಯೊಂದಿಗೆ ಖ್ಯಾತ ವಿಜ್ಞಾನ ಸಾಹಿತಿ ಅನುವಾದಕರಾದ ಟಿ.ಆರ್.ಅನಂತರಾಮುರವರು, ಮೂಲತಃ ರಾಮ ಎಂಬುವರಿಂದ ಇಂಗ್ಲೀಷಿನಲ್ಲಿ ರಚಿತ 'ಅವರ್ ವಾಟರ್‌ರಿಸೊರ್ಸಸ್' ಕೃತಿಯ ಕನ್ನಡಾನುವಾದ ಕೃತಿಯೇ 'ನಮ್ಮ ಜಲಸಂಪನ್ಮೂಲ'. ಈ ಕೃತಿಯಲ್ಲಿ ನೀರಿನ

ಅವಶ್ಯಕತೆ, ನೀರು ರೂಪುಗೊಳ್ಳುವ ಬಗೆ, ನದಿ ಸರೋವರದ ಸೃಷ್ಟಿ ಉಪಯೋಗ ಮೊದಲಾದವು ಕೂಡಿದಂತೆ ನೀರಾವರಿಯ ಉಪಯೋಗ ಹಾಗೂ ಎಷ್ಟರ ಮಟ್ಟಿಗೆ ನೀರಾವರಿಯನ್ನು ಬಳಸಿಕೊಳ್ಳುವಲ್ಲಿ ಜನತೆ ಯಶಸ್ವಿಯಾಗುತ್ತಿದ್ದಾರೆ, ಭವಿಷ್ಯದಲ್ಲಿ ಯಶಸ್ವಿಯಾಗುತ್ತಾರೆ ಎಂಬುದನ್ನು ಸಾಮಾನ್ಯ ಭಾಷೆಯಲ್ಲಿ ಸರಳೀಕೃತ, ಸುಲಭ ಅರ್ಥಗ್ರಾಹ್ಯದ ಪಾರಿಭಾಷಿಕ ಪದಗಳ ಬಳಕೆಯೊಂದಿಗೆ ಪ್ರಸ್ತುತ ಪಡಿಸಿದ್ದಾರೆ.

ಟಿ.ಆರ್.ಅನಂತರಾಮುರವರಿಂದ ಅನುವಾದಿತಗೊಂಡ 'ನಮ್ಮ ಜಲಸಂಪನ್ಮೂಲದಲ್ಲಿನ 'ಮೇಘ ಲೀಲೆ' ಅಧ್ಯಯನದ ಒಂದು ಭಾಗದ ವಿವರಣೆಯನ್ನು ಗಮನಿಸಬಹುದು. "ವಿಜ್ಞಾನಿಗಳು ಮಳೆ ಕೃತಕವಾಗಿ ಬರುವಂತೆ ಪ್ರೇರೇಪಿಸುವ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಸದ್ಯದಲ್ಲಿ ಬಳಕೆಯಲ್ಲಿರುವ ಪ್ರೇರಣೆಯನ್ನು 'ಬೀಜ ಬಿತ್ತುವುದು' ಎಂದು ಕರೆಯುತ್ತಾರೆ. ಮೋಡದೊಳಗೆ ಸೂಕ್ತವಾದ ವಸ್ತುವಿನ ಚಿಕ್ಕ ಕಣಗಳನ್ನು ಹೇರಳವಾಗಿ ಪ್ರೇಷಿಸುವುದೇ ಆ ಪ್ರಯತ್ನ. ಇದು ಹೇಗೋ ನೀರಿನ ಭಾಷ್ಪವನ್ನು ಸಾಂದ್ರೀಕರಿಸುತ್ತದೆ ಮತ್ತು ಮಳೆ ರೂಪದಲ್ಲಿ ಕೆಳಗಿಳಿಯಲು ಪ್ರೇರೇಪಿಸುತ್ತದೆ ಎಂದು ನಂಬಲಾಗಿದೆ. ಇದಕ್ಕೆ ಸಾಧಾರಣವಾಗಿ ಅಡಿಗೆ ಉಪ್ಪು, ಬೆಳ್ಳಿಯ ಅಯೋಡೈಡ್, ಘನ ಇಂಗಾಲದ ಡಯಾಕ್ಸೈಡ್ ಮತ್ತು ಅಸ್ಥಿರತೆಯ ಇನ್ನೂ ಕೆಲವನ್ನು ಬಳಸುತ್ತಾರೆ".[೨೨] ಎಂದು ಲೇಖಕರು ಕೃತಕ ಮಳೆಯನ್ನು ತರಿಸುವ ವೈಜ್ಞಾನಿಕ ವಿಧಾನದ ವಿವರಣೆಯನ್ನು ಅತ್ಯಂತ ಸುಲಭ ಭಾಷಾಭಿವ್ಯಕ್ತಿಯಲ್ಲಿ ಅನುವಾದಿಸಿರುವುದನ್ನು ಕಾಣಬಹುದು.

ವಿಷಯ ಜ್ಞಾನ, ಭಾಷಾಕೌಶಲ್ಯ ಹಾಗೂ ಅನುವಾದದ ಕೌಶಲಗಳನ್ನು ಹೊಂದಿರುವ ನಾಗೇಶ್ ಹೆಗಡೆಯವರು ಎನ್.ಮಣಿವಾಸಕಂರವರಿಂದ ರಚಿತ 'ವಿ ಬ್ರೀತ್ ಅಂಡ್ ಡ್ರಿಂಕ್ ಪಾಯಿಝುನ್' ಎಂಬ ಕೃತಿಯನ್ನು 'ಗಾಳಿಗೆ ವಿಷ ನೀರಿಗೆ ವಿಷ' ಎಂದು ಕನ್ನಡದಲ್ಲಿ ಅನುವಾದಿಸಿದ ಕೃತಿಯು ಸರಳ ಸುಲಭ ಅಭಿವ್ಯಕ್ತಿ ಕೌಶಲ್ಯದೊಂದಿಗೆ ಮೂಡಿಬಂದಿದೆ. ಇದರಿಂದ ನಾವು ಸೇವಿಸುವ ಗಾಳಿಯು ಹಾಗೂ ಕುಡಿಯುವ ನೀರು ಹೇಗೆ ಕಲುಷಿತಗೊಳ್ಳುತ್ತಿದೆ, ಕಾರಣವೇನು? ಅಪಾಯಗಳೇನು? ಮೊದಲಾದ ಪರಿಸರಕ್ಕೆ ಸಂಬಂಧಿಸಿದ ವಿಚಾರಗಳನ್ನು ಎಲ್ಲರಿಗೂ ಮನದಟ್ಟಾಗುವಂತೆ ತಿಳಿಸಿರುವುದನ್ನು ಕಾಣಬಹುದು.

ನಾಗೇಶ್ ಹೆಗಡೆರವರಿಂದ ಇಂಗ್ಲೀಷಿನಿಂದ ಕನ್ನಡಕ್ಕೆ ಅನುವಾದಗೊಂಡ ಕೃತಿ 'ಗಾಳಿಗೆ ವಿಷ ನೀರಿಗ ವಿಷ' ಎಂಬಲ್ಲಿನ 'ನಮ್ಮ ಪರಿಸರ' ಲೇಖನದಲ್ಲಿನ ವಿವರಣೆಯ ಭಾಗವನ್ನು ಇಲ್ಲಿ ಗಮನಿಸಬಹುದು. "ಮಾಲಿನ್ಯವು ಗಾಳಿಗೆ ದುರ್ನಾತವನ್ನೂ, ನೀರಿಗೆ ನಂಜನ್ನೂ

ಸೇರಿಸುತ್ತದೆ. ಜೀವ ಮಂಡಲಕ್ಕೆ ಅದು ವಿಷಕಾರಕ ದ್ರವ್ಯಗಳನ್ನು ಬಿಡುಗಡೆ ಮಾಡಿ, ಗಾಳಿಯನ್ನು ಉಸಿರಾಟಕ್ಕೆ ಯೋಗ್ಯವಲ್ಲದಂತೆ ಮಾಡಿ, ಮಣ್ಣು ನೀರಿನ ಗುಣಮಟ್ಟವನ್ನು ಕೆಡಿಸಿ, ಮನುಷ್ಯನ, ಸಸ್ಯಗಳ ಮತ್ತು ಪ್ರಾಣಿಗಳ ಆರೋಗ್ಯವನ್ನು ಹದಗೆಡಿಸಿ ಬದುಕೇ ದುಸ್ತರವಾಗುವಂತೆ ಮಾಡುತ್ತದೆ. ಹೆಚ್ಚುತ್ತಿರುವ ಜನಕೋಟಿಗೆ ಆಹಾರ ಪೂರೈಕೆ ಮಾಡಲೆಂದು ವಿವಿಧ ಬಗೆಯ ರಸಗೊಬ್ಬರಗಳನ್ನೂ, ಕೀಟನಾಶಕಗಳನ್ನೂ ಬಳಸಿಕೊಂಡು ಕೃಷಿಕಮತವನ್ನು ತೀವ್ರಗೊಳಿಸಲಾಗಿದೆ. ಜೀವಮಂಡಲಕ್ಕೆ ಅಪಾಯ ತರುವಂಥ ರಾಸಾಯನಿಕಗಳೂ ಸೇರಿದಂತೆ, ಅನೇಕಾನೇಕ ದ್ರವ್ಯಗಳನ್ನು ಉತ್ಪಾದಿಸಲೆಂದು ವಿವಿಧ ಬಗೆಯ ಕಾರ್ಖಾನೆಗಳನ್ನು ಸ್ಥಾಪಿಸಲಾಗಿದೆ. ಹೆಚ್ಚುತ್ತಿರುವ ಶಕ್ತಿಯ ಬೇಡಿಕೆಯನ್ನು ಪೂರೈಸಲೆಂದು ಹೆಚ್ಚು ಹೆಚ್ಚು ಸಂಖ್ಯೆಯ ಜಲವಿದ್ಯುತ್, ತಾಪ ವಿದ್ಯುತ್ ಮತ್ತು ಪರಮಾಣು ವಿದ್ಯುತ್ ಘಟಕಗಳನ್ನು ಸ್ಥಾಪಿಸಲಾಗುತ್ತಿದೆ. ಇವೆಲ್ಲವುಗಳ ಒಟ್ಟಾರೆ ಪರಿಣಾಮ ಏನೆಂದರೆ, ಎಲ್ಲೆಲ್ಲೂ ಜಲ ಮಾಲಿನ್ಯ, ನೆಲ ಮಾಲಿನ್ಯ ಮತ್ತು ವಾಯು ಮಾಲಿನ್ಯ."[೨೩] ಎಂದು ಮೂಲ ಕೃತಿಯಂತೆ ನಾಗೇಶ್ ಹೆಗಡೆಯವರು ಪರಿಸರದ ಬಗ್ಗೆ ಮತ್ತು ಪರಿಸರವು ಮಾಲಿನ್ಯಗೊಳ್ಳುತ್ತಿರುವ ವಿವಿಧ ಬಗೆಗಳನ್ನು ಅನುವಾದಿಸಿ ವಿವರಿಸಿರುವುದನ್ನು ಕಾಣಬಹುದು.

ವಿಜ್ಞಾನ ಸಾಹಿತ್ಯದ ಅನುವಾದ ಕಾರ್ಯದಲ್ಲಿ ವಿಜ್ಞಾನ ಸಾಹಿತಿಗಳು ಹೇಳಲು ಹೊರಟ ವಿಷಯ, ವಿಷಯದ ಆಯ್ಕೆ, ಮಾಹಿತಿ ಸಂಗ್ರಹ ಮತ್ತಿತರ ವಿಚಾರಗಳು ಉತ್ತಮವಾಗಿ ಮೂಡಿಬಂದಿದೆ. ವಿಜ್ಞಾನ ಸಾಹಿತ್ಯದ ಉದ್ದೇಶ ಮತ್ತು ವಿಜ್ಞಾನದ ಚಟುವಟಿಕೆಗಳಾದ ಸಂಶೋಧನೆ, ಆವಿಷ್ಕಾರ ಹಾಗೂ ಸಮಾಜಕ್ಕೆ ಅಗತ್ಯವಾದ ವೈಜ್ಞಾನಿಕ ಅರಿವನ್ನು ಮೂಡಿಸುವುದರೊಂದಿಗೆ, ಮೂಢನಂಬಿಕೆಯನ್ನು ಹೋಗಲಾಡಿಸಿ ಕುತೂಹಲವನ್ನು ಕೆರಳಿಸಿ, ಯಾವುದನ್ನೇ ಆಗಲಿ ಪ್ರಶ್ನೆ ಮಾಡುವ ಮೂಲಕ ತಿಳಿದುಕೊಳ್ಳುವ ವೈಚಾರಿಕ ಪ್ರಜ್ಞೆಯನ್ನು ಬೆಳೆಸುವುದು ಮೊದಲಾದವನ್ನು ಗಮನದಲ್ಲಿಟ್ಟುಕೊಂಡು ವಿಜ್ಞಾನ ಸಾಹಿತಿಗಳು ಅನುವಾದ ಕಾರ್ಯ ಮಾಡಿರುವುದು ವಿಷಯಾಸಕ್ತರಲ್ಲಿ ಅಧ್ಯಯನಶೀಲತೆ ಹಾಗೂ ಜ್ಞಾನಾರ್ಜನೆಯನ್ನು ವೃದ್ಧಿಸುತ್ತದೆ.

ಭಾಷಾಂತರ/ಅನುವಾದಗಳು ಹೆಚ್ಚು ಸಮರ್ಪಕವಾಗಿ ಮೂಡಿಬರಲು ಕಾರಣವಾಗುವ ಕೆಲವು ಅಂಶಗಳೆಂದರೆ:

೧. ವಸ್ತು ವಿಷಯದ ಮೇಲೆ ಪ್ರಭುತ್ವವಿದ್ದು, ಅನುವಾದಿಸುವಾಗ ಎರಡೂ ಭಾಷೆಗಳ(ಮೂಲ ಮತ್ತು ಅನುವಾದಗೊಳಿಸುವ ಭಾಷೆ) ಮೇಲೆ ಹಿಡಿತವಿರಬೇಕು.

೨. ಪಾರಿಭಾಷಿಕ ಪದಗಳ ಸಮರ್ಪಕ ಬಳಕೆಗೆ ಆದ್ಯತೆ ನೀಡವುದು.

೩. ಸಾಮಾನ್ಯ ಪದಗಳನ್ನು ವಿಶಿಷ್ಟ ರೀತಿಯಲ್ಲಿ ಬಳಸುವುದು.

೪. ಸಂಸ್ಕೃತ ಪದಗಳ ಬಳಕೆಯನ್ನು ಕನಿಷ್ಟಗೊಳಿಬೇಕು ಮತ್ತು ಸ್ಥಳೀಯ ಹಾಗೂ ದೇಸಿ ಪದಗಳ ಬಳಕೆಯನ್ನು ಹೆಚ್ಚಿಸಬೇಕು.

೫. ಸಾಮಾನ್ಯ ಪದಗಳು ಅತಿ ಹೆಚ್ಚು ಬಾರಿ ಬಳಸುವುದು.

೬. ಯಥಾವತ್ತಾಗಿ ಪದಕ್ಕೆ ಪದ ಭಾಷಾಂತರಿಸುವುದು ಅರ್ಥವ್ಯತ್ಯಾಸಕ್ಕೆ ಕಾರಣವಾಗುವುದು.

೭. ಅನುವಾದದಲ್ಲಿ ಬಳಸಲಾಗುವ ಶಬ್ದವು ಪಾರಿಭಾಷಿಕವಾದುದೇ ಎಂಬುದನ್ನು ಗಮನಿಸುವುದು.

೮. ಸಂವಾದಿ ಶಬ್ದವು ದೊರೆಯದ ಪಕ್ಷದಲ್ಲಿ ಆ ಶಬ್ದಕ್ಕೆ ಹೊಸ ಶಬ್ದವನ್ನು ನಿರ್ಮಿಸುವುದು.

೯. ಕನ್ನಡದ ಜಾಯಮಾನಕ್ಕೆ ಹೊಂದಿಕೊಳ್ಳುವಂತಿದೆಯೇ ಎಂಬುದನ್ನು ಗಮನಿಸುವುದು ಹಾಗೂ ವಿಜ್ಞಾನ ಸಾಹಿತ್ಯಕ್ಕೆ ವೈಜ್ಞಾನಿಕ ಭಾಷೆ ಇದೆ ಎಂಬುದನ್ನು ಅನುವಾದಕನು ಮರೆಯಬಾರದು.

ಈ ಎಲ್ಲಾ ಸವಾಲು ಸಾಧ್ಯತೆಗಳನ್ನುಅನುವಾದಕ/ಭಾಷಾಂತರಕಾರರು ಗಮನದಲ್ಲಿಟ್ಟು ಕೊಂಡು ಅನುವಾದ ಮಾಡಿರುವುದನ್ನು ಗಮನಿಸಬಹುದು. ಇದರಿಂದ ಸಮಾಜಕ್ಕೆ ಅತ್ಯಗತ್ಯ ಅತ್ಯಮೂಲ್ಯ ವೈಜ್ಞಾನಿಕ ಮಾಹಿತಿಯು ದೊರೆತು ಅದು ಜನತೆಗೆ ತಲುಪುವಂತಾಗಿದೆ.

ಅನುವಾದದ ಸಂದರ್ಭದಲ್ಲಿ ಸಮಸ್ಯೆಯನ್ನು ಎದುರಿಸಿದಂತಹ ಕೆಲವು ಪದಗಳು

೧.	ಸೀಸದ ಆವಿ/ಸೀಸದ ಭಾಷ್ಪ	-	Lead vapour
೨.	ಅಳವಡಿಕೆ, ಮಾಡ್ಯುಲೇಷನ್	-	Modulation-
೩.	ವೆನ್ ಚಿತ್ರ	-	Venn Diagram-
೪.	ಸ್ನಿಗ್ಧ	-	Viscous
೫.	ಚಲನೆ	-	Motion
೬.	ಕೋಕ್	-	Coke
೭.	ಸ್ಪರ್ಶ	-	Contact
೮.	ವಿಕರ್ಷಕ	-	Repellent
೯.	ವಿಕರ್ಷಣೆ	-	Repulsion

೧೦.	ನೆತ್ತಿ/ಉದ್ಧಬಿಂದು	-	Zenith
೧೧.	ಗರ್ಭವೇಷ್ಟನ/ಉಲ್ಬ	-	Amnion
೧೨.	ಕಾರ್ಬನ್/ಇಂಗಾಲ	-	Carbon
೧೩.	ರಕ್ತವರ್ಣ/ಹಿಮೋಗ್ಲೋಬಿನ್	-	Haemoglobin
೧೪.	ವಂಶ	-	Phylum
೧೫.	ಸ್ಪರ್ಶಾನುವರ್ತನೆ	-	Thigmotropism
೧೬.	ಮಾನ/ಯೂನಿಟ್	-	Unit
೧೭.	ವೃಷಣ/ಬೀಜ	-	Testicle
೧೮.	ಅವಳಿ/ಯಮಳ	-	Twin
೧೯.	ರಾಳ	-	Resin
೨೦.	ಅಕ್ಷಿಪಟಲ	-	Retina
೨೧.	ಜಾಲಕ್ಯಾಮರಾ	-	Webcam
೨೨.	ಗ್ರಂಥಿ	-	Gland
೨೩.	ಮಾರ್ಜಕ	-	Detergent
೨೪.	ಪ್ರತಿಜೈವಿಕ/ಆಚಿಟಿಬಯಾಟಿಕ್	-	Antibiotic
೨೫.	ಉಬ್ಬರವಿಳಿತ	-	Tides

ಅಡಿಟಿಪ್ಪಣಿಗಳು

೧. ನಾರಾಯಣರಾವ್ ಜಿ.ಟಿ., ಭವಿಷ್ಯವಾಚನ., ಪುಟ ಸಂಖ್ಯೆ : ೬

೨. ಅದೇ ಪುಟ ಸಂಖ್ಯೆ : ೮.

೩. ನಾರಾಯಣರಾವ್ ಜಿ.ಟಿ., ಭವಿಷ್ಯ ವಿಜ್ಞಾನ., ಪುಟ ಸಂಖ್ಯೆ : ನವಶತಮಾನದ ಅರುಣೋದಯ ಭಾಗ.

೪. ಸ್ವಾಮಿ ಬಿ.ಜಿ.ಎಲ್., ಹಸಿರು ಹೊನ್ನು., ಪುಟ ಸಂಖ್ಯೆ : ೨೦-೨೧

೫. ಪೂರ್ಣಚಂದ್ರ ತೇಜಸ್ವಿ, ಕರ್ವಾಲೋ., ಪುಟ ಸಂಖ್ಯೆ : ೧೪೪

೬. ಪೂರ್ಣಚಂದ್ರ ತೇಜಸ್ವಿ, ಜುಗಾರಿಕ್ರಾಸ್., ಪುಟ ಸಂಖ್ಯೆ : ೮

೭. ಪೂರ್ಣಚಂದ್ರ ತೇಜಸ್ವಿ, ಚಿದಂಬರ ರಹಸ್ಯ., ಪುಟ ಸಂಖ್ಯೆ : ೮

೮. ಆವಲಮೂರ್ತಿ.ಎ.ಓ., ವಿಜ್ಞಾನ ಸೂರ್ಯ., ಪುಟ ಸಂಖ್ಯೆ : ೨೪

೯. ಅನಂತರಾಮು ಟಿ.ಆರ್., ವಿಜ್ಞಾನ ಹೆದ್ದಾರಿಯಲ್ಲಿ ಮಹಾತಿರುವು., ಪುಟ ಸಂಖ್ಯೆ : ೪೦೨

೧೦. ಭೌತಶಾಸ್ತ್ರ ಭಾಗ ೧(ದ್ವಿತೀಯ ಪಿಯುಸಿ ಪಠ್ಯಪುಸ್ತಕ)., ಪುಟ ಸಂಖ್ಯೆ : ೨೦

೧೧. ಚಂದ್ರಶೇಖರ್ ಸಿ.ಆರ್., ಮನಸ್ಸಿನ ಸುಖ ದುಃಖ., ಪುಟ ಸಂಖ್ಯೆ – ಸಂಪಾಕರ ಮಾತು.

೧೨. ಅದೇ ಪುಟ ಸಂಖ್ಯೆ :

೧೩. ನಾಗೇಶ್ ಹೆಗಡೆ., ಇರುವುದೊಂದೆ ಭೂಮಿ., ಪುಟ ಸಂಖ್ಯೆ : ೧೩

೧೪. ಅದೇ ಪುಟ ಸಂಖ್ಯೆ : ೧೮

೧೫. ಅನುಸೂಯ ವಿ ಪರಗಿ., ಮಾತೃ ಭಾಷೆ ತತ್ತ್ವ ಮತ್ತು ಬೋಧನಾ ಮಾರ್ಗ., ಪುಟ ಸಂಖ್ಯೆ : ೪೦೦.

೧೬. ಅನಂತರಾಮು ಮತ್ತು ಎಚ್.ಆರ್ ರಾಮಕೃಷ್ಣರಾವ್(ಸಂಪಾದಕರು) ಕನ್ನಡದಲ್ಲಿ ವಿಜ್ಞಾನ ಸಂವಹನೆ. ಪುಟ.ಸಂಖ್ಯೆ – ೨

೧೭. ಅದೇ ಪುಟ ಸಂಖ್ಯೆ – ೧೫.

೧೮. ಪೂರ್ಣಚಂದ್ರ ತೇಜಸ್ವಿ ಕೆ.ಪಿ., ಫ್ಲೈಯಿಂಗ್ ಸಾಸರ್ಸ್., ಪುಟ ಸಂಖ್ಯೆ – ೩.

೧೯. ರಾಮಕೃಷ್ಣರಾವ್. ಎಚ್.ಆರ್(ಸಂಪಾದಕರು)., ಕನ್ನಡದಲ್ಲಿ ವಿಜ್ಞಾನ ಸಂವಹನೆ., ಪುಟ ಸಂಖ್ಯೆ : ೭೮.

೨೦. ನಾಯಕ ಹಾ.ಮಾ (ಪ್ರಧಾನ ಸಂಪಾದಕರು)., ವಿಜ್ಞಾನ ಸಾಹಿತ್ಯ ನಿರ್ಮಾಣ., ಪುಟ ಸಂಖ್ಯೆ : ೮೮.

೨೧. ಟಿ.ಆರ್ ಅನಂತರಾಮು(ಸಂಪಾದಕರು)., ಮೂಲ ಜೆ.ಡಿ. ಬರ್ನಾಲ್., ಇತಿಹಾಸದಲ್ಲಿ ವಿಜ್ಞಾನ(ನಾಲ್ಕು ಸಂಪುಟಗಳಲ್ಲಿ– ಅಂತರ್ ಜಾಲದಲ್ಲಿ ಪಡೆದ ಮಾಹಿತಿ) .

೨೨. ಅನಂತರಾಮು ಟ. ಆರ್(ಅನುವಾದಕರು)., ಮೂಲ ರಾಮ., ನಮ್ಮ ಜಲ ಸಂಪನ್ಮೂಲ., ಪುಟ ಸಂಖ್ಯೆ : ೪–೫

೨೩. ನಾಗೇಶ್ ಹೆಗಡೆ(ಅನುವಾದಕರು)., ಗಾಳಿಗೆ ವಿಷ ನೀರಿಗೆ ವಿಷ., ಪುಟ ಸಂಖ್ಯೆ : ೨

ಅಧ್ಯಾಯ – ಏಳು

ವಿಜ್ಞಾನ ಸಾಹಿತ್ಯ ಮತ್ತು ಸಾಮಾಜಿಕ ಜವಾಬ್ದಾರಿ

ಅಧ್ಯಾಯ – ಏಳು
ವಿಜ್ಞಾನ ಸಾಹಿತ್ಯ ಮತ್ತು ಸಾಮಾಜಿಕ ಜವಾಬ್ದಾರಿ.

ಕನ್ನಡ ವಿಜ್ಞಾನ ಸಾಹಿತ್ಯಕ್ಕೆ ಇತರ ಸಾಹಿತ್ಯ ಪ್ರಕಾರಗಳಿಗಿಂತ ವಿಭಿನ್ನವಾದ ಸಾಮಾಜಿಕ ಸವಾಬ್ದಾರಿಯಿದೆ. ಇದು ಸಮಾಜದಲ್ಲಿನ ಅಜ್ಞಾನ, ಮೂಢ್ಯ, ಕಂದಾಚಾರಗಳನ್ನು ತೊಡೆದುಹಾಕಿ, ಜನಸಮುದಾಯಗಳನ್ನು ಅರಿವಿನ ದಾರಿಯಲ್ಲಿ ಮುನ್ನಡೆಸುತ್ತದೆ. ಹೊಸ ಬಗೆಯ ಆಲೋಚನಾ ಕ್ರಮಗಳನ್ನು, ವೈಚಾರಿಕ ಚಿಂತನಾ ಕ್ರಮವನ್ನು ವ್ಯಕ್ತಿಗಳಿಗೆ ನೀಡುತ್ತದೆ. ಒಟ್ಟಾರೆ ಸಮುದಾಯದ ವಿಶ್ಲೇಷಣಾ ಶಕ್ತಿಯನ್ನು ಹರಿತಗೊಳಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತದೆ.

ವೈಜ್ಞಾನಿಕ ವಿಷಯ ಜ್ಞಾನ ಇಂದಿನ ಯುಗದಲ್ಲಿ ಎಲ್ಲರಿಗೂ ಬಹು ಅಗತ್ಯ. ಅನಗತ್ಯ ನಂಬಿಕೆಗಳಿಗೆ ಜೋತು ಬಿದ್ದು ಜನರು ಮೌಢ್ಯತೆಗೆ ಒಳಗಾಗುವುದನ್ನು ವಿಜ್ಞಾನವು ತಪ್ಪಿಸುತ್ತದೆ. ಉದಾಹರಣೆಗೆ: ಕಳೆದ ೨–೩ ದಶಕಗಳ ಹಿಂದೆ ಲೋಹದ ಗಣೇಶನು ಕ್ಷೀರವನ್ನು ಕುಡಿದ ಒಂದು ಸಂಗತಿಯು ಎಲ್ಲರಿಗೂ ತಿಳಿದದ್ದಾಗಿದೆ. ಆ ಸಂದರ್ಭದಲ್ಲಿ ಪ್ರತಿಯೊಂದು ಮನೆಯ ಎದುರು ಅದರಲ್ಲೂ ಲೋಹದ ಗಣೇಶ ಯಾರ ಮನೆಯಲ್ಲಿದೆಯೋ ಅವರ ಮನೆಯ ಎದುರು ಜನರು ಚಮಚ ಮತ್ತು ಹಾಲಿನ ಬಟ್ಟಲಿನೊಂದಿಗೆ ಸಾಲುಗಟ್ಟಲೇ ನಿಂತು ಗಣೇಶನಿಗೆ ಹಾಲನ್ನು ಕುಡಿಸುವಲ್ಲಿ ತಮ್ಮ ಭಕ್ತಿಯನ್ನು ಮೆರೆದರು. ಬಹಳಷ್ಟು ವಿಜ್ಞಾನಿಗಳು ಆ ಸಂದರ್ಭದಲ್ಲಿ ವೈಜ್ಞಾನಿಕ ಸತ್ಯವನ್ನು ತಿಳಿಸುವಲ್ಲಿ ಬಳಸಿದ ಅಸ್ತ್ರವೇ ಬರವಣಿಗೆ. ಅಂತಹವರಲ್ಲಿ ನಾಗೇಶ್ ಹೆಗಡೆಯವರು ಒಬ್ಬರು. ಅವರು ನಿಜವಾದ ವೈಜ್ಞಾನಿಕ ಕಾರಣ ಏನೆಂಬುದನ್ನು ತಮ್ಮ 'ಗಜಮುಖನ ಕ್ಷೀರದಾಹ'[1] ಎಂಬ ಲೇಖನದಲ್ಲಿ ಉತ್ತಮವಾಗಿ ತಿಳಿಸುವುದರಿಂದ ಮುಗ್ಧ ಜನರಲ್ಲಿದ್ದ ಮೌಢ್ಯತೆಯನ್ನು ನಿವಾರಿಸಲು ಸಾಧ್ಯವಾಯಿತು. ಅದರಂತೆ ಜಿ.ಟಿ.ನಾರಾಯಣರಾವ್, ಪೂರ್ಣಚಂದ್ರ ತೇಜಸ್ವಿ, ಸಿ.ಆರ್ ಚಂದ್ರಶೇಖರ್, ಅನುಪಮ ನಿರಂಜನ ಮೊದಲಾದವರು ಪ್ರಕೃತಿ–ಮನುಷ್ಯ–ಆರೋಗ್ಯದ ನಡುವೆ ಒಂದಕ್ಕೊಂದು ಅವಿನಾಭಾವ ಸಂಬಂಧವಿರುವುದನ್ನು ತಮ್ಮದೇ ವಿಶಿಷ್ಟವಾದ

ಅಭಿವ್ಯಕ್ತಿಯ ಶೈಲಿಯೊಂದಿಗೆ ತಿಳಿಸಿರುವುದು ಸಾಮಾಜಿಕ ಹೊಣೆಗಾರಿಕೆಯ ಪ್ರತೀಕವಾಗಿರುವುದನ್ನು ಕಾಣಬಹುದು.

ವಿಜ್ಞಾನ ಸಾಹಿತ್ಯದಿಂದ ಸಮಾಜದಲ್ಲಿನ ಅನಗತ್ಯ ಆಚರಣೆಗಳು ದೂರವಾಗುವುದಲ್ಲದೆ, ಭೂಮಿ, ನೀರು, ಗಾಳಿ, ಪರಿಸರ, ಆರೋಗ್ಯ, ಕೃಷಿ, ಕೈಗಾರಿಕೆ, ಮಾಹಿತಿ ತಂತ್ರಜ್ಞಾನ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಉಪಯುಕ್ತ ಮಾಹಿತಿಯು ದೊರೆಯುವುದು. ವಿಜ್ಞಾನ ಕ್ಷೇತ್ರದಲ್ಲಿನ ವೈಜ್ಞಾನಿಕ ಮಾಹಿತಿಯ ಅಗತ್ಯತೆ ಅನಿವಾರ್ಯವು ಶೈಕ್ಷಣಿಕ ಕ್ಷೇತ್ರದಿಂದ ಹಿಡಿದು ಆರ್ಥಿಕ, ರಾಜಕೀಯ, ಆರೋಗ್ಯ ಮತ್ತಿತರ ಕ್ಷೇತ್ರಗಳಿಗಿದೆ. ಹೀಗಾಗಿ ಸಮಾಜದಲ್ಲಿ ವಿಜ್ಞಾನದ ಬೆಳವಣಿಗೆಗೆ ತಕ್ಕ ಅಗತ್ಯ ವಾತಾವಣವನ್ನು ಸೃಷ್ಟಿಸಿ, ವಿಜ್ಞಾನಕ್ಕೆ ಸಂಬಂಧಿಸಿದ ವಿಷಯ ವಿಚಾರಗಳನ್ನು ಜನತೆಯೆಡೆಗೆ ಕೊಂಡೊಯ್ಯುವುದರೊಂದಿಗೆ ವೈಜ್ಞಾನಿಕ ಮನೋಧರ್ಮವನ್ನು ಬೆಳೆಸುವುದು ಅತ್ಯಗತ್ಯ. ಆದುದರಿಂದಾಗಿ ವಿಜ್ಞಾನ ವಿಷಯ ವಿಚಾರಗಳಿಗೆ ಅಂಧಾಚರಣಾವಾದಿಗಳಿಂದ ಅವೈಜ್ಞಾನಿಕ ಚಿಂತನೆಗಳಿಂದ ಎಷ್ಟೇ ವಿರೋಧ ಬಂದರೂ, ಅದೊಂದು ಪ್ರತ್ಯೇಕ ಕ್ಷೇತ್ರವೆಂದು ಸಾಮಾನ್ಯರಿಂದ ದೂರ ಮಾಡದೆ ವಿಜ್ಞಾನದಲ್ಲಿನ ಹೊಸತನ್ನು ಎಲ್ಲರಿಗೂ ದೊರೆಯುವಂತೆ ಮಾಡಿದುದನ್ನು ಕಾಣಬಹುದು.

ನಮ್ಮ ಸುತ್ತ ಮುತ್ತ ಸಹಜವಾಗಿ ಕಾಣುವ ಎಲ್ಲವನ್ನು ಕುತೂಹಲ, ವಿಸ್ಮಯ, ಅನುಮಾನದಿಂದ ಕಂಡು ನೈಜತೆಯ ಜಾಡನ್ನು ಹಿಡಿದು, ನಿರೀಕ್ಷಿತ ಅನಿರೀಕ್ಷಿತವಾಗಿ ಸಂಭವಿಸುವ ಸಮಸ್ಯೆ ಸವಾಲುಗಳನ್ನು ಪರಿಹರಿಸಿಕೊಳ್ಳಲು ವಿಜ್ಞಾನ ಸಾಹಿತ್ಯವು ಸಹಕಾರಿಯಾಗಿದೆ. ಅಲ್ಲದೆ ಸಾಮಾಜಿಕ ಕಳಕಳಿಯ ವಿಷಯಗಳಾದ ಪ್ರಕೃತಿ, ಜೀವವೈವಿಧ್ಯ, ಪ್ರಾಣಿ-ಪಕ್ಷಿ ಸಂಕುಲ ಮೊದಲಾದವುಗಳ ಬಗ್ಗೆ ತಿಳಿಯಲು ಹಾಗೂ ಪ್ರಕೃತಿದತ್ತವಾಗಿ ದೊರೆತ ಸಾಧನ ಸಲಕರಣೆ ಸಂಪನ್ಮೂಲಗಳ ಇತಿಮಿತಿಯನ್ನು ತಿಳಿದು ಅಗತ್ಯಕ್ಕೆ ತಕ್ಕಂತೆ ಉಪಯೋಗಿಸಲು ಸಾಧ್ಯವಾದುದು ವಿಜ್ಞಾನ ಸಾಹಿತ್ಯದಿಂದಾಗಿ. ಇಂದಿನ ಯುಗದಲ್ಲಿ ವಿಜ್ಞಾನ ಸಾಹಿತ್ಯವು ಹಿಂದೆಬೀಳದೆ, ವೈಜ್ಞಾನಿಕ ಪ್ರಗತಿಯನ್ನು ಗಮನದಲ್ಲಿಟ್ಟುಕೊಂಡು ಆಧುನಿಕ ವಿಷಯಗಳೆಲ್ಲವನ್ನು ಕನ್ನಡ ಭಾಷೆಯ ಮೂಲಕ ಸುಸ್ಪಷ್ಟವಾಗಿ ಸರಳ ಸುಲಭವಾಗಿ ಹೇಳುವುದರೊಂದಿಗೆ ಜನರನ್ನು ಮೌಢ್ಯ, ಅಂಧಕಾರ, ಅವೈಜ್ಞಾನಿಕ ನಂಬಿಕೆಗಳಿಂದ ದೂರ ಸರಿಸಿ ವೈಜ್ಞಾನಿಕ ಮನೋಭಾವವನ್ನು ಬೆಳೆಸುವಲ್ಲಿ ಸಹಕಾರಿಯಾಗಿದೆ.

ವಿಜ್ಞಾನ ಸಾಹಿತ್ಯದಲ್ಲಿನ ಮಾಹಿತಿಯು ಯಾವುದೇ ಪೂರ್ವಗ್ರಹಗಳಿಂದ ಕೂಡಿರದೆ, ಪ್ರಕಲ್ಪಿತ ಹಾಗೂ ಕಲ್ಪಿತ ಆಲೋಚನೆಗೆ ಆದ್ಯತೆ ನೀಡದೆ, ಸತ್ಯಾಂಶದಿಂದ ಕೂಡಿದ ಫಲಿತಾಂಶ ಆಧಾರಿತವಾಗಿದ್ದು ನಿಖರತೆಯ ಆಗರವಾಗಿದೆ. ಪ್ರಯೋಗವನ್ನು ತನ್ನ ಬಲವಾದ ಅಸ್ತ್ರವಾಗಿ ಉಪಯೋಗಿಸಿ ನೀಡುವ ಸತ್ಯಾಂಶದಿಂದ ಕೂಡಿದ ವೈಜ್ಞಾನಿಕ ಮಾಹಿತಿಯಿಂದ

ಸಾಮಾಜಿಕ ಅಭಿವೃದ್ಧಿ ಹಾಗೂ ಬೆಳವಣಿಗೆಯು ಸಾಧ್ಯವಾಗಿದೆ. ಅಂದರೆ ವಿದ್ಯುತ್ ದೀಪದ ಆವಿಷ್ಕಾರದಿಂದ ಹಿಡಿದು ಇಂದಿನ ತಂತ್ರಜ್ಞಾನಾಧಾರಿತ ಗೃಹೋಪಯೋಗಿ ವಸ್ತುಗಳವರೆಗೆ ಆಗಿರುವ ಎಲ್ಲಾ ಕಾರ್ಯಗಳು ವಿಜ್ಞಾನದ ಫಲವಾಗಿದ್ದು, ವಿಜ್ಞಾನ ಸಾಹಿತ್ಯವು ಈ ಎಲ್ಲಾ ಮಾಹಿತಿಯನ್ನು ಜನತೆಯಲ್ಲಿಗೆ ಕೊಂಡೊಯ್ಯುವ ಮಾಧ್ಯಮವಾಗಿದೆ. ಇದರಿಂದ ವಿಜ್ಞಾನವು ವೈದ್ಯ/ಆರೋಗ್ಯ, ಪರಿಸರ, ಭೌತ, ಖಭೌತ, ಕೃಷಿ, ಶಿಕ್ಷಣ, ಮಾಹಿತಿ-ತಂತ್ರಜ್ಞಾನ ಮೊದಲಾದ ಕ್ಷೇತ್ರಗಳ ಬೆಳವಣಿಗೆಯಲ್ಲಿ ಪೂರಕ ಮತ್ತು ಪ್ರೇರಕ ಪಾತ್ರ ವಹಿಸುವುದು.

ಜನತೆಯ ಅವಶ್ಯಕತೆ ಮತ್ತು ಬೇಡಿಕೆಯನ್ನಾಧರಿಸಿ ಸರಳ ನೇರ ಹಾಗೂ ಸುಲಭ ಗ್ರಾಹ್ಯವಾಗುವ ಜನಭಾಷೆಯಲ್ಲಿ ಮಾಹಿತಿಯನ್ನು ಒದಗಿಸಿ, ಜನತೆಯಲ್ಲಿ ವೈಜ್ಞಾನಿಕ ಮನೋಧರ್ಮ ಹಾಗೂ ವೈಜ್ಞಾನಿಕ ವಿಧಾನವನ್ನು ಹರಡುವುದು ವಿಜ್ಞಾನ ಸಾಹಿತ್ಯದ ಮೂಲ ಕಾರ್ಯ. ಕನ್ನಡ ವಿಜ್ಞಾನ ಲೇಖಕರು ಮೊದಲಿನಿಂದ ಬಂದ ಸಾಂಪ್ರದಾಯಿಕ ವಿಭಾಗಗಳಾದ ಭೌತ ವಿಜ್ಞಾನ, ರಸಾಯನ ವಿಜ್ಞಾನ, ಪ್ರಾಣಿ ವಿಜ್ಞಾನ ಮೊದಲಾದವುಗಳಷ್ಟೆ ಅಲ್ಲದೆ ಮಾಹಿತಿ-ತಂತ್ರಜ್ಞಾನ, ಕಂಪ್ಯೂಟರ್, ಜೀವವೈವಿಧ್ಯ, ಕೃಷಿ, ಸಾವಯವ ಕೃಷಿ, ಪರಿಸರ ಮೊದಲಾದ ವಿಷಯಗಳಿಗೆ ಸಂಬಂಧಿಸಿದಂತೆ ಕೃತಿ ಲೇಖನಗಳನ್ನು ರಚಿಸಿ ಪ್ರಕಟಿಸುವುದರೊಂದಿಗೆ ವೈಚಾರಿಕ ಮನೋಭಾವದ ಬೆಳವಣಿಗೆಗೆ ಕಾರಣರಾಗಿದ್ದಾರೆ.

ಜೀವ ಉಳಿಸುವ ಚಿಕಿತ್ಸೆ, ಟೆಲಿಫೋನ್ ಕರೆ, ಪೋಲೀಸ್ ವಾಹನ ಇಲ್ಲವೇ ಆಂಬುಲೆನ್ಸ್ ವಾಹನ, ಶಸ್ತ್ರಚಿಕಿತ್ಸೆಗೆ ಸಹಕರಿಸುವ ಆಧುನಿಕ ಸಲಕರಣೋಪಾಯಗಳು, ನೋವನ್ನು ಉಪಶಮನಗೊಳಿಸುವ, ರೋಗ ಗುಣಪಡಿಸುವ ಔಷಧಿಗಳು ಮತ್ತು ಉತ್ತಮ ಇಳುವರಿಯನ್ನು ನೀಡುವ ಆಧುನಿಕ ಕೃಷಿ ಮೊದಲಾದ ಮಾನವನ ಸೇವೆಗಾಗಿರುವ ಸಾಧನ ಸಲಕರಣೆಗಳ ಮಾಹಿತಿ ನೀಡುವ ವಿಜ್ಞಾನ ಲೇಖನ ಕೃತಿಗಳಿಂದ ಪ್ರತಿಯೊಬ್ಬ ವ್ಯಕ್ತಿಯ ನೈಜ ಸೇವಕನಾಗಿ ವಿಜ್ಞಾನವು ಪರಿವರ್ತಿತಗೊಂಡಿರುವುದು ತಿಳಿಯುತ್ತದೆ.

ಆಧುನಿಕ ಯುಗದ ಜನಜೀವನ, ರಾಜಕೀಯ, ಆರ್ಥಿಕ, ಸಾಮಾಜಿಕ ಎಲ್ಲಾ ಸಂಗತಿಗಳಲ್ಲಿಯೂ ವಿಜ್ಞಾನವು ಬಿಡಿಸಲಾರದ ಸಂಬಂಧವನ್ನು ಹೊಂದಿರುವುದು ವಿಜ್ಞಾನ ಲೇಖನಗಳಿಂದ ತಿಳಿಯುತ್ತದೆ. ಮೂಲಭೂತ ಅನ್ವೇಷಣೆ/ಸಂಶೋಧನೆ ಪ್ರವೃತ್ತಿಯು ಎಲ್ಲಾ ಕ್ಷೇತ್ರದಲ್ಲಿ ಬೆಳೆಯಬೇಕಾದರೆ ವಿಜ್ಞಾನವೇ ಮೂಲ. ಹೊಸ ಉದ್ಯೋಗಾವಕಾಶಗಳು, ಆಧುನಿಕ ಮಾರ್ಗ ತಂತ್ರಗಳಾಗಿ ಬಂಡವಾಳದ ವಿಸ್ತರಣೆಯಾಗಿ ಕ್ಷೇತ್ರವು ಮುಂದುವರಿಯುವಂತಾಗುವಲ್ಲಿ ವಿಜ್ಞಾನ ಸಾಹಿತ್ಯದ ಪಾತ್ರವು ಮಹತ್ವದ್ದಾಗಿದೆ. ಒಂದು ದೇಶದ ಆರ್ಥಿಕ

ಅಭಿವೃದ್ಧಿಗೆ, ಆರ್ಥಿಕ ಸುಭೀಕ್ಷತೆಗೆ ಭದ್ರತೆಗೆ ಯಂತ್ರವೇ ವಿಜ್ಞಾನ ಮತ್ತು ಶುದ್ಧ ವಿಜ್ಞಾನಗಳ ನಡುವಿನ ಪರಸ್ಪರ ಕೊಡು ಕೊಳ್ಳುವಿಕೆಯ ಸಹ ಸಂಬಂಧ. ಇದರಲ್ಲಿ ಭೌತ, ರಸಾಯನ, ವೈದ್ಯ, ಕೃಷಿ, ಮಾಹಿತಿ ತಂತ್ರಜ್ಞಾನಗಳ ಪಾತ್ರವು ಹಿರಿದಾದುದು. ಹೀಗೆ ನೈಜ ವಿಜ್ಞಾನದ ಉದ್ದೇಶ ಮಹತ್ವ ಹಾಗೂ ಆಶಯವು ಅದರ ಉಪಯುಕ್ತ ಸಾಧನಗಳ ಜೊತೆಗೆ ವಿಷಯ ಮಾಹಿತಿಯಲ್ಲಿರುವುದು.

ನಿತ್ಯ ಜೀವನದಲ್ಲಿ ಅರಿವಿಲ್ಲದೆ ಬಳಸಲಾಗುತ್ತಿರುವ ವಿಜ್ಞಾನವು ಮಾನವನ ಜೀವನದ ಆದರ್ಶ ಹಿನ್ನೆಲೆಯ ಭಾಗವಾಗಿದೆ. ಹೀಗಾಗಿ ವೈಜ್ಞಾನಿಕ ಲೇಖನಗಳು ಅಧಿಕ ಜನರನ್ನು ವಿಜ್ಞಾನದಲ್ಲಿ ಆಸಕ್ತಿ ವಹಿಸುವಂತೆ ಮಾಡುವುದರಿಂದ ಮಾನವನ ಸೌಖ್ಯ ಮಟ್ಟವನ್ನು ಹೆಚ್ಚಿಸುವಂತೆ ಹಾಗೂ ವೈಜ್ಞಾನಿಕ ಮನೋಭಾವವನ್ನು ಹೊಂದುವುದರೊಂದಿಗೆ ಆನಂದವನ್ನು ಪಡೆಯುವಂತೆ ಪ್ರೇರೇಪಿಸುವುದು.

ಸಾಮಾಜಿಕ ಬೇಕು ಬೇಡ ಎಂಬ ಅಗತ್ಯತೆಗಳಿಂದ ವೈಜ್ಞಾನಿಕ ಸಮಸ್ಯೆಗಳು ಉದ್ಭವಿಸುವುದರಿಂದ ಆ ಸಮಸ್ಯೆಗಳನ್ನು ಸಂಶೋಧನೆಯ ಮೂಲಕ ಪರಿಹರಿಸಿಕೊಳ್ಳಲು ಉತ್ತೇಜನೆ ಹಾಗೂ ಸಹಾಯ ಸಮಾಜದಿಂದ ದೊರೆಯುವುದು. ವಸ್ತು ನಿಷ್ಠತೆ, ಸತ್ಯ ನಿಷ್ಠತೆ ಹಾಗೂ ಸತ್ಯಾನ್ವೇಷಣೆಯಿಂದ ಕೂಡಿದ ವಿಜ್ಞಾನದ ವಿಚಾರಗಳು ಸಾಮಾಜಿಕ ಅಭಿವೃದ್ಧಿಯ ಪ್ರತೀಕವಾಗಿದೆ. ಸಮಾಜ ಜೀವನದ ಮೇಲೆ ವಿಜ್ಞಾನದ ಪಾರಮಾರ್ಥಿಕ ವಿಚಾರಗಳ ಪ್ರಭಾವವನ್ನು ವಿಜ್ಞಾನ ಲೇಖನಗಳು ತಿಳಿಸುವುದನ್ನು ಕಾಣಬಹುದು. ವಿಜ್ಞಾನದ ಮತ್ತೊಂದು ಭಾಗವಾದ ಸಮಾಜ ವಿಜ್ಞಾನದಲ್ಲಿನ ಭೂಗೋಳ, ಇತಿಹಾಸ ಮತ್ತಿತರ ಕ್ಷೇತ್ರಗಳಲ್ಲಿ ಪ್ರಾಯೋಗಿಕ ಅಧ್ಯಯನಗಳು ನಡೆಯುವುದು ವೈಜ್ಞಾನಿಕ ಜ್ಞಾನದಿಂದಲೇ. ವಾತಾವರಣದ ವೈಪರೀತ್ಯ ಹಾಗೂ ಭೂಕಂಪ ಪ್ರವಾಹ ಜ್ವಾಲಾಮುಖಿಗಳಿಂದಾಗುವ ಅನಾಹುತಗಳ ಬಗ್ಗೆ ತಿಳಿದು ಅದನ್ನು ತಪ್ಪಿಸಲು ಮುನ್ನೆಚ್ಚರಿಕೆ ಕ್ರಮಗಳನ್ನು ಅನುಸರಿಸುವುದು ವೈಜ್ಞಾನಿಕ ಸಂಶೋಧನೆಗಳ ಫಲವಾಗಿದೆ. ಅದ್ಯಯನಕ್ಕೆ ಸಂಬಂಧಿಸಿದಂತೆ ಉದಾಹರಣೆ ಯನ್ನು ಗಮನಿಸುವುದಾದರೆ ಎಂ.ಕೆ ರಾಮಸ್ವಾಮಿರವರ 'ಭೂಕಂಪ'[೨] ಲೇಖನದಲ್ಲಿ ಭೂಕಂಪದ ಬಗ್ಗೆ ಮಾಹಿತಿಯ ಜೊತೆಗೆ ಮುನ್ನೆಚ್ಚರಿಕೆ ಕ್ರಮಗಳನ್ನು ತಿಳಿಸಿರುವುದನ್ನು ಗಮನಿಸಬಹುದು. ಹೀಗೆ ಸಮಾಜಮುಖಿಯಾಗಿ ಬದುಕಿನಲ್ಲಿ ಎದುರಾಗುವ ತತ್ವವಿಚಾರಗಳ (ವಿಚಾರ ಮಾಡುವ) ಪ್ರಭಾವವನ್ನು ವಿಜ್ಞಾನ ಲೇಖನಗಳಿಂದ ತಿಳಿಯಬಹುದು.

ವಿಜ್ಞಾನವು ಜೀವನದೊಂದಿಗೆ ನೇರ ಸಂಪರ್ಕ ಹೊಂದಿರುವುದರಲ್ಲಿ ಯಾವುದೇ ಸಂದೇಹವಿಲ್ಲ. ವ್ಯವಹಾರಿಕ ಬದುಕಿನೊಂದಿಗೆ ಜೀವನದ ಆದರ್ಶಗಳ ಹಿನ್ನೆಲೆಯಲ್ಲಿಯೂ

ವಿಜ್ಞಾನವು ಮಹತ್ತರ ಪಾತ್ರವನ್ನು ವಹಿಸುತ್ತದೆ. ವಿದ್ಯುತ್ ದೀಪದ ಸಂಶೋಧನೆಯಾಗಿರ ಬಹುದು ಇಲ್ಲವೇ ಉಪಗ್ರಹಗಳ ಸಂಶೋಧನೆಯಾಗಿರಬಹುದು ಇಲ್ಲವೆ ರಕ್ಷಣಾ ಯಂತ್ರಗಳು ಯುದ್ಧಾಸ್ತ್ರಗಳಾಗಿರಬಹುದು ಅಥವಾ ಮಾನವನ ವಾಸಕ್ಕಾಗಿ ಮತ್ತೊಂದು ಭೂಮಿಯ ಹುಡುಕಾಟವಾಗಬಹುದು ಎಲ್ಲವೂ ವಿಜ್ಞಾನದ ಫಲವೇ. ಕೆಲವು ಮಾನವನ ಜೀವನದಲ್ಲಿ ಸುಖವನ್ನು ನೀಡಿದರೆ ಮತ್ತೇ ಕೆಲವು ದುಃಖ ನೀಡುವುದರ ಮೂಲಕ ಅಂತ್ಯಗೊಂಡಿವೆ. ಹೀಗೆ ವಿಜ್ಞಾನ ಲೇಖನಗಳಲ್ಲಿ ಮಾನವ ಜೀವನದಲ್ಲಿನ ಸುಖ ದುಃಖಗಳ ಪಾತ್ರದ ಬಗ್ಗೆ ಸುದೀರ್ಘ ಚರ್ಚೆ ನಡೆದಿರುವುದರ ಮಾಹಿತಿ ಇರುವುದನ್ನು ಕಾಣಬಹುದು.

ವಿಜ್ಞಾನವು ಮಾನವನ ಜೀವನದೊಂದಿಗೆ ಅಲ್ಲದೆ ವಿಶ್ವದ ಸಂಪತ್ತನ್ನು ಹೆಚ್ಚಿಸುವಲ್ಲಿಯು ಪ್ರಭಾವಕಾರಿಯಾಗಿರುವುದನ್ನು ಕಾಣಬಹುದು. ಅಣುಯುಗದಿಂದ ಇಂದಿನ ಆಧುನಿಕ ಯುಗದವರೆಗೆ ಒಂದಲ್ಲ ಒಂದು ಕ್ಷೇತ್ರದಲ್ಲಿ ವೈಜ್ಞಾನಿಕ ಆವಿಷ್ಕಾರಗಳು ನಡೆಯುತ್ತಿರುವುದನ್ನು ಗಮನಿಸಬಹುದು. ಮಾಹಿತಿ ತಂತ್ರಜ್ಞಾನವನ್ನು ಉದಾಹರಣೆಯಾಗಿ ನೋಡುವುದಾದರೆ, ಮಾಹಿತಿ ತಂತ್ರಜ್ಞಾನವನ್ನು ಬಳಸಿಕೊಂಡು ಸಂಪನ್ಮೂಲಗಳ ಸರಿಯಾದ ಬಳಕೆಯಿಂದ ವಿಶ್ವದ ಸಂಪತ್ತನ್ನು ಹೆಚ್ಚಿಸುವಲ್ಲಿ ವಿಜ್ಞಾನ ಲೇಖನಗಳು ಮಹತ್ತರ ಪಾತ್ರ ವಹಿಸುವುದನ್ನು ಗುರ್ತಿಸಬಹುದು. ಆರ್ಥಿಕ, ಸಾಮಾಜಿಕ, ಮನಃಶಾಸ್ತ್ರೀಯ ಅವಶ್ಯಕತೆಗಳ ಜೊತೆಯಲ್ಲಿಯೇ ವಿಜ್ಞಾನ ತಂತ್ರಜ್ಞಾನದ ಅವಶ್ಯಕತೆಯು ಮುಖ್ಯ ಎಂಬುದನ್ನು ತಿಳಿಸುವುದು ಹಾಗೂ ಸಮಾಜದ ಅಭಿವೃದ್ಧಿಯಲ್ಲಿ ಆರ್ಥಿಕ, ಸಾಮಾಜಿಕ ಅವಶ್ಯಕತೆಗಳು ಎಷ್ಟು ಮುಖ್ಯವೋ ಅಷ್ಟೇ ಮುಖ್ಯ ವೈಜ್ಞಾನಿಕ ಚಟುವಟಿಕೆಗಳ ಸಂಶೋಧನೆಯ ಅವಶ್ಯಕತೆ ಎಂಬುದನ್ನು ವಿಜ್ಞಾನ ಲೇಖನಗಳು ಮನಗಾಣಿಸುವಂತಿರುವುದನ್ನು ಗಮನಿಸಲಾಗಿದೆ.

ಒಂದು ಸಮಾಜದ ಗತಕಾಲದ ಮೇಲೆ ಭವಿಷ್ಯ ರೂಪಿಸುವಲ್ಲಿ, ಮಾಹಿತಿ ನೀಡುವಲ್ಲಿ ವಿಜ್ಞಾನ ಲೇಖನವು ಸಹಕಾರಿಯಾಗಿದೆ. ವಿಜ್ಞಾನ ಬರಹಗಳು ಸ್ವರೂಪದ ಹಾಗೂ ಶೈಲಿಯ ದೃಷ್ಟಿಯಿಂದ ಎಷ್ಟೇ ತಿರಸ್ಕೃತಗೊಂಡರೂ, ಗತಕಾಲದ ಸತ್ಯ, ದುರಂತಗಳ ವಿಚಿತ್ರ ಸಮ್ಮಿಲನದ ಚಿತ್ರಣವನ್ನು ತೋರ್ಪಡಿಸುತ್ತದೆ. ಮಾನವನ ಹುಟ್ಟು ಬೆಳವಣಿಗೆ ಅಭಿವೃದ್ಧಿಗಳ ಮಧ್ಯೆ ಪ್ರಕೃತಿಯ ಏರುಪೇರು, ಕಟ್ಟು ಕೆಡವು ನೀತಿಯಿಂದಾಗಿ ಇಂದಿನ ಮನುಷ್ಯ ವಿಜ್ಞಾನದ ಮೊರೆ ಹೋಗುವ ಅನಿವಾರ್ಯತೆಯು ಸೃಷ್ಟಿಯಾಗಿದೆ. ಹೀಗಾಗಿ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಕೃತಕ ಪ್ರಕೃತಿ ಸೃಷ್ಟಿಸುವ ಮೂಲಕ ವಿಜ್ಞಾನವನ್ನು ಬಳಸಿಕೊಂಡರೆ, ಸಮುದ್ರ ತೀರ ರಾಷ್ಟ್ರ/ರಾಜ್ಯಗಳು ಸ್ವಾಭಾವಿಕ ವಿಜ್ಞಾನವನ್ನು ಬಳಸಿಕೊಳ್ಳುತ್ತಿರುವುದರ ಮಾಹಿತಿಯನ್ನು ವಿಜ್ಞಾನ ಸಾಹಿತ್ಯದಲ್ಲಿ ಕಾಣಬಹುದು.

ಸಾಂಕ್ರಾಮಿಕ ರೋಗಗಳು, ಪ್ರಕೃತಿ ವಿಕೋಪಗಳಾದ ಬರಗಾಲ, ಪ್ರವಾಹ, ಕ್ಷಾಮ ಮತ್ತಿತರ ಸಮಸ್ಯೆಗಳ ವಿರುದ್ಧ ಹಿಂದಿನ ಮಾನವನು ಸೆಣಸಾಡಿರುವುದರ ಐತಿಹ್ಯದ ಮೇಲೆ ಇಂದಿನ ವಿಜ್ಞಾನ ಯುಗದಲ್ಲಿ ಅಂತಹ ಮಾರಕ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದರೊಂದಿಗೆ ಇತರ ಎಲ್ಲಾ ಕ್ಷೇತ್ರಗಳಾದ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ, ನೈತಿಕ ಮೊದಲಾದವುಗಳಲ್ಲಿ ಅಭಿವೃದ್ಧಿಯಾಗಿರುವುದನ್ನು ವಿಜ್ಞಾನ ಲೇಖನಗಳು ತಿಳಿಸುತ್ತವೆ.

ಪರಿಸರ ಮತ್ತು ಮನುಷ್ಯರ ನಡುವೆ ನಿರಂತರ ಸಂಬಂಧವಿರುವುದನ್ನು ಬಹಳಷ್ಟು ವಿಜ್ಞಾನ ಲೇಖನಗಳಲ್ಲಿ ತಿಳಿಸಲಾಗಿದೆ. ಪರಿಸರದ ಸಮಸ್ಯೆಗಳನ್ನು ನಿವಾರಿಸುವಲ್ಲಿ ವಿಜ್ಞಾನ ಸಾಹಿತ್ಯವು ಅಪಾರ ಮಾಹಿತಿಯನ್ನು ನೀಡುತ್ತದೆ. ಮನುಷ್ಯ ಹಾಗೂ ಪ್ರಕೃತಿಯೂ ಗತಕಾಲದಿಂದಲೂ ಒಂದಲ್ಲ ಒಂದು ರೀತಿಯಲ್ಲಿ ಸಂಘರ್ಷಕ್ಕೆ ಒಳಗಾಗಿರುವುದನ್ನು ಕಾಣಬಹುದು. ಅದು ಪ್ರಾಕೃತಿಕವಾಗಿ ನಡೆಯುವ ಭೂಕಂಪ, ಕ್ಷಾಮ ಮೊದಲಾದವುಗಳೊಂದಿಗಿನ ಸಂರ್ಘವಾಗಿರಬಹುದು. ಇಲ್ಲವೇ ಮನುಷ್ಯ–ಮನುಷ್ಯ ಮತ್ತು ಮನುಷ್ಯ–ಸಮಾಜದ ನಡುವಿನ ಸಂಘರ್ಷವಾಗಿರಬಹುದು. ಈ ಎಲ್ಲಾ ರೀತಿಯ ಸಂಘರ್ಷಗಳ ನಿವಾರಣೆಯಲ್ಲಿ ವಿಜ್ಞಾನ ಸಾಹಿತ್ಯವು ಮಹತ್ತರವಾದ ಪಾತ್ರ ವಹಿಸುವುದು.

ಇಂದಿನ ಯುಗದಲ್ಲಿರುವ ಬಿಲಿಯಾನುಗಟ್ಟಲೆ ಜನಸಮೂಹವನ್ನು ಪ್ರಕೃತಿಯೊಂದೇ ಸಾಕಿ ಸಲಹಲಾರದು. ಇದಕ್ಕಾಗಿ ಮನುಷ್ಯನು ತಾನು ಬೆಳೆದು ಉಳಿಯುವುದರೊಂದಿಗೆ ತನ್ನ ಸುತ್ತ ಮುತ್ತಲಿನ ಪರಿಸರವನ್ನು ಸಾಕಿ ಸಲಹಬೇಕು. ಹಿಂದಿನ ಸಮಸ್ಯೆಯ ಹತ್ತು ಪಟ್ಟು ಸಮಸ್ಯೆಗಳು ಇಂದು ಉದ್ಭವಿಸುತ್ತಿರುವುದು ಮನುಷ್ಯನ ದುರಾಸೆಯ ಫಲವಾಗಿದೆ ಎಂಬುದನ್ನು ವಿಜ್ಞಾನ ಸಾಹಿತ್ಯದಲ್ಲಿ ಚಿತ್ರಿಸಲಾಗಿರುವುದು. ಇದಕ್ಕೆ ಉದಾಹಣೆಯಾಗಿ ಗಮನಿಸುವುದಾದರೆ, ನಾಗೇಶ್ ಹೆಗಡೆಯವರ 'ಇರುವುದೊಂದೆ ಭೂಮಿ'ಯಲ್ಲಿನ ಎಲ್ಲಾ ಲೇಖನಗಳು ಪರಿಸರ ವಿಜ್ಞಾನದ ಬಗ್ಗೆ ಮಾಹಿತಿ ನೀಡುವುದರೊಂದಿಗೆ ಮಾನವನಿಂದ ಪರಿಸರವು ಹೇಗೆ ಸಮಸ್ಯೆಯನ್ನು ಅನುವಿಸುತ್ತಿದೆ ಎಂಬುದನ್ನು ತಿಳಿಸಲಾಗಿದೆ. ಜೊತೆಗೆ 'ಜ್ಞಾನ ವಿಜ್ಞಾನ', 'ವಿಜ್ಞಾನ ಸಾಹಿತ್ಯ ೧೯೯೮', ೨೦೦೦, ೨೦೧೦, ೨೦೧೨–೧೨' ಮೊದಲಾದ ಕೃತಿಗಳಲ್ಲಿ ಇದರ ವಿವರಣೆಯಿದ್ದು ಸಮಾಜಿಕ ಕಳಕಳಿಯ ಸೂಚಕವಾಗಿದೆ.

ಹಿಂದೆಂದು ಕಂಡರಿಯದ ಸುನಾಮಿ ಎಂಬ ದೈತ್ಯ ಅಲೆಗಳು, ಪ್ರಕೃತಿಯ ಋತುಚಕ್ರದಲ್ಲಿನ ಬದಲಾವಣೆ ಸರಿಯಾದ ಸಮಯಕ್ಕೆ ಮಳೆ ಬಾರದೆ ಇರುವುದು ಮೊದಲಾದ ಸಮಸ್ಯೆಗಳಿಗೆ ವಿಜ್ಞಾನ ಸಾಹಿತ್ಯವು ಸೂಕ್ತ ಪರಿಹಾರವನ್ನು ಜಾಗೃತಾ

ಮಾಹಿತಿಯನ್ನು ಸಂಪೂರ್ಣವಾಗಿ ಅಲ್ಲದಿದ್ದರೂ ಮುನ್ನೆಚ್ಚರಿಕೆಯ ರೂಪವಾಗಿ ನೀಡುವುದನ್ನು ಕಾಣಬಹುದು. ಪರಸ್ಪರವಾಗಿ ಹೆಣೆದುಕೊಂಡಿರುವ ಪರಿಸರದ ಸಮಸ್ಯೆಗಳನ್ನು ನಾಗರೀಕರಾದ ನಾವು ಅರಿತು ನಮ್ಮ ಏಳಿಗೆಗೆ ಒತ್ತಾಸೆಕೊಡುವ ಪ್ರಕೃತಿ ನಡುವಿನ ಸುಪ್ತ ಸಂಬಂಧವನ್ನು ಅರ್ಥ ಮಾಡಿಕೊಳ್ಳುವಲ್ಲಿ ವಿಜ್ಞಾನ ಸಾಹಿತ್ಯವು ಸಹಕಾರಿಯಾಗಿದೆ. ಮಾನವ ಮತ್ತು ಪರಿಸರದ ನಡುವಿನ ಪ್ರಭುತ್ವವೇ ವಿಜ್ಞಾನವಾಗಿದೆ ಎಂಬ ಮಾಹಿತಿಯು ವಿಜ್ಞಾನ ಲೇಖನದಲ್ಲಿದೆ.

ಪರಿಸರದ ಮಾಹಿತಿಯ ಜಾಗೃತಿಯೊಂದಿಗೆ, ಭೌತ ಪ್ರಪಂಚದ ಬಗೆಗಿನ ಅಧ್ಯಯನವನ್ನು ತಿಳಿಸುವ ಸಾಮಾಜಿಕ ಹೊಣೆಗಾರಿಕೆಯನ್ನು ವಿಜ್ಞಾನ ಕೃತಿ/ಸಬರಹವು ಹೊಂದಿದೆ. ವಿಜ್ಞಾನವು ತನ್ನ ಪ್ರಾಯೋಗಿಕ ಗುಣದ ಮೂಲಕ ಪ್ರತಿದಿನ ಘಂಟೆ ಘಂಟೆಗೆ ಒಂದಲ್ಲ ಒಂದು ರೀತಿಯ ಅನ್ವೇಷಣೆಯಲ್ಲಿ ತೊಡಗಿದ್ದು ಬದುಕಿನ ಸೌಕರ್ಯ ಮತ್ತು ಸೌಲಭ್ಯಗಳನ್ನು ಹೆಚ್ಚಿಸಲು ನೆರವಾಗುತ್ತದೆ. ಅಲ್ಲದೆ ವೈಜ್ಞಾನಿಕವಾಗಿ ಅಭಿವೃದ್ಧಿ ಹೊಂದಿದ ಇಂದಿನ ಸಮಾಜದ ಜನತೆಗೆ ನಿರಂತರವಾಗಿ ತಮ್ಮ ಬದುಕಿಗೆ ಅಗತ್ಯವಾದ ಸಾಧನ ಸಲಕರಣೆಗಳ ಸಮೂಹವೇ ದೊರೆಯುವುದಕ್ಕೆ ವಿಜ್ಞಾನ ಸಾಹಿತ್ಯವೇ ಕಾರಣ.

ಪ್ರಾಪಂಚಿಕ ಅನುಭವಿಕ ಅವಲೋಕನಗಳನ್ನು ತಾರ್ಕಿಕವಾಗಿ ತೀರ್ಮಾನಿಸಿ ಸತ್ಯಾಸತ್ಯತೆಯನ್ನು ತಿಳಿಸುವುದು ವಿಜ್ಞಾನದ ಆಶಯ. ಅನುಭವದಿಂದ ಮತ್ತು ಅನುಕರಣೆಯಿಂದ ಕಲಿಯಬಹುದಾದ ವೈಜ್ಞಾನಿಕ ಅನ್ವೇಷಣೆಗಳು ನೈಜವಾಗಿ ಒಂದು ಕೌಶಲ್ಯ. ಪ್ರಕಟಿತ ಮಾಹಿತಿ ಅಥವಾ ಜ್ಞಾನಕ್ಕಷ್ಟೇ ಸೀಮಿತವಾಗದೆ ವಿಜ್ಞಾನದ ಬಗ್ಗೆ ಆಸಕ್ತಿಯಿರುವ ಯಾರು ಬೇಕಾದರೂ ಅನುಭವಿಕ ಅವಲೋಕನವನ್ನು ಮಾಡಬಹುದು. ಬಹಳಷ್ಟು ಬಾರಿ ನಡೆದಿರುವ ಘಟನೆಗಳು ಮತ್ತೊಮ್ಮೆ ನಡೆಯಬಹುದು. ವೈಯಕ್ತಿಕ ಹಿತಾಸಕ್ತಿ ಅವಲೋಕನಕ್ಕೆ ಮಾತ್ರ ಸೀಮಿತವಾಗದೆ, ಸಮೂಹ ಅನುಭವಿಕ ಅವಲೋಕನಗಳ ತಾರ್ಕಿಕ ತೀರ್ಮಾನದೊಂದಿಗೆ ಸತ್ಯಾಸತ್ಯತೆಯನ್ನು ತಿಳಿಸುವುದು ವಿಜ್ಞಾನ ಸಾಹಿತ್ಯ ಲೇಖನಗಳ ಮೂಲ ಕಾರ್ಯವಾಗಿದೆ.

ಆಧುನಿಕ ವಿಜ್ಞಾನವು ಆಧ್ಯಾತ್ಮ ಪ್ರವೃತ್ತಿಯಿಂದ ಕೂಡಿದೆ. ವಿವೇಕಾನಂದರು ತಮ್ಮ 'ಧರ್ಮ ಮತ್ತು ವಿಜ್ಞಾನ' ಎಂಬ ಉಪನ್ಯಾಸದಲ್ಲಿ 'ಅನುಭವವೊಂದೇ ಜ್ಞಾನದ ಮೂಲ. ಈ ಜಗತ್ತಿನಲ್ಲಿ ಖಾತ್ರಿಯಿಲ್ಲದೆ ಒಂದೇ ಒಂದು ವಿಜ್ಞಾನವೆಂದರೆ ಧರ್ಮ. ಏಕೆಂದರೆ ಅದನ್ನು ಅನುಭವದ ವಿಜ್ಞಾನವನ್ನಾಗಿ ಕಲಿಸುತ್ತಿಲ್ಲ'[೩]. ಹಿಂದಿನ ಕಾಲದ ಮಾನವನಿಗೆ ಎಲ್ಲವೂ ರಹಸ್ಯಮಯವಾಗಿತ್ತು. ಬಾಹ್ಯಾಕಾಶ, ಭೂಮಿ ಮತ್ತಿತರ ಅಂಶಗಳಲ್ಲಿ ಆಧ್ಯಾತ್ಮವನ್ನು

ಕಾಣುತ್ತಿದ್ದ. ವಿಚಾರಶೀಲನಾಗಿ, ಚಿಂತಕನಾಗಿ, ವೀಕ್ಷಕನಾಗಿ ಮನುಷ್ಯನು ಜಗತ್ತಿನ ಬಗ್ಗೆ ಅಜ್ಞಾತನಾಗಿದ್ದ. ವಿಜ್ಞಾನ ಸಾಹಿತ್ಯದ ಅಭಿವೃದ್ಧಿಯಿಂದಾಗಿ ಬೆಳೆದ ವೈಜ್ಞಾನಿಕ ದೃಷ್ಟಿಕೋನದಿಂದ ವಿಶ್ವವನ್ನು ಕಾಣುತ್ತಿದ್ದಾನೆ. ಧರ್ಮದಲ್ಲಿ ಮತ್ತು ಸಾಂಪ್ರದಾಯಿಕ ಆಚರಣೆಗಳಲ್ಲಿ ನಿಶೇಧಿಸಿದ ಬಾಹ್ಯಾಕಾಶಯಾನವನ್ನು ಮಾಡಿ ಅಂತರೀಕ್ಷದಲ್ಲಿನ ಅದ್ಭುತ ಮಾಹಿತಿಯನ್ನು ಜಾಲಾಡುತ್ತಿದ್ದಾನೆ. ಅಲ್ಲದೆ ಇತರ ಜೀವ ಜಾಲದ ರಹಸ್ಯವನ್ನು ತಿಳಿಯುವ ಪ್ರಯತ್ನ ಮಾಡುತ್ತಾ ಕೆಲವು ಹಂತಗಳಲ್ಲಿ ಸಫಲನಾಗಿದ್ದಾನೆ. ಇದಕ್ಕೆ ಕಾರಣ ವಿಷಯದ ಬಗೆಗಿನ ಮಾಹಿತಿಯಾಗಿದ್ದು ವಿಜ್ಞಾನ ಲೇಖನಗಳು ಈ ನಿಟ್ಟಿನಲ್ಲಿ ಕಾರ್ಯಪ್ರವೃತ್ತವಾಗಿರುವುದನ್ನು ಗಮನಿಸಬಹುದು.

ಹಳೆಯದನ್ನು ಬುಡಮೇಲು ಮಾಡಿ ಜಗತ್ತಿಗೆ ಹೊಸದನ್ನು ನೀಡುವಲ್ಲಿ ವಿಜ್ಞಾನ ಲೇಖನಗಳು ಸಹಕಾರಿಯಾಗಿವೆ. ವಿಜ್ಞಾನ ಎಂಬುದು ಅಭಿವೃದ್ಧಿಯೊಂದಿಗೆ ಸೌಖ್ಯವನ್ನು ನೀಡುವುದಕ್ಕೆ ಇರುವ ಸಾಧನ ಮಾತ್ರವಲ್ಲದೆ, ಹಳೆಯದನ್ನು ಬುಡಮೇಲು ಮಾಡಿ ಇಲ್ಲವೇ ಉತ್ತಮಪಡಿಸಿ ಜಗತ್ತಿಗೆ ಹೊಸ ಆವಿಷ್ಕಾರವನ್ನು ನೀಡುವ ಮೂಲಕ ಮಹತ್ವದ್ದಾಗಿದೆ. ಅಂದರೆ ಎತ್ತಿನಗಾಡಿಯು ಬಸ್ಸಾಗಿ ಕಾರಾಗಿ ಬದಲಾದುದು, ಮಾಹಿತಿ ಸಂವಹನದಲ್ಲಿ ಪಾರಿವಾಳದಿಂದ ಮೊಬೈಲ್ ಫೋನ್ ಹೀಗೆ ಒಂದರ ಅವಸಾನದೊಂದಿಗೆ ಮತ್ತೊಂದರ ಆವಿಷ್ಕಾರವು ಸುಖ ಆರಾಮ ಜೀವನಕ್ಕೆ ದಾರಿ ಮಾಡಿಕೊಟ್ಟಿರುವುದು ಸಮಾಜದ ಬೆಳವಣಿಗೆಗೆ ಸಹಾಯ ಮಾಡಿರುವ ವಿಚಾರವು ವಿಜ್ಞಾನ ಲೇಖನಗಳಿಂದ ತಿಳಿಯಲು ಸಾಧ್ಯವಾಗಿದೆ.

ವಿಜ್ಞಾನವು ಸಮಾಜದಲ್ಲಿನ ಮಾನವನ ಜೀವನ, ಸಾಮಾಜಿಕ ರಾಜಕೀಯ ಕ್ಷೇತ್ರಸ ಮಾತ್ರವಲ್ಲದೆ ಕೃಷಿ ಕ್ಷೇತ್ರದ ಮೇಲೂ ತನ್ನ ಪ್ರಭಾವ ಬೀರಿರುವುದನ್ನು ಲೇಖನಗಳು ತಿಳಿಸುತ್ತವೆ. ಉತ್ಪಾದನೆಯ ಹೆಚ್ಚಳ, ಸ್ವಾವಲಂಬನೆ ಮತ್ತು ಸಮಾಜದಲ್ಲಿನ ತರತಮಗಳ ನಿವಾರಣೆಯಲ್ಲಿ ವೈಜ್ಞಾನಿಕ ಚಿಂತನೆಯು ಪ್ರಮುಖ ಪಾತ್ರ ವಹಿಸುವುದರೊಂದಿಗೆ ವಿಜ್ಞಾನವು ಮೌಲ್ಯಯುತ ಸಾಧನವಾಗಿದೆ. ಕೃಷಿಯಿಂದ ಮಾತ್ರ ಉತ್ಪಾದನೆಯ ಹೆಚ್ಚಳವಾಗಿ ಅನುಭೋಗಿಗೆ ಅಗತ್ಯ ಸಾಮಗ್ರಿಗಳನ್ನು ಕೈಗಾರಿಕೆಗಳು ಒದಗಿಸಲು ಸಾಧ್ಯ. ವಿಜ್ಞಾನದ ಪ್ರಭಾವದಿಂದಾಗಿ ಕೃಷಿ ಕ್ಷೇತ್ರದಲ್ಲಿ ಬಹಳಷ್ಟು ಸಂಶೋಧನೆಗಳು ನಡೆದು ಮಳೆಯನ್ನು ಆಶ್ರಯಿಸಿದ್ದ ರೈತ ಇಂದು ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ನಿರ್ಮಿಸಿ ವಿವಿಧ ನೀರಾವರಿ ವ್ಯವಸ್ಥೆಯನ್ನು ಮಾಡಿಕೊಂಡು ಸ್ವಾವಲಂಬಿಗಳಾಗಿರುವುದನ್ನು ವಿಜ್ಞಾನ ಸಾಹಿತ್ಯದಲ್ಲಿ ಕಾಣಬಹುದು.

ಸಣ್ಣ ಸಣ್ಣ ಕೊಳವೆ ಬಾವಿಗಳಿಗೆ ಬದಲಾಗಿವೈಜ್ಞಾನಿಕವಾದ ಮಳೆ ನೀರು ಕೊಯ್ಲಿಗೆ ಆದ್ಯತೆ ನೀಡಲಾಗುತ್ತಿದೆ. ಅಲ್ಲದೆ ಹಳ್ಳಿಗಳಲ್ಲಿ ವಿದ್ಯುತ್ತಿನ ವ್ಯವಸ್ಥೆಯನ್ನು ಅಧಿಕಗೊಳಿಸಿ

ವೈಜ್ಞಾನಿಕ ತಂತ್ರಜ್ಞಾನಾಧಾರಿತ ಕೃಷಿಯನ್ನು ಮಾಡಲಾಗುತ್ತಿದೆ. ವಿಜ್ಞಾನಿಗಳು ಆವಿಷ್ಕರಿಸಿದ ಹೊಸ ತಳಿಗಳಿಂದ ಹಿಂದೆಂದು ಕಾಣದಿದ್ದ ಅತಿ ಹೆಚ್ಚು ಫಸಲನ್ನು ಪಡೆಯಲಾಗುತ್ತಿದೆ. ಬರಗಾಲವನ್ನು ಎದುರಿಸುವ ಧೈರ್ಯವನ್ನು ರೈತರಲ್ಲಿ ಕಾಣಲಾಗುತ್ತಿದೆ. ಕೃಷಿಯನ್ನು ಕೇವಲ ಉತ್ತಿ ಬಿತ್ತಿ ಬೆಳೆ ಬೆಳೆಯಲು ಮಾತ್ರ ಸೀಮಿತಗೊಳಿಸದೆ ಅದೊಂದು ವಿಜ್ಞಾನವೆಂದು ಪರಿಗಣಿಸಿ ಅದಕ್ಕೆ ಸಂಬಂಧಿಸಿದಂತೆ ಬಹಳಷ್ಟು ಸಾಹಿತಿಗಳು ಸಾಹಿತ್ಯ ಕೃಷಿಯನ್ನು ಮಾಡಿರುವುದನ್ನು ಗಮನಿಸಬಹುದು. ಹೀಗೆ ವಿಜ್ಞಾನ ಸಾಹಿತ್ಯದಲ್ಲಿನ ಕೃಷಿ ವಿಜ್ಞಾನಕ್ಕೆ ಸಂಬಂಧಿಸಿದ ಲೇಖನಗಳು ಅಗತ್ಯ ಮಾಹಿತಿಯನ್ನು ನೀಡುವ ಮೂಲಕ ಕೃಷಿಯ ಅಭಿವೃದ್ಧಿಗೆ ಸಹಕರಿಸಿದೆ.

ನಾಗೇಶ್ ಹೆಗಡೆರವರ ಒಂದು ಲೇಖನದಲ್ಲಿ ಗಮನಿಸಿದಂತೆ ಪ್ರಳಯಾಂತಕ ಪ್ರಮಾದ, ಮಾಹಿತಿ ಜಾಲದ ಕುಸಿತ, ಸರ್ವಾಂತರ್ಯಾಮಿ ಹುಳ, ತೋಳ ಬಂತಲೇ ತೋಳ ಮೊದಲಾದ ಉಪ ಶೀರ್ಷಿಕೆಗಳೊಂದಿಗೆ ವಿಷಯದ ನಿರೂಪಣಾ ಶೈಲಿಯು ಜನಜನಿತ ಭಾಷೆಯ ಬಳಕೆಯೊಂದಿಗೆ ವ್ಯಕ್ತವಾಗಿರುವುದು ಬಹು ಉಪಯುಕ್ತವಾಗಿದೆ. ಅಲ್ಲದೆ ೧೯೯೯ರ ಡಿಸೆಂಬರ್ ೩೧ರ ರಾತ್ರಿಯಂದು ಉದ್ಭವಿಸುವ ಕಂಪ್ಯೂಟರ್‌ನಲ್ಲಿನ ಸಮಸ್ಯೆಯ ಪರಿಣಾಮವನ್ನು ವಿವರಿಸುತ್ತಾ, ಇಂತಹ ಸಂದಿಗ್ಧ ಸಮಯದಲ್ಲಿ ಸಮಸ್ಯೆಯ ಪರಿಹಾರದ ಶೋಧನೆಗಾಗಿ ಬೆಂಗಳೂರಿನ ವಿದ್ಯಾವಂತ ಕಂಪ್ಯೂಟರ್ ಪರಿಣತರಿಗೆ ಅತಿ ಹೆಚ್ಚು ಬೇಡಿಕೆ ಬಂದುದನ್ನು ಹೇಳುವುದರೊಂದಿಗೆ ಬಹಳಷ್ಟು ಉದ್ಯೋಗ ಸೃಷ್ಟಿಯಾದುದರ ಬಗ್ಗೆಯೂ ಮಾಹಿತಿ ನೀಡಿದ್ದಾರೆ. ಅದರಂತೆ 'ಬಂತು ೨೯ನೇ ದಿನ'[೪] ಲೇಖನದಲ್ಲಿ ವಿನಾಶದ ಅಂಚಿಗೆ ಹೋಗುತ್ತಿರುವ ಭೂಮಿಯ ಹಂತ ಹಂತದ ವಿವರಣೆಯನ್ನು ಕಾಣಬಹುದು. ಇದರ ಮೂಲಕ ತಮ್ಮ ಲೇಖನದ ವಿವರಣೆಯಲ್ಲಿ ವಿಜ್ಞಾನ ತಂತ್ರಜ್ಞಾನದ ಆವಿಷ್ಕಾರವು ಎಷ್ಟು ಒಳಿತನ್ನು ಮಾಡುವುದೋ ಅಷ್ಟೇ ತೊಂದರೆಯಿಂದ ಕೂಡಿರುತ್ತದೆ ಎಂಬುದರ ಎಚ್ಚರಿಕೆಯ ನುಡಿಯನ್ನು ನೀಡುವುದರೊಂದಿಗೆ ಜಾಗೃತಿಯನ್ನು ಮೂಡಿಸುವಲ್ಲಿ ಸಾಮಾಜಿಕ ಕಳಕಳಿಯು ಎದ್ದು ಕಾಣುತ್ತಿದೆ.

ಅಲ್ಲದೆ 'ಗ್‌ಗ್‌ಗ್‌ಗ್ ಗಣೇಶನಾದ'[೫] ಲೇಖನದಲ್ಲಿಯೂ ಸಹ ಉಗ್ಗುವಿಕೆಯನ್ನು ಒಂದು ದೊಡ್ಡ ಸಮಸ್ಯೆಯೆಂದು ಗುರುತಿಸುವ ನಮ್ಮ ಸಮಾಜಕ್ಕೆ ತಕ್ಕ ಉತ್ತರವನ್ನು ಬಹಳ ಸರಳ ಸುಲಭವಾಗಿ ವೈಜ್ಞಾನಿಕ ವಿಧಾನದ ಮೂಲಕ ಪರಿಹರಿಸುತ್ತ ಯಾವುದೇ ಸಮಸ್ಯೆಯು ಪರಿಹಾರದಿಂದ ಹೊರತಾದುದಲ್ಲ ಎಂಬುದನ್ನು ಹಾಗೂ ಪ್ರತಿಯೊಂದು ಸಮಸ್ಯೆಯನ್ನು ವೈಜ್ಞಾನಿಕ ಹಿನ್ನೆಲೆಯಲ್ಲಿ ನೋಡಿದರೆ ನಮ್ಮಲ್ಲೇ ಅದಕ್ಕೆ ಪರಿಹಾರವು ದೊರಕುವುದು ಎಂಬುದನ್ನು ಲೇಖನದಲ್ಲಿ ಲೇಖಕರು ಬಹಳ ಸರಳವಾಗಿ

ತಿಳಿಸುವುದರೊಂದಿಗೆ ಸವಾಜಿಕ ಹೊಣೆಗಾರಿಕೆಯನ್ನು ತೋರಿಸಿರುವುದನ್ನು ಗಮನಿಸಬಹುದು.

ಆದಿ ಮಾನವ ವ್ಯವಸ್ಥೆಯಲ್ಲಿದ್ದ ಮನುಷ್ಯ ಬೆಣಚುಕಲ್ಲನ್ನು ತಿಕ್ಕಿ ತೀಡಿ ಚೂಪಾಗಿ ಮಸೆದು ತನಗೆ ಅಗತ್ಯವಾದ ಆಯುಧವನ್ನಾಗಿ ಮಾಡಿಕೊಂಡು ತನ್ನನ್ನು ಇತರ ಜೀವಿಗಳಿಂದ ಹಾಗೂ ತನ್ನಂತೆ ಇರುವ ಇತರ ಮನುಷ್ಯರಿಂದ ರಕ್ಷಣೆಯನ್ನು ಪಡೆಯಲು ಉಪಯೋಗಿಸುತ್ತಾ, ಕ್ರಮೇಣ ಕಲ್ಲನೇ ಕರಗಿಸಿ ಲೋಹಗಳ ಅಸ್ತ್ರಗಳನ್ನು ರೂಪಿಸಿ ದುರ್ಬಲ ಮನುಷ್ಯನ ಮೇಲೂ ಅಧಿಕಾರ ಪ್ರಭುತ್ವ ಸಾಧಿಸುತ್ತ ಸಮಾಜದಲ್ಲಿ ತನ್ನ ನೆಲೆಯೂರುತ್ತಾ ಬರಲು ಮೂಲ ಕಾರಣವೇ ವಿಜ್ಞಾನ. ಅಲ್ಲದೇ ಕಾಲ ಬದಲಾದಂತೆ ಮೂಢನಂಬಿಕೆ, ರೂಢನಂಬಿಕೆಗಳನ್ನು ವೈಜ್ಞಾನಿಕ ನಂಬಿಕೆಯೊಂದಿಗೆ ತಾಳೆಹಾಕುತ್ತಾ, ಸತ್ಯದ ಹೊಸ ಅನ್ವೇಷಣೆಯನ್ನು ವಾಡುತ್ತಾ ಸಾವಾಜಿಕವಾಗಿ ನೆಲೆಯೂರಿದ್ದ ಸಂಪ್ರದಾಯಗಳನ್ನು ಬದಲಿಸುವಲ್ಲಿ ವಿಜ್ಞಾನದ ಪಾತ್ರವು ಹಿರಿದಾದುದು. ನಾಗೇಶ ಹೆಗಡೆರವರು 'ಗಜಮುಖನ ಕ್ಷೀರದಾಹ'[೬] ಲೇಖನದಲ್ಲಿ ದ್ರವ ಪದಾರ್ಥಕ್ಕೆ ಲೋಹವು ಸ್ಪಂಧಿಸುವ ಲೋಹದ ಸ್ವರೂಪದ ಅನಾವರಣದೊಂದಿಗೆ ಸಮಾಜದಲ್ಲಿನ ಅಂಧನಂಬಿಕೆಗಳಿಗೆ ಸರಿಯಾದ ಉತ್ತರವನ್ನು ನೀಡಿರುವುದು ಇಲ್ಲಿ ಉಲ್ಲೇಖಾರ್ಹ.

ವಿಜ್ಞಾನಕ್ಕೆ ಸಾಂಸ್ಕೃತಿಕ ವೌಲ್ಯದೊಂದಿಗೆ ಆರ್ಥಿಕತೆಯ ಅರಿವಿದೆ. ಅಂದರೆ ಜನಜೀವನದಲ್ಲಿ ಯಾವುದೇ ವಸ್ತುವನ್ನು ಎಷ್ಟು, ಹೇಗೆ ಯಾವಾಗ ಉಪಯೋಗಿಸಬೇಕೆಂಬ ಮಾಹಿತಿಯನ್ನು ನೀಡುವುದರೊಂದಿಗೆ ಅನಗತ್ಯ ಉಪಯೋಗವನ್ನು ತಡೆಯುವುದು ದೇಶದ ಆರ್ಥಿಕತೆಗೆ ಸಹಕರಿಸುತ್ತದೆ. ಅಂದರೆ ವಿದ್ಯುತ್ತಿನ ಉತ್ಪಾದನೆ, ಬಳಕೆ ಮೊದಲಾದವುಗಳ ಬಗ್ಗೆ ಮಾಹಿತಿ ನೀಡುವುದರೊಂದಿಗೆ ಅನಗತ್ಯ ಪೋಲಾಗುದನ್ನು ತಡೆಯುವಂತೆ ಮಾಡುತ್ತದೆ. ಜೊತೆಗೆ ಆರೋಗ್ಯದ ಬಗೆಗಿನ ತಿಳುವಳಿಕೆಯೊಂದಿಗೆ ಅನಗತ್ಯ ಖರ್ಚು ವೆಚ್ಚವನ್ನು ತಡೆಯುವ ಮೂಲಕ ಆರ್ಥಿಕತೆಯ ಮಾಹಿತಿ ನೀಡುವುದನ್ನು ಗಮನಿಸಬಹುದು.

ವಿಜ್ಞಾನವು ವಿಷಯ ವಸ್ತುವಿನ ಬಗ್ಗೆ ಮಾಹಿತಿ ನೀಡುವುದಷ್ಟೇ ಅಲ್ಲದೇ ಸಮಾಜದಲ್ಲಿ ಜನರು ಬದುಕುವ ಬಗ್ಗೆ, ಬದುಕನ್ನು ನೋಡಬೇಕಾದ ಮತ್ತು ಗ್ರಹಿಸಬೇಕಾದ ದೃಷ್ಟಿಕೋನವನ್ನು ಬದಲಿಸುತ್ತದೆ. ಹೀಗಾಗಿಯೇ ವಿಜ್ಞಾನ ಸೂರ್ಯ ಎಂಬಲ್ಲಿ ಲೇಖಕರಾದ ಎ.ಓಆವಲಮೂರ್ತಿರವರು ಆರ್.ಎಲ್ ನರಸಿಂಹಯ್ಯನವರ ನುಡಿಯನ್ನು ಬಳಸಿ ಈ ರೀತಿ ಹೇಳಿದ್ದಾರೆ "ನಮ್ಮ ಬದುಕಿನ ಹೊರ ರೂಪವನ್ನು ವಿಜ್ಞಾನ ಮಾರ್ಪಡಿಸಿರುವುದೇ

ಅಲ್ಲದೇ ನಮ್ಮ ಆಲೋಚನಾ ಮಾರ್ಗಕ್ಕೆ ಹೊಸ ತಿರುವನ್ನೂ ಅದು ಕೊಟ್ಟಿದೆ" ಎಂದು ಹೇಳುತ್ತಾ ವಿಜ್ಞಾನವೊಂದು ಸಂಸ್ಕಾರವೂ ಹೌದು"[೭] ಎಂದು ಹೇಳಿದ್ದಾರೆ. ಅದರಂತೆ ಜೆ.ಆರ್.ಲಕ್ಷ್ಮಣರಾಯರು "ವಿಜ್ಞಾನಕ್ಕೊಂದು ಸಾಂಸ್ಕೃತಿಕ ಮೌಲ್ಯವಿದೆ"[೮] ಎಂದು ಹೇಳಿರುವುದು ಔಚಿತ್ಯ ಪೂರ್ಣವಾಗಿದೆ. ವಿಜ್ಞಾನವು ಪ್ರಯೋಗದ ಫಲಿತಾಂಶದ ಮೇಲೆ ಸರಿ ತಪ್ಪುಗಳನ್ನು ನಿರ್ಧರಿಸಿ ಸರಿತೋರಿದುದನ್ನು ನೇರವಾಗಿ ಹೇಳುವ ಧೈರ್ಯವನ್ನು ವಿಜ್ಞಾನ ಸಾಹಿತ್ಯವು ನೀಡುವುದು ಸಾಂಸ್ಕೃತಿಕ ಮೌಲ್ಯದ ದ್ಯೋತಕ ಎಂಬುದನ್ನು ಬಹಳಷ್ಟು ಲೇಖನ ಕೃತಿಗಳಲ್ಲಿ ಹೇಳಿರುವುದನ್ನು ಕಾಣಬಹುದು.

ಅನುಭವಿಗಳು ಹಾಗೂ ವಿಷಯ ಜ್ಞಾನಿಗಳು ಹೇಳುವಂತೆ ತತ್ವವಾಗಿ ಆರಂಭವಾಗುವ ಪ್ರತಿಯೊಂದು ವೈಜ್ಞಾನಿಕ ಚಿಂತನೆಯು ಕಲೆಯ ರೂಪವನ್ನು ಪಡೆದು ಅಂತ್ಯವಾಗುತ್ತದೆ. ವೈಜ್ಞಾನಿಕ ಚಿಂತನೆಯು ಕಾರ್ಯಸಿದ್ದಿಯಲ್ಲಿ ಕೊನೆಗೊಳ್ಳುವುದು ಪ್ರಾಕ್ ಕಲ್ಪನೆಯಾಗಿ. ಹಾಗೆಯೇ ವಿಜ್ಞಾನ ಸಾಹಿತ್ಯವು ತತ್ವ, ವೈಜ್ಞಾನಿಕ ಚಿಂತನೆಗಳ ಲಕ್ಷಣಗಳಿಂದ ಕೂಡಿದ್ದು, ಸತ್ಯದ ಮೇಲೆ ತನ್ನ ಅಸ್ಥಿತ್ವವನ್ನು ಕಾಪಾಡಿಕೊಂಡಿರುತ್ತದೆ. ಅಲ್ಲದೆ ಸಮಾಜದ ಇತರ ಎಲ್ಲ ಕ್ಷೇತ್ರಗಳಂತೆ ವೈಜ್ಞಾನಿಕ ಚಿಂತನೆ ಮತ್ತು ತಾತ್ವಿಕತೆಯು ವಿಜ್ಞಾನ ಲೇಖನ ಹಾಗೂ ಸಾಹಿತ್ಯದ ಮೇಲೆ ಅಚ್ಚಳಿಯದ ಪ್ರಭಾವ ಬೀರಿದ್ದು ಸಾಮಾಜಿಕ ಪ್ರಗತಿಯೊಂದಿಗೆ ಸಾಮಾಜಿಕ ಬೆಳವಣಿಗೆಯ ಮಹತ್ವದ ಜವಾಬ್ದಾರಿಯನ್ನು ಹೊಂದಿದೆ.

ವಿಜ್ಞಾನವು ಸಮಾಜದ ಒಂದು ಭಾಗದಂತೆ ಸಮಾಜದಲ್ಲಿನ ಪ್ರತಿಯೊಂದು ಆಗು ಹೋಗುಗಳಲ್ಲಿ ವಿಜ್ಞಾನದ ಛಾಪನ್ನು ಕಾಣಬಹುದು. ಸಾಮಾನ್ಯ ಆಚರಣೆಯಿಂದ ಹಿಡಿದು, ಜೀವನ ಶೈಲಿಯವರೆಗೆ ವಿಜ್ಞಾನವು ಇರುವುದನ್ನು ಕಾಣಬಹುದು. ಸಾಹಿತಿಗಳು ಬಳಸುವ ಶೀರ್ಷಿಕೆ, ಲೇಖನಗಳ ವಿವರಣೆಯನ್ನು ಗಮನಿಸಿದರೆ ಪ್ರತಿಯೊಂದರಲ್ಲೂ ಸಮಾಜದ ಹೊಣೆಗಾರಿಕೆಯು ಗೋಚರಿಸುವುದು. ಕೆಲವು ಶೀರ್ಷಿಕೆಗಳಾದ 'ವಂಶವಾಹಿಗಳ ಕುರಿತು ಒಂದು ಕಲ್ಪನಾ ವಿಲಾಸ'[೯] 'ಹಕ್ಕಿಗಳುಲಿಗಳೇ ಚಂದ!'[೧೦], 'ಉಣಿಸಿದಳಾ ತಾಯಿ'[೧೧] ಮೊದಲಾದವು ಸಮಾಜಕ್ಕೆ ಅಗತ್ಯವಾದ ವಂಶವಾಹಿ ಪ್ರಕೃತಿ ಸೌಂದರ್ಯದಲ್ಲಿನ ಹಕ್ಕಿಗಳು, ತಾಯಿಯ ಹಾಲು ಮೊದಲಾದ ವಿಷಯದಿಂದ ಕೂಡಿರುವುದು ಸಮಾಜದೊಂದಿಗಿನ ಹೊಣೆಗಾರಿಕೆಯೇ ಆಗಿದೆ. ಮಲಗಿ ಏಳುವಾಗ ಬಲ ಮಗ್ಗುಲಲ್ಲಿ ಏಳುವುದು, ಹಬ್ಬ ಹರಿದಿನಗಳಲ್ಲಿ ನಡೆಸುವ ತಯಾರಿ, ವ್ರತಾ ಉಪವಾಸಾಚರಣೆ, ಮನೆಗೆ ಕಟ್ಟುವ ತೋರಣ ಮೊದಲಾದವುಗಳಲ್ಲಿ ವೈಜ್ಞಾನಿಕ ಅಂಶಗಳಿರುವುದು ಬಹಳಷ್ಟು ಲೇಖಕರ ಲೇಖನಗಳಿಂದ ತಿಳಿದು ಬಂದಿದೆ. ವಿಜ್ಞಾನವನ್ನು ಸಮಾಜಕ್ಕೆ ಬೇಕಂತೆ ಬದಲಿಸುವಂತೆ ವಿಜ್ಞಾನವು

ಸಮಾಜವನ್ನು ತನಗೆ ಬೇಕಂತೆ ಬದಲಿಸಿದೆ ಎಂಬುದನ್ನು ಬಹಳಷ್ಟು ಕೃತಿಗಳಿಂದ ತಿಳಿಯಲಾಯಿತು.

ವಿಜ್ಞಾನದಲ್ಲಿ ವೈಜ್ಞಾನಿಕ ಅಂಶಗಳನ್ನು ತಿಳಿಸುವುದರೊಂದಿಗೆ ವಿಜ್ಞಾನ ಸಾಹಿತ್ಯವು ಸಮಾಜದಲ್ಲಿ ಸಾಮಾನ್ಯವಾಗಿ ಪರಿಗಣಿಸುವ ವಸ್ತು ವಿಷಯವನ್ನು ವಿಜ್ಞಾನದ ಮೂಲಕ ಸಾಕ್ಷಾತ್ಕರಿಸುವುದು. ಜೀವನಾವಶ್ಯಕವಾದ ನೀರು ಹಲವಾರು ಬಗೆಗಳಿಂದ ಕೂಡಿದೆ ಎಂಬುದನ್ನು ತಿಳಿಸುವ 'ಭೂಮಿಯ ಮೇಲೆ ಎಷ್ಟು ಬಗೆಯ ನೀರುಗಳಿವೇ?'[೧೨], ಆರೋಗ್ಯ ರಕ್ಷಣೆಯು ನಮ್ಮೆಲ್ಲರ ಕೈಯಲ್ಲಿದೆ ಎಂಬುದನ್ನು ತಿಳಿಸುವ 'ನಮ್ಮ ಆರೋಗ್ಯ ರಕ್ಷಣೆಯಲ್ಲಿ ಸೋಯಾ ಬೀಜದ ಪಾತ್ರ'[೧೩] ಮೊದಲಾದವು ವೈಜ್ಞಾನಿಕ ಅಂಶಾಧಾರಿತವಾಗಿದೆ. ಜನರಲ್ಲಿ ಪೂರ್ವಗ್ರಹವನ್ನು ಮೌಢ್ಯವನ್ನು ವೈಜ್ಞಾನಿಕ ದೃಷ್ಟಿ ಮತ್ತು ವಿಧಾನಗಳಿಂದ ದೂರಮಾಡಿ ಸತ್ಯದ ದರ್ಶನವಾಗುವಲ್ಲಿ ಹಾಗೂ ವೈಜ್ಞಾನಿಕ ಮಾರ್ಗವನ್ನು ಯಾವುದೇ ಸಮಸ್ಯೆಯ ಪರಿಹಾರಕ್ಕೆ ಬಳಸಿಕೊಳ್ಳುವಂತೆ ಮಾಡುವಲ್ಲಿ ವಿಜ್ಞಾನ ಸಾಹಿತ್ಯದಲ್ಲಿರುವ ಸಂಸ್ಕಾರಕ್ಕಿಂತ ಮಿಗಿಲಾದುದು ಮತ್ತೊಂದಿಲ್ಲ.

ವಿಜ್ಞಾನ ಸಾಂಸ್ಕೃತಿಕ ಮೌಲ್ಯ ತೋರಿಸುತ್ತಾ ಯಾವುದೇ ರೀತಿಯ ಅಂಧನಂಬಿಕೆ, ಪೂರ್ವಗ್ರಹಕ್ಕೆ ಎಡೆ ಕೊಡದೆ ನಿಷ್ಠೆಯಿಂದ ವಿಷಯವನ್ನು ನೋಡುವುದರೊಂದಿಗೆ ಸ್ವತಃ ತಾವೇ ತಮ್ಮ ಕೈಗಳಿಂದ ಪ್ರಯೋಗಗಳನ್ನು ಮಾಡುವುದನ್ನು ವಿಜ್ಞಾನವು ಕಲಿಸುವುದು. ಪ್ರಯೋಗದ ಫಲಿತಾಂಶದ ಮೇಲೆ ಸರಿತೋರಿದುದನ್ನು ಕರಾರುವಕ್ಕಾಗಿ ನಿರ್ಭಯವಾಗಿ ಹೇಳುವ ಸ್ವಾತಂತ್ರ್ಯವನ್ನು ವಿಜ್ಞಾನ ಸಾಹಿತ್ಯವು ನೀಡುವುದು ಸಾಮಾಜಿಕ ಜವಾಬ್ದಾರಿಯ ದ್ಯೋತಕವಾಗಿದೆ.

ಧೂಮಪಾನದ ಹವ್ಯಾಸಿಗನು ಅದರ ದಾಸನಾಗಿ ಅಭ್ಯಾಸಯುಕ್ತನಾಗಿ ಬಿಡಲು ಸಾಧ್ಯವಾಗದೆ ತೊಳಲುತ್ತಿರುವ ಸಮಸ್ಯೆ, ಸಂತಾನಶಕ್ತಿಯನ್ನು ವೃದ್ಧಿಸುವಲ್ಲಿ ತೊಳಲುತ್ತಿರುವ ಯುವಕ ಯುವತಿಯರ ಸಮಸ್ಯೆ, ಅತ್ಯಾಧುನಿಕ ಕ್ರಿಮಿಕೀಟಗಳ ನಾಶಕಗಳ ಬಳಕೆಯನ್ನು ತಡೆಯಲಾಗದ ಸಮಸ್ಯೆ, ರಕ್ಷಣೆಗಾಗಿ ಉಪಯೋಗಿಸುವ ಶಸ್ತ್ರಾಸ್ತ್ರಗಳಿಂದಾಗುವ ದುಷ್ಪರಿಣಾಮದ ಸಮಸ್ಯೆ ಮೊದಲಾದ ಸಮಸ್ಯೆಗಳ ಬಗ್ಗೆ ವಿಜ್ಞಾನ ಸಾಹಿತ್ಯ ಅಥವಾ ಲೇಖನಗಳಲ್ಲಿ ಚರ್ಚೆ, ವಿವರಣೆ ಪರಿಹರೋಪಾಯಗಳನ್ನು ನೀಡಲಾಗಿರುವುದು ಸಮಾಜದ ಹಿತವನ್ನು ಸೂಚಿಸುವುದು.

ಒಟ್ಟಾರೆಯಾಗಿ ಗಮನಿಸಿದರೆ ವಿಜ್ಞಾನ ಲೇಖನಗಳು ಸಾಮಾಜಿಕ ಹೊಣೆಗಾರಿಕೆಗೆ ಪ್ರೇರಕ ಶಕ್ತಿಯಾಗಿದೆ. ಆಧುನಿಕ ಜೀವನವನ್ನು ವಿಜ್ಞಾನದ ಕೂಸಾಗಿ ಪರಿವರ್ತಿಸಿದೆ.

ಸಮಾಜದ ಅಭಿವೃದ್ಧಿಗೆ ಸಹಕರಿಸುವ ಸಾಮಾಜಿಕ, ಆರ್ಥಿಕ, ರಾಜಕೀಯ, ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಕೃಷಿ, ಕೈಗಾರಿಕೆ, ಭೌತ, ವೈದ್ಯಕೀಯ, ತಾಂತ್ರಿಕ ಮೊದಲಾದ ಕ್ಷೇತ್ರಗಳಲ್ಲೂ ತನ್ನ ವ್ಯಾಪ್ತಿಯನ್ನು ಹರಡಿದ್ದು, ಜ್ಞಾನಕ್ಕಾಗಿ ಪ್ರಾಯೋಗಿಕ ಅನುಕೂಲಕ್ಕಾಗಿ ಹಲವಾರು ಸಂಶೋಧನೆಗಳು ನಡೆದು ವಿಶ್ವದಲ್ಲಿ ನವ ನವೀನ ಆವಿಷ್ಕಾರಗಳು ನಡೆಯಲು ಸಹಕಾರಿಯಾಗಿದೆ. ಪ್ರತಿ ಕ್ಷಣವೂ ಒಂದಲ್ಲ ಒಂದು ಹೊಸ ಸಂಶೋಧನೆಗಳು ನಡೆಯುತ್ತಿದ್ದು ಜನ ಜೀವನದ ಹಾಗೂ ಸಮಾಜದ ಮೇಲೆ ಮಹತ್ತರ ಪ್ರಭಾವ ಬೀರುತ್ತ ಜನತೆಯಲ್ಲಿ ವಿಜ್ಞಾನ ವಿಧಾನ ಮತ್ತು ವೈಜ್ಞಾನಿಕ ಮನೋಧರ್ಮ ಬೆಳೆಯುವಂತೆ ಮಾಡಿದೆ. ಜೊತೆಗೆ ಮನುಷ್ಯನ ಬದುಕು ಸುಖಮಯವಾಗಿ ಹಸನಾಗುವಂತೆ ವಿವೇಕಯುತವಾಗುವಂತೆ ಪ್ರಾಕೃತಿಕ ವಿಧ್ಯಮಾನಗಳ ಸೌಂದರ್ಯಾನುಭವದೊಂದಿಗೆ ವಿವೇಕಯುತವಾಗುವಂತೆ ವಿಜ್ಞಾನವು ಮಾಡುವುದನ್ನು ಗಮನಿಸಬಹುದು

ಅಡಿಟಿಪ್ಪಣಿಗಳು

೧. ನಾಗೇಶ ಹೆಗಡೆ (ಸಂಪಾದಕರು)., ವಿಜ್ಞಾನ ಗಂಗೆಯ ಬಿಂದುಸಾರ., ಪುಟ ಸಂಖ್ಯೆ : ೧೪೬

೨. ರಾಮಸ್ವಾಮಿ ಎಂ.ಕೆ., ಜ್ಞಾನ ವಿಜ್ಞಾನ., ಪುಟ ಸಂಖ್ಯೆ : ೧೩೬.

೩. ವಿವಿಧ ಲೇಖಕರು., ವಿಜ್ಞಾನ ಮತ್ತು ಸಮಾಜ., ಪುಟ ಸಂಖ್ಯೆ : ೧೪೬.

೪. ನಾಗೇಶ ಹೆಗಡೆ., ಇರುವುದೊಂದೇ ಭೂಮಿ., ಪುಟ ಸಂಖ್ಯೆ : ೧೧.

೫. ಅದೇ ಪುಟ ಸಂಖ್ಯೆ : ೪೭.

೬. ಅದೇ ಪುಟ ಸಂಖ್ಯೆ ; ೧೪೬

೭. ಆವಲಮೂರ್ತಿ ಏ.ಓ., ವಿಜ್ಞಾನ ಸೂರ್ಯ., ಪುಟ ಸಂಖ್ಯೆ : ೨೫.

೮. ಅದೇ ಪುಟ.ಸಂಖ್ಯೆ ೨೫.

೯. ನಾಗೇಶ ಹೆಗಡೆ., ಇರುವುದೊಂದೇ ಭೂಮಿ., ಪುಟ ಸಂಖ್ಯೆ : ೬೧.

೧೦. ಅದೇ ಪುಟ ಸಂಖ್ಯೆ ; ೬೩.

೧೧. ಅದೇ ಪುಟ ಸಂಖ್ಯೆ : ೭೭.

೧೨. ನಾಯಕ ಹಾ.ಮಾ(ಪ್ರಧಾನ ಸಂಪಾದಕರು)., ವಿಜ್ಞಾನ ಸಾಹಿತ್ಯ ನಿರ್ಮಾಣ., ಪುಟ ಸಂಖ್ಯೆ : ೨೪.

೧೩. ಅದೇ ಪುಟ ಸಂಖ್ಯೆ : ೧೪೫

ಸಮಾರೋಪ

ಫಲಿತಗಳು

ಅನುಬಂಧ

ಗ್ರಂಥಋಣ

ಸಮಾರೋಪ, ಫಲಿತಗಳು, ಅನುಬಂಧ ಮತ್ತು ಗ್ರಂಥ ಋಣ.

೧. ಸಮಾರೋಪ

"ಸೃಷ್ಟಿಕರ್ತನ ಅಧ್ಭುತ ಸೃಷ್ಟಿಯೇ ಜನತೆ. ಸೃಷ್ಟಿಯ ವಿಸ್ಮಯ ಕುತೂಹಲ ಜ್ಞಾನವೇ ವಿಜ್ಞಾನ. ವಿಜ್ಞಾನ ವಿಸ್ಮಯಗಳನ್ನು ಜನತೆಯಲ್ಲಿಗೆ ಕೊಂಡುಯ್ಯುವ ಸಾಧನವೇ ವಿಜ್ಞಾನ ಸಾಹಿತ್ಯ". ಅಂದರೆ ವಿಶ್ವದ ನಿಖರ ವಿಸ್ಮಯ ಜ್ಞಾನ ಸಮೂಹವೇ ವಿಜ್ಞಾನ. ಪ್ರಕೃತಿಯ ಪ್ರತಿಯೊಂದು ಅಂಶದಲ್ಲಿ ಹುದುಗಿರುವ ನಿಗೂಡ ಕುತೂಹಲ ಜ್ಞಾನವನ್ನು ಪ್ರಯೋಗದ ಓರೆಗಲ್ಲಿಗೆ ಹಚ್ಚಿ, ಸತ್ಯಾಸತ್ಯತೆಯ ವಿಮರ್ಶೆಯೊಂದಿಗೆ ಖಡಾಖಂಡಿತವಾಗಿ ನಿಖರವಾಗಿ, ನಿರ್ಭಯವಾಗಿ ಉತ್ತರ ನೀಡುವುದೇ ವಿಜ್ಞಾನದ ಮೂಲ. ತಾರ್ಕಿಕ, ವಿಶ್ವಾಸಾರ್ಹ ಹಾಗೂ ನಿಕಟ ಅರ್ಥದೊಂದಿಗೆ ವಿವರಿಸಿ, ವೈಜ್ಞಾನಿಕ ವಾತಾವರಣ ಸೃಷ್ಟಿಸಿ ಜ್ಞಾನವನ್ನು ಹರಡುವುದು ವಿಜ್ಞಾನ ಸಾಹಿತ್ಯದ ಲೇಖನ/ಕೃತಿಸಗಳ ಮೂಲ ಆಶಯವಾಗಿದೆ.

ಭೌತ, ರಾಸಾಯನ, ಜೀವ, ಖಭೌತ ಮೊದಲಾದ ವಿಭಾಗಗಳನ್ನೊಳಗೊಂಡಂತೆ ವೈಜ್ಞಾನಿಕ ದೃಷ್ಟಿ ವಿಧಾನದೊಂದಿಗೆ ನಿಸರ್ಗವನ್ನು ಅಭ್ಯಾಸಿಸುವ ಶಿಸ್ತುಬದ್ಧ ವಿಜ್ಞಾನ ಮಾಹಿತಿಯನ್ನು ತಿಳಿಸುವಲ್ಲಿ ವೈಜ್ಞಾನಿಕ ಲೇಖನಗಳು ವಿಶೇಷವಾಗಿದ್ದು, ತನ್ನ ವಿಶಾಲ ಅರ್ಥವ್ಯಾಪ್ತಿಯಿಂದಾಗಿ ಇತರ ಜ್ಞಾನ ಶಾಖೆಗಳ ಸಾಹಿತ್ಯದೊಂದಿಗೆ ಅಂದರೆ ಸಮಾಜ ಹಾಗೂ ರಾಜಕೀಯದೊಂದಿಗೂ ನಿಕಟ ಸಂಬಂಧ ಹೊಂದಿರುವುದನ್ನು ಗಮನಿಸಬಹುದು. ಜೊತೆಗೆ ಜನತೆಯೇ ಮೂಲವಾದ ಸಮಾಜ ರಾಜಕೀಯ ಕ್ಷೇತ್ರಗಳ ಮೇಲೆ ವಿಜ್ಞಾನ ಲೇಖನಗಳು ತನ್ನ ದೃಷ್ಟಿಯನ್ನು ಹರಡಿದೆ.

ಮಾನವ ಸಂಘಜೀವಿ. ಹೀಗಾಗಿ ಅವನು ಒಂಟಿಯಾಗಿ ಯಾವುದೇ ಅವಲಂಬನೆ ಒಡನಾಟವಿಲ್ಲದೆ ಜೀವಿಸುವುದು ಅಸಾಧ್ಯ. ತನಗೆ ತಿಳಿದ, ತಿಳಿಯದ ವಿಚಾರಗಳನ್ನು ಪರಸ್ಪರ ಸಂವಹನದೊಂದಿಗೆ ವ್ಯವಹರಿಸಿಕೊಳ್ಳುವುದು ಅಗತ್ಯ ಅನಿವಾರ್ಯ. ವಿಜ್ಞಾನ ಸಾಹಿತ್ಯವು ಪರಸ್ಪರ ಸಂವಹನ ಮಾಡುವ ಹಾಗೂ ಹಂಚಿಕೊಳ್ಳಬಹುದಾದ ಜ್ಞಾನದ

ಪ್ರಕಾರವಾಗಿರುವುದರಿಂದ ಅದು ತನ್ನೆಲ್ಲ ಅನ್ವೇಷಣೆಗಳಿಗಾಗಿ ಜನತೆ ಹಾಗೂ ಜನತೆಗಾಗಿಯೇ ತನ್ನೆಲ್ಲ ಕಾರ್ಯ ಎಂಬಂತಿದ್ದು, ಸಾಮಾಜಿಕ ಹೊಣೆಗಾರಿಕೆಯ ಪ್ರತೀಕವಾಗಿದೆ. ನೈಸರ್ಗಿಕ ವಸ್ತುಗಳ ಕಾರ್ಯನಿರ್ವಹಣೆ, ವಿಷಕಾರಿ ಸಸ್ಯಗಳನ್ನು ಔಷಧಿಯುಕ್ತವಾಗಿ ಉಪಯೋಗಿಸುವುದು, ದಿನನಿತ್ಯದ ದೈನಂದಿನ ಬದುಕು ವ್ಯವಹಾರದಲ್ಲಿ ತಾಂತ್ರಿಕತೆಯ ಉಪಯೋಗ, ಶಿಕ್ಷಣ ಮತ್ತಿತರ ಕ್ಷೇತ್ರದಲ್ಲಿ ಮಾಹಿತಿ ತಂತ್ರಜ್ಞಾನದ ಬಳಕೆ ಮೊದಲಾದವುಗಳ ಮೂಲ ಮನುಷ್ಯ. ಹೀಗಾಗಿ ಸಮಾಜದಲ್ಲಿನ ಸತ್ಯ, ಸಂಕೀರ್ಣ ಅಮೂರ್ತ ಚಿಂತನೆಗಳನ್ನು ಮೂರ್ತ ರೂಪಕ್ಕೆ ತಂದು ಜನತೆಗೆ ಅನುಕೂಲಕರ ವಾತಾವರಣ ಸೃಷ್ಟಿಸುವುದು ವಿಜ್ಞಾನ ಸಾಹಿತ್ಯದಿಂದ ಮಾತ್ರ ಸಾಧ್ಯ.

ವಿಜ್ಞಾನವು ಮೂಢನಂಬಿಕೆ, ಅಂಧಾಚರಣೆ, ಸಂಪ್ರದಾಯ, ಅನುಕರಣೆ ಮೊದಲಾದವುಗಳನ್ನು ಮೊದಲಿನಿಂದಲೂ ನಿಷ್ಠೂರವಾಗಿ ಕಾಣುತ್ತಾ ಬಂದಿದ್ದು, ಅದಕ್ಕೆ ವಿರುದ್ಧವಾಗಿ ಸೆಟೆದುನಿಂತು ಉತ್ತರಿಸುವ ಧೈರ್ಯ ಪ್ರವೃತ್ತಿಯದು ಎಂಬುದನ್ನು ವಿಜ್ಞಾನ ಸಾಹಿತ್ಯದಿಂದ ಮಾತ್ರ ತಿಳಿಯಲು ಸಾಧ್ಯ. ಜಾತಕ ಜ್ಯೋತಿಷ್ಯವನ್ನು ನಂಬುವುದು, ಮದುವೆ ಮತ್ತಿತರ ಸಮಾರಂಭಗಳಿಗೆ ಕಾಲ ಗಳಿಗೆಯ ಮೊರೆ ಹೋಗುವುದು, ಸಮುದ್ರ ಪ್ರಯಾಣ ಪಾಪಯುಕ್ತ, ಮರಣದ ನಂತರ ಮಾತ್ರ ಆಕಾಶದಲ್ಲಿ ಸಂಚರಿಸುವುದು, ಗ್ರಹಣಗಳು ಸಂಭವಿಸುವುದು ಗುರು ಶನಿಗಳ ಕಾರಣದಿಂದ, ಅಲ್ಲಿ ಇಲ್ಲಿ ನಿಧಿ ಸಿಗುವುದುದೆಂದು ಪ್ರಾಣಿ ನರ ಬಲಿ ನೀಡುವುದು ಮೊದಲಾದವುಗಳ ಮೇಲೆ ಬಹಳಷ್ಟು ಪ್ರಯೋಗಗಳನ್ನು ಮಾಡಿ ಸತ್ಯಾಸತ್ಯತೆಯನ್ನು ಬಹಳಷ್ಟು ವಿರೋಧಗಳ ನಡುವೆ ಪ್ರಪಂಚಕ್ಕೆ ತೋರಿಸುವಲ್ಲಿ ವಿಜ್ಞಾನಿಗಳು ಹಾಗೂ ಅವರಿಂದ ರಚಿತ ವಿಜ್ಞಾನ ಸಾಹಿತ್ಯವು ಯಶಸ್ವಿಯಾಗಿದೆ. ಸೂರ್ಯನ ಪರಿಭ್ರಮಣೆ, ಭೂಮಿಯು ಸೂರ್ಯನ ಸುತ್ತ ಸುತ್ತುತ್ತದೆ, ವಸ್ತುಗಳ ಸ್ವರೂಪ ಸ್ವಭಾವದ ಅಧಾರದ ಮೇಲೆ ಬದಲಾವಣೆಗಳು ಮಾನವರ ಒಳಿತಿಗಾಗಿ ಎಂಬ ವಾಸ್ತವಿಕತೆಯನ್ನು ವಿಜ್ಞಾನಿಗಳು ತಮ್ಮದೇ ಅಭಿವ್ಯಕ್ತಿ ಸ್ವರೂಪದೊಂದಿಗೆ ಲೇಖನಗಳ ಮೂಲಕ ತೋರಿಸಿಕೊಟ್ಟಿದ್ದಾರೆ.

ಬೇಕನ್ ಎಂಬ ವಿಜ್ಞಾನಿಯು 'ವಿವಿಧ ಪ್ರಕಾರಗಳ ಎಲ್ಲ ವಸ್ತುಗಳು ಯಾವುದೇ ವಿಶೇಷ ಔಪಚಾರಿಕ ಹಾಗೂ ಕೊನೆಯ ಕಾರಣಗಳಿಲ್ಲದೆ, ಪ್ರಕೃತಿಯ ಸಾಮಾನ್ಯ ನಿಯಮದಂತೆ ವರ್ತಿಸುತ್ತವೆ' ಎಂದು ಹೇಳುವುದರೊಂದಿಗೆ ಪ್ರತಿಯೊಂದು ಪ್ರಾಕೃತಿಕ ವಸ್ತುಗಳು ಹಾಗೂ ಪ್ರಕೃತಿಯಲ್ಲಿನ ಚರಾಚರ ಜೀವಿಗಳು ಒಂದಕ್ಕೊಂದು ಅನಿನಾಭಾವ ಸಂಬಂಧವನ್ನು ಹೊಂದಿರುವುದನ್ನು ಸೂಚಿಸುವಲ್ಲಿ ವಿಜ್ಞಾನದ ಪಾತ್ರ ಮಹತ್ತರವಾದುದು. ವಿಶ್ವವಿಖ್ಯಾತ ಮಹಾನ್ ವಿಜ್ಞಾನಿಗಳಾದ ಐನ್ ಸ್ಟೈನ್ (ಸಾಪೇಕ್ಷತಾ ಸಿದ್ಧಾಂತ),

ಕ್ವಾಂಟಮ್(ಯಂತ್ರಶಾಸ್ತ್ರ) ಮೊದಲಾದವರು ಪ್ರಕೃತಿಯಲ್ಲಿನ ವಿಭಿನ್ನ ಘಟನೆಗಳನ್ನು ವಿಜ್ಞಾನದ ಶಾಖೆಯಾದ ಭೌತವಿಜ್ಞಾನದ ಮೂಲಕ ವಿವರಿಸಿದ್ದಾರೆ.

ಅಲ್ಲದೆ ಸಾಮಾನ್ಯವಾಗಿ ಎಲ್ಲಾ ವಿಜ್ಞಾನಿಗಳು ವೈಜ್ಞಾನಿಕ ಮಾಹಿತಿಗಳನ್ನು ಸಮರ್ಥಿಸಲು ಮೂಲಭೂತ ಕಲ್ಪನೆಗಳ ಸಮೂಹವನ್ನು ಉಪಯೋಗಿಸಿಕೊಳ್ಳುವರು. ಅಂದರೆ ವೈಜ್ಞಾನಿಕ ಸತ್ಯಾಸತ್ಯತೆಗೆ ಒಳಗಾದ ವಿಜ್ಞಾನಿಗಳು ಸಹಮತಿಸಿದ ವಾಸ್ತವ ವಸ್ತುನಿಷ್ಠತೆ ಇದೆಯೇ, ವಸ್ತುನಿಷ್ಠತೆಯು ನೈಸರ್ಗಿಕ ವಾಸ್ತವಕ್ಕೆ ಒಳಪಟ್ಟಿದೆಯೇ ಹಾಗೂ ಪ್ರಯೋಗ ವೀಕ್ಷಣೆಯಿಂದ ಕಂಡು ಹಿಡಿದ ವಾಸ್ತವಾಂಶವಿದೆಯೇ ಮೊದಲಾದವುಗಳ ಸಮಂಜಸ ಉತ್ತರವನ್ನು ಹುಡುಕಲು ವಿಜ್ಞಾನವು ಪ್ರಯತ್ನಿಸುತ್ತದೆ.

ಈ ರೀತಿಯಾದ ವಿಜ್ಞಾನದ ಪ್ರತಿಯೊಂದು ಆವಿಷ್ಕಾರ, ಅನ್ವೇಷಣೆಗಳ ಮೂಲವೇ ಸಮಾಜ ಮತ್ತು ಜನತೆ ಮತ್ತು ವಿಜ್ಞಾನ ಲೇಖನದ ಮೂಲ ವಸ್ತು ಪ್ರಕೃತಿಯಲ್ಲಿನ ಚರಾಚರ ವಸ್ತು ಮತ್ತು ಜೀವಿ. ವೈಜ್ಞಾನಿಕ ಸತ್ಯ ಹಾಗೂ ಕುತೂಹಲ ಸಂದೇಹವೇ ವಿಜ್ಞಾನ ಮತ್ತು ವಿಜ್ಞಾನ ಲೇಖನಗಳು ಎಂಬುದು ಸತ್ಯ. ಯಾವುದೇ ವೈಜ್ಞಾನಿಕ ಚಟುವಟಿಕೆಗಳು ವಿಜ್ಞಾನದ ಸಹಮತಿಯೊಂದಿಗಿನ ಸಾಮಾನ್ಯ ವಾಸ್ತವ. ಈ ವಾಸ್ತವದೊಂದಿಗೆ ಜನತೆಯ ಬದುಕು ಜೀವನವು ಹಸನಾಗಿ ಸಾಗಲು ಸಾಧ್ಯವಾಗುವುದು. ಇಂತಹ ಮೂಲಭೂತ ಸತ್ಯತ್ವದಿಂದಾಗಿ ಪ್ರತಿಯೊಬ್ಬರಲ್ಲೂ ಸ್ವಂತ ವಾಸ್ತವವನ್ನು ಸೃಷ್ಟಿಸುವಲ್ಲಿ ವಿಜ್ಞಾನ ಲೇಖನಗಳ ಪಾತ್ರ ಹಿರಿದಾದುದು.

ಇದೇ ದೃಷ್ಟಿಯಿಂದ ವಿಜ್ಞಾನಿಗಳು ವಾಸ್ತವವಾದ, ಪ್ರತಿವಾಸ್ತವವಾದ, ಆದರ್ಶವಾದ, ಪ್ರಯೋಗವಾದ, ವಿಚಾರವಾದ, ವಿಮರ್ಶಾವಾದ ಮೊದಲಾದವುಗಳು ಮಂಡಿಸಿದ್ದಾರೆ. ಹೀಗಾಗಿಯೇ ವಿಜ್ಞಾನವನ್ನು ವಿಶ್ವವ್ಯಾಪಿ ಹಾಗೂ ನಿಶ್ಚಿತ/ನಿಖರ ನಿಯಮಗಳ ಮೂಲ ಎಂದು ಹೇಳುವುದು. ವಿಜ್ಞಾನದ ಪ್ರತಿಯೊಂದು ಕಾರ್ಯವು ವಿಶ್ವವ್ಯಾಪಿಯಾಗಿದ್ದು ನಿಖರ ನಿಯಮಗಳಿಂದ ಕೂಡಿರುವುದು. ಯಾವುದೇ ಸ್ಥಳ, ಕಾಲ, ಸಂದರ್ಭದಲ್ಲಿ ಪರೀಕ್ಷಿಸಿದರು ಅದರ ಉತ್ತರ ಒಂದೇ. ನೈಜ ಅನುಮಾನಗಳನ್ನು ಬಗೆಹರಿಸುವ ಹೋರಾಟ. ಇದೇ ಜನತೆಯ ವೈಜ್ಞಾನಿಕ ಬದುಕಿಗೆ ಕಾರಣ.

ಆಹಾರ, ನೀರು ಎಷ್ಟು ಅಗತ್ಯವೋ ಅಷ್ಟೇ ಅಗತ್ಯ ವೈಜ್ಞಾನಿಕ ಮಾಹಿತಿ ಎಂಬಂತೆ ವಿಜ್ಞಾನ ನಿತ್ಯ ಜೀವನದಲ್ಲಿ ಪ್ರಭಾವಿತವಾಗಿದೆ. ಮಾನವನಿಗೆ ಅಗೋಚರ ಹಾಗೂ ಅರಿವಿಗೆ ಬಾರದ ಯಾವ ಕ್ಷೇತ್ರವನ್ನು ಉಳಿಸದೆ ವಿಜ್ಞಾನವು ಸ್ವತಃ ಸೃಷ್ಟಿಕರ್ತನೇ ಆಶ್ಚರ್ಯ ಪಡುವಷ್ಟು ಶಕ್ತಿಶಾಲಿಯಾಗಿ ಮಾನವನನ್ನು ಮಾಡಿದೆ. ಬ್ರಹ್ಮಾಂಡದ ಬಗ್ಗೆ ಮಾತನಾಡುವುದೇ

ತಪ್ಪಿದ್ದ ಕಾಲದೊಡನೆ ಸ್ಪರ್ಧಿಸುತ್ತಾ ಇಡೀ ಬ್ರಹ್ಮಾಂಡವನ್ನು ಪರಿಭ್ರಮಿಸಿ, ಮತ್ತೊಂದು ಜೀವಿಯ ಯೋಗ್ಯ ಗ್ರಹದ ಹುಡುಕಾಟದೊಂದಿಗೆ ಅಂತರೀಕ್ಷವನ್ನು ಜಯಿಸಿದ್ದಾನೆ. ಅಲ್ಲದೆ ಪ್ರಕೃತಿಯಲ್ಲಿ ಅನಾವರಣಗೊಳಿಸಲಾಗದ ರಹಸ್ಯಗಳನ್ನು, ಇದುವರೆಗೆ ಅಜ್ಞಾತವಾಗಿದ್ದ ಬಹಳಷ್ಟು ವಿಷಯಗಳನ್ನು ಅನಾವರಣಗೊಳಿಸಿ ವಾಸ್ತವತೆಯನ್ನು ಜನತೆಯಲ್ಲಿಗೆ ಕೊಂಡೊಯ್ಯುವ ಶಕ್ತತೆಯನ್ನು ವಿಜ್ಞಾನ ಸಾಹಿತ್ಯದಲ್ಲಿನ ಮಾಹಿತಿಯು ನೀಡಿದೆ.

ವಿಜ್ಞಾನ ಕ್ಷೇತ್ರದಲ್ಲಿನ ಅವಿರತ ಕಾರ್ಯದಿಂದಾಗಿ ಇಂದು ರೈತರು ತುಂಬು ಫಸಲನ್ನು ಪಡೆಯುವಂತಾಗಿದೆ. ಉತ್ತಮ ನೀರಾವರಿ ವ್ಯವಸ್ಥೆ, ಉತ್ತಮ ತಳಿಯ ಬೀಜಗಳ ಶೋಧನೆ, ಸಮತೋಲನ ಕೃಷಿ ಕ್ರಮ, ಬೆಳೆಗಳ ಸಂರಕ್ಷಣೆ ಮೊದಲಾದವುಗಳಿಂದ ಆಹಾರ ಹಾಗೂ ವಾಣಿಜ್ಯ ಧಾನ್ಯಗಳ ಉತ್ಪಾದನೆಯಲ್ಲಿ ಪರಿಪೂರ್ಣರೂ ಹಾಗೂ ಸ್ವಾವಲಂಬಿಗಳಾಗಿ ಎಂತಹದ್ದೆ ವಿಷಮಸ್ಥಿತಿಯಿದ್ದರು(ಬರಗಾಲ, ಪ್ರವಾಹ) ನಿಭಾಯಿಸುವಲ್ಲಿ ಸಧೃಡವಾಗಿದ್ದಾರೆ. ವೈಜ್ಞಾನಿಕ ಹಾಗೂ ಕೈಗಾರಿಕಾ ಸಂಶೋಧನಾ ಸಂಸ್ಥೆ(ಅಖಖಖ) ನ ಅವಿರತ ಶ್ರಮದ ಪ್ರತಿಫಲದಿಂದ ಕೈಗಾರಿಕಾ ಕ್ಷೇತ್ರದಲ್ಲಿ ಅಪಾರ ಬೆಳವಣಿಗೆಯನ್ನು ಕಾಣಲಾಗುತ್ತಿದೆ. ಜೊತೆಗೆ ವೈದ್ಯಕೀಯ ಕ್ಷೇತ್ರದಲ್ಲೂ ಅಪಾರ ಸಂಶೋಧನಾ ಕಾರ್ಯಗಳು ನಡೆದಿದ್ದು, ಜೀವದ ಹುಟ್ಟಿನಿಂದ ಹಿಡಿದು ಮರಣದ ನಂತರವು ವಿಜ್ಞಾನದ ಪ್ರಭಾವವಿದೆ.

ಔಷಧಿ ಇಲ್ಲದ ರೋಗವೇ ಇಲ್ಲ. ಪ್ರತಿಯೊಂದು ರೋಗಕ್ಕೂ ಅದು ಸಾಮಾನ್ಯ ರೋಗದಿಂದ ಹಿಡಿದು, ಭಯಂಕರ ಸಾಂಕ್ರಾಮಿಕ ರೋಗದವರೆಗೂ ಅದರ ಹುಟ್ಟು ಬೆಳವಣಿಗೆಗೆ ಕಾರಣಗಳನ್ನು ಹುಡುಕಿ ಹಂತ ಹಂತವಾಗಿ ಚಿಕಿತ್ಸೆ ನೀಡುವ ವೈದ್ಯಕೀಯತೆಗೆ ಕಾರಣವೇ ವಿಜ್ಞಾನ ಹಾಗೂ ಇದರ ಮಾಹಿತಿಯನ್ನೊಳಗೊಂಡ ವಿಜ್ಞಾನ ಸಾಹಿತ್ಯ. ಹುಟ್ಟು ಸಾವೊಂದನ್ನು ಬಿಟ್ಟು(ಈಗ ಜೀವಿ ಹುಟ್ಟು ಸಹ ಸಾಧ್ಯ ಎಂಬುದರ ಬಗ್ಗೆ ಸಂಶೋಧನೆಗಳು ನಡೆಯುತ್ತಿವೆ) ಉಳಿದ ಎಲ್ಲಾ ಕಾರ್ಯಗಳು ಕೃತಕ ಅಂಗಾಂಗಗಳ ಜೋಡಣೆ, ಮುರಿದ ದೇಹದ ಅಂಗಗಳ ಜೋಡಣೆ ಮೊದಲಾದವುಗಳು ರಕ್ತರಹಿತ ಲೇಝರ್ ಚಿಕಿತ್ಸೆಯಿಂದ ಕೆಲವೇ ನಿಮಿಷಗಳಲ್ಲಿ ಶಸ್ತ್ರಕ್ರಿಯೆಯನ್ನು ನಡೆಸುವಂತಾದುದು, ತಾಯಿಯಲ್ಲಿರುವ ಭಯಂಕರ ರೋಗವು ಭ್ರೂಣಕ್ಕೆ ತಗುಲದಂತೆ ಮಗುವಿನ ಜನನ (ಪ್ರಜಾವಾಣಿ ೩೦.೭.೨೦೧೮ರಲ್ಲಿ ಪ್ರಕಟಗೊಂಡ ಮಾಹಿತಿ) ಮೊದಲಾದವು ಆದುದು ವಿಜ್ಞಾನದಿಂದಲೇ. ಇಂತಹ ಮೌಲ್ಯಯುತ ಮಾಹಿತಿಯನ್ನು ವಿಜ್ಞಾನ ಲೇಖನವು ಹೊಂದಿರುವುದನ್ನು ಕಾಣಬಹುದು.

ಇತರ ಎಲ್ಲಾ ಕ್ಷೇತ್ರಗಳಂತೆ ರಕ್ಷಣಾ ಕ್ಷೇತ್ರದಲ್ಲೂ ವಿಜ್ಞಾನದ ಪ್ರಭಾವವನ್ನು ಲೇಖನಗಳ ಮೂಲಕ ತಿಳಿಯಬಹುದು. ನಾಗ, ಪೃಥ್ವಿ, ಮೊದಲಾದ ಕ್ಷಿಪಣಿಗಳನ್ನು ತಯಾರಿಸಿ ಯಶಸ್ವಿ ಪ್ರಯೋಗದೊಂದಿಗೆ ರಕ್ಷಣಾ ಕಾರ್ಯದಲ್ಲಿ ಬಳಸಲಾಗುತ್ತಿದೆ. ಅತ್ಯಾಧುನಿಕ ಯುದ್ಧಾಸ್ತ್ರಗಳು ನಿರ್ಮಾಣವಾದುದು ವಿಜ್ಞಾನದ ಸಹಾಯದಿಂದಲೇ. ಇನ್ನು ಶಿಕ್ಷಣ ಕ್ಷೇತ್ರದಲ್ಲಂತು ಬಹಳಷ್ಟು ವೈಜ್ಞಾನಿಕ ಕಾರ್ಯಗಳು ನಡೆದಿದ್ದು, ಮಾಹಿತಿ ತಂತ್ರಜ್ಞಾನಾಧಾರಿತ ಶಿಕ್ಷಣ ನೀಡುವಂತಾಗುವಲ್ಲಿ ವಿಜ್ಞಾನ ಲೇಖನಗಳು ಬಹು ಮಹತ್ವದಾದುದು. ಕೇವಲ ಭೌತಿಕವಾಗಿ ಮಾತ್ರವಲ್ಲದೆ ಅಂತರೀಕ್ಷದಲ್ಲೂ ಖಭೌತದಲ್ಲೂ ಅಪಾರ ಸಾಧನೆಯನ್ನು ವಿಜ್ಞಾನದಿಂದ ಜನತೆಯು ಕಂಡು ಕೊಂಡಿದ್ದಾರೆ. ಹೀಗಾಗಿ ನಮ್ಮ ದೇಶವು ಆಕಾಶಯಾನದಲ್ಲಿ ಅಪಾರ ಯಶಸ್ಸನ್ನು ಸಾಧಿಸಿದೆ. PSLV D2, PSLVC-7, SLV-3, GSLV-2, SRE-1, INSAT 2D ಮೊದಲಾದ ಉಪಗ್ರಹಗಳ ಯಶಸ್ವಿ ಉಡಾವಣೆಯೊಂದಿಗೆ ಆಕಾಶದಲ್ಲಿನ ವಿದ್ಯಮಾನಗಳನ್ನು ತಿಳಿಯುವುದಲ್ಲದೆ, ಅದರ ತರಂಗಗಳ ಸಹಾಯದಿಂದ ವಾತಾವರಣ ವೈಪರೀತ್ಯ, ವಾಣಿಜ್ಯ ವ್ಯವಹಾರ ಮೊದಲಾದವುಗಳ ಮಾಹಿತಿಯು ಇಡೀ ವಿಶ್ವದಲ್ಲೇ ಪಡೆಯುವಂತಾಗಲು ವಿಜ್ಞಾನ ಲೇಖನಗಳೇ ಕಾರಣ.

ಸಾಮಾನ್ಯ, ನಿಗೂಢ, ರಹಸ್ಯ ಎನ್ನದೇ ಎಲ್ಲಾ ಕ್ಷೇತ್ರಗಳಲ್ಲೂ ವೈಜ್ಞಾನಿಕ ಸಂಶೋಧನೆಗಳು ನಡೆದಿವೆ. ಪ್ರಕೃತಿ, ಕೃಷಿ, ಭೌತಿಕ, ಬಾಹ್ಯ, ಆರೋಗ್ಯ, ಮಾಹಿತಿ ತಂತ್ರಜ್ಞಾನ ಎಲ್ಲಾ ಕ್ಷೇತ್ರಗಳಲ್ಲೂ ಆವಿಷ್ಕಾರ ಸಂಶೋಧನೆಗಳು ನಡೆದಿದ್ದು, ಜನತೆಯ ಒಳಿತು ಹಾಗೂ ಉಪಯೋಗಕ್ಕಾಗಿ. ರಾಷ್ಟ್ರ, ರಾಜ್ಯ ಹಾಗೂ ಸ್ಥಳೀಯವಾಗಿ ಸು ೨೦೦ ಕ್ಕೂ ಅಧಿಕ ಸಂಶೋಧನಾ ಕೇಂದ್ರಗಳಿದ್ದು, ಬಹಳಷ್ಟು ಸಂಶೋಧನಾ ಕಾರ್ಯಗಳು ನಡೆದಿದ್ದು, ಇನ್ನೂ ನಡೆಯುತ್ತಿರುವುದನ್ನು ಕಾಣಬಹುದು. ಇದು ದೇಶದ ಹಾಗೂ ಜನತೆಯ ಬೆಳವಣಿಗೆಗೆ ಪೂರಕ ಪ್ರೇರಕ ವಾತಾವರಣ ಸೃಷ್ಟಿಸುವಲ್ಲಿ ಎರಡು ಮಾತಿಲ್ಲ.

ಪ್ರಯೋಗ, ಅನ್ವೇಷಣೆ, ಆವಿಷ್ಕಾರ, ಸಂಶೋಧನೆಗಳ ಮೂಲಕ ಪ್ರಕೃತಿಯಲ್ಲಿನ ವಿಸ್ಮಯ ನಿಗೂಢತೆಗಳು ಜನತೆಗೆ ತಲುಪುವುದೇ ವಿಜ್ಞಾನ ಕಾರ್ಯಗಳಿಂದ. ವೈಜ್ಞಾನಿಕ ವಿಷಯ ವಿಚಾರಗಳೊಂದಿಗೆ ಆಧುನಿಕತೆಗೆ ಹೊಂದಿಕೊಳ್ಳುತ್ತಾ ಸಾಮಾನ್ಯ ಜನರ ಜೀವನ ಸುಖಮಯವಾಗಿ, ಬದುಕು ಹಸನುಗೊಳ್ಳುವುದು. ಹೀಗಾಗಿಯೇ ವಿಜ್ಞಾನ ಮತ್ತು ವಿಜ್ಞಾನ ಸಾಹಿತ್ಯ, ಜನತೆ, ಸಮಾಜವು ತ್ರಿಕೋನವಾಗಿ ಕಾರ್ಯಪ್ರವೃತ್ತವಾಗುತ್ತಾ ದೇಶದ ಬೆಳವಣಿಗೆಗೆ ಸಹಕರಿಸುವುದು. ಇದನ್ನು ಈ ಕೆಳಗಿನ ನಕ್ಷೆಯಲ್ಲಿ ಚಿತ್ರಿಸಲಾಗಿದೆ.



ವಿಜ್ಞಾನದ ಯಾವುದೇ ಕಾರ್ಯದ ಮೂಲವೇ ವಿಶ್ವ. ವಿಜ್ಞಾನದಿಂದ ಜನತೆ. ಜನತೆಯಿಂದ ಸಮಾಜ. ಒಂದಕ್ಕೊಂದು ಅವಿನಾಭಾವ ಸಂಬಂಧದಿಂದ ಕೂಡಿದ್ದು, ಜನತೆಗಾಗಿಯೇ ವಿಜ್ಞಾನ, ವಿಜ್ಞಾನಕ್ಕಾಗಿಯೇ ಜನತೆ ಎಂಬಂತಾಗಿದೆ. ವೈಜ್ಞಾನಿಕ ಚಿಂತನೆಯು ಎಂದೆಂದಿಗೂ ದೇಶದ ಅಭಿವೃದ್ಧಿಗೆ ಪೂರಕವೇ ಹೊರತು ಮಾರಕವಲ್ಲ ಎಂಬುದನ್ನು ಎಲ್ಲರೂ ಮನದಟ್ಟು ಮಾಡಿಕೊಂಡು ದೇಶವನ್ನು ಸರ್ವತೋಮುಖ ಬೆಳವಣಿಗೆಯತ್ತಾ ಕೊಂಡುಯ್ದಾಗ, ದೇಶವು ಅಭಿವೃದ್ಧಿಯ ಶಿಖರದ ತುತ್ತ ತುದಿಯನ್ನು ಮುಟ್ಟುವಲ್ಲಿ ಸಂದೇಹವಿಲ್ಲ.

ಸಾಮಾಜಿಕ ಹೊಣೆಗಾರಿಕೆ ಮತ್ತು ವಿಜ್ಞಾನದ ಸಮಸ್ಯೆಗಳ ಆಳ ಅರಿವಿನ ಚಿಂತನೆಯನ್ನು ವಿಜ್ಞಾನಿಗಳು ಜನಸಾಮಾನ್ಯರಿಗೆ ತಿಳಿಯುವಂತೆ ಮಾಡುವಲ್ಲಿ ವಿಜ್ಞಾನ ಮತ್ತು ಸಾಮಾಜಿಕ ಹೊಣೆಗಾರಿಕೆಯು ಒಂದಕ್ಕೊಂದು ಸಂಬಂಧ ಹೊಂದಿವೆ. ಹೀಗಾಗಿಯೇ ವಿಜ್ಞಾನ ಸಾಹಿತ್ಯವು ಬಹಳಷ್ಟು ಪ್ರತಿರೋಧಗಳ ನಡುವೆಯೂ ವಿಷಯವನ್ನು ಬಹಳ ಹಿಂದಿನ ಕಾಲದಿಂದ ವೈಜ್ಞಾನಿಕವಾಗಿ, ಸ್ಪಷ್ಟ ಗ್ರಹಿಕೆಯ ಮೂಲಕ ತಿಳಿಸುತ್ತಿರುವುದನ್ನು ಗಮನಿಸಬಹುದು.

ಸಾಮಾಜಿಕ ಹೊಣೆಗಾರಿಕೆಯ ಜವಾಬ್ದಾರಿಯನ್ನು ನಿಭಾಯಿಸುವ ಚೈತನ್ಯ ಜ್ಞಾನವನ್ನು ನೀಡುವಲ್ಲಿ ವಿಜ್ಞಾನ ಸಾಹಿತ್ಯದ ಕೊಡುಗೆಯು ವಿಶೇಷವಾದುದು. ಒಂದು ಸಮಾಜದ ಗತಕಾಲದ ಮೇಲೆ ಭವಿಷ್ಯ ರೂಪಿಸುವ ಮಾಹಿತಿ ನೀಡುವಲ್ಲಿ ವಿಜ್ಞಾನ ಲೇಖನವು ಸಹಕಾರಿಯಾಗಿದೆ. ವಿಜ್ಞಾನ ಬರಹಗಳು ಸ್ವರೂಪದ ಹಾಗೂ ಶೈಲಿಯ ದೃಷ್ಟಿಯಿಂದ ಎಷ್ಟೇ ತಿರಸ್ಕೃತಗೊಂಡರೂ, ಗತಕಾಲದ ಸತ್ಯ, ದುರಂತಗಳ ವಿಚಿತ್ರ ಸಮ್ಮಿಲನದ ಚಿತ್ರಣವನ್ನು ತೋರಿಸುತ್ತದೆ. ಮಾನವನ ಹುಟ್ಟು ಬೆಳವಣಿಗೆ ಅಭಿವೃದ್ಧಿಗಳ ಮಧ್ಯೆ ಪ್ರಕೃತಿಯ ಏರುಪೇರು,

ಕಟ್ಟು ಕೆಡವು ನೀತಿಯಿಂದಾಗಿ ಇಂದಿನ ಮನುಷ್ಯ ವಿಜ್ಞಾನದ ಮೊರೆ ಹೋಗುವ ಅನಿವಾರ್ಯತೆಯು ಸೃಷ್ಟಿಯಾಗಿದೆ.

ಯಾವುದೇ ವೈಜ್ಞಾನಿಕ ವಿಷಯವನ್ನು ಸಮಾಜದೆಡೆಗೆ ಕೊಂಡೊಯ್ಯುವ ಮೊದಲು ವಿಜ್ಞಾನ ಸಾಹಿತಿಯ ವಿಷಯ ಸಂಗ್ರಹ, ಕ್ರೋಢೀಕರಣ, ಮಂಡಣೆಯಲ್ಲಿ ಏನು? ಹೇಗೆ? ಏಕೆ? ಯಾವಾಗ? ಎಲ್ಲಿ? ಮತ್ತಿತರ ಪ್ರಶ್ನೆಗಳೊಂದಿಗೆ ಬರವಣಿಗೆ ಸಿದ್ಧತೆಯನ್ನು ಮಾಡಿಕೊಳ್ಳವುದು ಬಹುಮುಖ್ಯ. ಹೀಗಾಗಿಯೇ ರುಡ್‌ಯಾರ್ಡ್ ಕಿಪ್ಲಿಂಗ್‌ರವರು 'ತನಗೆ ತಿಳಿದಿರುವುದನ್ನೆಲ್ಲ ಆರು ಜನ ನಂಬಿಕಸ್ಥ ಸ್ನೇಹಿತರು ಕಲಿಸಿದ್ದಾರೆ ಎಂದು ಕವನ ಕಟ್ಟಿ ಹಾಡಿದ್ದಾನೆ: ಅವರ ಹೆಸರುಗಳು ಏನು? ಏಕೆ? ಯಾವಾಗ? ಹೇಗೆ? ಎಲ್ಲಿ? ಮತ್ತು ಯಾರು?' ಎಂದಿರುವುದು ವಿಜ್ಞಾನ ಸಾಹಿತಿಗಳಿಗೆ ಪೂರ್ವನುಡಿಯಂತಿದೆ.

ವಿಜ್ಞಾನ ವಿಷಯ ವಿಚಾರ, ಬರವಣಿಗೆಯಲ್ಲಿನ ಕ್ರಮ, ಧಾಟಿ, ನಿಯಮಗಳು, ಕಷ್ಟಕರವಾಗಿದ್ದು, ಭಾಷಾ ಭೂಯಿಷ್ಟವಾಗಿದ್ದು, ವಿಜ್ಞಾನಿಗಳಿಗೆ ಮಾತ್ರ ಸೀಮಿತವಾದುದು ಎಂಬ ಅಭಿಪ್ರಾಯವನ್ನು ಬಹಳಷ್ಟು ವಿಜ್ಞಾನ ಸಾಹಿತಿಗಳು ಬದಲಿಸಿ, ತಮ್ಮದೇ ಆದ ಸ್ವಂತ ಶೈಲಿಯಲ್ಲಿ ಯಾರನ್ನು ಅನುಕರಿಸದೆ ಹಾಗೂ ಯಾರು ಅನುಕರಿಸಲು ಸಾಧ್ಯವಾಗದ ಅಭಿವ್ಯಕ್ತಿ ಸ್ವರೂಪದೊಂದಿಗೆ ಸೃಜನಾತ್ಮಕವಾಗಿ ಲೇಖನಗಳನ್ನು ಕೃತಿಗಳನ್ನು ರಚಿಸಿದ್ದಾರೆ. ವಿಜ್ಞಾನ ಎಂಬುದು ವಿಷಯ ಜ್ಞಾನಿಗಳಿಗೆ ಮಾತ್ರ ಸೀಮಿತವಾದುದು ಎಂಬುದನ್ನು ಬದಲಿಸಿ, ಹವ್ಯಾಸಿಗಳು, ಆಸಕ್ತರು ಯಾರು ಬೇಕಾದರೂ ಸರಿಯೇ ವಿಜ್ಞಾನ ಸಾಹಿತ್ಯ ರಚನೆಯ ಕಾರ್ಯವನ್ನು ಮಾಡಬಹುದೆಂದು ತಿಳಿಸಿರುವುದನ್ನು ಗಮನಿಸಬಹುದು.

ವಿಜ್ಞಾನ ಸಾಹಿತಿಗಳು ತಾವು ಏನನ್ನು ಹೇಳಲು ಹೊರಟ್ಟಿದ್ದಾರೋ ಅದು ಬಲು ಕಠಿಣವಾಗಿರದೆ, ಕೆಲವು ಕಟ್ಟುನಿಟ್ಟಿನ ನಿಯಮಗಳ ಅನುಸರಣೆಯಲ್ಲಿ, ಅವರವರ ವಿಷಯ ಜ್ಞಾನ ಹಾಗೂ ಪ್ರಸ್ತುತದ ಅನ್ವಯಿಕೆ ಜೊತೆಗೆ ಸುಲಲಿತ ಸರಳ ಶೈಲಿಯಲ್ಲಿ ಅರ್ಥವತ್ತಾಗಿ ಲೇಖನಗಳಲ್ಲಿ ಕೃತಿಗಳಲ್ಲಿ ಮೂಡಿಬಂದಿದೆ. ವಿಜ್ಞಾನ ಹಾಗೂ ವಿಜ್ಞಾನ ಸಾಹಿತ್ಯದ ಉದ್ದೇಶ ಆಶಯಗಳಾದ ಸಂಶೋಧನೆ, ಆವಿಷ್ಕಾರ ಮತ್ತು ಸಮಾಜಕ್ಕೆ ಅಗತ್ಯ ವೈಜ್ಞಾನಿಕ ಅರಿವನ್ನು ಮೂಡಿಸುವ ಜೊತೆ ಜೊತೆಯಲ್ಲಿಯೇ ಮೂಢನಂಬಿಕೆ, ಅವೈಜ್ಞಾನಿಕ ಚಿಂತನೆಯನ್ನು ಹೋಗಲಾಡಿಸಿ, ಕುತೂಹಲವನ್ನು ಕೆರಳಿಸಿ, ಯಾವುದನ್ನೇ ಆಗಲಿ ಸಂದೇಹಿಸುವ ಪ್ರಶ್ನಾತ್ಮಕ ದೃಷ್ಟಿಯಿಂದ ನೋಡುವ ಪ್ರವೃತ್ತಿಯು ಬೆಳೆಯಲು ಮೂಲ ವಿಜ್ಞಾನ ಸಾಹಿತ್ಯ.

ಬಹುಮುಖ ವ್ಯಕ್ತಿತ್ವದ ವಿಜ್ಞಾನಿ ಮೇಧಾವಿಗಳು ಕನ್ನಡ ಜನತೆಯಲ್ಲಿ ಅವರವರ ತಾಯ್ನುಡಿ/ ಮಾತೃಭಾಷೆಯ ಮೂಲಕವೇ ವೈಜ್ಞಾನಿಕ ಭಾವನೆ ಪ್ರಜ್ಞೆಯನ್ನು ಮೂಡಿಸುವ

ಅಗತ್ಯತೆಯನ್ನು ಮನಗಂಡರು. ಇಂದಿನ ಯುಗದಲ್ಲಿ ವಿಜ್ಞಾನವು ಹಿಂದೆ ಬೀಳದೆ, ವೈಜ್ಞಾನಿಕ ಕ್ಷೇತ್ರದಲ್ಲಿನ ಪ್ರಗತಿಯನ್ನು ಗಮನದಲ್ಲಿರಿಸಿಕೊಂಡು ಅತ್ಯಾಧುನಿಕ ಮಾಹಿತಿಗಳನ್ನು ಕನ್ನಡದ ಮೂಲಕ ತಿಳಿಸುವ ಪ್ರಯತ್ನವನ್ನು ಬಹಳಷ್ಟು ಲೇಖಕರು ಮಾಡುತ್ತಿದ್ದಾರೆ. ಇವರ ಲೇಖನಗಳಲ್ಲಿ ನಿಖರ ವಿಷಯ ನಿರೂಪಣೆಯು ಅವರವರ ಭಾಷಾ ಶೈಲಿಯಲ್ಲಿ ಬಿಗಿ ಹಿಡಿತವಿಲ್ಲದೆ, ಸರಳ ಸುಲಭ ಪಾರಿಭಾಷಿಕ ಶಬ್ದಗಳ ಬಳಕೆಯೊಂದಿಗೆ ಪ್ರಸ್ತುತಪಡಿಸಿರುವುದು ವಿಶೇಷವಾಗಿದೆ.

ಕ್ಲಿಷ್ಟವೆನಿಸುವ ವೈಜ್ಞಾನಿಕ ಮಾಹಿತಿಯನ್ನು ಸಾಹಿತ್ಯದೊಂದಿಗೆ ವೈಜ್ಞಾನಿಕ ಖಚಿತತೆಯನ್ನು ಅಭಿವ್ಯಕ್ತಿಯ ಶೈಲಿಯಲ್ಲಿ ತುಂಬುವುದು ಇಂದಿನ ಯುಗಕ್ಕೆ ಅನಿವಾರ್ಯವಾಗಿದೆ. ನಿಖರ ವಿಷಯ ಜ್ಞಾನ, ಪರಿಪೂರ್ಣತೆ, ಪಕ್ವವಾದ ಗ್ರಹಿಕೆ, ಅಗತ್ಯವಾದ ಸ್ಪಷ್ಟತೆ, ತೀರ ಬಿಗುವಿನಿಂದ ಕೂಡಿರದ ನಿಖರವಾದ ನಿರೂಪಣೆಯ ಶೈಲಿ, ವಿಕೃತತೆಯಿಲ್ಲದ ವಿಡಂಬನೆ ಮೊದಲಾದ ವಿಶೇಷ ಅಭಿವ್ಯಕ್ತಿ ಕೌಶಲ್ಯತೆಗಳನ್ನು ವಿಜ್ಞಾನ ಸಾಹಿತಿಗಳಲ್ಲಿ ಕಾಣಬಹುದು. ತಮ್ಮ ಪರಿಣಿತ ಕ್ಷೇತ್ರದ ಉದ್ಯೋಗದಲ್ಲಿ ತೊಡಗಿದವರು ಹವ್ಯಾಸಕ್ಕಾಗಿ ತಮಗೆ ತಿಳಿದ ವೈಜ್ಞಾನಿಕ ವಿಷಯಗಳನ್ನು ಆಕರ್ಷಕ ಜನಪ್ರಿಯ ಸರಳ ಸುಲಭ ಶೈಲಿಯಲ್ಲಿ ಬರೆಯುವುದರೊಂದಿಗೆ ವಿಜ್ಞಾನ ಸಾಹಿತ್ಯ ಕ್ಷೇತ್ರಕ್ಕೆ ಕೊಡುಗೆಯನ್ನು ನೀಡಿದ್ದಾರೆ. ಅಲ್ಲದೆ ಜಟಿಲವೆನಿಸಿದುದನ್ನು ಸರಳ ಸುಲಭ ಶೈಲಿಯಲ್ಲಿ ನಿದರ್ಶನಗಳೊಂದಿಗೆ ಅಭಿವ್ಯಕ್ತಿಸಿದ್ದಾರೆ.

ಚಾರಿತ್ರಿಕ ಹಾಗೂ ಬೌದ್ಧಿಕ ತುಡಿತಗಳ ಪರಿಚಯವಿರುವ ಸಾಹಿತಿಗಳು ಬಳಸಿರುವ ಭಾಷೆ ಸುಲಭ ಗ್ರಾಹ್ಯವಾಗಿದ್ದು, ಸರಳಗೊಳಿಸುವಲ್ಲಿ ಮೂಲ ವಿಷಯದ ಆಶಯವು ಶಿಥಿಲವಾಗದೆ, ವಿದ್ವತ್ತಿನ ಭಾರದಿಂದ ಗಡುಸಾಗದೆ ಸುವರ್ಣ ಮಧ್ಯಮ ಮಾರ್ಗದಲ್ಲಿ ಕಥನಾತ್ಮಕವಾಗಿ, ವೈಚಾರಿಕವಾಗಿ, ವಿಶ್ಲೇಷಣಾತ್ಮಕವಾಗಿ, ವೈಜ್ಞಾನಿಕವಾಗಿ ಪ್ರಚುರಪಡಿಸಿರುವುದು ಸಾಹಿತಿಗಳ ಸೃಜನಾತ್ಮಕತೆಯ ದ್ಯೋತಕವಾಗಿದೆ. ಪದದ ಬಳಕೆ ಮತ್ತು ಸೃಷ್ಟಿಯ ಕಾರ್ಯದಲ್ಲಿ ಸಂಸ್ಕೃತ ಪದಗಳ ಜೊತೆಗೆ ಪ್ರತ್ಯಯಗಳ ಪರಿಚಯ ಮಾಡಿಕೊಟ್ಟಿದ್ದಾರೆ. ಸಂಸ್ಕೃತದ ಪದಗಳನ್ನು ಪಾರಿಭಾಷಿಕ ಪದಗಳನ್ನು ಸಂಗ್ರಹಿಸಿ ರಚನೆಯಲ್ಲಿ ಅರ್ಥಗಳನ್ನು ಪರಿಚಯ ಮಾಡಿಕೊಟ್ಟಿರುವುದು ಸಾಹಿತಿಗಳ ವಿಶಿಷ್ಟ ಗುಣದ ಸೂಚಕವಾಗಿದೆ.

ವಿಷಯ ಆಸಕ್ತರಾಗಿ ಅದರ ವೈಜ್ಞಾನಿಕ ತಾಂತ್ರಿಕ ಭಾಷೆಯನ್ನು ಅರ್ಥ ಮಾಡಿಕೊಂಡು ವಿಷಯವನ್ನು ಜನಪ್ರಿಯ ಭಾಷೆಯಲ್ಲಿ ಸರಳ ಸುಲಭ ಶೈಲಿಯಲ್ಲಿ ಭಾಷಾಂತರಿಸಿದ್ದಾರೆ. ದಿನಬಳಕೆಯ ಪದಗಳನ್ನು ಪಾರಿಭಾಷಿಕ ಅರ್ಥ ಬಳಸುವಲ್ಲಿ ವಿಜ್ಞಾನ ಸಾಹಿತ್ಯದ ಪಾಲು ಹಿರಿದಾದುದು. ನಿರರ್ಥಕ ಸಂಸ್ಕೃತ ಮತ್ತಿತರ ಪದಗಳ ಬಳಕೆಯನ್ನು ತಡೆಯಲಾಗಿದೆ.

ವೈಜ್ಞಾನಿಕ ತಾಂತ್ರಿಕ ಭಾಷಾ ಸಾಧನಗಳಾದ ಸಂಕೇತಗಳು, ಚಿಹ್ನೆಗಳು, ಸಮೀಕರಣ ಸೂತ್ರಗಳು ಮೊದಲಾದವುಗಳನ್ನು ಅಗತ್ಯಕ್ಕೆ ತಕಂತೆ ಬಳಸಿ, ವಿವರಣಾತ್ಮಕ ಹಾಗೂ ಚಿತ್ರಾತ್ಮಕ ಶೈಲಿಯಲ್ಲಿ ವಿಷಯ ವಿನಿಮಯವನ್ನು ವಿಜ್ಞಾನ ವಿಚಾರಗಳನ್ನು ಸಾಮಾನ್ಯನಿಗೆ ಅರ್ಥೈಸಲಾಗುವುದು. ಇದರಿಂದ ತರ್ಕಬದ್ಧ ವೈಚಾರಿಕ ಆಲೋಚನಾ ಶಕ್ತಿಯನ್ನು ಬೆಳೆದು ವೈಜ್ಞಾನಿಕ ಆವಿಷ್ಕಾರವನ್ನು ಹಿತ ಮಿತವಾಗಿ ಆವಶ್ಯಕತೆಗೆ ತಕ್ಕಂತೆ ಉಪಯೋಗಿಸುವುದನ್ನು ಗುರುತಿಸಬಹುದು.

ಸ್ವಂತ ಅರ್ಥ ಕಡಿಮೆಯಿರುವ ಪಾರಿಭಾಷಿಕ ಪದಗಳನ್ನು ಗಮನಿಸಿ ಅರ್ಥವತ್ತಾಗಿ ರಚಿಸಿರುವುದರಿಂದ ವೈಜ್ಞಾನಿಕ ಮಾಹಿತಿಯು ಜನಸಾಮಾನ್ಯರಿಗು ಅರ್ಥವಾಗುವಂತಾಗಿದೆ. ಖ್ಯಾತ ವಿಜ್ಞಾನಿ ಲೇಖಕರಾದ ಜೆ.ಆರ್ ಲಕ್ಷ್ಮಣರಾವ್‌ರವರು ಹೇಳಿರುವಂತೆ 'ಗ್ರೀಕ್ ಮತ್ತು ಲ್ಯಾಟಿನ್ ತುಂಡು ಪದಗಳನ್ನೆಲ್ಲ ಸಂಗ್ರಹಿಸುವಂತೆ, ಕನ್ನಡ ಪಾರಿಭಾಷಿಕ ಪದಗಳ ರಚನೆಯಲ್ಲಿ ಪಾಲ್ಗೊಳ್ಳಬಲ್ಲ ಸಂಸ್ಕೃತದ ತುಂಡು ಪದಗಳನ್ನು ಸಂಗ್ರಹಿಸಿ ಅವುಗಳ ಅರ್ಥಗಳನ್ನು ಪರಿಚಯ ಮಾಡಿಕೊಂಡರೆ ನಮ್ಮ ಕೆಲಸಕ್ಕೆ ತುಂಬ ಸಹಾಯವಾಗುವುದು' ಎಂಬುದನ್ನು ಇಲ್ಲಿ ಉಲ್ಲೇಖಿಸಬಹುದು.

ವಿಜ್ಞಾನ ವಿಷಯ ವಿಚಾರ, ಬರವಣಿಗೆಯಲ್ಲಿನ ಕ್ರಮ, ಧಾಟಿ, ನಿಯಮಗಳು, ಕಷ್ಟಕರವಾಗಿದ್ದು, ಭಾಷಾ ಭೂಯಿಷ್ಟವಾಗಿದ್ದು, ವಿಜ್ಞಾನಿಗಳಿಗೆ ಮಾತ್ರ ಸೀಮಿತವಾದುದು ಎಂಬ ಅಭಿಪ್ರಾಯವನ್ನು ಬಹಳಷ್ಟು ವಿಜ್ಞಾನ ಸಾಹಿತಿಗಳು ಬದಲಿಸಿ, ತಮ್ಮದೇ ಆದ ಸ್ವಂತ ಶೈಲಿಯಲ್ಲಿ ಯಾರನ್ನು ಅನುಕರಿಸದೆ ಹಾಗೂ ಯಾರು ಅನುಕರಿಸಲು ಸಾಧ್ಯವಾಗದ ಅಭಿವ್ಯಕ್ತಿ ಸ್ವರೂಪದೊಂದಿಗೆ ಸೃಜನಾತ್ಮಕವಾಗಿ ಲೇಖನಗಳನ್ನು ಕೃತಿಗಳನ್ನು ರಚಿಸಿದ್ದಾರೆ. ವಿಜ್ಞಾನ ಎಂಬುದು ವಿಷಯ ಜ್ಞಾನಿಗಳಿಗೆ ಮಾತ್ರ ಸೀಮಿತವಾದುದು ಎಂಬುದನ್ನು ಬದಲಿಸಿ, ಹವ್ಯಾಸಿಗಳು, ಆಸಕ್ತರು ಯಾರು ಬೇಕಾದರೂ ಸರಿಯೇ ವಿಜ್ಞಾನ ಸಾಹಿತ್ಯ ರಚನೆಯ ಕಾರ್ಯವನ್ನು ಮಾಡಬಹುದೆಂದು ತಿಳಿಸಿರುವುದನ್ನು ಗಮನಿಸಬಹುದು.

ವಿಜ್ಞಾನ ಸಾಹಿತಿಗಳು ತಾವು ಏನನ್ನು ಹೇಳಲು ಹೊರಟ್ಟಿದ್ದಾರೋ ಅದು ಬಲು ಕಠಿಣವಾಗಿರದೆ, ಕೆಲವು ಕಟ್ಟುನಿಟ್ಟಿನ ನಿಯಮಗಳ ಅನುಸರಣೆಯಲ್ಲಿ, ಅವರವರ ವಿಷಯ ಜ್ಞಾನ ಹಾಗೂ ಪ್ರಸ್ತುತದ ಅನ್ವಯಿಕೆ ಜೊತೆಗೆ ಸುಲಲಿತ ಸರಳ ಶೈಲಿಯಲ್ಲಿ ಅರ್ಥವತ್ತಾಗಿ ಲೇಖನಗಳಲ್ಲಿ ಕೃತಿಗಳಲ್ಲಿ ಮೂಡಿಬಂದಿದೆ. ವಿಜ್ಞಾನ ಹಾಗೂ ವಿಜ್ಞಾನ ಸಾಹಿತ್ಯದ ಉದ್ದೇಶ ಆಶಯಗಳಾದ ಸಂಶೋಧನೆ, ಆವಿಷ್ಕಾರ ಮತ್ತು ಸಮಾಜಕ್ಕೆ ಅಗತ್ಯ ವೈಜ್ಞಾನಿಕ ಅರಿವನ್ನು ಮೂಡಿಸುವ ಜೊತೆ ಜೊತೆಯಲ್ಲಿಯೇ ಮೂಡನಂಬಿಕೆ, ಅವೈಜ್ಞಾನಿಕ ಚಿಂತನೆಯನ್ನು

ಹೋಗಲಾಡಿಸಿ, ಕುತೂಹಲವನ್ನು ಕೆರಳಿಸಿ, ಯಾವುದನ್ನೇ ಆಗಲಿ ಸಂದೇಹಿಸುವ ಪ್ರಶ್ನಾತ್ಮಕ ದೃಷ್ಟಿಯಿಂದ ನೋಡುವ ಪ್ರವೃತ್ತಿಯು ಬೆಳೆಯಲು ಮೂಲ ವಿಜ್ಞಾನ ಸಾಹಿತ್ಯವಾಯಿತು.

ಅಧ್ಯಯನಶೀಲತೆ, ಜ್ಞಾನಾರ್ಜನೆಯಲ್ಲದೆ ಹಾಗೂ ವ್ಯಕ್ತಿತ್ವದ ಸರ್ವತೋಮುಖ ವಿಕಸನಕ್ಕೆ ವಿಜ್ಞಾನ ಸಾಹಿತ್ಯವು ವಿಶೇಷವಾದ ಕೊಡುಗೆಯನ್ನು ನೀಡಿದೆ. ಶುದ್ಧ ಅರ್ಥಬದ್ಧ ಹಾಗೂ ವಿಚಾರಶೀಲ ಸೃಜನಾತ್ಮಕ ಅಭಿವ್ಯಕ್ತಿ ಕೌಶಲ್ಯದೊಂದಿಗೆ ಜನತೆಗೆ ಅಗತ್ಯ ಅವಶ್ಯಕವಾದ ಸಮಾಜದ ಅಭಿವೃದ್ಧಿಗೆ ಸಹಕರಿಸುವ ವೈಜ್ಞಾನಿಕ ವಿಷಯ ಜ್ಞಾನವನ್ನು, ಪರಿಸರ/ಪ್ರಕೃತಿ, ಆರೋಗ್ಯ, ಕೃಷಿ, ಭೌತ–ಖಭೌತ, ಮಾಹಿತಿ ತಂತ್ರಜ್ಞಾನ ಎಂಬ ವಸ್ತು ವೈವಿಧ್ಯತೆಯೊಂದಿಗೆ ಪ್ರಸ್ತುತ ಪಡಿಸಿರುವುದು ವಿಜ್ಞಾನ ಸಾಹಿತ್ಯವು ಜನ ಸಾಮಾನ್ಯನಲ್ಲಿಗೆ ಹೋಗಲು ಕಾರಣವಾಯಿತು.

ಸಾಮಾಜಿಕ ಪ್ರಜ್ಞೆಯನ್ನು ಬೆಳೆಸುವಲ್ಲಿ ವಿಜ್ಞಾನ ಸಾಹಿತ್ಯದ ಪಾಲು ಹಿರಿದಾದುದು. ಆಯಾ ಕಾಲದ ಸಾಮಾಜಿಕ ನೆಲೆಯಿಂದ ಮೂಡಿಬಂದ ಸಾಹಿತ್ಯವು ಆಯಾ ಕಾಲದ ಸಮಾಜದ ಸಮಗ್ರ ಚಿತ್ರಣವನ್ನು ಪರಿಣಾಮಕಾರಿಯಾಗಿ ನೀಡುವುದು. ಸಾಮಾಜಿಕ ನೀತಿ ನಿಯಮಗಳು, ಸಮಸ್ಯೆಗಳು, ಆದರ್ಶಗಳು ವಿಜ್ಞಾನ ಸಾಹಿತ್ಯದ ವಸ್ತುವಾಗಿ ಮೂಡಿಬಂದಿರುತ್ತವೆ. ಇಂತಹ ಸಾಹಿತ್ಯದ ಅಧ್ಯಯನದಿಂದ ಸಾಮಾಜಿಕ ಪ್ರಜ್ಞೆ ಹಾಗೂ ಸಾಮಾಜಿಕ ಮೌಲ್ಯಗಳು ಬೆಳೆಯುವಂತಾಗುವುದು.

ಜನರಲ್ಲಿ ಮೂಢನಂಬಿಕೆಯನ್ನು ಹೋಗಲಾಡಿಸಿ ಜನರ ದೃಷ್ಟಿಕೋನವನ್ನು ವಿಶಾಲಗೊಳಿಸುವುದು ಅಲ್ಲದೆ ಜೀವನದಲ್ಲಿ ಎದುರಾಗುವ ಸಮಸ್ಯೆಗಳನ್ನು ವೈಜ್ಞಾನಿಕ ವಿಧಾನದಿಂದ ಪರಿಹರಿಸಿಕೊಳ್ಳಲು ವಿಜ್ಞಾನ ಲೇಖನಗಳು ಸಹಕಾರಿಯಾಗುವುದರೊಂದಿಗೆ ಸಮಾಜಿಕ ಕಳಕಳಿಯಿರುವುದನ್ನು ಗಮನಿಸಬಹುದು. ಅಲ್ಲದೇ ಸಮಗ್ರ ವೈಜ್ಞಾನಿಕ ಇಲ್ಲವೇ ವಿಜ್ಞಾನದ ಮಾಹಿತಿಯ ಅರಿವು ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ, ಸಾಂಸ್ಕೃತಿಕ ಮೊದಲಾದ ಸಂದರ್ಭಗಳಲ್ಲಿ ನೈಜ ಸತ್ಯವನ್ನು ಅರಿಯಲು ಸಹಾಯಕ. ಸಮಾಜದಲ್ಲಿ ಯಾವುದೇ ಸಮಸ್ಯೆ ಎದುರಾದಾಗ, ಅದಕ್ಕೆ ಪರಿಹಾರವನ್ನು ಕಂಡುಕೊಳ್ಳುವಲ್ಲಿ ವಿಜ್ಞಾನ ಸಾಹಿತ್ಯವು ದಾರಿ ತೋರಿಸುವ ದೀವಿಗೆಯಾಗುವುದು.

ವಿಜ್ಞಾನದಿಂದ ಸಾಧ್ಯವಾಗುವ ವೈಜ್ಞಾನಿಕ ಮನೋಧರ್ಮ, ವೈಜ್ಞಾನಿಕಬುದ್ಧಿ ಹಾಗೂ ವೈಜ್ಞಾನಿಕದೃಷ್ಟಿ ಬೆಳೆಸಲು ವಿಜ್ಞಾನ ಸಾಹಿತ್ಯವು ಸಹಕಾರಿಯಾದುದು. ಸುಸಂಬದ್ಧ ವಿಷಯಗಳನ್ನು ವೈಜ್ಞಾನಿಕ ಚೌಕಟ್ಟಿನೊಳಗೆ ಬಂಧಿಸಿ ಬರೆಯುವುದು ವಿಷಯ ನಿರೂಪಣೆಯಲ್ಲಿ ಸುಸಂಬದ್ಧ ಕ್ರಮದೊಂದಿಗೆ ವಿಷಯ ಪ್ರಸ್ತುತಪಡಿಸುವಲ್ಲಿ ನೈಜತೆ

ಹಾಗೂ ಪರಿಶುದ್ಧತೆಯನ್ನು ವಿಜ್ಞಾನ ಸಾಹಿತಿಗಳು ಕಾಯ್ದುಕೊಂಡು ಸಾಮಾಜಿಕ ಪ್ರಜ್ಞೆಯನ್ನು ಮೂಡಿಸಿರುವುದನ್ನು ಕಾಣಬಹುದು. ವಿಜ್ಞಾನ ವಿಷಯ ಜ್ಞಾನವು ಸಾರ್ವತ್ರಿಕವಾಗಿದ್ದು, ಸಮಸ್ತ ಜನಸಮುದಾಯಕ್ಕೆ ಹಬ್ಬಿದಾಗ ಮತಾಚಾರ, ಮೌಢ್ಯದಿಂದ ಹಾಗೂ ರೂಢಿ ಸಂಪ್ರದಾಯದಿಂದಾಗುವ ಅನಾಹುತವು ತಪ್ಪುವುದು. ಹೀಗಾಗಿ ವಿಜ್ಞಾನ ಸಾಹಿತ್ಯದೊಳಗೆ ಅಡಗಿರುವ ವಸ್ತು ವಿಷಯಗಳನ್ನು ಸಾಹಿತಿಗಳು ಪ್ರಕೃತಿ/ಪರಿಸರ, ಕೃಷಿ, ವೈದ್ಯ, ಭೌತ-ಖಭೌತ ಮತ್ತು ಮಾಹಿತಿ ತಂತ್ರಜ್ಞಾನವೆಂದು ವಿಧಗಳಾಗಿ ವಿಂಗಡಿಸಿಕೊಂಡು ತಾರ್ಕಿಕ ಸಮಂಜಸತೆ(ಸಾಮಂಜಸ್ಯ),ಅಗತ್ಯಕ್ಕೆ ತಕ್ಕ ಸಂಕೇತಗಳು ಹಾಗೂ ಚಿತ್ರಗಳಿಂದ ಕೂಡಿದ ವೈಜ್ಞಾನಿಕ ಭಾವನೆಗಳ ವಿವರಣೆ ಮತ್ತು ಸಾಹಿತ್ಯ ಸೌಂದರ್ಯದೊಂದಿಗೆ ವೈಜ್ಞಾನಿಕ ಮಾಹಿತಿಯು ಸಮಾಜ ಹಾಗೂ ಜನಸಾಮಾನ್ಯರಿಗೆ ತಿಳಿಯುವಂತೆ ಮಾಡುವುದು. ಜೊತೆಗೆ ವಿಜ್ಞಾನ ಸಾಹಿತ್ಯದ ವಸ್ತುಗಳಾದ ಪರಿಸರ, ಕೃಷಿ, ಆರೋಗ್ಯ, ಭೌತ-ಖಭೌತ ಮತ್ತು ಮಾಹಿತಿ ವಿಜ್ಞಾನಕ್ಕೆ ಸಂಬಂಧಿಸಿದ ವಿಷಯಗಳನ್ನು ನಿರ್ದಿಷ್ಟ ಭಾಷಾ ಬಳಕೆಯೊಂದಿಗೆ ಅಭಿವ್ಯಕ್ತಿಸುವುದರಿಂದ ವೈಜ್ಞಾನಿಕ ದೃಷ್ಟಿ ಹಾಗೂ ಮನೋಧರ್ಮವು ಬೆಳೆಯುವುದು.

೨. ಫಲಿತಗಳು

ಪ್ರಸ್ತುತ ಸಂಶೋಧನಾ ಮಹಾಪ್ರಬಂಧಕ್ಕೆ ಸಂಬಂಧಿಸಿದ ಅಧ್ಯಯನದ ಫಲಿತಗಳನ್ನು ಈ ಕೆಳಗಿನಂತೆ ಸೂಚಿಸಲಾಗಿದೆ. ಜೊತೆಗೆ ಈ ಅಧ್ಯಯನ ವಿಷಯವನ್ನು ಕುರಿತು ಮುಂದಿನ ಅಧ್ಯಯನದ ದಾರಿಗಳನ್ನು ತಿಳಿಸಲು ಯತ್ನಿಸಲಾಗಿದೆ.

೧. ವಿಜ್ಞಾನ ಸಾಹಿತ್ಯವು ಕನ್ನಡ ಸಾಹಿತ್ಯದ ಒಂದು ಪ್ರಮುಖ ವಿಭಾಗವಾಗಿರುವುದನ್ನು ಕಂಡುಕೊಳ್ಳಲಾಗಿದೆ. ಈಚಿನ ವರ್ಷಗಳಲ್ಲಿ ಅನೇಕ ಜನಪ್ರಿಯ ಮತ್ತು ಮಾರ್ಗದರ್ಶಿ ವಿಜ್ಞಾನಸಾಹಿತ್ಯದ ಕೃತಿ/ಬರಹಗಳು ಪ್ರಕಟವಾಗಿರುವುದನ್ನು ಗಮನಿಸಲಾಗಿದೆ.

೨. ಸೃಜನಶೀಲ ಮತ್ತು ಸೃಜನೇತರ ಈ ಎರಡೂ ನೆಲೆಗಳಲ್ಲಿ ವಿಜ್ಞಾನ ಸಾಹಿತ್ಯದ ನೆಲೆ–ಬೆಲೆಗಳನ್ನು, ಸ್ಥಾನ ಹಾಗೂ ಮಹತ್ವಗಳನ್ನು ಚರ್ಚಿಸಲಾಗಿದೆ.

೩. ವಿಜ್ಞಾನ ಸಾಹಿತ್ಯದ ಚಾರಿತ್ರಿಕ ಬೆಳವಣಿಗೆ(ಸ್ವಾತಂತ್ರ್ಯ ಪೂರ್ವ ಹಾಗೂ ಆನಂತರದಲ್ಲಿ)ಯನ್ನು ವಿಶ್ಲೇಷಣೆ ಮಾಡಲಾಗಿದೆ.

೪. ವಿಜ್ಞಾನದ ಹಲವಾರು ಕ್ಷೇತ್ರಗಳಿಗೆ ಸಂಬಂಧಿಸಿದ ಕೃತಿಗಳು ಪ್ರಕಟವಾಗಿದ್ದು, ಅವುಗಳ ವಸ್ತು ವೈವಿಧ್ಯತೆಯನ್ನು ತಿಳಿಯಲು ಪ್ರಯತ್ನಿಸಲಾಗಿದೆ.

೫. ವಿಜ್ಞಾನ ಬರಹಗಳ ಉದ್ದೇಶ, ಗುರಿ ಹಾಗೂ ಅವುಗಳ ಪರಿಣಾಮಶೀಲತೆಯನ್ನು ವಿವರಿಸಲು ಪಯತ್ನಿಸಲಾಗಿದೆ.

೬. ವಿಜ್ಞಾನ ಕೃತಿಗಳು ಹಾಗೂ ಲೇಖನಗಳ ಸಾಮಾಜಿಕ ಜವಾಬ್ದಾರಿಗಳು ಹಾಗೂ ಮಹತ್ವವನ್ನು ವಿವರಿಸಲಾಗಿದೆ.

೭. ಭಾಷೆ ಮತ್ತು ನಿರೂಪಣಾ ವಿಧಾನಗಳನ್ನು ಪರಿಶೀಲಿಸುತ್ತಾ, ಸಂವಹನವಿಧಾನದ ಆಯಾಮಗಳನ್ನು ಚರ್ಚಿಸಲಾಗಿದೆ. ಸ್ವತಂತ್ರರಚನೆ, ಭಾಷಾಂತರ/ರೂಪಾಂತರ ಮತ್ತು ಅನುವಾದದ ಸಮಸ್ಯೆಗಳು, ಸಂಸ್ಕೃತ ಮತ್ತು ಇಂಗ್ಲೀಷಿನ ದಟ್ಟ ಪ್ರಭಾವವನ್ನು ಕನ್ನಡ ವಿಜ್ಞಾನ ಸಾಹಿತ್ಯವು ಹೊಂದಿರುವುದನ್ನು ಗುರುತಿಸಲಾಗಿದೆ.

೮. ವಿಜ್ಞಾನ ಸಾಹಿತ್ಯ ರಚನೆಗೆ ಕೇವಲ ವಿಷಯ ಜ್ಞಾನವಿದ್ದರೆ ಸಾಲದು, ಜೊತೆಗೆ ಸಂಸ್ಕೃತ ಭಾಷೆಯ ಅರಿವೂ ಅಗತ್ಯ ಎಂಬುದನ್ನು ಕಂಡುಕೊಳ್ಳಲಾಯಿತು.

೯. ತಂತ್ರಜ್ಞಾನದ ಬೆಳವಣಿಗೆಯ ನಂತರ ವಿಜ್ಞಾನ ಸಾಹಿತ್ಯದಲ್ಲಿಯೂ ಕಂಡು ಬಂದಿರುವ ಹೊಸ ಭಾಷಾ ಚೌಕಟ್ಟು ಹಾಗೂ ನವಪದ ನಿರ್ಮಾಣದ ಪ್ರಕ್ರಿಯೆಯನ್ನು ವಿವರಿಸಲಾಗಿದೆ.

೧೦. ಕಲ್ಪನೆ, ಕುತೂಹಲಪ್ರಜ್ಞೆ ಹಾಗೂ ಬೌದ್ಧಿಕ ವಿವರಗಳನ್ನು ಹೊಂದಿರುವ ವಿಜ್ಞಾನ ಸಾಹಿತ್ಯವು ಸಮಾಜದ ಮೇಲೆ ಮಾಡಿರುವ ಪ್ರಭಾವಗಳನ್ನು ವಿವರಿಸಿರುವುದರೊಂದಿಗೆ ವಿಜ್ಞಾನ ಸಾಹಿತ್ಯದ ಸಾಮಾಜಿಕ ಜವಾಬ್ದಾರಿಯನ್ನು ಕಂಡುಕೊಳ್ಳಲಾಯಿತು.

೧೧. ಪಠ್ಯ ಪುಸ್ತಕ, ಕೃತಿಗಳು ಇಲ್ಲವೆ ಲೇಖನಗಳಲ್ಲಿ ನೀಡುವ ವಿಜ್ಞಾನದ ವಸ್ತುವಿನ ಬಗೆಗಿನ ಮಾಹಿತಿಯು ವಯಸ್ಕ ಜೀವನದಲ್ಲಿ ಎದುರಾಗುವ ಸಮಸ್ಯೆಗಳಿಗೆ ಪರಿಣಾಮಕಾರಿ ಸಿದ್ಧತೆಯಾಗಿರುವುದಿಲ್ಲ ಎಂಬುದನ್ನು ಅಧ್ಯಯನದಿಂದ ಕಂಡುಕೊಳ್ಳಲಾಯಿತು.

೧೨. ವಿಜ್ಞಾನ ಸಾಹಿತ್ಯದಲ್ಲಿನ ಭಾಷಾಕಾಠಿಣ್ಯತೆ ಹಾಗೂ ಶುಷ್ಕತೆಯನ್ನು ನಿವಾರಿಸಿ ಜನರಿಗೆ ರುಚಿಸುವಂತೆ, ಸುಲಭ ಗ್ರಾಹ್ಯವಾಗುವಂತೆ ಸಾಹಿತ್ಯೀಕರಿಸಿ ಮೃದು ಮಧುರ ಗೊಳಿಸುವಲ್ಲಿ ವಿಜ್ಞಾನ ಲೇಖಕರ ಪಾತ್ರವು ಪ್ರಮುಖವಾಗಿರುವುದನ್ನು ಗಮನಿಸಲಾಯಿತು.

೧೩. ವಿಜ್ಞಾನದಲ್ಲಿ ಮೊದಲಿನಿಂದ ಬಳಸಲಾಗುತ್ತಿರುವ ಯಾಥಾರ್ಥ ಶಬ್ಧಗಳು ಹಾಗೂ ಹೊಸ ಹೊಸ ಕಲ್ಪನೆಗಳು ಸರಳ ಪರಿಚಿತ ಸಾಮಾನ್ಯ ಪದಗಳ ಬಳಕೆ ಕಡಿಮೆ ಇರುವುದರಿಂದ ಇತರ ಸಾಹಿತ್ಯ ಜನಪ್ರಿಯತೆ ಗಳಿಸಿದಷ್ಟು ವಿಜ್ಞಾನ ಸಾಹಿತ್ಯ ಗಳಿಸಲು ಸಾಧ್ಯವಾಗುತ್ತಿಲ್ಲ.

೧೪. ಇಂಗ್ಲೀಷಿನಿಂದ ಇಲ್ಲವೆ ಮತ್ತಿತರ ಭಾಷೆಯಿಂದ ಕನ್ನಡಕ್ಕೆ ಅನುವಾದಿಸುವಾಗ ನಾಮಪದಗಳ ಬಳಕೆಯಲ್ಲಿನ ಸಮಸ್ಯೆಯನ್ನು ಕಂಡುಕೊಳ್ಳಲಾಯಿತು.

೧೫. ಇತರ ಸಾಹಿತ್ಯ ಪ್ರಕಾರದಂತೆ ಆಕರ್ಷಕ ದೃಷ್ಟಾಂತಗಳ ಮೂಲಕ ವಿವರಿಸುವಲ್ಲಿ ವಿಜ್ಞಾನ ಸಾಹಿತ್ಯವು ಸಮಸ್ಯೆಯನ್ನು ಹೊಂದಿರುವುದನ್ನು ಕಾಣಲಾಯಿತು.

೧೬. ಪ್ರತಿಯೊಬ್ಬರಿಗೂ ವೈಜ್ಞಾನಿಕ ಸಂಗತಿಗಳಿಂದ ಕೂಡಿದ ಕೃತಿಗಳು ಪ್ರತಿಯೊಬ್ಬರಿಗು ಸುಲಭವಾಗಿ ಲಭ್ಯವಾಗುವಲ್ಲಿನ ಸಮಸ್ಯೆಯನ್ನು ಕಂಡುಕೊಳ್ಳಲಾಯಿತು.

೧೭. ಗಡಸು ವಿಷಯದಿಂದ ಕೂಡಿದ ವಿಜ್ಞಾನ ಕೃತಿಗಳು ಸಾಮಾನ್ಯ ಜನರಿಂದ ದೂರವಾಗುವ ಕಾರಣದಿಂದಾಗಿ ವಿಜ್ಞಾನದಲ್ಲಿನ ಕಾಠಿಣ್ಯತೆ ಹಾಗೂ ಶುಷ್ಕತೆಯನ್ನು ನಿವಾರಿಸಿ ಜನರಿಗೆ ರುಚಿಸುವಂತೆ, ಸುಲಭ ಗ್ರಾಹ್ಯವಾಗುವಂತೆ ಸಾಹಿತ್ಯೀಕರಿಸಿ ಮೃದು ಮಧುರಗೊಳಿಸಿ ರಚಿಸಿರುವುದನ್ನು ತಿಳಿಯಲಾಯಿತು.

೧೮. ವಿಜ್ಞಾನ ಸಾಂಸ್ಕೃತಿಕ ಮೌಲ್ಯ ತೋರಿಸುತ್ತಾ ಅವೈಜ್ಞಾನಿಕ ಕಾರ್ಯಕ್ಕೆ ಕಾರಣವಾಗಿರುವ ಬಗ್ಗೆ ಲೇಖನಗಳಲ್ಲಿ ಉಲ್ಲೇಖಿಸಿಲ್ಲ.

೧೯. ವಿಜ್ಞಾನ ಸಾಹಿತ್ಯದಲ್ಲಿ ತುಂಬಿರುವ ಬಹಳಷ್ಟು ಸಂಸ್ಕೃತ ಪದಗಳ ಬಳಕೆಯು ಒಂದು ಸಮಸ್ಯೆ ಎಂಬುದನ್ನು ಕಂಡುಕೊಳ್ಳಲಾಯಿತು. ಅಂದರೆ ಸ್ಥಾನಾಂತರ, ಸ್ಪರ್ಶ, ವಿದ್ಯುತ್, ತ್ರಿಕೋನ, ದ್ವಿಪಾರ್ಶ್ವ, ಗುರುತ್ವ, ಅರ್ಬುಧ, ಶರೀರ ಮೊದಲಾದವು

ಮುಂದಿನ ಅಧ್ಯಯನಕಾರರು ಈ ಸಂಶೋಧನೆಯನ್ನು ಮುಂದುವರೆಸಿ, ನಡೆಸಬಹುದಾದ ಅಧ್ಯಯನದ ದಾರಿಗಳನ್ನು ಹೀಗೆ ಸೂಚಿಸಬಹುದು.

೧. ಇಂಗ್ಲೀಷಿನಲ್ಲಿ ಪ್ರಕಟವಾಗಿರುವ ವಿಜ್ಞಾನ ಸಾಹಿತ್ಯದ ಸ್ವರೂಪ ಮತ್ತು ಕನ್ನಡ ವಿಜ್ಞಾನ ಸಾಹಿತ್ಯದ ಸ್ವರೂಪ ಇವುಗಳನ್ನು ತೌಲನಿಕವಾಗಿ ಅಧ್ಯಯನ ಮಾಡುವುದು.

೨. ಕನ್ನಡ ವಿಜ್ಞಾನ ಸಾಹಿತ್ಯದ ಹಲವು ವಸ್ತು ವಿಷಯಗಳ ಬಗೆಗೆ ಇದುವರೆಗೆ ಅಧ್ಯಯನಗಳು ನಡೆದೇ ಇಲ್ಲವಾದ್ದರಿಂದ, ಅವುಗಳ ಅಧ್ಯಯನಗಳನ್ನು ಕೈಗೊಳ್ಳುವುದು. ಉದಾ– ಕೃಷಿವಿಜ್ಞಾನದ, ತಂತ್ರಜ್ಞಾನ, ಬಾಹ್ಯಾಕಾಶ ವಿಜ್ಞಾನ, ನ್ಯಾನೋ ತಂತ್ರಜ್ಞಾನ ಮೊದಲಾದವು.

೩. ವಿಜ್ಞಾನ ಸಾಹಿತ್ಯದ ಜನಪ್ರಿಯತೆಗೆ ಅಡ್ಡಿಯಾಗುತ್ತಿರುವ ಭಾಷಾ ಸಮಸ್ಯೆಗಳನ್ನು ಗುರುತಿಸಿ, ಅವುಗಳನ್ನು ಹೊಸ ವಿಜ್ಞಾನ ಭಾಷಾಕೋಶಗಳ ಮೂಲಕ ಪರಿಹರಿಸುವ ಪ್ರಯತ್ನವನ್ನು ಮಾಡುವುದು.

೪. ಸಂಶೋಧಕರು/ಅಧ್ಯಯನಕಾರರು ಜನಸಮುದಾಯದ ಪ್ರಜ್ಞೆಯನ್ನು ವಿಕಸನ ಗೊಳಿಸುವ ವಿಜ್ಞಾನ ಸಾಹಿತ್ಯ ಕೃತಿಗಳನ್ನು ಸರಳವಾಗಿ, ಕಡಿಮೆ ಖರ್ಚಿನಲ್ಲಿ ಸಿಗುವಂತೆ ಬರೆದು ಪ್ರಕಟಿಸುವುದು.

೩. ಅನುಬಂಧಗಳು

೩.೧ ವಿಜ್ಞಾನ ಸಾಹಿತಿ ಹಾಗೂ ಭೌತ ವಿಜ್ಞಾನದ ಪ್ರಾಧ್ಯಾಪರಾದ ಎ.ಓ ಆವಲಮೂರ್ತಿರವರೊಂದಿಗೆ ದೂರವಾಣಿಯಲ್ಲಿ ಪಡೆದ ಮಾಹಿತಿ:

೧. **ಸರ್ ತಮ್ಮ ಮಹಾಪ್ರಬಂಧದಲ್ಲಿ ವಿಜ್ಞಾನ ಸಾಹಿತ್ಯವನ್ನು ಸೃಜನಾತ್ಮಕ ಸಾಹಿತ್ಯವೆಂದು ಹೇಗೆ ತೋರಿಸಲಾಗಿದೆ?**

ಸಾಹಿತಿಗಳು: ಜನಪ್ರಿಯ ವಿಜ್ಞಾನ ಸಾಹಿತ್ಯದ ಹೂರಣ ಗಡಸು ವಿಜ್ಞಾನವೇ ಆಗಿರುತ್ತದೆ. ಆದರೆ ಅದನ್ನು ಜನಸಾಮಾನ್ಯರಿಗೂ ರುಚಿಸುವಂತೆ ಹೇಳುವ ರೀತಿಯಲ್ಲಿ ಸೃಜನಶೀಲತೆ ಇದೆ. ಆ ಪ್ರಯತ್ನದಲ್ಲಿ ಗಡಸು ವಿಜ್ಞಾನದೊಂದಿಗೆ ಲೇಖಕ ಬೆರೆಸುವ ಸಾಹಿತ್ಯಾಂಶಗಳು ವಿಶೇಷಾಂಶಗಳು ಮತ್ತು ವಿಜ್ಞಾನಾಂಶಗಳಲ್ಲಿ ಲೇಖಕನ ಸೃಜನಶೀಲತೆ ಮಿಂಚುತ್ತದೆ ಎಂಬುದನ್ನು ಸಾದೋಹರಣವಾಗಿ ವಿವರಿಸಲಾಗಿದೆ.

೨. **ವಿಜ್ಞಾನ ಸಾಹಿತ್ಯವನ್ನು ಸೃಜನಾತ್ಮಕ ಸಾಹಿತ್ಯವೆಂದು ತೋರಿಸಿದ್ದೀರಿಯೇ?**

ಸಾಹಿತಿಗಳು: ಮೇಲಿನದೆ ಉತ್ತರ.

೩. **ವಿಜ್ಞಾನ ಸಾಹಿತ್ಯದ ಅಧ್ಯಯನವನ್ನು ಕಾಲಘಟ್ಟಕ್ಕನುಗುಣವಾಗಿ ಮಾಡಲಾಯಿತೇ?**

ಸಾಹಿತಿಗಳು: ಹೌದು ೧೯೧೭ರಿಂದ ಹಿಡಿದು ನಾನು ಮಹಾಪ್ರಬಂಧವನ್ನು ಸಲ್ಲಿಸುವ ೨೦೦೦ ದ ಇಸವಿಯವರೆಗಿನ ಹೆಚ್ಚುಕಮ್ಮಿ ಎಲ್ಲಾ ಕೃತಿಗಳನ್ನು ನನ್ನ ಅಧ್ಯಯನಕ್ಕೆ ಒಳಪಡಿಸಿದ್ದೇನೆ.

೪. **ತಮ್ಮ ಮಹಾಪ್ರಬಂಧದಲ್ಲಿ ಸಾಹಿತ್ಯದಲ್ಲಿ ಮೀವಾಂಸೆಯಿರುವಂತೆ ವಿಜ್ಞಾನ ಸಾಹಿತ್ಯದಲ್ಲಿಯೂ ಮೀಮಾಂಸೆಯೂ ಇದೆ ಎಂಬುದನ್ನು ಪ್ರತಿಪಾದಿಸಿದ್ದಾರ?**

ಸಾಹಿತಿಗಳು: ಹೌದು. ಮೊದಲಿಗೆ ಸಾಹಿತ್ಯ ಮೀಮಾಂಸೆ ಮತ್ತು ವಿಜ್ಞಾನ ಮೀಮಾಂಸೆಗಳ ಮೂಲಾಂಶಗಳನ್ನು ಪ್ರತ್ಯೇಕವಾಗಿ ಚರ್ಚಿಸಿ, ಅನಂತರ ಅವುಗಳನ್ನು ಬೆಸೆಯುವ ಮೂಲಕ ಜನಪ್ರಿಯ ವಿಜ್ಞಾನ ಸಾಹಿತ್ಯ ಮೀಮಾಂಸೆಯನ್ನು ರೂಪಿಸಿದ್ದೇನೆ.

೫. **ವಿಜ್ಞಾನ ಸಾಹಿತ್ಯವೆಂದು ಅಧ್ಯಯನಕ್ಕೆ ಒಳಪಡಿಸಿಲ್ಲ. ಅದರಲ್ಲಿ ಜನಪ್ರಿಯ ವಿಜ್ಞಾನ ಸಾಹಿತ್ಯವೆಂದೆ ತೆಗೆದುಕೊಂಡಿದ್ದೀರಿ?**

ಸಾಹಿತಿಗಳು: ವಿಜ್ಞಾನಕ್ಕೆ ಸಂಬಂಧಿಸಿದ ಎಲ್ಲಾ ಪುಸ್ತಕಗಳನ್ನು ಪರಿಶೀಲನೆಗೆ ಒಳಪಡಿಸಿದ್ದೇನೆ. ಅವುಗಳ ಅಧ್ಯಯನದಿಂದ ವಿಜ್ಞಾನಕ್ಕೆ ಸಂಬಂಧಿಸಿದ ಬರಹಗಳನ್ನು

ನಾನು ನಾಲ್ಕು ರೀತಿಯಲ್ಲಿ ವಿಂಗಡಿಸುವುದು ಸಾಧ್ಯವೆಂದು ನಿರೂಪಿಸಿದ್ದೇನೆ. ಅವುಗಳು ಯಾವುವೆಂದರೆ :


೧. ಶುದ್ಧ ವಿಜ್ಞಾನ

೨. ಜನಪ್ರಿಯ ವಿಜ್ಞಾನ

೩. ವಿಜ್ಞಾನ ಸಾಹಿತ್ಯ ಮತ್ತು ಜನಪ್ರಿಯ ವಿಜ್ಞಾನ ಸಾಹಿತ್ಯ.

ಇವುಗಳ ನಡುವೆ ಇರುವ ಭೇದವನ್ನು ವಿಶದಪಡಿಸಿದ್ದೇನೆ. ಲೇಖಕ ಹಾಗೂ ಭೌತ ವಿಜ್ಞಾನದ ಪ್ರಾಧ್ಯಾಪಕರಾದ ಡಾ. ಎ.ಓ ಆವಲಮೂರ್ತಿಯವರೊಂದಿಗೆ ದೂರವಾಣಿ ಸಂದರ್ಶನದಲ್ಲಿ ಪಡೆದ ಮಾಹಿತಿಯಂತೆ ಕನ್ನಡ ಸಾಹಿತ್ಯದಂತೆ ಜನಪ್ರಿಯ ವಿಜ್ಞಾನ ಸಾಹಿತ್ಯವೂ ಮೀಮಾಂಸೆಯಿಂದ ಕೂಡಿದೆ. ಸರಳ ಸುಲಭ ಅಭಿವ್ಯಕ್ತಿಯಲ್ಲಿ ಸಾಹಿತಿಕ ಅಂಶದೊಂದಿಗೆ ವೈಜ್ಞಾನಿಕ ವಿಷಯವನ್ನು ತಿಳಿಸುವುದರಿಂದ ಅಗತ್ಯ ಮಾಹಿತಿಯು ಜನತೆಗೆ ತಲುಪುವಂತಾಗುತ್ತದೆ. ಹೀಗಾಗಿ ಅದು ಬರಿ ವಿಜ್ಞಾನ ಸಾಹಿತ್ಯವಾಗಿರದೆ, ಜನಪ್ರಿಯ ವಿಜ್ಞಾನ ಸಾಹಿತ್ಯವಾಗಿದೆ.

೩.೨. ಕನ್ನಡದಲ್ಲಿ ವಿಜ್ಞಾನ ಸಾಹಿತ್ಯದ ವಸ್ತು ಮತ್ತು ಅಭಿವ್ಯಕ್ತಿಗೆ ಸಂಬಂಧಿಸಿದ ರೇಖಾಚಿತ್ರ



೪. ಗ್ರಂಥ ಋಣ

- ಮೂಲ ಆಕರಗಳು

➢ ಸೃಜನಾತ್ಮಕ ಕೃತಿಗಳು

೧. ಆವಲಮೂರ್ತಿ ಎ. ಓ : ವಿಜ್ಞಾನ ಸೂರ್ಯ., ಚೇತನ ಬುಕ್‌ಹೌಸ್, ರೇಣುಕಾಚಾರ್ಯ ದೇವಸ್ಥಾನದ ರಸ್ತೆ, ಲಕ್ಷ್ಮಿ ಟಾಕೀಸ್ ಹಿಂಭಾಗ, ಮೈಸೂರು – ೫೭೦೦೨೪. ೨೦೦೭.

೨. ನಾರಾಯಣರಾಯರು.ಕೆ.ವಿ : ಭವಿಷ್ಯವಿಜ್ಞಾನ, ದತ್ತಾತ್ರೇಯ ಪ್ರಕಾಶನ, ಅತ್ರಿ ಬುಕ್ ಸೆಂಟರ್ ಪ್ರಕಟಣೆ ಶರಾವತಿ ಕಟ್ಟಡ, ಮಂಗಳೂರು. ೧೯೮೧.

೩. ಪೂರ್ಣಚಂದ್ರ ತೇಜಸ್ವಿ : ಏರೋಪ್ಲೇನ್ ಚಿಟ್ಟೆ, ಪ್ರಕಾಶನ ಪುಸ್ತಕ ಪ್ರಕಾಶನ, ಮೈಸೂರು – ೫೭೦೦೦೯. ೧೯೯೩

೪. ಪೂರ್ಣಚಂದ್ರ ತೇಜಸ್ವಿ : ಕರ್ವಾಲೋ, ಪ್ರಕಾಶನ, ಪುಸ್ತಕ ಪ್ರಕಾಶನ, ಮೈಸೂರು – ೫೭೦೦೦೯. ೧೯೮೦.

೫. ಪೂರ್ಣಚಂದ್ರ ತೇಜಸ್ವಿ : ಜುಗಾರಿಕ್ರಾಸ್, ಪ್ರಕಾಶನ, ಪುಸ್ತಕ ಪ್ರಕಾಶನ, ಮೈಸೂರು – ೫೭೦೦೦೯. ೧೯೯೪

೬. ಪೂರ್ಣಚಂದ್ರ ತೇಜಸ್ವಿ : ಚಿದಂಬರ ರಹಸ್ಯ, ಪ್ರಕಾಶನ, ಪುಸ್ತಕ ಪ್ರಕಾಶನ, ಮೈಸೂರು – ೫೭೦೦೦೯. ೧೯೮೫

೭. ಪೂರ್ಣಚಂದ್ರ ತೇಜಸ್ವಿ : ಕಾಡಿನ ಕಥೆಗಳು, ಪ್ರಕಾಶನ, ಪುಸ್ತಕ ಪ್ರಕಾಶನ, ಮೈಸೂರು – ೫೭೦೦೦೯. ೧೯೯೩

೮. ಪೂರ್ಣಚಂದ್ರ ತೇಜಸಿ. : ಫ್ಲೈಯಿಂಗ್ ಸಾಸರ್ಸ್, ಪ್ರಕಾಶನ, ಪುಸ್ತಕ ಪ್ರಕಾಶನ, ಮೈಸೂರು–೫೭೦೦೦೯.೧೯೯೩

೯. ರಾಜಶೇಖರ ಭೂಸನೂರಮಠ: ಮನ್ವಂತರ, ಪ್ರಕಾಶಕರು, ಸಾಹಿತ್ಯ ಪ್ರಕಾಶನ, ಕೊಪ್ಪೀಕರ್ ಬೀದಿ, ಹುಬ್ಬಳ್ಳಿ– ೫೮೦೦೨೦. ೨೦೧೩.

೧೦. ಸ್ವಾಮಿ ಬಿ.ಜಿ.ಎಲ್ : ಹಸಿರುಹೊನ್ನು, ಕಾವ್ಯಾಲಯ ಪ್ರಕಾಶಕರು, ಜಯನಗರ, ಮೈಸೂರು–೫೭೦೦೧೪. ೧೯೭೪

➢ **ಸೃಜನೇತರ ಕೃತಿಗಳು**

೧. ಅಖಿಲೇಶ್ ಚಿಪ್ಪಳ್ಳಿ (ಸಂ). : ವಿಜ್ಞಾನ ಸಾಹಿತ್ಯ೨೦೧೧–೧೨. ಪ್ರಕಾಶಕರು, ಸಿ.ಹೆಚ್ ಭಾಗ್ಯ, ರೆಜಿಸ್ಟಾರ್, ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡಭವನ. ೨೦೧೬.

೨. ಅನಂತರಾಮು.ಟಿ.ಆರ್(ಸಂ). : ವಿಜ್ಞಾನ ಹೆದ್ದಾರಿಯಲ್ಲಿ ಮಹಾತಿರುವುಗಳು, ನವಕರ್ನಾಟಕಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು– ೫೬೦೦೦೦೧. ೨೦೧೮.

೩. ಅನಂತರಾಮು ಟಿ.ಆರ್ (ಸಂಪಾದಕರು) : ವಿಜ್ಞಾನ – ತಂತಜ್ಞಾನ. ಪ್ರಕಾಶಕರು, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮. ೨೦೧೫

೪. ಅನಂತರಾಮು ಟಿ.ಆರ್ (ಅನುವಾದ.) ಮೂಲ ರಾಮ. : ನಮ್ಮ ಜಲಸಂಪನ್ಮೂಲಗಳ. ಪ್ರಕಾಶಕರು, ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ, ಇಂಡಿಯಾ ನೆಹರೂ ಭವನ, ೫, ಇನ್‌ಸ್ಟಿಟ್ಯೂಶನಲ್ ಏರಿಯಾ, ವಸಂತ್ ಕುಂಜ್, ಹೊಸ ದೆಹಲಿ–೧೧೦೦೭೦. ೨೦೧೫.

೫. ಅನಂತರಾಮು ಟಿ.ಆರ್ ರಾಮಕೃಷ್ಣ ಎಚ್ ಆರ್ (ಸಂಪಾದಕರು). : ಕನ್ನಡದಲ್ಲಿ ವಿಜ್ಞಾನ ಸಂವಹನೆ. ಪ್ರಕಾಶಕರು, ಉದಯಭಾನು ಉನ್ನತ ಅಧ್ಯಯನ ಕೇಂದ್ರ ಬೆಂಗಳೂರು. ೨೦೧೧.

೬. ಒಡೆಯರ್ ಎಸ್.ಎಸ್ : ವಿಜ್ಞಾನ ಲೇಖನ ಕಮ್ಮಟ. ಕುಲಸಚಿವರು, ಪಠ್ಯಪುಸ್ತಕ ನಿರ್ದೇಶನಾಲಯ, ಕರ್ನಾಟಕ ವಿಶ್ವವಿದ್ಯಾಲಯ ಧಾರವಾಡ. ೧೯೭೪.

೭. ಚಂದ್ರಶೇಖರ್ ಸಿ.ಆರ್ : ಮನಸ್ಸಿನ ಸುಖ ದುಃಖ,ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು - ೫೬೦೦೦೨. ೨೦೧೨.

೮. ತುಮಕೂರು ನಾಗಭೂಷಣ (ಸಂಪಾದಕರು). : ವಿಜ್ಞಾನ ಸಾಹಿತ್ಯ ೧೯೯೭. ಪ್ರಕಾಶಕರು, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು ೫೬೦೦೦೧. ೧೯೯೮.

೯. ನಾಗಲೋಟಿಮಠ ಬಾ.ಸ.ಜ : ವಿಜ್ಞಾನ ಸಾಹಿತ್ಯ – ೨೦೦೦. ಪ್ರಕಾಶಕರು, ಟೀ. ಎಸ್ ದಕ್ಷಿಣ ಮೂರ್ತಿ, ರಿಜಿಸ್ಟ್ರಾರ್, ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು ೫೬೦೦೦೨. ೨೦೦೦.

೧೦. ನಾಗೇಶ ಹೆಗಡೆ (ಅನುವಾದ), ಮೂಲ ಎನ್. ಮಣಿವಾಸಕಮ್. : ಗಾಳಿಗೆ ವಿಷ ನೀರಿಗೆ ವಿಷ. ಪ್ರಕಾಶಕರು, ನಿರ್ದೇಶಕರು, ನ್ಯಾಷನಲ್ ಬುಕ್ ಟ್ರಸ್ಟ್, ಇಂಡಿಯಾ ಎ–೫, ಗ್ರೀನ್‌ಪಾರ್ಕ್, ಹೊಸದೆಹಲಿ–೧೧೦೦೧೬. ೨೦೦೨.

೧೦. ನಾಗೇಶ್ ಹೆಗಡೆ : ನ್ಯಾನೋ ಹೇನು, ವಸಂತ ಪ್ರಕಾಶನ, ನಂ ೧೦ ತುಳಸೀವನ, ಬೆಂಗಳೂರು ೫೬೦೦೫೩. ೨೦೦೩

೧೧. ನಾಗೇಶ್ ಹೆಗಡೆ : ವಿಜ್ಞಾನ ಗಂಗೆಯ ಬಿಂದುಸಾರ, ಪ್ರಕಾಶಕರು ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಕನ್ನಡ ಭವನ, ಜೆ. ಸಿ ರಸ್ತೆ, ಬೆಂಗಳೂರು–೫೬೦೦೦೨. ೨೦೦೬.

೧೨. ನಾಗೇಶ್ ಹೆಗಡೆ : ಇರುವುದೊಂದೇ ಭೂಮಿ, ಪ್ರಕಾಶಕರು, ಅಂಕಿತ ಪುಸ್ತಕ ಪ್ರಕಾಶನ. ನಂ ೫೩, ಗಾಂಧಿಬಜಾರ್ ಮುಖ್ಯರಸ್ತೆ, ಬೆಂಗಳೂರು– ೫೬೦೦೦೪. ೨೦೧೦.

೧೩. ನಾಯಕ.ಹಾ.ಮಾ (ಸಂಪಾದಕರು). : ವಿಜ್ಞಾನ ಸಾಹಿತ್ಯ ನಿರ್ಮಾಣ. ಪ್ರಕಾಶಕರು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು. ೧೯೭೧.

೧೪. ನಾರಾಯಣರಾವ್ ಜಿ.ಟಿ : ಭವಿಷ್ಯ ವಚನ, ದತ್ತಾತ್ರೇಯ ಪ್ರಕಾಶನ ಅತ್ರಿ ಬುಕ್ ಸೆಂಟರ್ ಪ್ರಕಟಣೆ ಶರಾವತಿ ಕಟ್ಟಡ, ಮಂಗಳೂರು. ೧೯೯೨

೧೫. ಮಹದೇವಪ್ಪ ಎಂ : ಎಂ ಮಹಾದೇವಪ್ಪ ಲೇಖನಗಳು, ಪ್ರಕಾಶಕರು, ಎ. ವಿ ನಾವಡ. ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ –೫೮೩೨೭೬. ೧೯೯೯

೧೬. ರಮೇಶ್ ಸ.ಚಿ : ಕೃಷಿ ಪಾರಂಪರಿಕ ಜ್ಞಾನ, ಪ್ರಕಾಶಕರು, ಎ.ಸುಬ್ಬಣ್ಣ ರೈ, ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ– ೫೮೩೨೭೬. ೨೦೧೧.

೧೭. ರಾಜಶೇಖರ ಭೂಸನೂರಮಠ : ಅತೀಂದ್ರಿಯ ಪ್ರಪಂಚ, ಪ್ರಕಾಶಕರು, ಸಾಹಿತ್ಯ ಪ್ರಕಾಶನ, ಕೊಪ್ಪೀಕರ್ ಬೀದಿ, ಹುಬ್ಬಳ್ಳಿ– ೫೮೦೦೨೦.

೧೮. ರಾಮಸ್ವಾಮಿ ಎಂ.ಕೆ : ಜ್ಞಾನ ವಿಜ್ಞಾನ, ಲೇಖಕ ಪ್ರಕಾಶನ, ಕುವೆಂಪುನಗರ, ಮೈಸೂರು–೫೭೦೦೨೩. ೨೦೧೦.

೧೯. ವಸುಂಧರ ಭೂಪತಿ(ಸಂ) : ವಿಜ್ಞಾನ ಸಾಹಿತ್ಯ ೨೦೧೦. ಪ್ರಕಾಶಕರು, ಸಿ.ಹೆಚ್. ಭಾಗ್ಯ, ರೆಜಿಸ್ಟ್ರಾರ್, ಕನ್ನಡ ಸಾಹಿತ್ಯ ಅಕಾಡೆಮಿ, ಕನ್ನಡಭವನ. ೨೦೧೬

೨೦. ವೀಣಾ ಟಿ : ಮಗು ನಿಮ್ಮ ಮನೆಯ ಬೆಳಕು, ಪ್ರಕಾಶಕರು ಕನ್ನಡ ಭವನ , ಜೆ.ಸಿ ರಸ್ತೆ, ಬೆಂಗಳೂರು – ೫೬೦೦೦೨. ೨೦೧೦.

೨೧. ವೀರೇಶ್ ಜಿ.ಕೆ ಮತ್ತು ಅಡ್ಡೂರು ಕೃಷ್ಣರಾವ್. : ಕೃಷಿ ವಿಜ್ಞಾನ ಒಂದು ಒಳ್ಳೆಯ ಪ್ರಯೋಗವಾಗಿದೆ, ಪ್ರಕಾಶಕರು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – ೫೬೦೦೦೦೧. ೨೦೧೮

೨೨. ಸುಭಾಷ್ ಎನ್. ನೇಳಗ(ಸಂ) : ವಿಜ್ಞಾನ ಸಾಹಿತ್ಯ ೧೯೯೯. ಪ್ರಕಾಶಕರು, ಟಿ. ಎಸ್ ದಕ್ಷಿಣ ಮೂರ್ತಿ, ರಿಜಿಸ್ಟ್ರಾರ್, ಕನ್ನಡ ಸಾಹಿತ್ಯ ಅಕಾಡೆಮಿ. ಬೆಂಗಳೂರು – ೫೬೦೦೦೨.

೨೩. ಸುರೇಶ್ ಕುಲಕರ್ಣಿ. : ಪಕ್ಷಿ ಸಂಕುಲ, ಪ್ರಕಾಶಕರು, ಕನ್ನಡ ಪುಸ್ತಕ ಪ್ರಾಧಿಕಾರ, ಪಂಪ ಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – ೫೬೦೦೧೮. ೨೦೦೦.

- **ಪರಾಮರ್ಶನ ಗಂಥಗಳ**

೧. ಅನುಸೂಯ ವಿ ಪರಗಿ. : ಮಾತೃಭಾಷೆ: ತತ್ತ್ವ ಮತ್ತು ಬೋಧನಾ ಮಾರ್ಗ. ಪುರುರವರ ಅನುಸೂಯ ಪ್ರಕಾಶನ. ೧೯೯೦.

೨. ಅನಂತರಾಮು ಟಿ.ಆರ್ (ಸಂಪಾದಕರು). : ಇತಿಹಾಸದಲ್ಲಿ ವಿಜ್ಞಾನ(ನಾಲ್ಕು ಸಂಪುಟಗಳಲ್ಲಿ). ಪ್ರಕಾಶಕರು– ಕುವೆಂಪು ಭಾಷಾ ಭಾರತೀಯ ಪ್ರಾಧಿಕಾರ ಬೆಂಗಳೂರು – ೫೬೦೦೫೬. ೨೦೧೨.

೩. ಅಕ್ಷರ ಕೆ.ವಿ. (ಕನ್ನಡ)
(ಸಂ) ಶಿವ ವಿಶ್ವನಾಥನ್. : ಪ್ರತಿಭೆಯ ಒಂದು ಪ್ರವಾಹ. ಅಕ್ಷರ ಪ್ರಕಾಶನ, ಹೆಗ್ಗೋಡು, ಸಾಗರ ೫೭೭೩೧೭ ೧೯೯೮.

೪. ಅಂಗಡಿ ಎಸ್.ಎಸ್. : ಎಂ. ಚಿದಾನಂದ ಮೂರ್ತಿ ಸಾಹಿತ್ಯ ಸಾಧನೆ. ಪ್ರಕಟಣೆ: ಸ್ವಪ್ನ ಬುಕ್ ಹೌಸ್. ೨೦೧೧ (ಅಧ್ಯಾಯ ೧೮ ಎಂ ಚಿದಾನಂದ ಮೂರ್ತಿ ಅವರೊಡನೆ ಸಂದರ್ಶನ ೧೭೮).

೫. ಕೈವಾರ ಗೋಪಿನಾಥ್. : ಪ್ರಾಚೀನ ಭಾರತದಲ್ಲಿ ರಸಾಯನ. ಪ್ರಕಾಶಕರು: ರಾಷ್ಟ್ರೋತ್ಥಾನ ಸಾಹಿತ್ಯ. ೨೦೦೯.

೬. ದಾಸೇಗೌಡ ಹೆಚ್.ಆರ್. : ವಿಜ್ಞಾನ ಮತ್ತು ಸಮಾಜ, ಒಂದು ವಿಚಾರಧಾರೆ. ಪ್ರಸಾರಾಂಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು. ೧೯೭೭.

೭. ನರಹರಿ. ವಿ. : ವಿಜ್ಞಾನ ವಿಶೇಷ ವಿಚಾರ. ಪ್ರತಿಭಾ ಪ್ರಕಾಶನ, ಪ್ರಥಮ ಛಾಯಾ ಗೋಕುಲಂ, ಮೂರನೇ ಹಂತ, ಮೈಸೂರು. ೨೦೦೮.

೮. ನಾರಾಯಣ ಕೆ.ವಿ : ಶೈಲಿಶಾಸ್ತ್ರ. ಅಭಿನವ ಪ್ರಕಾಶನ, ವಿಜಯನಗರ, ಬೆಂಗಳೂರು–೫೬೦೦೪೦. ೨೦೧೭.

೯. ನಿಂಗಣ್ಣ .ಚಿ. : ಕನ್ನಡ ಸಾಹಿತ್ಯ ಸಂಸ್ಕೃತಿಕೋಶ. ಶ್ರೀಸಿದ್ಧಲಿಂಗೇಶ್ವರ ಪ್ರಕಾಶನ, ಸರಸ್ವತಿ ಗೋದಾಮು, ಗುಲ್ಬರ್ಗಾ–೫೮೫ ೧೦೧. ೨೦೧೦.

೧೦. ಪುಟ್ಟಸ್ವಾಮಿ. ಕೆ (ಕನ್ನಡಕ್ಕೆ).
ಮೂಲ ಸುನಿಲ್ ಸಹಸ್ರಬುಧೆ. : ಆಧುನಿಕ ವಿಜ್ಞಾನಕ್ಕೆ ಗಾಂಧಿಯ ಸವಾಲು. ಪ್ರಕಟಣೆ ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ ರಸ್ತೆ, ಬೆಂಗಳೂರು – ೫೬೦೦೦೨. ೨೦೦೭

೧೧. ಪ್ರಧಾನ್ ಗುರುದತ್ತ (ಪ್ರಸಂ)
(ಸಂ)ಎ.ವಿ ನರಸಿಂಹಮೂರ್ತಿ : ಸಂಸ್ಕೃತ ಮತ್ತು ವಿಜ್ಞಾನ. ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ, ಬೆಂಗಳೂರು-೫೬೦೦೬೫. ಮತ್ತು ಭಾರತೀಯ ವಿಧ್ಯಾ ಭವನ, ಮೈಸೂರು. ೨೦೧೩

೧೨. ಬಳೂರಗಿ ಡಿ.ಆರ್. : ಎನ್ರಿ ಕೋ ಫರ್ಮಿ. ಪ್ರಕಟಣೆ, ವಿ ಶ್ರೀನಿವಾಸ, ನಿರ್ದೇಶಕರು, ಕನ್ನಡ ಪುಸ್ತಕ ಪ್ರಾಧಿಕಾರ, ಪಂಪ ಮಹಾಕವಿ ರಸ್ತೆ, ಬೆಂಗಳೂರು-೫೬೦೦೧೮. ೧೯೯೯.

೧೩. ಬುರ್ಲಿ ಬಿಂದು ಮಾಧವ (ಸಂಪಾದಕರು). : ವಿಜ್ಞಾನ ವಿಹಾರ. ಪ್ರಕಶಕರು, ಬುರ್ಲಿ ಬಿಂದು ಮಾಧವ ಮಿಂಚಿನ ಬಳ್ಳಿ, ಕಾರ್ಯಾಲಯ, ಧಾರವಾಡ.

೧೪. ರಾಜನ್ ಜೆ.ಎಮ್.ಟಿ,
ಕೆ,ಎಂ ಶ್ರೀಪಾದರಾವ್. : ವಿಜ್ಞಾನ ದರ್ಶನ. ಪ್ರಕಾಶಕರು, ಕೃಷ್ಣಕೃಪ ಮುದ್ರಣಾಲಯ ಮತ್ತು ಪ್ರಕಟಣಾಲಯ, ವಸಂತನಗರ, ಬೆಂಗಳೂರು-೫೬೦೦೫೨.

೧೫. ರಾಮಕೃಷ್ಣ ಜಿ : ಭಾರತೀಯ ವಿಜ್ಞಾನದ ಹಾದಿ, ಪ್ರಕಾಶಕರು, ಪ್ರೋ ಎ.ವಿ ನಾವಡ. ನಿರ್ದೇಶಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ ಹಂಪಿ, ವಿದ್ಯಾರಣ್ಯ -೫೮೩೨೭೬.೧೯೯೭

೧೬. ರಾಮಪ್ರಸಾದ್ ಎಸ್. : ಖಗೋಳ ವಿಜ್ಞಾನ ಮಾಹಿತಿ ಕೋಶ. ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – ೫೬೦೦೦೦೧. ೨೦೧೮.

೧೭. ರಾಮಪ್ರಸಾದ್ ಎಸ್ : ಆಧುನಿಕ ಖಗೋಳ ವಿಜ್ಞಾನ ಮಾಹಿತಿ, ಪ್ರಕಾಶಕರು, ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್, ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – ೫೬೦೦೦೦೧.

೧೮. ಲಕ್ಷ್ಮೀಕಾಂತ ಹೆಗಡೆ (ಕನ್ನಡ) (ಇಂ) ಬಿ.ವಿ ಸುಬ್ಬರಾಯಪ್ಪ. : ಭಾರತದಲ್ಲಿ ವಿಜ್ಞಾನ ಒಂದು ಐತಿಹಾಸಿಕ ನೋಟ. ಪ್ರಕಟಣೆ, ಕುವೆಂಪು ಭಾಷಾ ಭಾರತಿ ಪ್ರಾಧಿಕಾರ, ಕಲಾಗ್ರಾಮ, ಜ್ಞಾನಭಾರತಿ, ಬೆಂಗಳೂರು ವಿಶ್ವವಿದ್ಯಾಲಯ ಆವರಣದ ಹಿಂಭಾಗ, ಮಲ್ಲತ್ತಹಳ್ಳಿ, ಬೆಂಗಳೂರು–೫೬೦೦೫೫. ೨೦೧೫.

೧೯. ವಿವಿಧ ಲೇಖಕರು, : ವಿಜ್ಞಾನ ಮತ್ತು ಸಮಾಜ. ಪ್ರಕಾಶಕರು, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು ೫೬೦೦೦೧. ೧೯೭೧.

೨೦. ಶಶಿಧರ ವಿಶ್ವಾಮಿತ್ರ. : ವಿಜ್ಞಾನಿಗಳ ಬೆಳಕು, ಪ್ರಕಟಣೆ, ಕನ್ನಡ ಪುಸ್ತಕ ಪ್ರಾಧಿಕಾರ, ಕನ್ನಡ ಭವನ, ಜೆ.ಸಿ.ರಸ್ತೆ, ಬೆಂಗಳೂರು – ೫೬೦೦೦೨. ೨೦೦೯

೨೧. ಶಿವರಾಮ ಕಾರಂತ. : ವಿಜ್ಞಾನ ಪ್ರಪಂಚ ಭಾಗ ೩, ಹರ್ಷ ಪ್ರಕಟಣಾಲಯ,ಪುತ್ತೂರು, ದಕ್ಷಿಣ ಕನ್ನಡ.

೨೨. ಶಂಕರ್ ಪಿ.ಎಸ್ (ಸಂ) : ಇಂಗ್ಲೀಷ್ – ಕನ್ನಡ ವಿಜ್ಞಾನ ಪದಕೋಶ. ಕರ್ನಾಟಕ ವಿಜ್ಞಾನ ತಂತ್ರಜ್ಞಾನ ಅಕಾಡೆಮಿ, ಬೆಂಗಳೂರು ಕೃಷಿ ವಿಶ್ವವಿದ್ಯಾಲಯ ಆವರಣ, ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ದೊಡ್ಡಬೆಟ್ಟಹಳ್ಳಿ, ವಿದ್ಯಾರಣ್ಯಪೋಸ್ಟ್, ಬೆಂಗಳೂರು–೫೬೦೦೯೭. ೨೦೧೮, ೧೯೯೯.

೨೩. ಸೆಂಟ್ರಲ್ ಕಾಲೇಜಿನ : ಜನಪ್ರಿಯ ವಿಜ್ಞಾನ– ಸೆಂಟ್ರಲ್ ಕಾಲೇಜಿನ ವಿದ್ಯಾರ್ಥಿಗಳು. (ಸಂ) ಅಧ್ಯಾಪಕರು. ಪ್ರಕಟಣೆ: ಕರ್ನಾಟಕ ಸಂಘ, ಬೆಂಗಳೂರು.

ಪಠ್ಯಪುಸ್ತಕಗಳು

೧. ಭೌತಶಾಸ್ತ್ರ ಭಾಗ ೧ (ದ್ವಿತೀಯ ಪಿ.ಯು.ಸಿ ಪಠ್ಯಪುಸ್ತಕ)., ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಸ್ವರಂ, ಬೆಂಗಳೂರು – ೫೬೦೦೧೨. ೨೦೧೯–೨೦.

೨. ಭೌತಶಾಸ್ತ್ರ ಭಾಗ ೨ (ದ್ವಿತೀಯ ಪಿ.ಯು.ಸಿ ಪಠ್ಯಪುಸ್ತಕ)., ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಸ್ವರಂ, ಬೆಂಗಳೂರು – ೫೬೦೦೧೨. ೨೦೧೯–೨೦.

೩. ಮನೋವಿಜ್ಞಾನ ಭಾಗ ೨ (ದ್ವಿತೀಯ ಪಿ.ಯು.ಸಿ ಪಠ್ಯಪುಸ್ತಕ)., ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಸ್ವರಂ, ಬೆಂಗಳೂರು – ೫೬೦೦೧೨. ೨೦೧೯–೨೦

೪. ರಸಾಯನಶಾಸ್ತ್ರ ಭಾಗ ೧ (ದ್ವಿತೀಯ ಪಿ.ಯು.ಸಿ ಪಠ್ಯಪುಸ್ತಕ)., ಪದವಿಪೂರ್ವ ಶಿಕ್ಷಣ ಇಲಾಖೆ, ಮಲ್ಲೇಸ್ವರಂ, ಬೆಂಗಳೂರು – ೫೬೦೦೧೨. ೨೦೧೯–೨೦

ಅಡಕು ಮುದ್ರಿತ ಆಕರ

ಕನ್ನಡ ವಿಶ್ವಕೋಶ – ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾಲಯ, ಮೈಸೂರು.೨೦೦೬ (ಸಿ.ಡಿ)

ಅಂತರ್ ಜಾಲ ಮಾಹಿತಿ

1 https://kannadadimdima.wordpress.com

2. vijayakarnataka.indiatimes.com>weekly magazine

3. https://www.sampada.net>article

4. Vijaykarnataka.indiatimes.com › weekly magazine › Books ಜನವರಿ 27, 2012 www.ejnana.com/2015/04/blog-post

5. Srinidhi's World । ಶ್ರೀನಿಧಿಯ ಪ್ರಪಂಚ : ವಿಜ್ಞಾನ ಗಂಗೆಯ ... www.srinidhi.net.in/2008/02/blog-post.html 17.03.2017

6. ಇವತ್ತು ವಿಜ್ಞಾನವನ್ನ ಕನ್ನಡಕ್ಕೆ ತರದಿದ್ದರೆ ನಾವು ಬಿಟ್ಟುಹೋಗೋದು ಬರೀ ಸೊನ್ನೆ! enguru.blogspot.com/2007/10/blog-post_16.html

7 ..ಕನ್ನಡದಲ್ಲಿ ವಿಜ್ಞಾನ ಬರವಣಿಗೆಯ ಶೈಲಿ – ಟಿ ಎಸ್ ಗೋಪಾಲ್ Published: Wednesday, June 3, 2009, 12:33

8. ಕನ್ನಡದಲ್ಲಿನ ವಿಜ್ಞಾನ ಬರಹ: ಹಳಿತಪ್ಪಿದ ರೈಲು! https://kannadadimdima.wordpress.com/17.3.2017

9. ಇತರ ಅಂತರ್‌ಜಾಲ ಮಾಹಿತಿಗಳ ಕೊಂಡಿಗಳು:

- ವಿಕಿ ಪಿಡಿಯಾ 8.8.2018
- enguru.blogspot.com/2007/10/blog-post_16.html. (**ಆಕಾಶವಾಣಿ ಮಡಿಕೇರಿ ಕೇಂದ್ರದಲ್ಲಿ ಮಾಡಿದ ಭಾಷಣ, 2008**) 20.09.2018
- kannada.oneindia.com › ... › ಲೇಖನ-ಸಂದರ್ಶನ . 20.09.2018
- kanaja.com
- atri bookhouse.com

೧೦. **ದಿನಪತ್ರಿಕೆಗಳು :**

- ಪ್ರಜಾವಾಣಿ ೨೦.೦೩.೨೦೧೫.
- ಪ್ರಜಾವಾಣಿ. ೨೫.೦೧.೨೦೧೮.
- ವಿಜಯ ಕರ್ನಾಟಕ. ೨೩.೧೧.೨೦೧೫.
- ವಿಜಯ ಕರ್ನಾಟಕ. ೧೪.೧೧.೨೦೨೦
- ವಿಜಯ ಕರ್ನಾಟಕ. ೧೮.೧೧.೨೦೨೦